UNIVERSAL
LIBRARY
OU_198650
UNIVERSAL
LIBRARY

**OSMANIA UNIVERSITY LIBRARY**

Call No. K83/N72 Accession No. K.425

Author ನಿರಂಜನ.

Title [illegible] 1959

This book should be returned on or before the date last marked below.

# ವಿಮೋಚನೆ

ನಿರಂಜನ

ವಾಹಿನಿ ಪ್ರಕಾಶನ
ಜಯಚಾಮರಾಜ ರಸ್ತೆ, ಬೆಂಗಳೂರು-೨.

ಮೊದಲನೆಯ ಮುದ್ರಣ : ಅಕ್ಟೋಬರ್

*All Rights Reserved by the Author*

ಮುಖ ಚಿತ್ರ :
**ಎಸ್. ರಮೇಶ್**

ಮುದ್ರಕರು :
ದಿ ಮೋದಿ ಪವರ್ ಪ್ರಿಂಟಿಂಗ್ ವರ್ಕ್ಸ್, ಬೆಂಗಳೂರು–೨

ಕನ್ನಡ ಸಾಹಿತ್ಯದಲ್ಲಿ
ಕಾದಂಬರಿಯ ಪ್ರಕಾರಕ್ಕೆ
ಸ್ಥಿರ ಸ್ಥಾನವನ್ನು ದೊರಕಿಸಲು ಕಾರಣರಾದ
ಇಬ್ಬರು ಪ್ರಮುಖರು

**ಕಾರಂತ** ಮತ್ತು **ಅನಕೃ**

ಇವರಿಗೆ

# ಬರೆದವರು ಮತ್ತು ಕೃತಿ

ಟಕ್ ಟಕ್ ಎಂದಿತು ಬಾಗಿಲು.

ಪಕ್ಕದ ಮನೆಯದಿರಬಹುದೆಂದು ನಾನು ಸುಮ್ಮನಾದೆ.

....ಆದರೆ ನನ್ನ ಊಹೆ ತಪ್ಪಾಗಿತ್ತು. ಬಂದಿದ್ದವರು ಮತ್ತೆ ಸಪ್ಪಳ ಮಾಡಿದರು. ಧಾಳಿಯನ್ನು ಇದಿರಿಸಲು ಸಿದ್ಧನಾಗಿ ನಾನು ಹೊರಬಂದೆ.

ಶುಭ್ರವಾದ ಕಣ್ಣುಗಳಿದ್ದ, ನೀಳವಾದ ಕ್ರಾಪಿನ, ಅಂದವಾದ ಉಡುಗೆ ತೊಟ್ಟಿದ್ದ, ಒಬ್ಬ ಯುವಕ. ಆತ ಕೇಳಿದರು:

"ನಿರಂಜನರ ಮನೆ ಇದೇನಾ?"

"ಸರಿಯಾದ ಜಾಗಕ್ಕೇ ಬಂದಿದೀರಿ. ನಾನೇ. ಬನ್ನಿ."

"ಓ! ....ಕುಳುಕುಂದ ಶಿವರಾಯರು?"

"ಆ ಹೆಸರಿನ ಆರೋಪಿಯೂ ನಾನೇ. ಒಳಕ್ಕೆ ಬನ್ನಿ."

ಅವರು ಸಂಕೋಚಪಡುತ್ತಾ ಕುರ್ಚಿಯ ಮೇಲೆ ಕುಳಿತು ಕೊಂಡರು. ಕರವಸ್ತ್ರ ಹೊರಬಂದು ಅವರ ಮುಖವನ್ನು ಒರೆಸಿತು.

"ನಾನು ಬಂದು ನಿಮಗೆ ತೊಂದರೆಯಾಯ್ತೇನೊ?"

"ಏನೂ ಇಲ್ಲ. ಏನೇನೂ ಇಲ್ಲ. ಈ ದಿವಸ ಯಾರಾದರೂ ಬಂದೇ ಬರ್ತಾರೆ ಅಂತ ನನಗೆ ನಂಬಿಕೆ ಇತ್ತು."

"ಆದರೆ ನಾನು ಅಪರಿಚಿತ."

"ಅದಕ್ಕೇನಂತೆ? ಇವತ್ತಿನಿಂದಲೇ ಪರಿಚಿತರಾದ ಹಾಗಾಯ್ತು."

ಅವರು ಮುಗುಳ್ನಕ್ಕರು.

"ನೀವೂ ನನ್ನ ಹಾಗೆ ಬರೆಹಗಾರರೇನೊ?" ಎಂದು ನಾನೇ ಮಾತಿನ ಪ್ರಕರಣವನ್ನು ಆರಂಭಿಸಿದೆ.

"ಇಲ್ಲ! ಇಲ್ಲ! ನಾನೊಬ್ಬ ಓದುಗ ಅಷ್ಟೆ."

" ಇತ್ತೀಚೆಗೆ ಏನು ಓದಿದೀರಿ ?"

" ನೀವೊಂದು ಕಾದಂಬರಿ ಬರೀತಾ ಇದ್ದೀರಿ ಅಂತ ' ಸಾಹಿತ್ಯ—ಸುದ್ದಿ—ಸಾರ 'ದಲ್ಲಿ ಓದಿದೆ."

"ಓ! .. ನೋಡಿ, ಮೇಜಿನ ಮೇಲಿರೋ ಹಸ್ತಪ್ರತಿಯೇ ಆ ಕಾದಂಬರಿ. ಇದೇ ಈಗ ಮುಕ್ತಾಯವಾಗಿದೆ. ಇತಿ ಶ್ರೀ ಬರೆದು ಕೈ ಇನ್ನೂ ಚೇತರಿಸಿಕೊಂಡಿಲ್ಲ....... ಹಸ್ತ ಪ್ರತಿ ನೋಡ್ತೀರೇನು ?"

ಆತ ಫೂಲ್ಸ್‌ಕ್ಯಾಪ್ ಹಾಳೆಗಳ ರಾಶಿಯನ್ನೆಲ್ಲ ಎತ್ತಿಕೊಂಡರು. ಆದರದಿಂದಲೇ ಎತ್ತಿಕೊಂಡರು ಎನ್ನಬೇಕು........

ಅವರ ಮುಖವನ್ನು ನಾನು ಕುತೂಹಲದಿಂದ ದಿಟ್ಟಿಸುತಿದ್ದೆ. ಬಲು ಸೂಕ್ಷ್ಮವಾಗಿ, ಬಣ್ಣದ ಬದಲಾವಣೆಗಳಾಗುತ್ತವೇನೋ ಎಂದು ನಿರೀಕ್ಷಿಸುತ್ತಿದ್ದೆ. ಆದರೆ ಆ ವಿಶಾಲ ಕಣ್ಣುಗಳ ಹೊಳಪು ಎಲ್ಲವನ್ನೂ ಮರೆಮಾಡಿತ್ತು.

"ಪ್ರತಿ ಮಾಡಿಸಿದೀರೇನು ? ಬೇರೆ ಬೇರೆ ಕೈಬರಹಗಳಿವೆಯಲ್ಲ ?"

"ಇಲ್ಲವಪ್ಪ. ಮೊದಲ ಇನ್ನೂರೈವತ್ತು ಪುಟ ನಾನು ಬರೆದದ್ದಲ್ಲ."

ಅವರಿಗೆ ಸ್ವಲ್ಪ ಆಶ್ಚರ್ಯವೇ ಆಯಿತು.

" ಹಾಗಂದರೆ ? "

" ಗಾಬರಿ ಬೀಳಬೇಡಿ. ಮೊನ್ನೆ ಕಾಹಿಲೆ ಮಲಗಿದ್ದೆ. ಏನೂ ಬರೆಯದೆ ಮನಸ್ಸಿಗೆ ಬೇಸರವಾಗಿತ್ತು. ಆಗ ಸ್ನೇಹಿತರೊಬ್ಬರು ಬಂದು ನನಗಾಗಿ ಬರೆದುಕೊಂಡರು—ರಾಘವೇಂದ್ರ ಅಂತ. ನೂರೈವತ್ತು ಪುಟ ಅವರು ಬರೆದದ್ದು. ಇನ್ನೊಬ್ಬ ಸ್ನೇಹಿತರು—ನಾಗಭೂಷಣ ಅಂತ—ನೂರು ಪುಟ ಬರೆದುಕೊಂಡರು. ಕೈಲಾಗದವನಿಗೆ ನೆರವಾದ ಪುಣ್ಯಾತ್ಮರು !....ಅದಾದಮೇಲೆ ಉಳಿದದ್ದೆಲ್ಲ ನನ್ನಕೈಬರಹ-ಏನೂ ಚೆನ್ನಾಗಿಲ್ಲ ಅಲ್ಲವೆ ? "

" ಯಾವುದು ? "

" ಕೈ ಬರಹ ! "

"ಆ ಸಾಹಿತ್ಯ ಸೃಷ್ಟಿಯ ವೇದನೆ ಯಾರಿಗೆ ಗೊತ್ತಿರ್ತದೆ ಹೇಳಿ? ಮುದ್ದಾಗಿ ಮುದ್ರಣವಾದ ಮೇಲೆಯೇ ನಾವು ಓದೋದು."

"..............."

"ಚೊಚ್ಚಲ ಸಂಭ್ರಮ. ಹೆಸರು ಮೊದಲೇ ಗೊತ್ತಾಗಿರ್ತದೆ. ಅಲ್ಲವೆ ಸಾರ್?"

"ಅಂಥ ಮೋಹವೇ ಇಲ್ಲದ ನಿರ್ವಿಕಾರ ನಾನು. ಆತುರವಿಲ್ಲದವನು. ಆತ್ಮಪ್ರಶಂಸೆ ಅಂತ ನಗಬೇಡಿ ದಯವಿಟ್ಟು........ನೀವು ಕೇಳಿದಿರಿ, ಹೇಳೋಣ. '**ವಿಮೋಚನೆ**' ಅಂತ ಹೆಸರಿಟ್ಟಿದೀನಿ."

ಅವರು ಹಸ್ತಪ್ರತಿಯ ಮೊದಲ ಹಾಳೆಯನ್ನೋದಿದರು—ಅರ್ಪಣೆಯ ವಿಷಯ.

"ಓ!" ಅದು ಅವರಿಂದ ಹೊರಟ ಆಶ್ಚರ್ಯದ ಉದ್ಗಾರ. ನನ್ನನ್ನು ನೋಡಿ ಅವರು ಮುಗುಳುನಕ್ಕರು.

"ಅದು ಸ್ಟಂಟ್ ಅಲ್ಲ ಇವರೆ. ಗುಣವನ್ನು ಕಂಡು ಮತ್ಸರಪಡುವವನು ಅನಾಗರಿಕ. ಇದ್ದುದನ್ನು ಇದ್ದಂತೆ ಹೇಳಲಾಗದವನು ದುರ್ಬಲ. ನನ್ನ ಜಾತಿ ಬೇರೆ. ಕನ್ನಡ ಸಾಹಿತ್ಯದಲ್ಲಿ ಕಾದಂಬರಿಯ ಬಯಲು ಈ ದಿನ ಮುಖ್ಯವಾಗಿದ್ದರೆ ಅದಕ್ಕೆ, ಆ ಹೊಲದಲ್ಲಿ ಮೊದಲು ಉಳುಮೆ ಮಾಡಿದವರೇ ಕಾರಣರು. ಅವರೆಲ್ಲ ಆಧುನಿಕ ಕನ್ನಡ ಸಾಹಿತ್ಯದ ಹುಟ್ಟಿನೊಡನೆಯೆ ಬರೆಹಗಾರರಾಗಿ ಹುಟ್ಟಿದವರು. ಹಳೆಯ ಹುಲಿಗಳು. ಅಲ್ಲವೆನ್ನುತ್ತೀರಾ?"

"ನೀವು ಹೇಳುತ್ತಿರೋದು ನಿಜ."

"ಈ ದಿನ ಕಾದಂಬರಿಯ ಹೊಲದಲ್ಲಿ ಎಂಥ ಬೆಳೆ ಬೆಳೆಯುತ್ತಿದೆ ಎನ್ನುವುದು ಬೇರೆ ವಿಷಯ. ಒಳ್ಳೆಯ ಫಸಲು ಬರುವಂತೆ ಮಾಡುವುದು ನಮ್ಮ ನಿಮ್ಮ ಕರ್ತವ್ಯ. ಆದರೆ ಕಾಡು ಕಡಿದು ಕನ್ನಡ ಸಾಹಿತ್ಯದ ಭೂಮಿಯನ್ನು ವಿಸ್ತರಿಸಿ ಕಾದಂಬರಿಯ ಹೊಲವನ್ನು ನಮ್ಮದಾಗಿ ಮಾಡಿಕೊಟ್ಟ ಕನ್ನಡದ ಪ್ರಮುಖ ಕಾದಂಬರಿಕಾರರಿಗೆ ನಾವು ಗೌರವ ಸೂಚಿಸಬೇಕು. ಅದು ನ್ಯಾಯವಾದ್ದು. ಅಂತಹ ನಮ್ಮ ಕಾದಂಬರಿಕಾರರಲ್ಲಿ **ಕಾರಂತ** ಮತ್ತು **ಅನಕೃ**

ಪ್ರಮುಖರು. ಅವರಿಗೆ ಈ ಕೃತಿಯನ್ನು ಅರ್ಪಿಸುವುದು ನ್ಯಾಯೋಚಿತ."

ನನ್ನ ವಿವರಣೆ, ಅವರ ಸಂತೋಷವನ್ನು ಹೆಚ್ಚಿಸಿದಂತೆ ತೋರಿತು. ಮುಂದೆ ಹಾಳೆಗಳನ್ನು ಅವರು ತಿರುವಿದರು.

"ಇದು, 'ನಾನು' ಹೇಳಿದ ಕತೆಯಾಗಿದೆಯಲ್ಲ!"

"ಈ ಕಾದಂಬರಿಯ 'ನಾನು' ನಾನಲ್ಲ! ಓದಿ ನೋಡಿ. ನಿಮಗೇ ಗೊತ್ತಾಗ್ತದೆ."

"ಅದು ಸ್ಪಷ್ಟವಾಗಿಯೇ ಇದೆ. ತಮಾಷೆಗೆ ಹೇಳಿದೆ ಅಷ್ಟೆ. ಆ ಪತ್ರಿಕೆಯಲ್ಲಿ ಬರೆದಿದ್ದರು: ಸನ್ಮಾರ್ಗದಲ್ಲಿ ಸಾಗಲಾಗದೆ ಅಡ್ಡದಾರಿ ಹಿಡಿದ ವಿದ್ಯಾವಂತ ಯುವಕನೊರ್ವನ ದುರಂತ ಕಥೆ—ಅಂತ. ಹೌದೆ?"

"ನೀವೇ ಓದಿ ನೋಡಿ. ತೋರಿಕೆಗೆ ಹಾಗಿದೆ. ಆದರೆ—?"

"ಹಾಗಾದರೆ ಇದು ಒಬ್ಬ ವ್ಯಕ್ತಿಯ **ಜೀವನಕಥೆ** ಅಲ್ಲವೆ?"

"ಅಲ್ಲ, ಇದು ನಮ್ಮೆಲ್ಲರ ಸುತ್ತುಮುತ್ತಲಿನ **ಜೀವನದ ಕಥೆ**. ಇಲ್ಲಿ ಬರುವ ಮುಖ್ಯ ಪಾತ್ರವಾದ ಚಂದ್ರಶೇಖರ—ಒಬ್ಬ medium. ಆತನೊಬ್ಬ, ಜಗತ್ತನ್ನು ನಾವು ನೋಡುವುದಕ್ಕೋಸ್ಕರ ಇರುವ ಕಿಟಕಿ. ಸ್ವಲ್ಪ ವಿಚಿತ್ರವಾದ ಕಿಟಕೀಂತಲೇ ಅನ್ನಿ. ಅವನ ಜೀವನ ಕಥೆಯನ್ನು ನಾವು ತಿಳಿಯುವುದರ ಮೂಲಕ, ಇಡಿಯ ಜೀವನದ ಕಥೆಯನ್ನೇ ಓದಿದಂತಾಗಬೇಕೆಂಬುದು ನನ್ನ ಅಪೇಕ್ಷೆ... ..."

"ಈ ಪ್ರಯೋಗ ಯಶಸ್ವಿಯಾಗಬಹುದು ಅನ್ನುತ್ತೀರಾ?"

"ಯಾಕಾಗಬಾರದು?"

"ನಿಮಗೆ ತೃಪ್ತಿಯಾಗಿದೆಯೆ?"

"ಆಗಿದೆ—ಬಹಳಮಟ್ಟಿಗೆ. ಇದು ಚಂದ್ರಶೇಖರನೊಬ್ಬನ ಕತೆಯೇ ಅಲ್ಲ. ಹಳ್ಳಿಯಿಂದ ಅನನ್ಯಗತಿಕರಾಗಿ ನಗರಕ್ಕೆ ಬರುವ ರೈತರು, ಮಗ ದೊಡ್ಡವ್ಯಕ್ತಿಯಾಗಬೇಕೆಂಬ ಹಂಬಲದಿಂದ ತನ್ನನ್ನು ತಾನು ಹಗಲಿರುಳೂ ತೇಯುವ ತಂದೆ, ಅನ್ಯ ಜಾತಿಯವರನ್ನೂ ಆತ್ಮೀಯತೆಯಿಂದ ಕಾಣಬಲ್ಲ ಹಳೆಯ ತಲೆಮಾರಿನ ಅಜ್ಜಿ, ಬಿಟ್ಟಿ ಬೇಗಾರಿ ಮಾಡಿಸುವ ಬಡ ಉಪಾಧ್ಯಾಯರು, 'ದಾನಶೀಲ' ರಾದ ಲೋಕ

ಪರಾಯಣರು, ಅನಿವಾರ್ಯವಾಗಿ ಬೀದಿತಿರುಗುವ ಪೋಲಿ ಹುಡುಗರು, ಜೇಬುಗಳ್ಳರು, ನಮ್ಮ ಡಾಕ್ಟರು—ಲಾಯರು, ಸಮಾಜದ ದೃಷ್ಟಿಯಲ್ಲಿ ಕಲಂಕಿನಿಯಾದ ಸ್ತ್ರೀ, ಅದೇ ದೃಷ್ಟಿಯಲ್ಲಿ ಪ್ರತಿಷ್ಠಿತರ ಮಗಳು, ಸಮಾಜದ ಹಸಿದವರು—ಕಸಿದವರು, ಅನುನಯದ ದಂಪತಿಗಳು, ವೈಷಮ್ಯದ ಗಂಡ ಹೆಂಡಿರು, ದೇಹ ಮಾರುವ ಸೂಳೆಯರು ... ಹೀಗೆ ಈ ಕಾದಂಬರಿಯಲ್ಲಿ ಬರುವ ವ್ಯಕ್ತಿಗಳು ಒಬ್ಬರೆ—ಇಬ್ಬರೆ? ಅವರೆಲ್ಲರ ಜೀವನದ ವಿಭಿನ್ನ ಇಣಿಕು ನೋಟ ಇಲ್ಲಿದೆ. ಅದರ ಸಮಗ್ರ ಚಿತ್ರವೇ ನಮ್ಮ ಸಮಾಜ.''

'' ಮುಂದಕ್ಕೆ ಹೇಳಿ.''

'' ಈ ಕಾದಂಬರಿಯ ವ್ಯಕ್ತಿಗಳು ಹುಟ್ಟಿ ಬೆಳೆಯುತ್ತಾರೆ. ವಿಧ ವಿಧವಾಗಿ ರೂಪುಗೊಳ್ಳುತ್ತಾರೆ—ನಮ್ಮೆಲ್ಲರನ್ನೂ ನಿಯಂತ್ರಿಸುತ್ತಿರುವ ಈ ಲೋಕದ ಸೂತ್ರಕ್ಕೆ ಅನುಸಾರವಾಗಿ. ನಾನು ಬೇಕು ಬೇಕೆಂದೇ ಅವರನ್ನು ಕುಣಿಸುವುದಿಲ್ಲ. ಸಮಾಜದಲ್ಲಿ ಕೇಳಬರುವ ರಾಗತಾಳಕ್ಕೆ ಹೊಂದಿಕೊಳ್ಳುವಂತೆ ಆ ಪಾತ್ರಗಳೆ ಕುಣಿಯುತ್ತವೆ.''

'' ಮುಂದೆ ? ''

'' ಇಲ್ಲಿನ ಪಾತ್ರಗಳು ಬಾರಿಬಾರಿಗೂ ಮುಖ ತೋರಿಸುತ್ತಲೇ ಇರುವುದಿಲ್ಲ. ಜೀವನ ಇರುವುದು ಒಂದು ಪ್ರವಾಹದ ಹಾಗೆ. ಚಂದ್ರಶೇಖರ ಆರು ವರ್ಷದ ಹುಡುಗನಾಗಿದ್ದಾಗ ಜೀವನದ ದೊಡ್ಡ ದೋಣಿಯಲ್ಲೊಬ್ಬ ಪ್ರವಾಸಿಯಾಗುತ್ತಾನೆ. ಆದರೆ ಒಬ್ಬಂಟಿಗರಾಗಿ ಯಾರೂ ಪ್ರವಾಸ ಮಾಡುವುದಿಲ್ಲ ಅಲ್ಲವೆ ? ಸಹ ಪ್ರವಾಸಿಗಳಿರುತ್ತಾರೆ. ಪ್ರವಾಸ ಒಂದೊಂದು ಘಟ್ಟಕ್ಕೆ ಬಂದಾಗಲೂ ಕೆಲವರಿಳಿಯುತ್ತಾರೆ. ಹೊಸಬರು ಬರುತ್ತಾರೆ. ಒಬ್ಬಿಬ್ಬರು, ಅಥವಾ ಮೂವರು ನಾಲ್ವರು, ಪ್ರವಾಸದುದ್ದಕ್ಕೂ ಬರುವುದು ಸ್ವಾಭಾವಿಕ. ಚಂದ್ರಶೇಖರ ಹೀಗೆ ಪ್ರಯಾಣ ಬೆಳೆಸುತ್ತಾನೆ. ಮೂವತ್ತೆಂಟನೆಯ ವಯಸ್ಸಿನವರೆಗೂ ಅವನ ಪ್ರಯಾಣ ... ''

'' ಸರಿಯಾಗಿದೆ. ''

'' ಅಷ್ಟೇ ಅಲ್ಲ. ಚಾರಿತ್ರಿಕ ಕಾಲಾವಧಿಯ ಬೆಳವಣಿಗೆಯೂ

ಸೂಚಿತವಾದರೆ ಸಾಹಿತ್ಯ ಕೃತಿ ಯಾವಾಗಲೂ ಜೀವಂತವಾಗ್ತದೆ.''

''ಅದೂ ನಿಜವೇ.''

''ಇಲ್ಲಿ ೧೯೩೦ರ ಸ್ವಾತಂತ್ರ್ಯ ಹೋರಾಟ, ೧೯೪೨ರ ಮಹಾ ಸಮರ, ನಾಲ್ವತ್ತೇಳರ ಸ್ವಾತಂತ್ರ್ಯದ ಹಿನ್ನೆಲೆಯ ಸಣ್ಣಪುಟ್ಟ ಚಿತ್ರಗಳನ್ನೂ ಕಾಣಬಹುದು. ನಾನು ಚಿತ್ರಿಸಿರುವ ಚಂದ್ರಶೇಖರ ಮತ್ತಿತರ ವ್ಯಕ್ತಿಗಳ ಮೇಲೆ ಆ ಸಂಭವಗಳಿಂದಾದ ಪರಿಣಾಮವನ್ನು ತೋರಿಸಿ ಕೊಡುವುದಕ್ಕಾಗಿಯೇ ಆ ಘಟನೆಗಳು ಬಂದಿವೆ. ನಿಜ ಜೀವನದಲ್ಲಿ ಯಾವ ವ್ಯಕ್ತಿಯೂ ಸಮಾಜದಲ್ಲಾಗುತ್ತಿರುವ ಮಾರ್ಪಾಟುಗಳ ಸೂತ್ರದಿಂದ ಬಾಹಿರನಾಗುವುದು ಸಾಧ್ಯವಿಲ್ಲ ಅಲ್ಲವೆ? ಅಂದಮೇಲೆ ಜೀವನದೊಡನೆ ನಿಕಟ ಸಂಬಂಧವಿರಿಸಿಕೊಂಡು ಸೃಷ್ಟಿಯಾಗುವ ಸಾಹಿತ್ಯವೂ ಅಷ್ಟೆ.''

ನಾನು ಮಾತನಾಡುತ್ತಲೇ ಇದ್ದೆ. ಭೈರಿಗೆ ಕೊರೆದ ಹಾಗೆ ಆಗುತ್ತಿದೆಯೆನೋ ಎಂದು ಭಯವಾಯಿತು ನಡುವೆ. ಆ ವ್ಯಕ್ತಿಯನ್ನು ದಿಟ್ಟಿಸಿ ನೋಡಿದೆ. ಆದರೆ ಅವರು ಆಸಕ್ತಿಯಿಂದ ಕಿವಿಗೊಡುತಿದ್ದರು.

ನಾನು ಸುಮ್ಮನಾದಾಗ ಅವರೊಂದು ಪ್ರಶ್ನೆ ಕೇಳಿದರು:

"ಇದನ್ನ ದುರಂತ ಕಥೆಯಾಗಿ ಯಾಕೆ ಮಾಡಿದೀರಿ?"

"ದುರಂತ ಯಾವುದು? ಚಂದ್ರ ಶೇಖರನ ಆತ್ಮಹತ್ಯೆಯೆ? ನೀವು ಓದಿನೋಡಿ ದುರಂತವನ್ನು ಸುಖಾಂತ ಮಾಡುವುದು ಸುಲಭ. ಪಶ್ಚಾತ್ತಾಪದ ಬೆಂಕಿಯಲ್ಲಿ ಸುಟ್ಟು ಪುನೀತನಾದ ಆತ, ಜೀವಿತ ಧ್ಯೇಯವೊಂದನ್ನು ಅಪ್ಪಿಕೊಂಡು, ಭವ್ಯ ಬಾಳ್ವೆ ನಡೆಸುವುದು.... ಆದರೆ ಅದು ಕೃತಕವಾಗುವುದಲ್ಲವೆ? ನಿಮಗೆ ಗೊತ್ತಾದೀತು....ಚಂದ್ರಶೇಖರನಂತಹ ಬಾಳ್ವೆ ನಡೆಸಿದವರು ಕೊನೆಗಾಣುವ ರೀತಿಯೇ ಅಂಥದು. ಬೇರೆ ಯಾವ ರೀತಿಯೂ ಸರಿಯಲ್ಲ....ಆದರೆ ಸಮಾಜದಲ್ಲಿ ಅಂಥವರು ಕಡಿಮೆ. ತನ್ನ ಬಾಳ್ವೆ ಯಾಕೆ ಹಾಗಾಯಿತೆಂದು ಚೆನ್ನಾಗಿ ತಿಳಿದ ಚಂದ್ರಶೇಖರ, ತನ್ನ ಹಾಗೆಯೇ ಇನ್ನೊಂದು ಜೀವ ಈ ಸಮಾಜದಲ್ಲಿ ಬೇಯದಿರಲೆಂದು ಹಾರೈಸುತ್ತಾನೆ. ಆತನನ್ನು ಕೆಲವರು

ಹೇಡಿಯೆನ್ನಬಹುದು; ದುರ್ಬಲನೆನ್ನಬಹುದು. ನಾನು ಮಾತ್ರ ಅವನ ಬಗ್ಗೆ ಕನಿಕರ ಪಡಲು ಬಯಸುವೆ. ಎಷ್ಟೋ ಓದುಗರಿಗೂ ಹಾಗೆಯೇ ಅನಿಸುವುದರಲ್ಲಿ ಸಂಶಯವಿಲ್ಲ."

ಅವರ ತುಟಿಗಳಲ್ಲಿ ಅಡಗಿರಲಾರದೆ ನಗು ಹೊರಸೂಸುತಿತ್ತು.

"ಯಾಕೆ ನಗುತ್ತೀರಿ?"

"ಕತೆಗಾರರೂ ವಿಮರ್ಶಕರೂ ಆದ ನಿಮ್ಮನ್ನಿನ್ನು ಕಾದಂಬರಿಕಾರನೆಂದೂ ಕರೆಯುತ್ತಾರೆ."

"ನಾಟಕವನ್ನೂ ಬರೆಯಬೇಕೆಂದಿದ್ದೇನೆ!"

"ಹಾಗಲ್ಲ; ವಿಮರ್ಶೆ ಮತ್ತು ಸೃಷ್ಟನೆಯ ಸಾಹಿತ್ಯ, ಎರಡನ್ನೂ ಒಬ್ಬನೇ ಮಾಡುವುದು ಸಾಧ್ಯ ಅಲ್ಲವೆ?"

"ಯಾಕಾಗದು? ಎರಡನ್ನೂ ಚೆನ್ನಾಗಿಯೇ ಮಾಡುವ ದೇಶ ವಿದೇಶಗಳ ಸಾಹಿತಿಗಳ ನಾಮಾವಳಿಯನ್ನು ಜಪಿಸಿ ನಿಮ್ಮನ್ನು ಬೆರಗುಗೊಳಿಸಲೇನು?"

"ದಮ್ಮಯ್ಯ, ಅಷ್ಟು ಮಾಡಬೇಡಿ."

"ತಮಾಷೆಗೆ ಹೇಳಿದೆ. ವಿಮರ್ಶೆಯ ಪ್ರಕಾರ ಕನ್ನಡದಲ್ಲಿ ಬೆಳೆದೇ ಇಲ್ಲ. ವಿಮರ್ಶೆ ಪರಸ್ಪರ ಪ್ರಶಂಸೆಯಾಗುವುದೂ ಉಂಟು; ದ್ವೇಷ ಸಾಧನೆಯ ರೀತಿಯಾಗುವುದೂ ಉಂಟು. ಆಧುನಿಕ ಕನ್ನಡ ಸಾಹಿತ್ಯವೀಗ ಸಂಧಿಕಾಲದಲ್ಲಿದೆ. ನಾನಾ ಪ್ರವೃತ್ತಿಗಳು ತಲೆ ಎತ್ತುತ್ತಿವೆ. ಜನ ಸಮುದಾಯದ ಅಭ್ಯುದಯ ಸಾಧ್ಯವಾಗುವಂತಹ ಹಾದಿಯಲ್ಲಿ ನಮ್ಮ ಸಾಹಿತ್ಯವು ನ್ನಡೆಯುವಂತೆ ನಾವೆಲ್ಲ ಮಾಡಬೇಕು. ವಜ್ರ ಕಠೋರತೆಯ ಹಾಗೂ ಕುಸುಮ ಕೋಮಲತೆಯ ಯೋಗ್ಯ ಸಮ್ಮಿಶ್ರಣವನ್ನು ಸಮರ್ಥನಾದ ಸಹೃದಯಿ ವಿಮರ್ಶಕ ಸಾಧಿಸಬಲ್ಲ. ........ನಮ್ಮ ಸಾಹಿತ್ಯ ಅಭಿವೃದ್ಧಿ ಹೊಂದಬೇಕಾದರೆ, ಎಲ್ಲ ಓದುಗರಲ್ಲೂ ವಿಮರ್ಶನ ಬುದ್ಧಿ ಜಾಗೃತವಾಗುವುದು ಅಗತ್ಯ. ಯಾವನೇ ಬರೆಹಗಾರ ವಿಮರ್ಶಕರನ್ನು ನಿಂದಿಸುವುದರಲ್ಲಿ ಅರ್ಥವಿಲ್ಲ........ ನನ್ನ ಈ ಕಾದಂಬರಿಯ ದೃಷ್ಟಾಂತವನ್ನೆ ತೆಗೆದುಕೊಳ್ಳಿ. 'ವಿಮೋಚನೆ' ಯನ್ನೆತ್ತಿಕೊಂಡು ಕನ್ನಡ ವಿಮರ್ಶಕರೆಲ್ಲ ನಿರ್ದಾಕ್ಷಿಣ್ಯವಾದ ನಿಷ್ಪಕ್ಷ

ಪಾತವಾದ ವಿಮರ್ಶೆ ಮಾಡಬೇಕೆಂಬುದೇ ನನ್ನ ಬಯಕೆ."

" ವಿಮರ್ಶಕರೂ ಆದ ನೀವೇ ಸ್ವತಃ ನಿಮ್ಮ ಕಾದಂಬರಿಯನ್ನು ವಿಮರ್ಶಿಸಬಲ್ಲಿರಾ ? "

" ಅದೊಳ್ಳೆಯ ಪ್ರಶ್ನೆ ಅದು ಯೋಗ್ಯ ಆಹ್ವಾನ. ಆ ಕೆಲಸ ಮಾಡಬಲ್ಲೆ ಸ್ವಾಮಿ, ಖಂಡಿತವಾಗಿಯೂ ಮಾಡಬಲ್ಲೆ."

ಸಮಾಧಾನಗೊಂಡ ಅವರು, " ಇನ್ನೊಂದು ವಿಷಯ ಕೇಳಬೇಕೊಂತ," ಎಂದರು.

" ಹತ್ತು ಕೇಳಿ."

" ಸಾಹಿತ್ಯ ವ್ಯವಸಾಯಿಯಾದ ನೀವು ಈಗಾಗಲೇ ಜೀವನದ ನಾನಾ ಮುಖಗಳನ್ನು ಸಾಕಷ್ಟು ಕಂಡಿದ್ದೀರಿ........ಶ್ರಮಜೀವಿಗಳ ಹೋರಾಟ, ರಾಜಕಾರಣ, ನಾಡಿನ ನಾನಾ ಭಾಗಗಳ ಜನ ಜೀವನ ........ನೀವು ಸ್ನಾನಮಾಡಿರುವ ಇಂಥ ಪುಣ್ಯ ತೀರ್ಥಗಳೆಷ್ಟೊ ! "

" ದಿವಂಗತರಿಗೆ ಶ್ರದ್ಧಾಂಜಲಿ ಅನ್ನುವ ರೀತಿ ಹೇಳ್ತಿದೀರಲ್ಲ ! "

" ಕ್ಷಮಿಸಿ. ನಿಮ್ಮ ಕಾದಂಬರಿ ಎಂದಾಗ ಓದುಗರಲ್ಲಿ ಒಂದು ನಿರ್ದಿಷ್ಟ ನಿರೀಕ್ಷೆ ಇರುತ್ತದೆ. ಈ ಕಾದಂಬರಿಯಿಂದ—"

" ಕೆಲವರಿಗೆ ಆಶ್ಚರ್ಯವಾಗಬಹುದಲ್ಲವೆ ? ಆದರೆ ಆಗಲೇ ಹೇಳಿದೆನಲ್ಲ, ಇದು ಒಬ್ಬ ವ್ಯಕ್ತಿಯ ಅಪಾರಾ ಕತೆಯಲ್ಲ—ಇದು ಬಾಳ್ವೆಯ ಕತೆ. ಪರಿಣಾಮಕಾರಿಯಾಗಿ ಬರಲೆಂಬ ಉದ್ದೇಶದಿಂದ, ಒಂದು ಪ್ರಯೋಗವೆಂತ, ಈ ಪಾತ್ರಗಳನ್ನು ಸೃಷ್ಟಿಸಿದೆ. ಹೌದು, ನಾನು ಬರೆಯಬೇಕೆಂದು ಯೋಚಿಸಿರುವ ಹಲವಾರು ವಸ್ತುಗಳು ಹಾಗೆಯೆ ಉಳಿದಿವೆ. ನಾಡಿನ ದಕ್ಷಿಣಕ್ಕಿರುವ ಕಯ್ಯೂರು ರೈತರು, ಉತ್ತರ ಕರ್ನಾಟಕದ ಕಾರವಾರದ ರೈತರು, ಮೈಸೂರಿನ ಕಾಗೋಡು ರೈತರು, ಹೊಸ ಇತಿಹಾಸ ರಚಿಸಿದ್ದಾರೆ. ನಮ್ಮ ಕಾಫಿ ತೋಟಗಳ ಕೆಲಸಗಾರರು, ಚಿನ್ನದ ಗಣಿಯ ಕಾರ್ಮಿಕರು,'ವರ್ಣರಂಜಿತ ಜೀವನ' ನಡೆಸುತಿದ್ದಾರೆ. ಇವುಗಳಿಂದೆಲ್ಲ ಬರೆಹಗಾರ ಪ್ರಭಾವಿತನಾಗದೆ ಇರುವುದು ಸಾಧ್ಯವಿಲ್ಲ....ಸಾಹಿತ್ಯ ಛಾಯಾಗ್ರಹಣವಾಗಬೇಕೆಂದು, ವರದಿಯಾಗಬೇಕೆಂದು, ನಾನು ಹೇಳುವುದಿಲ್ಲ. ಹಾಗಾಗುವುದು ಸರಿಯಲ್ಲ.

ಆದರೆ ವಾಸ್ತವ ಜೀವನದಲ್ಲಿ ಬೇರು ಬಿಟ್ಟು ನಮ್ಮ ಸಾಹಿತ್ಯ ಕೃತಿಗಳು ಬೆಳೆಯಬೇಕು. ನಾವು ಆಯ್ದುಕೊಳ್ಳುತ್ತಿರುವ ವಸ್ತುವಿನ ಕ್ಷೇತ್ರ, ವೇಶ್ಯಾ ಸಮಸ್ಯೆ—ಸವಾಡ ಕಥೆಗಳನ್ನು ದಾಟಿ, ಹೆಚ್ಚು ವಿಸ್ತಾರ ಗೊಳ್ಳುವುದು ಅಗತ್ಯ........ಅಲ್ಲವೆನ್ನುತ್ತೀರಾ ? ''

'' ತಲೆದೂಗಿದೆ.....ಆದರೆ ಚಂದ್ರಶೇಖರನೇ ಇಂಥ ಶೈಲಿಯಲ್ಲಿ ಬರೆದನೆನ್ನುವುದು ವಾಸ್ತವಿಕವೆ ? ''

'' ಆದರೆ ವಿಷಯ ಏನು ಗೊತ್ತೆ ? ತಾನು ಬರೆದುದಕ್ಕೆ ಸಾಹಿತಿಯೊಬ್ಬ ಒಪ್ಪ ಕೊಡಲಿ—ಎಂತ ಚಂದ್ರಶೇಖರನೇ ಹೇಳುತ್ತಾನೆ ಒಂದೆಡೆ! ಹಾಗೆಯೇ, ಇದು ಸಾಹಿತಿಯೊಬ್ಬ ಕೈಯಾಡಿಸಿದ ಕಥನ ಅಂತ ತಿಳಿದುಕೊಂಡರಾಯಿತು.''

'' ಹಾಗಾದರೆ ಸರಿ.''

'' ಬೇಸರವಾಯಿತೇನೋ ಉಪನ್ಯಾಸ ಕೇಳಿ. ಸಾಮಾನ್ಯವಾಗಿ, ನಾನು ಮಾತುಗಾರನೇ ಅಲ್ಲ. ಆದರೆ ಯಾರಾದರೂ ಕೇಳಿದರೆ, ಕೆರಳಿಸಿದರೆ, ತಕ್ಕಮಟ್ಟಿಗೆ ಚೆನ್ನಾಗಿಯೇ ಮಾತನಾಡ್ತೇನೆ! ''

'' ನೀವು ಕಾದಂಬರಿ ಬರೆದಿರುವುದು ಸಂತೋಷದ ವಿಷಯ. ನಿಮ್ಮ ಕೃತಿಗೆ ಓದುಗನಾದ ನನ್ನ, ನನ್ನಂಥವರ, ಸ್ವಾಗತವಿದೆ. ಪ್ರಕಟಣೆಗೆ ಏನು ಏರ್ಪಾಟು ಮಾಡಿದ್ದೀರಿ ? ''

'' ಕನ್ನಡದಲ್ಲಿ ಕೈ ಹೊತ್ತಗೆಗಳು ಬರುತ್ತಿರುವುದು ಗೊತ್ತೆ ? ''

'' ಗೊತ್ತಿಲ್ಲದೆ ಉಂಟೆ ? ಸಾಹಸಿಗಳಾದ ಚಿಂತಾಮಣಿ ಮತ್ತು ಕಾಮೇಶ್ವರವರು ಆರಂಭಿಸಿರುವ ಉದ್ಯಮ. ಅ. ನ. ಕೃ. 'ಗೃಹಲಕ್ಷ್ಮಿ' ಆಗಲೇ ಬಂದಿದೆ.''

'' ಹೌದು ; ದೇವುಡುರವರ ' ಮಲ್ಲಿ ' ಕೂಡಾ ಪ್ರಕಟವಾಗಿದೆ. ಈ ' ವಿಮೋಚನೆ 'ಯ ಪ್ರಕಟಣೆಯೂ ಆ ರೂಪದಲ್ಲೇ.''

'' ಬಹಳ ಸಂತೋಷ. ಒಂದೂವರೆ ರೂಪಾಯಿಗೆ ಇಷ್ಟು ಗಾತ್ರದ ನಿಮ್ಮ ಕಾದಂಬರಿ ಓದುಗರಿಗೆ ದೊರೆಯುವಂತಾಗಿರುವುದು ಸಂತೋಷದ ವಿಷಯ.''

'' ಆ ಏರ್ಪಾಟಿನ ಶ್ರೇಯಸ್ಸೆಲ್ಲ ವಾಹಿನಿ ಪ್ರಕಾಶನದ ಚಿಂತಾ

ಮಣಿ—ಕಾಮೇಶರಿಗೆ ಸಲ್ಲಬೇಕು. ಕಲಾವಿದ ರಮೇಶರದು ಸುಂದರ ಹೊದಿಕೆಯ ಚಿತ್ರ. ಅವರಿಗೂ ನೆನಕೆ ಸಲ್ಲಬೇಕು.''

ಅವರು ಹಸ್ತಪ್ರತಿಯನ್ನು ಮೇಜಿನ ಮೇಲಿಟ್ಟು ಎದ್ದು ನಿಂತರು.

'' ನಿಮಗೆ ತೊಂದರೆ ಕೊಟ್ಟಹಾಗಾಯಿತು. ಹೋಗಿ ಬರಲೆ ಹಾಗಾದರೆ ? ''

" ಯಾಕೆ ಅವಸರ ? ಹೋಟೆಲಿನವರೆಗೂ ಬರ್ತೀನಿ. ಸ್ವಲ್ಪ ಕಾಫಿ ಹೀರಿಕೊಂಡು ಹೋಗಿ.''

ನಾನು ಬಾಗಿಲೆಳೆದುಕೊಂಡು ಹೊರಬಿದ್ದಾಗ ಆ ವ್ಯಕ್ತಿ ನಗುತ್ತ ಕೇಳಿದರು :

" ನೀವು ಬಾಗಿಲು ತೆರೆದಾಗ ನಾನೇನು ಭಾವಿಸಿದೆ ಗೊತ್ತೆ? ''

'' ಮನೋವಿಶ್ಲೇಷಣೆ ಮಾಡುತ್ತೇನಾದರೂ ಒಬ್ಬರ ಭಾವನೆಗಳನ್ನೆಲ್ಲ ಊಹಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಅಂತೂ ನನ್ನ ವಿಷಯ, ನನ್ನ ಮನೆಯ ವಿಷಯ, ಯೋಚಿಸಿರಬೇಕು. ಹೌದೆ ? ''

'' ಹೌದು, ನಿಮ್ಮನ್ನು ನೋಡಿದಾಗ, ನಿರಂಜನರ ತಮ್ಮನೋ ಹುಡುಗನೋ ಇರಬಹುದೂಂತ ತೋರಿತು.''

'' ನಿರಂಜನರ ಹುಡುಗ? ಓ ದೇವರೇ ! ನಾನು ಮೂವತ್ತರ ಗಡಿ ಸಮೀಪಿಸಿದ್ದೇನೆ—ಅಷ್ಟೆ. ಅಷ್ಟರಲ್ಲೇ ನನ್ನನ್ನು ಕಳಿಸುವ ಯೋಚನೆ ಮಾಡ್ತಿದ್ದೀರಲ್ಲ ! ಇನ್ನೂ ಕೆಲವು ವರ್ಷ ಬದುಕಬೇಕೂಂತಿದೆ ಇವರಿ. ಇನ್ನೂ ಬರೆಯುವ ಕೆಲಸ ಮುಗಿದಿಲ್ಲ.''

'' ತ್ಸ್ ತ್ಸ್—ಹಾಗನ್ನಾರದು,'' ಎಂದರು ಅವರು.

ಕಾಫಿ ಕುಡಿದಾದ ಮೇಲೆ ನಾನು ಕೇಳಿದೆ :

'' ನನಗೊಂದು ಉಪಕಾರ ಮಾಡ್ತೀರಾ ? ''

'' ಏನು ಹೇಳಿ ? ''

'' ಈ ಕಾದಂಬರಿ ಓದಿದವರೆಲ್ಲ, ತಮ್ಮ ಸ್ಪಷ್ಟ ಅಭಿಪ್ರಾಯ ಬರೆದು ನನಗೆ ತಿಳಿಸಬೇಕೂಂತ ನನ್ನ ಆಸೆ. ನೀವು—''

'' ಓದಿದೊಡನೆ ಅವಶ್ಯವಾಗಿ ಬರೀತೀನಿ. ಆದರೆ ವಿಳಾಸ ?''

'' ವಿಳಾಸಕ್ಕೇನು ? ನಿರಂಜನ, ಬಸವನಗುಡಿ, ಬೆಂಗಳೂರು-೪

ಅಂತ ಬರೆಯಿರಿ. ಬಂದು ತಲಪ್ತದೆ.”

“ ಅಂತೂ ನಿಮ್ಮ ಮತ್ತು ನಿಮ್ಮ ಕೃತಿಯ ವಿಷಯ ಮಾತನಾಡಿಸಿದ ಹಾಗಾಯಿತು.”

“ ಅದರಿಂದ ನನ್ನ ಆರೋಗ್ಯಕ್ಕೂ ಹಿತವೇ.”

ಬಸ್ ನಿಲ್ದಾಣ ಸಮೀಪಿಸಿತ್ತು. ಬಂದು ನಿಂತ ಬಿ. ಟಿ. ಸಿ. ಬಸ್ಸನ್ನು ಆತ ಏರಿದರು.

“ ಇವರೆ, ನಿಮ್ಮ ಹೆಸರು ಹೇಳಲೇ ಇಲ್ಲ.”

“ ಓದುಗ.”

ಸ್ವರ ಕೇಳಿಸಿತು ಅಷ್ಟೆ. ಆದರೆ ಆಕೃತಿ ಕಾಣಿಸಲಿಲ್ಲ. ಜನರೆಡೆಯಲ್ಲಿ ಅದು ಲೀನವಾಗಿತ್ತು.

ಬೆಂಗಳೂರು
೬ ಅಕ್ಟೋಬರ್ ೧೯೫೩

— ನಿರಂಜನ

# ವಿಮೋಚನೆ

## . . . ಮಂಗಳವಾರ

ಜನ ಯಾಕೆ ಬರೆಯುತ್ತಾರೆ? ಈ ಪ್ರಪಂಚದಲ್ಲಿ ಪುಸ್ತಕಗಳನ್ನು ಯಾಕೆ ಅಚ್ಚು ಹಾಕಿಸುತ್ತಾರೆ? ತಾವು ಬರೆದುದು ಹತ್ತು ಜನರಿಗೆ ತಿಳಿಯಲಿ ಎಂದಲ್ಲವೆ? ಸಹಸ್ರ ಜನ ಓದಲಿ ಎಂದಲ್ಲವೆ?

ನಾನು ಬರೆಹಗಾರನಲ್ಲ. ಸಾಹಿತ್ಯ ಸೃಷ್ಟಿ ನನ್ನ ಉದ್ದೇಶವಲ್ಲ. ನಾನು ಹಿಂದೆಂದೂ ಬರೆದುದಿಲ್ಲ. ಆದರೂ ಈಗ ಲೇಖಣಿ ಎತ್ತಿ ಬರೆಯತೊಡಗಿದ್ದೇನೆ. ಹೇಳಬೇಕಾದ ಕೆಲವು ವಿಷಯಗಳಿವೆ ನನ್ನಲ್ಲಿ. ಅವುಗಳನ್ನು ನಾನು ಹೇಳಲೇಬೇಕು. ಮೂವತ್ತೆಂಟು ವರ್ಷಗಳ ಕಾಲ ನನಗೆ ನೀರು ಗಾಳಿ ಕೊಟ್ಟ ಈ ಲೋಕವನ್ನು ಬಿಟ್ಟು ಹೊರಡುವುದಕ್ಕೆ ಮುಂಚೆ, ಆ ವಿಷಯಗಳನ್ನು ನಾನು ಬರೆದಿಡಲೇಬೇಕು. ನನ್ನ ಈ ಬರೆವಣಿಗೆ ಸಾಹಿತ್ಯವಾಗದೇ ಹೋಗಬಹುದು. ಆದರೂ ನಾನು ಬರೆಯಬೇಕು.

ಈ ದಿನ ಮಂಗಳವಾರ. ಶುಭ ಕೆಲಸಕ್ಕೆ ಇದು ಯೋಗ್ಯ ದಿನ ಅಲ್ಲವಂತೆ. ಇರಬಹುದು. ಜೀವಮಾನದಲ್ಲಿ ಒಂದು ಸಾರಿಯೂ ಘಳಿಗೆ ಮುಹೂರ್ತ ನೋಡದ ನಾನು ಈಗ ಶುಭ ಅಶುಭಗಳ ಯೋಚನೆ ಮಾಡಲೆ? ಹೆಸರು—ಮಂಗಳವಾರ. ಮಂಗಳ ಎಂದರೆ ಒಳಿತು ಎಂದು ಕೇಳಿದ್ದೇನೆ. ಅಷ್ಟು ಸಾಕು!

ಕರುಳು ಬಿರಿದು ಬರುತ್ತಿದೆ. ಯಾವುದೊ ಸೈತಾನ ಹೊಟ್ಟೆಯ ಒಳಹೊಕ್ಕು ಒರಟು ಬೆರಳುಗಳಿಂದ ಕೈಗೆ ಸಿಕ್ಕಿದುದೆಲ್ಲವನ್ನೂ ಹಿಚುಕುತ್ತಿದ್ದಾನೆ. ನನ್ನ ದೇಹ ಸೊರಗಿದೆ. ಎತ್ತರದ ದೃಢಕಾಯನೆಂದು ಪೋಲೀಸರ ದಾಖಲೆಯಲ್ಲಿ ನನ್ನ ಬಗ್ಗೆ ಬರೆದಿದ್ದಾರೆ ಎಂಬುದು ನಿಜ. ಆದರೆ ಅದು ಹಳೆಯ ದಾಖಲೆ. ನಾನೀಗ ಎತ್ತರವಿದ್ದರೂ ಸ್ವಲ್ಪ

ಕುಗ್ಗಿ ಹೋಗಿರುವ ಬಡಕಲು ಜೀವಿ. ಹಿಂದೆ ನನ್ನನ್ನು ಸ್ಫುರದ್ರೂಪಿ ಎಂದು ಕರೆಯುತ್ತಿದ್ದರು. ಈಗಲೂ ನಾನು ಸುಂದರನೆ. ಆದರೆ ನೆತ್ತಿಯ ನಡುವಿನಲ್ಲೇ ಹಣೆಯ ಅಂಚಿನಿಂದ ಮೊದಲಾಗಿ ತಲೆ ಕೂದಲು ಬೆಳ್ಳಿಯಾಗಿದೆ. ದವಡೆಯ ಎಲುಬುಗಳು ಅಸ್ಪಷ್ಟವಾಗಿ ಎದ್ದು ನಿಂತಿವೆ. ಕಣ್ಣುಗಳು ಗುಳಿಬಿದ್ದಿವೆ. ಕಣ್ಣುರೆಪ್ಪೆಯ ಸುತ್ತಲೂ ಬಣ್ಣ ಕರಿದಾಗಿದೆ. ಯಾಕೆ ಹೀಗಾಯಿತು? ನ್ಯಾಯಾಸ್ಥಾನದಲ್ಲಿ ನನ್ನನ್ನೇ ನೋಡುತ್ತಾ ನ್ಯಾಯಾಧೀಶರು ತಿಳಿವಳಿಕೆಯ ಮುಗುಳುನಗು ನಗುತ್ತಾರೆ. ಕೆಂಪುಕೆಂಪನೆ ಹೊಳೆಯುವ ತುಂಬುಮುಖದ ಕೋಮಲ ಕಾಯ ಅವರದು. ಅವರು ನ್ಯಾಯಮೂರ್ತಿಗಳು! ಹೀಗೆ ಬಡಕಲು ಬಡಕಲಾಗಿರುವ ನಾನು? ಯಾಕೆ ಸಂದೇಹ ಉಂಟೆ? ನಾನು ಕೊಲೆ ಪಾತಕಿ—ಕೊಲೆ ಪಾತಕಿ.

ಆದರೆ ನನ್ನನ್ನು ಇಲ್ಲಿ ಗೌರವಿಸುತ್ತಾರೆ. ಸೆರೆಮನೆಯ ಆವರಣ ದೊಳಗೆ ಕಬ್ಬಿಣದ ಸರಳುಗಳ ಹಿಂದೆ ಬಂಧಿತನಾಗಿರುವ ನನ್ನ ಬಗ್ಗೆ ಅವರಿಗೆ ಗೌರವವಿದೆ. ಕಾರಣ—ನಾನು ವಿದ್ಯಾವಂತ. ಅಧಿಕಾರಿ ಗಳನ್ನು ನಾಚಿಸುವ ಹಾಗೆ ಆಂಗ್ಲರ ಭಾಷೆ ಮಾತಾಡಬಲ್ಲೆ. ಉಡುಗೆ ತೊಡುಗೆಯ ಸರಳ ರೀತಿಯಲ್ಲಿ ಆಗರ್ಭ ಶ್ರೀಮಂತರನ್ನೂ ಮೀರಿಸ ಬಲ್ಲೆ. ಅವರ ದೃಷ್ಟಿಯಲ್ಲಿ ನಾನು ಸಾಮಾನ್ಯ ಪಾತಕಿಯಲ್ಲ. ಎಲ್ಲರಿಗೂ ವಿಸ್ಮಯವನ್ನುಂಟುಮಾಡಿರುವ ಮಹಾ ರಹಸ್ಯ ವ್ಯಕ್ತಿ. ಎರಡು ವಿಚಾರ ಣೆಗಳ ನಡುವೆ ನಾನಿಲ್ಲಿ ಕುಳಿತಿದ್ದರೆ, ಈ ಜೈಲಿನ ಅಧಿಕಾರಿಗಳು ಒಂದು ರೀತಿಯಲ್ಲಿ ಹೆಮ್ಮೆಪಡುತ್ತಾರೆ. ತಮ್ಮ ಬಿಡುವಿನ ಅವಧಿಯಲ್ಲಿ ನನ್ನೊಡನೆ ಹರಟೆಗಾಗಿ ಅವರು ಬರುತ್ತಾರೆ. ಆ ಮಾತು ಈ ಮಾತು ಆಡುತ್ತಾರೆ. ನಿಯಮಗಳನ್ನು ಮೀರಿ ಹೆಚ್ಚು ಸಲಿಗೆಯಿಂದ ವರ್ತಿಸು ತ್ತಾರೆ; ಸೌಕರ್ಯ ಒದಗಿಸುತ್ತಾರೆ. ಬರೆಯಲು ಬೇಕಾದ ಈ ಅನು ಕೂಲತೆ ನನಗೆ ದೊರೆತಿರುವುದೂ ಅವರ ಔದಾರ್ಯದಿಂದಲೇ........

ನಾನು ಯಾರೆಂಬುದನ್ನು, ಏನೆಂಬುದನ್ನು, ಯಾಕೆ ಹೀಗೆ ಎಂಬುದನ್ನು, ಯಾರಾದರೂ ಬಲ್ಲರೆ? ನನ್ನ ಬಾಳ್ವೆಯ ಹಲವು ಅಧ್ಯಾಯಗಳನ್ನು ಎತ್ತಿ ತೋರಿಸಿ ನನ್ನ ಬಗ್ಗೆ ಯಾರಾದರೂ ಅಧಿಕಾರ

ವಾಣಿಯಲ್ಲಿ ಮಾತಾಡಬಲ್ಲರೆ?........ ನಾನು ಈ ಸಮಾಜದೊಳಗೇ ಒಬ್ಬ ಸದಸ್ಯನಾಗಿದ್ದೆ ನಿಜ. ಆದರೆ ನಾನು ಜೀವಿಸಿದ್ದು ಈ ಸಮಾಜದ ಹೊರಗಿನ ಒಬ್ಬ ವ್ಯಕ್ತಿಯಾಗಿ. ಈ ಸಮಾಜಕ್ಕೂ ನನಗೂ ಇದ್ದ ಸಂಬಂಧವೇನು ಹಾಗಾದರೆ? ಹುಟ್ಟಿ, ಬೆಳದು, ಸತ್ತು ಮಣ್ಣಾಗುವ ಕೋಟಿ ಜನರಲ್ಲಿ ನಾನೊಬ್ಬ ನಿಜ. ಆದರೆ ಸತ್ತ ಬಳಿಕ ನನ್ನ ಬಗ್ಗೆ, ಉಳಿದವರು ಕ್ಷಣಕಾಲವೂ ಯೋಚನೆಮಾಡುವಂತೆ ಇಲ್ಲವೆ? ಅವರ ಪಾಲಿಗೆ ನಾನು ಮುರಿದುಹೋದ ಮುಳ್ಳುಕಡ್ಡಿಯೆ?

ಎಂಟು ವರ್ಷಗಳಿಗೆ ಹಿಂದೆ ನಾನು ಆ ಬರೆಹಗಾರರನ್ನು ಕಂಡೆ. ಎಲ್ಲಿಯೋ ನಾನು ಓದಿದ್ದ ಆತನ ಕೃತಿಗಳು ನನ್ನ ಗಮನವನ್ನು ಸೆಳೆದಿದ್ದುವು. ಅವನಿಗೆ ಮರಣಪ್ರಾಯನಾಗಬೇಕಾಗಿದ್ದ ನಾನು, ಅವನ ಪ್ರಭಾವಕ್ಕೆ ಒಳಗಾಗಿ ನನ್ನ ವ್ಯಕ್ತಿತ್ವವನ್ನೇ ಕಳೆದುಕೊಳ್ಳುವ ಗಂಡಾಂತರದಲ್ಲಿ ಸಿಲುಕಿದೆ. ನಾನು ಆಯ್ದುಕೊಂಡಿದ್ದ ಹಾದಿಯಿಂದ ನನ್ನನ್ನು ಬೇರೆಡೆಗೆ ಒಯ್ಯಲು ಯತ್ನಿಸಿದ ಆತನಿಂದ, ನಾನು ಬೇಗನೆ ದೂರವಾದೆ. ಆದರೆ ಈ ದಿನ ಇದನ್ನು ಬರೆಯಲು ನಾನು ಸಮರ್ಥ ನಾದುದಕ್ಕೆ ಯಾರಾದರೂ ಕಾರಣರಿದ್ದರೆ, ಆ ವ್ಯಕ್ತಿ ಆತನೊಬ್ಬನೇ. ಆತ ಹೇಳುತ್ತಿದ್ದ: "ಚಂದ್ರಶೇಖರ, ನೀವು ಯಾರೋ ನನಗೆ ತಿಳೀದು. ನಿಮ್ಮ ವಿಚಿತ್ರ ವ್ಯಕ್ತಿತ್ವವನ್ನ ನಿಮ್ಮ ಇಚ್ಛೆಗೆ ವಿರುದ್ಧವಾಗಿ ತಿಳಿಯೋ ಬಯಕೆಯೂ ನನಗಿಲ್ಲ. ಆದರೆ ಇಷ್ಟು ಹೇಳಬಲ್ಲೆ. ಈ ಜೀವನ ಪ್ರವಾಹದಲ್ಲಿ ನೀವು ಹುಲ್ಲುಕಡ್ಡಿಯೋ, ಕಲ್ಲುಬಂಡೆಯೋ, ಒಡೆದ ದೋಣಿಯೋ, ಯುದ್ಧದ ಹಡಗೋ ಆಗಿರೋದು ನಿಜ. ನೀವೇನೇ ಇರಿ, ನಿಮ್ಮ ಅನುಭವಗಳನ್ನ ನೀವು ಬರೆದಿಡಬೇಕು. ಅದು ಒಳ್ಳೇ ಸಾಹಿತ್ಯ ಆಗೋದರಲ್ಲಿ ಯಾವ ಸಂಶಯವೂ ಇಲ್ಲ." ಹಾಗೆ ಆತ ಹೇಳಿದಾಗ ನನಗೆ ನಗು ಬಂದಿತ್ತು. ಸ್ವಲ್ಪ ಹೆಮ್ಮೆಯೂ ಅನಿ ಸಿತ್ತು. ಆದರೆ, ನನ್ನ ಪೂರ್ಣಕತೆ ತಿಳಿದರೆ ಈತ ನನ್ನನ್ನು ದೂರವಿಡ ಬಹುದೆಂಬ ಭೀತಿಯೂ ನನ್ನನ್ನು ಆವರಿಸಿತ್ತು.

ಅಂತೂ ಈಗ ನಾನು ಬರೆಯತೊಡಗಿದ್ದೇನೆ. ಬರೆದುದನ್ನು ಆ ಸಾಹಿತಿಗೇ ತಲುಪಿಸಿದರಾಯಿತು. ಆತ ಈ ಕೆಲಸಕ್ಕೆ ಒಪ್ಪ

ಕೊಡಲಿ. ಹೊಸದಾಗಿ ಬರೆಯುವವರ ಪುಸ್ತಕಗಳಿಗೆ ಸ್ವಲ್ಪ ಹಳಬರು ಮುನ್ನುಡಿ ಬರೆಯುತ್ತಾರಂತೆ. ನನ್ನ ಪುಸ್ತಕಕ್ಕೆ ಅತನೇ ಮುನ್ನುಡಿ ಬರೆಯಲಿ. ಈ ಆತ್ಮಕತೆ ಇನ್ನೆಷ್ಟೋ ಜನಕ್ಕೆ ದೊರೆಯುವಂತಾಗಲಿ.

ಯಾಕೆ ಈ ಹಂಬಲ ? ನಾನು ಪ್ರಸಿದ್ಧ ಪುರುಷನಾಗಬೇಕೆಂದೆ ? ಪತ್ರಿಕೆಗಳಲ್ಲಿ ನನ್ನ ಹೆಸರು ಬರಬೇಕೆಂದೆ ? ಇಲ್ಲ, ಅಂಥ ಪ್ರಸಿದ್ಧಿ ನನಗೆ ಬೇಕಾಗಿಲ್ಲ. ಮಹಾ ಅಪಾಯಕಾರಿಯಾದ ವ್ಯಕ್ತಿ ಎಂದೂ ಸಮಾಜಕಂಟಕನೆಂದೂ ನಾನು ಈಗಾಗಲೇ ಸಾಕಷ್ಟು ಪ್ರಸಿದ್ಧನಾಗಿದ್ದೇನೆ. ಯಾರು ಎಲ್ಲಿ ಕೊಲೆಮಾಡಿದರೂ ನಾನೇ ಜವಾಬ್ದಾರ ಎನ್ನುವಷ್ಟರ ಮಟ್ಟಿಗೆ ಪ್ರಖ್ಯಾತನಾಗಿದ್ದೇನೆ. ದಿನಪತ್ರಿಕೆಗಳು ಮೊದಲ ಪುಟದಲ್ಲಿ ದಪ್ಪ ಅಕ್ಷರಗಳಲ್ಲಿ ನನ್ನ ಮೇಲಿನ ಆರೋಪಗಳನ್ನು ಮುದ್ರಿಸಿವೆ. ಇನ್ನು ಆಗಬೇಕಾಗಿರುವುದು ನನ್ನ ವಿಚಾರಣೆ. ಆಮೇಲೆ ಶಿಕ್ಷೆ—ಮರಣ ದಂಡನೆ ಇಲ್ಲವೆ ಬದುಕಿರುವವರೆಗೂ ಕಾರಾಗೃಹ.

ನನಗೇಕೋ ನಗು ಬರುತ್ತಿದೆ. ಇವರು ಮೂರ್ಖರು. ಇಂಥವರಿಂದಲೇ ತುಂಬಿರುವ ಈ ಸಮಾಜದ ಸಹವಾಸ ಸಾಕುಸಾಕಾಗಿ ನಾನು ಹೊರಟುಹೋಗುತ್ತಿದ್ದೇನೆ. ಕರುಳಿನ ಬಾಧೆಯನ್ನೂ ಸಹಿಸಿ ನನ್ನ ಹೃದಯದಲ್ಲಿ ನೆಲೆಸಿರುವ ನೆಮ್ಮದಿಯನ್ನು ಇವರು ಕಾಣರೇ ? ನಾನು ಅಪೇಕ್ಷೆಪಟ್ಟರೆ ಇಲ್ಲಿಂದ ತಪ್ಪಿಸಿಕೊಂಡು ಹೋಗುವುದು ದೊಡ್ಡ ಮಾತಲ್ಲ ಆದರೆ, ನನಗೆ ಬೇಕಾಗಿರುವುದು ಅಂಥ ವಿಮೋಚನೆಯಲ್ಲ. ಸಣ್ಣ ಸೆರೆಮನೆಯಿಂದ ದೊಡ್ಡ ಸೆರೆಮನೆಗೂ, ದೊಡ್ಡದರಿಂದ ಸಣ್ಣದಕ್ಕೂ ಹೋಗಿ ಬಂದು ನಾನು ಬೇಸತ್ತು ಹೋಗಿದ್ದೇನೆ. ನನಗೀಗ ಬಿಡುಗಡೆ ಬೇಕು—ನಿಶ್ಶರ್ತವಾದ ಬಿಡುಗಡೆ. ನ್ಯಾಯದ ದೀರ್ಘ ಹಸ್ತವಾಗಲೀ, ಪೋಲೀಸರ ಕೊರಕಲು ಕೈಯಾಗಲೀ, ನಾಗರಿಕರೆಂಬುವರ ಸಂಸ್ಕಾರವಾಗಲೀ ಎಂದೆಂದಿಗೂ ನನ್ನನ್ನು ಬಾಧಿಸದಂತಹ ಬಿಡುಗಡೆ ನನಗೆ ಬೇಕು. ಅದು ಸುಲಭಸಾಧ್ಯವಲ್ಲವೆಂಬುದನ್ನು ನಾನು ಬಲ್ಲೆ. ಅದಕ್ಕೆ ಅಪಾರ ಬೆಲೆ ತೆರಬೇಕಾದೀತು. ಅದು ದೊಡ್ಡ ಮಾತಲ್ಲ. ಅಂಥ ಬೆಲೆಯನ್ನೇ ನಾನು ತೆತ್ತು ಬಿಡುಗಡೆ ಹೊಂದಬೇಕು.

ನನ್ನ ಪಕ್ಕದ ಕೊಠಡಿಯಲ್ಲಿ ಸುಪ್ರಸಿದ್ಧ ಕೇಡಿಯಾದ ಕರಿಯ

ನಿದ್ದಾನೆ. ಅವನಿಗೆ ಓದು ಬಾರದು. ಆದರೆ, ಆತನಿಗೆ ಇರುವ ಪ್ರಪಂಚ ಜ್ಞಾನ ಸಾಮಾನ್ಯವಾದುದಲ್ಲ. ಆರನೆಯ ಬಾರಿ ಸೆರೆಮನೆ ಸೇರಿದಮೇಲೆ ಆತನಿಗೆ ಇದೊಂದು ವಿಶ್ರಾಂತಿ ಗೃಹವಾಗಿದೆ. ಕಳೆದ ಸಲ ಬಿಡುಗಡೆ ಹೊಂದಿದವನು ಬೀದಿಬೀದಿ ಅಲೆದನಂತೆ. ಸಂಭಾವಿತ ನಾಗಿ ಕೂಲಿಯಾಗಿ ಬಾಳುವ ಇಚ್ಛೆ ಹಿಂದೆ ಅವನಿಗಿತ್ತು. ಆದರೆ, ಅಂತಹ ಅವಕಾಶವನ್ನು ಸಮಾಜ ನೀಡಲಿಲ್ಲ. ಆತನನ್ನು ಕಳ್ಳ ಕಳ್ಳ ಎಂದಿತು. ಕರಿಯ ತನ್ನನ್ನು ಹಿಂಬಾಲಿಸುತ್ತಿದ್ದ ಪೋಲೀಸರಿಂದಲೂ ಪೋಕರಿ ಹುಡುಗರಿಂದಲೂ ತಪ್ಪಿಸಿಕೊಳ್ಳಲು ಕಂಡುಕೊಂಡ ಹಾದಿ ಒಂದೇ ಒಂದು. ಮತ್ತೆ ಕಳ್ಳತನ. ಹಿಡಿಯಲು ಪೋಲೀಸರು ಬಂದಾಗ ಓಡದೆ ಇರುವುದು. ಅವರೊಡನೆ ಸೆರೆಮನೆಗೆ ಮರಳಿ ಬರು ವುದು! 'ವಿದ್ಯಾವಂತ'ನಾದ 'ದೊಡ್ಡಮನುಷ್ಯ'ನಾದ ನಾನು ಸೆರೆಮನೆ ಯಲ್ಲಿ ಇರುವುದನ್ನು ಕಂಡು ಆತ ಆಶ್ಚರ್ಯಪಡುತ್ತಾನೆ. ಅವನಿನ್ನೂ ಪೂರ್ತಿ ಪಶುವಾಗಿಲ್ಲ. ನಮ್ಮ ವಿಭಾಗದಾಚೆ ಇರುವ ಸ್ತ್ರೀ ಕೈದಿಗಳತ್ತ ಆತ ಹೋಗಲು ಯತ್ನಿಸುತ್ತಾನೆ. ಗಂಡು ಪಶುವಾಗಿ ಹಾಗೆ ಹೋಗುವು ದಿಲ್ಲ. ಅಲ್ಲೊಬ್ಬಳು ಕೈದಿ ಇದ್ದಾಳೆ—ಎಲ್ಲವ್ವ. ನಾಲ್ಕು ತಿಂಗಳ ಹಿಂದೆ ಕಳ್ಳತನಮಾಡಿ ಆಕೆ ಜೈಲಿಗೆ ಬಂದಾಗ ತುಂಬು ಗರ್ಭಿಣಿಯಾಗಿದ್ದಳು. ಒಂದೇ ದಿನ ಅವರಿಬ್ಬರಿಗೂ ಒಂದೇ ನ್ಯಾಯಾಸ್ಥಾನದಲ್ಲಿ ಶಿಕ್ಷೆ ಆಯಿತು—ಅವಳಿಗೆ ಮೊದಲ ಬಾರಿ; ಆತನಿಗೆ ಆರನೆಯ ಬಾರಿ. ಅಲ್ಲಿಯೆ ಅವರಿಗೆ ಪರಸ್ಪರ ಪರಿಚಯವಾದುದು. ಆ ಪರಿಚಯದ ಅನಂತರ ಈಗ? ಎಲ್ಲವ್ವ ಗಂಡುಕೂಸನ್ನು ಹಡೆದಿದ್ದಾಳೆ. ಬಂದೀ ಖಾನೆಯಲ್ಲಿ ಹುಟ್ಟಿದ ಆ ಮಗುವಿಗೆ ಕ್ರಿಸ್ನ ಎಂದು ಹೆಸರಿಟ್ಟಿರುವ ರಸಿಕಳು ಆಕೆ. ಹಾದರಕ್ಕೆ ಹುಟ್ಟಿದ ಗಂಡು ಮಗುವಿಗೆ ಕೃಷ್ಣ ಎಂಬ ಹೆಸರು! ಕರಿಯ ಆ ತಾಯಿ-ಮಗುವನ್ನು ಪ್ರೀತಿಸುತ್ತಾನೆ. ಗಂಡು-ಹೆಣ್ಣಿನ ಸಂಬಂಧದಲ್ಲಿ ಪ್ರೀತಿ ಎಂದರೆ ಏನೆಂಬುದನ್ನು ನೀವು ಬಲ್ಲಿರಾ? ಕೇಡಿ ಯಾಗಿ ಸಮಾಜ ಬಾಹಿರನಾಗಿ ಅನಾಗರಿಕನೆಂದು ಕರೆಯಲ್ಪಟ್ಟ ಕರಿಯ, ಬೀದಿಗೆ ಬಿದ್ದ ಎಲವ್ವಳನ್ನು ಪ್ರೀತಿಸುತ್ತಾನೆ. ಹೆಸರು ಹೇಳಲು ತಂದೆಯೂ ಇಲ್ಲದ ಆ ಮಗುವನ್ನು ಕೂಡಾ. ಇದು ಆಶ್ಚರ್ಯದ

ಸಂಗತಿ. ಕರಿಯ ಕೊಠಡಿಯ ಸರಳುಗಳ ಎಡೆಯಿಂದ ನನ್ನೊಡನೆ ಮಾತನಾಡುತ್ತಾ ತನ್ನ ಹೃದಯದೊಳಗಿನ ನೋವನ್ನು, ಹೊರಕ್ಕೆ ಹರಿಯಬಿಡುತ್ತಾನೆ. ಅವಕಾಶ ದೊರೆತರೆ, ಹೊರ ಹೋದಮೇಲೆ ಎಲ್ಲವ್ರನೊಡನೆ ಸಂಸಾರ ಹೂಡಬೇಕೆಂಬ ಆಸೆ ಅವನಿಗೆ-ಮನುಷ್ಯ ನಾಗುವ ಆಸೆ. ಕೇಡಿಯ ಹಗಲುಗನಸಿಗೆ ಒಂದು ಮಿತಿ ಮೇರೆ ಬೇಡವೆ-ಎಂದು ಕೇಳಬಹುದು ಯಾರಾದರೂ!

ಪಕ್ಕದ ಇನ್ನೊಂದು ಕೊಠಡಿಯಲ್ಲಿ ಎಳೆ ಹರೆಯದ ಯುವಕ ನೊಬ್ಬನಿದ್ದಾನೆ. ಕರಿಯನಿಗಿಂತ ಐದಾರು ವರ್ಷ ಚಿಕ್ಕವನು ಈತ. ಇನ್ನೂ ವಿಚಾರಣೆ ಮುಗಿದಿಲ್ಲ. ಈತನ ಮನಸ್ಸು ಅಸ್ತವ್ಯಸ್ತವಾಗಿದೆ. "ನಾನು ಹೊಡೆದೆ. ಅವಳು ಸತ್ತ್ಹೋದ್ಲು. ಆದರೆ ಸತ್ತ್ಹೋಗ್ಲಿ ಅಂತ ನಾನು ಹೊಡೀಲಿಲ್ಲ. ನಾನು ತಪ್ಪುಮಾಡಿಲ್ಲ. ಏನು ಸಾರ್? ನನ್ನ ಬಿಟ್ಬಿಡಬಹುದೇ ಸಾರ್?" ಎಂದು ಆತ ಕೇಳುತ್ತಿದ್ದಾನೆ. ಎಲ್ಲರೂ ಹೀಗೆಯೇ. ಆರಂಭದಲ್ಲಿ ಎಲ್ಲರೂ ಹೀಗೆಯೇ. ನಾನದನ್ನು ಚೆನ್ನಾಗಿ ಬಲ್ಲೆ. ನಾಳೆ ಆತನ ಮುಖದ ಚರ್ಯೆ ಬದಲಾಗುವುದು. ಮುಖದ ಮೇಲೆ ಕಾಠಿನ್ಯದ ರೇಖೆಗಳು ಮೂಡುವುವು. ಎಲ್ಲರನ್ನೂ ನೆಟ್ಟದೃಷ್ಟಿಯಿಂದ ನೋಡುವ ಸಾಮರ್ಥ್ಯ ಆ ಕಣ್ಣುಗಳಿಗೆ ಬರುವುದು ಆಮೇಲೆ ತುಚ್ಛೀಕಾರದ ನೋಟ. ಇದು ಯಾವಾಗಲೂ ಹೀಗೆಯೇ.

........ನನ್ನ ಆತ್ಮಕತೆ ಹೇಳಲು ಹೊರಟವನು ಬೇರೆಯವರ ಬಗ್ಗೆ ಬರೆಯುತ್ತಿದ್ದೇನೆ! ಇದು ಸರಿಯಲ್ಲ. ನನಗಿರುವ ಸ್ವಲ್ಪ ಅವ ಕಾಶದಲ್ಲಿ, ಹೇಳಬೇಕಾದ್ದೆಲ್ಲವನ್ನೂ ನಾನು ಹೇಳಿ ಮುಗಿಸಬೇಕು. ಆದರೆ ಈ ದಿನ ನಾನು ಹೆಚ್ಚು ಬರೆಯಲಾರೆ. ಗತಕಾಲದ ಸ್ಮರಣೆಗಳು ಧಾವಿಸಿಬರುತ್ತಿವೆ. ಏನನ್ನು ಬರೆಯಲಿ? ಏನನ್ನು ಬಿಡಲಿ? ಆದರೂ ನಾನು ಬರೆಯಬೇಕು. ಯೋಚಿಸಿ ಯೋಚಿಸಿ, ನೂರು ಎಳೆಗಳನ್ನು ಒಂದೊಂದಾಗಿ ಎತ್ತಿ, ಜೀವನದ ಬಿಡಿಸಲಾಗದ ಸಿಕ್ಕನ್ನು ಮೆಲ್ಲಮೆಲ್ಲನೆ ಬಿಡಿಸಿ, ಒಂದು ನೇರವಾದ ದೀರ್ಘವಾದ ದಾರವನ್ನು ನಾನು ತಯಾರಿಸ ಬೇಕು. ಆ ದಾರದ ಕೊನೆ ಬಂದಾಗ ನನ್ನ ಕತೆಯ ಮುಕ್ತಾಯ ವಾಗುವುದು. ಆ ರಹಸ್ಯವನ್ನು ಇಲ್ಲಿ ಹೇಳಲೇ? ಆ ದಾರವೇ ನನ್ನ

ಪಾಲಿಗೆ ಉರುಳಾಗಿ ಪರಿಣಮಿಸುವುದೆಂದರೆ ನೀವು ನಂಬುವಿರಾ? ದೇಹದ ಕಾಹಿಲೆ, ಮನಸ್ಸಿನ ಕಾಹಿಲೆಯನ್ನು ಮಾರಿಸಿದೆ. ಈಸಾರೆ ಈ ಅನಾರೋಗ್ಯದಿಂದ ನಾನು ತಪ್ಪಿಸಿಕೊಳ್ಳಲಾರೆ. ಈ ವಿಚಾರಣೆಯ ನಾಟಕದಲ್ಲಿ ನನಗೆ ಆಸಕ್ತಿಯಿಲ್ಲ. ಆದರೂ ನ್ಯಾಯದ ಸತ್ಯದ ದೊಡ್ಡ ಹೆಸರಿನಲ್ಲಿ ಆ ವಿಚಾರಣೆ ಆಗಬೇಕು! ನನಗೆ ನಗು ಬರುತ್ತಿದೆ: ನನ್ನ ಬಿಡುಗಡೆಯನ್ನು ನಾನು ಪಡೆದಮೇಲೆ ಇವರೇನು ಮಾಡುವವರು? ಒಂದು ವಾರದ ಬಳಿಕ ಇವರೇನು ಮಾಡುವವರು?

## . . . ಬುಧವಾರ

ಹೇಮಾವತಿ ತುಂಬಿ ಹರಿಯುತ್ತಿತ್ತು. ನನ್ನ ತಂದೆಯ ಕೊರಳಿನ ಸುತ್ತಲೂ ಕಾಲು ಹಾಕಿ, ಭುಜದಮೇಲೆ ಕುಳಿತು, ಆತನ ತಲೆಯನ್ನು ನನ್ನ ಪುಟ್ಟ ಕೈಗಳಿಂದ ಬಿಗಿಹಿಡಿದಿದ್ದೆ. ತಾಯಿ, ಚಿಂದಿ ಸೀರೆ ಬಟ್ಟೆ ಬರೆಗಳ, ದೇವರ, ಗಂಟು ಹೊತ್ತು ನಮ್ಮ ಹಿಂದೆಯೆ ನಿಂತಿದ್ದಳು. ನದಿ ದಾಟಿ ನಗರಕ್ಕೆಂದು ನಾವು ಸಾಗಿ ಬರಬೇಕು. ಬಹಳ ದಿನಗಳ ಮೇಲೆ ತಂದೆ ತೀರಿಕೊಂಡಾಗ "ರಾಮು ರಾಮು" ಎನ್ನುತ್ತಾ ಆ ವಿಷ ಘಳಿಗೆಯನ್ನೇ ಸ್ಮರಿಸುತ್ತಾ ಆ ಬಗ್ಗೆ ನನಗೆ ಹೇಳುತ್ತಿದ್ದರು: "ಚಂದ್ರು ನಿಂಗೆ ನೆಪ್ಪಯ್‌ತಾ? ನಿಮ್ಮಮ್ಮ—ನೆಪ್ಪಯ್‌ತೇನೋ."

ನನಗೆ ನೆನಪಿತ್ತು. ನನಗೆ ಚೆನ್ನಾಗಿ ನೆನಪಿತ್ತು. ಎಲ್ಲವೂ ಕಳೆದುಹೋದಾಗ, ಕೈಬಿಟ್ಟ ಹೊಲದೊಡನೆ ಮೂಲೆಯಲ್ಲಿದ್ದ ನಮ್ಮ ಗುಡಿಸಲೂ ಹೊರಟುಹೋದಾಗ, ಆ ಬಡಹಳ್ಳಿಯಲ್ಲಿ ಪಾಠ ಹೇಳಿ ಕೊಡುವ ಕೆಲಸವನ್ನೂ ನಮ್ಮ ತಂದೆ ಕಳೆದುಕೊಂಡಾಗ, ನಾವು ಅಲ್ಲಿಂದ ಹೊರಟೆವು. ದುಡಿದು ಬದುಕುವ ಆಸೆಯಿಂದ ಹೊರಟೆವು. ನಗರದಲ್ಲಿ ಇದ್ದ ಯಾರೋ ಪರಿಚಿತರ ನೆರವನ್ನು ಪಡೆದು ಕೆಲಸ ಹುಡಕಬೇಕೆಂಬುದು ತಂದೆಯ ತೀರ್ಮಾನವಾಗಿತ್ತು. ಅದಕ್ಕಾಗಿಯೇ ತಂದೆ, ತಾಯಿ, ನಾನು, ಹಳ್ಳಿ ಬಿಟ್ಟು ಬಂದೆವು. ಹಳ್ಳಿಯನ್ನು ಹಿಂದೆ ಬಿಟ್ಟು, ನದಿಯ ದಂಡೆಯಮೇಲೆ ನಿಂತೆವು.

ಆ ಮೊದಲ ನೆನಪು—

ತಂದೆ, ತಾಯಿಯನ್ನು ಕೇಳಿದ: "ಏನ್ಮಾಡೋಣಾಂತೀಯಾ ರುಕ್ಕೂ?"

ಪ್ರಾಯಶಃ ಅದು ಅವನ ಪ್ರೀತಿಯ ಪ್ರಶ್ನೆಯಾಗಿತ್ತೆಂದು ತೋರುತ್ತದೆ: "ಏನ್ಮಾಡೋಣಾಂತೀಯಾ ರುಕ್ಕೂ?"

ನಾನು ಹಿಂದಕ್ಕೆ ತಿರುಗಿ ತಾಯಿಯ ಮುಖ ನೋಡಿದೆ. ತಂದೆಯೂ ತಿರುಗಿ ತಾಯಿಯ ಮುಖ ನೋಡಿದ. ಆಕೆ ನಮ್ಮಿಬ್ಬರ ಮುಖವನ್ನು ನೋಡಿದಳು. ಮಾತನಾಡದೆ ಮೌನವಾಗಿ ನೋಡಿದಳು. ಎಂದಿನಂತೆಯೇ, ತಂದೆಯೇ ನಿರ್ಧಾರಮಾಡಿರಬೇಕು. ಆಳ ಕಡಿಮೆ ಇದ್ದ ಭಾಗದಲ್ಲಿ ನಾವು ನೀರಿಗಿಳಿದೆವು. ಸೊಂಟವನ್ನು ಮೀರಿ ನೀರು ಮೇಲಕ್ಕೆ ಬರಲಿಲ್ಲ. ನಡುಹೊಳೆಯಲ್ಲಿ ನಾವು ಕ್ಷಣಕಾಲ ನಿಂತೆವು. ತಂದೆ ನದಿಯ ಮೇಲಕ್ಕೂ ಕೆಳಕ್ಕೂ ದೃಷ್ಟಿಹಾಯಿಸಿದ. ತಾಯಿ ವೆಂಕಟರಮಣನಿಗೆ ಹಣ್ಣು ಕಾಯಿಯ ಹರಕೆ ಹೊತ್ತಳು. ದೇವರು ಒಳ್ಳೆಯವನು, ಅಲ್ಲವೆ? ಹಳ್ಳಿಯ ಮನುಷ್ಯರು ನನ್ನ ತಂದೆ ಮತ್ತು ತಾಯಿಗೆ ನೆರವಾಗಿರಲಿಲ್ಲ. ಆದರೆ, ದೇವರು ಕೈಬಿಡುವುದುಂಟ? ದೇವರು ದಡಹಾಯಿಸದೆ ಇರುವುದುಂಟೆ? ನಾವು ಮುಂದಕ್ಕೆ ಸರಿದೆವು. ತಂದೆ ಹೆಜ್ಜೆಯಮೇಲೆ ಹೆಜ್ಜೆ ಇಟ್ಟು ಮೆಲ್ಲಮೆಲ್ಲನೆ ಮುಂದುವರಿಯುತ್ತಿದ್ದ. ತಾಯಿ ದೇವರ—ಬಟ್ಟೆಯ ಮೂಟೆಯೊಡನೆ ಹಿಂಬಾಲಿಸಿ ಬರುತ್ತಿದ್ದಳು. ನಾವು ದಡವನ್ನು ಸಮೀಪಿಸುತ್ತಿದ್ದೆವು "ಇನ್ನೇನು ಆಗೋಯ್ತು ದಡ, ಬಂದ್ಬುಡ್ತು" ಎನ್ನುತ್ತಿದ್ದ ತಂದೆ. ನಾನು ತಿರುಗಿ ಹಿಂದಕ್ಕೆ ನೋಡಿದೆ. ತಾಯಿ—

ಆಕೆಯ ಕೊರಳಿನವರೆಗೂ ನೀರು ಬಂದಿತ್ತು. ಬಹಳ ದಿನಗಳ ಮೇಲೆ ಅದನ್ನು ವಿವರಿಸುತ್ತಿದ್ದ ತಂದೆ ನನಗೆ ಹೇಳಿದ್ದ: ಸೆರಗು ಹಿಡಿದು ಹಿಂದಿನಿಂದಲೇ ಬರುವುದರ ಬದಲು ಅವಳು ಎಲ್ಲೋ ಸ್ವಲ್ಪ ಬಲಕ್ಕೆ ಹೊರಳಿರಬೇಕು, ಅಲ್ಲಿಯೇ—

ಅಲ್ಲಿಯೇ ಆಕೆ ಮೌನವಾಗಿ ನಿಂತುಬಿಟ್ಟಿದ್ದಳು. ಮಿಸುಕಲು ಭೀತಿ ಅವಳಿಗೆ. ತಾಯಿಯನ್ನು ಹಾಗೆ ನೋಡುತ್ತಾ ನಾನು ಚೀತ್ಕರಿಸಿದೆ. ತಂದೆ ತಿರುಗಿ ನೋಡಿದ. ಅವನ ಹೃದಯದ ಬಡಿತ ಕ್ಷಣಕಾಲ ನಿಂತುಹೋಯಿತೇನೋ. ಆದರೂ ಸಂಕಟಬಂದಾಗ ಅಧೀರನಾಗದೆ ಇರುವ ಒಳ್ಳೆಯ ಗುಣ ಅವನಲ್ಲಿತ್ತು. ಆತ ತಾಯಿಗೆ ಧೈರ್ಯ ಹುಟ್ಟಿ

ಸುವ ಮಾತನ್ನಾಡಿದ: "ರುಕ್ಕೂ ಅಂಗೇ ನಿಂತಿರು. ಚಂದ್ರೂನ ಬಿಟ್ಬಿಟ್ಟು ಬರ್ತೀನಿ".

ತಂದೆ ಮುಂದಕ್ಕೆ ನಡೆದ. ನಾನು "ಅಮ್ಮಾ ಅಮ್ಮಾ" ಎನ್ನುತ್ತಾ ಕೂಗುತ್ತಲಿದ್ದೆ. ನನ್ನ ತಾಯಿ ಮುಗುಳುನಗುತ್ತಿದ್ದ ಹಾಗೆ ಜ್ಞಾಪಕ. ಆಕೆಯ ಕಣ್ಣುಗಳಿಂದ ನೀರಹೊಳೆಗಳು ಎರಡು ಹರಿಯುತ್ತಿದ್ದುವು. ಅದು ನದಿಯ ಕೊಳಕು ನೀರಲ್ಲ, ನಾನು ಬಲ್ಲೆ. ಅದು ನಿರ್ಮಲವಾದ ಕಣ್ಣನೀರು. ತಾಯಿ ಮಗನಿಗಾಗಿ ಸುರಿಸುವ ಕಣ್ಣೀರು........ ತಂದೆ ದಡ ತಲುಪಿ ನನ್ನನ್ನು ಅಲ್ಲೇ ಬಿಟ್ಟು ಮರುಕ್ಷಣದಲ್ಲೇ ನದಿಗೆ ಇಳಿದ. ಆಗ—

ಈ ಘಟನೆಯ ಬಗ್ಗೆ ಹೇಗೆ ಬರೆಯಬೇಕೊ ನನಗೆ ತಿಳಿಯದು. ನನ್ನ ಜೀವನದ ಮೊದಲ ಕಹಿ ಹೊಡೆತ ಆಗ, ನಾನು ಆರು ವರ್ಷದವನಿದ್ದಾಗ, ನನ್ನ ಮೇಲೆ ಬಿತ್ತು. ನಾನು "ಅಮ್ಮ, ಅಪ್ಪ" ಎಂದು ಕೂಗುತ್ತಲೇ ಇದ್ದೆ. ತಂದೆ ತಾಯಿಯ ಕಡೆಗೆ ವೇಗವೇಗವಾಗಿ ಹೋಗುತ್ತಿದ್ದ. ಆತ ಆಕೆಯ ಕೈ ಹಿಡಿದುದನ್ನು ನಾನು ಕಂಡೆ. ಮತ್ತೆ ನೀರು ದೇಹದ ನಡುವಿನ ತನಕ ಇಳಿದುದನ್ನೂ ಕಂಡೆ. ಅಂದರೆ ತಾಯಿ ಮತ್ತು ತಂದೆ ಸುರಕ್ಷಿತವಾಗಿ ದಡ ಸೇರುವರೆಂದಾಯಿತು. "ಅಲ್ಲೇ ನಿಂತ್ಕೊ" ಎಂದು ತಂದೆ ನನಗೆ ಹೇಳುತಿದ್ದ. ನಾನು ಅಲ್ಲೇ ನಿಂತಿದ್ದೆ. ಅವರು ಮೆಲ್ಲಮೆಲ್ಲನೆ ಬರತೊಡಗಿದರು.

ಇಲ್ಲ, ಅವರಿಬ್ಬರೂ ದಡಸೇರಲಿಲ್ಲ. ಹೊಸ ನೀರಿನ ಪ್ರವಾಹ ಹೇಗೆ ಬಂತೋ ನನಗೆ ತಿಳಿಯದು. ಕಣ್ಣು ಮುಚ್ಚಿ ತೆರೆಯುವುದರೊಳಗೆ ತಂದೆ ತಾಯಿ ಇಬ್ಬರೂ ಕೆಳಕ್ಕೆ ತೇಲಿಹೋಗುತ್ತಿದ್ದರು. ನಾನು ದಂಡೆಯುದ್ದಕ್ಕೂ ತೇಲುತ್ತಿದ್ದವರನ್ನು ನೋಡುತ್ತಾ ಓಡಿದೆ. ಬಲು ದೂರ ಓಡಿದೆ. ಅಲ್ಲಿ ಮರ ಪೊದೆ ಪೊದರುಗಳು ದಟ್ಟವಾಗಿ ಬೆಳೆದು ದಂಡೆಯ ಹಾದಿಯನ್ನು ಮರೆಮಾಡಿದ್ದವು. ನಾನು ಸುತ್ತು ಬಳಸಿ ಓಡಿದೆ. ಮಳೆಸುರಿಯ ತೊಡಗಿತು. ನಾನು ಗಟ್ಟಿಯಾಗಿ ಅತ್ತೆ. ಆದರೆ ಯಾರೂ ಉತ್ತರ ಕೊಡಲಿಲ್ಲ. ಬಲು ಹೊತ್ತಿನ ಮೇಲೆ ಮತ್ತೆ ದಂಡೆ ಕಾಣಿಸಿದಾಗ, ಒಂದು ಬಂಡೆಯ ಮೇಲೆ ನನ್ನ

ತಂದೆ, ಕೂದಲನ್ನು ಹಿಡಿಹಿಡಿಯಾಗಿ ಹಿಡಿದೆಳೆಯುತ್ತಾ ರೋದಿಸುತ್ತಿದ್ದುದನ್ನು ಕಂಡೆ—"ರುಕ್ಕೂ—ರುಕ್ಕೂ—"

ನನ್ನ ತಾಯಿ ತೇಲಿ ಹೋಗಿದ್ದಳು. ಹೇಮಾವತಿ ನದಿ ಎಲ್ಲಿಗೋ ಅವಳನ್ನು ಒಯ್ದಿತ್ತು. ನಾನು, "ಅಪ್ಪಾ ಅಪ್ಪಾ" ಎಂದೆ ತಂದೆ ಮೆಲ್ಲ ಮೆಲ್ಲನೆ ಬಂಡೆಯನ್ನಿಳಿದು ದಡವನ್ನೇರಿ ನನ್ನ ಬಳಿಗೆ ಬಂದರು. ನನ್ನನ್ನು ತಬ್ಬಿಕೊಂಡರು. ಮಳೆ ಸುರಿಯುತ್ತಿತ್ತು, ನಮ್ಮ ಕಣ್ಣುಗಳಲ್ಲೂ ಕೂಡಾ. ಆದರೆ ಕಣ್ಣೀರು ಇಂಥದೇ ಎಂದು ನಾನು ಬಲ್ಲೆ. ತಣ್ಣಗಿನ ಮಳೆಯ ನೀರಲ್ಲೂ ನಮ್ಮ ಕಣ್ಣಹನಿ ಬಿಸಿಯಾಗಿರುತ್ತಿತ್ತು.

ತಂದೆ ಮತ್ತು ನಾನು ಬಲು ದೂರ ದಂಡೆಯ ಉದ್ದಕ್ಕೆ ಹೋದೆವು. ಮಳೆ ಬರುತ್ತಿದ್ದಾಗಲೂ—ಮಳೆ ನಿಂತ ಮೇಲೂ. ನನ್ನ ತಾಯಿ ಸಿಗಲಿಲ್ಲ. ಸಿಗಲೇ ಇಲ್ಲ.

ಆಕೆಯೊಡನೆ ನಮ್ಮ ಸರ್ವಸ್ವವಾಗಿದ್ದ ಆರಿವೆ ಅಂಚಡಿಯ ಗಂಟೂ ಹೊರಟು ಹೋಗಿತ್ತು. ಗಂಟಿನಲ್ಲಿದ್ದ ದೇವರೂ ತೇಲಿಹೋಗಿದ್ದರು. ಹಸುರು ಹೊಲ ಮನೆ ಮಠಗಳಿರುವ ಸಹಸ್ರ ಸಹಸ್ರ ಜನ ನಗುತ್ತ ವಾಸಿಸುತ್ತಿರುವ ಈ ಪ್ರಪಂಚದಲ್ಲಿ ನಾವು ನಿರ್ಗತಿಕರಾಗಿದ್ದೆವು.

ಕಾಡಿನಲ್ಲೇ ಸಾಯಲು ಸುಮ್ಮ ಸುಮ್ಮನೆ ಯಾರು ಇಷ್ಟಪಡುತ್ತಾರೆ? ನಾವು ಮತ್ತೆ ಮನುಷ್ಯರ ಮುಖ ನೋಡಿದೆವು. ಬದುಕಬೇಕೆಂಬ ಬಯಕೆ, ನಮಗೆ ತಿಳಿಯದೆಯೇ ನಮ್ಮನ್ನು ಮುಂದು ಮುಂದಕ್ಕೆ ತಳ್ಳುತ್ತಿತ್ತು.

ಈಗ ಸರಿಯಾಗಿ ತಿಳಿದುಕೊಳ್ಳಬಲ್ಲೆ. ಆರು ವರ್ಷದವನಾಗಿದ್ದ ನನ್ನನ್ನು ದೊಡ್ಡವನಾಗಿ ಬೆಳೆಸಿ, ವಿದ್ಯೆ ಕಲಿಸಿ, ಸಂಪಾದಿಸಬಲ್ಲ ಸಮರ್ಥನಾಗಿ ಮಾಡುವುದೇ ತಂದೆಯ ಏಕಮಾತ್ರ ಗುರಿಯಾಗಿತ್ತು. ಹಾಗೆ ಮಾಡಿ ತನ್ನದಾದ ಇನ್ನೊಂದು ದೀಪವನ್ನು ಹಚ್ಚಿಟ್ಟು, ನಿಶ್ಚಿಂತೆಯಿಂದ ಪ್ರಾಣ ನೀಗಲು ಅವನು ಅಪೇಕ್ಷೆಪಟ್ಟಿದ್ದ. ಆದರೆ ಆ ಅಪೇಕ್ಷೆ!

ಹಾದಿಯಲ್ಲಿ ನಾವು ಬೇಡಬೇಕಾಗಿ ಬಂತು. "ನಾವು ಭಿಕ್ಷೆಯವರಲ್ಲ" ಎಂದು ಪ್ರತಿಯೊಬ್ಬರಿಗೂ ತಂದೆ ವಿವರಣೆ ಕೊಡುತ್ತಿದ್ದ.

ನಗರಕ್ಕೆ ಹೋಗುವ ಹಾದಿ ಖರ್ಚುಕೊಟ್ಟು ಪುಣ್ಯ ಕಟ್ಟಿಕೊಳ್ಳಲು ಯಾರಿಗೂ ಇಷ್ಟವಿರಲಿಲ್ಲವೇನೋ. ಅವರೆಲ್ಲ ತುತ್ತು ಅನ್ನವನ್ನಷ್ಟೇ ಕೊಟ್ಟು, ಆ ಪುಣ್ಯವೇ ಸಾಕೆಂದರು. ನಡೆದು ನಡೆದು ನಾವು ನಗರ ಸೇರಿದೆವು.

ಆಗ ಮುಚ್ಚಂಜೆಯಾಗಿತ್ತು. ನಗರವನ್ನು ಸಮೀಪಿಸುತ್ತಿದ್ದಂತೆ ತಂದೆ ಹೇಳಿದ.

"ಚಂದ್ರೂ, ಊರು ಬಂತ್ಕಣಪ್ಪ. ಚಂದ್ರೂ ಅಂತೂ ಬಂದ್ವಿ ಕಣಪ್ಪಾ"

ಅಂತೂ ನಾವು ಬಂದೆವು. ದೂರ ದೂರವಿದ್ದ ಮನೆಗಳ ಬದಲು ಹೆಚ್ಚು ದಟ್ಟನೆಯ ಹಲವು ಕಟ್ಟಡಗಳನ್ನು ಕಂಡೆ. ಅವು ಎಷ್ಟೊಂದು ಎತ್ತರವಾಗಿದ್ದುವು! ಸಣ್ಣದಾಗಿ ವೇಗವಾಗಿ ಓಡುತ್ತಿದ್ದ ವಾಹನಗಳನ್ನು ಕಂಡೆ. ಅವುಗಳಿಗೆ ಬೆಳಕಿನ ಎರಡು ಕಣ್ಣುಗಳಿರುತ್ತಿದ್ದುವು. ದೊಡ್ಡ ದೊಡ್ಡ ಪಂ, ಪಂ, ಮೋಟಾರುಗಳನ್ನು ಕಂಡೆ. ಬೀದಿಯುದ್ದಕ್ಕೂ ಎತ್ತರದಿಂದ, ಕಂಬಗಳಿಗೆ ತಗಲಿ ಬತ್ತಿಯೇ ಇಲ್ಲದ ದೀಪಗಳು ಉರಿಯುತ್ತಿದ್ದುವು. ಜನರೆಲ್ಲಾ ಬೇರೆ ರೀತಿಯಾಗಿ ಯಾವುದೋ ಬೇರೆ ದೇಶದವರಾಗಿ ಕಾಣುತ್ತಿದ್ದರು. ನನ್ನ ಪಾಲಿಗೆ ಅದು ಹೊಸ ಪ್ರಪಂಚ.

"ಇನ್ನು ಇಲ್ಲೇನಪ್ಪ ನಾವು ಇರೋದು. ಚಂದ್ರು, ಆ ಕಾರು ನೋಡ್ದಾ? ನೀನು ದೊಡ್ಡೋನಾದ್ಮೇಕೆ ಅಂಥದೇ ಕಾರು ಕೊಣ್ಕೋಬೇಕು. ಏನಂತಿಯಾ?"

ನಾನು 'ಊಂ' ಎಂದೆ. ಆದರೆ ತಾಯಿಯ ನೆನಪು ಬಂದು ನನ್ನ ಗಂಟಲು ಬಿಗಿದಿತ್ತು. ಬಲು ಉದಾರವಾಗಿ ಬರುತ್ತಿದ್ದ ಕಂಬನಿ ನನ್ನ ತಂದೆಯ ತಲೆಯ ಮೇಲೆ ತೊಟ್ಟಿಕ್ಕಿತೋ ಏನೋ. ನನ್ನ ಕಾಲು ಹಿಡಿದು ಜಗ್ಗಿಸಿ, ಮೇಲಕ್ಕೆ ತಲೆಯೆತ್ತಿ ನನ್ನನ್ನೇ ನೋಡಿ, ಕೇಳಿದ.

"ಯಾಕ್ಲ, ಯಾಕೆ ಅಳೋದು?"

ಹಾಗೆ ಅತ ಕೇಳಿದ್ದೇನೊ ನಿಜ. ಆದರೆ ಕಾರಣ ಅವನಿಗೆ

ತಿಳಿದಿರಬೇಕು. ಯಾಕೆಂದರೆ ಅವನ ಸ್ವರದಲ್ಲಿ ನಡುಕವಿತ್ತು. ನಾನು "ಅಪ್ಪಾ ಅಪ್ಪಾ" ಎಂದೆ. ತಂದೆ ನನ್ನ ಬಲಗಾಲಿಗೆ ತನ್ನ ಮುಖವನ್ನೊತ್ತಿ ಬಿಗಿಹಿಡಿದ. ನನ್ನ ಕಾಲು ತೇವದಿಂದ ಒದ್ದೆಯಾಯಿತು. ಆ ಅನುಭವ ನನಗೆ ಹೊಸತಲ್ಲ. ಅವನು ಅಳುತ್ತಿದ್ದ.

ಆ ರಾತ್ರೆ ನಾವು ಯಾವುದೋ ಪೇಟೆಯಲ್ಲಿ ದೊಡ್ಡದೊಂದು ಕಟ್ಟಡದ ಮಗ್ಗುಲಲ್ಲಿ ಮಲಗಿಕೊಂಡೆವು. ಇಲ್ಲಿ ಮಳೆಯಿರಲಿಲ್ಲ. ಆದರೆ ಶೀತಗಾಳಿ ಮೈ ಕೊರೆಯುತ್ತಿತ್ತು. ನಾನು ಮುದುಡಿಕೊಂಡು ತಂದೆಯ ಎದೆಯನ್ನಪ್ಪಿ ಮಲಗಿದ್ದೆ. ಆತ ಬಲತೋಳನ್ನು ನನ್ನ ಸುತ್ತೂ ಬಳಸಿ ನನ್ನನ್ನು ಬೆಚ್ಚಗಿಡಲು ಯತ್ನಿಸುತ್ತಿದ್ದ. ಬಹಳ ಹೊತ್ತು ನಮಗೆ ನಿದ್ದೆ ಬರಲೇ ಇಲ್ಲ. ರಾತ್ರಿಯೆಲ್ಲಾ ಬೀದಿಯಲ್ಲಿ ಸಾವಿರ ಸದ್ದುಗಳಾಗುತ್ತಿದ್ದವು. ಯಾರೊ ಜಗಳಾಡುತ್ತಿದ್ದರು. ಯಾರೋ ಅಳುತ್ತಿದ್ದರು. ಯಾರೋ ನಗುತ್ತಿದ್ದರು. ಇದರಿಂದ ತಮ್ಮ ನೆಮ್ಮದಿಗೆ ಭಂಗ ಬಂತೇನೋ ಎಂಬಂತೆ ಬಡಕಲು ಬೀದಿ ನಾಯಿಗಳು ಬೊಗಳುತ್ತಿದ್ದವು. ಸಾಲದುದಕ್ಕೆ ಹಸಿದ ಹೊಟ್ಟೆಬೇರೆ. ನಿದ್ದೆ ಬಂದರೆ ಹಸಿವನ್ನು ಮರೆಯುಬಹುದು. ಅದು ಗೊತ್ತಿದ್ದೊ ಏನೋ ನಿದ್ದೆ ಸಮೀಪಕ್ಕೆ ಸುಳಿಯದಂತೆ, ಹಸಿವು ಹೋರಾಡುತ್ತಿತ್ತು.

ಬೆಳಗು ಮುಂಜಾನೆ ನಾವು ಎದ್ದೆವು. ಯಾರೋ ಬೀದಿಯ ಬಳಿ ಬಾವಿ ಕಟ್ಟೆಯ ಸುತ್ತಲೂ ನಿಂತು ಮುಖ ತೊಳೆಯುತ್ತಿದ್ದರು, ಸ್ನಾನ ಮಾಡುತ್ತಿದ್ದರು, ಬಟ್ಟೆ ಒಗೆಯುತ್ತಿದ್ದರು. ನಾವು ಅತ್ತ ಹೋಗಿ ನೀರು ಕೇಳಿ ಪಡೆದು ಬರೀ ಬೆರಳಿಂದ ಹಲ್ಲುಜ್ಜಿದೆವು. ಅಲ್ಲಿಂದ ಮುಂದೆ, ತಂದೆಗೆ ಪರಿಚಿತರಾಗಿದ್ದ ಯಾರನ್ನೋ ಹುಡುಕಿ ಪ್ರಯಾಣ. ಹಳ್ಳಿಯಲ್ಲಿದ್ದಾಗ ನನ್ನ ತಂದೆಗೆ ಅಕ್ಷರಾಭ್ಯಾಸ ಹೇಳಿ ಕೊಡುವ ಕೆಲಸವೂ ಇತ್ತು—ಎಂದಿದ್ದೆ. ವಿದ್ಯಾವಂತನಾದ ತಂದೆ ಕಂಠ ಪಾಟಮಾಡಿದ್ದ ವಿಳಾಸವನ್ನು ಹುಡುಕುತ್ತ ನನ್ನನ್ನು ಬೆನ್ನಿಗೆ ಅಂಟಿಸಿಕೊಂಡು ಊರು ಅಲೆದ.

ಆ ಸಂಜೆ ಆ ಮನೆ ದೊರೆಯಿತು. ಹೊಲಸು ನಾರುತಿದ್ದ ಗಲ್ಲಿಯಲ್ಲಿ, ಗಾಳಿ ಬೆಳಕು ಆಡದಿದ್ದ ಮನೆಯಲ್ಲಿ, ಅವರು ವಾಸವಾಗಿದ್ದರು.

ನಮ್ಮ ಹಳ್ಳಿಯಲ್ಲಿದ್ದಂತಹ ಗುಬ್ಬಚ್ಚಿ ಗೂಡುಗಳು ಇಷ್ಟು ದೊಡ್ಡ ನಗರದಲ್ಲಿಯೂ ಇರಬಹುದೆಂದು ನಾನು ಭಾವಿಸಿಯೇ ಇರಲಿಲ್ಲ. ಆ ಮನೆಯೊಳಗೆ ಇಬ್ಬರೊ ಮೂವರೊ ಪುಟ್ಟ ಹುಡುಗರಿದ್ದರು ಅವರು ಬಂದು ನನ್ನನ್ನು ಸುತ್ತುವರಿದು ನಿಂತಾಗ, ಅಲ್ಲಿಂದ ಓಡಿಹೋಗ ಬೇಕು ಎನಿಸಿತು ನನಗೆ. ಅವರಲ್ಲೊಬ್ಬ ನನ್ನ ಕೂದಲ ಜುಟ್ಟನ್ನು ಹಿಡಿದೆಳೆದ. ನಾನು "ಅಪ್ಪಾ" ಎಂದು ಕೂಗಿದೆ. ಹಿಂದೆಯಾಗಿ ದ್ದರೆ "ಅಮ್ಮಾ" ಎನ್ನುತಿದ್ದೆ. ಆದರೆ ಈಗ ಅಪ್ಪನೇ ನನ್ನ ಸರ್ವಸ್ವ ಅಲ್ಲವೆ? ತಂದೆ "ಸುಮ್ನಿರು" ಎಂದು ನನ್ನನ್ನೇ ಗದರಿಸಿದ. ನನಗೆ ಅಳು ಬಂತು. ಕೀಟಲೆಮಾಡಿದ ಆ ಹುಡುಗರನ್ನು ದಂಡಿಸು ವುದರ ಬದಲು ನನ್ನನ್ನು ಅಪರಾಧಿಯಾಗಿ ಮಾಡುವುದು ಸರಿಯೆ? ಏನೆ ಆಗಲಿ, ಈ ಮನೆಯಲ್ಲಿ ವಾಸವಾಗಿರಬಾರದು, ಎಂದು ತೀರ್ಮಾ ನಿಸಿದೆ.

ಆ ತೀರ್ಮಾನಕ್ಕೆ ಚ್ಯುತಿ ಬರಲೇ ಇಲ್ಲ. ಇಲ್ಲೇ ವಾಸವಾಗಿರಿ ಎಂದು ಯಾರಾದರೂ ಹೇಳಿದರಲ್ಲವೆ ಆ ಮಾತು? ಬಂದಿದ್ದ ನಮ್ಮನ್ನು ಆದಷ್ಟು ಬೇಗನೆ ಹೊರಹಾಕುವುದಕ್ಕೇ ಆ ಮನೆಯವರು ಪ್ರಯತ್ನಪಟ್ಟರು. ನಮ್ಮ ಹಳ್ಳಿಯಲ್ಲೂ ಒರಟುತನವಿತ್ತು ನಿಜ. ಆದರೆ ಒರಟುತನವನ್ನು ಬಚ್ಚಿಡುವ ಸೋಗನ್ನು ಮಾತ್ರ ಯಾರೂ ಹಾಕಿಕೊಳ್ಳುತ್ತಿರಲಿಲ್ಲ. ಆದರೆ ಇಲ್ಲಿ ಸೋಗಿತ್ತು—ಬರಿಯ ನಟನೆ. ತೊಲಗಿಹೋಗು ಎಂದು ಹೇಳುವ ಇಚ್ಛೆ ಇದ್ದರೂ ಬಾಯಿಬಿಟ್ಟು ಯಾರೂ ಹಾಗೆ ಹೇಳುತ್ತಿರಲಿಲ್ಲ. ನಯವಾಗಿ ನಾಜೂಕಾಗಿ ಬೇರೆ ಮಾತನ್ನಾಡುತ್ತಿದ್ದರು. ನೂರು ಮಾತುಗಳಾದಮೇಲೆ ಅವರ ಮನಸ್ಸಿ ನಲ್ಲಿದ್ದುದು ಎಂತಹ ದಡ್ಡನಿಗಾದರೂ ಅರ್ಥವಾಗಲೇಬೇಕು.

ಅಂತೂ ಆ ಮನೆಯಿಂದ ಹೊರಬಿದ್ದೆವು. ತಂದೆ ಕಟುವಾಗಿ ಆಡಿದ ಕೆಲವು ಮಾತುಗಳಿಂದ ವಿಷಯ ಸ್ವಲ್ಪಸ್ವಲ್ಪವಾಗಿ ನನಗೆ ಅರ್ಥ ವಾಯಿತು. ಆ ಮನೆಯಾತ ಎಂದೊ ಒಂದು ಕಾಲದಲ್ಲಿ ತಂದೆಯ ಬಾಲ್ಯಸ್ನೇಹಿತನಾಗಿದ್ದ. ಆಗ ಅವರಿಬ್ಬರೂ ಹಳ್ಳಿಯ ಬಡವರು. ಈಗ ಲಾದರೋ ಆ ಸ್ನೇಹಿತ, ತಿಂಗಳಿಗೆ ಹದಿನೈದು ರೂಪಾಯಿ ಸಂಬಳ

ಸಂಪಾದಿಸುತ್ತಿದ್ದ ಗುಮಾಸ್ತೆ-ದೊಡ್ಡ ಮನುಷ್ಯ. ಆ ಗೋಡೆಯ ಮೇಲೆ ಅವನ ಚಿತ್ರಪಟ ಜೇರಿ ತೂಗುತ್ತಿತ್ತಲ್ಲವೆ? ಅಮ್ಮ ನದಿಯ ಪಾಲಾದ ಕತೆ ಕೇಳಿ, "ಅಯ್ಯೋ ಪಾಪ, ಹಿಂಗೂ ಆಯ್ತೆ? ಎಲ್ಲಾ ಪ್ರಾರಬ್ಧ ಕರ್ಮ!" ಎಂದು ಹೇಳಿ, ಆತ ಸಹಾನುಭೂತಿ ತೋರಿಸ ಲಿಲ್ಲವೆ? ಹಳ್ಳಿಯಲ್ಲಿದ್ದಾಗ ಆತ ಮತ್ತು ತಂದೆ ಇಬ್ಬರೂ ಜತೆಯಾಗಿಯೇ ಮಾವಿನಕಾಯಿ ಕೀಳಲು ಹೋಗುತ್ತಿದ್ದರಂತೆ. "ನನ್ಕೈಲಾಗಾಕ್ಕಿಲ್ಲ. ನಂಗೂ ನೀನೆ ತಕ್ಕೊಡೊ" ಎಂದು ಆತ ಗೋಗರೆಯುತ್ತಿದ್ದನಂತೆ. ಆದರೆ ಈ ದಿನ, "ಊಟಕ್ಕಿದ್ದು ಹೋಗಿ" ಎಂಬ ಒಂದು ಒಳ್ಳೆಯ ಮಾತೂ ಅವನ ಬಾಯಿಂದ ಹೊರಬೀಳಲಿಲ್ಲ.... 'ಥೂ' ಎಂದು ನನ್ನ ತಂದೆ ಉಗುಳಿದುದನ್ನು ಕಂಡೆ. ಹಾಗೆ ಉಗುಳಿದಾಗ ಕೋಪ ಮತ್ತು ತುಚ್ಛೀಕಾರದಿಂದ ಆತ ಕನಲಿ ಕೆಂಡವಾಗಿದ್ದನೆಂದು ನನಗೆ ತಿಳಿದಿತ್ತು.

ಯಾರೋ ಕಡಲೆಕಾಯಿಯ ದಾನ ಮಾಡಿದರು. ಅದನ್ನು ತಿಂದು, ತೊಗಟೆಗಳನ್ನು ಮತ್ತೊಮ್ಮೆ ಪರೀಕ್ಷಿಸಿ ನೋಡಿ ಬದಿಗೆ ಸರಿಸಿ, ನೀರು ಕುಡಿದು ನಾವು ಮಲಗಿದೆವು. ಅಲ್ಲಿಯೇ — ಹಿಂದಿನ ರಾತ್ರಿ ಮಲಗಿದ್ದಲ್ಲಿಯೇ. ತಂದೆ ತೇಗಿನ ಸ್ವರ ಹೊರಡಿಸಿದ ಆ ಸ್ವರ ಹೊರಡಿಸಿ "ಖೋ, ಖೋ" ಎಂದು ನಕ್ಕ. ನನಗೆ ಹೆದರಿಕೆಯಾಗಿ "ಅಪ್ಪಾ, ಅಪ್ಪಾ" ಎಂದೆ. ಆತ ನಗು ನಿಲ್ಲಿಸಲೇ ಇಲ್ಲ. ಹಳ್ಳಿ ಬಿಟ್ಟು ತಾಯಿ ಯನ್ನು ಕಳೆದುಕೊಂಡು ನಗರ ಸೇರಿದ ಇಷ್ಟುದಿನಗಳ ವರೆಗೂ ಆತ ನಕ್ಕಿರಲಿಲ್ಲ. ಆದರೆ, ಈ ನಗು? ನಗುವಿನಲ್ಲಿ ವಿವಿಧ ರೀತಿಗಳಿರುತ್ತವೆ, ನಿಮಗೆ ಗೊತ್ತೆ? ಆಗ ನನಗೆ ತಿಳಿದಿರಲಿಲ್ಲ. ಈಗ ಬಲ್ಲೆ........

ನಮ್ಮ ಜೀವನದಲ್ಲಿ ಮತ್ತೊಂದು ರಾತ್ರೆ ಮುಕ್ತಾಯವಾಗಿ ಬೆಳಕು ಹರಿಯಿತು. ಅದು ಭಾನುವಾರ. ಮತ್ತೆ ಅದೇ ಬಾವಿಕಟ್ಟೆ. ಮುಖ ಮಾರ್ಜನ........

ಆತ ನಮ್ಮನ್ನು ಕಂಡು ಆಗ ಮಾತನಾಡಿಸದೇ ಇದ್ದಿದ್ದರೆ ನಮ್ಮ ಜೀವನ ಪ್ರವಾಹ ಹೇಗೆ ಹರಿಯುತ್ತಿತ್ತೋ ಹೇಳಲಾರೆ. ಆತ ನಿಂದಾಗಿ, ಹಳ್ಳಿಯ ನಂಬಿಗಸ್ಥ ಎನಿಸಿಕೊಂಡಿದ್ದ ನನ್ನ ತಂದೆ ಪೇಟೆಯ ಕೂಲಿಗಾರನಾದ.

ಅವನು ಹಲವು ಪ್ರಶ್ನೆಗಳನ್ನು ಕೇಳಿದ. ನನ್ನ ತಂದೆ ತನಗಿಂತ ಹೆಚ್ಚು ಓದು ಬಲ್ಲವನೆಂಬುದೂ ಆತನಿಗೆ ತಿಳಿಯಿತು. ಆದರೆ, ಅವ ನೇನು ಮಾಡಬಲ್ಲ? ಆತನೆ ಸ್ವತಃ ನಗರಕ್ಕೆ ಬಂದು ಒಂದು ವರ್ಷ ವಾಗಿತ್ತು ಅಷ್ಟೆ.

"ನೀವು ಒಪ್ಕೋ ಹಂಗಿದ್ದರೆ ನನ್ನ ಜೊತೇಲಿ ಬನ್ನಿ. ಹೊಸ ರೋಡು ಮಾಡಿಸ್ತಾಯಪರೆ. ಜಲ್ಲಿಕಲ್ಲು, ಮಣ್ಣು ಹೊತ್ತಾಕೊ ಕೆಲಸ. ದಿನಕ್ಕೆ ನಾಲ್ಕಾಣೆ ಕೂಲಿ. ಏನೇಳಿ ಬತ್ತೀರಾ?"

ತಂದೆ ನನ್ನ ಮುಖ ನೋಡಿದ. ಅಮ್ಮ ಇರುತ್ತಿದ್ದರೆ, "ಏನಮ್ಮಾ ಡೋಣಾಂತಿಯಾ ರುಕ್ಕೂ?" ಎಂದು ಕೇಳುತ್ತಿದ್ದನೇನೊ. ಆದರೆ, ಅಮ್ಮ ಇರಲಿಲ್ಲ. ನಾನು ಸುಮ್ಮನಿದ್ದೆ. ನನ್ನ ಮುಖ ನೋಡುತ್ತಾ ತಂದೆ ಹೇಳಿದ: "ಆಗ್ಲೇಳಿ. ಇವತ್ನಿಂದಾನೆ ಬತ್ತೀನಿ ನಡೀರಿ."

"ಇವತ್ತು ಭಾನುವಾರ. ರಜ ಐತೆ. ನಾಳೆಯಿಂದ ಹೋಗಾನ."

ಆತ ನಮ್ಮ ಮತ ಕೇಳಿದ. ಮತ್ತೆ ಅಳುಕದೆ ನಮ್ಮನ್ನು ಮುದುಕಿಯೊಬ್ಬಳು ವಾಸವಾಗಿದ್ದ ಮನೆಗೆ ಕರೆದೊಯ್ದ.

ಆ ಮುದುಕಿ ಅದೇ ಪ್ರಶ್ನೆ ಕೇಳಿದರು:

"ಯಾವ ಜನ ನೀವು?"

ತಂದೆ ಉತ್ತರ ಕೊಟ್ಟ. ಆ ಸ್ವರದಲ್ಲಿ ಅಭಿಮಾನವೂ ಇರಲಿಲ್ಲ, ವಿಷಾದವೂ ಇರಲಿಲ್ಲ.

ಮುದುಕಿ ನಾಲ್ಕು ನಿಮಿಷ ಯೋಚಿಸಿದಂತೆ ತೋರಿತು. ಆಕೆ ತೀರ್ಮಾನಕ್ಕೆ ಬರಲು ಸಹಾಯವಾಗುವಂತೆ, ನಮ್ಮನ್ನು ಅಲ್ಲಿಗೆ ಕರೆದುತಂದಾತ ಹೇಳಿದ:

"ಒಳ್ಳೇಯವರು ಕಣಜ್ಜಿ. ಹಳ್ಳಿಯೊಳಗೆ ಆಸ್ತಿಪಾಸ್ತಿ ಮಸ್ತಾ ಗಿತ್ತು. ಪರಮಾತ್ಮ ಹೆಂಗ್ಬರ್ದಿದ್ನೋ. ಎಲ್ಲಾ ಕಳ್ಕೊಂಡ್‌ಬಿಟ್ರು."

ಎಲ್ಲವನ್ನೂ—ತಾಯಿಯನ್ನೂ ಕೂಡ—ಕಳೆದುಕೊಂಡ ಕತೆ ಯನ್ನು ತಂದೆ ಚುಟುಕಾಗಿ ಹೇಳಿದ. ಹೇಳುವಾಗ, ತನ್ನ ಹೆಂಡತಿ ರುಕ್ಕೂ ಎಂದೇ ಹೇಳುತ್ತಿದ್ದ. ನನಗೆ ದುಃಖವಾಗುತ್ತಿತ್ತು. ತೀರಿ ಹೋದ ಜೀವ ನನ್ನ ತಾಯಿ ಎಂದುಕೂಡಾ ಹೇಳಬಾರದೆ?

ನನ್ನ ಯೋಚನೆಗಳನ್ನು ತಿಳಿದುಕೊಂಡವನ ಹಾಗೊ ಏನೋ ತಂದೆ ಸ್ವರ ಕೂಡಿಸಿದ:

"ಇವನೊಬ್ಬನೇ ಚಂದ್ರು ಈಗ ಉಳಿದಿರೋದು. ರುಕ್ಕು ಹೆತ್ತಿದ್ದು ಇವನೊಬ್ಬನನ್ನೇ. ಇವನ್ಗಾಗಿಯೇ ನಾನು ಬದುಕಿದೀನಿ."

ಆ ಮಾತಿನ ಅರ್ಥ ನನಗೆ ಚೆನ್ನಾಗಿ ಆಗಲಿಲ್ಲ; ಆಗ ಚೆನ್ನಾಗಿ ಆಗಲಿಲ್ಲ. ಒಬ್ಬನಿಗಾಗಿ ಇನ್ನೊಬ್ಬರು ಬದುಕುವುದೆಂದರೇನು?

. . . ಆ ಮುದುಕಿ ಒಳ್ಳೆಯವರ ಹಾಗೆ ಕಂಡರು. ಬೇರೆ ಜಾತಿಯವರೆಂದು ನಮ್ಮನ್ನು ಕೀಳಾಗಿ ಕಾಣಲಿಲ್ಲ. ಆಕೆಯ ಬೋಡುತಲೆ ಮುಂಜಾವದ ಸೂರ್ಯನ ಹೊಂಬೆಳಕಿಗೆ ಚಕಚಕಿಸಿತು. ಊರಿನ ಹೊರಗೂ ಅಲ್ಲ ಒಳಗೂ ಅಲ್ಲ ಎನ್ನುವ ಹಾಗಿದ್ದ ಒಂದು ಜಾಗದಲ್ಲಿ ಅವರ ಮನೆಯಿತ್ತು. ಆಕೆಯ ಯಜಮಾನರಿದ್ದಾಗ ಸ್ವಂತದ್ದಾಗಿ ಉದಿಸಿಬಂದ ಬಡಕಲು ಮನೆ. ಆಕೆಗೆ ಮಕ್ಕಳಿರಲಿಲ್ಲ. ಆ ಬಳಿಕ, ಜೀವನದ ಮಧ್ಯಾಹ್ನ ಬರುವುದಕ್ಕೆ ಮುಂಚೆಯೇ, ಪ್ರಾಪ್ತವಾದ ವೈಧವ್ಯ. ಆ ಮನೆಯ ಮುಂಭಾಗದಲ್ಲಿ ಎರಡು ಎಮ್ಮೆಗಳನ್ನು ಕಟ್ಟಿದ್ದರು. ಒಂದು ಎಮ್ಮೆಯ ಕರುವಿತ್ತು. ನನ್ನನ್ನೇ ನೋಡುತ್ತ ಆ ಮುದುಕಿ ಮಾತನಾಡಿದರು.

"ಈ ಎಮ್ಮೆಗಳ ಸೆಗಣಿ ಎತ್ತೋದು ನಿನ್ಕೆಲಸ. ಏನಪ್ಪ ಮರಿ? ಹೊರಕ್ಕೆ ಹೋಗಿ ಒಂದಿಷ್ಟು ಮೇವೂನೂ ತಂದ್ಹಾಕ್ಬೇಕು. ಏನು ಅಷ್ಟು ಮಾಡ್ತೀಯಾ?"

ನಾನೇನು ಉತ್ತರಕೊಟ್ಟೆನೋ ನೆನಪಿಲ್ಲ. ಆದರೆ ನಮ್ಮ ಹಳ್ಳಿಯ ಮನೆಯಲ್ಲಿದ್ದ ಗೋಪಿ ಹಸುವಿನ ನೆನಪಾಯಿತು ನನಗೆ. ಅದರ ಪುಟ್ಟ ಕಂದ ಕಿವಿ ನಿಗುರಿಸಿ ಕುಣಿದಾಗ ನನಗೆ ಲೋಕವೆಲ್ಲಾ ಸುಂದರವಾಗಿ ತೋರುತ್ತಿತ್ತು. ಆದರೆ ಕೆಲವೇ ದಿನಗಳಲ್ಲಿ ಯಾರೋ ಬಂದು ಅವುಗಳೆರಡನ್ನೂ ಹೊಡೆದುಕೊಂಡುಹೋದರು. ನಾನು ಗೋಳೋ ಎಂದು ಅತ್ತೆ. ಆ ಜನ ನಮ್ಮ ತಂದೆಗೆ ಸಾಲಕೊಟ್ಟಿದ್ದರು. ಆ ಹಣದ ಎರಡರಷ್ಟು ಬಡ್ಡಿಯನ್ನು ತಂದೆ ತೆತ್ತಿದ್ದರೂ ಮೂಲ ಸಾಲ ಸಂದಾಯವಾಗದೇ ಉಳಿದಿತ್ತು. ಮನೆಗೆ ಬಂದು ಒರಟುಮಾತುಗಳ

ನ್ನಾಡಿ ಹಸು ಗೋಪಿಯನ್ನೂ ಅದರ ಕಂದನನ್ನೂ ಹೊಡೆದೊಯ್ದುವರು ಆ ಸಾಲಗಾರರು. ಆಗ ನನಗೆ ಅದು ತಿಳಿದಿರಲಿಲ್ಲ. ಹಣದ ಮಹಿಮೆ ನನಗೆ ತಿಳಿದಿರಲಿಲ್ಲ................

ನನ್ನ ಕಣ್ಣು ತೇವವಾಗುತ್ತಿತ್ತು. ನಮ್ಮ ಹಸು ಮತ್ತು ಅದರ ಕರುವಿನ ಬದಲು ಈ ಎಮ್ಮೆಗಳ ಸಂಸಾರವನ್ನು ಪ್ರೀತಿಸುವುದು ಸಾಧ್ಯ ವಾದೀತೆ? ಅದಕ್ಕೆ ಉತ್ತರವನ್ನು ಹುಡುಕುತ್ತಾ ನಾನು ತಂದೆಯ ಮುಖ ನೋಡಿದೆ. ಅವನೂ ನನ್ನನ್ನೇ ನೋಡುತ್ತಿದ್ದ. ಆದರೆ ಆತ ನನ್ನು ಬಾಧಿಸುತ್ತಿದ್ದುದು ಬೇರೆಯೆ ಚಿಂತೆ.

"ಮಾಡ್ತಾನೆ. ಅಷ್ಟುಕೆಲಸ ಮಾಡದೆ ಏನು? ಆದರೆ ಅವನ್ನ ಸ್ಕೂಲಿಗೆ ಕಳಿಸ್ಬೇಕೂ ಅಂತ ಇದೀನಿ" ಎಂದ ತಂದೆ.

ನನಗೆ ಆಶ್ಚರ್ಯವಾಯಿತು. ಅದು ಆವರೆಗೂ ನನ್ನ ಪ್ರಪಂಚಕ್ಕೆ ಬರದೇ ಇದ್ದ ವಿಷಯ. ನಾನು ಇನ್ನು ಸ್ಕೂಲಿಗೆ ಹೋಗಬೇಕು. ಅಲ್ಲೇನು ಹೊಸ ಅಪಾಯ ಕಾದಿದೆಯೊ ಎನ್ನುವಂತೆ ನಾನು, ಮುಖ ಬಾಡಿಸಿ ಕುಳಿತೆ.

"ಅಲ್ವೇನೊ" ಎಂದರು ತಂದೆ.

ನಾನು ಹೌದೆನ್ನುವಂತೆ ತಲೆಯಲ್ಲಾಡಿಸಿದೆ.

ನಮ್ಮನ್ನು ಅಲ್ಲಿಗೆ ಕರೆದುಕೊಂಡು ಬಂದಿದ್ದವನು ಎದ್ದುಹೋಗಿ ಉಗುಳು ತುಂಬಿದ್ದ ಬಾಯಿಯನ್ನು ಬರಿದುಮಾಡಿ ಬಂದ. ಏನೊ ಮಾತನಾಡಲು ಇಚ್ಛಿಸಿದವನಂತೆ ಸ್ವರ ಹೊರಡಿಸಿ ಗಂಟಲು ಸರಿಪಡಿಸಿದ. ಆದರೆ ಮಾತನಾಡಲಿಲ್ಲ. ಅಜ್ಜಿ ಏನನ್ನೊ ಯೋಚಿಸುತ್ತಿದ್ದರು. ಮೌನ ನೆಲೆಸಿತು.......... ಎಮ್ಮೆಯೊಂದು ಮುಸುಡು ಬೀಸುತ್ತಾ 'ಅಂಯ್' ಎಂದು ಕೂಗಿತು.

ಆ ಕೂಗು ನಿಂತೊಡನೆ ಅಜ್ಜಿ ಹೇಳಿದರು:

"ಅದಕ್ಕೇನಂತೆ? ಹೊತ್ತಾರೇನೂ ಸಂಜೇನೂ ಕೆಲಸಮಾಡ್ಲಿ. ಹಗಲೊತ್ತು ಸ್ಕೂಲಿಗೆ ಹೋಗ್ಲಿ."

ತಂದೆ ಸಮಾಧಾನದ ಉಸಿರು ಬಿಟ್ಟುದನ್ನು ಕಂಡೆ. ಆ ಬಳಿಕ ಊಟದ ವಸತಿಯ ಲೆಕ್ಕಾಚಾರವಾಯಿತು. ಸಂಪಾದಿಸಿದ್ದನ್ನೆಲ್ಲಾ

ತಂದು ಒಪ್ಪಿಸುವುದಾಗಿ ಅಪ್ಪ ಹೇಳಿದ. ನಮ್ಮನ್ನು ಅಲ್ಲಿಗೆ ಕರೆದು ತಂದಿದ್ದವನು, “ಅದ್ಯಾಕಾದೀತು? ದಿನವೂ ಒಂದಾಣೆ ಮುರ್‍ಕೊಂಡು ಮಿಕ್ಕಿದ್ದು ಅಜ್ಜಮ್ಮನ ಕೈಗ್ಹಾಕಿ,” ಎಂದ. ಅಜ್ಜಿಗೆ ಸಮ್ಮತಿಯಾಯಿತು.

ಅದೇ ಮನೆಯ ಹಿಂಭಾಗದಲ್ಲಿ, ಸೌದೆಯೊಟ್ಟುತ್ತಿದ್ದ ಜಾಗದ ಈಚೆಗೆ, ನಮ್ಮ ಸಂಸಾರ ಹೂಡಿದೆವು.

ಹಾಗೆ ನಮ್ಮ ಜೀವನದಲ್ಲಿ ಹೊಸ ಅಧ್ಯಾಯ ಆರಂಭವಾಯಿತು.

ಆ ಆರಂಭಕ್ಕೆ ಕಾರಣನಾದ ಕೆಲಸಗಾರ ಮರುದಿನ ಹೊತ್ತಾರೆ ಬಂದು ತಂದೆಯನ್ನು ಕರೆದೊಯ್ದ. ನಾನು ಸೆಗಣಿ ಎತ್ತಿದೆ. ಅಜ್ಜಿ ನನಗೆ ಹಿಂದಿನ ದಿನದ ತಂಗಳು ಕೊಟ್ಟರು. ಬಿಸಿಲು ಬಂದಮೇಲೆ ಬೀದಿಗಿಳಿದು ಅತ್ತಿತ್ತ ನೋಡಿ ಬಂದೆ. ನಗರದ ಹುಡುಗರನ್ನು ನಾನು ಆಗಲೆ ದ್ವೇಷಿಸತೊಡಗಿದ್ದೆ. ಅವರೆಲ್ಲಿ ಜುಟ್ಟು ಹಿಡಿಯುವರೊ ಎಂಬ ಭಯ ನನಗೆ. ಆದರೆ ಅಜ್ಜಿಯ ಮನೆ, ಬೇರೆ ಮನೆಗಳಿಗಿಂತ ದೂರ ವಾಗಿಯೆ ಇತ್ತು—ಎಂದೆನಲ್ಲ? ಅದರಿಂದ ನನಗೆ ಎಷ್ಟೋ ಸಮಾಧಾನವಾಗಿತ್ತು.

ಹೀಗೆ ಹಲವು ದಿನಗಳು ಕಳೆದವು. ಅವು ಒಂದಕ್ಕಿಂತ ಇನ್ನೊಂದು ಭಿನ್ನವಾಗದೇ ಇದ್ದ ದಿನಗಳು. ಬಿಡುವಿದ್ದಾಗಲೆಲ್ಲಾ ಚಾಪೆಯಮೇಲೆ ಮಲಗಿ ಛಾವಣಿಯ ಸೂರಿನೆಡೆಯಿಂದ ನಾನು ಆಕಾಶ ನೋಡುತ್ತಿದ್ದೆ. ಇಲ್ಲವೇ ಅಂಗಳದ ಅಂಚಿನಲ್ಲಿದ್ದ ಬೇಲಿಗೆ ಮುಖ ತಗುಲಿಸಿ ದೂರದೂರದವರೆಗೂ ದೃಷ್ಟಿ ಹಾಯಿಸುತ್ತಿದ್ದೆ.

ಎಲ್ಲವೂ ಬರಡಾಗಿ ತೋರುತ್ತಿದ್ದ ನನ್ನ ಬಾಳ್ವೆ ಸ್ವಲ್ಪವಾದರೂ ಹಸುರಾಗುವಂತೆ ಮಾಡಿದವರು ಆ ಅಜ್ಜಿ. ಅನ್ಯ ಜಾತಿಯ ನನ್ನನ್ನು ಅವರು ಪ್ರೀತಿಸಿದರು. ವರ್ತನೆಯ ಮನೆಗಳಿಗೆ ಹಾಲು ಕೊಟ್ಟು ಬಂದಮೇಲೆ ಆಕೆ, ನನಗೋಸ್ಕರವಾಗಿಯೆ ಒಂದು ಲೋಟ ಹಾಲು ಕೊಡುತ್ತಿದ್ದರು. ಅಮ್ಮನನ್ನು ನಾನು ಮರೆತಿರಲಿಲ್ಲ. ಅವಳ ನೆನ ಪಾಗುತ್ತಲೇ ಇತ್ತು. ಆ ಹೇಮಾವತಿಯ ಪ್ರವಾಹ........ಧುಮುಧುಮಿಸಿ ಬಂದ ಕೆಂಪು ಕೊಳಚೆ ನೀರು....ಕಣ್ಣುಮುಚ್ಚಿ ತೆರೆಯುವುದರೊಳಗಾಗಿ ನಡೆದುಹೋಗಿದ್ದ ಆ ಅನ್ಯಾಯ....ಆದರೂ ದಿನಕಳೆದಂತೆ

ಆ ನೋವು ಕಡಿಮೆಯಾಗುತ್ತಿತ್ತು. ಅಮ್ಮನ ಬದಲು ಪ್ರೀತಿಯ ನಾಲ್ಕು ಮಾತನ್ನಾಡತೊಡಗಿದ್ದ ಅಜ್ಜಿ ನನ್ನನ್ನು ಮನುಷ್ಯನಾಗಿ ಮಾಡಿದರು. ಕಾಲಕಳೆದಂತೆ ಎಂಥ ನೋವೂ ವಾಸಿಯಾಗುವುದೆಂಬ ಪಾಠವನ್ನು ನಾನು ಮೆಲ್ಲಮೆಲ್ಲನೆ ಕಲಿತೆ.

ಆದರೆ ನಾನು ಕಲಿಯಬೇಕಾಗಿದ್ದ ಬೇರೆ ಪಾಠಗಳಿದ್ದುವು—ಶಾಲೆಯ ಪಾಠಗಳು. ನನ್ನನ್ನು ಸ್ಕೂಲಿಗೆ ಸೇರಿಸಿದರು. ತೀರ ಹೊಸತಾಗಿದ್ದ ವಿಚಿತ್ರ ವಾತಾವರಣದಲ್ಲಿ ಬೆದರಿಕೆ ಗದರಿಕೆಯ ಬಿರುನುಡಿಗಳ ಬಯ್ಗಳ ಮಂತ್ರಪಠನದ ನಡುವೆ, ನಾನು ವಿದ್ಯಾಸರಸ್ವತಿಯ ದರ್ಶನ ಪಡೆದೆ. ಮೊದಲ ದಿನ ನಾನು ಮನೆಗೆ ಮರಳಿದಾಗ, ನಮ್ಮ ಕೊಠಡಿಗೆ ಹೋಗಿ, ಮುಖಮುಚ್ಚಿಕೊಂಡು ಅತ್ತೆ.

ನಾನು ಬರುತ್ತಿದ್ದುದನ್ನು ದೂರದಿಂದಲೆ ಅಜ್ಜಿ ನೋಡಿದ್ದರೋ ಏನೋ. ಹೊರಗಿನಿಂದಲೇ ಇಣಿಕಿನೋಡುತ್ತಾ, "ಏನಪ್ಪಾ ಚಂದ್ರು? ಹೊಡೆದ್ರೇನೋ ಮರಿ?" ಎಂದರು.

ನನಗೆ ಯಾರೂ ಹೊಡೆದಿರಲಿಲ್ಲ. ಆದರೆ ಯಾಕೊ ಆ ಹೊಸ ಅನುಭವ ನನ್ನ ಹೃದಯದ ಅಣೆಕಟ್ಟಿಗೆ ಸುರಂಗಹೊಡೆದಿತ್ತು.

ಕೆಲಸದಿಂದ ವಾಪಸು ಬಂದ ತಂದೆ, ಬಲು ಆತುರದಿಂದ ನನ್ನ ಮೈದಡವಿದ.

"ಎಂಗಿತ್ತಪ್ಪಾ? ಸ್ಕೂಲು ಹೆಂಗಿತ್ತು ಚಂದ್ರೂ?"

ನಾನು ಮತ್ತೊಮ್ಮೆ ಗಟ್ಟಿಯಾಗಿ ಅತ್ತೆ. ಮತ್ತೆ ಶಾಲೆಗೆ ಹೋಗುವುದೇ ಇಲ್ಲವೆಂದು ಗೋಳಾಡಿದೆ. ಆ ಬಣ್ಣಬಣ್ಣದ ಪರಟು ಲಂಗಗಳು, ನುಣ್ಣನೆಯ ಕೂದಲು ಬೈತಲೆ, ಕೆಂಪು ಕೆಂಪನೆಯ ಕೋಮಲ ಮುಖಗಳು—ಇವೆಲ್ಲವೂ, "ಇದು ನಿನ್ನ ಲೋಕವಲ್ಲ" ಎಂದು ನನಗೆ ಗದರಿ ಹೇಳಿದ್ದುವು. ನನ್ನ ಹಾಗೆಯೇ ಬಡವರಂತೆ ಕಂಡ ಬೇರೆ ಕೆಲವರಿದ್ದರು ನಿಜ. ಆದರೆ ಅವರೊಬ್ಬರೂ ಮಾತನಾಡುತ್ತಿರಲಿಲ್ಲ. ಸ್ವರ ಹೊರಡಿಸುತ್ತಿರಲಿಲ್ಲ. ನಗುತ್ತಿರಲಿಲ್ಲ. ದೊಡ್ಡವರ ಮಕ್ಕಳೆದುರಲ್ಲಿ ಅವರು ಹಿಂಜರಿದು ಹಿಂಜರಿದು ಮೂಲೆ ಗುಂಪಾಗಿದ್ದರು.

ನನ್ನ ರೋದನ, ತಂದೆಯನ್ನು ಸಂಕಟಕ್ಕೆ ಗುರಿಮಾಡಿರಬೇಕು. ಆತ ದೀರ್ಘ ಕಾಲ ಯೋಚನೆಯಲ್ಲೇ ಮುಳುಗಿ ಕುಳಿತ. ಅವನ ಮಡಿಲಲ್ಲಿ ನಾನು ಮುಖವನ್ನು ಮುಚ್ಚಿಟ್ಟೆ.

"ಸ್ಕೂಲಿಗೆ ಹೋಗಲ್ಲ ಅನ್ಬಾರದು ಮಗೂ. ಯಾರಾದರೂ ಹಿಂಗೆ ಅನ್‌ಬವ್ದಾ? ಸ್ಕೂಲಿಗೆ ಹೋಗ್ದಿದ್ರೆ ವಿದ್ಯೆ ಹೆಂಗ್ಬಂದೀತು? ನೀನು ದೊಡ್ಡ ಮನುಷ್ಯ ಹೆಂಗಾದೀಯ?"

"ಇಲ್ಲಪ್ಪ, ನಾನು ದೊಡ್ಡ ಮನುಷ್ಯ ಆಗೋದಿಲ್ಲ."

"ಅಯ್ಯೋ ಹುಚ್ಚಪ್ಪ, ಹಂಗಂತಾರೇನೋ ಯಾರಾದರೂ?"

ನಾನು ಅಳು ನಿಲ್ಲಿಸಿದೆ. ಆದರೆ ಅಪ್ಪನ ಬಾಡಿದ ಮುಖ ಅರಳಲೇ ಇಲ್ಲ. ನನಗೆ ಅದು ಅಸಹನೀಯವಾಯಿತು. ನನ್ನ ಅಪ್ಪನಿಗೆ ತೃಪ್ತಿಯನ್ನುಂಟುಮಾಡುವ ಏನಾದರೊಂದು ಕೆಲಸ ಮಾಡಬೇಕೆನ್ನಿಸಿತು. ಏನು ಮಾಡಿದರೆ ಆತನಿಗೆ ತೃಪ್ತಿಯುಂಟಾದೀತು?

ಒಮ್ಮೆಲೆ ಉತ್ತರ ಹೊಳೆದು ನನಗೆ ಸಂತೋಷವಾಯಿತು.

"ಅಪ್ಪಾ ಅಪ್ಪಾ, ನಾನು ಸ್ಕೂಲಿಗೆ ಹೋಗ್ತೀನಿ, ದೊಡ್ಡ ಮನುಷ್ಯ ಆಗ್ತೀನಿ" ಎಂದೆ.

ತಂದೆ ನನ್ನನ್ನು ತಬ್ಬಿಕೊಂಡ. ಬೆಚ್ಚನೆಯ ಎರಡು ಹನಿ ಕಣ್ಣೀರು ನನ್ನ ಬೆನ್ನಮೇಲೆ ಉರುಳಿ ಹರಿಯಿತು.

ಹಾಗೆ ನಾನು, ದೊಡ್ಡ ಮನುಷ್ಯನಾಗಲೆಂದು, ಶಾಲೆಗೆ ಹೋದೆ. ದಿನಗಳು ಉರುಳಿದುವು. ಅದೆಲ್ಲವೂ ಒಂದು ರೀತಿಯ ಯಾಂತ್ರಿಕ ಜೀವನ. ಬಿಸಿಲು, ಮಳೆ, ಚಳಿ. ಬೆಳಗು ಮುಂಜಾನೆ, ಸಂಜೆ, ರಾತ್ರೆ. ಎಂದಾದರೊಮ್ಮೆ ಕಾಹಿಲೆ ಕಸಾಲೆ. ಹೀಗೆಯೆ ಕಳೆಯಿತು ದಿನ.

....ಆ ದಿನ ನನ್ನ ಎಳೆಯ ಜೀವನದಲ್ಲೆ ಮಹತ್ತರವಾದೊಂದು ಘಟನೆ ನಡೆಯಿತು. ಆ ಹುಡುಗನಿಗೆ, ಯಾವ ಮದವೊ ಯಾರಿಗೆ ಗೊತ್ತು? ನಾಲ್ಕು ದಿನಗಳಿಂದ ಅವನು ನನ್ನನ್ನು ಪೀಡಿಸುತ್ತಿದ್ದ. ಕಾರಣವಿಷ್ಟೆ: ತರಗತಿಯಲ್ಲಿ ನಾನು ಮೊದಲಿಗನಾಗಿದ್ದೆ. ಶುಭ್ರವಾದ ಅಂಗಿ ಚಡ್ಡಿಯಿಲ್ಲದ, ಕ್ರಾಪಿನ ಬದಲು ಜುಟ್ಟು ಬಿಟ್ಟಿದ್ದ, ಒಬ್ಬ ಬಡ

ಹುಡುಗ ಮೊದಲಿಗನಾಗುವುದೆಂದರೇನು? ನನ್ನನ್ನೂ ಹಲವು ಹುಡುಗರು ಗೌರವಿಸುತ್ತಿದ್ದರು. ಆದರೆ ಹೀನೈಸುತ್ತಿದ್ದವರ ಸಂಖ್ಯೆಯೇ ಹೆಚ್ಚು. ಆ ಸಂಜೆ ತರಗತಿ ಮುಗಿದು ನಾವೆಲ್ಲ ಶಾಲೆಯ ಮೆಟ್ಟಲಿಳಿಯುತ್ತಿದ್ದೆವು. ಆತ ಬೇಕುಬೇಕೆಂದೇ ನನ್ನನ್ನು ಮೊಣಗೈಯಿಂದ ತಿವಿದು ರೇಗಿಸಿದ.

"ಏನು ಅಹಂಕಾರ ನೋಡು. ಹಳ್ಳಿ ಗಮಾರ ದೊಡ್ಡಮನುಷ್ಯಾಂತ ತಿಳಕೊಂಡಿದಾನೆ. ಗತಿ ಕೆಟ್ಟ ಮುಂಡೇದು!"

ನಾನು ಸ್ಲೇಟು ಪುಸ್ತಕವನ್ನು ಕೆಳಕ್ಕಿರಿಸಿದೆ. ಅವನನ್ನು ಹಿಡಿದು ನಿಲ್ಲಿಸಿ, "ಏನೆಂದೆ"? ಎಂದೆ. ಅವನು ಅಂತಹ ಪ್ರಶ್ನೆಯನ್ನು ನಿರೀಕ್ಷಿಸಿಯೇ ಇರಲಿಲ್ಲ.

"ಶಹಭಾಷ್! ಮಾತಾಡೋಕೂ ಬರತ್ತೆ ಇವನ್ಗೆ!"

ನಾನು ಉತ್ತರಕೊಡಲಿಲ್ಲ. ಅವನ ಬಣ್ಣದ ಅಂಗಿಯ ಕಾಲರ್‌ಗೆ ಕೈಹಾಕಿ ನನ್ನೆಡೆಗೆ ಎಳೆದೆ. ಆತ ಉರುಳಿಹೋದ. ದೂರ ಸರಿದು, "ಇಷ್ಟೇನೆ?" ಎಂದೆ.

ಅವನ ಮನೆತನದ ಅಭಿಮಾನವೆಲ್ಲಾ ಕೆರಳಿ ನಿಂತಿರಬೇಕು. ಎದ್ದು ಬಂದು ದಬದಬನೆ ನನಗೆ ಹೊಡೆದ. ಎಲ್ಲಿ ನನ್ನ ಜುಟ್ಟು ಹಿಡಿಯುವನೋ ಎಂಬ ಭಯವಿತ್ತು ನನಗೆ. ಅದಕ್ಕೆ ನಾನು ಅವಕಾಶ ಕೊಡಲಿಲ್ಲ. ಅವನ ಕ್ರಾಪಿಗೆ ಕೈ ಹಾಕಿ ಒಂದು ಹಿಡಿ ಕೂದಲು ಕಿತ್ತು ಬರುವಹಾಗೆ ಎಳೆದು ನೋಯಿಸಿದೆ. ಅವನು ಕೂಗಿಕೊಂಡ. ಮನೆಯಲ್ಲಿ ಅವನ ಹಾದಿ ನೋಡುತ್ತಿದ್ದ ಕಾಫಿ ಬಿಸ್ಕತ್ತಿನ ನೆನಪಾಯಿತೇನೊ. ನಾನು ಹಿಂದೆಂದೂ ಯಾರೊಡನೆಯೂ ಜಗಳವಾಡಿರಲಿಲ್ಲ. ಆದರೆ ಅಂಗಳದಲ್ಲಿ ನಿಂತು, ಬೀದಿಯ ಹುಡುಗರು ರಕ್ತ ಸೋರುವತನಕ ಕುಸ್ತಿ ಹಿಡಿಯುವುದನ್ನು ನಾನು ಕಂಡಿದ್ದೆ. ಹಾಗೆ ಕಂಡು ಕಲಿತುದನ್ನು ಇಲ್ಲಿ ಪ್ರಯೋಗಿಸಿದೆ. ಏಟು ತಿಂದು ಅವನು ಬೋರಲುಬಿದ್ದ. ಅಂಗಿ ಹರಿದಿತ್ತು. ಅವನ ಕೆಂಪು ದವಡೆಯಮೇಲೆ ನಾನು ಎಳೆದಿದ್ದ ಉಗುರಿನ ಎರಡು ಗೆರೆಗಳು ಮತ್ತಷ್ಟು ಕೆಂಪಗಾಗಿ ಸಿಡಿಯುತ್ತಿದ್ದವು. ಎಲ್ಲ ಹುಡುಗರೂ ನಮ್ಮನ್ನೆ ನೋಡುತ್ತಿದ್ದರು. ನನ್ನ ಸಹಾಯಕ್ಕೆ

ಯಾರೂ ಬರಲಿಲ್ಲ ನಿಜ. ಆದರೆ ಅವನ ಸಹಾಯಕ್ಕೂ ಯಾರೂ ಬರಲಿಲ್ಲ. ಆ ಹುಡುಗನಿಗೆ ಅವಮಾನವಾದುದನ್ನು ಕಂಡು ಹಲವರಿಗೆ ಸಂತೋಷವಾಗಿರಬೇಕು. ಆದರೆ ಒಬ್ಬಿಬ್ಬರು, ಉಪಾಧ್ಯಾಯರಿಗೆ ದೂರುಕೊಡಲು ಓಡಿಹೋಗಿದ್ದರು. ಉಪಾಧ್ಯಾಯರು ಧಾವಿಸಿ ಬಂದರು. ಅಪರಾಧಿ ಯಾರು? ನಮ್ಮಿಬ್ಬರೊಳಗೆ ತಪ್ಪುಮಾಡಿದವರು ಯಾರು? ಆ ಉಪಾಧ್ಯಾಯರು ಮೊದಲು ನನ್ನ ಕೆನ್ನೆಗೆ ಏಟು ಬಿಗಿದರು.

"ಇಷ್ಟು ಶಕ್ತಿಬಂತೇನೊ ಭಡವಾ?" ಎಂಬ ಪ್ರಶ್ನೆ ಬಂತು.

ಹೌದು ನನಗೇ ಗೊತ್ತಿರಲಿಲ್ಲ. ಬಡವನಾದ ನನಗೆ ಅಷ್ಟು ಶಕ್ತಿ ಬಂದಿತ್ತು.

ಆ ಶ್ರೀಮಂತರ ಹುಡುಗ ಅಳುತ್ತಿದ್ದ. ಇಲ್ಲದ ನೋವನ್ನು ಹತ್ತುಪಾಲು ಹೆಚ್ಚಿಸಿಕೊಂಡು ಅಳುತ್ತಿದ್ದ. ನಾನು ಸ್ಲೇಟು ಪುಸ್ತಕವನ್ನೆತ್ತಿಕೊಂಡೆ.

ಉಪಾಧ್ಯಾಯರ ಗುಡುಗು ಧ್ವನಿ ಸಿಡಿನುಡಿಯಿತು.

"ನಾಳೆಯಿಂದ ಸ್ಕೂಲಿಗೆ ಬರಬೇಡ. ಕೇಳಿಸ್ತೇನೋ ಚಂದ್ರಶೇಖರಾ, ನಾಳೆಯಿಂದ ಸ್ಕೂಲಿಗೆ ಬರಬೇಡ."

........ತಲೆ ಬಾಗಿಸಿಕೊಂಡು ನಾನು ಮನೆಗೆ ಬಂದೆ. ಕಾಲುಗಳು ಜಡವಾಗಿದ್ದುವು. ಹೃದಯ ಭಾರವಾಗಿತ್ತು. ಸುರಿಯಲು ನಿರಾಕರಿಸಿದ್ದ ಕಣ್ಣೀರು ಕಣ್ಣಿನ ಅಂಚಿನಲ್ಲಿ ತುಂಬಿ ತುಳುಕುತ್ತಿತ್ತು. ಇದು ನ್ಯಾಯವೆ? ತರಗತಿಗೆ ಮೊದಲಿಗನಾದಾಗ ನನ್ನನ್ನು ಪ್ರೀತಿಸಿದ ಉಪಾಧ್ಯಾಯರು, ಈಗ ಹೀಗೆ ಮಾಡುವುದು ನ್ಯಾಯವೆ? ತಪ್ಪು ಯಾರದು? ಆ ಶ್ರೀಮಂತರ ಹುಡುಗ ಏನೂ ತಪ್ಪುಮಾಡಲಿಲ್ಲವೆ ಹಾಗಾದರೆ? ಅವರು ಬೇರೆ ಯಾವ ಶಿಕ್ಷೆ ಬೇಕಾದರೂ ಕೊಡಬಹುದಾಗಿತ್ತು. ಆದರೆ ಸ್ಕೂಲಿಗೇ ಬರಬಾರದು, ಎಂದು ತೀರ್ಮಾನ ಕೊಡುವುದೆ? ತಂದೆಗೆ ಹೇಗೆ ಮುಖ ತೋರಿಸಬೇಕು? ಇನ್ನು ದೊಡ್ಡ ಮನುಷ್ಯನಾಗುವುದು ಹೇಗೆ ಸಾಧ್ಯ? ಅಜ್ಜಿಗೆ ಏನು ಉತ್ತರಕೊಡಬೇಕು? ಸಾವಿರ ಸವಾಲುಗಳು ನನ್ನ ಕಣ್ಣೆದುರು ಕುಣಿಯುತ್ತಿ

ದ್ದುವು. ಎಲ್ಲ ಸವಾಲುಗಳೂ ಒಂದರಲ್ಲೊಂದು ಬೆರೆತು, ಮುಂದೇನು ? ಎಂಬ ದೊಡ್ಡ ಪ್ರಶ್ನೆ ನನ್ನನ್ನು ಅಣಕಿಸುತ್ತಿತ್ತು.

ನಾನು ಮನೆಗೆ ಹೋಗಲಿಲ್ಲ. ಮನೆಯಿಂದ ಸ್ವಲ್ಪ ದೂರದಲ್ಲೆ ಒಂದು ಮರದ ಕೆಳಗೆ ಒಬ್ಬಂಟಿಗನಾಗಿ ಕುಳಿತೆ. ಬೀದಿಯಲ್ಲಿ ಬರಿಯ ಲಂಗೋಟಿಯುಟ್ಟಿದ್ದ ಹುಡುಗರು 'ಉತ್ತುತ್ತೊ' ಆಡುತ್ತಿದ್ದರು. ಅವರೇ ಸುಖಿಗಳು. ಅವರು ಶಾಲೆಗೆ ಹೋಗಬೇಕಾದುದಿಲ್ಲ. ದೊಡ್ಡ ಮನುಷ್ಯರಾಗಬೇಕಾದುದಿಲ್ಲ. ಅವರಲ್ಲಿ ಯಾರೂ ತರಗತಿಗೆ ಮೊದಲಿಗರೆನ್ನಿಸಿಕೊಂಡು ಶ್ರೀಮಂತ ಹುಡುಗರ ದುರಾಗ್ರಹಕ್ಕೆ ತುತ್ತಾಗಬೇಕಾದುದಿಲ್ಲ. ಅವರು ಏನೂ ಇಲ್ಲದ ಕಡುಬಡವರು. ನಾನೂ ಬಡವ ನಿಜ. ಆದರೆ ಶಾಲೆಗೆ ಹೋಗುತ್ತಿರುವವನು-ವಿದ್ಯಾರ್ಥಿ.

ಮೆಲ್ಲಮೆಲ್ಲನೆ ಕತ್ತಲಾಯಿತು. ಹಾಲು ಕರೆಯಲು ಅಜ್ಜಿಗೆ ನೆರವಾಗುವ ಹೊತ್ತು. ಆದರೆ ನಾನಿನ್ನೂ ಮನೆಗೇ ಹೋಗಿಲ್ಲ. ಇನ್ನು ಸ್ವಲ್ಪ ಸಮಯದಲ್ಲಿ ತಂದೆ ಕೆಲಸದಿಂದ ಹಿಂತಿರುಗಿಬರುವನು. ಬಂದೊಡನೆಯೆ "ಇವತ್ತು ಏನು ಹೇಳ್ಕೊಟ್ರು ಚಂದ್ರು ? " ಎಂದು ಕೇಳುವುದು ಪದ್ಧತಿ. ಈ ದಿನ ಆತ ಏನು ಮಾಡಬಹುದು ?

ಮತ್ತೂ ಕತ್ತಲಾಯಿತು. ಉತ್ತುತ್ತೊ ಹುಡುಗರು ಮನೆಗೆ ಹೋದರು. ಪ್ರದೇಶ ನಿರ್ಜನವಾಯಿತು. ಒಬ್ಬನೇ ಅಲ್ಲಿರಲು ಹೆದರಿಕೆ ಎನಿಸಿತು. ಆದರೆ ಹಾಗೆ ಯಾರಾದರೂ ಹೇಳಿದ್ದರೆ ನಾನು ಒಪ್ಪುತ್ತಿರಲಿಲ್ಲ. ಕತ್ತಲಾದ ಮಾತ್ರಕ್ಕೆ ಹೆದರಿಕೊಳ್ಳುವುದುಂಟೆ? ಅದು ಹೊರ ಜಗತ್ತಿಗೆ ನಾವು ತೋರಿಸುವ ಮುಖ. ಆದರೆ ಅಂತರ್ಯದೊಳಗೆ ಮಾತ್ರ ಮುಖ ಮುದುಡಿತ್ತು....ನಾನು ಮೆಲ್ಲನೆ ಮನೆಯತ್ತ ನಡೆದೆ.

"ಎಲ್ಹೋಗಿದ್ದೆ ಮರಿ ? ಯಾಕೋ ತಡ ?" ಎಂದರು ಅಜ್ಜಿ.

ತಂದೆ ನಾನು ಬಂದ ಸದ್ದು ಕೇಳಿ ಓಡಿಯೋಡಿ ಹೊರಗೆ ಬಂದ.

"ಏನಾಯ್ತು ಚಂದ್ರು ? ಏನಾಯ್ತು ಮಗ ? "

ನನಗೇನಾಗಿತ್ತು ? ಅದನ್ನು ಹೇಗೆ ಹೇಳಬೇಕು ? ನಾನು ಬಹಳ ಹೊತ್ತು ಮಾತನಾಡಲೇ ಇಲ್ಲ. ತಂದೆ ತಿರುತಿರುಗಿ ಅದೇ ಪ್ರಶ್ನೆ ಕೇಳಿದ. ನಾನು ಉತ್ತರ ಕೊಡಲೇ ಇಲ್ಲ.

ನನಗೆ ಎಂದೂ ಹೊಡೆದವನಲ್ಲ ಅಪ್ಪ. ಆ ರಾತ್ರಿ ಆತ ನನ್ನ ಮೈ ಮೇಲೆ ಏರಿ ಬಂದ. ಹೊಡೆತಕ್ಕಿಂತಲೂ, ಆತ ಹೊಡೆಯಲು ಬಂದನೆಂಬ ವಿಷಯವೇ ನನಗೆ ನೋವನ್ನುಂಟುಮಾಡಿತು. ಆಗಲೂ ನಾನು ಮಾತನಾಡಲಿಲ್ಲ. ನಮ್ಮ ಗೂಡಿನ ಹೊರಗೆ ನಿಂತು ಅಜ್ಜಿಯೂ ಬಲು ಹೊತ್ತು ಹೇಳಿ ನೋಡಿದರು.......

ಕೊನೆಗೆ ಬಲು ರಾತ್ರಿಯಾದ ಮೇಲೆ ನಾನು ನಡೆದುದನ್ನು ತಂದೆಗೆ ವಿವರಿಸಿದೆ. ಉಪ್ಪು ಖಾರ ಹಚ್ಚದೆ, ಇದ್ದುದನ್ನು ಇದ್ದಂತೆ ತಿಳಿಸಿದೆ. ತಂದೆ ತಲೆ ಬಗ್ಗಿಸಿ ಕುಳಿತ. ಅಸಹಾಯತೆಯ ದುಃಖ ಆ ಮುಖದ ಮೇಲೆ ಚಿತ್ರಬರೆದಂತೆ ಮೂಡಿತ್ತು.

" ಹಿಂಗ್ಯಾಕ್ಮಾಡ್ದೆ ಚಂದ್ರು ? ದುಡ್ಡ್ನೋರ್ ಸಂಗಡ ಜಗಳ ಕಾಯ್ಲೋನಾ ? "

ನಾನು ನಿರುತ್ತರನಾಗಿದ್ದೆ. ಬಹಳ ಹೊತ್ತು ತಂದೆಯೂ ಸುಮ್ಮನಿದ್ದ. ಕೊನೆಗೆ ಆತನೆ ಮೌನವನ್ನು ಮುರಿದ.

" ನಾಳೆ ದಿವಸ ಸ್ಕೂಲಿಗೆ ಬರ್ತೀನಿ, ನಿಮ್ಮೇಷ್ಟ್ರನ್ನು ಕೇಳಿ ನೋಡಾಣ."

" ಹೂನಪ್ಪ."

" ಅಲ್ಲಿ ನೀನು ತಪ್ಪೊಪ್ಕೋಬೇಕು ಚಂದ್ರು."

ನಾನು ತಂದೆಯ ಮುಖವನ್ನೇ ನೋಡುತ್ತಿದ್ದೆ. ಮಾಡದ ತಪ್ಪನ್ನು ಏನೆಂದು ಒಪ್ಪಿಕೊಳ್ಳಲಿ ? ನಾನು ಹೊಡೆದುದು ನಿಜ, ಆದರೆ ಅದಕ್ಕೆ ಮೂಲಕಾರಣವೇನು ? ನನ್ನ ತಂದೆಗೆ ಅಷ್ಟೂ ತಿಳಿಯ ಬಾರದೆ ?

ನನ್ನನ್ನೆ ನೋಡುತ್ತ ಅಪ್ಪ ಹೇಳಿದ.

" ನಿಂಗ್ತಿಳೀದು ಚಂದ್ರು. ಈ ಲೋಕದಲ್ಲಿ ಬಡವರ ಕೋಪ ದವಡೆಗೆ ಮೂಲ. ತಾಳಿ ನಡೆದವನೇ ಬಾಳೋದು ಸಾಧ್ಯ."

ನನಗೆ ಆ ಮಾತುಗಳು ಅರ್ಥವಾಗಲಿಲ್ಲ. ಸದಾಕಾಲವೂ ಎದೆ ಎತ್ತಿ ನಡೆಯುತ್ತಲಿದ್ದ ಖಡಾಖಂಡಿತವಾದಿಯಾಗಿದ್ದ ಸತ್ಯನಿಷ್ಠುರನಾಗಿದ್ದ ನನ್ನ ತಂದೆಯೇ ಅಲ್ಲವೆ ಅಂಥ ಮಾತುಗಳನ್ನು ಹೇಳುತ್ತಿದ್ದುದು ?

ನಾನು ಕ್ಷಮೆ ಕೇಳಬೇಕಾದ ಅನಿವಾರ್ಯತೆಯಿಂದ ನನಗೆ ದುಃಖವಾಗಲಿಲ್ಲ. ಆದರೆ ತಂದೆ ಅಂತಹ ಹಿತೋಪದೇಶ ಮಾಡ ಬೇಕಾಯ್ತಲ್ಲಾ ಎಂದು ದುಃಖವೆನಿಸಿತು.

ಮರುದಿನ ಬೆಳಿಗ್ಗೆ ತಂದೆ ಕೆಲಸಕ್ಕೆ ಹೋಗಲಿಲ್ಲ. ನನ್ನೊಡನೆ ಶಾಲೆಗೆ ಬಂದ. ಉಪಾಧ್ಯಾಯರಿನ್ನೂ ಬಂದಿರಲಿಲ್ಲ. ಹುಡುಗರ ದೃಷ್ಟಿ ತಪ್ಪಿಸಿ ನಾವಿಬ್ಬರೂ ದೂರ ನಿಂತೆವು. ಅಂತೂ ಕೊನೆಗೊಮ್ಮೆ ಉಪಾಧ್ಯಾಯರು ಬಂದರು. ತಂದೆ ಹಾದಿಯಲ್ಲಿ ಅವರೆದುರು ವಿನೀತ ನಾಗಿ ಬಾಗಿ ನಮಸ್ಕರಿಸಿದ.

"ಏನು ?" ಎಂದರು ಉಪಾಧ್ಯಾಯರು, ದರ್ಪಯುಕ್ತವಾಣಿ ಯಿಂದ.

"ನಮ್ಹುಂದ್ರು—"

"ಅವನು ಶುದ್ಧ ಪೋಲಿ. ಚೆನ್ನಾಗಿ ಓದ್ಕೋತಾನೆ ಅಂತಿದ್ರೆ ನನ್ಕೆಲಸಕ್ಕೇ ಸಂಚ್ಕಾರ ತರೋಹಾಗೆ ಮಾಡ್ತಾನೆ. ಯಾರು ಎತ್ತ ಅಂತ ನೋಡ್ದೆ ಆಡ್ತಾನೆ. ನಾಯಿನಾ ತಂಗೊಂಡೋಗಿ ಸಿಂಹಾಸನದ ಮೇಲೆ........"

ಅವರು ಅದೇನೇನೊ ಹೇಳುತ್ತಿದ್ದರು. ನಾಯಿ ಮತ್ತು ಸಿಂಹಾ ಸನ. ಮಹಾರಾಜರ ಸಿಂಹಾಸನವನ್ನು ನಾನು ನೋಡಿರಲಿಲ್ಲ. ಆದರೆ ನಾಯಿಯನ್ನು ಕಂಡಿದ್ದೆ—ಬೀದಿಯ ಬಡಕಲು ನಾಯಿಯನ್ನು. ನಾನು ಮತ್ತು ನಾಯಿ.

ನಮ್ಮಪ್ಪ ಹೇಳುತ್ತಿದ್ದರು.

"ಇದೊಂದ್ಸಾರೆ ಕ್ಷಮಿಸಿ ಮೇಷ್ಟ್ರೆ, ನಮ್ಹುಂದ್ರು ಇನ್ಯಾವತ್ತೂ ಹೀಗ್ಮಾಡೋಕಿಲ್ಲ."

ದೊಡ್ಡ ಮನುಷ್ಯನಾಗುವುದು ಎಷ್ಟು ಕಷ್ಟದ ಕೆಲಸ! ಇನ್ನು ಯಾವತ್ತೂ ನಾನು ಏನನ್ನೂ ಮಾಡಬಾರದು. ದುಂಡ ದುಂಡನೆಯ ಕೆಂಪು ಕೆಂಪನೆಯ ನಯ ನಾಜೂಕಿನ ಆ ಹುಡುಗರು ನನಗೆ ಅವಮಾನ ಮಾಡಿದರೆ, ನಾನು ಏನನ್ನೂ ಮಾಡಬಾರದು.

ನಮ್ಮ ಉಪಾಧ್ಯಾಯರ ಸ್ವರ ಕೇಳಿಸಿತು.

" ಸಂಜೆ ಹೊತ್ಗೆ ಬಾ. ಮಾತೋಡೋಣ. "

" ಇಲ್ಗೇ ಬರ್ಲಾ ಸ್ವಾಮಿ ? "

" ನಮ್ಮನೆ ಗೊತ್ತೇನು ನಿಂಗೆ ? "

" ಇಲ್ಲ ಸ್ವಾಮಿ. "

" ಹೂಂ ಸರಿ, ಇಲ್ಗೇ ಬಾ. "

ಮತ್ತೆ ನಾವು ಸಂಜೆ ಅಲ್ಲಿಗೇ ಹೋದೆವು. ಮನೆಗೆ ಹೊರಟಿದ್ದ ಹುಡುಗ ಹುಡುಗಿಯರೆಲ್ಲಾ ನಮ್ಮನ್ನೇ ನೋಡುತ್ತ ಹೋದರು. ನಾವು ಅಷ್ಟು ಅಲ್ಪರಾಗಬೇಕಾಗಿ ಬಂದ ಆ ದುರವಸ್ಥೆಗೆ ಕಾರಣನಾದ ನನ್ನ ಪರಮ ಸ್ನೇಹಿತನನ್ನು ಹುಡುಕಿದೆ. ಆತ ಅಲ್ಲಿರಲಿಲ್ಲ. ಬಂದೇ ಇರಲಿಲ್ಲವೇನೊ. ಒಮ್ಮೆಲೆ ನನಗೆ ಸತ್ಯಾಂಶ ಹೊಳೆದು ಸಂತೋಷ ವಾಯಿತು: ನನ್ನ ಏಟು ಬಲವಾಗಿ ಬಿದ್ದು ಈಗ ಆ ಪೈಲ್ವಾನ ವಿಶ್ರಾಂತಿ ಪಡೆಯುತ್ತಿರಬಹುದು !

ಉಪಾಧ್ಯಾಯರು, ಅವರ ಹಿಂದೆ ನಮ್ಮ ತಂದೆ, ಅವರ ಹಿಂದೆ ನಾನು—ಹೀಗೆ ಮೆರವಣಿಗೆ ಹೊರಟೆವು.

ಉಪಾಧ್ಯಾಯರ ರುಮಾಲು ಅವರ ಹಿರಿತನವನ್ನು ಎತ್ತಿ ತೋರಿಸುತ್ತಿತ್ತು. ನಗರದ ಒಂದು ಮೂಲೆಯಲ್ಲಿ ಒಬ್ಬರೇ ಉಪಾಧ್ಯಾಯರಿದ್ದ ಸಣ್ಣ ಶಾಲೆ ನಿಜ. ಆದರೇನಂತೆ ? ಅವರು ಉಪಾಧ್ಯಾಯರು. ಅವನ ಕೈಯಲ್ಲಿ ಛತ್ರಿಯಿತ್ತು. ಹರಿದುಹೋಗಿದ್ದ ಅದರ ಕರಿಯ ಬಟ್ಟೆಗೆ ಬಿಳಿಯ ಹೊದಿಕೆ ಹೊದಿಸಿದ್ದರು. ಮಳೆಯೋ ಬಿಸಿಲೋ ಆ ಛತ್ರಿ ಅವರ ಜೊತೆಗಿರಬೇಕು. ಬಡಕಲಾಗಿದ್ದ ಅವರ ನೀಳವಾದ ಕಾಲುಗಳಲ್ಲಿ ಚರಚರನೆ ಸದ್ದುಮಾಡುವ ಚಪ್ಪಲಿಗಳಿದ್ದವು. ಆ ಪಂಚೆ ಮತ್ತು ಕೋಟು. ಅದರೊಳಗೆ ಷರಟು ಇತ್ತೋ ಇಲ್ಲವೊ ನನಗೆ ತಿಳಿಯದು, ಇದ್ದಿರಬೇಕು. ಬರಿಯ ಕೋಟನ್ನು ಯಾರಾದರೂ ತೊಡುವುದುಂಟೆ ? ಅಂತೂ ಆಗ ನನಗೆ ಕೋಟು ಷರಟುಗಳ ತಾರ ತಮ್ಯದ ಪರಿಜ್ಞಾನವಿರಲಿಲ್ಲ.

ಅವರ ಹಿಂದೆ ನಮ್ಮಪ್ಪ. ಕರಿದಾಗಿದ್ದ ಜುಬ್ಬ—ಅಡ್ಡಪಂಚೆಗಳನ್ನು ಮರೆಸಿ ಮೈ ಬಣ್ಣವೇ ಎದು ಕಾಣಿಸುತ್ತಿತ್ತು. ಹಗಲೆಲ್ಲಾ ದುಡಿದು

ಒರಟಾಗಿದ್ದ ಮಾಂಸಖಂಡಗಳು, ಬರಿಗಾಲು. ಮುಖದ ತುಂಬಾ ಕುರುಚಲು ಗಡ್ಡ ಇದ್ದಿರಬೇಕು. ನನಗೆ ನೆನಪಿಲ್ಲ. ನುಣುಪಿನ ಮುಖ ಮತ್ತು ಗಡ್ಡಗಳ ನಡುವಿನ ವ್ಯತ್ಯಾಸ ಆಗ ನನಗೆ ತಿಳಿದಿರಲಿಲ್ಲ.

ಇನ್ನು ನಾನು, ಸಂಜೆ ಶಾಲೆಬಿಡುವ ಹೊತ್ತಾದರೂ ಸ್ಲೇಟು ಪುಸ್ತಕಗಳನ್ನು ಹಿಡಿದುಕೊಂಡೇ ಬಂದಿದ್ದೆ. ಆರಂಭದ ದಿನದಿಂದಲೂ ನನ್ನ ಸಂಗಾತಿಯಾಗಿದ್ದ ಆ ಪೋಷಾಕು. ಹರಕು ಚಡ್ಡಿ ಮತ್ತು ಹರಿದ ಅಂಗಿ. ಪ್ರತಿ ಭಾನುವಾರ ನಮ್ಮಪ್ಪ ಅದಕ್ಕೆ ನೀನು ಕಾಣಿಸುತ್ತಿದ್ದ. ನಮ್ಮಜ್ಜಿ ಯಾವುದೋ ಸಾಬೂನಿನ ತುಣುಕು ಕೊಡುತ್ತಿದ್ದರು. ನನ್ನ ತಲೆಯ ಮೇಲೆ, ನನ್ನನ್ನು ಹಲವಾರು ಸಾರಿ ಅವಮಾನಕ್ಕೆ ಗುರಿಮಾಡಿದ್ದ ಜುಟ್ಟು ಕುಳಿತ್ತಿತ್ತು........

ನನ್ನ ಜುಟ್ಟು ಮತ್ತು ನಮ್ಮ ತಂದೆಯ ಜುಟ್ಟು. ಅಜ್ಜಿಗಾದರೋ ಆ ತೊಂದರೆಯೆ ಇರಲಿಲ್ಲ. ಆಕೆಯೇ ಭಾಗ್ಯವಂತೆ.

"ಹೂ ಏನಂತಿಯಾ?"

ನನ್ನ ತಂದೆ ಮೌನವಾಗಿದ್ದ.

"ಇವತ್ನೋಡು, ಆ ಹುಡುಗ ಸ್ಕೂಲ್ಗೇ ಬಂದಿಲ್ಲ. ಅವನ್ಮನೇಯವರು ಬೇರೆ ಚೀಟಿ ಕಳಿಸಿದಾರೆ. ಅಲ್ಹೋಗಿ ಅವರ ತಂದೇನ ನೋಡ್ಕೊಂಡು ಬರಬೇಕು........"

· "ನಮ್ಮ ಹುಡುಗ ದೊಡ್ಡ ತಪ್ಪು ಮಾಡ್ದ ಸ್ವಾಮಿ."

ನಾನು ಅಲ್ಲವೆನಲಿಲ್ಲ. ಉಪಾಧ್ಯಾಯರು ಹಿಂತಿರುಗಿ ನೋಡಿ ನನ್ನನ್ನು ಕೇಳಿದರು:

"ಯಾಕೋ ಅವನಿಗೆ ಹೊಡೆಯೋಕೆ ಹೋದೆ?"

ನಿಜ ಹೇಳಿಬಿಡೋಣವೆನ್ನಿಸಿತು. ಯಾಕೆ ಹೇಳಬಾರದು?

"ಅವನು ನಂಗೆ—"

ಮಾತನಾಡತೊಡಗಿದ್ದ ನನ್ನನ್ನು ತಂದೆ ಹಿಡಿದು ನಿಲ್ಲಿಸಿದ. ಅವನೆಂದ:

"ಹೋಗಲಿ ಬಿಡಿ ಸ್ವಾಮಿ, ಏನೂ ತಿಳೀದ ಹುಡುಗ. ಇನ್ನೊಂದ್ಸಲ ಹೀಗ್ಮಾಡಲ್ಲ."

ಮಾತಿಲ್ಲದೆ ಮತ್ತೂ ದೂರ ನಡೆದೆವು. ಉಪಾಧ್ಯಾಯರ ಮನೆ ಸಮಿಾಪಿಸುತ್ತಿತ್ತು.

"ನಾಳೆ ಸ್ಕೂಲ್ಗೆ ಬರ್ಲಿ. ಇನ್ಮುಂದೆ ಹೀಗಾಗ್ಬಾರ್ದು. ಇನ್ನೂ ನಾಲ್ಕು ಜನ ಹುಡುಗರಿಗೆ ಹೊಡೆದಾಂತಂದರೆ ನನ್ನನ್ನೇ ಡಿಸ್‌ಮಿಸ್ ಮಾಡ್ತಾರೆ ಅಷ್ಟೆ. ಏನಪ್ಪಾ ಚಂದ್ರು? ಒಳ್ಳೆಯವನಾಗಿ ಇರ್ತಿಯೋ ಹ್ಯಾಗೆ?"

"ಇರ್ತೀನಿ ಸಾರ್."

ಉಪಾಧ್ಯಾಯರು ತಮ್ಮ ಮನೆಯ ಗೇಟು ತೆರೆಯುತ್ತಾ ಅಂಗಳ ದಲ್ಲಿ ಒಡೆಯದೇ ಬಿದ್ದಿದ್ದ ಒಂದು ಗಾಡಿಯಷ್ಟು ಸೌದೆ ರಾಶಿಯನ್ನು ನೋಡಿದರು.

"ಏನಪ್ಪಾ, ಸೌದೆ ಒಡೆಯೋಕೆ ಬರತ್ತೇನು ನಿಂಗೆ?"

"ಒಡೀತೀನಿ ಸ್ವಾಮಿ," ಎಂದರು ತಂದೆ. ಆ ಸ್ವರದಲ್ಲಿ ಕೃತಜ್ಞತೆ ಇತ್ತು.

ಉಪಾಧ್ಯಾಯರು ಏನು ಕೆಲಸ ಹೇಳಿದರೂ ಪ್ರಾಯಶಃ ತಂದೆ ಮಾಡುತ್ತಿದ್ದನೋ ಏನೊ. ಆ ದಿನ ಹಗಲು ಕೆಲಸವಿರಲಿಲ್ಲ ಅವನಿಗೆ. ಆ ಕೆಲಸ ಈಗ ಸಿಕ್ಕಿತ್ತು—ಆದರೆ ಸಂಬಳವಿಲ್ಲದ ಕೆಲಸ. ಉಪಾಧ್ಯಾಯರು ಹಿಡಿ ಅಲುಗುತ್ತಿದ್ದ ಒಂದು ಕೊಡಲಿಯನ್ನು ತಂದು ಹಾಕಿದರು.

"ಚಂದ್ರು, ನೀನು ಮನೆಗೆ ಹೋಗು. ನಾನು ಬೇಗನೆ ಬಂದ್ಬಿಡ್ತೀನಿ, ಎಂದ ನಮ್ಮಪ್ಪ.

ತಾನು ಬೆವರಿಳಿಸಿ ದುಡಿಯುವಾಗ, ಮುಂದೆ ದೊಡ್ಡಮನುಷ್ಯ ನಾಗಲಿದ್ದ ತನ್ನ ಮಗ ನೋಡಬಾರದೆಂಬ ಉದ್ದೇಶವಿತ್ತೋ ಏನೋ. ಉಪಾಧ್ಯಾಯರು ಮನೆಯ ಒಳ ಹೋಗುತ್ತಿದ್ದಂತೆ ನಾನು ಗೇಟಿನಿಂದ ಹೊರಬಿದ್ದು ಮನೆಗೆ ಓಡಿದೆ.

ಅಜ್ಜಿ ಕೇಳಿದ್ದರು.

"ಏನಾಯ್ತಪ್ಪ ಚಂದ್ರು? ಏನೆಂದರು ನಿಮ್ಮೇಷ್ಟ್ರು?"

"ನಾಳೆ ಸ್ಕೂಲಿಗೆ ಬಾ ಅಂತಂದ್ರು."

"ಎಲ್ಲಿ ನಿನ್ನಪ್ಪ?"

"ಮೇಷ್ಟ್ರು ಮನೇಲಿ ಕಟ್ಟಿಗೆ ಒಡಿತನ್ನೆ"

"ಆಹಾ ಮುಂಡೇಗಂಡ!" ಎಂದು ಅಜ್ಜಿ ಉದ್ಗರಿಸಿದರು. ಈ ಬಿರುದು ಯಾರಿಗೆ ದೊರೆಯಿತೆಂದು ತಿಳಿಯದೆ ನಾನು ಅವರ ಮುಖ ವನ್ನೆ ನೋಡಿದೆ. "ಅಂತೂ ಬಿಟ್ಟೇ ಸೌದೆ ಒಡೆಸ್ಕೊಂಡುಬಿಟ್ಟ. ಪರವಾಗಿಲ್ಲ ಕಣೋ ನಿನ್ಮೇಸ್ಟ್ರು!"

ನನಗೆ ಆ ವಿಷಯ ಹೊಳೆದೇ ಇರಲಿಲ್ಲ. ಆ ಸೌದೆಯ ನೆನಪಾಗಿ ಸ್ವತಃ ಉಪಾಧ್ಯಾಯರೇ ಸಂಜೆಯ ಹೊತ್ತಿಗೆ ನಮ್ಮನ್ನು ಬರಲು ಹೇಳಿ ದ್ದರೇನೊ!

"ಕೈ ತೊಳ್ಕೋಪ್ಪಾ ಚಂದ್ರು. ಒಂದಿಷ್ಟು ದೋಸೆ ಇದೆ. ತಿಂದ್ಬಿಟ್ಟು ಹಾಲು ಕೊಟ್ಟು ಬಾ."

ನಾನು ಲವಲವಿಕೆಯಿಂದ ಆ ಕೆಲಸವಮಾಡಿದೆ.

ಮರುದಿನ ಮತ್ತೆ ಶಾಲೆ. ಆ ಮಹಾನುಭಾವನೂ ಬಂದಿದ್ದ. ಈ ದಿನ, ಕೋಟು ಹ್ಯಾಟುಗಳನ್ನು ಹೆಚ್ಚಾಗಿ ಧರಿಸಿದ್ದ. ನೋಡಿದರೆ ಯಾರ ಹೆದರಿಕೆಯೂ ಇಲ್ಲದ ಹಾಗೆ, ನನ್ನ ಬಗ್ಗೆ ತುಚ್ಛೀಕಾರವಿದ್ದ ಹಾಗೆ, ನಟನೆ. ಆದರೆ ವಾಸ್ತವವಾಗಿ ಅವನ ಪುಕ್ಕಲು ಕಣ್ಣುಗಳು ಹ್ಯಾಟಿನ ಮುಂಭಾಗದ ಮರೆಯಿಂದ ಅತ್ತಿತ್ತ ಕದ್ದು ಕದ್ದು ಯಾರನ್ನೋ ಹುಡುಕುತ್ತಿದ್ದುವು. ನಾನು ಅವುಗಳ ದೃಷ್ಟಿಗೆ ಬಿದ್ದೊಡನೆ ಮತ್ತೆ ಅವು ಸ್ವಸ್ಥಾನಕ್ಕೆ ತಿರುಗಿ ಎವೆಗಳ ಎಡೆಯಲ್ಲಿ ಅವಿತುಕೊಂಡುವು.

ಉಪಾಧ್ಯಾಯರು ಬಂದರು. ಘಂಟೆ ಬಾರಿಸಿತು. ಛಾವಣಿ ಹಾರಿಹೋಗುವಹಾಗೆ ನೂರು ಕಂಠಗಳಲ್ಲಿ ಕಿರಿಚಿಕೊಳ್ಳುತ್ತಾ ನಾವು ದೇವತಾಪ್ರಾರ್ಥನೆಮಾಡಿದೆವು. ಉಪಾಧ್ಯಾಯರು ಎಲ್ಲವನ್ನೂಇಷ್ಟರಲ್ಲೇ ಮರೆತಿರಬಹುದು ಎಂದಿದ್ದೆ. ಆದರೆ ಅವರು ಮರೆತಿರಲಿಲ್ಲ. ಅವರು ಎದ್ದುನಿಲ್ಲುವಂತೆ ನನಗೆ ಆಜ್ಞಾಪಿಸಿದರು. ಒಳ್ಳೆಯ ನಡತೆಯ ಬಗ್ಗೆ ಐದು ನಿಮಿಷಗಳ ಕಾಲ ಭಾಷಣವಿತ್ತರು. ಒಂದು ವಾರದವರೆಗೆ ನಾನು ಬೆಂಚಿನಮೇಲೆ ನಿಂತಿರಬೇಕೆಂದರು. ನಾನು ಮಾತನಾಡಲೇ ಇಲ್ಲ. ತರಗತಿಗೆ ಮೊದಲಿಗನಾಗಿದ್ದರೂ ನನ್ನ ಸ್ಥಾನವಿದ್ದುದು ಕೊನೆಯ ಬೆಂಚಿನಲ್ಲಿ. ಅಲ್ಲಿಯೇ ನಾನು ನಿಂತುಕೊಂಡೆ. ಇಷ್ಟಾದರೂ

ಮೊದಲ ಬೆಂಚಿನಲ್ಲಿದ್ದ ನನ್ನ ಎದುರಾಳಿ ತಿರುಗಿನೋಡಲಿಲ್ಲ. ನೋಡುವ ಧೈರ್ಯ ಅವನಿಗೆ ಇರಲಿಲ್ಲ. ಅವಮಾನದಿಂದ ನನ್ನ ಮೈ ಉರಿಯುತ್ತಿತ್ತು. ನಾನು ಬಿಸಿಯುಸಿರು ಬಿಡುತ್ತಿದ್ದೆ. ಕಂಬನಿ ಈಗಲೋ ಮತ್ತೆಯೋ ಕೆಳಕ್ಕೆ ಧುಮುಕಲು ಸಿದ್ಧವಾಗಿತ್ತು.

ಆ ರಾತ್ರೆ ತಂದೆ ಎಂದಿನಂತೆ ಕೇಳಿದ:

" ಈ ದಿನ ಏನು ಓದ್ದೆ ಚಂದ್ರು ? "

ನಾನು ಯಾವುದೋ ಪಾಠದಹೆಸರು ಹೇಳಿದೆ. ನನಗೆ ದೊರತ ಹೊಸ ಶಿಕ್ಷೆಯ ವಿಷಯವೆತ್ತಲಿಲ್ಲ. ಅದನ್ನು ಹೇಳಿದ್ದರೆ ಅವನಿಗೆ ಖಂಡಿತವಾಗಿಯೂ ತುಂಬ ನೋವಾಗುತ್ತಿತ್ತು ಅಂಥ ಸಂಕಟಕ್ಕೆ ಕಾರಣನಾಗಲು ನಾನು ಇಷ್ಟಪಡಲಿಲ್ಲ. ಮೊದಲ ಬಾರಿಗೆ ತಂದೆಯಿಂದ ಸತ್ಯಸಂಗತಿಯನ್ನು ನಾನು ಬಚ್ಚಿಟ್ಟೆ.

ಹಾಗೆ ದಿನಗಳು ಉರುಳಿದುವು. ಹಳ್ಳಿಯ, ತಾಯಿಯ, ಗೋಪಿ ಹಸುವಿನ ನೆನಪೆಲ್ಲಾ, ಹೊಸ ಅನುಭವಗಳ ಎಡೆಯಲ್ಲಿ ಮೆಲ್ಲ ಮೆಲ್ಲನೆ ಮರೆಯಾಗುತ್ತಿತ್ತು. ನಾನು ತಾಯಿಯಿಲ್ಲದ ಏಕಾಕಿ ಎಂಬ ವಿಷಯ ನನ್ನಪಾಲಿಗೆ ಸರ್ವ ಸಾಮಾನ್ಯವಾಯಿತು.

ಆದೊಂದು ಭಾನುವಾರ, ತಂದೆ ನನ್ನನ್ನು ಕ್ಷೌರದಂಗಡಿಗೆ ಕರೆದೊಯ್ದ.

ಹಾದಿಯಲ್ಲಿ " ಚಂದ್ರೂ ನಾವೀಗ ಪ್ಯಾಟೆಯವರು. ಜುಟ್ಟಿನ ಬದಲು ಕ್ರಾಪು ಬಿಟ್ಕೋಬೇಕು. ಅಲ್ಲವಾ ? " ಎಂದ.

ನನಗೆ ಆಶ್ಚರ್ಯವೆನಿಸಿತು ದೀರ್ಘ ಕಾಲದಿಂದ ಹಗಲೂ ರಾತ್ರೆಯೂ ನನ್ನ ನೂರಾರು ಭಯಭೀತಿಗಳಿಗೆ ಕಾರಣವಾಗಿದ್ದ ಜುಟ್ಟನ್ನು ಕತ್ತರಿಸುವ ಮಾತನ್ನಾಡುತಿದ್ದಾನೆ ತಂದೆ! ಇದು ನಿಜವಿರಬಹುದೆ ? ಇದು ಸಾಧ್ಯವೆ ? ಕ್ರಾಪಿನ ಹಲವಾರು ಹುಡುಗರ ಮುಂದೆ ಯಾವ ಹೆದರಿಕೆಯೂ, ಇಲ್ಲದೆ ನಾನು ಇನ್ನು ನಡೆಯುವುದು ಸಾಧ್ಯವೆ ?

ಕ್ಷೌರಿಕನ ಅಂಗಡಿಯಲ್ಲಿ ಅಸಾಧ್ಯವಾದ್ದೆನ್ನುವುದೇ ಇರಲಿಲ್ಲ. ಆತನ ಕತ್ತರಿ ಕರಕ್ ಕರಕ್ ಎಂದು ನನ್ನ ಜುಟ್ಟನ್ನು ಬಲಿತೆಗೆದುಕೊಂಡಿತು. ತಲೆಯಿಂದ ದೊಡ್ಡದೊಂದು ಭಾರ ಇಳಿದ ಹಾಗಾಯಿತು. ಆ ಕ್ಷೌರಿಕ ಕ್ರಾಪು ಬಿಡಿಸಿದ.

"ಇಸ್ಕೂಲಿಗೆ ಓಯ್ತಿವ್ನಾ?" ಎಂದು ಅವನು, ಜುಟ್ಟಿನ ಬಲಿದಾನಕ್ಕೆ ಅದೇ ಕಾರಣವೆಂಬಂತೆ, ನನ್ನ ತಂದೆಯನ್ನು ಕೇಳಿದ. ತಂದೆ ಹೌದೆಂದ. ನಾವು ಹೊರಬಿದ್ದೆವು. ಆತ ಗಡ್ಡ ಮಾಡಿಸಿಕೊಂಡಿರಲಿಲ್ಲ. ಆತನ ಸಣ್ಣ ಜುಟ್ಟಂತೂ ಹಾಗೆಯೇ ಇತ್ತು. ಆಗ ನನಗೆ ತಿಳಿದಿರಲಿಲ್ಲ. ಆದರೆ ಈಗ ಅರ್ಥವಾಗುತ್ತಿದೆ. ಆ ದಿನ ಕ್ಷೌರಿಕನಿಗಾಗಿ ತಾನು ಮಾಡಬೇಕಾಗಿದ್ದ ಖರ್ಚನ್ನು, ನನ್ನ ಕ್ರಾಪಿಗೋಸ್ಕರ ಆತ ಮಾಡಿದ್ದ.

ಮರುದಿನ ಶಾಲೆಗೆ ಹೋದಾಗ, ಎಲ್ಲರೂ ನನ್ನನ್ನೇ ನೋಡುತ್ತಿದ್ದರು. ನನ್ನನ್ನಲ್ಲ, ನನ್ನ ತಲೆಯನ್ನು. ತರಗತಿಯೊಳಗೆ ಹುಡುಗರು ನನ್ನ ಸುತ್ತಲೂ ಕೈಕಟ್ಟಿ ಕುಣಿದರು. ಆದರೆ ನಾನು ನೊಂದುಕೊಳ್ಳಲಿಲ್ಲ. ಮುಂದೆ ಸದಾಕಾಲವೂ ಜುಟ್ಟಿನ ತೊಂದರೆಯೇ ಇಲ್ಲದಿರಬೇಕಾದರೆ, ಈಗ ಹೊಸ ಕ್ರಾಪು ತಂದೊಡ್ಡಿದ ತಮಾಷೆಯನ್ನು ಅನುಭವಿಸದೆ ಅನ್ಯಗತಿ ಇರಲಿಲ್ಲ.

ಒಂದು ದಿನ ರಾತ್ರಿ ಅಜ್ಜಿ ನನ್ನ ತಂದೆಯೊಡನೆ ಆತ್ಮೀಯವಾಗಿ ಮಾತಾಡಿದರು. ಆ ಮಾತು ನನಗೆ ಹಿತವೆನಿಸಲಿಲ್ಲ. ಆದರೆ ಅಜ್ಜಿಯ ದಯಾಪೂರ್ಣ ಮುಖವನ್ನು ನೋಡುತ್ತಾ ಆ ಮಾತುಗಳನ್ನೇ ನಾನು ಮರೆತೆ. ತಂದೆ ತಲೆಬಾಗಿಸಿ ಬಲು ನಿಧಾನವಾಗಿ ಉತ್ತರ ಕೊಡುತ್ತಿದ್ದ.

"ನಲವತ್ತೆರಡು ವರ್ಷಕ್ಕೆ ಯಾರೂ ಮುದುಕರಾಗೋದಿಲ್ಲ ನಿಜ. ಆದರೆ ಇನ್ನೊಮ್ಮೆ ಸಂಸಾರ ಹೂಡೋ ಇಷ್ಟ ನನಗಿಲ್ಲ. ನನ್ಮಗೂಗೆ ಅದರಿಂದ ಸುಖ ಸಿಗತ್ತೆ ಅಂತ ಯಾವ ನಂಬಿಕೆ? ನಾನ್ನೋಡ್ಕೊಳ್ಳೋವಷ್ಟು ಚೆನ್ನಾಗಿ ಇನ್ಯಾರಾದರೂ ಅವನ್ನ ನೋಡ್ಕೊಂಡಾರ?"

ಅಜ್ಜಿ ಮೌನವಾಗಿದ್ದರು.

"ನಿನ್ನ ಇಷ್ಟ ಕಣಪ್ಪ, ಬಲವಂತ ಮಾಡೋ ವಿಷಯಾನೆ ಇದಲ್ಲ."

ಸದ್ಯಃ ನಮ್ಮ ಮನೆಗೆ ಹೊಸಬರು ಯಾರೂ ಬರುವುದಿಲ್ಲವೆಂದು ನನಗೆ ಸಮಾಧಾನವಾಯಿತು. ಆದರೆ ತಂದೆ ಸಪ್ಪಗಿದ್ದ. ಆಮೇಲೆ

ಬಹಳ ದಿನ ಗೆಲುವಾಗಿಯೇ ಇರಲಿಲ್ಲ. ಆದರಿಂದ ನನಗೆ ದುಃಖ ವಾಯಿತು. ಅವನು ಊಟವನ್ನೂ ಸರಿಯಾಗಿ ಮಾಡುತ್ತಿರಲಿಲ್ಲ. ಒಂದು ರಾತ್ರಿ ಕಂಬಳಿಯೊಳಗೆ ನಾನು ಮೆಲ್ಲನೆ, "ಅಪ್ಪಾ" ಎಂದೆ.

"ಹೂಂ" ಎಂದನಾತ. ಇನ್ನೂ ನಿದ್ದೆ ಬಂದಿರಲಿಲ್ಲ.

"ಅಪ್ಪಾ, ನೀನು ಯಾಕಪ್ಪ ಸರಿಯಾಗಿ ಉಣ್ಣೋದಿಲ್ಲ?"

ತಂದೆ ಉತ್ತರ ಕೊಡಲಿಲ್ಲ. ನಾನು ಮತ್ತೆ ಅದೇಪ್ರಶ್ನೆ ಕೇಳಿದೆ.

"ಯಾರೊ ಹೇಳಿದೋರು ನಿಂಗೆ? ದಿನಾ ಉಣ್ತಾ ಇದಿನಲ್ಲೊ?"

ಆ ಮಾತಿನಿಂದ ನನಗೆ ಸಮಾಧಾನವಾಗಲಿಲ್ಲ.

ಬಲು ಹೊತ್ತಾದ ಬಳಿಕ ತಂದೆ ಹೇಳಿದ.

"ಈ ವಾರಕ್ಕೆ ಮೂರು ವರ್ಷ ಆಯಿತು. ನೆಪ್ಪಯ್ತೇನೊ ನಿಂಗೆ?"

ನನಗೆ ನೆನಪಿತ್ತು. ಅದೀಗ ಆತನನ್ನು ಬಾಧಿಸುತ್ತಿದ್ದ ಚಿಂತೆ.

........ಅವನ ಮಾತಿನ ಬಳಿಕ ಅಂಟುಜಾಡ್ಯದ ಹಾಗೆ ಆ ಚಿಂತೆ ನನಗೆ ತಗಲಿ ಕೊಂಡಿತು.

"ಹೂನಪ್ಪ," ಎಂದೆ.

........ಮೂರು ವರ್ಷಗಳಷ್ಟೇ ಅಲ್ಲ; ನಾಲ್ಕು ವರ್ಷಗಳಾದವು. ತಂದೆ ಪ್ರತಿ ತಿಂಗಳೂ ತಪ್ಪದೆ ಸೌದೆ ಒಡೆದುಕೊಡುತ್ತಿದ್ದ ನನ್ನ ಮೊದಲ ವಿದ್ಯಾಗುರುವಿನ ಶಾಲೆಯ ಬದಲು, ಇನ್ನೊಂದಕ್ಕೆ ನಾನು ಹೋದೆ. ಅಲ್ಲಿ ಹೆಚ್ಚು ಜನ ಉಪಾಧ್ಯಾಯರು; ಹೆಚ್ಚು ಹುಡುಗರು. ಈಗ ನನ್ನ ತಲೆಯ ಮೇಲೆ ಕ್ರಾಪಿತ್ತು—ದಿನವೂ ಬಾಚದೆ ಇರುತ್ತಿದ್ದ ಕೆದರಿದ ಕ್ರಾಪು. ಅಷ್ಟೇ ಅಲ್ಲ; ನನಗೆ ಹೊಸ ಅಂಗಿ ಚಡ್ಡಿ ಗಳಿದ್ದುವು........

ಆದರೆ ಹೊಸ ಅಂಗಿ ಚಡ್ಡಿಗಳು ಸುಲಭವಾಗಿ ನನಗೆ ಬಂದಿರ ಲಿಲ್ಲ. ತಂದೆ ದೇಹವನ್ನು ತೇದು ತೇದು, ತನ್ನ ಸುಖವನ್ನು ಬಲಿ ಗೊಟ್ಟು, ನನಗೆ ಅಂತಹ ಶ್ರೀಮಂತಿಕೆಯನ್ನು ಒದಗಿಸಿಕೊಡುತ್ತಿದ್ದ. ತನ್ನನ್ನು ಸಣ್ಣ ಸಣ್ಣವನಾಗಿ ಮಾಡಿಕೊಂಡು, ನನ್ನನ್ನು ದೊಡ್ಡ

ಮನುಷ್ಯನಾಗಿ ಮಾರ್ಪಡಿಸಲು ಆತ ಯತ್ನಿಸುತ್ತಿದ್ದ. ಅದು ನನಗೆ ತಿಳಿದಿತ್ತು. ಆ ತಿಳಿವಳಿಕೆಯಿಂದ ನನಗೆ ದುಃಖವಾಗುತ್ತಿತ್ತು.

ನಾಲ್ಕಾರು ದಿನ ತಂದೆ ಕೆಲಸಕ್ಕೇ ಹೋಗಿರಲಿಲ್ಲ. ಪ್ರತಿ ಮಧ್ಯಾಹ್ನವೂ ಸಂಜೆಯೂ "ಯಾಕಪ್ಪ? ಯಾಕೆ?" ಎಂದು ಕೇಳುತ್ತ ಲಿದ್ದೆ.

"ಹೀಗೇ ಚಂದ್ರು. ಯಾಕೊ ಹೋಗಿಲ್ಲ ಅಷ್ಟೆ."

ಕೊನೆಗೆ ಆತ ನಿಜ ಸಂಗತಿಯನ್ನು ಹೇಳಿದ. ರಸ್ತೆಗಳ ಕೆಲಸ ಮುಗಿದಿತ್ತು. ಅವರೊಡನೆ ಸಂಪಾದನೆಗೂ ವಿರಾಮ ಒದಗಿತ್ತು. ಮುಂದೇನಾಗುವುದೋ ಎಂದು ನಾನು ಅಳುತಿದ್ದೆ. ಹತ್ತು ಹನ್ನೊಂದ ನೆಯ ವಯಸ್ಸಿನಲ್ಲಿ ಈಗಿನ ಎಷ್ಟು ಹುಡುಗರಿಗೆ ಮನೆತನದ ಜವಾಬ್ದಾರಿ ಅರ್ಥವಾಗುವುದೋ ಏನೋ, ಆದರೆ ನನಗೆ ಆಗ ಅರ್ಥವಾಗ ತೊಡಗಿತ್ತು.

ಅಜ್ಜಿ ಎಲ್ಲವನ್ನೂ ಗ್ರಹಿಸಿಕೊಂಡರು. ಆದರೆ ಪರಕೀಯನಾದ ನನ್ನನ್ನು ತನ್ನ ಮಗುವಿನಂತೆ ಪ್ರೀತಿಸತೊಡಗಿದ್ದ ಆಕೆ, ನಮ್ಮನ್ನು ದೂರವಿಡಲಿಲ್ಲ.

"ಫ್ಯಾಕ್ಟ್ರೀಲಿ ಕೆಲಸ ಸಿಗುತ್ತೇನೊ ನೋಡ್ಬಾರ್ದೆ? ಹೊಸದಾಗಿ ಯಾವುದೊ ಫ್ಯಾಕ್ಟ್ರೀ ಕಟ್ಟಿಸ್ತ ಇದಾರಂತಲ್ಲಾ?"

ಕಟ್ಟಿಸುತ್ತಾ ಇದ್ದರೆಂಬುದು ನಿಜ. ಊರಿಗೆ ಊರೇ ಆ ಮಾತನ್ನಾಡುತ್ತಿತ್ತು. ತಂದೆಯ ಜೊತೆಯಲ್ಲಿ ಅದೇ ರಸ್ತೆಯಮೇಲೆ ದುಡಿಯುತ್ತಿದ್ದವರೆಲ್ಲಾ ಅಲ್ಲಿಗೆ ಆಗಲೆ ಹೋಗಿದ್ದರು. ಆದರೆ ತಂದೆ ಯೊಬ್ಬನೇ, ಅರ್ಥವಿಲ್ಲದ ಮೂಕವೇದನೆಗೆ ಬಲಿಯಾಗಿ ವಿಶ್ರಾಂತಿ ಪಡೆಯುತ್ತಿದ್ದ.

"ಹೂ, ಹೋಗಿ ನೋಡ್ತೀನಿ."

ಉಣ್ಣಲು ತಿನ್ನಲು ಬೇಕಷ್ಟು ಇದ್ದರೆ, ಆಗಾಗ್ಗೆ ವಿಶ್ರಾಂತಿ ಪಡೆಯಬಹುದು. ಆದರೆ ನನ್ನ ತಂದೆಯಂತಹ ಶ್ರಮಜೀವಿ ಸೋಮಾರಿಯಾಗುವುದು ಯಾವ ನ್ಯಾಯ? ಆದರೆ ಸೋಮಾರಿ ಯಾಗಲು ಅವನು ಇಷ್ಟಪಟ್ಟಿರಲಿಲ್ಲ. ಊರು ಅವನನ್ನು ಕರೆಯು

ತ್ತಿತ್ತು. ಬೇರೆಯವರ ಪಾಲಾಗಿದ್ದ ಹಸುರು ಹೊಲ, ಹಸು, ಗುಡಿ ಸಲು........ಹೇಮಾವತಿ ನದಿಯಾಚೆಗಿನ ಹಳ್ಳಿ ....

ಮತ್ತೆ ಎರಡು ದಿನಗಳಾದ ಮೇಲೆ, ಕಾಹಿಲೆಯಿಂದ ಎದ್ದವನಂತೆ ತಂದೆ, ಕೆಲಸ ಹುಡುಕಿಕೊಂಡು ಹೋದ.

ಬಟ್ಟೆ ತಯಾರಿಯ ಹೊಸ ಕಾರ್ಖಾನೆಯಲ್ಲಿ ಅರಳೆ ಹಿಂಜುವ ಕೆಲಸ ಅವನಿಗೆ ದೊರೆಯಿತು. ದಿನಕ್ಕೆ ಒಂಭತ್ತು ಘಂಟೆಗಳ ದುಡಿತ. ಆರಾಣೆ ಕೂಲಿ.

ವರ್ಷ ವರ್ಷವೂ ಉತ್ತೀರ್ಣನಾಗುತ್ತ ನಾನು ಶಾಲೆಯಲ್ಲಿ ಓದುತ್ತಿದ್ದೆ. ವರ್ಷ ವರ್ಷವೂ ಕ್ಷೀಣನಾಗುತ್ತ ತಂದೆ ದುಡಿಯುತ್ತಿದ್ದ. ಅವನ ಹಳ್ಳಿಯ ದೇಹ ನಗರದ ಗಾಣದಲ್ಲಿ ಸಿಲುಕಿ ನಜ್ಜುಗುಜ್ಜಾಗಿತ್ತು. ಆದರೂ ಮಗನು ದೊಡ್ಡವನಾಗುವ ದೊಡ್ಡ ಮನುಷ್ಯನಾಗುವ ಅವನ ಹಂಬಲ, ಸ್ವಲ್ಪವೂ ಕಡಿಮೆಯಾಗಿರಲಿಲ್ಲ. ಆದರೆ ಒಂದು ಜೀವ ಇನ್ನೊಂದು ಜೀವಕ್ಕಾಗಿ ಆ ರೀತಿ ತ್ಯಾಗ ಮಾಡುವುದು ಅವಶ್ಯವಿತ್ತೆ? ಮಳೆಯಲ್ಲಿ ಮೈ ತೋಯಿಸಿಕೊಂಡು, ಚಳಿಯಲ್ಲಿ ದೇಹ ಕೊರೆಸಿಕೊಂಡು, ಬಿಸಿಲಲ್ಲಿ ಬೆವರಿ ನೀರಾಗಿ, ಮನುಷ್ಯ ಹಾಗೆ ದುಡಿಯಲೇ ಬೇಕೆ?

ನಾನು ಯೋಚಿಸುತ್ತಿದ್ದೆ. ಆದರೆ ತಂದೆ ಯೋಚಿಸುತ್ತಿರಲಿಲ್ಲ. ಆತ ನನ್ನ ಸಹಪಾಠಿಗಳು ಕೆಲವರ ಗುರುತುಮಾಡಿಕೊಂಡು ನನ್ನ ಬಗೆಗೆ ಆತುರದಿಂದ ವಿಚಾರಿಸುತ್ತಿದ್ದ. ನನ್ನನ್ನು ಕುರಿತು ಹೊಗಳಿಕೆಯ ಮಾತು ಕೇಳಿದ ರಾತ್ರೆ ಆತನ ಮುಖ ಅರಳಿರುತ್ತಿತ್ತು.

ನನ್ನನ್ನು ತೆಗಳಿ ಯಾರೂ ಮಾತನಾಡುತ್ತಿರಲಿಲ್ಲ. ನಾನೀಗ ದುಡ್ಡಿನವರೊಡನೆ ಜಗಳ ಕಾಯುತ್ತಿರಲಿಲ್ಲ. ಅವರನ್ನು ದೂರವಿಡುತ್ತಿದ್ದೆ. ನನಗೇನಾದರೂ ಅವಮಾನವಾದರೆ, ಸದ್ಯಕ್ಕೆ ಅದರ ಯೋಚನೆ ಬೇಡವೆಂದು ತಣ್ಣಗಿರುತ್ತಿದ್ದೆ. ಮಾತಿಗೆ ಪ್ರತಿಮಾತು ಹೇಳಿ, ಆ ತಪ್ಪಿಗೆ ದುಃಖವನ್ನು ತಂದೊಡ್ಡಲು ನಾನು ಸಿದ್ಧನಿರಲಿಲ್ಲ.

ಅದೊಂದು ಮಳೆಗಾಲ. ನನ್ನ ತಂದೆ ಮೈಕಾವೇರಿ ಮಲಗಿದ್ದ.

ಅಜ್ಜಿ ಯಾವುದೋ ಕಷಾಯ ಕುಡಿಸಿದರು. ನಾನೇ ಫ್ಯಾಕ್ಟರಿಗೆ ಹೋಗಿ ಗೇಟಿನ ಬಳಿ ಕಾದು ನಿಂತು ರಜೆಯರ್ಜಿ ಸಲ್ಲಿಸಿ ಬಂದೆ. ಆ ದಿನ ಶಾಲೆಗೆ ಹೋಗಲು ನನಗೆ ಮನಸ್ಸಿರಲಿಲ್ಲ. ಆದರೆ ತಂದೆ ಒಪ್ಪಲಿಲ್ಲ.

"ಇದೆಲ್ಲಾ ಒಂದಿವಸದ ಜ್ವರ. ನಾಳೆ ಸರಿಹೋಗಬಹುದು. ನೀನು ಸ್ಕೂಲಿಗೆ ಹೋಗು ಚಂದ್ರು."

ನಾನು ಸ್ಕೂಲಿಗೆ ಹೋದೆ. ಆದರೆ ಮನಸ್ಸೆಲ್ಲಾ ಮನೆಯತ್ತ ಹಣಿಕಿ ನೋಡುತ್ತಿತ್ತು.

ಜ್ವರ ಸಿಲ್ಲಲೇ ಇಲ್ಲ; ಬದಲು ಏರುತ್ತಾಹೋಯಿತು. ಮರು ದಿನವೂ—ಮೂರನೆ ದಿನವೂ. ಅಜ್ಜಿ ಔಷಧೋಪಚಾರ ನಡೆಸಿದರು. ನಾನು ರಜ ಪಡೆದು ಆರೈಕೆಗೆ ನಿಂತೆ. ಜ್ವರ ವಿಷಮಜ್ವರವಾಯಿತು.

ನಾನು ಇಷ್ಟರವರೆಗೆ ಎಷ್ಟೋ ಜನ ಜ್ವರಪೀಡಿತರನ್ನು ಕಂಡಿದ್ದೇನೆ. ಬಾಲ್ಯದಲ್ಲಿ ಆ ಜ್ವರದ ಮಹಾ ಪ್ರಕೋಪವನ್ನು ಕಣ್ಣಾರೆ ಕಂಡ ಅನುಭವವಿದ್ದ ನನಗೆ, ಅಂತಹ ರೋಗಿಗಳ ಬಗ್ಗೆ ಕನಿಕರವಾಮುದೇ ಇಲ್ಲ. ಯಾಕೆ ಕನಿಕರಿಸಬೇಕು? ಹೃದಯ ಕಲ್ಲಾಗಿರಬಹುದೆಂದು ಯಾರಾದರೂ ಹೇಳಬಹುದು. ಇದ್ದೀತು. ಅದು ಚರ್ಚಾಸ್ಪದವಾದ ಬೇರೆ ಮಾತು. ಆದರೆ ತಂದೆಯ ಜ್ವರವೇ ನಾನು ಮೊದಲು ನೋಡಿದ ದೊಡ್ಡ ಕಾಹಿಲೆ. ಅದನ್ನೂ ಮೀರಿಸುವ ಜ್ವರ ಇನ್ನೊಂದು ಇದ್ದೀತೆಂದು ನಾನು ಎಂದೂ ನಂಬಲಿಲ್ಲ.

ಕಣ್ಣಲ್ಲಿ ಎಣ್ಣೆ ಇಟ್ಟು ನಾನೂ ಅಜ್ಜಿಯೂ ಆರೈಕೆ ಮಾಡಿದೆವು. ಆತ ಪ್ರಜ್ಞೆ ತಪ್ಪಿ ಬಡಬಡಿಸುತ್ತಿದ್ದ. ಅಜ್ಜಿ ನನಗೆ ಧೈರ್ಯದ ಮಾತು ಹೇಳುತ್ತಿದ್ದರು. ಆದರೆ ನನಗೆ ಅದರ ಅವಶ್ಯತೆಯೇ ಇರಲಿಲ್ಲ. ತಂದೆ ಬಡಬಡಿಸುತ್ತಿದ್ದ ಒಂದೊಂದು ಮಾತೂ ನನ್ನ ವ್ಯಕ್ತಿತ್ವವನ್ನೇ ಹಿಡಿದು ಕುಲುಕುತ್ತಿತ್ತು. ರುಕ್ಕೂ-ಚಂದ್ರು—ಅದೆಷ್ಟು ಬಾರಿ ಆ ಹೆಸರುಗಳನ್ನು ಆತ ಉಚ್ಚರಿಸಲಿಲ್ಲ!

........ಮೂರು ವಾರಗಳ ಮೇಲೆ ಜ್ವರ ಇಳಿಯಿತು. ಸೊರಗಿ ಕಡ್ಡಿಯಾಗಿದ್ದ ಮೂಳೆಯ ಹಂದರವೊಂದು, ಮತ್ತೆ ಸ್ವಲ್ಪ ಮಾಂಸ ತುಂಬಿಸಿಕೊಂಡು, ದುಡಿಮೆಯ ಗಾಣದ ಬಡಕಲು ಎತ್ತಾಗಲು ಸಿದ್ಧ

ವಾಯಿತು. ನನ್ನ ತಂದೆ ಬದುಕಿಕೊಂಡ—ನನಗಾಗಿ ಬದುಕಿಕೊಂಡ.

ಅಜ್ಜಿ ಗುಡಿಯ ದೇವರಿಗೆ ಹರಕೆ ಹೊತ್ತಿದ್ದರು. ತಂದೆ ಅದನ್ನು ಸಲ್ಲಿಸಿ ಬಂದ. ನಾನು ಪ್ರಸಾದವಾಗಿದ್ದ ಹಣ್ಣನ್ನೂ ಕೊಬರಿಯನ್ನೂ ತಿಂದೆ.

ಆದರೆ, ಆ ಫ್ಯಾಕ್ಟರಿಯ ಗಾಣಕ್ಕೆ ನಮ್ಮ ಎತ್ತಿನ ಅವಶ್ಯತೆ ಇರಲಿಲ್ಲ. ಆ ಜಾಗ ಭರ್ತಿಯಾಗಿತ್ತು. ಅಜ್ಜಿ ಹಾಕಿದ ಅನ್ನ ತಿಂದು, ತಂದೆ ಊರೆಲ್ಲಾ ಅಲೆದ. ಸೌದೆ ಒಡೆಯುವ ಉದ್ಯೋಗದಲ್ಲಿ ಆತ ಮಹಾ ಚತುರನಾದ. ಒಡೆಯುವ ಕೆಲಸ ದೊರೆತಾಗ ಒಂದು ರೂಪಾಯಿ ಸಂಪಾದನೆಯಾದರೂ ಆಯಿತೆ. ಇಲ್ಲದೆ ಹೋದಾಗ ಬರಿಗೈ.

ಆದರೆ ಊರು ಬೆಳೆಯುತ್ತಿತ್ತು. ಹೊಸ ಫ್ಯಾಕ್ಟರಿಯ ಹೊಸ ಚಿಮಿಣಿಗಳು ಆಕಾಶಕ್ಕೆ ಹೊಗೆಯುಗುಳುತ್ತಿದ್ದುವು. ಹೊಸದೊಂದು ಕಾರ್ಖಾನೆಯಲ್ಲಿ ನನ್ನ ತಂದೆ ಕೆಲಸ ಸಂಪಾದಿಸಿದ.

ನಾನು ಹೈ ಸ್ಕೂಲು ಸೇರಿದೆ. ಕಲಿತವರೆಲ್ಲಾ ದೊಡ್ಡಮನುಷ್ಯರಾಗುವುದಿಲ್ಲವೆಂದು ಈಗೀಗ ನನಗೆ ಅರಿವಾಗುತ್ತಿತ್ತು. ಹೈ ಸ್ಕೂಲಿನ ದೊಡ್ಡ ಕಟ್ಟಡವನ್ನು ದಾಟಿದಮೇಲೆ ಕಾಲೇಜಿನ ಇನ್ನೊಂದು ದೊಡ್ಡ ಕಟ್ಟಡ ಇದೆ ಎಂಬುದನ್ನು ತಿಳಿದೆ. ಈ ಹಾದಿಗೆ ಕೊನೆಯೇ ಇಲ್ಲವೇನೋ ಎನ್ನಿಸುತ್ತಿತ್ತು. ಬೌದ್ಧಿಕ ಹಸಿವು ಮೆಲ್ಲಮೆಲ್ಲನೆ ನನ್ನನ್ನು ಕಾಡತೊಡಗಿತ್ತು. ಅದೇ ಆಗ ಬರುತ್ತಿದ್ದ ಕನ್ನಡ ಪುಸ್ತಕಗಳನ್ನೆಲ್ಲಾ ಓದಿದೆ. ಇಂಗ್ಲಿಷ್ ಭಾಷೆಯ ಬೇಲಿಯನ್ನು ದಾಟಿ, ಅದರ ಕಥೆಗಳನ್ನು ತಿಳಿದುಕೊಳ್ಳಲು ಯತ್ನಿಸಿದೆ ಚಿಕ್ಕ ಹುಡುಗನಾಗಿದ್ದ ನಾನು ಎತ್ತರವಾಗಿ ಬೆಳೆಯುತ್ತಲಿದ್ದೆ. ಕಾಲ್‌ಚೆಂಡಿನ ಕಣ, ನನ್ನ ಸಂಜೆಯ ಸ್ನೇಹಿತನಾಗಿತ್ತು. ಚೆಂಡನ್ನು ತುಳಿದು ದೂರಕ್ಕೆ ತಳ್ಳಿದಾಗ ಅಮಿತ ಆನಂದವಾಗುತ್ತಿತ್ತು. ನನ್ನ ಹೊಡೆತದಿಂದ ಸೋಲಾದಾಗ ತಲೆಯ ಕ್ಯಾಪನ್ನು ಬದಿಗೆ ಹಾರಿಸಿ, ಎಲ್ಲರನ್ನೂ ಕಂಡು ನಗುವ ದಿಟ್ಟತನ ತೋರುತ್ತಿದ್ದೆ.

ಆದರೆ ಮನೆಗೆ ಬಂದಾಗ ನಾನು ನಗುತ್ತಿರಲಿಲ್ಲ. ಈಗಲೂ ಅಜ್ಜಿಯ ಎಮ್ಮೆಗಳ ಹಾಲೆತ್ತಿಕೊಂಡು ವರ್ತನೆ ಮನೆಗಳಿಗೆ ಹೋಗಿ

ಬರುತ್ತಿದ್ದೆ. ಅಜ್ಜಿಗೆ ವಯಸ್ಸಾಗುತ್ತಲಿತ್ತು. ಆದರೂ ಆಕೆ ನನ್ನ ಬದಲು ತಾನೇ ಸೆಗಣಿ ಎತ್ತತೊಡಗಿದರು. ಆಕೆ ಮಡಿಯಲ್ಲಿದ್ದಾಗ ನಾನು ಸಮೀಪ ಹೋಗುತ್ತಿರಲಿಲ್ಲ. ಆದರೆ ಒಮ್ಮೊಮ್ಮೆ ಮಡಿಯನ್ನೂ ಮರೆತು ದೊಡ್ಡ ಮನುಷ್ಯನಾಗಲಿದ್ದ ನನ್ನನ್ನು ಗೇಲಿಮಾಡುತ್ತಾ ಮಾಡುತ್ತಾ ಮೈ ಮುಟ್ಟುತ್ತಿದ್ದರು. ಆಮೇಲೆ, "ಅಯ್ಯೋ ಪಾಪಿ ಮುಂಡೇಗಂಡ!" ಎಂದು ಪ್ರೀತಿಯಿಂದ ಶಪಿಸುತ್ತಾ, ಬಾವಿಯಿಂದ ನೀರು ಸೇದಿ ತಲೆಗೆ ತಣ್ಣೀರು ಸುರಿದುಕೊಳ್ಳುತ್ತಿದ್ದರು.

ತಂದೆಯ ವಿದ್ಯಾಪಾಂಡಿತ್ಯದ ಮಟ್ಟವನ್ನು ಮೀರಿ ನಾನು ಹೋಗಿದ್ದೆ. ಆತನ ಪಾಲಿಗೆ, ನಾನು ಹೆಚ್ಚು ವಿದ್ಯಾವಂತ. ಈ ಪ್ರಪಂಚದಲ್ಲಿ ಆತನಿಗೆ ಮುಖ್ಯವಾಗಿ ತೋರುತ್ತಿದ್ದುದು—ಎರಡೇ ವಸ್ತುಗಳು. ಒಂದು ವಿದ್ಯೆ; ಇನ್ನೊಂದು ಹಣ. ವಿದ್ಯೆಗೆ 'ಅವನು ಗೌರವಕೊಡುತ್ತಿದ್ದ. ಹಣಕ್ಕೆ ಹೆದರುತ್ತಿದ್ದ. ಆತನನ್ನು ಕಂಡಾಗ ನನ್ನ ಮುಖ ಬಾಡುತ್ತಿತ್ತು. ಆತನ ಯಾತನೆಗೆಲ್ಲಾ ನಾನೇ ಕಾರಣ ನೆಂಬ ಗ್ರಹಿಕೆ ನನ್ನನ್ನು ಬಾಧಿಸುತ್ತಿತ್ತು. ಅವನು ಯಾವಾಗಲೂ ಒಳ್ಳೆಯವನೇ ಆಗಿದ್ದ, ಸತ್ಯವಾದಿಯಾಗಿದ್ದ. ಯಾರಿಗೂ ಬಾಗಿ ನಡೆಯುತ್ತಿರಲಿಲ್ಲ. ಆದರೆ ಅದು ಹಿಂದಿನ ಮಾತು. ಈಗಲೂ ಆತ ಒಳ್ಳೆಯವನಾಗಿದ್ದ ನಿಜ. ಆದರೆ ದಿನ ನಿತ್ಯದ ಕೆಲಸದ ನಡುವೆ ಸತ್ಯ ಹೇಳಿದರೆ ನಷ್ಟ ಉಂಟೆಂಬುದನ್ನು ಅವನು ಕಲಿತಿದ್ದ. ಅವನ ಬಡ ತನವನ್ನು ಕಂಡು ಅಣಕಿಸುತ್ತಿದ್ದ ಶಕ್ತಿಗಳಿಗೆ, ಅವನು ಬಾಗಿ ನಡೆ ಯಲೇಬೇಕಾಗಿತ್ತು. ಮಗನನ್ನು ವಿದ್ಯಾವಂತನಾಗಿ ಮಾಡುವ ಮಹಾ ಯಾಗದ ಅಗ್ನಿಕುಂಡದಲ್ಲಿ ಆತನ ಜೀವ ಸ್ವಲ್ಪ ಸ್ವಲ್ಪವಾಗಿ ಸುಟ್ಟು ಸುಣ್ಣವಾಗುತ್ತಿತ್ತು.

ಒಂದು ದಿನ ಸ್ವಲ್ಪ ಬೇಗನೆ ಶಾಲೆಗೆ ಹೋಗಿದ್ದೆ. ಹುಡುಗರು ಆದೇ ಆಗ ಒಬ್ಬೊಬ್ಬರಾಗಿ ಬರುತ್ತಿದ್ದರು. ನಾನು ಹೆಬ್ಬಾಗಿಲನ್ನು ಸಮೀಪಿಸುತ್ತಿದ್ದಂತೆ ದೊಡ್ಡದೊಂದು ಕಾರು ಹಾರನ್ ಮಾಡುತ್ತಾ ಬಂತು. ಬೆಲೆ ಬಾಳುವ ಉಣ್ಣೆಯ ಪೋಷಾಕು ಧರಿಸಿ ಜರಿಯ ರುಮಾಲು ಸುತ್ತಿದ್ದ ದೊಡ್ಡಮನುಷ್ಯರೊಬ್ಬರು ಒಳಗೆ ಕುಳಿತಿದ್ದರು.

ಡ್ರೈವರ್ ಕಾರು ನಿಲ್ಲಿಸಿದ. ಒಳಗಿದ್ದ ವ್ಯಕ್ತಿ ಮುಖ ಹೊರಹಾಕಿ, ಇಂಗ್ಲಿಷಿನಲ್ಲಿ "ಸ್ವಲ್ಪ ಇತ್ತ ಬಾರಪ್ಪಾ" ಎಂದರು.

ನಾನು ತಿರುಗಿ ನೋಡಿದೆ. ಮತ್ತೆ ಅವರನ್ನು ಸಮೀಪಿಸುತ್ತಾ ಇಂಗ್ಲಿಷಿನಲ್ಲೇ, "ನಾನು ನಿಮಗೇನು ಸಹಾಯಮಾಡಬಲ್ಲೆ?" ಎಂದೆ.

"ಹೆಡ್‌ಮೇಷ್ಟ್ರು ರಂಗನಾಥನ್ ಬಂದಿದಾರೇನು?"

"ಇನ್ನೂ ಬಾಗಿಲು ತೆರೆದೇ ಇಲ್ಲ. ಅವರು ಬರೋದು ಇನ್ನೂ ತಡವಾಗಬಹುದು ಸಾರ್."

"ನಿನಗೆ ಅವರ ಮನೆ ಗೊತ್ತೇನು?"

ಇಂಗ್ಲಿಷ್ ಭಾಷೆಯಲ್ಲಿ ಇದೊಂದು ಅನುಕೂಲ. ಯೂ ಎಂದರೆ ನೀವು ಎಂದೂ ಆಗಬಹುದು, ನೀನು ಎಂದೂ ಆಗಬಹುದು. ಗೌರವದ ಸಂಬೋಧನೆಯಾಗಲಿ, ಏಕವಚನದ ಕರೆಯಾಗಲಿ ಎರಡೂ ಒಂದೇ. ಅದರ ಉಪಯೋಗ ಆಗ ನನಗೆ ತಿಳಿದಿರಲಿಲ್ಲ........ನನ್ನಂಥ ಹುಡುಗನನ್ನು ನೀವು ಎಂದು ಯಾರಾದರೂ ಯಾಕೆ ಸಂಬೋಧಿಸುತ್ತಾರೆ?

"ಗೊತ್ತು ಸಾರ್."

"ಅಲ್ಲಿತನಕ ಬರ್ತೀಯಾ? ಸ್ಕೂಲ್ ಟೈಮ್‌ಗೆ ಸರಿಯಾಗಿ ನಿನ್ನ ಇಲ್ಲಿಗೆ ತಲಿಪಿಸ್ತೀನಿ"

"ಆಗ್ಬಹುದು ಸಾರ್."

ಡ್ರೈವರ್ ತನ್ನ ಪಕ್ಕದ ಬಾಗಿಲು ತೆರೆದ. ಕಾರಿನವರು ತಮ್ಮ ಪಕ್ಕದ ಬಾಗಿಲು ತೆರೆದರು. ಅವರ ಸ್ವರ ಕೇಳಿಸಿತು.

"ಇಲ್ಲೇ ಬಾಪ್ಪ."

ಡ್ರೈವರ್ ತನ್ನ ಬದಿಯ ಬಾಗಿಲು ಮುಚ್ಚಿದ. ಮುಚ್ಚುತ್ತಾ ನನ್ನನ್ನು ನೋಡಿದ. ನಾನು ಒಳಹೊಕ್ಕು ವಿನಯದಿಂದ ಸೀಟಿನ ಇನ್ನೊಂದು ಮೂಲೆಯಲ್ಲಿ ಕುಳಿತೆ. ಒಂಭತ್ತು ವರ್ಷಗಳಿಗೆ ಹಿಂದೆ ಈ ನಗರಕ್ಕೆ ಬಂದ ಮೊದಲ ಸಂಜೆ ಬೆಳಕನ್ನುಗುಳುತ್ತಿದ್ದ ಎರಡು ಕಣ್ಣುಗಳ ಪುಟ್ಟ ವಾಹನಗಳನ್ನು ನಾನು ಕಂಡಿದ್ದೆನಲ್ಲವೆ? ಈಗ

ಹಗಲು ಹೊತ್ತು. ಆ ಕಣ್ಣುಗಳಲ್ಲಿ ಬೆಳಕಿರಲಿಲ್ಲ. ಆದರೆ ಅಂತಹದೊಂದು ವಾಹನದೊಳಗೆ ನಾನು ಕುಳಿತಿದ್ದೆ—ನನ್ನ ಜೀವಮಾನದಲ್ಲೇ ಮೊದಲ ಬಾರಿ ಕಾರಿನೊಳಗೆ ಕುಳಿತಿದ್ದೆ.

ನಾನು ಹಾದಿಯ ನಿರ್ದೇಶಗಳನ್ನು ತೊಡುತ್ತಾ ಬಂದೆ. ನನಗೆ ನನ್ನ ಆತ್ಮ ವಿಶ್ವಾಸದ ಬಗ್ಗೆ ಹೆಮ್ಮೆ ಎನಿಸಿತು. ಆ ಹೊಸ ಪರಿಚಯ, ಶ್ರೀಮಂತಿಕೆಯ ಆವರಣ, ನನ್ನನ್ನು ಅಧೀರನಾಗಿ ಮಾಡಿರಲಿಲ್ಲ. ನೇರವಾದ ರಸ್ತೆಯಲ್ಲಿ ಕಾರು ಓಡುತ್ತಿದ್ದಾಗ ಅವರು ಕೇಳಿದರು.

"ಯಾವ ಕ್ಲಾಸ್‌ನಲ್ಲಿ ಓದ್ತಾ ಇದ್ದೀಯ ಮಗು?"

"ಫೋರ್ತ್ ಫಾರಂ ಸಾರ್."

ಅವರು, ನನ್ನ ಕ್ರಾಪಿನಿಂದ ಹಿಡಿದು ಪಾದದ ತನಕ ದೃಷ್ಟಿ ಹಾಯಿಸಿದರು. ಅಂತಹ ಪರೀಕ್ಷೆಯಿಂದ ಯಾವಾಗಲೂ ನನಗೆ ಕಸಿವಿಸಿಯಾಗುತ್ತಿತ್ತು. ನನ್ನ ಬಟ್ಟೆಬರೆ ಯಾವಾಗಲೂ ನಾನು ಹುಟ್ಟಿದ ವರ್ಗವನ್ನೂ ನನ್ನ ಆರ್ಥಿಕ ಇರುವಿಕೆಯನ್ನೂ ಬಯಲು ಮಾಡುತ್ತಿತ್ತು.

ನಾವು ಹೆಡ್‌ಮಾಸ್ಟರವರ ಮನೆ ಸೇರಿದೆವು. ಆ ದೊಡ್ಡ ಮನುಷ್ಯರು ಕೆಳಕ್ಕಿಳಿದು, "ಹಲೋ ರಂಗ" ಎನ್ನುತ್ತಾ ಬಲು ಸಲಿಗೆಯಿಂದ ಮಾತನಾಡಿದರು. ಪಕ್ಕಕ್ಕೆ ತಿರುಗಿ, "ಡ್ರೈವರ್, ಇವರನ್ನ ಸ್ಕೂಲಿಗೆ ಬಿಟ್ಬಿಟ್ಟು ಬಾ" ಎಂದರು. ನನ್ನನ್ನು ನೋಡಿದ ನನ್ನ ವಿದ್ಯಾ ಗುರುವಿಗೆ ನಾನು ವಂದಿಸಿದೆ.

"ಯಾರು ಚಂದ್ರಶೇಖರನಾ? ಪರವಾಗಿಲ್ಲ, ನಡಕೊಂಡು ಹೋಗ್ತಾನೆ" ಎಂದು ಅವರು ರಾಗವೆಳೆದರು.

"ಛೆ! ಛೆ! ಕಾರ್‌ನಲ್ಲೆ ಹೋಗ್ಲಿ. ತುಂಬ ಒಳ್ಳೇ ಹುಡುಗ."

ಆಗ ನನ್ನ ವಿದ್ಯಾಗುರುವಿನ ಚರ್ಯೆಯಲ್ಲಿ ಸ್ವಲ್ಪ ಬದಲಾವಣೆಯಾಯಿತು.

"ಹೌದು, ಹೌದು. ಅವನು ನನ್ನ ಒಳ್ಳೇ ವಿದ್ಯಾರ್ಥಿ."

ನಾನಾಗಿಯೇ ನಡುವೆ ಬಾಯಿಹಾಕಿ, "ಪರವಾಗಿಲ್ಲಾ ಸಾರ್ ನಡಕೊಂಡೇ ಹೋಗ್ತೀನಿ." ಎಂದೆ. "ಇನ್ನೂ ಟೈಮ್ ಇದೆ,"

ಎಂದು ಸ್ವರ ಸೇರಿಸಿದೆ.

ಹಾಗೆ ಹೇಳಿದಾಗ ನನಗೆ ಆಶ್ಚರ್ಯವೆನಿಸಿತು. ಸಮಯದ ಮಹತ್ವ ಬಲು ಚೆನ್ನಾಗಿ ತಿಳಿದವರ ಹಾಗೆ ನಾನು ಮಾತನಾಡಿದೆ ನಲ್ಲವೆ? ಆದರೆ ಮುಖ್ಯೋಪಾಧ್ಯಾಯರು ದಿನ ನಿತ್ಯವೇನೂ ಕಾರಿನಲ್ಲಿ ಶಾಲೆಗೆ ಬರುತ್ತಿರಲಿಲ್ಲ. ತಮಗಿಲ್ಲದ ಸಿರಿವಂತಿಕೆ ಬಡ ವಿದ್ಯಾರ್ಥಿಗೆ ಯಾಕೆ ಬೇಕು?—ಎಂದು ಅವರು ಯೋಚಿಸುವುದು ಸ್ವಾಭಾವಿಕವಾಗಿತ್ತು. ಹೀಗೆ ಅವರ ಸ್ವಭಾವದ ಅಭ್ಯಾಸ ಮಾಡುತ್ತಾ ಕ್ಷಣ ಕಾಲ ಅಲ್ಲಿ ನಿಂತೆ.

ಜರಿ ಪೇಟದವರು ಮತ್ತೂ ಒಂದು ಮಾತು ಹೇಳಿದರು.

"ಬಹಳ ಚೆನ್ನಾಗಿ ಇಂಗ್ಲಿಷ್ ಮಾತಾಡ್ತಾನೆ. ಫೋರ್ತ್ ಫಾರಂ ಹುಡುಗ ಹೀಗೆ ಮಾತಾಡೋದು ಸಾಮಾನ್ಯವಲ್ಲ. ಯಾರ ಮನೆತನದವನು ಈತ?"

ನಾನು ಅಲ್ಲಿ ನಿಲ್ಲಲಿಲ್ಲ. "ಬರ್ತೀನಿ ಸಾರ್" ಎನ್ನುತ್ತಾ ಬೇಗ ಬೇಗನೆ ಅಲ್ಲಿಂದ ಹೆಜ್ಜೆ ಇಟ್ಟೆ. ನನ್ನ ಕೊನೆಯ ಮಾತುಗಳು ಕ್ಷೀಣ ಸ್ವರದಲ್ಲೇ ಹೊರಬಿದ್ದಿದ್ದುವು. ಹೃದಯದ ಅಣೆಕಟ್ಟು ಬಿರಿಯುವ ಚಿಹ್ನೆ ತೋರಿತು. ನಾನು ವೇಗ ವೇಗವಾಗಿ ನಡೆದೆ. ....ನಾನು ಚೆನ್ನಾಗಿ ಇಂಗ್ಲಿಷ್ ಮಾತಾಡುತ್ತೇನೆ. ಇದರೆ ನಾನು ಯಾವ ಮನೆತನದವನು? ಮನೆತನಕ್ಕೂ ಇಂಗ್ಲಿಷ್‌ಗೂ ಇರುವ ಬಾಂಧವ್ಯ....

ಆಮೇಲೆ ಒಂದು ಸಂಜೆ ಮುಖ್ಯೋಪಾಧ್ಯಾಯರು ನನ್ನನ್ನು ಕರೆದರು.

"ಆ ದಿನ ನೀನು ಕರ್ಕೊಂಡು ಬಂದಿದ್ರೋರು ನನ್ನ ಬಾಲ್ಯ ಸ್ನೇಹಿತ, ಜತೇಲೆ ಓದ್ದೋರು. ಈಗ ದೊಡ್ಡ ಶ್ರೀಮಂತ. ಉತ್ತರ ಹಿಂದೂಸ್ಥಾನದಲ್ಲಿದ್ದೋರು ಇಲ್ಲಿಗೇ ಬಂದಿದ್ದಾರೆ. ನಿನ್ನ ನೋಡಿ ತುಂಬ ಮೆಚ್ಕೊಂಡ್ರು. ಯಾವತ್ತಾದರೂ ನಿಂಗೆ ಏನಾದರೂ ಸಹಾಯಬೇಕಾದರೆ ಅವರ್‍ನ ಕಾಣಬೇಕಂತೆ ನಿನ್ನ ವಿಷಯ ತಿಳಿದು ತುಂಬ ದುಃಖವಾಯಿತು ಅವರಿಗೆ."

"ಆಗಲಿ ಸಾರ್."

....... ....... .......

ಅಂತಹ ಸಹಾಯ ಕೇಳುವ ಒಂದು ಅವಕಾಶ ನನಗೆ ದೊರೆಯದೇ ಹೋಗಲಿಲ್ಲ.

ತಂದೆ, ದೊಡ್ಡ ಮನುಷ್ಯರೊಬ್ಬರು ನನ್ನ ಬಗ್ಗೆ ಮಾಡಿದ ಪ್ರಶಂಸೆಯನ್ನು ಕೇಳಿದಾಗ ಬಹಳ ಸಂತೋಷಪಟ್ಟ. "ನೋಡ್ದಾ ಚಂದ್ರು? ವಿದ್ಯೆ ಅಂದರೆ ಹಿಂಗೇನೆ. ನೀನು ಅವರ್‍ನ ನೆಪ್ನಲ್ಲಿ ಇಟ್ಕೊಬೇಕು. ಒಂದಲ್ಲ ಒಂದಿವ್ಸ ಅವರಿಂದ ಏನಾರ ಪ್ರಯೋಜನ ಆದೀತು."

ಆ ಪ್ರಯೋಜನವನ್ನು ಪಡೆದುಕೊಳ್ಳುವ ಯತ್ನ ಮಾತ್ರ ಈ ರೀತಿ ಆಗುವುದೆಂದು ನನಗೆ ತಿಳಿದಿರಲಿಲ್ಲ. ಬಡಕಲು ಬಡಕಲಾಗಿದ್ದ ನನ್ನ ತಂದೆ ಆ ಬೇಸಗೆಯಲ್ಲಿ ಮತ್ತೆ ಹಾಸಿಗೆ ಹಿಡಿದ. ಪರೀಕ್ಷೆಮಾಡಿದ ವಿಚಕ್ಷಣ ವೈದ್ಯರು "ಇದು ಕ್ಷಯದ ಚಿಹ್ನೆ" ಎಂದರು. ಅಜ್ಜಿಗೆ ದಿಗಿಲಾಯಿತು. ನಾನು ದಿಗ್ಮೂಢನಾದೆ. ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದ ತಂದೆ, ಭವಿತವ್ಯದ ಬಗ್ಗೆ ನಿರಾಶೆ ತಳೆದ. ತನ್ನ ಕನಸುಗಳೆಲ್ಲಾ ಮಣ್ಣುಗೂಡುವವೆಂದು ಅವನಿಗೆ ತೋರಿತು.

ನೂರಾರು ರೂಪಾಯಿಗಳಿದ್ದರೆ ಆ ಕಾಹಿಲೆಯಿಂದ ಪ್ರಾಣಕ್ಕೆ ಅಪಾಯವಾಗದಂತೆ ಮಾಡುವುದು ಸಾಧ್ಯವಿತ್ತಂತೆ. ನೂರಾರು ರೂಪಾಯಿ! ನಮ್ಮಲ್ಲಿದ್ದನ್ನುವ ಇಪ್ಪತ್ತು ಮೂವತ್ತು ರೂಪಾಯಿಗಳೂ ಇರಲಿಲ್ಲ. ಈ ನಡುವೆ ಉತ್ತೀರ್ಣನಾದ ನಾನು ಮೇಲಿನ ತರಗತಿಗೆ ಹೋಗಬೇಕು. ಹೊಸ ಪುಸ್ತಕಗಳು, ಫೀಸು, ಮತ್ತಿತರ ಖರ್ಚು....

ಯೋಚಿಸಿ ಯೋಚಿಸಿ ನಾನು ನಮ್ಮ ಮುಖ್ಯೋಪಾಧ್ಯಾಯರ ಮನೆಗೆಹೋದೆ. ಅವರು ಯಾವುದೋ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ತಮ್ಮ ವಿದ್ವತ್ತಿನ ತಕ್ಕಡಿಯಲ್ಲಿ ತೂಗುತ್ತಿದ್ದರು. ಎದ್ದುನಿಂತು ನಾಲ್ಕು ಹೆಜ್ಜೆ ಹೊರಬಂದು, "ಏನಪ್ಪಾ ಚಂದ್ರು, ಏನ್ಸಮಾಚಾರ?" ಎಂದು ಕೇಳಿದರು.

ನಾನು ಅಲ್ಲೇ ನಿಂತು ಸೂಕ್ಷ್ಮವಾಗಿ ನನ್ನ ತೊಂದರೆಗಳ ಬಗ್ಗೆ ಅವರಿಗೆ ವರದಿಯನ್ನಿತ್ತೆ. ತನ್ನಿಂದಲೆ ಸಹಾಯ ಕೇಳಲು ಬಂದಿರುವನೇನೋ ಎಂಬ ಸಂದೇಹ ಅವರಲ್ಲಿ ಮೂಡಿದಂತೆ ತೋರಿತು.

"ಆ ದಿನ ಬಂದಿದ್ರಲ್ಲಾ ಸಾರ್, ಅವರ ಅಡ್ರೆಸ್ ಸ್ವಲ್ಪ

ಕೊಡ್ತೀರಾ ಸಾರ್ ?"

ಯಾವುದೋ ಗಂಡಾಂತರ ಕಳೆದವರಂತೆ ಅವರು ಪ್ರಸನ್ನ ರಾದರು. ಅವರ ಹಣೆಯ ಉದ್ದಕ್ಕೂ ಇದ್ದ ಮೂರು ನೆರಿಗೆಗಳು ಮಾಯವಾದುವು. ಆದರೆ ಯಾರ ಅಡ್ರೆಸೆಂಬುದು ಅವರಿಗೆ ಹೊಳೆ ಯಲೇ ಇಲ್ಲ.

"ಯಾರೊ ಚಂದ್ರಶೇಖರ?"

"ಅವರೇ ಸಾರ್, ನಿಮ್ಮ ಕ್ಲಾಸ್‌ಮೇಟು ಅಂದರಲ್ಲಾ ಸಾರ್, ಅವರೇನೆ."

"ಓ ಸ್ವಾಮಿನಾ? ಸರಿಸರಿ, ಜ್ಞಾಪಕ ಬಂತು.

"ನೀವೇನಾದರೂ ಒಂದು ಚೀಟಿ ಕೊಟ್ರೆ ಅವರತ್ತಿರ ಹೋಗ್ತೀನಿ."

"ಬೇಡ. ಬೇಡ....ಚೀಟಿ ಒಂದೂ ಬೇಡ, ಅಡ್ರೆಸ್ ಕೊಟ್ಟಿರ್ತೀನಿ ನೋಡ್ಕೊಂಡು ಬಾ."

ಅವರು ವಿಳಾಸ ಕೊಟ್ಟರು. ಸಂಜೆ ಆ ಮನೆ ಹುಡುಕಿಕೊಂಡು ನಾನು ಹೋದೆ. ಹೆಚ್ಚು ಜನ ವಸತಿಯಿಲ್ಲದ ಶಾಂತ ಆವರಣದಲ್ಲಿ ಆ ಮಹಡಿಯ ಮನೆ ಗಂಭೀರವಾಗಿ ನಿಂತಿತ್ತು. ಅದರ ಸುತ್ತಲೂ ಉದ್ಯಾನ. ಬಣ್ಣ ಬಣ್ಣದ ಹೂಗಳು. ಬಣ್ಣಬಣ್ಣದ ಎಲೆಗಳು. ಅದರ ಸುತ್ತಲೂ ಸಿಮೆಂಟಿನ ಅಡ್ಡಗೋಡೆ. ಅದರಮೇಲೆ ಕಬ್ಬಿಣದ ಮುಳ್ಳುಬೇಲಿ. ನಾನು ಆ ಮನೆಯನ್ನು ಸಮೀಪಿಸುತ್ತಿದ್ದಂತೆ ದೀಪ ಹಚ್ಚಿದರು. ಆ ಮನೆಯ ಕೊಠಡಿಗಳು ಬೆಳಗಿದುವು. ರೇಡಿಯೋ ಸಂಗೀತ ಅಲೆಯಲೆಯಾಗಿ ಹೊರಬೀಳುತ್ತಿತ್ತು. ಹದಿನಾರು ಹದಿನೆಂಟರ ಹುಡುಗಿಯೊಬ್ಬಳು ಸರಪಳಿಹಾಕಿ ಹಿಡಿದಿದ್ದ ದೊಡ್ಡ ಸೀಮೆನಾಯಿ ಯೊಡನೆ ಗೇಟಿನ ಬಳಿ ಬಂದು ನಿಂತಿದ್ದಳು. ಆಕೆ ಲಾವಣ್ಯವತಿಯೇ ಇದ್ದಿರಬೇಕು. ಆಗ ನನಗೆ ಎಲ್ಲ ಹುಡುಗಿಯರೂ ಒಂದೇ ರೀತಿಯಾಗಿ ತೋರುತ್ತಿದ್ದರು. ಅವರ ಬಣ್ಣಬಣ್ಣದ ಸೀರೆಗಳೂ ಜಡೆರಿಬ್ಬನ್‌ಗಳೂ ಹಾರ ಬಳೆಗಳೂ ಎಲ್ಲವೂ ಒಂದೇ ರೀತಿ. ಬೀದಿಯಲ್ಲಿ ಧೈರ್ಯವಾಗಿ ನಡೆಯಬಲ್ಲ ಹುಡುಗಿಯರೆಲ್ಲಾ ಶ್ರೀಮಂತರೆಂಬುದು ನನಗೆ ಗೊತ್ತಿತ್ತು.

ಮೈತುಂಬ ಸಾದಾ ಸೀರೆಯ ಸೆರಗು ಹೊದ್ದುಕೊಂಡು ಬರಿ ಕಾಲಲ್ಲಿ ಬಾಗಿದ ತಲೆಯೊಡನೆ ನಡೆದುಹೋಗುತ್ತಿದ್ದವರೆಲ್ಲಾ ಬಡಹುಡುಗಿಯರು........ಆಕೆಯ ಬಗ್ಗೆ ಹೆಚ್ಚು ಯೋಚಿಸುವ ತಾಳ್ಮೆ ನನಗಿರಲಿಲ್ಲ.

ನಾನು ಗೇಟಿನ ಬಳಿ, ಹೊರಗೆ ನಿಂತೆ. ನನಗೆ ಸಾಮಾನ್ಯವಾಗಿ ಯಾವ ಅಂಜಿಕೆಯೂ ಇರಲಿಲ್ಲ. ಆದರೆ ಈಗ ಹೃದಯದಲ್ಲಿ ಅಳುಕು ಗರಿಗೆದರುತ್ತಿತು. ಯಾವುದೋ ನನ್ನದಲ್ಲದ ಹೊಸ ಲೋಕದ ಹೊಸ್ತಿಲಲ್ಲಿ ನಿಂತ ನಾನು, ಅನಿರೀಕ್ಷಿತವಾಗಿ ಒದಗಬಹುದಾದ ಅಪಾಯಗಳೇನಾದರೂ ಇವೆಯೆ ಎಂದು ಚಿಂತಿಸುತ್ತಿದ್ದೆ. ಆ ನಾಯಿಯ ಒಡತಿ ನನ್ನನ್ನೆ ನೋಡಿದಳು. ಸಂಶಯಗ್ರಸ್ತ ದೃಷ್ಟಿಯಿಂದಲೇ ನನ್ನನ್ನು ನೋಡುತ್ತಿದ್ದಹಾಗೆ ತೋರಿತು. ಮಾತನಾಡಬೇಕೆಂದು ಅವಳು ಬಾಯಿ ತೆರೆಯುತ್ತಿದ್ದಳು. ನಾನೇ ಮುಂದಾಗಿ, ಅವಳ ಪಾಲಿನ ಕಷ್ಟವನ್ನು ತಪ್ಪಿಸಿದೆ. ಸ್ವರ ಎತ್ತುವುದಕ್ಕೆ ಮುಂಚೆಯೇ, ಹೊರಟುಹೋಗು ಎಂದು ಅವಳಿಂದ ಹೇಳಿಸಿಕೊಳ್ಳಲು ನಾನು ಸಿದ್ಧನಿರಲಿಲ್ಲ.

" ರಾಮಸ್ವಾಮಿಯವರ ಮನೆ ಇದೇನಾ ? "

ಆಕೆಯ ಹುಬ್ಬು ಗಂಟಿಕ್ಕಿತು :

" ಏನೆಂದೆ ? "

" ಲೋಕಪರಾಯಣ ರಾಮಸ್ವಾಮಿಯವರ ಮನೆ ಇದೇನಾ ?"

ನನ್ನ ತಪ್ಪು ಆಗಲೆ ನನಗರ್ಥವಾಗಿತ್ತು. ತಡವರಿಸಿಕೊಳ್ಳುತ್ತ ಅದನ್ನು ತಿದ್ದಲೆತ್ನಿಸಿದೆ. ಆಕೆಯ ಹುಬ್ಬುಗಳು ಮತ್ತೆ ಮೊದಲಿನ ಸ್ಥಾನಕ್ಕೆ ಬಂದವು. " ಹಾಗೆ ಬೊಗಳು " ಎಂದು ಅವಳು ಹೇಳಿದ ಹಾಗೆ ನನಗೆ ಭಾಸವಾಯಿತು.

" ಪಪ್ಪ ಇಲ್ಲ. ಅವರು ಕ್ಲಬ್ಬಿಂದ ಬರೋದು ಎಂಟು ಘಂಟೆಗೆ ........ಏನಾಗಬೇಕು ನಿಂಗೆ ? "

ಆಗಿನ್ನೂ ಏಳು ಹೊಡೆದಿತ್ತು ಅಷ್ಟೆ. ಒಂದು ಘಂಟೆಯ ಹೊತ್ತು ನಾನು ಅಲ್ಲೆ ಕಾದಿರಬೇಕು. ಆ ಯೋಚನೆಯಲ್ಲಿ ರಾಮಸ್ವಾಮಿಯವರ ಮಗಳು ಹೇಳಿದ ಕೊನೆಯ ಮಾತು ನನಗೆ ಕೇಳಿಸಲಿಲ್ಲ.

" ಏನೆಂದಿರಿ ? " ಎಂದೆ.

ಮತ್ತೆ ಅವಳ ಹುಬ್ಬುಗಳು ಮೇಲಕ್ಕೆ ಹೋಗಿ ವಕ್ರವಾಗಿ ಗಂಟಿಕ್ಕಿದವು. ಆಗ ನೋಡಲು ಅಸಹ್ಯವೆನಿಸುತ್ತಿತ್ತು. ಸುಂದರ ವಾಗಿ ಕಾಣಿಸಿಕೊಳ್ಳುವುದರ ಬದಲು ಇಂತಹ ಮುಖವಿಕಾರಗಳಿಂದ ಅವರೆಲ್ಲಾ ಯಾಕೆ ಹೀಗಾಗುತ್ತಾರೆ ಎಂಬ ಪ್ರಶ್ನೆ ನನ್ನನ್ನು ಕಾಡಿತು.

" ಇಲ್ಲೇನು ಕೆಲಸ ಅಂಪೆ ? "

" ರಾಮಸ್ವಾಮಿಯುವರನ್ನು—ಲೋಕಪರಾಯಣ ರಾಮಸ್ವಾ ಮಿಯುವರನ್ನು—ನೋಡಬೇಕಾಗಿತ್ತು."

ಅವರ ದೊಡ್ಡನಾಯಿ ನಾಲಿಗೆಯನ್ನು ಹೊರಚಾಚಿ ಉಸಿರಾ ಡುತ್ತಾ ಒಡತಿಯ ಮುಖವನ್ನೇ ನೋಡುತ್ತಿತ್ತು. ಆಕೆ ಹುಬ್ಬು ಗಂಟಿಕ್ಕಿದಾಗ ಅದು ನನ್ನೆಡೆಗೆ ದೃಷ್ಟಿ ಹೊರಳಿಸುತ್ತಿತ್ತು.

" ಸರಿ ಹಾಗಾದರೆ. ಈಗ ಹೊರಟುಹೋಗು."

ನಾನು ಅಲ್ಲಿಂದ ಮೆಲ್ಲನೆ ಸ್ವಲ್ಪ ದೂರ ನಡೆದು ಹೋದೆ. ಅಲ್ಲೊಂದು ದೀಪದ ಕಂಬವಿತ್ತು. ಅದಕ್ಕೆ ಒರಗಿ ನಿಂತೆ. ಸಾಧ್ಯವಿದ್ದಿದ್ದರೆ ಆ ಜಂಭದ ಹೇಟಿಗೆ ತಕ್ಕ ಪ್ರತ್ಯುತ್ತರ ಕೊಡಬಹುದಾಗಿತ್ತು. ಆದರೆ ನನಗೆ ಆ ಸ್ವಾತಂತ್ರ್ಯವಿಲ್ಲ. ಹಾಗೆ ಮಾಡಿದರೆ ದೊಡ್ಡಮನುಷ್ಯರಾದ ಲೋಕಪರಾಯಣ ರಾಮಸ್ವಾಮಿಯವರನ್ನು ಕಾಣುವುದೇ ದುಸ್ಸಾಧ್ಯವಾಗುತ್ತಿತ್ತು. ನನ್ನ ಷರಟು ಚಡ್ಡಿಯನ್ನು ನೋಡಿಕೊಂಡೆ. ನಾನು ಒಳ್ಳೆಯ ಬಟ್ಟೆ ಬರೆ ಹಾಕಿ ಬೂಟ್ಸು ಮೆಟ್ಟಿಕೊಂಡು ಬಂದಿದ್ದರೆ, ಆ ಹುಡುಗಿ ಖಂಡಿತವಾಗಿಯೂ ಗೌರವದಿಂದ ಮಾತಾಡುತ್ತಿದ್ದಳು. ಹಿಂದೆ ಆಕೆಯ ತಂದೆಯನ್ನು ಮರುಳುಗೊಳಿಸಿದ್ದ ಇಂಗ್ಲಿಷ್‌ನಲ್ಲೇ ಮಾತನಾಡಿದ್ದರೆ, ಆಕೆ ಹಲೋ ಎನ್ನುತ್ತಿದ್ದಳು. ಆ ಮುಖದ ಮೇಲೆ ಮುಗುಳ್ನಗು ಕಾಣುವುದು ಸಾಧ್ಯವಿತ್ತು. ಆದರೆ ನಾನು ಬಡವ; ನನ್ನ ಲೋಕ ಬೇರೆ........ತಂದೆ ಆ ಬೆಳಿಗ್ಗೆ ಕೆಮ್ಮಿದಾಗ, ನನ್ನ ಕರುಳು ಕತ್ತರಿಸಿದ ಹಾಗೆ ನನಗೆ ನೋವಾಗಿತ್ತು. ತಂದೆಗೆ ಸರಿಯಾದ ಚಿಕಿತ್ಸೆ ಮಾಡಲೇಬೇಕು. ತಂದೆ ಗುಣಮುಖವಾಗಲೇಬೇಕು. ಆಗ ಮಾತ್ರ ನನ್ನ ವಿದ್ಯೆ ಮುಂದುವರಿಯುವುದು ಸಾಧ್ಯ. ತಂದೆಯ ಮನಸ್ಸಿಗೆ

ನಾನು ಸಮಾಧಾನ ಉಂಟುಮಾಡುವುದು ಸಾಧ್ಯ........ ಇಲ್ಲಿ ಈ ನಾಯಿ ಮತ್ತದರ ಯಜಮಾನಿತಿಯೊಡನೆ ನಾನು ಜಗಳವಾಡಿದರೆ ನನ್ನ ಕಾಲಿಗೆ ನಾನೇ ಕಲ್ಲು ಹೇರಿಕೊಂಡ ಹಾಗಾಗುವುದು........

ಹಾಗೆಯೇ ಸ್ವಲ್ಪ ದೂರ ನಡೆದುಹೋದೆ. ಬೀದಿಯಲ್ಲಿ ಯಾರು ಬಂದರು ಹೋದರು ಎಂಬುದರ ಅರಿವೇ ನನಗಿರಲಿಲ್ಲ. ನಾನು ಸುಮ್ಮನೆ ನಡೆದುಹೋದೆ. ತಲೆ ಕೆಳಗೆಹಾಕಿ ಅಸಹಾಯತೆಯ ಕಣ್ಣೀರಿನ ಪ್ರವಾಹವನ್ನು ಹರಿಯಗೊಡುತ್ತಾ ಬೀದಿಯುದ್ದಕ್ಕೂ ನಡೆದೆ. ಕತ್ತಲೆ ಹೊತ್ತು ನನ್ನ ಕಣ್ಣೀರು ಯಾರಿಗೂ ಕಾಣಿಸುತ್ತಿರಲಿಲ್ಲ ಎಂಬುದೇ ನನ್ನ ಪಾಲಿಗೊಂದು ಸಮಾಧಾನವಾಗಿತ್ತು. ನನ್ನಲ್ಲಿ ಬೆಳೆದುಬಂದ ಅಭ್ಯಾಸ ಅದು. ಭಾವನೆಗಳು ತುಂಬಿಕೊಂಡಾಗ ನಾನು ಅವುಗಳನ್ನು ಮುಚ್ಚಿಡುತ್ತಿರಲಿಲ್ಲ. ಬಹಿರಂಗವಾಗಿ ಆ ಭಾವನೆಗಳನ್ನು ಜಾಹೀರುಮಾಡುತಿದ್ದೆ........ಆದರೆ ಅದು ಹಿಂದೆ—ನಾನು ಎಳೆಯವನಾಗಿದ್ದಾಗ.

ಎಂಟು ಹೊಡೆದ ಹೊತ್ತಿಗೇ ನಾನು ಆ ಮನೆಯನ್ನು ಮತ್ತೊಮ್ಮೆ ಸಮಿಪಿಸಿದೆ. ಬೆಳಕು ಉಗುಳುವ ಕಣ್ಣುಗಳ ಆ ಕಾರಿನಲ್ಲಿ ಆ ದೊಡ್ಡ ಮನುಷ್ಯರು ಬಂದಿರಬಹುದು....

ಅಂಗಣದ ಹೊರಗಿನಿಂದ ಮೂರು ನಾಲ್ಕು ಸ್ವರಗಳು "ಕವಳಾ ತಾಯಿ", "ಕವಳಾ ಅಮ್ಮಾ" ಎನ್ನುತ್ತಿದ್ದವು. ಲೋಕಪರಾಯಣರ ಜವಾನನೊ ಏನೊ—ಧಾಂಡಿಗ ವ್ಯಕ್ತಿಯೊಬ್ಬ ಅವರನ್ನು ಓಡಿಸುತ್ತಿದ್ದ. ಅವರ ನಾಯಿ ಗದರಿಕೆಯ ನಟನೆ ಮಾಡುತ್ತಿತ್ತು. ಆ ಬಡ ಭಿಕ್ಷುಕರನ್ನು, ಬಗುಳಿ ಓಡಿಸುವುದು ತನ್ನ ಅಂತಸ್ತಿಗೆ ಸರಿಹೋಗದ ಕೆಲಸ ಎಂದು ಅದು ಭಾವಿಸಿತ್ತೇನೋ.

ನಾನು ಗೇಟನ್ನು ಸಮಿಪಿಸಿದಾಗ ಅಲ್ಲೇ ಇದ್ದ ಜವಾನ, "ಏನಪ್ಪಾ? ನಿಂದೇನು ಇನ್ನು?" ಎಂದ.

ಸುಮ್ಮನೆ ಭೇಟಿಗೆ ಬಂದವನೆಂದು ಹೇಳಿದರೆ, ಬಂದ ಹಾದಿಗೆ ಸುಂಕವಿಲ್ಲವೆಂಬಂತೆ ವಾಪಸ್ಸು ಹೋಗಬೇಕಾದೀತು ಎಂದು ಭಾವಿಸಿ, ನಾನು ಮಾತಿನ ಸರಣಿಯನ್ನು ತೀರ್ಮಾನಿಸಿಕೊಂಡೆ.

" ಹೆಡ್‌ಮೇಷ್ಟ್ರು ರಂಗನಾಥನ್ ಕಳಿಸಿದಾರೆ. ಲೋಕಪರಾಯಣ ರಾಮುಸ್ವಾಮಿಯವರನ್ನು ತುರುತ್ತಾಗಿ ನೋಡಬೇಕಾಗಿದೆ," ಎಂದೆ.

ರಂಗನಾಥನ್ ಹೆಸರು ಆತನಿಗೆ ಪರಿಚಿತವಾಗಿದ್ದಂತೆ ತೋರಲಿಲ್ಲ. ಆದರೆ ಹೆಡ್‌ಮೇಷ್ಟ್ರು ಎಂಬ ಪದ ಅವನ ಮೇಲೆ ಪರಿಣಾಮಮಾಡುತ್ತಿದ್ದಂತೆ ಕಂಡಿತು. ಆದರೂ ಅವನು ಪರೀಕ್ಷಕನ ದೃಷ್ಟಿಯಿಂದ ನನ್ನನ್ನು ದಿಟ್ಟಿಸಿನೋಡಿದ. ಕೊನೆಗೆ, " ಇಲ್ಲೆ ನಿಂತಿರು," ಎಂದ.

ಐದು ನಿಮಿಷಗಳಲ್ಲಿ ಗೇಟಿನ ಬಾಗಿಲು ಕಿರ್ ಎಂದಿತು. ನಾನು ಆ ದೊಡ್ಡ ಮಹಡಿಮನೆಯ ಕೆಳ ಹಜಾರದಲ್ಲಿ, ಆ ದೊಡ್ಡಮನುಷ್ಯರ ಆಗಮನವನ್ನು ಇದಿರುನೋಡುತ್ತಾ ನಿಂತೆ. ಆ ಎತ್ತರ ವಿಶಾಲತೆ ಭವ್ಯತೆಗಳ ನಡುವೆ ನಾನು, ಬಲು ನಿಕೃಷ್ಟನಾದ ಸಣ್ಣ ವ್ಯಕ್ತಿಯಾಗಿ ತೋರುತ್ತಿದ್ದೆ.

ಒಮ್ಮೆಲೆ ಪಕ್ಕದ ಬಾಗಿಲು ತೆರೆಯಿತು. ಹಿಂದೊಮ್ಮೆ ಕಾರಿನಲ್ಲಿ ನಾನು ಸಮೀಪವಾಗಿ ಕುಳಿತಿದ್ದ ಹಿರಿಯ ವ್ಯಕ್ತಿ ಬಂದರೆಂದು ಕೈ ಜೋಡಿಸಿನಿಂತೆ. ಆದರೆ ಬಂದುದು ಮತ್ತೆ ಅದೇ ಹುಡುಗಿ. ನನ್ನನ್ನು ನೋಡಿ ಆ ಮೂಗನ್ನು ಮೇಲಕ್ಕೆ ಏರಿಸಿ,ಜಡೆಯನ್ನುಕೊರಳ ಇನ್ನೊಂದು ಭಾಗಕ್ಕೆ ಸೇರಿಸಿ, ಅವಳು ಮತ್ತೆ ಒಳ ಹೋದಳು. ಮೂಗು ತೀರ ಚಿಕ್ಕದಾಗಿದ್ದರೆ ಸೌಂದರ್ಯಕ್ಕೆ ಕೊರತೆ ಇರುತ್ತದೆಂಬುದನ್ನು ಆಗ ತಿಳಿದೆ. ನನಗೆ ತಿಳಿಯದೆಯೇ ಕೈ ಬೆರಳು ನನ್ನ ಮೂಗಿನತ್ತ ಹೋಯಿತು........

ಮತ್ತೆಷ್ಟೊ ನಿಮಿಷಗಳು ಕಳೆದುವು.

ಆ ಹೊತ್ತಿನಲ್ಲಿ ನಾನು ಏನನ್ನೂ ಯೋಚಿಸುತ್ತಿರಲಿಲ್ಲ. ಆವರಣದ ವಿಸ್ತಾರದಲ್ಲಿ ತನ್ನ ಇರುವಿಕೆಯನ್ನೆ ಮರೆಯುವುದು ಸಾಧ್ಯಅಲ್ಲವೆ? ಎಲ್ಲವೂ ಬರಿದು ಬರಿದು ಎಂದು ತೋರುತ್ತಿದ್ದ ಆ ವಿಶಾಲತೆಯಲ್ಲಿ ನಾನು ಮೆಲ್ಲಮೆಲ್ಲನೆ ಲೀನನಾಗುತ್ತಿದ್ದೆ. ನಾನು ಜಾಗೃತನಾಗಿದ್ದೆನೊ ಇಲ್ಲವೊ ಎಂಬುದು ತಿಳಿಯದೆಹೋಗುವ ಪರಿಸ್ಥಿತಿ........

ನನ್ನನ್ನು ಎಚ್ಚರಿಸುವಂತೆ ಲೋಕಪರಾಯಣ ರಾಮುಸ್ವಾಮಿ

ಯವರು ಬಂದು ಪ್ರತ್ಯಕ್ಷರಾದರು. ಕ್ಷಣಕಾಲ ನನಗೆ ಅವರ ಗುರುತು ಸಿಗಲಿಲ್ಲ. ಇಲ್ಲಿ ಅವರು ಪೋಷಾಕು ಧರಿಸದ ದೊಡ್ಡಮನುಷ್ಯರು. ಮೀಸೆ ಕಪ್ಪಗಿತ್ತು. ತಲೆಕೂದಲು ಬೆಳ್ಳಗೆ. ಎದೆ ಹೊಟ್ಟೆಗಳು ಪರಸ್ಪರ ಲೀನವಾಗಿ ಆ ಭವನದ ವಿಸ್ತಾರಕ್ಕೆ ಅನುಗುಣವಾಗಿ ವಿಶಾಲ ವಾಗಿ ಹರಡಿದ್ದುವು. ತೆಳ್ಳನೆಯ ಬಿಳಿಯ ಬಟ್ಟೆಯನ್ನು ಅವರು ಉಟ್ಟಿದ್ದರು. ಮೇಲೊಂದು ಅಂತಹದೇ ಬನಿಯನ್ನು. ಕೈ ಬೆರಳಲ್ಲಿ ಮೂರು ಉಂಗುರಗಳಿದ್ದುವು. ಕಾಲಲ್ಲಿ ಬೂಟ್ಸುಗಳಿರಲಿಲ್ಲವೆಂದೋ ಏನೋ ಅವರು ಸ್ವಲ್ಪ ಕುಳ್ಳಗೆ ಕಾಣಿಸುತ್ತಿದ್ದರು........

ಅವರಿಗೆ ನನ್ನ ಗುರುತು ಸಿಕ್ಕಿದಹಾಗೆ ತೋರಲಿಲ್ಲ.

ಆದಷ್ಟುಮಟ್ಟಿಗೆ ಮಾತು ತಡವರಿಸದಂತೆ, ನನ್ನ ಅಳುಕನ್ನು ಮುಚ್ಚುವುದಕ್ಕೋಸ್ಕರ ಸ್ವಲ್ಪ ಗಟ್ಟಿಯಾದ ಸ್ವರದಲ್ಲಿ, ನನ್ನ ಪರಿಚಯ ಮಾಡಿಕೊಟ್ಟೆ.

"ಸಾರ್, ನಾನು ಚಂದ್ರಶೇಖರ ಫೋರ್ತ್ ಫಾರಂನಲ್ಲಿದ್ದೆ. ಆ ದಿವಸ ಹೆಡ್‌ಮಾಸ್ಟರ್ ರಂಗನಾಥನ್‌ರವರ ಮನೆಗೆ ದಾರಿ ತೋರಿ ಸ್ಕೊಟ್ಟೆ. ಕಾರಿನಲ್ಲಿ—"

ಅವರ ತುಟಿ ಚಲಿಸಿದುದನ್ನು ಕಂಡು ನಾನು ಮಾತುನಿಲ್ಲಿಸಿದೆ. ಅವರು ಗಂಟಲು ಸರಿಪಡಿಸಿಕೊಂಡರು. ಅದೇನೊ ಸ್ವರ ಹೊರಬಿತ್ತು. ಆದರೆ ಯಾವುದೂ ನನಗೆ ಸ್ಪಷ್ಟವಾಗಲಿಲ್ಲ. ಮತ್ತೊಮ್ಮೆ ನಾನೇ ಮಾತು ಮುಂದುವರಿಸಿದೆ.

"ನಾನು ಸಾರ್, ಚಂದ್ರಶೇಖರ. ಆ ದಿವಸ-ಹೋದ ವರ್ಷ ಸಾರ್-ನನ್ನ ಇಂಗ್ಲಿಷ್ ಚೆನ್ನಾಗಿದೆ ಅಂದಿದ್ರೀ ಸಾರ್. It was last year"

ಅದೇನು ತೋರಿತೊ ಏನೊ. ಅಥವಾ ಮಸಕು ಮಸಕಾಗಿ ಗುರುತೂ ಸಿಕ್ಕಿತೇನೋ. ಅವರು ಆರಾಮ ಕುರ್ಚಿಯಮೇಲೆ ಕುಳಿತು ಕೊಳ್ಳುತ್ತಾ, "ಓ, ಹೌದು ಹೌದು, ರಂಗನಾಥನ್ ಮನೇಲಿ. ಹೌದು. ಏನಪ್ಪ? ಈಗೇನ್ ಬಂದೆ-ಈ ರಾತ್ರಿ ಹೊತ್ತು?" ಎಂದು ಕೇಳಿದರು.

ದೊಡ್ಡ ಮನುಷ್ಯರ ಸಮಯ ಅಮೂಲ್ಯವಾದುದೆಂದು ಕೇಳಿದ್ದೆ.

ಹೊತ್ತು ಕಳೆಯುವ ಹಾಗಿರಲಿಲ್ಲ.

"ನಂಗೆ ಪಾಸಾಯ್ತು ಸಾರ್."

"Good, Good."

ನಾನು ಪಾಸಾದಾಗ ನನ್ನ ತಂದೆಗೆ ಆಗಿದ್ದ ಸಂತೋಷದ ನೂರರಲ್ಲಿ ಒಂದು ಪಾಲೂ ಲೋಕಪರಾಯಣ ರಾಮಸ್ವಾಮಿಯವರ ಮುಖದಮೇಲೆ ಕಾಣಿಸಲಿಲ್ಲ. ಆದರೂ ಅವರು ಪ್ರೋತ್ಸಾಹದ ಮಾತನ್ನಾಡಲಿಲ್ಲವೆ? ಎರಡು ಸಾರಿ ಗುಡ್ ಗುಡ್ ಎನ್ನಲಿಲ್ಲವೆ? ನಾನು ಉತ್ತೇಜಿತನಾಗಿ ಮಾತು ಮುಂದುವರಿಸಿದೆ.

"ಆದರೆ ನಮ್ಮ ತಂದೆಗೆ ಕಾಯಿಲೆನಂತೆ ಸಾರ್. ಟಿ. ಬಿ. ನಂತೆ ಸಾರ್. ಔಷಧಿಗೆ ನೂರಾರು ರೂಪಾಯಿ ಬೇಕಂತೆ ಸಾರ್ ........"

ನೂರಾರು ಎಂದರೆ ನಿಜವಾಗಿ ಎಷ್ಟೆಂಬುದು ನನಗಿಂತಲೂ ಹೆಚ್ಚಾಗಿ ಅವರಿಗೆ ತಿಳಿದಿತ್ತೇನೊ. ನನ್ನ ತಂದೆಯೂದರೆ ಅಷ್ಟು ಹಣದ ಸಂಪಾದನೆಗಾಗಿ ಅದೆಷ್ಟೊ ವರ್ಷ ದುಡಿಯಬೇಕು. ದೊಡ್ಡಮನುಷ್ಯರು ಕೆಲವೊಮ್ಮೆ ಕಣ್ಣುಮುಚ್ಚಿ ತೆರೆಯುವುದರೊಳಗಾಗಿ ಸಹಸ್ರ ಸಹಸ್ರ ಸಂಪಾದನೆ ಮಾಡುವರೆಂದು ನಾನು ಕೇಳಿದ್ದೆ. ನಾನು ಹಣದ ಮಾತನ್ನೆತ್ತಿ ಒಂದು ಕ್ಷಣವಾಗಿತ್ತಷ್ಟೆ — ಕಣ್ಣುಮುಚ್ಚಿ ತೆರೆಯುವ ಹೊತ್ತು. ಅವರು ಕುಳಿತಲ್ಲಿಂದ ಎದ್ದರು.

"ಬಡವರನ್ನು ಕಂಡರೆ, ಆದರಲ್ಲೂ ಬುದ್ಧಿ ವಿದ್ಯೆಯಿರೋರನ್ನ ಕಂಡರೆ ಪ್ರೀತಿ ನನಗೆ. ಆದರೆ ನೋಡಪ್ಪ, ಪೂರ್ತಿ ಸಹಾಯ ನಾನು ಮಾಡೋದು ಸರಿಯಲ್ಲ. ಬೇರೆಯವರಿಗೂ ಪುಣ್ಯದ ಅವಕಾಶ ಸಿಗಬೇಕು. ನಾನೂ ಒಂದಿಷ್ಟು ಕೊಡ್ತೀನಿ."

ಅವರು ಒಳಹೋದರು. ನನ್ನ ಹೃದಯ ಸಂತೋಷದಿಂದ ಬಿರಿಯುತ್ತಿತ್ತು. ನೂರಾರು ರೂಪಾಯಿ ಅವರು ಕೊಡಲಾರರು ನಿಜ. ಆದರೆ ಸದ್ಯಃ ದೊರೆಯುವ ಹಣದಲ್ಲಿ ಚಿಕಿತ್ಸೆ ಆರಂಭಿಸಬಹುದಲ್ಲಾ? ಇಂಜೆಕ್ಷನ್ ಕೊಡಿಸಬಹುದಲ್ಲಾ? ಆ ಕಿರಿದುಮೂಗಿನ ವಕ್ರ ಹುಬ್ಬಿನ ಹುಡುಗಿಯನ್ನು ನಾನು ಮರೆತೆ—ನಾಲಿಗೆಯಲ್ಲಿ ನೀರು ತೊಟ್ಟಿಕ್ಕು

ತ್ತಿದ್ದ ಆ ನಾಯಿಯನ್ನೂ ಕೂಡ. ಜೀವನವೆಲ್ಲಾ ಕಹಿಯಲ್ಲ, ಕತ್ತಲೆಯಲ್ಲ. ಸೀಮೆಎಣ್ಣೆಯ ಮಿಣುಕು ದೀಪದ ಕರಿ ಹೊಗೆಯೇ ನಮ್ಮ ಬಾಳ್ವೆಯನ್ನು ಮುಚ್ಚಿಲ್ಲ. ವಿದ್ಯುತ್ ದೀಪಗಳೂ ಆಗೊಮ್ಮೆ ಈಗೊಮ್ಮೆ ಅದನ್ನು ಬೆಳಗುವುದು ಸಾಧ್ಯ. ಆ ಆಗೊಮ್ಮೆ ಈಗೊಮ್ಮೆಯೇ ಜೀವನದ ಅಮೃತಘಳಿಗೆಯೊ ಏನೋ........

ಘಳಿಗೆಯ ಅವಕಾಶಕ್ಕೆ ಆಸ್ಪದವಿಲ್ಲದ ಹಾಗೆ ಮತ್ತೆ ಯಾರೊ ಬರುತ್ತಿದ್ದ ಸದ್ದಾಯಿತು. ನನ್ನ ಹಿರಿತನವನ್ನು ಕಂಡುಹಿಡಿದ ಆ ಮಹಾನುಭಾವರೇ ಬರುತ್ತಿದ್ದರೆಂದು ಭಾವಿಸಿದೆ ಆದರೆ ಬಂದ ವ್ಯಕ್ತಿ, ಆ ಪಪ್ಪನ ಮಗಳು—ಅದೇ ಹುಡುಗಿ.

ಆಕೆ ಮುಷ್ಟಿ ಸಡಿಲಿಸಿ, "ತಗೋ," ಎಂದಳು. ನಾನು ಕೈ ಚಾಚಿದೆ. ರೂಪಾಯಿ ನಾಣ್ಯಗಳೆರಡು ಸದ್ದು ಮಾಡಿದುವು.

ನನ್ನನ್ನು ನಾನೇ ನಂಬಲಿಲ್ಲ ನನ್ನ ಸುತ್ತೆಲ್ಲವೂ ಗಾಢವಾದ ಕತ್ತಲು ಕವಿದಹಾಗಾಯಿತು. ಏನು ಇದರ ಅರ್ಥ? ಇದರ ಅರ್ಥವೇನು?........

ನಾನು ಚೇತರಿಸಿಕೊಂಡೆ, ಆದರೆ ಆಕೆ ಅಲ್ಲಿರಲಿಲ್ಲ.

ಸ್ವಲ್ಪ ಹೊತ್ತು ಮೂಕನಾಗಿ ಅಲ್ಲೆ ನಿಂತೆ. ಆ ದೊಡ್ಡಮನುಷ್ಯರು ಹೊರಗೆ ಬರಬಹುದು; ಎಲ್ಲೋ ಏನೊ ತಪ್ಪಾಗಿರಬೇಕು— ಎಂದು ಕಾದುನಿಂತೆ.

ಕೊನೆಗೆ ಬಂದವನು ಜವಾನ. ಅವನು ನನ್ನ ಸುಖದುಃಖ ವಿಚಾರಿಸಿದ. ಆ ವಿಚಾರಣೆಯ ವೈಖರಿ?........

"ಯಾಕೊ? ಯಾಕ್ ನಿಂತಿದಿಯಾ ಇನ್ನೂ? ಭಿಕ್ಷ ಸಿಗಲಿಲ್ಲವೇನೋ? ಹೋಗು. ಹೊರಟ್ಹೋಗು?"

ನಾನು ಮೆಲ್ಲನೆ ಮುಂದೆ ಬಂದು, ಒಂದು ಹೂ ದಾನಿಯನ್ನು ಹೊತ್ತು ನಿಂತಿದ್ದ ಪುಟ್ಟ ಮೇಜಿನಮೇಲೆ ಆ ಎರಡು ನಾಣ್ಯಗಳನ್ನೂ ಇರಿಸಿದೆ. ಸರಕ್ಕನೆ ತಿರುಗಿ ದಡದಡನೆ ಮೆಟ್ಟಲಿಳಿದು ಉದ್ಯಾನವನ್ನು ದಾಟಿ ಬೀದಿಗೆ ಓಡಿದೆ

ಜವಾನ ಹಿಂದಿನಿಂದ ಕೂಗಿ ಕರೆಯುತ್ತಿದ್ದ........

"ಏ. ಬಾರೊ ಇಲ್ಲಿ. ಎಂತಾ ಹುಚ್ಚನೋ ನೀನು........ ತಗೊಂಡು ಹೋಗು, ಬಾ....ಬಾ"

ನಾನು ಹಿಂತಿರುಗಿ ನೋಡಲೇ ಇಲ್ಲ. ಬೀದಿಯುದ್ದಕ್ಕೂ ನಡೆದು ಹೋದೆ. ಅಲ್ಲಿಂದ ಮೂರು ಮೈಲುಗಳಾಚೆ ನಮ್ಮ ಮನೆಯಿತ್ತು. ಅದು ಬಲು ದೀರ್ಘವಾದ ನಡಿಗೆ ನನ್ನ ಜತೆಗೆ ನೂರು ಯೋಚನೆ ಗಳಿದ್ದವು. ಕಣ್ಣೀರು ಧಾರಾಕಾರವಾಗಿ ಸುರಿಯುತ್ತಿತ್ತು. ಅದನ್ನು ತಡೆಯಲು ನಾನು ಯತ್ನಿಸಲಿಲ್ಲ. ಅದು ನನ್ನದಲ್ಲದ ಕಣ್ಣೀರು. ಅದು ಸುರಿದುಹೋದರೇ ನನಗೆ ಹಿತ. ಆ ದೊಡ್ಡಮನುಷ್ಯರ ಒಳ್ಳೆಯ ಗುಣಗಳ ಬಗ್ಗೆ ನನಗಿದ್ದ ನಂಬಿಕೆ ಸುಳ್ಳಾಗಿತ್ತು. ಭ್ರಮೆ ತೊಲಗಿತ್ತು. ಇಷ್ಟರವರೆಗೆ ತಿಳಿಯದೆ ಮೋಸಹೋದೆನಲ್ಲಾ ಎಂದು ನಾನು ದುಃಖಿಸಿದೆ. ನಾನು ಮೋಸಹೋದುದರಿಂದ ನನಗೆ ಅವಮಾನವಾಗಿತ್ತು. ಆ ಅವಮಾನ ತೊಳೆದುಹೋಗಲೆಂದು ನಾನು ಕಣ್ಣೀರು ಸುರಿಸಿದೆ.

ಆ ಸಂಜೆ ಸಹಾಯದ ಯಾಚನೆಗಾಗಿ ದೊಡ್ಡವರ ಮನೆಗೆ ನಾನು ಹೋಗಲಿದ್ದ ವಿಷಯವನ್ನು ತಂದೆಗೆ ಹೇಳಿರಲಿಲ್ಲ. ಸಹಾಯ ತಂದು ಒಮ್ಮೆಲೆ ಅವನನ್ನು ಆಶ್ಚರ್ಯಕ್ಕೂ ಸಂತೋಷಕ್ಕೂ ಗುರಿಮಾಡಬೇಕೆಂಬುದು ನನ್ನ ಉದ್ದೇಶವಾಗಿತ್ತು. ಈಗ ಏನೂ ಉಳಿದಿರಲಿಲ್ಲ.

ಕಂಬಳಿ ಹೊದ್ದು ತಂದೆ ಮಲಗಿದ್ದ. ನಾನು ಮೆಲ್ಲನೆ ಸದ್ದಾಗದಂತೆ ಒಳಹೋದೆ ಆದರೆ ಅವನಿಗೆ ನಿದ್ದೆ ಬಂದಿರಲಿಲ್ಲ ಮುಸುಕಿನೊಳಗಿಂದಲೆ ಕ್ಷೀಣಸ್ವರದಲ್ಲಿ ಆತ ಕೇಳಿದ.

"ಚಂದ್ರು, ಎಲ್ಹೋಗಿದ್ದೆ ಮಗ? ಟೈಂ ಎಷ್ಟು?"

ನಾನು ಸತ್ಯವನ್ನು ಹೇಳುವಹಾಗಿರಲಿಲ್ಲ. ಸುಳ್ಳು ಬಲು ಸುಲಭವಾಗಿ ನನ್ನ ಬಾಯಿಂದ ಹೊರಡುತ್ತಿತ್ತು.

"ಇಲ್ಲೆ ಇದ್ನಪ್ಪ. ಮೇಷ್ಟ್ರು ಸಿಕ್ಕಿದ್ದರು. ಅವರತಾವ ಮಾತಾಡ್ತಾ ನಿಂತಿದ್ದೆ"

ಆಗ ಘಂಟೆ ಹತ್ತಾಗಿತ್ತು. ಆದರೂ, "ಈಗೇನು ಇನ್ನೂ ಎಂಟು ಘಂಟೆ, ಅಷ್ಟೆ," ಎಂದೆ. ನನ್ನತಂದೆಗೆ ಆ ಅನಾರೋಗ್ಯದ

ಸ್ಥಿತಿಯಲ್ಲಿ ಘಂಟೆ ನಿಮಿಷಗಳ ಪರಿಜ್ಞಾನ ಬೇಕಷ್ಟು ಇರಲಿಲ್ಲವೆಂದು ನನಗೆ ಗೊತ್ತಿತ್ತು.

ಅಜ್ಜಿ ತಂದು ಇರಿಸಿದ್ದ ಅನ್ನ ಹುಳಿ ಅಲ್ಲಿದ್ದುವು. ಊಟಕ್ಕೆಂದು ತಂದೆಯನ್ನು ನಾನು ಎಬ್ಬಿಸಿದೆ.

ಕೆಲವು ದಿನಗಳ ಮೇಲೊಮ್ಮೆ ತಂದೆ ಆ ದೊಡ್ಡ ಮನುಷ್ಯರ ವಿಷಯ ಕೇಳಿದ.

"ಅವರ್‍ನಾದರೂ ಹೋಗಿ ಕೇಳ್ಕೋಡ್ಬಾರ್ದ? ನಿನ್ನ ಸ್ಕೂಲ್ ಖರ್ಚಿಗಾದರೂ ಕೊಡ್ಬಹುದು. ನೀನು ಎಲ್ಲಾರು ಒಂದಿಷ್ಟು ಕೆಲಸಾನೂ ನೋಡ್ಕೊಂಡು ಅಜ್ಜಿಗೆ ನಾಲ್ಕು ಬಿಡಿಕಾಸು ತಂದ್ಕೊಟ್ಟೇಯಂತೆ. ನನ್ನ ಯೋಚನೆಬಿಟ್ಬಿಡು ಮಗ."

ತನ್ನ ಮನಸಿನಲ್ಲಿದ್ದುದನ್ನೆಲ್ಲಾ ತಂದೆ ಮೆಲ್ಲಮೆಲ್ಲನೆ ಹೊರ ಹಾಕುತ್ತಿದ್ದ. ತಾನು ಬಹಳ ಕಾಲ ಬದುಕುವೆನೆಂಬ ನಂಬಿಕೆಯೇ ಆತನಿಗೆ ಇರಲಿಲ್ಲವೇನೊ. ಆದರೆ ಆತ ವಾಸ್ತವವಾದಿಯಾಗಿದ್ದ. ನನಗೆ ಪರಿಚಿತರಾಗಿದ್ದ ಆ ದೊಡ್ಡಮನುಷ್ಯರಿಂದ ನೂರಾರು ರೂಪಾಯಿ ತರುವ ಯೋಚನೆ ಅವನಿಗಿರಲಿಲ್ಲ. ಅವನು ಅಪೇಕ್ಷೆಪಟ್ಟುದು ನನ್ನ ಶಾಲೆಯ ಖರ್ಚಿಗಾಗಿ ಹತ್ತಾರು ರೂಪಾಯಿ.

ನನ್ನ ಅನುಭವವನ್ನು ನಾನು ವಿವರಿಸಿ ಹೇಳಲಿಲ್ಲ. ತಂದೆಗೆ ಸ್ವಲ್ಪವಾದರೂ ನೆಮ್ಮದಿ ಉಳಿಯಲೆಂದು, "ಅವರು ಊರಲ್ಲೆ ಇಲ್ಲ. ಬೊಂಬಾಯಿಗೆ ಹೊರಟುಹೋದರಂತ್ಲಪ್ಪಾ" ಎಂದೆ. ಬೊಂಬಾಯಲ್ಲಿ ಏನಿರುತ್ತದೆ ಎಂಬುದು ನನಗೆ ತಿಳಿದಿರಲಿಲ್ಲ. ಆದರೆ ದೊಡ್ಡ ಮನುಷ್ಯರು ಹಲವರು ಆ ಊರಿಗೆ ಹೋಗುತ್ತಿರಬಹುದೆಂದು ಊಹಿಸಿದ್ದೆ.

ನನ್ನ ಮಾತು ಕೇಳಿ ತಂದೆ ತಣ್ಣಗಾದ.

ನಾನು ಕೆಲಸ ಹುಡುಕಿದೆ. ಹಿಂದಿನ ವರ್ಷ ನನ್ನ ಸಹಪಾಠಿಯಾಗಿದ್ದ ಬಡಹುಡುಗನೊಬ್ಬ ಪತ್ರಿಕೆ ಮಾರುತ್ತಿದ್ದ. ಆದರಿಂದ ಒಮ್ಮೊಮ್ಮೆ ದಿನಕ್ಕೆ ನಾಲ್ಕು ಆರು ಆಣೆಗಳಷ್ಟು ಅವನಿಗೆ ಸಂಪಾದನೆಯಾಗುತ್ತಿತ್ತು.

ಒಂದು ದಿನ ಅವನೊಡನೆ ನನ್ನ ದಾರುಣ ಕಥೆಯನ್ನು ಹೇಳಿಕೊಂಡೆ.

" ಸ್ಕೂಲು ಬಿಟ್ಬುಟ್ನಪ್ಪಾ " ಎಂದೆ.

ವಾಸ್ತವವಾಗಿ ಓದು ಬಿಟ್ಟುಬಿಡುವ ತೀರ್ಮಾನಕ್ಕೆ ನಾನು ಬಂದಿರಲಿಲ್ಲ. ಇಂದಲ್ಲ ನಾಳೆ ಮತ್ತೆ ಶಾಲೆಗೆ ಹೋಗುವುದು ಸಾಧ್ಯವಾಗುವುದೆಂದೇ ಭಾವಿಸಿದ್ದೆ. ಆದರೂ ಮಾತು ಹಾಗೆ ಬಂದಿತು........ ಆ ಮಾತು ಮಾತ್ರ ಸುಳ್ಳಾಗಲಿಲ್ಲ.

ಆ ಸಹಪಾಠಿ ತುಂಬ ಯೋಚಿಸಿದ. ನಾನೂ ಪತ್ರಿಕೆ ಮಾರಲು ಬಂದರೆ ಅವನ ಸಂಪಾದನೆಗೆ ತಡೆ ಒದಗುವುದು. ಮಾರಾಟದ ಕ್ಷೇತ್ರದಲ್ಲಿ ಇನ್ನೊಬ್ಬ ಸ್ಪರ್ಧಿ ಬಂದು ಅವನಪಾಲಿನ ತುತ್ತಿನಲ್ಲಿ ಒಂದಂಶ ಕಡಿಮೆಯಾಗುವುದು. ಅವನು ದೀರ್ಘ ಕಾಲ ಯೋಚಿಸಿದ.

ಎರಡು ಮೂರು ದಿನಗಳಾದ ಮೇಲೆ ಅವನು ನನ್ನನ್ನು ಎರಡು ಪತ್ರಿಕೆಗಳ ಏಜೆಂಟರಲ್ಲಿಗೆ ಕರೆದೊಯ್ದು. ನಾನು ಆ ದಿನದಿಂದ ಪತ್ರಿಕೆ ಮಾರುವ ಹುಡುಗನಾದೆ. ನನ್ನ ಸಹಪಾಠಿಯ ಹೆಸರು ಶೇಷಗಿರಿ. ಶೇಷನಿದ್ದ ಜಾಗದಲ್ಲಿ ನಾನು ಪತ್ರಿಕೆ ಮಾರಬಾರದು ಎಂಬುದು ನಮ್ಮೊಳಗಿನ ಒಪ್ಪಂದವಾಗಿತ್ತು. ಹಾಗೆ ಕೊಟ್ಟ ಮಾತಿಗೆ ನಾನೆಂದೂ ಮೀರಿ ನಡೆಯಲಿಲ್ಲ.

ಮನೆಗೆ ಧಾವಿಸಿ ಬಂದು ತಂದೆಗೆ ಈ ವಿಷಯ ತಿಳಿಸಿದೆ.

" ಇನ್ನು ಸರಿಹೋಗುತ್ತಪ್ಪ. ಕೆಲಸ ಸಿಕ್ತು. ಸಂಪಾದಿಸ್ತೀನಿ. ಅಜ್ಜಿಗೂ ಕೊಡ್ತೀನಿ. ನಿಂಗೂ ಔಷಧಿ ತರ್ತೀನಿ........"

ತಂದೆ ಸಂತೋಷದಿಂದ ಮುಗುಳ್ನಕ್ಕ. ಆ ನಗುವನ್ನು ಕಂಡು ನನ್ನ ಮುಖ ಅರಳಿತು.

" ಬೆಳಿಗ್ಗೆ ಮತ್ತು ಸಂಜೆ ಪೇಪರ್ ಮಾರೋ ಕೆಲಸ " ಎಂದು ವಿವರಿಸಿದೆ.

" ಸ್ಕೂಲು ಮಾತ್ರ ತಪ್ಪಿಸ್ಕೋಬಾರದು ಚಂದ್ರು. ಇನ್ನು ಎರಡೇ ವರ್ಷ. ಆಮೇಲೆ ಯಾರ್ದಾರೂ ಸಹಾಯ ತಗೊಂಡು ಕಾಲೇಜಿಗೆ ಕಳಿಸ್ತೀನಿ."

ಅವನ ಬಯಕೆಗಳನ್ನು ಕಂಡು ನನ್ನ ಹೃದಯ ಭಾರವಾಯಿತು. ಹತ್ತು ವರ್ಷಗಳ ಕಾಲ ಮಣ್ಣುಹೊತ್ತಿದ್ದ ವಿದ್ಯಾಸರಸ್ವತಿಯ ಗುಡಿಗೆ ಉದ್ದಂಡ ನಮಸ್ಕಾರ ಹಾಕಿದ್ದಾಯಿತೆಂದು ಹೇಳಿಬಿಡಲೆ? ಎಂದು ಯೋಚಿಸಿದೆ. ಹಾಗೆ ಹೇಳಿದ್ದರೆ ತಂದೆಗೆ ಕಳವಳವಾಗುತ್ತಿತ್ತು. ಅವನ ಕಾಹಿಲೆಗೆ ಅದು ಪ್ರತಿಕೂಲವಾಗುತ್ತಿತ್ತು. ನಾನು ಸತ್ಯವನು ಮರೆಮಾಚಿದೆ.

" ಹೂನಪ್ಪಾ, ಹಾಗೇ ಮಾಡ್ತೀನಿ. ಸಂಜೆ ಬೆಳಿಗ್ಗೆ ಸಂಪಾದನೆ. ಹಗಲೊತ್ತು ಸ್ಕೂಲು. ಹಾಗೇ ಮಾಡ್ತೀನಪ್ಪ."

ನನ್ನ ದುಡಿತದ ದಿನಗಳು ಆರಂಭವಾದುವು. ಶೇಷಗಿರಿ ನನಗೆ ನೆರವಾಗಿದ್ದ ನಿಜ ಆದರೆ ಊರಲ್ಲಿ ಬೇರೆಯೂ ಕೆಲವರು ಹುಡುಗರಿದ್ದರು. ಅವರು ತಮ್ಮ ಕ್ಷೇತ್ರಕ್ಕೆ ಬಂದ ಹೊಸಬನಾದ ನನ್ನನ್ನು ಮನಸಾರೆ ದ್ವೇಷಿಸಿದರು.

" ಕಲ್ತವ್ನೆ ಬೇರೆ. ಹೈ ಸ್ಕೂಲಿಗೆ ಹೋಗ್ಬಂದವ್ನೆ. ದೊಡ್ಡ ಮನುಷ್ಯ."

ಆ ಮಾತುಗಳು ನನ್ನನ್ನು ಕುಟುಕುತ್ತಿದ್ದವು ಒಂದು ದಿನ ಅವರಲ್ಲೊಬ್ಬ ಪ್ರತ್ಯೇಕವಾಗಿದ್ದಾಗ ಅವನ ಬಳಿ ಹೋಗಿ, " ಏನಾದರೂ ಅಂದ್ಗಿಂದೀಯಾ ಜೋಕೆ," ಎಂದೆ. ಆ ದಿನ ಅವನು ಮಾತನಾಡಲಿಲ್ಲ. ಆದರೆ ಮರುದಿನ ಮಧ್ಯಾಹ್ನದ ಹೊತ್ತು ಬಳಗದೊಡನೆ ಅವನು ಬಂದ ನನ್ನ ಪಕ್ಷದಲ್ಲಿ ಯಾರೂ ಇರಲಿಲ್ಲ ಒಬ್ಬನಾದ ನಾನು ಆ ನಾಲ್ವರನ್ನು ಇದಿರಿಸಿದೆ. ನನ್ನಲ್ಲಿ ಉಳಿದಿದ್ದ ಬೆಳಗ್ಗಿನ ಮೂರು ಪತ್ರಿಕೆಗಳನ್ನು ಅವರು ಕಿತ್ತುಕೊಂಡರು. ದುಡ್ಡು ಚೆಲ್ಲಾಪಿಲ್ಲಿಯಾಯಿತು. ಒಂದೇ ಒಂದಾಗಿದ್ದ ನನ್ನ ಷರಟು ಸ್ವಲ್ಪ ಹರಿಯಿತು ನಾನು ಆತ್ಮರಕ್ಷಣೆಗಾಗಿ ಅವರಮೇಲೆ ಕೈ ಮಾಡಿದೆ ಹಿಂದೆ ಶ್ರೀಮಂತ ಪುತ್ರನೊಬ್ಬನನ್ನು ಹಾಸಿಗೆ ಹಿಡಿಸಿದ್ದ ವೀರ ನಾನೆಂಬುದು ನಿಜ. ಆದರೆ ಈ ಹುಡುಗರು ಶ್ರೀಮಂತ ಪುತ್ರರಾಗಿರಲಿಲ್ಲ. ಇವರೂ ನನ್ನಂತೆಯೇ ಬಡವರು. ಆದರೆ ಅಸೂಯೆಯ ಹಸಿವಿನ ಸೈತಾನ ಅವರ ಒಳಹೊಕ್ಕಿದ್ದ. ನಾಲ್ಕು ಕಾಸು ದೊರೆಯಲೆಂದು ಅವರು

ಜಗಳ ಆಡುತ್ತಿದ್ದರು. ಅಥವಾ ತಮ್ಮ ದುಃಖ ನಿರಾಶೆಯನ್ನು ಮರೆಸಲೆಂದು ಒಬ್ಬರನ್ನೊಬ್ಬರು ಹರಿದು ತಿನ್ನುತ್ತಿದ್ದರು.

ಆ ಜಗಳದಲ್ಲಿ ನಾನು ಸೋಲಲೂ ಇಲ್ಲ, ಗೆಲ್ಲಲೂ ಇಲ್ಲ. ಅವರು ನಾಲ್ವರು, ನಾನು ಒಬ್ಬ. ಆ ದೃಷ್ಟಿಯಲ್ಲಿ ಅದು ನನ್ನ ವಿಜಯವೇ ಎನ್ನಬಹುದು

ಅವರು ನನಗೆ ಇನ್ನೊಂದು ಅವಕಾಶ ಒದಗಿಸಿಕೊಟ್ಟರು. ಈ ಸಾರೆ ಹೆಚ್ಚು ಅನುಭವಿಯಾಗಿ ನಾನು ಬಂದಿದ್ದೆ. ಪತ್ರಿಕೆ ಹರಿಯಲಿಲ್ಲ. ದುಡ್ಡು ಚೆಲ್ಲಿಹೋಗಲಿಲ್ಲ ಪರಟು ಅವರ ಕೈಗೆ ಸಿಗಲಿಲ್ಲ. ಆದರೆ ನನ್ನ ಮುಷ್ಟಿಯ ರುಚಿಯನ್ನು ಅವರು ಕಂಡರು

ನೀವು ನಂಬುವಿರೋ ಇಲ್ಲವೋ. ಆ ದಿನದಿಂದ ನಾನು ಆ ಬಳಗದ ಸದಸ್ಯನಾದೆ. ಅದಕ್ಕೆ ಕಾರಣ ಹುಡುಕಬೇಕೆ? ನಾವೆಲ್ಲಾ ಬಡವರಾಗಿದ್ದೆವು. ನಾವೆಲ್ಲಾ ಒಂದು ಗುಣದಿಂದ ಸ್ವಭಾವದಿಂದ ರೂಪುಗೊಂಡಿದ್ದೆವು. ನಾವು ಒಗ್ಗಟ್ಟಾಗಿ ಇರುವುದು ಸಹಜವಾಗಿತ್ತು.

... ....ಹಾಗೆ ಐದು ತಿಂಗಳುಗಳು ಕಳೆದುವು. ದೀಪಾವಳಿಯ ಹಬ್ಬ ಬಂದು ಮುಗಿಯಿತು.

"ರಜಾದಲ್ಲೂ ಓದು ಚಂದ್ರು. ಚೆನ್ನಾಗಿ ಓದಿ ಜಾಸ್ತಿ ಮಾರ್ಕು ಪಡೀಬೇಕು," ಎನ್ನುತ್ತಿದ್ದ ತಂದೆ.

ನಾನು ಯಾವುದೊ ಪುಸ್ತಕಗಳನ್ನು ಕೈಗೆತ್ತಿಕೊಂಡು ಕುಳಿತಿರುತ್ತಿದ್ದೆ. ಪರಿಚಯದ ಒಬ್ಬಿಬ್ಬರಿಂದ ಇಂಗ್ಲಿಷ್ ಕತೆಕಾದಂಬರಿಗಳನ್ನು ಕೇಳಿ ತರುತ್ತಿದ್ದೆ. ಈ ಪುಸ್ತಕಗಳೆಲ್ಲಾ ಶಾಲೆಯ ಓದಿಗೆ ಸಂಬಂಧಿಸಿದ್ದಿರಬೇಕೆಂದು ತಂದೆ ಭಾವಿಸುತ್ತಿದ್ದ. ಬೆಳಿಗ್ಗೆ ಮತ್ತು ಸಂಜೆಯ ಅಂತರದೊಳಗೆ ಮೂರಾಟಕ್ಕೋಸ್ಕರ ಪಡೆಯುತ್ತಿದ್ದ ಪತ್ರಿಕೆಗಳನ್ನೂ ನಾನು ಓದುತ್ತಿದ್ದೆ. ಹೀಗಾಗಿ ಮೆದುಳಿಗೆ ತುಕ್ಕು ಹಿಡಿಯಲಿಲ್ಲ. ಆದರೆ ನಾನು ಪರೀಕ್ಷೆ ಕಟ್ಟಿ ಉತ್ತೀರ್ಣನಾಗುವುದು ಸಾಧ್ಯವಿರಲಿಲ್ಲ. ವಿದ್ಯಾವಂತನಾದ ದೊಡ್ಡಮನುಷ್ಯನಾಗುವುದು ಸಾಧ್ಯವೇ ಇರಲಿಲ್ಲ.

ಆ ಸಂಜೆ, ನಾನು ಎಂದೆಂದಿಗೂ ಮರೆಯಲಾಗದ ಕ್ರೂರ ವಿಷ

ಗಳಿಗೆಯಾಗಿತ್ತು. ನಾನು ಪತ್ರಿಕೆಗಳ ಮಾರಾಟ ಮುಗಿಸಿ, ತಂದೆಗಾಗಿ ಸೇಬು ಹಣ್ಣುಗಳನ್ನು ಕೊಂಡುಕೊಂಡು ಅದೇ ಆಗ ಮನೆಗೆ ಹಿಂತಿರುಗಿದ್ದೆ. ತಂದೆ ಮಲಗಿರಲಿಲ್ಲ. ಕಂಬಳಿ ಹೊದ್ದುಕೊಂಡು ಎದ್ದು ಕುಳಿತಿದ್ದ,—ನನ್ನ ಆಗಮನವನ್ನೇ ಇದಿರುನೋಡುತ್ತಿದ್ದನೇನೊ ಎನ್ನುವ ಹಾಗೆ. ನಾನು ಕೆಳಕ್ಕೆ ಇರಿಸಿದ ಸೇಬು ಹಣ್ಣುಗಳನ್ನು ಆತ ನೋಡಿದ. ಆತ ಓದಲೆಂದು ಮನೆಗೆ ತಂದಿದ್ದ ಒಂದು ಕನ್ನಡ ಪತ್ರಿಕೆಯನ್ನೂ ನೋಡಿದ. ಆದರೆ ಮಾತನಾಡಲಿಲ್ಲ.

"ಹೊರಕ್ಕೆ ಚಳಿ ಗಾಳಿ ಬೀಸ್ತಾ ಇದೆ. ಕದ ತೆರೆದಿಟ್ಟು ಯಾಕೆ ಕೂತ್ಕೊಂಡಿದೀಯಾ? ಬೆಚ್ಚಗಿರ್ಬೇಕೂಂತಲ್ವಾ ಡಾಕ್ಟರು ಹೇಳಿದ್ದು?"

"ಹೂಂ" ಎಂದು ತಂದೆ ನಿಟ್ಟುಸಿರು ಬಿಟ್ಟ. ಅಸಮಾಧಾನದ ಛಾಯೆ ಇತ್ತು ಆ ಸ್ವರದಲ್ಲಿ.

"ಯಾಕಪ್ಪಾ ಏನಾಯ್ತು?"

ತಂದೆ ಸುಮ್ಮನಿದ್ದ, ಸ್ವಲ್ಪ ಹೊತ್ತಿನ ಬಳಿಕ ಅವನ ಗಡಸು ಸ್ವರ ಕಂಪಿಸುತ್ತ ಕಂಪಿಸುತ್ತ ಹೊರಬಿತ್ತು.

"ಚಂದ್ರು, ಸತ್ಯ ಹೇಳ್ಬಿಡು. ನೀನು ಯಾಕೆ ಸ್ಕೂಲು ಬಿಟ್ಬುಟ್ಟೆ? ನಿಂಗೆ ಓದೋಕೆ ಇಷ್ಟ ಇರ್ಲಿಲ್ವ?"

'ಸ್ಕೂಲು ಬಿಟ್ಟುದು' ಸುಳ್ಳೆಂದು ಅಲ್ಲಗಳೆಯುವುದರಲ್ಲಿ ಅರ್ಥವಿರಲಿಲ್ಲ. ಆದರೆ ನಾನು ಓದುತ್ತಿಲ್ಲವೆಂದು ತಂದೆಗೆ ಹೇಳಿದವರು ಯಾರು—ಯಾರು?

"ಯಾರಪ್ಪಾ ಹಾಗೆ ನಿಂಗೆ ಹೇಳ್ದೋರು?"

"ಮೊದಲು ನನ್ನ ಪ್ರಶ್ನೆಗೆ ಉತ್ತರ ಕೊಡು."

"....... ......."

"ಯಾಕೆ? ಯಾಕೆ ಸುಮ್ಮಗಿದ್ದೀಯಾ?"

"ಅಪ್ಪಾ, ಅಪ್ಪಾ."

"ಏನು ಹೇಳ್ಬಾರ್ದೇನು? ಎಲ್ಲರಂಗೇನೆ ನಾನೂ ಪೋಲಿಯಾದೇಂತ ಹೇಳ್ಬಾರ್ದೇನು?"

"ಇಲ್ವಪ್ಪ ಇಲ್ಲ..........."

ನನಗೆ ಅಳು ಬಂತು. ನಾನು ಮೆಲ್ಲನೆ ತಂದೆಯ ಬಳಿ ಸಾರಿ ಕುಳಿತೆ. ಆತ ಕಂಬಳಿಯಿಂದ ಕೈ ಹೊರತೆಗೆದು ನನ್ನ ತಲೆಗೂದಲು ನೇವರಿಸಿದ. ಆದರೆ ಮಾತನಾಡಲಿಲ್ಲ.

ಅಳುತ್ತಳುತ್ತಾ ನಾನು ಹೇಳಿದೆ. ದೊಡ್ಡ ಮನುಷ್ಯ ರಾವು ಸ್ವಾಮಿಯವರಲ್ಲಿಗೆ ಹೋದುದರಿಂದ ಮೊದಲಾಗಿ, ಶಾಲೆಯನ್ನು ಬಿಟ್ಟುಬಿಡಲೇಬೇಕಾದ ಅನಿವಾರ್ಯ ಪರಿಸ್ಥಿತಿ ಒದಗಿ ಬಂದ ವಿಷಯ ವನ್ನೆಲ್ಲಾ ಹೇಳಿದೆ. ದಿನವೂ ಎಂಟು ಹತ್ತಾಣೆ ಸಂಪಾದನೆಯಾಗು ತ್ತಿತ್ತೆಂದು ನಾನು ಹೇಳಿದ್ದುದು ಸುಳ್ಳೆಂಬುದನ್ನು ತಂದೆ ತಿಳಿದ.

" ನನ್ತಾವ ಸುಳ್ಳು ಹೇಳ್ದಿ ಅಲ್ವ? ತಂದೆ ಎದುರಲ್ಲಿ ಸುಳ್ಳು ಹೇಳ್ದಿ, ಅಲ್ವ ಚಂದ್ರು" ನಾನೇನು ಹೇಳಬೇಕು?

" ಸಿಗೋ ದುಡ್ಡು ಅಜ್ಜಿಗೆ ಕೊಡೋಕೂ ಸಾಲ್ತಿರಲಿಲ್ಲ. ಅಪ್ಪ, ಇಂಜಕ್ಷನ್ನೂ ತರೋಕಾಗಲಿಲ್ಲ. ಸ್ಕೂಲಿಗೆ ಬೇರೆ ಎಲ್ಲಿಂದ ಕೊಡೋದು? ಅದಕ್ಕೇ ಬಿಟ್ಬಿಟ್ಟೆ. ನಂಗೆ ಓದ್ಬೇಕೂಂತ ಆಸೆ ಇತ್ತಪ್ಪ. ಆದರೆ ಏನ್ಮಾಡೋದು? ಬಿಡದೆ ಬೇರೆ ಹಾದಿಯಿತ್ತಾ?"

"............"

ಆ ಮಾತಿನಿಂದ ಅವನಿಗೆ ಸಮಾಧಾನವಾಗಲಿಲ್ಲ.

ತಂದೆ ಬಹುವಾಗಿ ನೊಂದುಕೊಂಡಿದ್ದನೆಂಬುದು ಸ್ಪಷ್ಟವಾಗಿತ್ತು. ಆ ನೋವಿನಿಂದ ಆತ ಚೇತರಿಸಿಕೊಳ್ಳಲು ದೀರ್ಘಕಾಲ ಬೇಕೆಂಬುದು ನನಗೆ ತಿಳಿದಿತ್ತು. ಆತ ಆ ಹಗಲು ಬೀದಿಗಿಳಿದು ಸ್ವಲ್ಪ ದೂರ ನಡೆದು ಹೋಗಿದ್ದನಂತೆ. ನಮ್ಮ ಶಾಲೆಯ ಕನ್ನಡ ಪಂಡಿತರು ಅವನ ಕಣ್ಣಿಗೆ ಬಿದ್ದರಂತೆ ........

ತಂದೆ ಅವರನ್ನು ನಿಲ್ಲಿಸಿ, " ನಮಸ್ಕಾರ ಸ್ವಾಮಿ," ಎಂದ.

ಅವರು ಪ್ರತಿ ನಮಸ್ಕಾರ ಕೊಟ್ಟರು. ಆದರೆ ಎಂದೋ ನೋಡಿದ್ದ ನನ್ನ ತಂದೆಯ ಗುರುತು ಅವರಿಗೆ ಸಿಗಲಿಲ್ಲ.

" ಯಾರು-ಯಾರು? " ಎಂದರು ಅವರು.

" ನಾನು. ಚಂದ್ರೂ ತಂದೆ. ನಿಮ್ಮ ಸ್ಕೂಲಿಗೆ ಬರ್ತಾನಲ್ಲ ಚಂದ್ರಶೇಖರ—ಅವನ ತಂದೆ."

"ಯಾವ ಚಂದ್ರು, ಯಾವ ಚಂದ್ರಶೇಖರ ?"

ತಂದೆಗೆ ತುಂಬ ದಿಗಿಲಾಯಿತು. ಆಶ್ಚರ್ಯವೂ ಆಯಿತು. ಚಂದ್ರಶೇಖರನ ಹೆಸರು ಕನ್ನಡ ಉಪಾಧ್ಯಾಯರಿಗೆ ತಿಳಿಯದೆಂದ ರೇನು ? ಆದರೆ ಸ್ವಲ್ಪ ಹೊತ್ತು ಯೋಚಿಸಿದ ಮೇಲೆ ಆ ಉಪಾಧ್ಯಾಯರು ನೆನಪಾದವರ ಹಾಗೆ ಬಾಯಿ ತೆರೆದರು.

"ಓ ಚಂದ್ರಶೇಖರನಾ ?" ಎಂದರು.

ಹಾಗೆಯೇ ಸ್ವರವೇರಿಸಿ, "ಏನಯ್ಯ ಸ್ಕೂಲು ಬಿಡಿಸ್ಬಿಟ್ಟಿ ಯಲ್ಲಯ್ಯ-ಹೀಗ್ಮಾಡಬಹುದಾ ?" ಎಂದರು.

"ಸ್ವಾಮಿ ಸ್ವಾಮಿ, ಯಾಕೆ ಯಾಕೆ?........ನಮ್ಮ ಚಂದ್ರು ಸ್ಕೂಲಿಗೆ ಬರ್‍ತಾ ಇಲ್ವ ? ಸ್ಕೂಲು ಬಿಟ್ಬುಟ್ನ ?"

ಈಗ ದಿಗಿಲು ಆಶ್ಚರ್ಯಗಳ ಅನುಭವವಾದುದು ಕನ್ನಡ ಪಂಡಿತರಿಗೆ.

"ಎಲ್ಲಿ ? ಈ ವರ್ಷ ಒಂದು ಹತ್ತು ದಿವಸ ಬಂದ್ನೊ ಇಲ್ವೊ. ಆಮೇಲೆ ಶಾಲೆ ಬಿಟ್ಬಿಟ್ಟ. ಅನ್ಯಾಯ ! ಅನ್ಯಾಯ !"

ಯಾರಿಗೆ ಯಾರು ಅನ್ಯಾಯ ಮಾಡಿದ್ದರು ? ಯಾರಿಗೆ ಅನ್ಯಾಯ ವಾಗಿತ್ತು ? ಹಾಗೆ ಯೋಚಿಸುವುದರಲ್ಲಿ ಅರ್ಥವಿರಲಿಲ್ಲ.

ನನ್ನೆದುರಿಗಾದರೋ ಕಾಣುತ್ತಲಿದ್ದುದೊಂದೇ—ಅದು ನನ್ನ ತಂದೆಗೆ ನಾನು ಬಗೆದ ಅನ್ಯಾಯ.

ಹಾಗೆ ನಡೆದುದನ್ನು ಆ ಬಳಿಕ ಮನೆಯಲ್ಲಿ ತಂದೆ ನನಗೆ ವಿವರಿಸಿದಾಗ, ನನ್ನ ಪ್ರೀತಿಯ ಉಪಾಧ್ಯಾಯರಾಗಿದ್ದ ಆ ಪಂಡಿತರನ್ನೂ ತುಂಬ ನೋವು ಉಂಟಾಗುವ ಸುದ್ದಿ ಕೇಳಿ ಸಹಿಸಿಕೊಂಡಿದ್ದ ತಂದೆಯನ್ನೂ ನಾನು ಮನಸ್ಸಿನಲ್ಲೇ ಚಿತ್ರಿಸಿಕೊಂಡೆ. ಒಂದಲ್ಲ ಒಂದು ದಿನ ನನ್ನ ರಹಸ್ಯ ಬಯಲಾಗುವುದೆಂದು ನನಗೆ ಗೊತ್ತಿತ್ತು. ಆದರೆ ಇಷ್ಟು ಬೇಗನೆ ಹಾಗಾಗುವುದೆಂದು ಯಾರು ಭಾವಿಸಿದ್ದರು ?

ತಂದೆಯ ಕಣ್ಣುಗಳು ತೋಯ್ದಿದ್ದುವು. ಬಹಳ ದಿನಗಳ ಮೇಲೆ ಆತನ ಕಂಬನಿಯನ್ನು ಕಂಡೆ. ಹಿಂದೆಯಾಗಿದ್ದರೆ ಅವನು ಮತ್ತೂ ಒಂದಷ್ಟು ಮಾತನಾಡುತ್ತಿದ್ದ. ಆರಂಭದಿಂದಲೂ ತನ

ಮೇಲೆ ವಕ್ರಿಸಿಕೊಂಡೇ ಇದ್ದ ವಿಧಿಯನ್ನು ಆತ ಹಳಿದರೂ ಹಳಿದನೇ. ಹಾಗೆ ಮಾತನಾಡಿದಾಗ ಯಾವಾಗಲೂ ಅವನಿಗೆ ಸಮಾಧಾನವೆನಿ ಸುತ್ತಿತ್ತು. ಆದರೆ ಈ ದಿನ ತಂದೆ, ತುಟಿಗಳನ್ನು ಬಿಮ್ಮನೆ ಬಿಗಿದು ಕುಳಿತ.

ಅವನ ಮೌನ ಅಸಹನೀಯವಾಗಿತ್ತು. ಮಾತು ನಿಲ್ಲಿಸಿ ಆತ ಮೌನ ಸಮಾಧಿಯಲ್ಲಿ ಮುಳುಗಿದನೆಂದರೆ, ತಡೆಯಲಾಗದ ನೋವಿನಿಂದ ಆ ಹೃದಯ ಜರ್ಜರಿತವಾಗಿತ್ತೆಂದು ನಾನು ತಿಳಿದು ಕೊಳ್ಳುತ್ತಿದ್ದೆ.

ನಾನು ಸದ್ದಿಲ್ಲದೆ ಎದ್ದು ದೀಪ ಹಚ್ಚಿದೆ. ಅದರ ಸೊಡರು ಗಾಳಿಯಲ್ಲಿ ತೂರಾಡುತ್ತಿತ್ತು. ಕ್ಯಾಲೆಂಡರಿನ, ಇನ್ನೊಂದು ಚಿತ್ರದ, ತೂಗುಹಾಕಿದ್ದ ಬಟ್ಟೆ ಬರೆಯ, ನೆರಳುಗಳೆಲ್ಲ ಗೋಡೆಯಮೇಲೆ ನರ್ತಿಸುತ್ತಿದ್ದುವು. ವರ್ತನೆಯ ಹಾಲು ಒಯ್ದು ಕೊಡಲು ತಡವಾಯಿ ತೆಂದು ನಾನು ಲಗುಬಗೆಯಿಂದ ಹೊರಕ್ಕಿಳಿದೆ. ಅದಕ್ಕೆ ಸರಿಯಾಗಿ ಅಜ್ಜಿ ನನ್ನನ್ನು ಕರೆಯುತ್ತಿದ್ದರು.

"ಚಂದ್ರೂ........ಬಂದ್ಯೇನೋ ಮರಿ........?"

ನಮ್ಮ ಗುಡಿಸಿಲಿನಲ್ಲಿ ದೀಪ ಹಚ್ಚಿದ್ದರೆ ನಾನು ಬಂದಿದ್ದೆ ಎಂದರ್ಥ. ಆಗ ಅಜ್ಜಿ ಮರಿಯನ್ನು ಕೂಗುವರು. ಅವರ ಪಾಲಿಗೆ ನಾನು ಯಾವಾಗಲೂ ಮರಿಯೇ. ವರ್ಷ ಆರಾದರೇನು, ಹದಿನಾ ರಾದರೇನು? ನಾನು ಯಾವಾಗಲೂ ಅಜ್ಜಿಯ ದೃಷ್ಟಿಯಲ್ಲಿ ಮರಿಯೇ.

ಮುಂದೆಯೂ ಅಷ್ಟೆ. ನಾನು ಕೆಟ್ಟುಹೋದೆನೆಂದು ನಾಲ್ಕು ಜನ ಬಂದು ಅಜ್ಜಿಗೆ ಹೇಳಿದಾಗಲೂ ಅವರು ಮರಿಯಬಗ್ಗೆ ಅವಿಶ್ವಾಸ ತಳೆಯಲಿಲ್ಲ. ಪೋಲೀಸರು ಬಂದು ವಿಚಾರಿಸಿದಾಗ, ಮರಿಯಮೇಲೆ ಆರೋಪಹೊರಿಸಿದ ಆ ಜನರನ್ನು ಅವರು ಶಪಿಸಿದರು.

ಪೋಲೀಸರು—

......ರಾತ್ರಿ ಹನ್ನೊಂದು ಹೊಡೆಯಲು ಇನ್ನು ಸ್ವಲ್ಪ ಹೊತ್ತಿದೆ.

ಈ ದಿನ ಬೆಳಗು ಮುಂಜಾನೆಯಿಂದ ನಾನು ಬರೆಯುತ್ತ ಬಂದಿದ್ದೇನೆ. ಎಂದೂ ಇಷ್ಟು ಬರೆದವನಲ್ಲ. ಕೈ ಬೆರಳುಗಳು ನೋಯುತ್ತಿವೆ. ಮಧ್ಯಾಹ್ನದ ನಿದ್ದೆಯನ್ನೂ ಬಿಟ್ಟುಕೊಟ್ಟು, ಹರಟೆಗೂ ಹೋಗದೆ, ದಿನದ ಪತ್ರಿಕೆಯನ್ನೂ ಓದದೆ, ನಾನು ಈ ಆತ್ಮವೃತ್ತವನ್ನು ಬರೆಯುತ್ತಿದ್ದೇನೆ.

ಇನ್ನೊಂದು ವಿಷಯ ಬರೆದು ನಾನು ವಿರಮಿಸಬೇಕು. ಮನುಷ್ಯನಿಗೆ ನಿದ್ದೆ ಅಗತ್ಯ. ಮುಂದಿನ ವಾರದ ಮಾತು ಮುಂದೆ. ಆದರೆ ಸದ್ಯಃ ಆತ್ಮವೃತ್ತ ವನ್ನು ಬರೆಯುತ್ತಿದ್ದೇನೆ. ಆ ಬರೆವಣಿಗೆ ಸಾಧ್ಯವಾಗುವಂತೆ, ಇನ್ನು ಆರು ದಿನಗಳಲ್ಲಿ ಮುಕ್ತಾಯವಾಗುವಂತೆ, ನಾನು ಕೈಗೂ ಮೆದುಳಿಗೂ ವಿಶ್ರಾಂತಿ ಕೊಡಲೇಬೇಕು.

ಆದರೆ, ಈ ದಿನ ಹೇಳಲು ಉಳಿದಿರುವ ಈ ವಿಷಯವನ್ನು ಹೇಗೆ ಬರೆಯಲಿ—ಹೇಗೆ ಬರೆಯಲಿ?

ನನ್ನ ತಂದೆ ಮತ್ತು ನನ್ನ ಅಜ್ಜಿ........

ಆ ಪೋಲೀಸರು...........

—ಆ ಘಟನೆ ನಡೆದುದು ಹೀಗೆ. ನಾನು ಶಾಲೆಬಿಟ್ಟ ಸಂಗತಿ ತಂದೆಗೆ ತಿಳಿದು ಕೆಲವು ತಿಂಗಳುಗಳಾಗಿದ್ದುವು. ಆತ ಸೊರಗುತ್ತಲೇ ಇದ್ದ. ಗುರುತು ಸಿಗದ ಹಾಗೆ ಬರಬರುತ್ತ ಬರಿಯಕಡ್ಡಿಯಾಗುತ್ತಿದ್ದ.

ಆ ಸಂಜೆ ಬೀದಿಯ ದೀಪಗಳು ಹತ್ತಿಕೊಂಡ ಹೊತ್ತಿಗೇ ನನ್ನ ಕೈಯಲ್ಲಿ ಇನ್ನೂ ಉಳಿದಿದ್ದ ಕೆಲವು ಪತ್ರಿಕೆಗಳನ್ನು ಮಾರಿ ಮುಗಿಸುವುದಕ್ಕೋಸ್ಕರ ಬಸ್ ನಿಲ್ದಾಣದ ಆ ಚೌಕದಲ್ಲಿ ನಾನು ನಿಂತಿದ್ದೆ. ನನ್ನ ಪಕ್ಕದಲ್ಲಿ ಸೂಟು ಧರಿಸಿ, ರುಮಾಲು ಹೊತ್ತು, ಕೈಲಿ ನಡೆಗೋಲು ಹಿಡಿದಿದ್ದ ದೊಡ್ಡಮನುಷ್ಯರೊಬ್ಬರು ನಿಂತಿದ್ದರು

"ಪೇಪರ್ ಬೇಕೆ ಸಾರ್?" ಎಂದು ಕೇಳಿದೆ.

ಅವರು ನನ್ನನ್ನು ಕ್ಷಣಕಾಲ ದುರುಗುಟ್ಟಿ ನೋಡಿದರು. ಪೇಪರು ಬೇಡವೆನ್ನುವುದೇ ಆ ನೋಟದ ಅರ್ಥವಾಗಿತ್ತು.

ನಾನು ಅಲ್ಲಿದ್ದುದು ಎರಡೇ ನಿಮಿಷ. ಅಷ್ಟರಲ್ಲಿ ಆ ಕಳ್ಳತನ

ವಾಗಿತ್ತು. ಆ ಹುಡುಗ ನಮ್ಮಿಬ್ಬರಿಗೂ ನಡುವೆ ಹಿಂಬದಿಯಿಂದ ಬಂದು, ಅವರ ಷರಾಯಿಯ ಜೇಬಿಗೆ ಕೈಹಾಕಿ ಹಣದ ಪಾಕೀಟು ಹೊಡೆದಿದ್ದ. ಸಾಮಾನ್ಯವಾಗಿ ಕೋಟಿನ ಬಳಿಗೆ ಹೃದಯಕ್ಕೆ ತಾಗಿಯೇ ಬೆಚ್ಚಗೆ ಇಡಬೇಕಾಗಿದ್ದ ಆ ಚೀಲವನ್ನು ಅದೇಕೆ ಆ ಮಹಾನುಭಾವರು ಷರಾಯಿಯ ಜೇಬಿನಲ್ಲಿ ಇಟ್ಟಿದ್ದರೋ! ನನಗೆ ಆ ಹುಡುಗನ ಪರಿಚಯವಿತ್ತು. ಆತ ಹಿಂದೆ ಪತ್ರಿಕೆ ಮಾರುತ್ತಿದ್ದನಂತೆ. ಆದರೆ ವೃದ್ಧೆಯಾದ ತಾಯಿಯನ್ನೂ ತಂಗಿಯನ್ನೂ ಸಾಕಬೇಕಾದ ಅವಶ್ಯತೆ ಹೆಚ್ಚು ಸಂಪಾದನೆಯ ಆ ಕೆಲಸಕ್ಕೆ ಅವನನ್ನು ನೂಕಿತ್ತು.

ಆ ದೊಡ್ಡಮನುಷ್ಯರು, ಮನೆಗೆ ಬೆಂಕಿಹತ್ತಿಕೊಂಡವರು ಕಿರುಚುವಹಾಗೆ, ಬೊಬ್ಬಿಟ್ಟರು. ಅವರ ನಡೆಗೋಲು ಎತ್ತರಕ್ಕೆ ಆಕಾಶದಲ್ಲಿ ಅತ್ತಿತ್ತ ಬೀಸತೊಡಗಿತು. ಇನ್ನು ದೂರ ಸರಿಯುವುದೇ ಮೇಲೆಂದು ನಾನು ಅಲ್ಲಿಂದ ಹೊರಟೆ. ಆಗ ಅವರು ನನ್ನನ್ನು ಹಿಡಿದರು. ತಪ್ಪಿಸಿಕೊಂಡು ಓಡಿಹೋಗಬಹುದಾಗಿತ್ತು. ಆದರೆ ನಿರಪರಾಧಿಯಾದ ನಾನು ಹಾಗೆ ಯಾಕೆ ಮಾಡಬೇಕು? ಎರಡು ನಿಮಿಷಗಳಲ್ಲೆ ಪೋಲೀಸರು ಬಂದು ನನ್ನನ್ನು ತಮ್ಮ ವಶಪಡಿಸಿಕೊಂಡರು. ನಿಜವಾಗಿಯೂ ಕದ್ದಿದ್ದ ಹುಡುಗನನ್ನು ನಾನು ತೋರಿಸಿಕೊಡಬಹುದಾಗಿತ್ತು. ಆತ ಓಡಿಹೋಗಿರಲಿಲ್ಲ. ಬೀದಿಯ ಆಚೆ ನಿಂತು ನನ್ನನ್ನೆ ನೋಡುತ್ತಿದ್ದ. ಆದರೆ ನಾನು ಹಾಗೆ ಮಾಡಲಿಲ್ಲ. ಆ ಘಟನೆಯಿಂದ ಚಕಿತನಾಗಿದ್ದ ನಾನು ಹುಡುಗ ಮಾಡಿದ್ದುದು ಅಪರಾಧವೆ ಅಲ್ಲವೆ ಎಂದು ಯೋಚಿಸುವ ಸ್ಥಿತಿಯಲ್ಲಿರಲಿಲ್ಲ.

ಪೋಲೀಸರು ಬೀದಿಯಲ್ಲೆ ನನ್ನ ಕೆನ್ನೆಗೆ ಏಟು ಬಿಗಿದರು. ಬೆನ್ನಿಗೆ ಗುದ್ದಿದರು. ಕಳೆದುಹೋದ ಪಾಕೀಟಿಗಾಗಿ ನನ್ನಮೇಲೆ ಕೈಯಾಡಿಸಿದರು. ಏನೂ ಸಿಗದೆಹೋದಾಗ ಹಿಡಿದು ಠಾಣೆಗೆ ಬಿಡ್ದರು. ಹಣ ಕಳೆದುಕೊಂಡು, ಹತ್ತಾರೂ ನೂರಾರು ರೂಪಾಯಿಗಳಮಟ್ಟಿಗೆ ಬಡವರಾಗಿದ್ದ ಆ ಶ್ರೀಮಂತರತ್ತ ನಾನು ನೋಡಲೇ ಇಲ್ಲ.

ಪೋಲೀಸು ಠಾಣೆಯಲ್ಲಿ ನನ್ನನ್ನು ಲಾಕಪ್ಪಿನಲ್ಲಿಟ್ಟರು.

ಪೋಲೀಸಿನ ಮೀಸೆ ಮುನಿಯಪ್ಪ ಬಹಳ ತಿಳಿದವನ ಹಾಗೆ

ಇನ್ಸ್‌ಪೆಕ್ಟರ್‌ಗೆ ಹೇಳಿದ.

"ಈ ಪೇಪರ್ ಮಾರೊ ಹಡುಗರು ಮಹಾ ಖದೀಮರು........ ಇವನ್ನ ನಂಬೊ ಹಂಗೇ ಇಲ್ಲ. ಇವನ ಮನೆ ಸರ್ಚ್ ಮಾಡ್ಬೇಕು. ಆಗ ಇವನೆಂಥವನು ಅಂಬೋದು ಗೊತ್ತಾಗತ್ತೆ."

ಇನ್ಸ್‌ಪೆಕ್ಟರ್ ನಗುತ್ತಾ ಕೇಳಿದ.

"ಇವನಿನ್ನೂ ಮನೆಗೇ ಹೋಗಿಲ್ವಲ್ಲೊ ಮುನಿಯಪ್ಪಾ ?"

ಮುನಿಯಪ್ಪ ತನ್ನ ಪೇಟವನ್ನು ಮುಂದಕ್ಕೆ ಬಾಗಿಸಿ ಅರ್ಧ ಹಣೆಯನ್ನು ಮುಚ್ಚಿಕೊಂಡ. ಅವನ ಹುಬ್ಬುಗಳು ಮೇಲಕ್ಕೆ ಹೋಗಿ ಆ ಪೇಟವನ್ನು ಮುಟ್ಟಿದುವು. ಬುದ್ಧಿವಂತನಾದ ಮುನಿಯಪ್ಪ ಯೋಚಿಸುತ್ತಿದ್ದ. ಉತ್ತರ ಅವನಿಗೆ ಹೊಳೆಯಿತೇನೊ!

"ಪಾಕೀಟು ಅಲ್ಲ ಸಾರ್. ಇವನು ಹಿಂದೇನೂ ಕಳ್ಳತನ ಮಾಡಿದ್ದರೆ ಮನೆಯೊಳಗೆ ಏನೂ ಸಿಗಾಕಿಲ್ವ ?"

"ಮಾರಾಟಮಾಡದೆ ಮನೇಲಿ ಇಟ್ಟಿರ್‍ತಾರೇನು ಕದ್ದ ಸಾಮಾನ್ನ ?"

ಇದಕ್ಕೆ ಏನು ಉತ್ತರ ಕೊಡಬೇಕೆಂದು ಮುನಿಯಪ್ಪನಿಗೆ ತೋಚಲಿಲ್ಲ.

ಆದರೂ ಇನ್ಸ್‌ಪೆಕ್ಟರ್ ಸಾಹೇಬ, ನಮ್ಮ ಮನೆ ಶೋಧಿಸಬೇಕೆಂದು ನಿರ್ಧಾರಮಾಡಿದ.

ನಮ್ಮ ಮನೆಯ ಶೋಧನೆ! ಮುಂದೇನಾಗುವುದು ? ಮಗ ಸಂಭಾವಿತನಾಗುವನೆಂದು, ದೊಡ್ಡ ಮನುಷ್ಯನಾಗುವನೆಂದು, ಆಸೆ ಇರಿಸಿಕೊಂಡಿದ್ದ ತಂದೆ, ಪೋಲೀಸರ ಪ್ರಶ್ನೆಗಳಿಗೆ ಉತ್ತರ ಕೊಡಬೇಕು! ಅಜ್ಜಿ ತನ್ನ ಮರಿಯಿಂದ ತನಗಾದ ಅವಮಾನವನ್ನು ಸಹಿಸಿಕೊಳ್ಳಬೇಕು! ನನಗೆ ದಿಕ್ಕು ತೋಚಲಿಲ್ಲ. ಗಲಿಬಿಲಿಯಾಯಿತು. ನಾನು ಇನ್ಸ್‌ಪೆಕ್ಟರನ ಮುಖ ನೋಡಿದೆ. ಆದುದಾಗಲೆಂದು ಇಂಗ್ಲಿಷ್‌ನಲ್ಲಿ ಆತನನ್ನು ಸಂಬೋಧಿಸಿದೆ.

"ಸಾರ್, ದಯವಿಟ್ಟು ನಮ್ಮ ಮನೆಗೆ ಹೋಗ್ಬಾರ್‍ದು ಸಾರ್ ನಾನು ಕಳ್ಳತನ ಮಾಡಿಲ್ಲ ಸಾರ್. ನನ್ನ ತಂದೆಗೆ ಟಿ. ಬಿ. ಕಾಯಿಲೆ

—ದಯವಿಟ್ಟು ಮನೆಗೆ ಹೋಗ್ಬಾರ್ದು ಸಾರ್."

ಲಾಕಪ್ಪಿನಲ್ಲಿರುವ ಹುಡಗ, ಪೋಲೀಸರು ತನ್ನ ಮನೆಗೆ ಹೋಗಬಾರದು ಎನ್ನುತ್ತಾನೆ. ತಂದೆಗೆ ಕಾಹಿಲೆ ಎನ್ನುತ್ತಾನೆ. ಆತನಿಗೆ ದುಡ್ಡಿನ ಅವಶ್ಯತೆ ಇದೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಇಷ್ಟು ಸಾಕ್ಷ್ಯವಿದ್ದರೂ ತಾನು ಕಳ್ಳತನಮಾಡಿಲ್ಲವೆಂದೇ ಹಟ ಸಾಧಿಸುತ್ತಾನೆ … ….ಆ ಪೋಲೀಸ್ ಅಧಿಕಾರಿ ಹೀಗೆ ಯೋಚಿಸರಬೇಕು. ಆದರೆ ಆತ ತನ್ನ ಸಂದೇಹಗಳನ್ನು ವ್ಯಕ್ತಪಡಿಸಲಿಲ್ಲ.

"ಹಾಗೇ ಆಗಲಿ. ನಿನ್ನ ತಂದೆಗೆ ಕಾಹಿಲೆ ಹೌದೊ ಅಲ್ಲವೂ ತಿಳಿದುಬರಬೇಕು. ಮನೆಯ ಅಡ್ರೆಸ್‌ಕೊಡು………ಇಂಗ್ಲಿಷ್ ಬೇರೆ ಮಾತಾಡ್ತೀಯಾ, ನಿನ್ನ ಕಳ್ಳ ಅಂತ ಹೇಳೋದು ಹ್ಯಾಗೆ ?"

ಆ ಮಾತಿನಲ್ಲಿ ಕೃತಕ ವಿನಯವಿತ್ತು. ಆದರೆ ಆಗ ನನಗೆ ಸ್ಪಷ್ಟವಾಗಿ ಅದು ತಿಳಿಯಲಿಲ್ಲ.

"ವಿಚಾರಿಸಿ ತಿಳ್ಕೊಳ್ಳಿ ಸಾರ್. ಆದರೆ ನಮ್ಮನೇಗೆ ಪೋಲೀಸರು ಹೋಗ್ಬಾರ್ದು. ನಮ್ಮ ತಂದೆ ನೊಂದ್ಕೋತಾನೆ ಸಾರ್."

"ಆಗಲಿ. ಅಡ್ರಸ್ ಕೊಡು."

ನಾನು ನಮ್ಮ ಮನೆಯ ಅಡ್ರಸ್ ಕೊಟ್ಟೆ.

ಅದು ಕೈಸೇರಿದೊಡನೆ ಆ ಅಧಿಕಾರಿ ನಕ್ಕ. ಘಾತವಾಯಿತೆಂದು ಆಗ ನನಗೆ ತಿಳಿಯಿತು.

"ನಿನ್ನ ಹೊಡೆದುಮಾಡಿ ಅಡ್ರೆಸ್ ತಿಳಿಕೊಬೇಕಾದ ತೊಂದರೇನೆ ತಪ್ಪಿಸ್ತಿಯ್ಯಲ್ಲೊ ಇಂಗ್ಲಿಷ್ ಸಾಹೇಬ ! ಇಷ್ಟು ಸುಲಭವಾಗಿ ಸಿಕ್ಹಾಕ್ಕೊಳ್ಳೋನು ನೀನೆಂತಾ ಕಳ್ತನ ಮಾಡೀಯೊ ?"

ನನಗೆ ಅಳು ಬಂತು. ನ್ಯಾಯದ ರಕ್ಷಕರಾಗಿದ್ದ ಆ ವ್ಯಕ್ತಿಗಳನ್ನು ನಾನು ಮನಸಾರೆ ದ್ವೇಷಿಸಿದೆ. ಅಂತಹ ಕ್ಷುದ್ರ ಜಂತುಗಳ ಮುಂದೆ ನನ್ನ ಅಸಹಾಯತೆಯ ಕಣ್ಣನೀರು ಹರಿಯಬಾರದೆಂದು ಅದನ್ನು ಹತ್ತಿಕ್ಕಿದೆ.

ಆ ಅಧಿಕಾರಿಯೂ ಇಬ್ಬರು ಪೋಲೀಸರೂ ಹೊರಟುಹೋದರು -ನಮ್ಮ ಮನೆಗೆ ಹೊರಟುಹೋದರು. ಲಾಕಪ್ಪಿನ ಮುಂದೆ ಕುಳಿತಿದ್ದ

ವನು, ಸ್ಟೇಷನ್ ಡ್ಯೂಟಿಯ ಪೋಲೀಸಿನಾತ, ಜೇಬಿನಿಂದ ಬೀಡಿ ತೆಗೆದು ಕಡ್ಡಿ ಗೀರಿ ಹೊಗೆಯುಗುಳಿದ. ಗಾಢವಾದ ಯೋಚನೆ ಯಲ್ಲಿ ತಲ್ಲೀನನಾದ ಹಾಗಿತ್ತು, ಅವನ ಮುಖಮುದ್ರೆ. ಅದೇನು ಯೋಚನೆಗಳು ಅವನನ್ನು ಕಾಡುತ್ತಿದ್ದವೊ. ನನ್ನನ್ನು ಮಾತ್ರ, ಇಂಥದೇ ಎಂದು ಹೇಳಲಾಗದ ಭೀತಿಯೊಂದು ಆವರಿಸಿತ್ತು. ಮನೆ ಯಲ್ಲಿ ಏನಾಗುವುದು? ಏನಾಗುವುದು?.... ........

..... ನಾನು ಲಾಕಪ್ಪಿನೊಳಗೆ ಕುಳಿತಿದ್ದೆ. ಮನೆಯ ಶೋಧ ನೆಗೆ ಹೋದವರು ಹತ್ತು ಘಂಟೆಯ ಹೊತ್ತಿಗೇ ಮರಳಿ ಬಂದರು. ಬಂದ ಮೇಲೆ ನನ್ನತ್ತ ಮುಖ ಹೊರಳಿಸಿಯೂ ನೋಡಲಿಲ್ಲ. ನನ್ನ ಬಗ್ಗೆ ಯಾರಿಗೂ ಆಸಕ್ತಿಯೆ ಇದ್ದಂತೆ ತೋರಲಿಲ್ಲ. ನಾನು ಸೊಳ್ಳೆ ಗಳನ್ನು ತೀಡಿ ಕೊಲ್ಲುತ್ತಾ, ದುರ್ಗಂಧವನ್ನು ಸಹಿಸಿಕೊಳ್ಳುತ್ತಾ ಹೊತ್ತು ಕಳೆದೆ.

ನಡುರಾತ್ರೆಯ ಹೊತ್ತಿರಬೇಕು. ಇನ್ಸ್‌ಪೆಕ್ಟರ್ ಇನ್ನೂ ಮನೆಗೆ ಹೋಗಿರಲಿಲ್ಲ. ಪೋಲೀಸರವನೊಬ್ಬ ಹೊರಗೆ ಜಗಲಿಯ ಮೇಲೆ ತೂಕಡಿಸುತ್ತಿದ್ದ.

"ಸ್ವಾಮಿ............ಸ್ವಾಮಿ........"

ನಾನು ಬೆಚ್ಚಿ ಬಿದ್ದೆ. ನನ್ನ ತಂದೆಯ ಸ್ವರ—ನನ್ನ ತಂದೆ. ನೆಲ ಎರಡು ಹೋಳಾಗಿ, ನಾನು ಕೆಳಕ್ಕೆ ಇಳಿದುಹೋಗಿ, ತಂದೆಯ ದೃಷ್ಟಿಯಿಂದ ಮರೆಯಾಗಬಾರದೇ ಎನ್ನಿಸಿತು. ಆದರೆ ಆತ ಜಗ ಲಿಯಮೇಲೆ ನಿಂತು ಬಾಗಿಲಿನ ಎಡೆಯಿಂದ ಲಾಕಪ್ಪಿನೊಳಕ್ಕೆ ನೋಡಿಯೇ ನೋಡಿದ. ನಮ್ಮ ಒಂದೇ ಒಂದಾದ ಹರಕು ಕಂಬಳಿ ಹೊದ್ದು ಆತ ಬಂದಿದ್ದ. ಕುರುಚಲಾಗಿ ಬೆಳೆದಿದ್ದ ಗಡ್ಡ, ಬತ್ತಿ ಹೋಗಿದ್ದ ಕೆನ್ನೆಗಳನ್ನು ಮುಚ್ಚಿತ್ತು. ಕಣ್ಣುಗಳು ಆಳಕ್ಕೆ ಇಳಿ ದಿದ್ದುವು. ಅವು ಚಲಿಸಿದಾಗ ಆ ನೋಟದಲ್ಲಿ ಯಾವ ಭಾವನೆ ಇತ್ತೆಂಬುದನ್ನು ಆಗ ತಿಳಿಯುವುದು ಸಾಧ್ಯವಿರಲಿಲ್ಲ. ಸ್ಟೇಷನ್ನಿನ ಮಂದಪ್ರಕಾಶದಲ್ಲಿ ಅವನು ನನಗೆ ಕಾಣಿಸುತ್ತಿದ್ದ. ಆದರೆ ಲಾ ಕಪ್ಪಿನ ಕತ್ತಲೆ ನನ್ನನ್ನು ಮರೆಮಾಡಿತ್ತು.

ಹೀಗಿದ್ದರೂ ತಂದೆಯ ಆ ಕಣ್ಣುಗಳು ನನ್ನನ್ನು ಗುರುತಿಸಿದುವು.

ಅಧಿಕಾರಿ, "ಏನು ? ಏನೀಗ ?" ಎಂದ.

ಜಗಲಿಯ ಮೇಲೆ ತೂಕಡಿಸುತ್ತಿದ್ದ ಪೋಲೀಸಿನವನು ಎದ್ದು ಬಂದು, "ನಡಿ, ಹೊರಕ್ಕೆ ನಡಿ !" ಎಂದ.

ತಂದೆ ಹೊರಕ್ಕೆ ನಡೆಯಲಿಲ್ಲ. ಆತ ಅಧಿಕಾರಿಯನ್ನೇ ದಿಟ್ಟಿಸಿ ನೋಡಿದ. ಆ ನೋಟದಲ್ಲಿ ದೈನ್ಯವಿತ್ತೋ ದ್ವೇಷವಿತ್ತೋ ನನಗೆ ತಿಳಿಯದು. ಆ ಸ್ವರ ಮಾತ್ರ ಏಕರೂಪವಾಗಿ ಹೊರಬೀಳುತ್ತಿತ್ತು.

"ಸ್ವಾಮಿ, ನನ್ನ ಹುಡುಗ ಚಂದ್ರಶೇಖರ........ಸ್ವಾಮಿ........ ತಾವು—"

ಅಧಿಕಾರಿ ಸಿಟ್ಟಾಗಿ ಕೂಗಾಡಿದ.

"ಹೊರಟುಹೋಗು. ನಿನ್ನ ಮಗನ್ನ ಇಲ್ಲಿ ಯಾರೂ ತಿಂತಾಯಿಲ್ಲ. ತೆಪ್ಪಗೆ ಹೊರಟುಹೋಗು."

ಆದರೂ ತಂದೆ ಅಲ್ಲೇ ನಿಂತ.

"ಸ್ವಾಮಿ, ನಾನು ಜಾಮೀನು ಕೊಡ್ತೀನಿ. ಹುಡುಗನ್ನ ಬಿಟ್ಬಿಡಿ ಸ್ವಾಮಿ........"

ನನಗೆ ಸಹಿಸುವುದಕ್ಕಾಗಲಿಲ್ಲ. ಎಂತಹ ಆಸೆಗಳನ್ನಿಟ್ಟು ಕೊಂಡಿದ್ದ ಆ ತಂದೆ ! ಕ್ರೂರಿಯಾದ ನಾನು ಎಂತೆಂತಹ ನೋವುಗಳಿಗೆ ಆ ಜೀವವನ್ನು ಗುರಿಮಾಡಿದ್ದೆ !

ಅಧಿಕಾರಿ ಮತ್ತೆ ಗದರಿದ:

"ನಿನ್ನ ಜಾಮೀನೂ ಬೇಡ. ಏನೂ ಬೇಡ. ಬೆಳಗಾದ್ಮೇಲೆ ಬಿಟ್ಬಿಡ್ತೀವಿ ಈಗ ಹೊರಟ್ಹೋಗು."

ನನ್ನ ಎದೆ ಡವಡನೆ ಬಡಿದುಕೊಳ್ಳುತ್ತಿತ್ತು. ನಾನು ಗಟ್ಟಿಯಾಗಿ ಹೇಳಿದೆ.

"ಅಪ್ಪಾ, ನೀನು ಮನೆಗೆ ಹೋಗಪ್ಪಾ. ಈ ಚಳೀಲಿ ಹೊರಗೆ ಹೋಗ್ಬಾರ್ದು ಅಂತಲ್ಲಾ ಡಾಕ್ಟರು ಹೇಳಿದ್ದು ? ಮನೆಗೆ ಹೋಗಪ್ಪಾ ಬೆಳಿಗ್ಗೆ ಬಂದ್ಬಿಡ್ತೀನಿ. ಮನೆಗೆ ಹೋಗಪ್ಪಾ."

ತಂದೆ ನನ್ನತ್ತ ನೋಡಲೇ ಇಲ್ಲ. ಹಾಗೆ ನೋಡದೆ ಇದ್ದಾಗ ನನ್ನ ದುಃಖ ಇಮ್ಮಡಿಸಿತು .......

ಆದರೆ ಸ್ವಲ್ಪ ಹೊತ್ತಾದಮೇಲೆ, ವಿನೀತನಾಗಿ ಅಧಿಕಾರಿಗೆ ಬಾಗಿ ವಂದಿಸಿ, ಆವನು ಮೆಲ್ಲನೆ ಹೊರಹೋದ.

ನನಗೆ ನಿದ್ದೆ ಬರಲಿಲ್ಲ. ದುಗುಡದಿಂದ ಹೃದಯ ಹೆಪ್ಪುಕಟ್ಟಿತ್ತು. ಮುಖ ಬಿಗಿದುಕೊಂಡಿತ್ತು. ಕೈ ಕಾಲುಗಳು ಮರವಾಗಿದ್ದುವು. ದೀರ್ಘವಾದ--ಬಲು ದೀರ್ಘವಾದ--ಕತ್ತಲೆಯ ದೊಡ್ಡ ಗವಿಯೊಳಕ್ಕೆ ತಡವರಿಸುತ್ತ ತಡವರಿಸುತ್ತ ನಾನು, ಮುಂದಕ್ಕೂ ಹೋಗಲಾರದೆ ಹಿಂದಕ್ಕೂ ಹೋಗಲಾರದೆ, ನಿಂತ ಹಾಗಿತ್ತು.

ಒಂದು ಘಂಟೆಯ ಹೊತ್ತಾದ ಮೇಲೆ ಅಧಿಕಾರಿ ಇಬ್ಬರು ಪೋಲೀಸರಿಗೆ, ಅವರಲ್ಲಿ ಮುಖ್ಯಸ್ಥನಿಗೆ, ನಿರ್ದೇಶಗಳನ್ನು ಕೊಟ್ಟು ತಾನು ಮನೆಗೆ ಹೊರಟನು. ಆ ನಿರ್ದೇಶಗಳಲ್ಲಿ ನನಗೆ ಸಂಬಂಧಿಸಿದ್ದು ಏನೂ ಇರಲಿಲ್ಲ.

ಅಧಿಕಾರಿ ಬೀದಿಗಿಳಿಯುತ್ತಿದ್ದಂತೆ ಆತನ ಸ್ವರ ಕೇಳಿಸಿತು.

"ಇನ್ನೂ ಇಲ್ಲೇ ಇದ್ದೀಯೇನೋ? ನಡಿ ಆಚೆಗೆ, ರ್‍ಯಾಸ್ಕಲ್! ಇಲ್ಲಿದ್ರೆ ನಿನ್ನೂ ಲಾಕಪ್ಪಿಗೆ ಸೇರಿಸ್ತೀನಿ."

ನನ್ನಪ್ಪ ಇನ್ನೂ ಅಲ್ಲೆನಿಂತಿದ್ದ. ಮನೆಗೆ ಹೋಗಿಯೇ ಇರಲಿಲ್ಲ. ಕ್ಷಯದ ಕಾಹಿಲೆಯ ಆ ಜೀವ ಹೊರಗೆ ಶೀತದಲ್ಲಿ ಚಳಿಯಲ್ಲಿ ತೋಯ್ದು ಕೊಳ್ಳುತ್ತಿತ್ತು ........

ಆಮೇಲೆ ಯಾವ ಸದ್ದೂ ಕೇಳಿಸಲಿಲ್ಲ. ನಿಮಿಷಗಳು ಘಂಟೆ ಗಳಾದುವು. ಪ್ರತಿಯೊಂದು ಘಂಟೆಗೆ ಪೋಲೀಸಿನವನು ಗಂಟೆ ಬಾರಿ ಸುತ್ತಿದ್ದ. ಹಾಗೆ, ರಾತ್ರಿ ಮೆಲ್ಲಮೆಲ್ಲನೆ ಕರಗಿತು. ಬೆಳಗು ಮುಂಜಾವ ನನಗೆ ಜೊಂಪು ಹಿಡಿದಿರಬೇಕು. ಒರಗಿದಲ್ಲಿಯೆ ನಾನು ನಿದ್ದೆ ಹೋಗಿದ್ದೆ. ಎಚ್ಚರಾದಾಗ ಸ್ಟೇಷನಿನ ಗೋಡೆ ಗಡಿಯಾರದ ಮುಳ್ಳು ಗಳು ಆರೂವರೆಯನ್ನು ಸೂಚಿಸುತ್ತಿದ್ದುವು.

ಬೆಳಗಾಗಿತ್ತು. ಇನ್ನು ಬಿಡುಗಡೆಯಾಗಬೇಕು. ತಂದೆ ಪ್ರಾಯಶಃ ರಾತ್ರಿಯೇ ಮನೆಗೆ ಹೋಗಿರಬಹುದೆಂದು ಭಾವಿಸಿದೆ.

ಪೋಲೀಸರು ಶೋಧೆಗೆ ಹೋದಾಗ ಮನೆಯಲ್ಲಿ ಆಗಿರಬಹುದಾದ ಅವಾಂತರವನ್ನು ಊಹಿಸಿಕೊಳ್ಳುತ್ತ ಕುಳಿತೆ. ನಿನ್ನೆ ಸಂಜೆ ಆ ದೊಡ್ಡ ಮನುಷ್ಯರ ಪಾಕೀಟು ಕಳೆದುಹೋದುದರಿಂದ ಆರಂಭವಾಗಿ ಈ ವರೆಗಿನ ಎಲ್ಲ ಘಟನೆಗಳಲ್ಲಿ ನಮ್ಮ ಮನೆಯ ಶೋಧೆಯೊಂದೆ ನನಗೆ ತಿಳಿಯದ ಅಂಶವಾಗಿತ್ತು........

ನನಗೆ ಎಚ್ಚರವಾಗಿತ್ತು. ಆದರೆ ಸ್ಟೇಷನ್ ಇನ್ನೂ ಎದ್ದಿರಲಿಲ್ಲ. ಆಗ—

" ಸ್ವಾಮಿ ........ ಪೋಲಿಸೆಪ್ಪನೋರೇ ........ ಸ್ವಾಮಿ."

ಅದು ನನ್ನ ತಂದೆಯ ಸ್ವರ. ಮನೆಯಿಂದ ಮತ್ತೆ ಬಂದಿದ್ದನೇನೊ ಹಾಗಾದರೆ ?

" ಏನೋ ಅದು ಗಲಾಟೆ ? ರಾತ್ರೆ ಸಾಹೇಬರು ಹೋದ್ಮೇಲೂ ಮರದ ಕೆಳಗೆ ಮುದುರ್ಕೊಂಡು ಬಿದ್ದಿದ್ಯಲ್ಲೊ. ನಿನ್ಮಗ ಹುಡುಗೀ ಅಂತ ತಿಳ್ಕೊಂಡ್ಯೇನೊ. ಯಾರು ನ್ಯೆ ಮುಟ್ತಾರೆ ಅವನ್ನ ? "

ಹಾಗಾದರೆ ನನ್ನ ತಂದೆ ಮನೆಗೆ ಹೋಗಿಯೇ ಇರಲಿಲ್ಲ! ಮಗನ ಬಿಡುಗಡೆಯ ಹಾದಿ ನೋಡುತ್ತಾ ಆ ರಾತ್ರಿಯನ್ನೆಲ್ಲಾ ಆತ ಸ್ಟೇಷನ್ನಿನ ಎದುರಿಗಿದ್ದ ಮರದ ಕೆಳಗೇ ಕಳೆದಿದ್ದ !

ಮತ್ತೆ ಹೊತ್ತು ಬಲು ನಿಧಾನವಾಗಿ ಕಳೆಯಿತು. ಆ ಅಧಿಕಾರಿ ಬಂದುದು ಒಂಭತ್ತು ಘಂಟೆಗೆ. ನನ್ನನ್ನು ಅವರು ಹೋಗಗೊಟ್ಟುದು ಆಮೇಲೆ. ಅಲ್ಲೆ ಬಾಗಿಲ ಬಳಿ ತಂದೆ ನಿಂತಿದ್ದ. ನಾನು ಅಧಿಕಾರಿಯನ್ನು ನೋಡಿ, " ನನ್ನ ಪೇಪರು ಮತ್ತು ಹಣ " ಎಂದೆ.

" ಏನು ? " ಎಂದು ಆತ ಬುಸುಗುಟ್ಟಿದ.

" ನಿನ್ನೆ ತಾವುಗಳು ನನ್ನನ್ನು ಅರೆಸ್ಟ್ ಮಾಡಿದಾಗ ನನ್ನ ಜೇಬಿನಲ್ಲಿದ್ದ ಒಂದೂವರೆ ರೂಪಾಯಿ ಚಿಲ್ಲರೆಯನ್ನೂ ಉಳಿದಿದ್ದ ಪೇಪರ್‌ಗಳನ್ನೂ ಭದ್ರತೆಗಾಗಿ ವಶಪಡಿಸ್ಕೊಂಡ್ರಲ್ಲಾ ಸಾರ್ ? "

ನನ್ನ ಮಾತಿನಲ್ಲಿ ನನಗರಿಯದ ಹಾಗೆಯೇ ವ್ಯಂಗ್ಯ ಬೆರೆಯುತ್ತಿತ್ತು.

ಅಧಿಕಾರಿಗೆ ಅದು ಸಹನೆಯಾಗಲಿಲ್ಲ.

" ಗೆಟ್ ಔಟ್. ರ್‍ಯಾಸ್ಕಲ್ ! "

ಅದು ಕೇಳಿಸದವನಂತೆ ನಟಿಸುತ್ತಾ, " ಏನೆಂದಿರಿ ಸಾರ್ ? " ಎಂದೆ.

ನನ್ನ ತಂದೆ ಮುಂದೆ ಹೆಜ್ಜೆಯಿಟ್ಟು ನನ್ನನ್ನು ತನ್ನೆಡೆಗೆ ಎಳೆದು ಕೊಂಡ. ನಾವಿಬ್ಬರೂ ಬೀದಿಗಿಳಿದೆವು. ಮನೆಯ ಹಾದಿ ಹಿಡಿದೆವು.

ಅಜ್ಜಿ ನಮ್ಮ ಬರವನ್ನೇ ಇದಿರುನೋಡುತ್ತಿದ್ದ ಹಾಗಿತ್ತು. ತಂದೆ ಹಾದಿಯುದ್ದಕ್ಕೂ ಮಾತನಾಡಿಯೇ ಇರಲಿಲ್ಲ. ಆದರೆ ಅಜ್ಜಿ ನನ್ನನ್ನು ಕಂಡೊಡನೆ ಮುಂದಕ್ಕೆ ಓಡಿಬಂದರು. ಆಕೆ ಮಡಿಯಲ್ಲಿರಲಿಲ್ಲ. ಸ್ನಾನಮಾಡಿಯೇ ಇರಲಿಲ್ಲ. ಓಡುತ್ತ ಬಂದು ಆಕೆ ನನ್ನ ಮೈ ದಡವಿದರು.

" ಏನಪ್ಪಾ ಚಂದ್ರು........ಹೊಡೆದ್ರೇನೋ ನಿಂಗೆ ? "

ಹನ್ನೊಂದು ವರ್ಷಗಳ ಹಿಂದೆ, ನಾನು ಮೊದಲ ಬಾರಿ ಶಾಲೆಗೆ ಹೋಗಿ ಹಿಂತಿರುಗಿದ್ದಾಗ, ಆಗ ಹೊಸ ಪರಿಚಯದವರಾಗಿದ್ದ ಆ ಅಜ್ಜಿ, ಅದೇ ಪ್ರಶ್ನೆಯನ್ನು ನನಗೆ ಕೇಳಿದರು.

ನಾನೀಗ ದೊಡ್ಡವನಾಗಿದ್ದೆ. ಆದರೂ ಅಜ್ಜಿಯ ಮಡಿಲಲ್ಲಿ ಕ್ಷಣಕಾಲ ಮುಖವಿಟ್ಟೆ. ಆಕೆ ನನ್ನ ತಲೆಗೂದಲು ನೇವರಿಸಿದರು, ಬೆನ್ನ ಮೇಲೆ ಕೈಯಾಡಿಸಿದರು. ಹೊಡೆತದ ಗುರುತುಗಳನ್ನು ಅವರ ವಯಸ್ಸಾದ ಬೆರಳುಗಳು ಹುಡುಕಿ ಹಿಡಿದುವು.

" ಪಾಪಿ ಮುಂಡೇಗಂಡರು. ಅವರ ಮನೆ ಹಾಳಾಗ ! ಅವರ ಸಂತಾನ ಮಣ್ಣುತಿಂದು ಹೋಗ ! ಅವರ ವಂಶ ನಾಶವಾಗ ! ನನ್ನ ಮರಿ ಮೈ ಮುಟ್ಟಿದ ಕೈ ಕತ್ತರಿಸಿ ಹೋಗ ! ........... "

ನೋವಿನಿಂದಲ್ಲ, ಆ ಅಜ್ಜಿ ನನಗಾಗಿ ತೋರುತ್ತಿದ್ದ ಮಮತೆ ಯಿಂದ, ನನ್ನ ಹೃದಯ ಬಿರಿಯಿತು. ನಾನು ದ್ವೇಷಿಸಿದ ಪೋಲೀಸ ರೆದುರಲ್ಲಿ ಅತ್ತಿರಲಿಲ್ಲ. ನಾನು ಪ್ರೀತಿಸಿದ ಅಜ್ಜಿಯ ಎದುರು ಕಣ್ಣೀರನ್ನು ಹರಿಯ ಗೊಟ್ಟೆ.— ಹಾಗೆ ಮಾಡಲು ನನಗೆ ನಾಚಿಕೆಯಾಗಲಿಲ್ಲ.

........ಅಜ್ಜಿ ಹೇಳಿದ ಮಾತುಗಳಿಂದ ಹಿಂದಿನ ರಾತ್ರೆ ನಡೆದು ದನ್ನು ನಾನು ಊಹಿಸಿಕೊಂಡೆ. ಚೆಲ್ಲಾಪಿಲ್ಲಿಯಾಗಿದ್ದ ನಮ್ಮ ಗುಡಿ

ಸಲು! ಆ ಕತೆ ಹೇಳಿತು. ನ್ಯಾಯದ ರಕ್ಷಕರು ಆ ವೃದ್ಧೆಯನ್ನು ಅವಮಾನಿಸಿದ್ದರು. ಆ ಮನೆಯ ಅಂಗಣದ ಒಂದೊಂದು ಕಂಬವೂ ಒಂದೊಂದು ಕಲ್ಲೂ ತಮಗಾದ ಅವಮಾನದ ಕತೆ ಹೇಳುತ್ತಿದ್ದುವು.

ಹನ್ನೆರಡು ಬಾರಿಸುತ್ತಿದೆ. ನಾನು ಬಲು ಬಳಲಿದ್ದೇನೆ. ಜೈಲಿನ ಸೆಂಟ್ರಿ ಹನ್ನೆರಡು ಹೊಡೆದು ಮುಗಿದಮೇಲೆ ಮತ್ತೆ ತೂಕಡಿಸುವನು. ...............ಯಾರೋ ಒಬ್ಬರು ಅಳುತ್ತಿದ್ದಾರೆ. ನಾಳೆಯ ಕನಸು ಕಾಣುತ್ತಿರುವ ಕರಿಯ ಪಕ್ಕದ ಕೊಠಡಿಯಲ್ಲಿ ಗೊರಕೆ ಹೊಡೆಯುತ್ತಿದ್ದಾನೆ. ತಾನು ನಿರಪರಾಧಿಯೆಂದು ಸಾಧಿಸ ಹೊರಟಿರುವ ಯುವಕ ಕನವರಿಸುತ್ತಿದ್ದಾನೆ. ಯಾವುದೋ ನಾಯಿ ಬೋ೯೯೯ ಎಂದು ಬಲು ದೀರ್ಘವಾಗಿ ಗೋಗರೆಯುತ್ತಿದೆ.

........ನಾಯಿ ಹೀಗೆ ಗೋಳಾಡಿದರೆ ಯಾರಿಗೋ ಸಾವು ಸನ್ನಿಹಿತವಾಯಿತೆಂದು ಅರ್ಥವಂತೆ. ಅಜ್ಜಿ ಹಾಗೆ ಹೇಳುತ್ತಿದ್ದರು. ಸಾವಿನ ಮರಣದ ಈ ವಿಷಯಗಳೆಲ್ಲಾ ಮನುಷ್ಯನಿಗಿಂತ ಚೆನ್ನಾಗಿ ಆ ಮೂಕ ಪ್ರಾಣಿಗಳಿಗೆ ಅರ್ಥವಾಗುವುವಂತೆ. ನಿಜವೊ ಅಲ್ಲವೊ ನನಗೆ ತಿಳಿಯದು. ಸಂಸಾರವಂದಿಗನಲ್ಲದ ನಾನು ಆ ಬಗ್ಗೆ ಸಂಶೋಧನೆ ಮಾಡಿಲ್ಲ.

ಪೋಲೀಸರ ದಾಖಲೆಯಲ್ಲಿ ಹೆಸರು ಬರೆಸಿಕೊಂಡ ಆ ದಿನ ಕಳೆದು ನಾಲ್ಕು ತಿಂಗಳಾಗಿತ್ತು. ತಂದೆಯ ಕಾಹಿಲೆ ಹೆಚ್ಚುತ್ತಲೇ ಇದ್ದ ದಿನಗಳು—ತನ್ನ ಜೀವನದ ಬಯಕೆಗಳೆಲ್ಲಾ ಮಣ್ಣುಪಾಲಾದ ಮೇಲೆ ಆ ಮನೋರೋಗವೆ ಅವನಿಗೆ ಕುಠಾರಪ್ರಾಯವಾಯಿತು.

ಆ ಸಂಜೆ ಅದೇ ಆಗ ಮನೆಗೆ, ಪತ್ರಿಕೆಯ ಮಾರಾಟ ಮುಗಿಸಿ, ಹಿಂತಿರುಗಿ ಬಂದಿದ್ದೆನಷ್ಟೆ. ಮನೆಯ ಅಂಗಳದಾಚೆ ನಾಯಿಯೊಂದು ಬೋ೯೯ ಎಂದಿತು. ಅಜ್ಜಿ ಸೌದೆಯ ಕೊರಡನ್ನೆತ್ತಿಕೊಂಡು ಆ ನಾಯಿಯನ್ನು ಬಲು ದೂರದ ತನಕ ಓಡಿಸಿಕೊಂಡು ಹೋದರು. ನಾಯಿ ಓಡಿಹೋಯಿತು.

ಆಮೇಲೆ ನಾಲ್ಕು ದಿನ ಮಾತ್ರ ತಂದೆ ಬದುಕಿದ. ಹಗಲು ರಾತ್ರಿ, ಆತನ ಆರೈಕೆ ಮಾಡಿದೆ. ಒಮ್ಮೆ ನನ್ನನ್ನು ಬಳಿಯಲ್ಲೆ ಕುಳ್ಳಿರಿಸಿ ಕೊಂಡು ತಂದೆ ಆ ಪ್ರಶ್ನೆ ಕೇಳಿದ:

"ನೀನು ಆ ದಿವಸ ಪಾಕೀಟು ಕದ್ದಿರಲಿಲ್ಲ, ಅಲ್ವಾ ಚಂದ್ರು, ಅಲ್ವಾ?"

ನಾಲ್ಕು ತಿಂಗಳಾದ ಮೇಲೆ ತಂದೆ ಆ ಪ್ರಶ್ನೆ ಕೇಳಿದ್ದ. ನಾನು ನಿರಪರಾಧಿಯೆಂಬುದು ಆತನಿಗೆ ಗೊತ್ತಿತ್ತು. ಆದರೂ ಆ ಪ್ರಶ್ನೆ ಕೇಳಿದ್ದ.

"ಇಲ್ವಪ್ಪ. ನಾನು ಯಾವತ್ತಾದರೂ ಹಾಗ್ಮಾಡೇನಾ?"

ಅದು ಆ ದಿನ ನಾನು ಹೇಳಿದ ಮಾತು— ಮರಣಶಯ್ಯೆ ಯಲ್ಲಿದ್ದ ತಂದೆಗೆ ಹೇಳಿದ ಮಾತು.

ಈ ದಿನ ಅದನ್ನು ಸ್ಮರಿಸಿಕೊಂಡಾಗ ನನ್ನ ಬಗ್ಗೆ ನನಗೆ ಕನಿ ಕರವೆನಿಸುತ್ತಿದೆ.

ಕೊನೆಯ ದಿನ ಕೆಮ್ಮು ನರಳಾಟಗಳ ನಡುವೆ ಜೀವ ಗುಟುಕರಿ ಸುತ್ತಿದ್ದಾಗ ತಂದೆ ಹನ್ನೊಂದು ವರ್ಷಗಳ ಹಿಂದಿನ ಆ ದಿನವನ್ನು ಬಾರಿ ಬಾರಿಗೂ ಸ್ಮರಿಸಿದ.

"ಚಂದ್ರೂ. ನಿಂಗೆ ನೆಪ್ಪಯ್ತ? ನೆಪ್ಪಯ್ತೇನೊ ಚಂದ್ರು? ನಾವು ಆ ದಿವಸ ಹಳ್ಳಿಯಿಂದ ಬಂದಿದ್ದು............ನಿನ್ನ ತಾಯಿ........ ಹೇಮಾವತಿ ಹೊಳೇಲಿ............ರುಕ್ಕೊ ........ ನಿಂತಾಯಿ ಕಣೋ ........ನೆಪ್ಪಯ್ತಾ ನಿಂಗೆ?........ನೆಪ್ಪಯ್ತೇನೊ....... .. ?"

ನಾನು ಧಾರಾಕಾರವಾಗಿ ಕಣ್ಣೀರನ್ನು ಹರಿಯಗೊಟ್ಟೆ. ಮುಂದೆ ಜೀವನದಲ್ಲಿ, ಕಂಬನಿಯ ಅವಶ್ಯತೆ ಇಲ್ಲವೆಂಬ ಪೂರ್ವಗ್ರಹಿಕೆ ನನಗಿರಲಿಲ್ಲ ನಿಜ. ಆದರೆ ನನ್ನ ಹೃದಯ ಆಳವಾಗಿತ್ತು, ವಿಶಾಲವಾ ಗಿತ್ತು. ಅಲ್ಲಿ ಒಂದೇಸಮನೆ ಸೋರಿಹೋದರೂ ಮುಗಿಯದಷ್ಟು ನೀರಿತ್ತು.

ರಾತ್ರಿ ನಡುವಿರುಳಲ್ಲಿ, "ರುಕ್ಕೊ ಚಂದ್ರೂ–ರಾಮು–ರಾಮು" ಎನ್ನುತ್ತಾ ತಂದೆ ಕೊನೆಯ ಉಸಿರನ್ನೆಳೆದ.

..........ಮರುದಿನ ಬೆಳಿಗ್ಗೆ ನನಗೆ ಜನ್ಮಕೊಟ್ಟಿದ್ದ ತಂದೆಯ ಶವವನ್ನು ಮಣ್ಣುಮಾಡಿ ಬಂದುದಾಯಿತು. ಆತ ದೀರ್ಘ ನಿದ್ದೆಯಲ್ಲಿ ಮೈ ಮರೆತಿದ್ದ. ಮುಂದೆಂದೂ ಏಳದ ಹಾಗೆ ಆತ ನಿದ್ದೆ ಹೋಗಿದ್ದ........

........ಈಗ ಆ ನಿದ್ದೆಯನ್ನು ಸ್ಮರಿಸಿದಾಗ ನನಗೆ ಅಸೂಯೆ ಎನಿಸುತ್ತಿದೆ. ಅದು ಎಷ್ಟು ಹಿತಕರವಾದ ಆಪ್ಯಾಯನಕರವಾದ ನಿದ್ದೆ! ದೀರ್ಘ ಬಳಲಿಕೆಯ ದೇಹಕ್ಕೆ ಅಂದೆಂತಹ ವಿಶ್ರಾಂತಿ!

........ಇನ್ನು ನಾನು ನಿದ್ದೆ ಹೋಗುವೆ. ನಾಳೆ ಮುಂಜಾವದವರೆಗಾದರೂ ನಿದ್ದೆಹೋಗುವೆ.

## . . . ಗುರುವಾರ

ಬೆಳಕು ಹರಿದು ಎರಡು ಘಂಟೆಗಳಾಗಿವೆ. ಸೆರೆಮನೆಯ ಕೊಳಾಯಿಯಲ್ಲಿ ಮುಖ ತೊಳೆಸಿ, ಮತ್ತೆ ಕೊಠಡಿಗೆ ತಂದುಬಿಟ್ಟಿದ್ದಾರೆ. ನಿನ್ನೆ ಒಂದೇ ಸಮನೆ ಅಷ್ಟು ಬರೆದೆನೆಂದೊ ಏನೊ. ಕೈಕಾಲುಗಳು ಜಡವಾಗಿವೆ.

ಮನಸ್ಸೂ ಕುಂಠಿತವಾಗಿದೆ. ನಾನು ಬಲ್ಲೆ. ಮನಸ್ಸಿಗೆ ಹೀಗಾಗಿರುವುದು ಬಳಲಿಕೆಯಿಂದಲ್ಲ. ಬಾಲ್ಯದ ಅಷ್ಟು ದಿನಗಳ ಅಷ್ಟೊಂದು ಅನುಭವ ರಾಶಿಯನ್ನು ಅನುಕ್ರಮವಾಗಿ ನೆನೆಸಿಕೊಂಡುದರಿಂದ ಹೀಗಾಗಿದೆ. ಹಿಂದಿನ ದಿನಗಳಲ್ಲಾಗಿದ್ದರೆ ದೆವ್ವದ ಹಾಗೆ ಇಷ್ಟು ದುಡಿದ ಮೇಲೆ, ದಿನ ರಾತ್ರೆ ನಾನು ದೀರ್ಘವಾಗಿ ನಿದ್ದೆ ಹೋಗಬಹುದಿತ್ತು. ಈಗ ಹಾಗೆ ಮಾಡುವಂತಿಲ್ಲ. ನಾನು ಮಾಡಬೇಕಾದ ಕೆಲಸವಿದೆ- ಕೊನೆಯ ಕೆಲಸ. ನಿರ್ದಿಷ್ಟ ಅವಧಿಯೊಳಗೆ ನಾನು ಅದನ್ನು ಮಾಡಿ ಮುಗಿಸಲೇಬೇಕು........

ಮುಂಜಾವದ ಗಾಳಿ ಸೇವನೆಗಾಗಿ ಒಳಗೆ ಒಂದು ರೌಂಡ್ ಬಂದ ಅಧಿಕಾರಿ ಕೇಳಿದ.

"ಏನು ಮಿಸ್ಟರ್ ಚಂದ್ರಶೇಖರ್, ನಿದ್ದೇನೆ ಮಾಡಿಲ್ಲ ಅಂತ ತೋರುತ್ತೆ. ಏನು ಓದ್ತಾಯಿದ್ರೇನು?"

"ಇಲ್ಲಾ ರೀ. ಅಂಥಾದೇನೂ ಇಲ್ಲ. ನಿದ್ದೆ ಬರ್ಲಿಲ್ಲ. ಹಾಗೇ ಕೂತಿದ್ದೆ."

"ಸ್ಲೀಪಿಂಗ್ ಡೋಸ್ ಕಳಿಸ್ಲೇನು?"

ಇನ್ನು ನಿದ್ದೆಗುಳಿಗೆಯ ಔಷಧಿ! ಹಾಗೆ ಔಷಧಿ ಸೇವಿಸಿದೆನೆಂದರೆ ನನ್ನ ಆತ್ಮವೃತ್ತವನ್ನು ನಾನು ಬರೆದ ಹಾಗೆಯೇ! ಬರೆಯುವ

ಚೈತನ್ಯಕೋಸ್ಕರ ಸ್ವಲ್ಪ ಹೊತ್ತು ನಿದ್ದೆ ನನಗೆ ದೊರೆತರಾಯಿತು-ಅಷ್ಟಾದರಾಯಿತು.

"ಬೇಡಿ, ಥ್ಯಾಂಕ್ಸ್."

ದಿನಪತ್ರಿಕೆಯನ್ನೂ ಕಳುಹುವುದು ಬೇಡವೆಂದು ತಿಳಿಸಲು ಬಾಯಿ ತೆರೆದೆ. ಆದರೆ ನನ್ನ ಬಗ್ಗೆ ಆ ಅಧಿಕಾರಿ ತಳೆದಿದ್ದ ಗೌರವಕ್ಕೆ ಚ್ಯುತಿಬರುವ ಹಾಗೆ ಯಾಕೆ ವರ್ತಿಸಲಿ? ಇನ್ನು ಪತ್ರಿಕೆಗಳನ್ನೋದಿ ಪ್ರಪಂಚದ ಆಗುಹೋಗುಗಳನ್ನು ತಿಳಿದುಕೊಳ್ಳುವ ಅಪೇಕ್ಷೆ ನನಗಿಲ್ಲ. ಪ್ರಯಾಣ ಸನ್ನದ್ಧನಾಗುತ್ತಿರುವ ಹೊತ್ತು ಇದು ......ಜೈಲಿನ ಜವಾನ ಪತ್ರಿಕೆ ತಂದುಕೊಡುತ್ತಿರಲಿ, ಅದಕ್ಕೇನು? ಮೂಲೆಯಲ್ಲಿ ಅದು ಬಿದ್ದಿರುವಷ್ಟು ಜಾಗವಿದೆ ಈ ಕೊಠಡಿಯಲ್ಲಿ.

"ಬರ್ತೀನಿ ಮಿಸ್ಟರ್ ಚಂದ್ರಶೇಖರ್."

"ರೈಟೊ ಸಾರ್."

ಇನ್ನು ಸ್ವಲ್ಪ ಹೊತ್ತಿನಲ್ಲೆ ಜೈಲಿನ ಡಾಕ್ಟರ್ ಬಂದು ಹೋಗಬಹುದು. ಆತನೊಡನೆ ಬೇರೆ ಔಪಚಾರಿಕವಾದ ಮಾತುಕತೆ.

ಈ ಬ್ರೆಡ್ಡು ಕಾಫಿ........ನನ್ನ ವಕೀಲರು, ಕಾಲೇಜಿನಲ್ಲಿ ಸೆರೆಮನೆಯ ಅಧಿಕಾರಿಯ ಸಹಪಾಠಿಯಾಗಿದ್ದುದರಿಂದ — ಈ ಅನುಕೂಲತೆಗಳು ದೊರೆತಿವೆ. ಈ ಬ್ರೆಡ್ಡು ಕಾಫಿ............ಮಧ್ಯಾಹ್ನದ ಹೊತ್ತಿಗೆ ಊಟ........ಸಂಜೆ ಕಾಫಿ.........ರಾತ್ರೆ ಊಟ.

ಆದರೆ ನಾನು ಕಳೆದ ಬಡತನದ ಆ ಬಾಲ್ಯ........ತಂದೆಯ ಮರಣದ ಅನಂತರದ ಆ ದಿನಗಳು........

ಅಜ್ಜಿ ನನ್ನನ್ನು ಬಹುವಾಗಿ ಸಂತೈಸಿದರು. ಉತ್ತರಕ್ರಿಯೆಗಳು ಮುಗಿದ ಮೇಲೂ ನನ್ನ ಮನಸ್ಸು ಹತೋಟಿಗೆ ಬರಲಿಲ್ಲ. ಬಿಮ್ಮನೆ ಬಿಗಿದಿದ್ದ ನನ್ನ ತುಟಿಗಳೆಡೆಯಿಂದ ಮುಗುಳುನಗು ಬರಿಸಲು ಆಕೆ ಯತ್ನಿಸಿದರು. ನಾಲ್ಕು ದಿವಸ ಕೆಲಸಕ್ಕೆ ಹೋಗ್ಬೇಡ. ಇಲ್ಲೇ ಇದ್ಬಿಡು ಮರಿ," ಎಂದರು.

ನಾನು ಕೆಲಸಕ್ಕೆ ಹೋಗಲಿಲ್ಲ. ಮತ್ತೆ ನಾನು ಆ ಕೆಲಸಕೆ

ಹೋಗಲೇ ಇಲ್ಲ. ನನಗೀಗ ಯಾವ ಜವಾಬ್ದಾರಿ ಇತ್ತು? ನನ್ನ ಭವಿತವ್ಯದ ಬಗ್ಗೆ ನೂರು ಆಸೆಗಳನ್ನು ಕಟ್ಟಿಕೊಂಡಿದ್ದ ತಂದೆ ಹೊರಟು ಹೋಗಿದ್ದ. ನಮ್ಮಮ್ಮ ನದಿಯ ಪಾಲಾದಮೇಲೆ, ಇಷ್ಟು ವರ್ಷಗಳ ಕಾಲ, ನನ್ನನ್ನು ಸಾಕಿ ಸಲಹಿ ದೊಡ್ಡವನಾಗಿ ಮಾಡಿದ್ದ ಆ ತಂದೆ, ನನ್ನ ಜೀವನ ರಂಗದಿಂದ ಮುಂದೆಂದೂ ಬರದಹಾಗೆ ಮರೆಯಾಗಿದ್ದ. ನನ್ನೆದುರು ಎಲ್ಲವೂ ಶೂನ್ಯವಾಗಿ ತೋರುತ್ತಿತ್ತು. ನನ್ನ ಬಾಳ್ವೆಯ ಬೋರ್ಡಿನ ಮೇಲೆ ಸುಣ್ಣದ ಕಡ್ಡಿಯಿಂದ ಹತ್ತಾರು ಸುಂದರ ಚಿತ್ರಗಳನ್ನು ಹಿಂದೆ ನಾನೆ ಬರೆದಿದ್ದೆ. ಈಗ ಯಾರೊ, ಒಂದು ಹರಕು ಹರಕಾದ ಡಸ್ಟರ್ ಹಿಡಿದು, ಬೋರ್ಡಿನ ಮೇಲಿದ್ದುದನ್ನೆಲ್ಲಾ ಅಳಿಸಿಬಿಟ್ಟಿದ್ದರು. ಸುಣ್ಣದ ಪುಡಿ ಕಣ್ಣಿಗೂ ಕಾಣಿಸದಂಥ ಧೂಳಾಗಿ ಗಾಳಿಯಲ್ಲಿ ಬೆರೆತಿತ್ತು.

ದಿನಗಳು ನಾಲ್ಕು ದಾಟಿ ಎಂಟಾದರೂ ನನ್ನ ಮಾನಸಿಕ ಕಾಹಿಲೆ ನನ್ನ ಮೇಲೆ ದಯೆತೋರಲಿಲ್ಲ.

ಒಂದು ದಿನ ರಾತ್ರಿಹೊತ್ತು, ಅಜ್ಜಿ ನನಗೆ ಊಟ ಬಡಿಸುತ್ತಿದ್ದಾಗ ಮಾತು ತೆಗೆದೆ.

"ಅಜ್ಜಿ, ಅಮ್ಮ ಹೋದಳು. ತಂದೇನೂ ಹೋದ ಹಾಗಾಯಿತು."

"ಇನ್ನು ಅಜ್ಜಿಯೊಂದು ಉಳ್ಕೊಂಡ್ಬಿಟ್ಟಿದೆ, ಅಲ್ವಾ?"

ಅವರು ಯಾವಾಗಲೂ ಹಾಗೆಯೇ. ನನ್ನ ವಿಚಾರಸರಣಿಯನ್ನು ಸೂಕ್ಷ್ಮವಾಗಿ ಗ್ರಹಿಸಿಬಿಡುತ್ತಿದ್ದರು. ಅದು ಹಿತಕರವಲ್ಲವೆಂದು ತಿಳಿದೊಡನೆ, ಬೇರೆ ಮಾತು ತೆಗೆದು ನನ್ನ ದೃಷ್ಟಿಯನ್ನು ಆ ಕಡೆಗೆ ಸೆಳೆಯಲು ಯತ್ನಿಸುತ್ತಿದ್ದರು.

ನಾನು ತಲೆಯೆತ್ತಿ ಅಜ್ಜಿಯನ್ನೆ ನೋಡಿದೆ. ಅಂದಿಗೂ ಇಂದಿಗೂ ಅಂತರವಿತ್ತು. ನಾನು ಹುಟ್ಟುಬಿಟ್ಟಿದ್ದ ಏನೂ ತಿಳಿಯದ ತಂದೆಗೇ ಅಂಟಿಕೊಂಡಿದ್ದ ಮಗುವಾಗಿ ಆ ಮನೆಗೆ ಬಂದಾಗ ಇವರಿಗೆ ಐವತ್ತು ವರ್ಷಗಳಾಗಿರಬೇಕು. ಈಗ ಆ ಜೀವ ಅರವತ್ತರ ಗಡಿಯನ್ನು ದಾಟಿ ಮುಂದೆ ಹೋಗಿದೆ ಸುಕ್ಕುಗಟ್ಟುತ್ತಿರುವ ಆ ಮುಖ ವಯಸ್ಸನ್ನು

ಸೂಚಿಸುತ್ತಿದೆ. ಆದರೂ ಆಕೆ ದೃಢ ಕಾಯರು. ಪರಕೀಯನಾಗಿದ್ದ ನಾನು ಅವರಿಗೆ ಮಗನೂ ಆಗಿದ್ದೆ, ಮೊಮ್ಮಗನೂ ಆಗಿದ್ದೆ.

" ಅಜ್ಜಿ, ನನಗಿನ್ನು ಇರೋದು ನೀವೊಬ್ಬರೇ, ಅಜ್ಜಿ."

ನನ್ನ ಧ್ವನಿಯಲ್ಲಿ ವ್ಯಥೆಯ ಛಾಯೆಯನ್ನು ಅವರು ಕಂಡಿರ ಬೇಕು.

" ಹೂ ಕಣೋ. ನನಗ್ಮಾತ್ರ ಒಂದಿಪ್ಪತ್ತ್ಜನ ಇದಾರೆ, ಅಲ್ವ ?"

ಅವರೊಡನೆ ಮಾತನಾಡುವುದು ಸಾಧ್ಯವೇ ಇರಲಿಲ್ಲ. ನನ್ನ ಬಾಳ್ವೆಗೆ ಸಂಬಂಧಿಸಿದ ಗಹನವಾದೊಂದು ವಿಷಯವನ್ನು ಆಕೆಯೊಡನೆ ಪ್ರಸ್ತಾಪಿಸಬೇಕೆಂದು ನಾನು ಯೋಚಿಸಿದ್ದೆ. ಅದು ಸಾಧ್ಯವಾಗಲೇ ಇಲ್ಲ.

ಮತ್ತೊಂದು ದಿನ ಕಳೆಯಿತು. ಮತ್ತೆಯೂ ಒಂದು ದಿನ.

ಆಮೇಲೆ ಮನಸ್ಸನ್ನು ಕಲ್ಲಾಗಿ ಮಾಡಿ, ಒಂದು ಬೆಳಿಗ್ಗೆ ಅಜ್ಜಿಗೆ ತಿಳಿಸಿದೆ.

" ಅಜ್ಜಿ, ನಾನು ಸ್ವಲ್ಪ ದಿವಸ ಎಲ್ಲಿಗಾದರೂ ಹೋಗ್ಬೇಕು ಅಜ್ಜಿ."

ಆಕೆ ಅವಾಕ್ಕಾದರು.

" ಯಾಕೆ ಮರಿ ? ಎಲ್ಲಿಗೆ ಮರಿ ? "

" ಎಲ್ಲಿಗಾದರೂ ಹೋಗ್ತೀನಿ ಅಜ್ಜಿ. ಇಲ್ಲಿ ಇರೋಕಾಗಲ್ಲ ಅಜ್ಜಿ."

" ಯಾಕೆ ಚಂದ್ರೂ? ನನ್ನ ಕೈ ಅನ್ನ ರುಚಿಯಾಗಲ್ವೇನೊ ಚಂದ್ರು ? "

" ಹಾಗನ್ಬಾರ್ದು ಅಜ್ಜಿ."

" ಮತ್ಯಾಕೆ ಮರಿ ? "

ಯಾಕೆ ಎಂದು ನಾನು ಹೇಗೆ ವಿವರಿಸಲಿ ? ನನ್ನ ಹೃದಯ ದಲ್ಲಾಗುತ್ತಿದ್ದ ಕಸಿವಿಸಿ ವೇದನೆಯನ್ನು ಮಾತುಗಳಲ್ಲಿ ವರ್ಣಿಸಿ ಹೇಗೆ ತಿಳಿಸಲಿ ? ನನ್ನ ಅಜ್ಜಿಗೆ ಹೇಗೆ ತಿಳಿಸಲಿ ? ಕಣ್ಣೀರು ನಿರ್ಲಜ್ಜ ವಾಗಿ ಮುಸುಕಿನಿಂದ ಹೊರ ಬರಲು ನೋಡಿತು. ನಾನು ತಡೆ ಹಿಡಿದೆ. ಚಂದ್ರಶೇಖರ ಇನ್ನು ಅಳಲಾರ. ತಂದೆಯನ್ನು ಕಳೆದುಕೊಂಡ ರಾತ್ರೆ

ಹೃದಯ ಸೋರಿಹೋದಮೇಲೆ ಮತ್ತೆ ಒರತೆ ಬರುವುದು ಯಾವ ನ್ಯಾಯ?"

ಅಜ್ಜಿಯ ಸ್ವರ ನಡುಗುತ್ತಿತ್ತು. ಕೆಂಪು ಸೀರೆಯ ಸೆರಗು ಆ ಕಣ್ಣುಗಳನ್ನು ಮುಚ್ಚಿಕೊಂಡಿತು.

"ನನ್ನ ಬಿಟ್ಟೋಗ್ತೀಯಾ ಚಂದ್ರೂ? ಅಜ್ಜೀನ ಬಿಟ್ಟು ಹೋಗ್ತಿಯೇನೊ ಮರಿ?"

ಆ ಕ್ಷಣ, ನಾನು ಮಹಾಪರಾಧ ಮಾಡುತ್ತಿದ್ದೆನೆಂಬ ಭಾವನೆ ಮೂಡಿತು. ತಂದೆ ಇದ್ದಾಗ ನಾನು ಅವನಿಗೆ ಒಂದು ದಿನವೂ ಮನ ಶ್ಶಾಂತಿ ಕೊಟ್ಟಿರಲಿಲ್ಲ. ಈಗ ಇನ್ನೊಂದು ಜೀವದ ಮನಸ್ಸನ್ನು ನೋಯಿ ಸಲು ಸಿದ್ಧನಾಗಿದ್ದೆ.

ಇಲ್ಲ; ನಾನು ಈ ಅಜ್ಜಿಯನ್ನು ಬಿಟ್ಟು ಹೋಗಬಾರದು-ಎಂದು ಕೊಂಡೆ. ಆದರೆ ಮನಸ್ಸು ಮತ್ತೆ ಹೊಯ್ದಾಡಿತು.

"ಅಜ್ಜಿ. ಒಂದಷ್ಟು ದಿನ ಎಲ್ಲಾದರೂ ಇದ್ದು, ತಿರ್ಗ ಬರ್ತೀನಿ ಅಜ್ಜಿ. ನಿಮ್ಮಲ್ಲಿಗೇ ಬರ್ತೀನಿ ಅಜ್ಜಿ."

ಆಗ ಆ ಅಜ್ಜಿ ನಾನು ನಿರೀಕ್ಷಿಸದೆ ಇದ್ದ ಇನ್ನೊಂದು ವಿಷಯ ಹೇಳಿದರು.

"ನೋಡು ಚಂದ್ರು. ಒಂದಿನ್ನೂರು ರೂಪಾಯಿ ಎತ್ತಿಟ್ಟಿದ್ದೀನಿ. ಬದುಕಿರೋವಾಗ ಯಾವ ಸಂಬಂಧಿಕರೂ ಯಾವ ಊರಿನಿಂದಲೂ ಬರ್ಲಿಲ್ಲ. ಸತ್ತೋದಮೇಲೆ ಯಾಕೆ ಬೇರೆಯವರಿಗೆ ಕೊಡ್ಲಿ? ನೋಡ್ಮರಿ, ನಿಂಗೆ ಸ್ಕೂಲಿಗೆ ಹೋಗೊ ಇಷ್ಟ ಇದ್ರೆ ಹೇಳು, ಕಳಿಸ್ತೀನಿ.... ....... ಈ ಮನೆ ಎಮ್ಮೆ ಎಲ್ಲಾ ನಿಂದೇನೆ........"

ಇಂತಹ ಮಾತುಗಳೆಲ್ಲಾ ನಾನೆಂದೂ ತೀರಿಸಲಾರದ ಋಣದ ಭಾರವನ್ನು ಹೆಚ್ಚಿಸುತ್ತಿದ್ದವು........ವಿದ್ಯಾಭ್ಯಾಸದ ಆಸೆ ಹುಟ್ಟಿಸಿ ನನ್ನನ್ನು ಅಲ್ಲಿಯೇ ಇರಿಸಿಕೊಳ್ಳಲು ಆಕೆ ಯತ್ನಿಸಿದರು. ಆ ಮಾತು ಗಳನ್ನು ಅವರು ಹೇಳುತ್ತಿದ್ದಂತೆ, ನಾನು ಯೋಚಿಸುತ್ತಲಿದ್ದೆ. ಇಲ್ಲ, ಮತ್ತೊಮ್ಮೆ ವಿದ್ಯಾರ್ಥಿಯಾಗುವುದು ನನ್ನಿಂದಾಗದ ಮಾತು— ನನ್ನಿಂದಾಗದ ಮಾತು.

ನಾನು ಅಜ್ಜಿಗೆ ಉದ್ದಂಡ ನಮಸ್ಕಾರ ಮಾಡಿದೆ. ಆಕೆಯ ಪಾದಗಳನ್ನು ಹಿಡಿದುಕೊಂಡೆ.

"ನನ್ನ ಕ್ಷಮಿಸ್ಬೇಕು ಅಜ್ಜಿ. ನಾನು ಬೊಂಬಾಯಿಗೆ ಹೋಗ್ತೀನಿ ಅಜ್ಜಿ. ಒಂದು ವರ್ಷದೊಳಗೆ ವಾಪಸ್ಸು ಬರ್ತೀನಜ್ಜಿ. ಆಮೇಲೆ ನಿಮ್ಮನ್ನ ಬಿಟ್ಟು ಎಲ್ಲಿಗೂ ಹೋಗೋದಿಲ್ಲ ಅಜ್ಜಿ."

ಅಜ್ಜಿ ಮೌನವಾಗಿದ್ದರು. ಆ ದಿನವೆಲ್ಲಾ ಆಕೆಯ ಹೃದಯ ಬುದ್ಧಿ ತಿಳಿಯದ ಮರಿಗಾಗಿ ಮಿಡಿದುಕೊಂಡಿರಬೇಕು.

ನಾನು ಹೊರಟು ನಿಂತಾಗ, ಚಿಲ್ಲರೆ ಖರ್ಚಿಗೆಂದು ಅಜ್ಜಿ ಹದಿನೈದು ರೂಪಾಯಿ ಕೊಟ್ಟರು. ರವೆ ಉಂಡೆ, ಕೋಡುಬಳೆ, ಚಕ್ಕುಲಿಗಳ ಗಂಟು ಕಟ್ಟಿಕೊಟ್ಟರು. ನನ್ನಿಂದ ಮಾತನಾಡುವುದಾಗಲೇ ಇಲ್ಲ. "ಎಂಥ ಕಟುಕ ನೀನು, ಪಾಪಿ ನೀನು" ಎನ್ನುತ್ತಿತ್ತು, ಮನಸ್ಸಿನೊಂದು ಭಾಗ.

ಅಜ್ಜಿ ನನಗೆ ಆಶೀರ್ವಾದ ಮಾಡಿದರು.

"ಏನಾದರೂ ಕೆಲಸ ನೋಡ್ಕೊಂಡು ಒಂದು ವರ್ಷ ಸುಖವಾಗಿರು ಚಂದ್ರು. ಆಮೇಲೆ ಬಂದ್ಬಿಡು, ಖಂಡಿತ ಬಂದ್ಬಿಡು."

"............ಹೂನಜ್ಜಿ."

"ಕಾಗದ ಬರೀತಾ ಇರು ಚಂದ್ರು.... .. ....ತಪ್ಪದೆ ಬರೀತಾ ಇರು."

"ತಪ್ಪದೆ ಬರೀತೀನಿ ಅಜ್ಜಿ."

ಮುಂದುವರೆಯಲು ನಿರಾಕರಿಸುತ್ತಿದ್ದ ಕಾಲುಗಳನ್ನು ಎಳೆದುಕೊಂಡು ನಾನು ಬೀದಿಗಿಳಿದೆ. ಮುಂದೆ ನಡೆದು ರಸ್ತೆ ತಿರುಗುವಲ್ಲಿ ಹಿಂತಿರುಗಿ ನೋಡಿದೆ. ಕೆಂಪು ಸೀರೆಯುಟ್ಟಿದ್ದ ಅಜ್ಜಿ ಮನೆಯ ಮುಂದೆ ಬೀದಿಯ ಅಂಚಿನಲ್ಲಿ ನಿಂತು ನನ್ನನ್ನೇ ನೋಡುತ್ತಿದ್ದರು. ನನಗೆ ತಡೆಯಲಾಗಲಿಲ್ಲ. "ವಾಪಸ್ಸು ಓಡು, ತಪ್ಪಾಯಿತು ಎನ್ನು," ಎಂದಿತು ಅರ್ಧ ಮನಸ್ಸು. ಆದರೆ ಇನ್ನೊಂದರ್ಧ ಅದಕ್ಕಿಂತಲೂ ಹೆಚ್ಚು ಬಲವಾಗಿತ್ತು. ನಾನು ವೇಗವೇಗವಾಗಿ ಹೆಜ್ಜೆಯಿಟ್ಟು ರೈಲು ನಿಲ್ದಾಣ ಸೇರಿದೆ.

ಟಿಕೇಟು ಕೊಂಡುಕೊಂಡು ನಾನು ಪ್ರಯಾಣ ಮಾಡಿದೆ. ಅದು ನನ್ನ ಮೊದಲ ರೈಲ್ವೆ ಪ್ರಯಾಣ. ರಾತ್ರೆ ಕಳೆದು ಬೆಳಗಾಯಿತು. ಆಮೇಲೆ ರಾತ್ರೆ, ಮತ್ತೆ ಹಗಲು. ಹಾದಿಯಲ್ಲಿ ನಾನು, ಒಮ್ಮೆಯೂ ಕೆಳಕ್ಕಿಳಿಯಲಿಲ್ಲ. ಅಜ್ಜಿ ಕೊಟ್ಟ ಪೊಟ್ಟಣವನ್ನೂ ಬಿಚ್ಚಲಿಲ್ಲ. ಕಿಟಕಿಯ ಬಳಿ ನಿಲ್ದಾಣಗಳಲ್ಲಿ ಏನನ್ನಾದರೂ ಕೊಂಡುಕೊಂಡು ತಿನ್ನುತ್ತಿದ್ದೆ. ಹಲವು ಊರುಗಳು ಹಿಂದೆ ಉಳಿದುವು. ನಾನಾ ವಿಧವಾಗಿ ಕನ್ನಡ ಮಾತನಾಡುವ ಜನ ಹತ್ತುತ್ತಿದ್ದರು, ಇಳಿಯುತ್ತಿದ್ದರು. ಆಮೇಲೆ ಮರಾಠಿ ಭಾಷೆ—ಹಿಂದೂಸ್ಥಾನಿ. ನನಗೆ ಜಟಕಾ ಸಾಬಿಗಳ ಕ್ಯಾಬೇ ಮಾತು ಸ್ವಲ್ಪ ಸ್ವಲ್ಪ ಬರುತ್ತಿತ್ತು........ಆ ಹೊಸ ವಾತಾವರಣ ಅಪರಿಚಿತ ಮುಖಗಳಿಂದ ನನಗೆ ದಿಗಿಲಾಗಲಿಲ್ಲ. ಬದಲು ಯಾವುದೋ ಹೊಸ ಅನುಭವವಾಗುತ್ತಿತ್ತು.

ಆ ಮಹಾನಗರಕ್ಕೆ ಬಂದಿಳಿದಾಗ ಕತ್ತಲಾಗಿತ್ತು. ನಿಲ್ದಾಣದ ಹೊರಗೆ, ಉದ್ದಕ್ಕೂ ಮೈಮುಚ್ಚದೆ ಮಲಗಿದ್ದ ಹುಲವಾರು ಜನರ ನಡುವೆ ನಾನೂ ಒಬ್ಬನಾಗಿ, ಕೈ ಚೀಲವನ್ನು ತಬ್ಬಿಕೊಂಡು, ಆ ರಾತ್ರೆಯನ್ನು ಕಳೆದೆ.

ಬೆಳಿಗ್ಗೆ ಎದ್ದಾಗ ತುಂಬಾ ಹಸಿವಾಗಿತ್ತು. ಅಲ್ಲಿಯೇ ಒಂದು ಅಂಗಡಿಗೆ ಹೋಗಿ ಬೊಂಬಾಯಿ ಚಹಾದ ಪರಿಚಯ ಮಾಡಿಕೊಂಡೆ. ಅಜ್ಜಿಯ ತಿಂಡಿಪೊಟ್ಟಣವನ್ನು ಬಿಚ್ಚಿದೆ. ಅಲ್ಲಿ ಕೋಡುಬಳೆಗಳ ನಡುವೆ ಐದು ರೂಪಾಯಿನ ನಾಲ್ಕು ನೋಟುಗಳು ಎಣ್ಣೆ ಸವರಿಕೊಂಡು ಮುದುಡಿಕುಳಿತಿದ್ದವು! ನನ್ನ ಅಜ್ಜಿ—

ಅಲ್ಲಿ ಒಬ್ಬರನ್ನೊಬ್ಬರು, ಏನು ಯಾರೆಂದು ವಿಚಾರಿಸುತ್ತಿರಲಿಲ್ಲ. ಆ ಟ್ರಾಂಗಳ ರೈಲುಗಳ ಕಾರ್ ಮೋಟಾರುಗಳ ಜನಜಂಗುಳಿಯ ಗೊಂದಲದಲ್ಲಿ ಮಾನವ ಪ್ರಾಣಿಗೆ ಯಾರೂ ಮಹತ್ವಕೊಡುತ್ತಿರಲಿಲ್ಲ. ನಾನು ಗಲಿವರನ ಪ್ರವಾಸದ ಕತೆಯನ್ನೋದಿದ್ದೆ. ಲಿಲ್ಲಿಪುಟ್ಟಿನ ಪುಟ್ಟ ಜನರ ಬಗ್ಗೆ ತಿಳಿದಿದ್ದೆ. ಈ ನಗರದ ಜನರೆಲ್ಲಾ ಕಿರಿಮಾನವರ ಹಾಗೆ ಕಾಣುಬರುತ್ತಿದ್ದರು. ಆದರೆ ನಾನು ಗಲಿವರನಾಗಿರಲಿಲ್ಲ. ಆ ಮಾನವರಲ್ಲೊಬ್ಬನಾಗಿದ್ದೆ.

ಅದು ಕೆಟ್ಟ ಕಾಲ. ಈ ಶತಮಾನದ ಮೂವತ್ತೊಂದನೆಯ ಇಸವಿ ಮುಕ್ತಾಯಕ್ಕೆ ಬರುತ್ತಿತ್ತು. ಹೋರಾಟ-ನಿರುದ್ಯೋಗದ ಮಾತುಗಳೇ ಕೇಳಿಬರುತ್ತಿದ್ದುವು. ನಾನು ಉದ್ಯೋಗ ಹುಡುಕುತ್ತಿದ್ದೆ. ಆದರೆ ಜನ ನಿರುದ್ಯೋಗದ ಮಾತನ್ನಾಡುತ್ತಿದ್ದರು. ಹಿಂದೆ ನನ್ನ ತಂದೆ ದುಡಿಯುತ್ತಿದ್ದ ಕಾರ್ಖಾನೆಗಳ ಅಪ್ಪನಂತಹ ಹಲವಾರು ಕಾರ್ಖಾನೆಗಳು ಅಲ್ಲಿದ್ದುವು. ಆದರೆ ಅವುಗಳಲ್ಲಿ ಹಲವು ಈಗ ಹೊಗೆ ಉಗುಳುವುದರ ಬದಲು, ಹಲವಾರು ಜನರನ್ನು ಹೊರಕ್ಕೆ ಉಗುಳುತ್ತಿದ್ದವು. ಒಮ್ಮೆಲೆ ಸಹಸ್ರ ಸಹಸ್ರ ಜನ ನಿರುದ್ಯೋಗಿಗಳಾಗಿ ಬೀದಿ ಪಾಲಾಗುತ್ತಿದ್ದರು.

ಯಾಕೆ ಹಾಗೆ ಎಂಬುದು ನನಗೆ ಆಗ ತಿಳಿದಿರಲಿಲ್ಲ. ನಮ್ಮ ಸಮಾಜದ ಆರ್ಥಿಕ ವ್ಯವಸ್ಥೆಯ ಪರಿಣಾಮವಾಗಿ ಕಾಲಕಾಲಕ್ಕೆ ಇಂತಹ ಕುಸಿತ ಆಗಲೇಬೇಕೆಂಬುದು ಆಗ ನನಗೆ ತಿಳಿದಿರಲಿಲ್ಲ........ ........ನಿರುದ್ಯೋಗ ಹೆಚ್ಚುತ್ತಿದ್ದಾಗ ನಾನು ಉದ್ಯೋಗ ಹುಡುಕಿದೆ. ಹೋಟೆಲುಗಳಲ್ಲಿ ಕಾರ್ಖಾನೆಗಳಲ್ಲಿ ಬಂದರದಲ್ಲಿ ಆಫೀಸುಗಳಲ್ಲಿ—ಎಲ್ಲಲ್ಲೂ-ಕೆಲಸ ದೊರೆಯಲೇ ಇಲ್ಲ.

ಅಜ್ಜಿ ಕಟ್ಟಿಕೊಟ್ಟಿದ್ದ ತಿಂಡಿಯ ಪೊಟ್ಟಣ ಎಂದೋ ಕರಗಿ ಹೋಗಿತ್ತು. ನನ್ನ ಪಾಲಿಗೆ ಉಳಿದಿದ್ದುದು ಅಜ್ಜಿಯ ನೆನಪುಮಾತ್ರ. ಇನ್ನೂ ಖರ್ಚಾಗದೇ ಇದ್ದ ಹತ್ತು ಹನ್ನೆರಡು ರೂಪಾಯಿಗಳು ಮಾತ್ರ. ಕಾಗದ ಬರೆಯಬೇಕೆಂದು ಅಜ್ಜಿ ಹೇಳಿದ್ದರು. ನಾನು ಅವರಿಗೆ ಯಾರಿಗೂ ಕಾಗದ ಬರೆದಿರಲಿಲ್ಲ. ಆಗ ಬರೆದೆ. ಸುಖವಾಗಿದ್ದೀನಿ ಕೆಲಸ ಸಿಕ್ಕಿದೆ. ನೀವು ಹೇಗಿದ್ದೀರಿ ? ಎಮ್ಮೆಗಳು ಹೇಗಿವೆ ? ದೊಡ್ಡೆಮ್ಮೆ ಕರು ಹಾಕಿತೆ-ಎಂದೆಲ್ಲಾ ಕೇಳಿ ಬರೆದೆ. ಅಂಚೆಯ ಲಕ್ಕೋಟೆಯಮೇಲೆ ಅಜ್ಜಿಯ ಮನೆ ಎಂತಹವರಿಗಾದರೂ ಗೊತ್ತಾಗುವಹಾಗೆ ವಿಳಾಸವನ್ನು ವಿವರಿಸಿ ಬರೆದೆ. ಅಜ್ಜಿಗೆ ಮನಸ್ಸಮಾಧಾನವಾಗುವಂತೆ ಮಾಡುವುದೇ ನನ್ನ ಉದ್ದೇಶವಾಗಿತ್ತು.

ಅಜ್ಜಿಯಿಂದ ನನಗೆ ಉತ್ತರ ಬರಲಿಲ್ಲ. ನಾನು ವಿಳಾಸಕೊಟ್ಟಿದ್ದರಲ್ಲವೆ ಬರುವುದು ? ನನಗೆ ವಿಳಾಸವಿದ್ದರಲ್ಲವೆ ನಾನು ಕೊಡುವುದು ?

ಆ ಊರಲ್ಲೂ ಪತ್ರಿಕೆ ಮಾರುವ ಹುಡುಗರಿದ್ದರು. ಕುತೂಹಲ ದಿಂದ ಅಸೂಯೆಯಿಂದ ಅವರನ್ನು ನಾನು ನೋಡುತ್ತಿದ್ದೆ. ಮಾರಾಟದ ವಿಧಾನದಲ್ಲಿ ಇಲ್ಲಿ ಹೊಸತನವಿತ್ತು. ಆ ದಿನದ ಮುಖ್ಯ ಘಟನೆಯನ್ನು ಮರಾಠಿಯಲ್ಲೊ ಇಂಗ್ಲಿಷಿನಲ್ಲೊ ಕೂಗಿ ಹೇಳುತ್ತಾ ಹುಡುಗರು ಓಡಾಡುತ್ತಿದ್ದರು. ಇಲ್ಲಿ "ಪೇಪರ್ ಬೇಕೆ ಸಾರ್?" ಎಂದು ಕೇಳಬೇಕಾಗಿರಲಿಲ್ಲ. ಬೇಕಾದವರು ತಾವಾಗಿಯೆ ಹುಡುಗರನ್ನು ಸಮೀಪಿಸಿಯೋ ಕರೆದೋ ದುಡ್ಡುಕೊಟ್ಟು ಕೊಳ್ಳುತ್ತಿದ್ದರು.

ನಾನು ಅವರಲ್ಲಿ ಒಬ್ಬಿಬ್ಬರ ಪರಿಚಯಮಾಡಿಕೊಳ್ಳಲು ಯತ್ನಿಸಿದೆ. ಹರಕು ಮುರುಕು ಮರಾಠಿಯಲ್ಲಿ ಮಾತನಾಡಲು ಪ್ರಯತ್ನಿಸಿದೆ. ಅವರ ದೃಷ್ಟಿಯಲ್ಲಿ ನಾನು ಅನ್ಯದೇಶದವನು. ಅವರು ನಕ್ಕು ನನ್ನನ್ನು ದೂರ ಸರಿಸಿದರು. "ಹೋಗಲೆ. ಹಮಾಲಿಮಾಡು ಹೋಗು," ಎಂದರು.

ಹಮಾಲಿ ಎಂದರೆ ಸಾಮಾನು ಹೊರುವ ಕೂಲಿ ಕೆಲಸ. ಬೋರಿ ಬಂದರ್ ಸ್ಟೇಷನ್ನಿನ ಹೊರ ಆವರಣದಲ್ಲಿ ನಿಂತು, ಬರುತ್ತಲಿದ್ದ ಪ್ರತಿಯೊಂದು ರೈಲುಗಾಡಿಯನ್ನೂ ಇದಿರುಗೊಂಡೆ. ಮುಂಬಯಿಗೆ ದಕ್ಷಿಣ ಕನ್ನಡದಿಂದ, ಧಾರವಾಡದ ಕಡೆಯಿಂದ, ಮೈಸೂರಿನಿಂದ ಕನ್ನಡ ಮಾತನಾಡುವ ಜನ ಬರುತ್ತಿದ್ದರು. ಸೂಕ್ಷ್ಮ ನಿರೀಕ್ಷಣೆಯಿಂದ ಅಂತಹವರನ್ನು ಗುರುತಿಸಲು ಕಲಿತೆ. ಅವರ ಬಳಿಗೆ ಧಾವಿಸಿ ಕನ್ನಡದಲ್ಲೇ ಮಾತನಾಡುತ್ತ ಸಾಮಾನು ಹೊತ್ತುಕೊಳ್ಳುತ್ತಿದ್ದೆ. ನಿಲ್ದಾಣದ ಒಳಕ್ಕೆ ಹೋಗಲು ನನಗೆ ಅನುಮತಿಯಿರಲಿಲ್ಲ. ನನ್ನೊಡನೆ ಬಿಲ್ಲೆಯಿರಲಿಲ್ಲ. ಹೊರಗೇ ಕಾದು ನಿಂತಾಗ, ತಮ್ಮ ಸಾಮಾನುಗಳನ್ನು ತಾವೇ ಪ್ರಯಾಸದಿಂದ ಹೊತ್ತುಕೊಂಡು ಹೊರಬರುತ್ತಿದ್ದ ಬಡ ಪ್ರಯಾಣಿಕರು ಮಾತ್ರ ಸಿಗುತ್ತಿದ್ದರು. ಎಷ್ಟು ದೊರೆತರೆ ಅಷ್ಟೇ ಪರಮ ಭಾಗ್ಯವೆಂದು ನಾನು ಅವರನ್ನು ಸಮೀಪಿಸುತ್ತಿದ್ದೆ. ಹೊಸತಿನಲ್ಲಿ ಊರಿಗೆ ಬಂದವರು ನನ್ನನ್ನೂ ನನ್ನ ಕನ್ನಡವನ್ನೂ ನಂಬುತ್ತಿರಲಿಲ್ಲ. ಸಾಮಾನು ಹೊತ್ತು ಓಡಿ ಹೋಗಲು ಬಂದ ಕಳ್ಳನೇ ನಾನು, ಎಂಬ ಹಾಗೆ ಅವರು ವರ್ತಿಸು

ತ್ತಿದ್ದರು. ಬೇರೆ ಕೆಲವರು ನನಗೆ ತಿಳಿಯದಂತಹ ಯಾವುದೋ ವಿಳಾಸಗಳನ್ನು ಕೊಟ್ಟು, "ಅಲ್ಲಿ ತನಕ ಬರ್ತೀಯಾ, ಹಾದಿ ತೋರಿಸ್ತೀಯಾ?" ಎನ್ನುತ್ತಿದ್ದರು. ಮುಂಬಯಿಗೆ ಹೊಸಬನಾದ ನನಗೆ ಆ ಎಲ್ಲ ಜಾಗಗಳ ಪರಿಚಯವಿರಲಿಲ್ಲ. ಆದರೂ ನಿರಾಕರಿಸದೆ, ಎಲ್ಲವನ್ನೂ ಬಲ್ಲವನ ಹಾಗೆ ನಟಿಸುತ್ತಾ, ಕೂಲಿ ಹಿಡಿಯುತ್ತಿದ್ದೆ. ಆಮೇಲೆ ಯಾರ ಯಾರನ್ನಾದರೂ ಕೇಳಿ ವಿಳಾಸದ ಶೋಧನೆ........ ಪ್ರಯಾಣಿಕರ ಬಯ್ಗಳು............ ಘಂಟೆಗಟ್ಟಲೆ ಸುತ್ತಾಡಿದ ಮೇಲೆ ನನಗೆ ದೊರೆಯುತ್ತಿದ್ದ ಮೂರು ನಾಲ್ಕಾಣೆ.

ಅದೂ ಕೂಡ ಕಷ್ಟವಾಗುತ್ತಿತ್ತು. ಬೇರೆ ಹುಡುಗರು ಕಾನಡಿವಾಲಾ ಆದ ನನ್ನನ್ನು ದ್ವೇಷಿಸುತ್ತಿದ್ದರು. ಅವರ ಸ್ನೇಹ ಸಂಪಾದನೆ ಸಾಧ್ಯವಾಗುವುದಕ್ಕೆ ಮುಂಚೆ ನಾನು ಮುಂಬಯಿವಾಲಾನಾಗಿ ಮಾರ್ಪಡುವುದು ಅವಶ್ಯವಿತ್ತು. ಆ ಮಾರ್ಪಾಟಿಗೋಸ್ಕರ ನಾನು ಮನಃಪೂರ್ವಕವಾಗಿ ದುಡಿದೆ. ಆ ಹುಡುಗರಷ್ಟೇ ಅಲ್ಲ—ನನ್ನ ಸಂಪಾದನೆಗೆ ಅಡ್ಡಿಯಾದವರಲ್ಲಿ ಅದೇ ಆಗ ನಿರುದ್ಯೋಗಿಗಳಾಗಿದ್ದ ಸಹಸ್ರ ಸಹಸ್ರ ಜನರಿದ್ದರು. ಕಾರ್ಖಾನೆಯ ಕೆಲಸಗಾರರಷ್ಟೇ ಅಲ್ಲ. ವಿದ್ಯಾವಂತರಾದ ಪ್ಯಾಂಟುಧಾರಿಗಳೂ ಕೂಡ ಹಮಾಲಿ ಕೆಲಸಕ್ಕೆ ಬರುತ್ತಿದ್ದರು. ಪೇಟೆಯ ಅಂಗಡಿಗಳಲ್ಲಿ ವಿಧ ವಿಧದ ಸಾಮಾನುಗಳು ರಾಶಿ ಬಿದ್ದಿದ್ದುವು. ಕೊಳ್ಳುವ ಗಿರಾಕಿಗಳಿರಲಿಲ್ಲ. ಕೊಳ್ಳಲು ಜನರಲ್ಲಿ ದುಡ್ಡಿರಲಿಲ್ಲ.

ಬದುಕಿನಲ್ಲಿ ಆಸಕ್ತಿಯಿರುವ ಯಾವ ಮನುಷ್ಯನೂ ಸ್ನೇಹಜೀವಿಯಾಗದೇ ಇರುವುದು ಸಾಧ್ಯವಿಲ್ಲ. ಆ ಪ್ರತಿಕೂಲ ವಾತಾವರಣದಲ್ಲೂ ನಾನು ನನ್ನ ಹಾಗೆಯೇ ಇದ್ದ ಒಬ್ಬಿಬ್ಬರ ಗೆಳೆತನ ಕಟ್ಟಿಕೊಂಡೆ. ಯಾವ ಕೆಲಸವೂ ದೊರೆಯದೇ ಹೋದಾಗ ಬೀದಿಯ ಬದಿಯಲ್ಲಿ ಕುಳಿತು ಎದುರಿನ ಗೋಡೆಗಳ ಮೇಲೆ ದೊಡ್ಡ ದೊಡ್ಡದಾಗಿ ಅಂಟಿಸಿದ್ದ ಸಿನಿಮಾ ಜಾಹೀರಾತುಗಳನ್ನು ನೋಡುತ್ತಿದ್ದೆವು. ಯಾವನಾದರೊಬ್ಬ ಹಾಡುತ್ತಿದ್ದ: "ಛೋಟೀಸಾಬ್ ಅಂಗನಾಮೆ ಗಿಲ್ಲಿ ಖೇಲ್" ಕಣ್ಣಿಗೆ ಕರಿಯ ಕನ್ನಡಕ ಹಾಕಿ ಕೈಯಲ್ಲಿ ಪಿಸ್ತೂ

ಲನ್ನೊ ಚಬುಕನ್ನೊ ಹಿಡಿದ ಮಾರಾಮಾರಿ ಚಿತ್ರದ ನಾಯಿಕೆಯರೆ ಕೆಲ ಹುಡುಗರ ಆರಾಧ್ಯ ದೇವತೆಗಳಾಗಿದ್ದರು. ಒಬ್ಬ ದೊಡ್ಡ ಹುಡುಗ, ತನಗೆಲ್ಲಾ ಸಿನಿಮಾ ತಾರೆಯರೂ ಆಪ್ತ ಮಿತ್ರರೆನ್ನುವ ಹಾಗೆ ಮಾತನಾಡುತ್ತಿದ್ದ.

"ಸರ್ದಾರ್ ಅಖ್ತಾರ್? ಓ ಅವಳಿರೋದು ಮಾಹಿಮ್‌ನಲ್ಲಿ ಮೂರನೆಯ ಗಂಡನ ಜೊತೆಗಿದ್ದಾಳೆ. ಷೂಟಿಂಗಿಗೆ ಹೋದಾಗ ಏನೋ ಸರೀನಪ್ಪಾ. ಆದರೆ ಬೇರೆ ಹೊತ್ತಿನಲ್ಲಿ ಆಕೆ ಎಲ್ಲಾದರೂ ಲಂಗ ಎತ್ತಿದ್ಲು ಅಂದರೆ....... ......."

ಆಮೇಲೆ, ಅವನ ಅಸಭ್ಯವಾದ ನಗೆಮಾತಿಗೆ ಉತ್ತರವಾಗಿ ಎಲ್ಲರ ನಗು. ಆದರೆ ಅದು ಅಸಭ್ಯ ಮಾತೆಂದು ಅವರಲ್ಲಿ ಯಾರೂ ಭಾವಿಸಿದಂತೆ ಕಾಣಲಿಲ್ಲ. ನಮ್ಮಲ್ಲಿ ಚಿಕ್ಕವರಾದವರು, ಇಜ್ಜಲು ಪುಡಿ ತಂದು, ಪೇಷನ್ಸ್ ಕೂಪರಿಗೆ ಮೀಸೆ ಬಿಡಿಸುತ್ತಿದ್ದರು. ಅವರೆಲ್ಲರಿಗೆ ದ್ವೇಷವಿದ್ದುದು ಹೀರೋಗಳ ಮೇಲೆ. ಅವರ ಮುಖಗಳನ್ನು ಸೊಟ್ಟಗೋ ವಿಕಾರವಾಗಿಯೋ ಮಾಡದ ಹೊರತು, ಇಲ್ಲವೆ ಅಷ್ಟು ಅಂಶಗಳನ್ನು ಹರಿದು ಹಾಕದ ಹೊರತು, ಅವರಿಗೆ ನೆಮ್ಮದಿ ಇಲ್ಲ. ಯಾವುದಾದರೂ ನಟಿ ಎದೆಯ ಭಾಗದ ಪ್ರದರ್ಶನ ಮಾಡಿದ್ದರೆ, ಹುಡುಗರಲ್ಲೊಬ್ಬ ಆ ಭಾಗವನ್ನು ಹರಿದುಹಾಕುತ್ತಿದ್ದ.

ಇವರೊಡನೆ ಮುಂಬಯಿವಾಲಾನಾಗುವುದು ಬಲು ಕಷ್ಟವಾಗಿತ್ತು. ನಾನು ಓದು ತಿಳಿದವನಾಗಿದ್ದೆ. ವಿದ್ಯಾವಂತನಾಗಿದ್ದೆ. ಸ್ವಲ್ಪ ಮಟ್ಟಿಗೆ ದೇಶ ವಿದೇಶಗಳ ಸಾಹಿತ್ಯವನ್ನು ಓದಿದ್ದ ನಾನು, ಸಂಸ್ಕಾರದ ಮೂಸೆಯಲ್ಲಿ ಸ್ವಲ್ಪ ಬೆಂದಿದ್ದ ನಾನು, ಎಲ್ಲವನ್ನೂ ಮರೆತು ಮತ್ತೆ ಆ ಆಳಕ್ಕೆ ಧುಮುಕಬೇಕಾಗಿತ್ತು.

ನನ್ನ ಸ್ನೇಹಿತನಾದವನೊಬ್ಬ ಮರಾಠಿ ಪುಸ್ತಕ ಪತ್ರಿಕೆಗಳನ್ನು ಓದುತ್ತಿದ್ದ. ಆತನಿಗೆ ಇಷ್ಟವಾಗಿದ್ದುದು ಪತ್ತೇದಾರಿ ಕಾದಂಬರಿಗಳು—ಸಿನಿಮಾ ಪತ್ರಿಕೆಗಳು. ನಾನೂ ಪತ್ತೇದಾರಿ ಕಾದಂಬರಿಗಳನ್ನು ಸಾಕಷ್ಟು ಓದಿದ್ದೆ. ಆದರೆ ಆ ಆಸಕ್ತಿ ಸ್ಥಿರವಾಗಿರಲಿಲ್ಲ. ಆದರೆ ಅವನಾದರೋ ಮರಾಠಿ ಭಾಷೆಯಲ್ಲಿ ಮತ್ತೆ ಮತ್ತೆ ಆ ಕತೆಗಳನ್ನು

ಹೇಳುತ್ತಿದ್ದ. ಕಳ್ಳ ಸಿ. ಐ. ಡಿ. ಗಳಿಗೆ ಗಸ್ತುಕೊಟ್ಟು ಓಡಿ ಹೋಗು ವುದನ್ನು ಬಾರಿ ಬಾರಿಗೂ ವರ್ಣಿಸುತ್ತಿದ್ದ. ಆದರೆ ಕಾದಂಬರಿಗಳಲ್ಲಿ ಸಿ. ಐ. ಡಿ ಗಳಿಗೇ ಜಯವಾಗುವುದಲ್ಲವೆ? ಅದಕ್ಕೆ ಆತ ಸಮಾಧಾನ ಹೇಳುತ್ತಿದ್ದ.

"ನಿನಗೆ ತಿಳೀದು ಶೇಖರ್, ಈ ಪುಸ್ತಕ ಬರೆದು ಅಚ್ಚು ಹಾಕಿಸೋರೆಲ್ಲಾ ಸಿ. ಐ. ಡಿ. ಕಡೆಯವರು. ತಮಗೆ ಸೋಲಾಗು ತ್ತೇಂತ ಅವರು ಯಾವತ್ತಾದರೂ ಒಪ್ಕೊಂಡಾರ?"

ಮುಂಬಯಿ ನಗರದಲ್ಲಿ ಶೇಖರನಾಗಿ ಮೆಲ್ಲನೆ ಮಾರ್ಪಟ್ಟ ನಾನು ಆ ಮಾತು ಕೇಳಿ ಮುಗುಳ್ನಕ್ಕು ಸುಮ್ಮನಾಗುತ್ತಿದ್ದೆ.

ಒಮ್ಮೆ ಆತ, ಯಾವಳೋ ಶ್ರೀಮಂತ ಯುವತಿಯ ಕಾರಿನ ಕೆಳಗೆ ಸಿಕ್ಕು ಸುಂದರನಾದ ಬಡ ಯುವಕನೊಬ್ಬನ ಅದೃಷ್ಟ ಖುಲಾಯಿ ಸಿದ್ದನ್ನು ಹೇಳಿದ.

"ಅದು ಕತೆ ಅಲ್ವ?"

"ಛೆ! ಛೆ! ಕತೆ ಆದರೇನಂತೆ? ಹಾಗೆಲ್ಲಾ ಆಗ್ದೆ ಇದ್ರೆ ಕತೆ ಬರೀತಾರ?"

ನಾನು ಆತನಿಗೆ ಕಲ್ಪನೆಯ ಕುದುರೆಯನ್ನೇರಿ ಕವಿಗಳು ಮೂರು ಲೋಕ ಸಂಚಾರ ಮಾಡುವುದು ಉಂಟೆಂದು ಹೇಳಿದೆ. ಅವನ ಮನ ಸ್ಸಿಗೆ ನೋವಾಯಿತು.

"ಹಾಗೆ ಯಾಕಂತೀಯ? ಹೀಗೆ ಆಗ್ಲೇಬಾರದು ಅಂತ ಉಂಟೇನು?"

ಆಗಬಾರದೆಂದೇನೂ ಇರಲಿಲ್ಲ. ಆದರೆ ಹಾಗೆ ಆಗಲಿಲ್ಲ ಅಷ್ಟೆ. ಯಾವ ಶ್ರೀಮಂತ ಹುಡುಗಿಯ ಕಾರಿನ ಕೆಳಗೂ ನಾವು ಬೀಳಲಿಲ್ಲ. ನಮ್ಮ ಅದೃಷ್ಟ ಖುಲಾಯಿಸಲಿಲ್ಲ.

ಇನ್ನೊಂದು ದಿನ ಆತ, ತನ್ನ ಪ್ರೀತಿಪಾತ್ರನಾದ ಚಲಚ್ಚಿತ್ರ ನಾಯಕನ ಬಗ್ಗೆ ಹೇಳಿದ. ಅವನು ಚಿಲ್ಲರೆ ಸಾಮಾನು ಹರವಿ ಕೊಂಡು ನಾಲ್ಕು ಕಾಸು ಸಂಪಾದನೆಗಾಗಿ ಎಲ್ಲಿಯೊ ಬೀದಿಯ ಬಳಿಯಲ್ಲಿ ಕುಳಿತಿದ್ದಾಗ, ನಿರ್ಮಾಪಕರು ಅವನನ್ನು ನೋಡಿ ಕರೆ

ದೊಯ್ದು ನಾಯಕನ ಪಾತ್ರ ಕೊಟ್ಟರಂತೆ. ಈಗ ಆತನ ಜತೆಯಲ್ಲಿ ನಟಿಸಲು ಹಾತೊರೆಯದ ತಾರೆಯೇ ಇಲ್ಲ. ನಾಲ್ಕು ಬ್ಯಾಂಕುಗಳಲ್ಲಿ ಆತ ದುಡ್ಡಿಟ್ಟಿದ್ದಾನೆ. ಅಷ್ಟೇ ಅಲ್ಲ. ತಾನು ಹಿಂದೆ ಚಿಲ್ಲರೆ ಸಾಮಾನು ಮಾರುತ್ತಿದ್ದ ಜಾಗಕ್ಕೆ ಬಂದು ಈಗ ಅಲ್ಲಿರುವ ಇನ್ನೊಬ್ಬನಿಂದ ಪ್ರತಿ ದಿನವೂ ಏನಾದರೊಂದು ಸಾಮಾನು ಕೊಳ್ಳುತ್ತಾನೆ! ........

ನನಗೆ ನಗು ಬರುತ್ತಿತ್ತು. ನನಗಿಂತ ಎರಡು ವರ್ಷ ಚಿಕ್ಕವನು ಆ ಹುಡುಗ. ಅವನ ಕಲ್ಪನೆಯ ಪ್ರಪಂಚ ರಹಸ್ಯಮಯವಾಗಿತ್ತು. ಅದರ ಒಳಹೊಕ್ಕರೆ ಮೈ ಮರೆಯದೆ ಇರುವುದು ಸಾಧ್ಯವೇ ಇರಲಿಲ್ಲ. ನನ್ನ ಮುಖದ ಮೇಲಿದ್ದ ತೆಳ್ಳಗಿನ ಕಪ್ಪನೆಯ ಬಾಲ್ಯ ಮೀಸೆಯ ಮೇಲೆ, ನಯವಾಗಿ ನೀಳವಾಗಿ ಬೆಳೆದಿದ್ದ ಕ್ರಾಪಿನ ಮೇಲೆ, ಕೈಯಾಡಿಸಿದೆ. ಚಲಚ್ಚಿತ್ರ ನಿರ್ಮಾಪಕರ ಯಾವುದಾದರೂ ಕಾರು ಬಂದು ನನ್ನೆದುರು ನಿಂತು ನನಗಾಗಿ ಬಾಗಿಲು ತೆರೆಯಬಾರದೇಕೆ?

ಆ ದಿನ ನನ್ನ ಬಳಿ ನಿಂತು, ಬೇರೊಂದು ಲೋಕದ ಇಣಿಕು ನೋಟವನ್ನು ಒದಗಿಸಿಕೊಟ್ಟ ಆ ಕಾರಿನ ನೆನಪಾಯಿತು—ದೊಡ್ಡ ಮನುಷ್ಯರ ಕಾರು........ಲೋಕಪರಾಯಣರ ಕಾರು........ಆಮೇಲೆ ವಕ್ರಹುಬ್ಬಿನ ಚಿಕ್ಕ ಮೂಗಿನ ಕುಣಿಯುವ ಜಡೆಯ ಆ ಹುಡುಗಿ .... ಪರಾಯಣರ ಮಗಳು. ಅವಳ ನೆನಪು ಹಿತಕರವಾಗಿರಲಿಲ್ಲ—ಆದರೆ?

ಹೊಟ್ಟೆ ಹಸಿದ ಮೇಲೆ ಮನುಷ್ಯನಿಗೆ ಬೇರೆ ಬಯಕೆಗಳಿರುತ್ತವೆ ಅಲ್ಲವೆ? ಹೊಟ್ಟೆ ಹಸಿದಾಗಲೂ ಬಯಕೆಗಳಿರುತ್ತವೆ ಅಲ್ಲವೆ? ಅವನಿಗೆ ಅನ್ನ, ರೊಟ್ಟಿ, ಅಷ್ಟೇ ಸಾಕೆ? ಆತ ಪ್ರೀತಿಯನ್ನು ಬಯಸುತ್ತಾನೆ. ನಾನು ಆ ಮರಾಠಿ ಹುಡುಗನನ್ನು ಪ್ರೀತಿಸುತ್ತಿದ್ದೆ. ಈ ಪ್ರೀತಿಗೂ ಹುಡುಗ - ಹುಡುಗಿಯರ ನಡುವಿನ ಪ್ರೀತಿಗೂ ವ್ಯತ್ಯಾಸವಿದೆ ಅಲ್ಲವೆ? ಹದಿನೇಳು-ಹದಿನೆಂಟರ ವಯಸ್ಸಿನಲ್ಲಿ ನಾನು, ಅಂತಹ ಪ್ರೀತಿಯೆಂದರೇನೆಂಬುದನ್ನು ತಿಳಿದಿರಲಿಲ್ಲ. ತಾಯಿಯ ಪ್ರೀತಿ ಗತ ಕಾಲದ ಸ್ಮರಣೆ ಮಾತ್ರ. ತಂಗಿ ಅಕ್ಕ ನನಗಿರಲಿಲ್ಲ. ಪ್ರಾಥಮಿಕ ಶಾಲೆಯಲ್ಲಿ ಚಿಕ್ಕವರಾದ ಶ್ರೀಮಂತ ಹುಡುಗಿಯರಿದ್ದರು. ಆದರೆ ಅವರು ಶ್ರೀಮಂತ ಹುಡುಗಿಯರು. ಮಲೆನಾಡಿನಿಂದ ಇಳಿದು

ಬಂದಿದ್ದ ಹಳ್ಳಿಯ ಬಡ ಹುಡುಗನನ್ನು ಅವರು ಪ್ರೀತಿಸಿರಲಿಲ್ಲ. ಈಗ—

ನನ್ನ ಓರಗೆಯ ಹುಡುಗಿಯರು ನಡೆದು ಹೋಗುತ್ತಿದ್ದರೆ ನನ್ನಲ್ಲಿ ಹೊಸ ಅನುಭವಗಳಾಗುತ್ತಿದ್ದುವು. ಕೊಳೆಯಾದ ಉಡುಗೆ ಧರಿಸಿದ್ದ ನನ್ನನ್ನು ಅವರು ನೋಡುತ್ತಿರಲಿಲ್ಲ ನಿಜ. ಚಲಚ್ಚಿತ್ರದಲ್ಲಿ ತೋರಿಬರುತ್ತಿದ್ದ ಘಟನೆಗಳು ನಿಜ ಜೀವನದಲ್ಲಿ ಆಗುತ್ತಿರಲಿಲ್ಲ ನಿಜ. ಆದರೆ, ಯಾವಳಾದರೂ ಹುಡುಗಿ ಯಾರನ್ನಾದರೂ ನೋಡಿ ಕಂಡೂ-ಕಾಣದ ಹಾಗೆ ತುಟಿಗಳ ಮೇಲೆ ಮುಗುಳುನಗೆ ಹಾಯಿಸಿದಾಗ, ನನಗೆ ನೋವಾಗುತ್ತಿತ್ತು. ಆ ಕಣ್ಣುಗಳು ಯಾರನ್ನೊ ಹುಡುಕಿದಾಗ, ನಾನು ಕಾತರಗೊಳ್ಳುತ್ತಿದ್ದೆ........ಆದರೆ ಅದು ಕ್ಷಣ-ಕಾಲ. ನನಗೆ ಬಿಡುವಿದ್ದಾಗ. ಯೋಚನೆಗಳು ತರ್ಕಬದ್ಧವಾಗದೆ, ಬೇರೆ ಬೇರೆಯಾಗಿ ಹರಡಿಕೊಂಡಾಗ. ಆದರೆ, ಅಂತಹ ಸಂದರ್ಭಗಳು ಹೆಚ್ಚಾಗಿರುತ್ತಿರಲಿಲ್ಲ.

ದಿನ ನಿತ್ಯದ ಬದುಕಿನ ಹೋರಾಟ ನನ್ನನ್ನು ಹೆಚ್ಚು ಹೆಚ್ಚು ಅನುಭವಿಯಾಗಿ ಮಾಡುತ್ತಿತ್ತು. ಆ ವರ್ಷದ ನಿರುದ್ಯೋಗ ಪ್ರದರ್ಶನಗಳು ಒಂದು ಪಾಠವನ್ನು ನನಗೆ ಕಲಿಸಿದುವು: ನಾನು ಒಬ್ಬನೇ ಆಗಿರಲಿಲ್ಲ. ಈ ಪ್ರಪಂಚದಲ್ಲಿ ಸಂಕಟಪಡುವ ಜೀವ ನನ್ನದೊಂದೇ ಆಗಿರಲಿಲ್ಲ........

ಅಜ್ಜಿ ಇಟ್ಟಿದ್ದ ನೋಟುಗಳಲ್ಲಿ ಒಂದು ಮಾತ್ರ ಉಳಿದಿತ್ತು. ಅಂಗಿಯ ಜೇಬಿನೊಳಗೆ ಅದನ್ನು ಇರಿಸಿದ್ದೆ. ಆ ಮಧ್ಯಾಹ್ನ, ಬೋರಿಬಂದರದ ದೊಡ್ಡದೊಂದು ಅಂಗಡಿಯ ಹೊರಗೆ ಬಲ ಸಂಧಿಯಲ್ಲಿ ನಾನು ಆಕಾಶ ನೋಡುತ್ತಾ ಮಲಗಿದ್ದೆ. ಆದರೆ ಹಲವಾರು ತಂತಿಗಳು ನನ್ನಮೇಲೆ ಬಲೆಯಂತೆ ಹರಡಿ, ಆಕಾಶವನ್ನು ನನ್ನ ದೃಷ್ಟಿಯಿಂದ ಮರೆಮಾಡಿದ್ದುವು. ಒಂದಷ್ಟು ಮೋಡಗಳು ಎಡದಿಂದ ಬಲಕ್ಕೆ ಹಾದು ಹೋದ ಮೇಲೆ ನಾನು ಮಗ್ಗುಲಿಗೆ ತಿರುಗಿಕೊಂಡು ನಿದ್ದೆಹೋಗಲು ಯತ್ನಿಸಿದೆ. ಐದು ನಿಮಿಷಗಳಾಗಿರಬೇಕು. ಕಣ್ಣುಗಳು ಒಲ್ಲೆ

ವೆನ್ನುತ್ತಾ ತೂಕಡಿಸುತ್ತಿದ್ದುವು........ಆಗ ಒಂದು ನೆರಳು ನನ್ನ ಮೇಲಿಂದ ಹಾಯ್ದುಹಾಗಾಯಿತು. ಒಮ್ಮೆ, ಮತ್ತೊಮ್ಮೆ. ನಾನು ಚಲಿಸಲಿಲ್ಲ. ಮುಚ್ಚಿದ ಕಣ್ಣನ್ನು ತೆರೆಯಲಿಲ್ಲ. ಉಸಿರು ಬಿಡಲಿಲ್ಲ. ಒಂದು ಕೈ ಮೆಲ್ಲನೆ ನನ್ನ ಜೇಬಿನೊಳಕ್ಕೆ ಇಳಿಯಿತು—ಬಲು ಮೌನ ವಾಗಿ. ಅಷ್ಟೇ ಮೌನವಾಗಿ ನಾನು ಆ ಕೈಯನ್ನು ಬಿಗಿಹಿಡಿದೆ. ಯಾರೂ ಮಾತನಾಡಲಿಲ್ಲ. ಆ ಕೈ ಬಂದ ಹಾದಿಯಲ್ಲೆ ವಾಪಸ್ಸುಹೋ ಗಲು ಯತ್ನಿಸುತ್ತಿತ್ತು. ಆದರೆ ನನ್ನ ಮುಷ್ಟಿ ಬಲವಾಗಿತ್ತು........ ಹಾಗೆ ಒಂದೆರಡು ನಿಮಿಷ. ನಾನು ತುಂಬ ಕುತೂಹಲಿಯಾಗಿದ್ದೆ. ಆ ವ್ಯಕ್ತಿಯನ್ನು ನೋಡಬೇಕೆಂಬ ತವಕ ಹೆಚ್ಚುತ್ತಿತ್ತು............ಬಲು ದೀರ್ಘವೆಂದು ಕಂಡ ಮೂರು ನಾಲ್ಕು ನಿಮಿಷಗಳ ಆ ಸಂದಿಗ್ಧ ಪರಿ ಸ್ಥಿತಿಯನ್ನು ಕೊನೆಗಾಣಿಸುವ ಹಾಗೆ, ಆ ವ್ಯಕ್ತಿ ನಕ್ಕಿತು. ನಾನು ಕಣ್ಣು ತೆರೆದೆ. ತೆರೆದು, ಬಿಗಿಹಿಡಿದಿದ್ದ ಕೈಯನ್ನು ಹೊರಕ್ಕೆ ತರುತ್ತ ಎದ್ದು ಕುಳಿತೆ,

"ಅನ್ಯಾಯ."

ಆತ ಮಾತನಾಡಲಿಲ್ಲ.

"ಚಾಲಾಕಿ ಇದ್ದರೆ ಶ್ರೀಮಂತರ ಮೇಲೆ ಪ್ರಯೋಗಿಸು. ನನ್ನ ಐದು ರೂಪಾಯಿ ನಿನಗೆ ಬಲಿಯಾಗೋದು ಯಾವ ನ್ಯಾಯ?"

ಕ್ಷಣ ಕಾಲ ಅವನ ಮುಖ ಕಪ್ಪಿಟ್ಟಿತು. ಮತ್ತೆ ನಟನೆಯ ಮುಖವಾಡವನ್ನು ಆತ ಧರಿಸಿದ.

"ಕ್ಷಮಿಸು ತಮ್ಮ."

ಮುಖದಮೇಲೆ ವಿಷಾದದ ಛಾಯೆ ಇಲ್ಲದಿದ್ದರೂ ಆ ಸ್ವರ ಕಂಪಿ ಸುತ್ತಿತ್ತು. ನನಗಿಂತ ಆತ ಮೂರು ನಾಲ್ಕು ವರ್ಷ ದೊಡ್ಡವನಿದ್ದಿರ ಬೇಕು. ಕಸಬಿಗೆ ಹೊಸಬನಲ್ಲ. ಅವನ ದೃಷ್ಟಿ ಅದನ್ನು ಹೇಳುತ್ತಿತ್ತು. ಉತ್ತರದವನ ಹಾಗೆ ಮಾತನಾಡುತ್ತಿದ್ದ. ಅವನ ಹಿಂದೂಸ್ಥಾನಿ ಆಕರ್ಷಣೀಯವಾಗಿತ್ತು—ನಮ್ಮ ತಂದೆ ನಾವಿಬ್ಬರೆ ಇದ್ದಾಗ ಮಾತ ನಾಡುತ್ತಿದ್ದ ಹಳ್ಳಿಯ ಕನ್ನಡದ ಹಾಗೆ.

"ಬಾ, ಚಾ ಕುಡಿಯೋಣ" ಎಂದು ಅವನು ಆಹ್ವಾನಿಸಿದ.

ನಾನು ಮುಗುಳ್ನಕ್ಕು, ಅವನೊಡನೆ ಸಮೀಪದ ಇರಾನಿ ಹೋಟೆಲನ್ನು ನುಗ್ಗಿದೆ.

........ಹಾಗೆ ಆರಂಭವಾದ ಪರಿಚಯ ಅಲ್ಲಿಗೇ ಮುಕ್ತಾಯವಾಗಲಿಲ್ಲ. ನನಗೆ ತಿಳಿದಿದ್ದ ಓದುಬರಹ, ಅವನ ಮೆಚ್ಚುಗೆಗೆ ಪಾತ್ರವಾಯಿತು. ಆತನಿಗೆ ನನ್ನ ಕೈಯಲ್ಲಿ ಆದ ಮುಖಭಂಗ, ವಿಚಿತ್ರ ರೀತಿಯಲ್ಲಿ ಅವನನ್ನು ನನ್ನೆಡೆಗೆ ತಂದಿತು

"ಶೇಖರ್, ನನಗೂ ಸಂಬಂಧಿಕರು ಯಾರೂ ಇಲ್ಲ. ಪ್ರಪಂಚ ವಿಶಾಲವಾಗಿದೆ, ಎಂತ ದೇಶವೆಲ್ಲಾ ಸುತ್ತಾಡ್ತಿದ್ದೇನೆ. ಕಲ್ಕತ್ತಾ ಢಿಲ್ಲಿಗಳಾದ ಮೇಲೆ, ಈಗ ಬೊಂಬಾಯಿ."

ನಾನು ಮುಗುಳ್ನಕ್ಕೆ.

ಆತ ಮರುದಿನವೂ ನನ್ನನ್ನು ಹುಡುಕಿಕೊಂಡು ಬಂದ. ನೋಡುವವರ ದೃಷ್ಟಿಯಲ್ಲಿ ಆತನೊಬ್ಬ ಕೆಳ ಮಟ್ಟದ ವ್ಯಕ್ತಿ. ಅವನದು ತುಂಡು ಸಿಗರೇಟನ್ನು ಕಿವಿಯಲ್ಲಿರಿಸಿಕೊಳ್ಳುವ ಸಂಸ್ಕೃತಿ. ಅವನ ಜೀವನ ಕ್ರಮವನ್ನು ತಿಳಿದವರ ದೃಷ್ಟಿಯಲ್ಲಿ, ಆತನೊಬ್ಬ ಜೇಬುಗಳ್ಳ. ಜೇಬುಗಳ್ಳರು ಒಳ್ಳೆಯ ಮನುಷ್ಯರಾಗಿ ಇರುವುದು ಎಂದಾದರೂ ಸಾಧ್ಯವೆ ? ಒಳ್ಳೆಯ ಮನುಷ್ಯರೆನ್ನಿಸಿಕೊಳ್ಳಬೇಕಾದುದು ಯಾರ ದೃಷ್ಟಿಯಲ್ಲಿ ? ಒಳ್ಳೆತನವೆಂದರೇನು ?

ನಾನು ಅವನ ಜೀವನದ ಒಳಹೊಕ್ಕು ಪರೀಕ್ಷಿಸ ಬಯಸಿದೆ. ಕೊನೆಯಿಲ್ಲದೆ ಪತ್ತೇದಾರಿ ಕಥೆ ಚಲಚ್ಚಿತ್ರ ತಾರೆಯರ ಜೀವನಗಳ ಬಗ್ಗೆ ಮಾತನಾಡುತ್ತಿದ್ದ ಮರಾಠಿ ಹುಡುಗನ ಸಹವಾಸಕ್ಕಿಂತ ಇದು ಹಿತಕರವಾಗಿತ್ತು.

"ನಿಮ್ಮನ್ನು ಏನೆಂದು ಕರೀಲಿ ?"

"ಜನ ಕೂಗೋದು ಭಾಷ ಎಂತ. ನಮ್ಮ ತಾಯಿ ಇಟ್ಟ ಹೆಸರು ಅಮೀರ್. ನೀನು ಅಮೀರ್ ಅಂತಾನೆ ಕೂಗು."

"ಅಮೀರ್, ನಿನ್ನ ಒಂದು ವಿಷಯ ಕೇಳ್ಬೇಕೂಂತ—"

"ಅದಕ್ಕೇನಂತೆ, ಧಾರಾಳವಾಗಿ ಕೇಳು."

"ಈ ವೃತ್ತಿ ನಿನಗೆ ತುಂಬ ಇಷ್ಟಾನ ?"

ನಾನು ಮಾತನಾಡುತ್ತಿದ್ದ ಹಿಂದೂಸ್ಥಾನಿ ಹರಕು ಮುರು ಕಾಗಿತ್ತು. ಆತ ಅದನ್ನು ಗಮನಿಸುತ್ತಿರಲಿಲ್ಲ. ನನ್ನ ಮನಸ್ಸಿನಲ್ಲಿ ದ್ದುದನ್ನು ತಿಳಿದುಕೊಂಡು ಉತ್ತರ ಕೊಡುತ್ತಿದ್ದ.

"ಈ ಹಮಾಲಿ ಕೆಲಸ ನಿನಗೆ ಇಷ್ಟಾನ?"

ಆ ಕೆಲಸ ನನಗೆ ಇಷ್ಟವಾಗಿರಲಿಲ್ಲ. ಪರಿಸ್ಥಿತಿ, ನನ್ನನ್ನು ಆ ಗತಿಗೆ ಇಳಿಸಿತ್ತು.

"ನಾನೂ ಅಷ್ಟೇ, ನಾನು ಅಷ್ಟೇ ಶೇಖರ್."

ಆತ, ತಂದೆಯನ್ನು ಬಾಲ್ಯದಲ್ಲೆ ಕಳೆದುಕೊಂಡಿದ್ದ. ಮನೆ ತುಂಬ ಮಕ್ಕಳಿದ್ದ ಸಂಸಾರ ಅವರದು. ಮೂವರು ಸೋದರರು. ನಾಲ್ವರು ಹುಡುಗಿಯರು. ಅಮೀರ್ ಮೂರನೆಯವನು. ಬಡತನ ದಲ್ಲೇ ನಿರ್ಗತಿಕನಾಗಿ ಅವರ ತಂದೆ ಸತ್ತಮೇಲೆ, ಆ ಮನೆಯೊಂದು ಪರಸ್ಪರ ಕೊಯ್ದು ಕಿತ್ತಾಡುವ ಯುದ್ಧಭೂಮಿಯಾಯಿತು. ಯಾರಿಗೂ ವಿದ್ಯಾಭ್ಯಾಸವಿರಲಿಲ್ಲ. ಅವರ ಸಂಪಾದನೆಯೆಲ್ಲವೂ ಅಷ್ಟಕಷ್ಟೆ. ಹಿರಿಯಣ್ಣನನ್ನೂ ಮದುವೆಗಾಗಿ ನೆರೆನಿಂತಿದ್ದ ಅಕ್ಕತಂಗಿಯರನ್ನೂ ಬಿಟ್ಟು ಅಮೀರ್ ಮತ್ತು ಅವನಣ್ಣ ಆ ಮನೆಯಿಂದ ಹೊರಟರು. ಅದು ಆರು ವರ್ಷಗಳ ಹಿಂದಿನ ಕತೆ. ಸೋದರರು ಹಿಡಿದ ಹಾದಿ ಬೇರೆ ಬೇರೆ.

ಅಮೀರ್ ಸಂಭಾವಿತನಾಗಿ ಒಳ್ಳೆಯವನಾಗಿ ಬದುಕಲು ಯತ್ನಿಸಿದ. ಆದರೆ ಅವನು ವಿದ್ಯಾವಂತನಾಗಿರಲಿಲ್ಲ. ಹಣವಂತನಾಗಿರ ಲಿಲ್ಲ. ಉಳಿದವರ ಮೇಲೆ ಪ್ರಭಾವ ಬೀರುವಂತಹ ಮನೆತನದ ಪ್ರತಿಷ್ಠೆ ಆತನಿಗಿರಲಿಲ್ಲ. ಅವನು ಹೆಸರಿನಲ್ಲಿ ಮಾತ್ರ ಅಮೀರ್. ಕಡು ಬಡವನಾದ ಲಕ್ಷ್ಮೀನಾರಾಯಣ್ ಇದ್ದ ಹಾಗೆ. ಹೀಗೆ ಅಮೀರ್ ಬಲು ತರ್ಕಬದ್ಧವೆಂದು ಕಾಣುವ ಹಾದಿಯಲ್ಲಿ ಹೆಜ್ಜೆಯ ಮೇಲೆ ಹೆಜ್ಜೆಯಿಡುತ್ತಾ ಜೇಬುಗಳ್ಳರ ವೃತ್ತಿಯ ಹೊಸ್ತಿಲಿಗೆ ಬಂದ; ಮೊದಲ ಪಾಠಗಳನ್ನು ಕಲಿತ.

ಆತನ ಕತೆಯನ್ನು ಕೇಳುವುದರ ಮೂಲಕ, ಕಾಲ್ಪನಿಕ ಕತೆ ಗಳ ಬದಲು ವಾಸ್ತವ ಜೀವನದ ಅಂಶಗಳನ್ನು ತಿಳಿಯುವುದರ

ಮೂಲಕ, ನಾನು ಎಲ್ಲ ಕಡೆಯಲ್ಲೂ ಒಂದೇ ರೀತಿಯಾಗಿ ಕಾಣಿಸಿ ಕೊಳ್ಳುತ್ತಿದ್ದ ಜೀವನದ ವಿರಾಟ್ ರೂಪವನ್ನು ಮನಸ್ಸಿನಲ್ಲಿ ಚಿತ್ರಿಸಿ ಕೊಂಡೆ.

ಮತ್ತೆಯೊಂದು ದಿನ ಆತ ಹಸನ್ಮುಖಿಯಾಗಿ ಬಂದ.

" ಏನು ಅಮಿರ್? ಮುಖ ಚಂದ್ರನ ಹಾಗಿದೆಯೆಲ್ಲಾ. ಏನ್ಸಮಾಚಾರ? "

ಅವನು, " ಬಾ ನಡಿ," ಎಂದ.

ಇರಾನಿಯಂಗಡಿಗೆ ಕರೆದೊಯ್ದು ಯಾರೂ ಇಲ್ಲದಿದ್ದ ಮೂಲೆ ಯಲ್ಲಿ ಕುಳಿತು ಕೇಕು ಬಿಸ್ಕತ್ತುಗಳ ತಟ್ಟೆಯನ್ನೇ ತರಿಸಿದ. ಆ ಮುಂಜಾವದಿಂದ ಬರಿ ಹೊಟ್ಟೆಯಲ್ಲಿದ್ದ ನಾನು ಶ್ರೀಮಂತರ ತಿಂಡಿ ಯಾದ ಕೇಕು ಬಿಸ್ಕತ್ತುಗಳನ್ನು ನಿರಾಕರಿಸಲಿಲ್ಲ. ಹಸಿದ ಹೊಟ್ಟೆಗೆ ಯಾವುದಾದರೇನಂತೆ?

" ನೋಡು ಶೇಖರ್. ಆ ದಿವಸ ನೀನು, ಚಾಲಾಕಿ ಇದ್ದರೆ ಶ್ರೀಮಂತರ ಮೇಲೆ ಪ್ರಯೋಗಿಸು ಎಂದಿದ್ದೆ. ಈ ದಿನ ಹಾಗೆಯೇ ಮಾಡ್ದೆ. ಈ ಷರಾಯಿ ಜೇಬಿನಲ್ಲಿ ಎಷ್ಟು ರೂಪಾಯಿ ಇದೆ ಹೇಳ್ತೀಯಾ? "

" ಓ ಹಾಗೋ? ಅಮಿರ್ ಅಮಿರನೇ ಆಗಿರಬೇಕು ಹಾಗಾದರೆ."

" ಅಂಥಾದೇನೂ ಇಲ್ಲ. ಎರಡು ಹಸುರು ನೋಟು, ಐದರದು ಹತ್ತು."

ನಾನು ಯಾವ ಮುಖ ವಿಕಾರವೂ ಇಲ್ಲದೆ ಮೌನವಾಗಿ ಕುಳಿತೆ. ನಮ್ಮ ಊರಲ್ಲಿ ಪಾಕೀಟು ಕಳೆದುಕೊಂಡ ದೊಡ್ಡ ಮನುಷ್ಯರು........ ಆ ಲಾಕಪ್ಪು .... ಕ್ಷಯರೋಗದಿಂದ ನರಳುತ್ತಿದ್ದರೂ ರಾತ್ರೆಯಲ್ಲಾ ಮರದ ಕೆಳಗೆ ಕಾದು ಕುಳಿತ ತಂದೆ........ ಆ ಕೊನೆಯ ಘಳಿಗೆಯ ಸಂಭಾಷಣೆ: " ಚಂದ್ರೂ, ಆ ದಿವ್ಸ ನೀನು ಪಾಕೀಟು ಕದ್ದಿರಲಿಲ್ಲ ಅಲ್ವಾ? " ...... " ಇಲ್ಲಪ್ಪಾ ನಾನು ಯಾವತ್ತಾದರೂ ಹೀಗ್ಮಾ ಡೇನಾ?" ............

ಅಮೀರ್ ಚಹಾವನ್ನು ಸಾಸರಿಗೆ ಬಸಿದುಕೊಂಡು ಹೀರುತ್ತಾ ನನ್ನ ಮುಖವನ್ನೇ ದಿಟ್ಟಿಸಿದ.

“ಆ ನೋಟುಗಳ ಜೊತೇಲಿ ಆ ವ್ಯಾನಿಟಿ ಬ್ಯಾಗ್‌ನಲ್ಲಿ ವಿಸಿಟಿಂಗ್ ಕಾರ್ಡೂ ಇತ್ತು. ಅವರ ಬಂಗಲೆ ಇರೋದು ತಾರ್ದೇವ್‌ನಲ್ಲಿ. ಅಲ್ಲಿಗೆ ಹೋಗಿ, ತಪ್ಪಾಯ್ತು ಅಂತ ಕ್ಷಮೆ ಕೇಳಿ, ಕೊಟ್ಟೆ ಡೋಣವೇನು ವಾಪಸ್ಸು ದುಡ್ಡ ?”

ಅಮೀರ್ ಹಾಗೆ ಕೇಳಿದಾಗ ನಗುತ್ತಿರಲಿಲ್ಲ.

“ಯಾಕೆ ಅಮೀರ್, ಗೇಲಿ ಮಾಡೋದು ತುಂಬ ಇಷ್ಟ ವೇನು ನಿಂಗೆ ?”

“ಮತ್ತೆ ದೇವರ ಹಾಗೆ ಕೂತಿದೀಯಲ್ಲ ? ಮನಸ್ಸಿನಲ್ಲಿ ರೋದನ್ನ ಸ್ಪಷ್ಟವಾಗಿ ಹೇಳ್ಬಾರ್ದೆ ?”

“... ........”

“ನೋಡು ಶೇಖರ್, ಇಷ್ಟು ದಿವಸದಿಂದ ನಾವು ಸ್ನೇಹಿತರು. ನಾನು ಮಾಡೋದು ತಪ್ಪು ಅಂತಿದ್ದರೆ ಬಾಯ್ಬಿಟ್ಟು ಹೇಳು. ಯಾವ ಸುಡುಗಾಡಿಗೆ ಮುಚ್ಚುಮರೆ ?”

ಆ ಸ್ವರದಲ್ಲಿ ನೋವಿತ್ತು. ಉದ್ವೇಗವಿತ್ತು. ತಿಳಿವಳಿಕೆ ಬಂದಾಗಿನಿಂದ ಸಂಕಷ್ಟ ಪರಂಪರೆಗಳನ್ನೇ ಅನುಭವಿಸುತ್ತ ಬಂದ ನಾನು ಆ ಘಾಸಿಕೊಂಡ ಹೃದಯವನ್ನು ಅರ್ಥ ಮಾಡಿಕೊಳ್ಳಲು ಸಮರ್ಥನಾಗಿದ್ದೆ. ಅಂದ ಮೇಲೆ—

“ಅಣ್ಣಾ ನನ್ನ ತಪ್ಪು ತಿಳೀಬೇಡ. ಇದು ಇಷ್ಟವಾದ ಕೆಲಸ ಅಂತ ಯಾರಾದರೂ ಮಾಡ್ತಾರ ?”

ಅಮೀರ್‌ಗೆ ಸ್ವಲ್ಪ ಸಮಾಧಾನವಾದಂತೆ ತೋರಿತು.

“ಶೇಖರ್, ನಾನು ನಿನ್ನ ಜೇಬಿನಿಂದ ಐದು ರೂಪಾಯಿ ಕದಿಯೋಕೆ ಪ್ರಯತ್ನಪಟ್ಟ ದಿನದಿಂದ ತುಂಬ ಬದಲಾಗಿದ್ದೇನೆ. ಆಗ ನನಗೆ ಹಸಿವಾಗಿತ್ತು. ಎಂಜಲೆಲೆಗಾಗಿ ನಾಯಿಗಳು ಕಿತ್ತಾಡೋದಿಲ್ಲವೆ ? ಹಾಗೆ. ನಾನು ಯಾರ ಮೇಲೆ ಬೀಳೋದಕ್ಕೂ ಸಿದ್ಧವಾಗಿದ್ದೆ. ಆದರೆ ನಿನ್ನನ್ನು ಕಂಡ ಮೇಲೆ, ನಿನ್ನ ಮಾತು ಕೇಳಿದ ಮೇಲೆ, ನಾನು

ಸಾಮಾನ್ಯ ಜನರ ವಿರುದ್ಧ ಕೈ ಎತ್ತಿಯೇ ಇಲ್ಲ. ಅಥವರ ಜೇಬಿಗೆ ಕೈ ಹಾಕೇ ಇಲ್ಲ. ಆದರೆ ಶ್ರೀಮಂತರ ವಿಷಯ ಬೇರೆ.''

....... ಹೊರಡುತ್ತಲಿದ್ದಾಗ ಒಂದು ನೋಟನ್ನು ಅಮೀರ್ ನನ್ನ ಜೇಬಿಗೆ ತುರುಕಿದ. ನಾನು ಬೇಡವೆಂದೆ. ಅವಶ್ಯತೆ ಇದ್ದರೂ ಅವನಿಂದ ಐದು ರೂಪಾಯಿ ಪಡೆಯಲು ಮನಸ್ಸು ಇಷ್ಟಪಡಲಿಲ್ಲ.

" ಗೊತ್ತು ಶೇಖರ್. ನಿನಗೆ ಪಾಪದ ಹಣ ಬೇಕಾಗಿಲ್ಲ. ನೀನು ದುಡಿದು ಸಂಪಾದಿಸೋ ಮರ್ಯಾದಸ್ಥ, ನಾನು ಸುಲಿದು ತಿನ್ನೋ ಜೇಬು ಕಳ್ಳ ಅಲ್ವಾ ? "

" ಹಾಗೆ ಹೇಳ್ಬಾರ್ದು ಅಮೀರ್."

" ಮತ್ತೆ—? "

ನಾನು ಉತ್ತರವೀಯದೆ, ನನ್ನ ಜೇಬು ಸೇರಿದ್ದ ನೋಟಿನೊಡನೆ ಹೊರಟುಹೋದೆ. ಬಲು ದೂರ ಹೋದೆ. ಪಶ್ಚಿಮ ತೀರದ ಸಮುದ್ರ ಮೆರಿನ್ ಡ್ರೈವಿನ ದಡಕ್ಕೆ ಅಪ್ಪಳಿಸುತ್ತಿತ್ತು. ಸಮುದ್ರವನ್ನೇ ನೋಡುತ್ತ ಭವ್ಯವಾದ ಕಟ್ಟಡಗಳು ಸಾಲಾಗಿ ನಿಂತಿದ್ದುವು. ಆ ಹಾದಿಯಲ್ಲಿ ಸಾಗಿದಾಗ, ನಾನೊಬ್ಬ ಬಲು ಸಣ್ಣ ಮನುಷ್ಯ ಪ್ರಾಣಿಯಾಗಿ ಕಂಡೆ. ಅಲ್ಲಿಂದ ಚೌಪಾಟಿಯ ಮರಳು ರಾಶಿಗಿಳಿದು ಸಹಸ್ರಾರು ಜನರೊಡನೆ ಬೆರೆತಾಗ, ನನ್ನ ವ್ಯಕ್ತಿತ್ವ ಅವರೆಡೆಯಲ್ಲಿ ಅಳಿಸಿಹೋಯಿತು. ಆಗ ಮನಸ್ಸಿಗೆ ನೆಮ್ಮದಿ ಎನಿಸಿತು.

ಗತ ಕಾಲದ ಘಟನೆಗಳನ್ನು ಮನಸ್ಸಿನಲ್ಲಿ ಮೆಲುಕು ಹಾಕತೊಡಗಿದೆ. ಅಂತರ್ಮುಖಿಯಾಗಿ ಯೋಚಿಸುತ್ತ ಕುಳಿತ್ತಿದ್ದ ನಾನು ಜೇಬಿನೊಳಕ್ಕೆ ಕೈ ಹಾಕಿದೆ. ನೋಟು ಮುದುಡಿಕೊಂಡಿತ್ತು. ಅದನ್ನು ಹೊರ ತೆಗೆದೆ. ಆ ನೋಟು—ಐದು ರೂಪಾಯಿನದಾಗಿರಲಿಲ್ಲ. ತನ್ನ ಬೆಲೆ ನೂರು ಎಂದು ಅದರ ಬಣ್ಣ ಸಾರುತ್ತಿತ್ತು. ಎಂತಹ ವ್ಯಕ್ತಿ ಈ ಅಮೀರ್ ! ಇದರರ್ಥವೇನು ? ನನ್ನ ಕೈಯಲ್ಲಿ ನೂರು ರೂಪಾಯಿ ! ಕ್ಷಯ ರೋಗಿಯಾದ ತಂದೆಗೋಸ್ಕರ ನೆರವು ಪಡೆಯಲು ಹೋದಾಗ ಆ ದೊಡ್ಡಮನುಷ್ಯರ ಮನೆಯಲ್ಲಿ ನನಗೆ ದೊರೆತಿದ್ದ ಎರಡು ನಾಣ್ಯಗಳು ಮತ್ತು ಈ ನೂರು ರೂಪಾಯಿ !

ಇದು ಸರಿಯುಲ್ಲವೆಂದು ನನಗೆ ತೋರಿತು. ನಾಳೆಯ ದಿನ ಅಮೀರ್ ಬಂದಾಗ ಹಿಂದಿರುಗಿಸಬೇಕೆಂದುಕೊಂಡೆ.

........ಮತ್ತೆ ಎರಡು ದಿನ ಅಮೀರ್ ಕಾಣಿಸಲಿಲ್ಲ ನನಗೆ ಸಾಕಷ್ಟು ಕೂಲಿಯೂ ಸಿಗಲಿಲ್ಲ. ಆ ನೋಟಿಗೆ ಚಿಲ್ಲರೆ ಪಡೆದು ಒಂದು ರೂಪಾಯಿ ಖರ್ಚುಮಾಡಿ ನಾಳೆಯ ಸಂಪಾದನೆಯಿಂದ ಸೇರಿಸಿ ಹಿಂತಿರುಗಿಸಬಹುದು ಎಂದು ಯೋಚಿಸಿದೆ. ಅದು ಸರಿಯಲ್ಲ ಎಂಬ ಭಾವನೆ ಮತ್ತೆ ಬಾಧಿಸಿತು. ಆದರೆ ಹಸಿವು, "ಅದರಲ್ಲೇನು ತಪ್ಪು ?" ಎಂದು ಕೇಳುತ್ತಿತ್ತು.

ನಾನು ಒಂದು ಹೋಟೆಲಿನ ಬಳಿ ಸಾರಿ, "ನೂರು ರೂಪಾಯಿಗೆ ಚಿಲ್ಲರೆ ಇದೆಯಾ?" ಎಂದು ಕೇಳಿದೆ.

ಹೋಟೆಲಿನಲ್ಲಿ ದುಡ್ಡುಎಣಿಸುತ್ತಲಿದ್ದವನು ನನ್ನನ್ನೇ ನೋಡಿದ. ಆ ದೃಷ್ಟಿಯ ವಿಧಾನ ನನಗೆ ಪರಿಚಿತವಾಗಿತ್ತು. ಸಂದೇಹದಿಂದ ಸಂಶಯದಿಂದ ಅಪ್ಪರವರೆಗೆ ಎಷ್ಟೊಂದು ಜನ ನನ್ನನ್ನು ನೋಡಿರಲಿಲ್ಲ! ನನ್ನಂತಹ ಭಿಕಾರಿ ನೂರು ರೂಪಾಯಿಯ ಚಿಲ್ಲರೆ ಕೇಳುವುದರಲ್ಲಿ ಅಸಾಮಾನ್ಯವಾದುದು ಇದ್ದೇ ಇರಬೇಕಲ್ಲವೆ?

ಬೊಂಬಾಯಿಯ ಪೋಲೀಸರ—ಲಾಕಪ್ಪಿನ ಪರಿಚಯ ನನಗೆ ಆಗಿರಲಿಲ್ಲ. ಮಾಡಿಸಿಕೊಳ್ಳುವ ಇಷ್ಟವೂ ನನಗಿರಲಿಲ್ಲ.

"ಚಾ ತಗೊಂಡು ಎಂಟು ಹೆತ್ತಾಣೆ ಬಿಲ್ ಆದರೆ ಕೊಡ್ತೀನಪ್ಪಾ" ಎಂದನಾತ.

ಮುಂದೆ ಏನಾಗಬಹುದಾಗಿತ್ತೋ ಹೇಳುವುದು ಸಾಧ್ಯವಿರಲಿಲ್ಲ. ನಾನು ಹೋಟೆಲಿನ ಒಳಹೋದಾಗ ಪೋಲೀಸರಿಗೆ ಬರಲು ಆತ ಆಮಂತ್ರಣವಿತ್ತರೂ ಇತ್ತನೆ. ನಾನು ಒಳಹೋಗಲಿಲ್ಲ.

"ಚಿಲ್ಲರೆ ನನಗಲ್ಲ. ಬೇರೆ ಯಾರಿಗೋ ಬೇಕಾಗಿತ್ತು. ನಾನು ಖರ್ಚು ಮಾಡೋಕಾಗಲ್ಲ" ಎಂದೆ.

ಹಾಗೆ ಹೇಳಿ ಮುಂದೆ ಸಾಗಿದೆ....

ಮರುದಿನ ನನ್ನನ್ನು ಹುಡುಕಿಕೊಂಡು ಬಂದ ಅಮೀರನನ್ನು ನೋಡಿ ಅವಾಕ್ಕಾಗಿ ನಿಂತೆ. ಆತ ಖಿಲಾಡಿಯ ಹಾಗೆ ನಗುತ್ತಿದ್ದ.

ಉಣ್ಣೆಯ ಸೂಟು, ಹೊಳೆಯುತ್ತಿದ್ದ ಷೂಗಳು, ತಿದ್ದಿ ಬಿಡಿಸಿದ್ದ ಕ್ರಾಪು—ಸಣ್ಣ ವಿಾಸೆ, ಉರಿಯುತ್ತಿದ್ದ ಸಿಗರೇಟು........

" ಏನಣ್ಣಾ ಇದು ? "

" ಯಾಕೆ, ಚೆನ್ನಾಗಿಲ್ವೇನೊ ? "

" ಇಲ್ವೇ ಏನು ? ನಿಜವಾಗಿಯೂ ಅಮಿಾರನಾಗೇ ಕಾಣ್ತೀಯ. ಎಷ್ಟು ಬೇಗ ಹೊಸ ಬಟ್ಟೆ ಹೊಲಿಸ್ಕೊಂಡೆ ! "

" ನೀನೊಬ್ಬ ಗುಗ್ಗು. ಸರಿಯಾಗಿ ನೋಡ್ಬಾರ್ದ ? ಹೊಸ ಬಟ್ಟೇನ ಇದು ? "

ಅದು ಹೊಸದಾಗಿರಲಿಲ್ಲ.

" ಗುಜರಿಯಿಂದ ತಗೊಂಡೆ ಕಣೋ. ಹಿಂದೆ ಯಾವ ಶ್ರೀಮಂತ ಹುಡುಗನ ಮೈ ಬೆಚ್ಚಗೆ ಮಾಡಿತ್ತೊ, ಏನೊ. ಆದರೆ ಈಗ ನನ್ನ ಕೈಗೆ ಬಂದಿದೆ. ಹೀಗಾಗ್ಬೇಕಾದರೆ ಈ ಉಣ್ಣೆ ಹೊತ್ತಿದ್ದ ಆ ಕುರಿಗಳು ಎಷ್ಟು ಪುಣ್ಯ ಮಾಡಿರ್ಬೇಡ ಹೇಳು ? "

ನಾನು ನಕ್ಕುಬಿಟ್ಟೆ.

" ಶೇಖರ್, ಇವತ್ತು ಮಜವಾಗಿರ್ಬೇಕು. ನಡಿ ಹೋಗೋಣ. ಎಲ್ಲಿಗಾದರೂ—"

ಆತನಿಗೆ ಪ್ರಾಯಶಃ ತಾನು ನನಗೆ ಕೊಟ್ಟಿದ್ದ ಹಸುರು ನೋಟಿನ ನೆನಪೇ ಇರಲಿಲ್ಲವೇನೊ.

" ಯಾಕ್ಮಗು ? ಯಾಕೆ ಹಾಗಿದ್ದೀಯ ? ಇನ್ಯಾವ ಗಾಡಿ ಬರೋದಿದೆ ? ನಿಮ್ಮಾವ ಮತ್ತು ಮಾವನ ಮಗಳು ಬರ್ತಾರೇನು ? ಅವರ ಬೆಡ್ಡಿಂಗ್ ಹೊರ್ಬೇಕೆನೊ ಪಾಪ ! "

ಅಂತಹ ವ್ಯಂಗ್ಯ ಮಾತಿನಿಂದ ನನಗೆ ನೋವಾಗುತ್ತಿರಲಿಲ್ಲ. ಅಮಿಾರನ ಹೃದಯ ನಿರ್ಮಲವಾಗಿತ್ತು.

" ಅಮಿಾರ್, ನಿಂಗೆ ನಗು ಬರುತ್ತೊ ಏನೋ. ನಿನ್ನ ನೋಟು ವಾಪಸ್ಸುಕೊಡ್ಬೇಕೂಂತ ಎರಡು ದಿವ್ಸ ನಿನ್ನ ಹಾದಿ ನೋಡ್ದೆ. ಕಡೆಗೆ ಚಿಲ್ಲರೆಮಾಡಿ ಒಂದು ರೂಪಾಯಿ ಖರ್ಚುಮಾಡೋಣಾಂತಿದ್ದೆ. ಚಿಲ್ಲರೆ ಕೇಳೊಕ್ಕೋದರೆ ಹೋಟೆಲಿನವನಿಗೆ ಸಂಶಯ ಬಂದ್ಬಿಡ್ತು

ಕಣಪ್ಪಾ."

ಅಮೀರನಿಗೆ ಅದು ತಮಾಷೆಯಾಗಿ ತೋರಲಿಲ್ಲ.

" ಅಯ್ಯೋ! ನಾನೆ ತಪ್ಮಾಡ್ದೆ. ಹಿಂದೆ ನನಗೇ ಒಂದ್ಸಾರಿ ಹೀಗಾಗಿತ್ತು. ಅದು ಗೊತ್ತಿದ್ದೂ ನಾನು ಹಾಗ್ಮಾಡೋದೆ?"

" ಪರವಾಗಿಲ್ಲ. ಸದ್ಯಕ್ಕೇನೂ ಆಗ್ಲಿಲ್ಲಾ ಅಂತಿಟ್ಕೊ."

" ಹಾಗಾದರೆ ಖರ್ಚಿಗೇನ್ಮಾಡ್ದೆ? ಉಪವಾಸ ಇದ್ದೇನು?"

ನಾನು ಸುಳ್ಳು ಹೇಳಬೇಕಾದ ಪ್ರಮೇಯವಿರಲಿಲ್ಲ. ಹೇಳಿದ್ದರೂ ಆತ ನಂಬುತ್ತಿರಲಿಲ್ಲ. ಹಸಿವಿನ ಅನುಭವವಿರುವ ವ್ಯಕ್ತಿಗೆ, ಇನ್ನೊಬ್ಬ ಹಸಿದಿರುವಾಗ, ಅದು ಗೊತ್ತಾಗಿಯೇ ಆಗುತ್ತದೆ.

" ಅಲ್ಲಾ ಶೇಖರ್, ನೀನು ನಿಜವಾಗಿಯೂ ಮಗೂನೆ. ನನಗೆ ವಾಪಸ್ಸು ಕೊಡೋದು ಅಂದರೇನು?"

ಎರಡು ನಿಮಿಷ ನಾವಿಬ್ಬರೂ ಮೌನವಾಗಿದ್ದೆವು. ನನ್ನ ಮುಖ ಬಾಡಿತ್ತು. ಆದರೆ ಅವನು ನಿತ್ಯ ಉತ್ಸಾಹಿ: ಅವನೆಂದ

" ಇದಿರು ಮಾತನಾಡದೆ ನನ್ನ ಜತೇಲಿ ಬಾ"

ನಾನು ಅವನ ಜತೆಯಲ್ಲಿ ಸೆಲೂನಿಗೆ ಹೋದೆ. ಅಮೀರನ ನಿರ್ದೇಶಕತ್ವದ ಕೆಳಗೆ ನನ್ನ ಹುಲುಸಾದ ತಲೆಗೂದಲ ಮೇಲೆ ಕತ್ತರಿ ಬಾಚಣಿಗೆಗಳು ಕಣ್ಣು ಮುಚ್ಚಾಲೆಯ ಕುಸ್ತಿ ನಡೆಸಿದವು. ಹಲವು ವರ್ಷಗಳ ಹಿಂದೆ ನನ್ನ ತಂದೆ ನನ್ನನ್ನು ಕ್ಷೌರಿಕನ ಅಂಗಡಿಗೆ ಒಯ್ದಿದ್ದ. ನಾನು ದೊಡ್ಡ ಮನುಷ್ಯನಾಗಲು ಸಹಾಯಕವಾಗುವಂತೆ, ಜುಟ್ಟಿನ ಬದಲು ಕ್ರಾಪು ಬಂದಿತ್ತು. ಈಗ ಇನ್ನೊಂದು ವಾತಾವರಣದಲ್ಲಿ, ಅಮೀರ್ ನನ್ನನ್ನು ಕರೆದುಕೊಂಡು ಬಂದಿದ್ದಾನೆ. ಇನ್ನು ಮುಂದೆ ಏನಾಗುವುದು?

ನಿಲುವು ಗನ್ನಡಿಯಲ್ಲಿ ಮುಖ ನೋಡುತ್ತಾ ನನಗೆ ನಗು ಬಂತು.

ಅಲ್ಲಿಂದ ಹೊರಬಿದ್ದಾಗ, ಅಮೀರ್ ನನ್ನ ಸೌಂದರ್ಯದ ಬಗ್ಗೆ ಗೇಲಿಮಾಡುತ್ತಿದ್ದ.

" ನೋಡು ಶೇಖರ್, ಮೊನ್ನೆ ದಿವಸ ನಾನು ಕ್ಷೌರ ಮಾಡಿದ ಆ ಹುಡುಗಿ ಇದ್ಲು ನೋಡು, ಅವಳೇನಾದರೂ ನಿನ್ನ ನೋಡಿದ್ದಿದ್ದರೆ,

ಹಣದ ಚೀಲ ನಿನ್ನ ಪಾದಗಳಿಗೊಪ್ಪಿಸಿ, ತಾನು ಚರಣದಾಸಿಯಾಗಿ ನಿನ್ನ ಹಿಂದೇನೆ ಬರ್‍ತಿದ್ಲು."

"ವಾಹವ್ವಾ, ಅಷ್ಟು ಕುರೂಪೀನೆ ಅವಳು?"

"ಛೆ! ಛೆ! ಅಷ್ಟು ದುಡ್ಡಿರೋರು ಕುರೂಪವಾಗಿರ್‍ತಾರ?"

"ಯಾಕೆ? ನೀನು ನೋಡ್ಲಿಲ್ವೇನು?"

"ಒಳ್ಳೇದ್ದೇಳ್ದೆ. ನಾನು ಅವಳ ರೂಪ ನೋಡ್ಲೊ? ಆ ಚೀಲ ಎತ್ಕೊಂಡು ಬರ್‍ಲೊ?........ಅವಳ್ನ ನೋಡ್ತಾ ನಿಂತು ಕೆಲಸ ನಿಧಾನ ಮಾಡಿದ್ರೆ, ಇಷ್ಟೊತ್ತಿಗೆ ಲಾಕಪ್ಪಿನಲ್ಲಿ ಇರ್‍ತಿದ್ದೆ!"

ಅಲ್ಲಿಂದ ಆತನನ್ನು ಗುಜರಿಗೆ ಕರೆದೊಯ್ದು. ನಾವು ಹೋಗು ತ್ತಿದ್ದುದು ಗುಜರಿಗೆ ಎಂದು ತಿಳಿದಾಗ, ಆತನ ಮನಸ್ಸಿನಲ್ಲಿದ್ದುದು ನನಗೆ ಸ್ಪಷ್ಟವಾಯಿತು.

"ಶೇಖರ್, ನನ್ನಂಥ ಕರೀ ಕೊರಮನಿಗೆ ಏನಿದ್ರೂ ನಡೆ ಯುತ್ತೆ"

"ನಾನೇನು ಬಿಳೀ ಜಿರಳೆಯೇನು?"

"ಹಾಗಲ್ಲಪ್ಪಾ, ಎಣ್ಣೆಗೆಂಪು ಮೈ ನಿಂದು..........ಬಣ್ಣ ಹೊಂದಿಕೆಯಾಗ್ಬೇಕು."

ನನಗೆ ಬಣ್ಣಗಳ ತಾರತಮ್ಯದ ಅನುಭವವಿರಲಿಲ್ಲ. ಆತನಿಗೂ ಇರಲಿಲ್ಲ. ಅವೆಲ್ಲಕ್ಕಿಂತ ಮುಖ್ಯವಾಗಿ ಆ ಅಂಗಡಿಯಲ್ಲಿದ್ದುದು, ನನಗೆ ಸರಿಹೋಗುವಂತಹ ಒಂದೇ ಸೂಟು. ಅದರ ಬಣ್ಣ ಹಸುರು— ಸ್ವಲ್ಪ ಮಸುಕಾಗಿತ್ತು ಅಷ್ಟೆ. ಅದನ್ನು ಕೊಳ್ಳುವ ಕೆಲಸವನ್ನು ಬಲು ಚೌಕಾಶಿಯಿಂದ ಅಮೀರ್ ಮಾಡಿದ. ನನ್ನ ಹಸುರು ನೋಟು ಅಲ್ಲಿ ಚಿಲ್ಲರೆಯಾಯಿತು. ಹತ್ತು ರೂಪಾಯಿ ಕೊಟ್ಟು, ಉಳಿದು ದನ್ನು ನನ್ನ ಕೈಯಲ್ಲೆ ಅಮೀರ್ ಇರಿಸಿದ.

"ಜೋಪಾನವಾಗಿಟ್ಕೋಪ್ಪಾ, ಶೇಖರ್. ನಿನ್ನ ಹಣ. ನಿದ್ದೆ ಗಿದ್ದೆ ಹೋದೆ ಅಂತಂದ್ರೆ ನಾನೇ ಲಪ್ಟಾಯಿಸ್ಬಿಟ್ಟೇನು!"

ಅಂತಹ ನಗೆ ಮಾತು ನನಗೆ ಆಹ್ಲಾದಕರವಾಗಿತ್ತು. ಮನುಷ್ಯ ಜೀವದ ಲಘುವಾದ ಒಳ್ಳೆಯದಾದ ಅಂತಹ ಹೃದಯ ನನ್ನ ಕತ್ತ

ಲೆಯ ಪಾಲಿಗೆ ಬೆಳುದಿಂಗಳ ಚಂದ್ರನಾಗಿತ್ತು.

ಹಾದಿಯಲ್ಲಿ ನನಗಾಗಿ ಒಂದು ಷರಟು ಕೊಂಡುದಾಯಿತು.

"ಇವತ್ನಿಂದ ನಾವಿಬ್ಬರೂ ಇರೋದಿಕ್ಕೆ ಒಂದು ರೂಮು ಗೊತ್ಮಾಡಿದೀನಿ. ಈಗ ಅಲ್ಲಿರೋದು ಒಬ್ಬ ಮುದುಕ ಮತ್ತು ಅವನ ಮಗಳು. ನೀನು ಆಗೊಲ್ಲಾ ಅನ್ನಾರ್ದು. ನಾವಿಬ್ಬರೂ ಇನ್ಮೇಲಿಂದ ಒಂದೇ ಕಡೆ ಇರೋಣ."

ಏನು ಹೇಳಬೇಕೊ ನನಗೆ ತೋಚಲಿಲ್ಲ.

"ನೋಡು ಶೇಖರ್, ನೀನು ನನ್ನ ಜೊತೇಲಿ ಜೇಬುಗಳ್ಳ ಆಗಬೇಕು ಅಂತ ಇದರ ಅರ್ಥವಲ್ಲ. ಹಮಾಲಿ ಕೆಲಸವೇ ನಿನಗೆ ಇಷ್ಟವಾದರೆ ಅದನ್ನೇ ಮಾಡು. ಉಳಿದ ಹೊತ್ತು ಜೊತೇಲಿ ಇರೋದು ಅಷ್ಟೆ."

ನಾನು ಆ ಸೂಚನೆಯನ್ನು ವಿರೋಧಿಸಲಿಲ್ಲ. ತಲೆಯ ಮೇಲೊಂದು ಸೂರು ಇಲ್ಲದೇ ಇದ್ದ ಅನಾಥನಾದ ನಾನು, ಅಮಿಾರನ ಆ ಹೊಸ ಬಂಧುಗಳಲ್ಲಿಗೆ ಹೋದೆ. ಮುದುಕ ಗೂರಲು ರೋಗದಿಂದ ನರಳುತ್ತಿದ್ದ. ಆ ಕೆಮ್ಮು ಅಸಹನೀಯವಾಗಿತ್ತು. ತಂದೆಯ ನೆನಪಾಗುತ್ತಿತ್ತು ನನಗೆ. ಆ ಹುಡುಗಿಗೆ ನನ್ನಷ್ಟೆ ವಯಸ್ಸಾಗಿರಬೇಕು. ಆದರೂ ಹಿರಿತನದಿಂದ ನನ್ನನ್ನು "ತಮ್ಮಾ" ಎಂದು ಅವಳು ಸಂಬೋಧಿಸುತ್ತಿದ್ದಳು. ಅಮಿಾರನನ್ನು ಮಾತ್ರ "ಅಣ್ಣಾ" ಎನ್ನುತ್ತಿರಲಿಲ್ಲ. ಈ ಸೋದರಿ ವಾತ್ಸಲ್ಯ ನನಗೆ ಹೊಸದಾಗಿತ್ತು ಆದರೆ ಅಮಿಾರನಿಗೆ ಮಿಾಸಲಾಗಿದ್ದ ಆ ವಿಶೇಷ ವಾತ್ಸಲ್ಯವನ್ನು ಕಂಡಾಗ ನನ್ನ ಹೃದಯದಲ್ಲಿ ಕಸಿವಿಸಿಯಾಗುತ್ತಿತ್ತು. ಆಗ ನನ್ನನ್ನು ಕಂಡು ನನಗೇ ನಾಚಿಕೆ ಎನಿಸುತಿತ್ತು.

ಆ ಹೊಸ ವಾತಾವರಣಕ್ಕೆ ನಾನು ಸುಲಭವಾಗಿ ಅಂಟಿಕೊಂಡೆ. ಸೂಟು ಧರಿಸಿದ ಮೊದಲ ದಿನ ಮೆಚ್ಚುಗೆ ಸೂಚಿಸಿ ಕೈ ತಟ್ಟಿ ಕುಣಿದ ಮೊದಲ ವ್ಯಕ್ತಿ ಆ ಹುಡುಗಿ. ಆಕೆ ನನ್ನ ಎಡಗೈ ಹಿಡಿದು ಬಲವಾಗಿ ಕುಲುಕಿ, "ನೀನು ಅಮಿಾರ್‌ಗಿಂತ ಚೆನ್ನಾಗಿದ್ದೀಯಾ!" ಎಂದಳು.

ಅಮೀರ್ ನಗುತ್ತಾ, "ಹುಷಾರಿ ಶೇಖರ್. ಈಕೆ ಮಹಾ ಘಾಟಿ. ಏನೋ ಹಂಚಿಕೆ ಹಾಕ್ತಿದಾಳೆ," ಎಂದ.

ನನ್ನ ಮುಖ ಕೆಂಪಗಾಯಿತು.

"ಆ ಮಗೂನ ಲೇವಡಿ ಮಾಡ್ತೀಯಲ್ಲಾ. ನಾಚಿಕೆಯಾಗ ಬೇಕು ನಿಂಗೆ," ಎಂದು ಆ ಹುಡುಗಿ ಅಮೀರನಿಗೆ ಛೀಮಾರಿ ಹಾಕಿದಳು.

ಹಾಗಾದರೆ ನಾನು ಅವಳ ದೃಷ್ಟಿಯಲ್ಲಿ ಮಗುವಾಗಿದ್ದೆ!

ನನ್ನ ಮುಖ ಮತ್ತಷ್ಟು ಕೆಂಪಗಾಯಿತು.

ನನ್ನ ಸಂಪಾದನೆಯ ಪುಡಿಕಾಸನ್ನು ಆ ಅತ್ತಿಗೆಯ ಕೈಗೆ ತಂದೊಪ್ಪಿಸುತ್ತಿದ್ದೆ—ಹಿಂದೆ ನನ್ನ ತಂದೆ, ಸಂಪಾದನೆಯನ್ನೆಲ್ಲಾ ಅಜ್ಜಿಗೆ ತಂದೊಪ್ಪಿಸುತ್ತಿದ್ದ ಹಾಗೆ. ಅವರು ಯಾವ ಜಾತಿಯೊ ಯಾವ ಮತವೊ ನಾನು ಕೇಳಲಿಲ್ಲ. ಅವರು ಮಾನವರಾಗಿದ್ದರು—ಹೃದಯ ಗಳಿದ್ದ ಮಾನವರಾಗಿದ್ದರು. ಅವರಲ್ಲಿ 'ವಿದ್ಯೆ' ಇರಲಿಲ್ಲ. 'ನಾಗರಿಕತೆ', 'ಸಂಸ್ಕಾರ' ವಿರಲಿಲ್ಲ. ಆದರೆ ಮಾನವೀಯ ಹೃದಯಗಳಿದ್ದುವು. ಅವರು ಯಾರೆಂದು, ಆ ಹುಡುಗಿಯ ಗತಜೀವನ ಎಂಥದೆಂದು, ನಾನು ಕೇಳಲಿಲ್ಲ. ಅಮೀರ್ ಅವಳನ್ನು ಪ್ರೀತಿಸುತ್ತಿದ್ದ. ಅವಳ ತಂದೆಯನ್ನೂ ಕೂಡ. ಹಗಲು ಹೊತ್ತಿನಲ್ಲೂ ದೀಪ ಉರಿಸ ಬೇಕಾದಷ್ಟು ಕತ್ತಲು ತುಂಬಿದ್ದ ಒಂದೇ ಕೊಠಡಿ— ನೂರನೆಯ ಮಹಡಿಯ ಮೇಲೆ. ಅದರ ನಡುವೆ, ರಾತ್ರಿ ಹೊತ್ತು ಸೀರೆಯನ್ನು ಅಡ್ಡವಾಗಿ ಕಟ್ಟಿ ಎರಡು ವಿಭಾಗಗಳಾಗಿ ಮಾಡುತ್ತಿದ್ದರು. ಒಂದೆಡೆ ಅಮೀರ್ ಮತ್ತು ಆಕೆ—ಶೀಲಾ. ಇನ್ನೊಂದೆಡೆ ಶೀಲಳ ತಂದೆ ಮತ್ತು ನಾನು.

ನನಗರಿಯದಂತೆಯೆ ನಾನು ಶೇಖರನ ವೃತ್ತಿಬಾಂಧವನಾದೆ. ಆತ ಧಾಳಿಮಾಡಿದ ಜಾಗದ ಸಮೀಪದಲ್ಲೆ ನಾನಿರುತ್ತಿದ್ದೆ. ಕೈಗೆ ವಸ್ತು ಬಂದಾಗ ಅದನ್ನು ನನಗೊಪ್ಪಿಸಿ ಅವನು ಅಲ್ಲೆ ನಿಂತಿರುತ್ತಿದ್ದ. ನಾನು ಸುರಕ್ಷಿತ ಸ್ಥಳಕ್ಕೆ ವಸ್ತುವಿನೊಡನೆ ಹೊರಟುಹೋಗುತ್ತಿದ್ದೆ.

....ಅಮೀರನೊಡನೆ ನಾನು ಲಾಕಪ್ಪಿನ ಸವಿ ನೋಡಿದೆ ಎಂದರೆ ನಿಮಗೆ ಆಶ್ಚರ್ಯವಾಗಲಾರದು. ಆದರೆ ನಾವು ಕಳ್ಳರಾಗಿ ಅಲ್ಲಿಗೆ ಹೋಗಲಿಲ್ಲ; ರಾಜ ಅತಿಥಿಗಳಾಗಿ ದೇಶಪ್ರೇಮಿಗಳಾಗಿ ಹೋದೆವು; —ಎಂದರೆ ನಿಮಗೆ ಆಶ್ಚರ್ಯವಾದೀತು.

ಅದು ನಡೆದುದು ಹೀಗೆ.

ಚೌಪಾಟಿಯಲ್ಲಿ ಆ ದಿನ ಸಂಜೆ ಗಾಂಧಿ ಸಭೆ ಜರುಗಿತು. ಯಾರೋ ವೃದ್ಧರಾದ ಮುಖಂಡರೊಬ್ಬರು, ಆವೇಶಪೂರಿತವಾದ ಭಾಷಣ ಮಾಡಿದರು. ಉಪ್ಪಿನ ಸತ್ಯಾಗ್ರಹ, ಉಪ್ಪು ತಯಾರಿಸಿ ಸರಕಾರದ ಕಾನೂನು ಕಟ್ಟಳೆಗಳನ್ನು ಮುರಿಯುವ ಸತ್ಯಾಗ್ರಹ, ಯಶಸ್ವಿಯಾಗಬೇಕೆಂದು ಕರೆಕೊಟ್ಟರು. ಸಭೆಯಾದ ಮೇಲೆ ಮೆರವಣಿಗೆ ಹೊರಟಿತು. ದೊರಗು ದೊರಗಾದ ಬಿಳಿಯ ಬಟ್ಟೆಯುಟ್ಟು ಆ ಜನ ತಲೆಯ ಮೇಲೆ ಬಿಳಿಯ ಟೋಪಿ ಧರಿಸಿದ್ದರು. ಏನಾದರೂ ಗೊಂದಲವಾಗುವಲ್ಲೆಲ್ಲಾ ಹಾಜರಿರುವುದು ಅಮೀರನ ಅಭ್ಯಾಸ. ನಾವಿಬ್ಬರೂ ಅಲ್ಲಿದ್ದೆವು. ಅಮೀರ್ ಭಾಷಣಕ್ಕೆ ಕಿವಿಗೊಡುತ್ತಿರಲಿಲ್ಲ. ಭಾಷಣ ಕೇಳುತ್ತಾ ಗುಂಪುಗುಂಪಾಗಿ ದೂರದೂರ ನಿಂತಿದ್ದವರಲ್ಲಿ ಕೆಲವರ ಜೇಬು ಖಾಲಿಮಾಡುವ ಕಾರ್ಯದಲ್ಲಿ ಆತ ನಿರತನಾಗಿರುತ್ತಿದ್ದ. ನಾನು ಭಾಷಣ ಕೇಳುತ್ತಿದ್ದೆ. ಆ ಮಾತುಗಳೆಲ್ಲವೂ ನನಗೆ ಅರ್ಥವಾಗುತ್ತಿರಲಿಲ್ಲ. ಆದರೂ ಕಿವಿಗೊಟ್ಟು ಕೇಳಬೇಕು ಎನ್ನಿಸುತ್ತಿತ್ತು. ಸ್ವಾತಂತ್ರ್ಯ—ದಾಸ್ಯ, ಸಾಮ್ರಾಜ್ಯಶಾಹಿ—ಕಾಂಗ್ರೆಸ್ಸು, ಈ ಮಾತುಗಳೆಲ್ಲಾ ಪದೇಪದೇ ನನ್ನೆದುರು ಹಾರಾಡುತ್ತಿದ್ದುವು.

ಅಮೀರ್ ನನ್ನೆಡೆಗೆ ಬಂದು ಭುಜ ಕುಲುಕಿ ನಕ್ಕು ನುಡಿದ.

"ಒಂದು ಟೋಪಿ ತಂದ್ಕೊಡ್ಲೇನು? ಲೀಡರ್ ಆಗ್ಬಿಡು. ಒಳ್ಗೆ ಕರ್ಕೊಂಡ್ಹೋಗಿ ರೊಟ್ಟಿ ಹಾಕ್ತಾರೆ. ಹಿಂದೆ ತಳ್ಳತನ ಮಾಡಿ ಸಿಕ್ಹಾಕ್ಕೊಂಡ್ರೆ ಮಾತ್ರ ಜೈಲು ಸಿಕ್ತಿತ್ತು. ಈಗ ಜೈ ಜೈ ಎಂದರೂ ಜೈಲಿಗೆ ಕಳಿಸ್ತಾರೆ."

ನಾನು ಉತ್ತರ ಕೊಡಬೇಕೆನ್ನುವಷ್ಟರಲ್ಲಿ ಆ ಘಟನೆ ನಡೆಯಿತು. ಸಭೆ ಮೆರವಣಿಗೆಯಾಗಿ ಮಾರ್ಪಾಟು ಹೊಂದಿ ಬೀದಿ ಸೇರುತ್ತಿತ್ತು.

ಅರ್ಧಕ್ಕರ್ಧ ಜನ ದೂರವೇ ನಿಂತಿದ್ದರು. ಆಗ ಪೋಲೀಸರ ಧಾಳಿ ನಡೆಯಿತು. ಗುಂಡುಗಳು ಹಾರಲಿಲ್ಲ. ಆದರೆ ಲಾಟಿಗಳು ಸಪ್ಪಳ ಮಾಡಿದುವು. ತೋಳ ನುಗ್ಗಿದಾಗ ಚೆದರಿ ಹೋಗುವ ಕುರಿಯ ಹಿಂಡಿನಹಾಗೆ ಜನ ಚೆಲ್ಲಾಪಿಲ್ಲಿಯಾಗುತ್ತಿದ್ದರು. ಧೈರ್ಯವಾಗಿ ಅಲ್ಲೇ ನಿಂತವರ ತಲೆಯೊಡೆದು ರಕ್ತ ಸೋರುತ್ತಿತ್ತು. ಬಾವುಟ ಹಿಡಿದವ ನನ್ನೂ ಅವನ ಹಿಂದಿದ್ದ ಹತ್ತಾರು ಜನರನ್ನೂ ಅವರ ಪಾಡಿಗೆ ಬಿಟ್ಟು ಎಷ್ಟೋ ಜನ ಸತ್ಯಾಗ್ರಾಹಿಗಳು ಚೌಪಾಟಿಗೆ ವಾಪಸ್ಸು ಧಾವಿಸಿದರು. ಸರಕಾರದ ರಕ್ಷಕರಾಗಿದ್ದ ಪೋಲೀಸರು ಅವರನ್ನು ಬೆನ್ನಟ್ಟಿದರು. ನಾನು ಮತ್ತು ಅಮಿರ್ ಹಿಂದಕ್ಕೆ ಸರಿಯಬೇಕೆಂದು ಯೋಚಿಸುತ್ತಿರು ವಷ್ಟರಲ್ಲೇ ಲಾಟಿ ಬೀಸಿತ್ತು. ನಮ್ಮ ಮೇಲಲ್ಲ-ನಮ್ಮ ಬಳಿಗೆ ಬಂದಿದ್ದ ಹದಿನೆಂಟು ಇಪ್ಪತ್ತರ ಗುಜರಾತಿ ಯುವತಿಯೊಬ್ಬಳ ಮೇಲೆ, ಅವಳ ತಮ್ಮನಂತೆ ಕಾಣುತ್ತಿದ್ದ ಹುಡುಗನೊಬ್ಬನ ಮೇಲೆ. ಅವರು ನೆಲಕ್ಕು ರುಳಿದರು. ಆಕೆ, "ಅಯ್ಯೋ" ಎಂದಳು. ಆ ಹುಡುಗ "ಮಹಾತ್ಮ ಗಾಂಧಿಕಿ ಜೈ," ಎಂದು ಕೂಗಾಡಿದ. ನೋಡಿದರೆ, ಎಂದಿಗೂ ಬೀದಿಗೆ ಇಳಿಯದೇ ಇದ್ದಂತಹ ಕೋಮಲ ಕಾಯರ ಹಾಗೆ ಅವರು ತೋರುತ್ತಿದ್ದರು. ನಾನು ಅವರಿಗೆ ಶುಶ್ರೂಷೆ ಮಾಡಲೆಂದು ಬಾಗಿದೆ. ಆ ಗೊಂದಲದಲ್ಲಿ ಸಿಲುಕಲು ಇಷ್ಟವಿಲ್ಲದೇ ಇದ್ದರೂ ಅಮಿರ್, ತಾನೂ ನನಗೆ ನೆರವಾದ. ಕ್ಷಣಾರ್ಧದಲ್ಲಿ ಆ ಇಬ್ಬರೊಡನೆ ನಮ್ಮನ್ನೂ ಬಂಧಿಸಿದ್ದರು.

ಲಾಕಪ್ಪಿನಲ್ಲಿ ಹಲವಾರು ಸತ್ಯಾಗ್ರಹಿಗಳ ಜತೆಯಲ್ಲಿ ನಾವು ಒಂದು ದಿನ ಕಳೆದವು. ಅಮಿರ್ ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದ. ಪರಿಸ್ಥಿತಿ ವಿಚಿತ್ರವಾಗಿಯೇ ಇತ್ತು. ಸೂಟು ಧರಿಸಿದ್ದ ನಾವು ಖಾದಿ ಧಾರಿಗಳ ಜತೆಯಲ್ಲಿದ್ದೆವು. ಜೇಬುಗಳ್ಳರಾದ ನಾವು ಸತ್ಯಾಗ್ರಹಿಗಳ ಸಂಗಾತಿಗಳಾಗಿದ್ದೆವು. ಹಿಂದೆ ನನಗೆ ಲಾಕಪ್ಪಿನ ಅನುಭವವಾದಾಗ ನನ್ನ ಕೈಲಿದ್ದ ಹಣವನ್ನೆಲ್ಲಾ ಪೋಲೀಸ್ ಅಧಿಕಾರಿ ಪಡೆದಿದ್ದ. ಆದರೆ ಈ ಸಾರಿ ನಾವು ಸತ್ಯಾಗ್ರಹಿಗಳ ಜತೆಯಲ್ಲಿದ್ದುದರಿಂದ ಅಮಿರನ ಆ ದಿನದ ಸಂಪಾದನೆ ಅವನ ಕೈ ಬಿಡಲಿಲ್ಲ.

ಮರುದಿನ ಸತ್ಯಾಗ್ರಹಿಗಳನ್ನು ಸೆರೆಮನೆಗೆ ಒಯ್ದರು. ನಮ್ಮನ್ನು ಬಿಟ್ಟುಬಿಟ್ಟರು. ಪೋಲೀಸ್ ಅಧಿಕಾರಿಯ ದೃಷ್ಟಿಯಲ್ಲಿ ನಾವಿಬ್ಬರು ಸಂಭಾವಿತರ ಹಾಗೆ ತೋರಿದೆವು. ಈ ಚಳವಳಿಗೂ ನಮಗೂ ಸಂಬಂಧವಿಲ್ಲವೆಂದು ಇಂಗ್ಲಿಷಿನಲ್ಲಿ ನಾನು ವಿವರಿಸಿದ ಮೇಲೆ, ನಮ್ಮ ಸ್ವಾತಂತ್ರ್ಯ ನಮಗೆ ದೊರೆಯಿತು.

ಕೊಠಡಿಗೆ ಬಂದ ಮೇಲೂ ಅಮೀರ್, ಮೇಲಿನ ಕೆಳಗಿನ ಮಹಡಿಯವರು ಗಾಬರಿಯಾಗುವ ಹಾಗೆ ಸಂತೋಷದಿಂದ ಕೂಗಾಡಿದ.

"ನಾವು ಲಾಕಪ್ಪಿನಲ್ಲಿ ಇದ್ದೆವು" ಎಂದು ನನ್ನ ಅತ್ತಿಗೆಗೆ ಅವನು ಹೇಳಿದಾಗ, ಆಕೆ ಗಾಬರಿಯಾಗಿ ಅವನನ್ನು ಮೇಲಿನಿಂದ ಕೆಳಗಿನವರೆಗೆ ಸೂಕ್ಷ್ಮವಾಗಿ ಪರೀಕ್ಷಿಸಿದಳು.

ಆದರೆ ಮುಂದೆ ಅವನು ವಿವರಿಸಿದ ಕತೆ ಕೇಳುತ್ತಾ ಅವಳೂ ಬಿದ್ದು ಬಿದ್ದು ನಕ್ಕಳು. ಅದೊಳ್ಳೆಯ ತಮಾಷೆಯಾಗಿತ್ತು. ಜೇಬುಗಳ್ಳರಾದ ನಾವು, ದೇಶಪ್ರೇಮಿಗಳಾಗಿದ್ದೆವು. ದೇಶಪ್ರೇಮಿ ಜೇಬುಗಳ್ಳರಾಗಿದ್ದೆವು.

ಒಬ್ಬನೇ ಇದ್ದಾಗ ಮಾತ್ರ ಏನೇನೊ ವಿಚಾರಗಳು ನನ್ನನ್ನು ಬಾಧಿಸುತ್ತಿದ್ದವು. ಪತ್ರಿಕೆ ಕೊಂಡುಕೊಂಡು ಓದುತ್ತಿದ್ದೆ. ದಿನ ನಿತ್ಯದ ಗೋಳಿನ ಜೀವನಕ್ಕಿಂತ ಸ್ವಲ್ಪ ಭಿನ್ನವಾದುದು ಏನೋ ನಡೆಯುತ್ತಿದ್ದಂತೆ ಭಾಸವಾಗುತ್ತಿತ್ತು. ವಾತಾವರಣದಲ್ಲಿ ಹೊಸದಾದುದೇನೊ ಸಂಚಾರ ಮಾಡುತ್ತಿತ್ತು. ನಮ್ಮನ್ನು ಆಳುತ್ತಿದ್ದವರು ಬ್ರಿಟಿಷರು ನಿಜ. ಅವರು ಪರದೇಶೀಯರು. ನಮ್ಮನ್ನು ನಾಗರಿಕರಾಗಿ ಮಾಡಲು ಅವರು ಬಂದಿರುವರೆಂಬುದು ಬರಿಯ ಬುರುಡೆ. ಅವರು ಈ ದೇಶವನ್ನು ಬಿಟ್ಟು ಹೋಗಬೇಕು, ಎನ್ನುವುದರಲ್ಲಿ ಅರ್ಥವಿತ್ತು.

ಹಾಗೆಂದು ನಾನು ಅಮೀರ್‌ಗೆ ವಿವರಿಸಿ ಹೇಳುತ್ತಿದ್ದೆ. ಆತನಿಗೆ ಆ ವಿಷಯ ಸ್ಪಷ್ಟವಾಗುತ್ತಿತ್ತು. ಆದರೆ ಸತ್ಯಾಗ್ರಹಿಗಳ ಹೆಸರೆತ್ತಿದಾಗ ಮಾತ್ರ ಅವನು ನಗುತ್ತಿದ್ದ.

"ನಿನಗೆ ಹುಚ್ಚು ಶೇಖರ್. ಬಡಕಲು ನಾಯಿ ಬೌ ಎಂದರೆ

ಸಾಕು, ಗಾವುದ ದೂರ ಓಡುವ ವೀರರು ಇವರು. ಬಯನೆಟ್—ಮಿಲಿಟರಿ ಮುಂದೆ ಇವರು ಒಂದು ನಿಮಿಷವಾದರೂ ನಿಲ್ಲೋದು ಸಾಧ್ಯವೆ ?"

ಆದರೂ ಸತ್ಯಾಗ್ರಹಿಗಳ ಹೋರಾಟ ನೈತಿಕ ವಿಜಯ ಗಳಿಸುತ್ತಿತ್ತು. ಜನತೆಯ ಮೇಲೆ ಆಗುತ್ತಿದ್ದ ಪರಿಣಾಮವನ್ನು ದುರ್ಲಕ್ಷಿಸುವುದು ಸಾಧ್ಯವೇ ಇರಲಿಲ್ಲ.

ನಾನು ಮತ್ತೂ ಯೋಚಿಸುತ್ತಿದ್ದೆ. ಈಗ ಇರುವ ಸಮಾಜ ಇಂಥಾದ್ದು. ಇದಕ್ಕೆಲ್ಲಾ ಬ್ರಿಟಿಷರೆ ಕಾರಣ ಎನ್ನೋಣವೆ? ದೊಡ್ಡ ಮನುಷ್ಯ ರಾಮಸ್ವಾಮಿಯವರು ನನಗೆ ಎರಡೇ ರೂಪಾಯಿ ಕೊಟ್ಟುದಕ್ಕೆ, ನನಗೆ ವಿದ್ಯಾಭ್ಯಾಸ ದೊರೆಯದೇ ಹೋದುದಕ್ಕೆ, ನಾನೀಗ ಜೇಬುಗಳ್ಳನಾದುದಕ್ಕೆ, ಬ್ರಿಟಿಷರ ಆಳ್ವಿಕೆ ಕಾರಣವೆ? ಹೌದೆನ್ನಲು ಸಾಕಷ್ಟು ಸಮರ್ಥನೆ ನನ್ನಲ್ಲಿ ಇರಲಿಲ್ಲ. ಸ್ವಾತಂತ್ರ್ಯದ ಹೆಸರಲ್ಲಿ ನಡೆದ ಹೋರಾಟವನ್ನು ನಾನು ವಿರೋಧಿಸುವುದು ಸಾಧ್ಯವೇ ಇರಲಿಲ್ಲ. ಆದರೆ ನಾನೂ ಕೂಡ ಅದಕ್ಕೆ ಧುಮುಕುವಷ್ಟರ ಮಟ್ಟಿಗೆ ನನ್ನನ್ನು ಅದು ಆಕರ್ಷಿಸಲಿಲ್ಲ.

ಆ ನಡುವೆ ನಾನೊಮ್ಮೆ ಕಾಹಿಲೆ ಬಿದ್ದು ಹಾಸಿಗೆ ಹಿಡಿದೆ. ನನ್ನ ಜೀವಮಾನದಲ್ಲಿ ನಾನು ಹಾಸಿಗೆ ಹಿಡಿಯುವಂತಾದುದು ಅದೇ ಮೊದಲ ಬಾರಿ ಮತ್ತು ಅದೇ ಕೊನೆಯ ಬಾರಿ. ಅದು ವಿಷಮ ಜ್ವರ. ಅಮಿರ್ ಅದೇನು ಏರ್ಪಾಟು ಮಾಡಿದನೋ ನನಗೆ ತಿಳಿಯದು. ನನ್ನನ್ನು ಆತ ಆಸ್ಪತ್ರೆ ಸೇರಿಸಿದ. ಹದಿನಾಲ್ಕನೆಯ ದಿವಸದಿಂದ ನಾನು ಗುಣಮುಖನಾಗುತ್ತ ಬಂದೆ. ಅತ್ತಿಗೆ ಶೀಲ ಪ್ರತಿ ದಿನವೂ ಮಧ್ಯಾಹ್ನ ಬಂದು ಹೋಗುತ್ತಿದ್ದಳು. ಸಂಜೆ ಅಮೀರ್ ಬರುತ್ತಿದ್ದ. ಯಾವುದೇ ಒಂದು ದಿನ ಅತ್ತಿಗೆ ಬರುವುದು ತಡವಾದರೆ, ನನಗೆ ಬಲು ದುಃಖವಾಗುತ್ತಿತ್ತು. ಬಲು ಪ್ರಯಾಸದಿಂದ ನೋವನ್ನು ಹತ್ತಿಕ್ಕುತ್ತಿದ್ದೆ. ನನ್ನೊಡನೆ ಸಲಿಗೆಯಿಂದಿರುತ್ತಿದ್ದ ನರ್ಸ್, ಬಾಡಿದ ನನ್ನ ಮುಖವನ್ನು ನೋಡಿದ ಒಡನೆ, "ಏನು ನಿಮ್ಮತ್ತಿಗೆ ಬರಲಿಲ್ಲವಾ ?" ಎಂದು ಕೇಳುತ್ತಿದ್ದಳು.

ನಾನು ಗುಣಮುಖನಾಗಿ ಹೊರಬಂದೆ. ಅಜ್ಜಿಯ ನೆನೆಪು ನನ್ನನ್ನು ಕಾಡುತ್ತಿತ್ತು. ಒಂದು ದಿನ ಸಂಜೆಯೆಲ್ಲಾ ಕುಳಿತು ದೀರ್ಘ ವಾದ ಒಂದು ಕಾಗದವನ್ನು ಅಜ್ಜಿಗೆ ಬರೆದೆ. ಅರ್ಧ ಸುಳ್ಳು, ಅರ್ಧ ಸತ್ಯ. ನನ್ನ ಬಗ್ಗೆ ಅಜ್ಜಿ ಕಾತರಗೊಳ್ಳಬೇಕೆಂಬ ಆಸೆಯಿಂದ, ನನ ಗಾದ ಕಾಹಿಲೆಯನ್ನು ಉಪ್ಪು ಖಾರ ಹಚ್ಚಿ ವಿವರಿಸಿದೆ. ಆದರೆ ಮರು ಕ್ಷಣವೇ, ಅಜ್ಜಿ ಗಾಬರಿಯಾಗಬಹುದೆಂದು ಹೆದರಿ, "ಈಗ ಗುಣ ವಾಗಿದೆ. ಪೂರ್ತಿ ಗುಣವಾಗಿದೆ. ಈಗ ಮೊದಲಿಗಿಂತ ಚೆನ್ನಾಗಿದ್ದೀನಿ" ಎಂದು ಬರೆದೆ. ಆ ಕಾಗದದ ವರದಿ ಪ್ರಕಾರ, ನನಗೆ ಉದ್ಯೋಗ ವಿತ್ತು — ತಕ್ಕ ಮಟ್ಟಿಗೆ ಸಂಬಳ ಬರುವ ಉದ್ಯೋಗ. ಊರಿಗೆ ವಾಪಸ್ಸು ಬರುವ ಆಸೆ ಆಗುತ್ತಿತ್ತು. ಆದರೆ ಸಾಕಷ್ಟು ಸಂಪಾದನೆ ಮಾಡದೆ ಹಿಂತಿರುಗುವುದು ಹೇಗೆ? ಕಾಗದದ ಮುಕ್ತಾಯದಲ್ಲಿ ಹೃತ್ಪೂರ್ವಕವಾಗಿ ಹೃದಯ ತೋಡಿಕೊಳ್ಳುತ್ತಾ ಬರೆದೆ.

"ಅಜ್ಜೀ, ಆಗಾಗ್ಗೆ ನಿಮ್ಮ ನೆನಪಾಗ್ತದೆ. ನಿಮ್ಮನ್ನು ನೋಡ ಬೇಕೆಂಬ ಆಸೆ. ನೀವು ಮಾಡಿದ ಚಕ್ಕುಲಿ ಕೋಡುಬಳೆ ಈ ಹಾಳು ಬೊಂಬಾಯಿಯಲ್ಲಿ ಎಲ್ಲಿ ಸಿಗಬೇಕು? ಈ ಅತ್ತಿಗೆ ಒಳ್ಳೆಯವಳು. ಆದರೂ ನಾನು ಬೆಳೆದು ದೊಡ್ಡವನಾದ ಊರು ನನ್ನನ್ನು ಕರೆಯು ತ್ತಿದೆ. ಇನ್ನೂ ಕೆಲವು ತಿಂಗಳು. ಆಮೇಲೆ ಬಂದೇ ಬಿಡ್ತೇನೆ ಅಜ್ಜಿ, ಊರಿಗೆ ಬಂದೇ ಬಿಡ್ತೇನೆ."

ಅಮೀರ್ ಕೇಳಿದ:

"ಅಜ್ಜಿಗೆ ಬರೀತಾ ಇದ್ದೀಯೇನೊ"

"ಹೂನಪ್ಪಾ".

ಆತ ಸಿಗರೇಟು ಹಚ್ಚುತ್ತಾ ಹೊಗೆಯ ಮುಸುಕಿನ ಹಿಂದೆ ಮುಖಮರೆಸಿಕೊಂಡು ಕುಳಿತ. ಆದರೆ ನನಗೆ ಗೊತ್ತಿತ್ತು. ಹಳೆಯ ನೆನಪು ಅವನನ್ನು ಬಾಧಿಸುತ್ತಿರಬೇಕು. ಊರಲ್ಲೆ ಬಿಟ್ಟು ಬಂದಿದ್ದ ವಯಸ್ಸಾದ ತಾಯಿಯ ದೊಡ್ಡಣ್ಣನ ಮತ್ತು ಅಕ್ಕತಂಗಿಯರ ನೆನಪು. ಅವರಲ್ಲಿ ಯಾರು ಯಾರು ಗಂಡದಿರ ಮನೆಗೆ ಹೋದರೊ. ಅವನು ಎಂದೂ ಕಾಗದ ಬರೆದವನಲ್ಲ. ಬರೆಸಿದವನೂ ಅಲ್ಲ. ಅವನ ಮನೆಯು

ವಿಳಾಸ ಅವನಿಗೆ ಸರಿಯಾಗಿ ನೆನಪಿರಲಿಲ್ಲ. ನೆನಪಿದ್ದಂತೆ ಬರೆಯುವ ಇಷ್ಟವೂ ಅವನಿಗಿರಲಿಲ್ಲ.

ಅನ್ವಾರನ ಭಾವನೆಗಳನ್ನು ತಿಳಿದುಕೊಂಡ ಶೀಲ ಅವನ ಬಳಿಗೆ ಬಂದಳು. ಅವನ ಕೊರಳಿನ ಸುತ್ತಲೂ ಕೈ ಹಾಕಿದಳು ಆ ಕ್ರಾಪಿನ ಮೇಲೆ ಮೂಗನ್ನಿರಿಸಿದಳು. "ಅನ್ವಾರ್ ಅನ್ವಾರ್," ಎಂದಳು.

ಊರಿನ ನೆನಪಾಗಿ ಆತ ತನ್ನನ್ನು ಎಲ್ಲಾದರೂ ಬಿಟ್ಟುಹೋಗ ಬಹುದೆಂಬ ಭೀತಿ ಅವಳನ್ನು ಕಾಡುತ್ತಿತ್ತೇನೊ. ಅಥವಾ ತನಗಿಂತ ಬೇರೆಯಾದ ಯಾವುದನ್ನೂ ಯಾರನ್ನೂ ಆತ ಪ್ರೀತಿಸಬಾರದೆಂಬ ಅಸೂಯೆ ಅವಳನ್ನು ಬಾಧಿಸುತ್ತಿತ್ತೇನೊ.

ಮೂಲೆಯಲ್ಲಿ ಕುಳಿತಿದ್ದ ಆಕೆಯ ತಂದೆ, ಇದ್ದಕ್ಕಿದ್ದಂತೆ ಪುಟ್ಟ ಕಿಟಕಿಯ ಮೂಲಕ ಹೊರಕ್ಕೆ ನೋಡುತ್ತಿದ್ದ. ನಾನು ಕ್ಷಣ ಕಾಲ ಮುಕ್ತಾಯಗೊಳಿಸಿದ ಕಾಗದದ ಮೇಲೆಯೇ ದೃಷ್ಟಿ ಬೀರಿದ್ದೆ.......... ತಲೆ ಎತ್ತಿ ನೋಡಿದಾಗ, ಶೀಲಳ ಮುಖ ಲಜ್ಜೆಯಿಂದ ಕೆಂಪಾಗಿತ್ತು. ಅನ್ವಾರ್ ನಗುತಿದ್ದ. ನನಗೆ ನಾಚಿಕೆ ಎನಿಸಿತು.

"ನಾನು ಹೊರಕ್ಕೆ ಹೋಗ್ಬಿಟ್ಟು ಬರ್ತೀನಿ ಅನ್ವಾರ್," ಎಂದೆ.

"ತಾಳು, ಶೀಲನೂ ಬರ್ತಾಳೆ. ಮೂವರೂ ಹೋಗಿ ಯಾವು ದಾದರೂ ಸಿನಿಮಾ ನೋಡ್ಕೊಂಡು ಬರೋಣ."

ನಾನು ಲಕೋಟೆ ಮೇಲೆ ವಿವರವಾಗಿ ಅಜ್ಜಿಯ ವಿಳಾಸ ಬರೆದೆ. ಕೆಳ ಮಗ್ಗುಲಲ್ಲಿ ನನ್ನ, ಅಂದರೆ ಅನ್ವಾರನ ಕೊಠಡಿಯ, ವಿಳಾಸ ಬರೆದೆ. ಲಕೋಟೆಯನ್ನು ಮುಚ್ಚಿ ಅದರ ಮೇಲೆ ಬೆರಳಾಡಿಸುತ್ತಾ ಕುಳಿತೆ.

ಅಷ್ಟು ಹೊತ್ತಿಗೆ ಶೀಲ ಸಿದ್ಧಳಾಗಿ ಬಂದಳು. ಅವಳುಟ್ಟಿದ್ದ ಗುಲಾಬಿ ವರ್ಣದ ಪತ್ತಳ ಮೋಹಕವಾಗಿತ್ತು. ಅನ್ವಾರ್ ಮಾತ್ರ ಪಾಯಜಾಮ ತೊಟ್ಟು ಹಳೆಯದೊಂದು ಷರಟು ಹಾಕಿ ಹೊರಟಿದ್ದ. ಶೀಲ ವಿರೋಧಿಸಿದಳು. ನನಗೆ ದೂರು ಕೊಟ್ಟಳು

"ನೋಡು ಶೇಖರ್, ಎಂಥ ಕೊಳಕು ಬಟ್ಟೆ ಹಾಕ್ಕೊಂಡಿದಾನೆ. ನೀನ್ಸ್ವಲ್ಪ ಹೇಳಪ್ಪಾ ಅವನಿಗೆ. ಇಲ್ದೆಹೋದ್ರೆ ನಾನು ಬರೋದೇ ಇಲ್ಲ" ನಾನು ನಗುತ್ತಾ ಅನ್ವಾರನ ಮುಖ ನೋಡಿದೆ.

" ಈ ಆಟವೆಲ್ಲಾ ಬಿಟ್ಬಿಡು. ಸಿನಿಮಾ ಬೇಕಾಗಿದ್ರೆ ತೆಪ್ಪಗೆ ಬಾ. ನೀನು ಚೆಂದವಾಗಿದ್ರೆ ಸಾಕು. ಅಲ್ವಾ ಶೇಖರ್ ? "

ಅವರ ಜಗಳ ನನಗೆ ಹೊಸದಾಗಿರಲಿಲ್ಲ. ಆದರೆ ಅಮೀರ್ ಎಂದೂ ಸೋತವನಲ್ಲ. ಅವನ ವ್ಯಕ್ತಿತ್ವವೇ ಅಂಥದು. ಕೊನೆಗೆ ಸೋಲನ್ನೊಪ್ಪಿಕೊಳ್ಳುತ್ತಿದ್ದವಳು ಶೀಲಳೇ. ಆದರಿಂದ ಅವಳಿಗೆ ಹೆಚ್ಚಿನ ಅಸಮಾಧಾನವೇನೂ ಆಗುತ್ತಿರಲಿಲ್ಲ. ಅಮೀರ್ ತನಗಾಗಿ ತುಂಬಿ ಕೊಡುತ್ತಿದ್ದ ಪ್ರೀತಿಯ ಬಟ್ಟಲು ಅವಳ ಪಾಲಿನ ಸ್ವರ್ಗವಾಗಿತ್ತು.

ಅಮೀರ್ ಆಜ್ಞೆ ಕೊಟ್ಟ ಮೇಲೆ ನಾನು ಸೂಟು ಧರಿಸಿದೆ. ಮೂವರೂ ಮನೆ ಬಿಟ್ಟು ಹೊರಟೆವು. ಅಂಚೆಯ ಮನೆಯವರೆಗೂ ನಡೆದು ಹೋಗಿ ಅವರಿಬ್ಬರ ಎದುರಲ್ಲಿ ಕಾಗದವನ್ನು ಅಜ್ಜಿಗೆ ಕಳಿಸಿ ಕೊಟ್ಟದಾಯಿತು. ಅಲ್ಲಿಂದ ನಾವು ಸಿನಿಮಾ ಮಂದಿರ ಸೇರಿದೆವು.

ಹಳೆಯ ನೆನಪುಗಳು ಚಲಚ್ಚಿತ್ರದ ಸುರುಳಿಗಳಂತೆ ಒಂದರ ಮೇಲೊಂದಾಗಿ ದೃಷ್ಟಿಯ ಮುಂದೆ ಹಾದು ಹೋಗುತ್ತವೆಂದು ಹೇಳುವುದುಂಟು. ಹಲವು ವರ್ಷಗಳ ಮೇಲೆ ಈಗ ನನಗೆ ಹಾಗೆಯೇ ಆಗುತ್ತಿದೆ ತಬ್ಬಲಿಯಾಗಿ ಪ್ರಪಂಚ ಸಾಗರದಲ್ಲಿ ತೇಲಿ ಬಿಟ್ಟ ನನ್ನ ದೋಣಿ ಗಾಳಿ ಬೀಸಿದತ್ತ ಚಲಿಸಲಿಲ್ಲವೆ ? ಚುಕ್ಕಾಣಿ ಹಿಡಿದು ನಾನು ಅಪೇಕ್ಷೆ ಪಟ್ಟ ಗುರಿಯತ್ತ ಅದನ್ನು ಒಯ್ಯುವುದು ಸಾಧ್ಯವಾಯಿತೆ ?

ಅಮೀರನ ಸಹೋದ್ಯೋಗಿಯಾಗಿ ನಾನು, ಸಮಾಜ ಕಂಟಕನಾದೆ. ಇಷ್ಟವಿಲ್ಲದಿದ್ದರೂ ಅನಿವಾರ್ಯವಾಗಿ ಹಲವು ಕೆಲಸಗಳನ್ನು ಮಾಡಿದೆ. ಮುಚ್ಚಿಕೊಂಡ ಚಾಕು ನನ್ನ ಕೈಯಲ್ಲಿ ಚಿಣ್ಣನೆ ಚಿಗಿದು ಬಾಯಿ ತೆರೆಯುವುದನ್ನು ಕಲಿಯಿತು. ಅದನ್ನು ಅಪರಿಚಿತ ವ್ಯಕ್ತಿಯ ಕೊರಳಿಗೋ ಹೊಟ್ಟೆಗೋ ಗುರಿಯಿಟ್ಟು ಬೆದರಿಸುತ್ತ ಹಣ ಸಂಪಾದಿಸಲು ನಾನು ಕಲಿತೆ. ಪಿಸ್ತೂಲು ಹಿಡಿಯುವ ಆಧುನಿಕರು ನಾವಾಗಿರಲಿಲ್ಲ. ಕೊಲೆಯ ಮಾರ್ಗವಾಗಿಯೇ ಗುರಿಸೇರುವ ಪಾತಕಿಗಳು ನಾವಾಗಿರಲಿಲ್ಲ. ಒಂದು ಜೀವವನ್ನು ಕೊನೆಗಾಣಿಸುವ ಅಧಿಕಾರ ಇನ್ನೊಂದು ಜೀವಕ್ಕೆ ಇಲ್ಲ ಎನ್ನುವುದು ನನ್ನ ಅಭಿಪ್ರಾಯ, ಆಗಲೂ

ಈಗಲೂ. ಬೇರೆ ಉದ್ಯೋಗ ನಮಗೆ ದೊರೆತಿದ್ದರೆ, ಸದ್ಗೃಹಸ್ಥರಾಗಿ ಬಾಳುವ ಅವಕಾಶ ನಮಗೆ ಇದ್ದಿದ್ದರೆ, ಈ ವೃತ್ತಿಗೆ ನಾವು ಕಟ್ಟು ಬೀಳುವ ಅವಶ್ಯತೆಯೇ ಇರಲಿಲ್ಲ........

ಅಜ್ಜಿಯಿಂದೊಂದು ಕಾಗದ ಬಂತು—ನನ್ನದಕ್ಕೆ ಉತ್ತರ. ಆ ಮೇಲೆ ಇನ್ನೊಂದು ಬಂತು. ಎರಡು ತಿಂಗಳ ಮೇಲೆ ಮತ್ತೊಂದು. ಎಲ್ಲ ಕಾಗದಗಳಲ್ಲೂ ಇದ್ದ ಹಾಡು ಒಂದೇ.

"ಊರಿಗೆ ಬಾ ಚಂದ್ರು, ವಾಪಸ್ಸು ಬಾ. ನನಗೆ ಮೈ ಚೆನ್ನಾಗಿಲ್ಲ. ಬಾ, ತಪ್ಪದೆ ಬಾ"

ಅಜ್ಜಿಯಿಂದ ಕಾಗದ ಬಂದಾಗಲೆಲ್ಲ ನಾನು ಅಂತರ್ಮುಖಿಯಾಗುತ್ತಿದ್ದೆ. ನನಗೆ ಆತ್ಮೀಯರಾಗಿದ್ದ ಆ ವ್ಯಕ್ತಿಗೆ ನಾನೇನು ಸುಖವನ್ನು ಕೊಟ್ಟಿದ್ದೆ? ಏನು ಕೊಟ್ಟಿದ್ದೆ?

ಒಮ್ಮೆ ಅಮೀರನಿಗೆ ಹೇಳಿ ಐವತ್ತು ರೂಪಾಯಿಗಳನ್ನು ಅಜ್ಜಿಗೆ ಕಳುಹಿಸಿಕೊಟ್ಟೆ.

"ಬೇಗನೆ ಬರ್ತೀನಿ ಅಜ್ಜಿ. ಏನೂ ಚಿಂತಿಸಬೇಡಿ ಔಷಧಿ ತಗೊಳ್ಳಿ. ಯಾವ ಯೋಚನೇನೂ ಮಾಡಬೇಡಿ. ನಾನು ಖಂಡಿತ ಬರ್ತೀನಿ" ಎಂದು ಬರೆದೆ.

ನನ್ನ ಮನಸ್ಸಿನ ಹೊಯ್ದಾಟಗಳನ್ನು ಅಮೀರ್ ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದ್ದ. ಮೊದಮೊದಲು ಅವನು ಮೃದುವಾಗಿದ್ದ ಆದರೆ ಬರಬರುತ್ತ............

"ಶೇಖರ್. ಮುಂದೇನಾದೀತು ಹೇಳೋದು ಸಾಧ್ಯವಾ? ನಾವು ಮುಂದೆ ಏನ್ಮಾಡಬೇಕೂಂತ ನಿನ್ನ ಯೋಚನೆ? ನಿನ್ನ ಮನಸ್ಸು ಬರೀ ಬೆಣ್ಣೆ ಅಂತ ನನಗೆ ಗೊತ್ತಿರಲಿಲ್ಲ. ಅಜ್ಜಿ ಅಜ್ಜಿ ಅಂತ ಬಡಕೊಳ್ಳೋದು ಎಲ್ಲಾದ್ರೂ ಉಂಟೆ? ಅದೂ ನಿನ್ನ ವಯಸ್ಸಿನಲ್ಲಿ? ಏನೋಪ್ಪ, ನೀನು ಹೀಗಾಗ್ತಿ ಅಂತ ತಿಳಿದಿರಲಿಲ್ಲ."

"ಈಗ ಏನಾಗಿದೆ ಅಮೀರ್?"

"ಆಗಿರೋದೇನು? ಅದು ನಾನು ಕೊಡಬೇಕಾದ ಉತ್ತರವೆ? ಉತ್ತರಿಸಬೇಕಾದವನು ನೀನು—ನಾನಲ್ಲ."

"ಹಾಗಂದ್ರೆ ? "

"ನೀನು ಬದಲಾಗಿದ್ದೀಯಾ ಅನ್ನೋದು ನಿನಗೆ ಗೊತ್ತೆ ? "

"ಆಗಿರಬಹುದು. ಅಳುಬುರಕ ಕೂಲಿಯಾಗಿದ್ದವನು ಚುರುಕಾದ ಜೇಬುಗಳ್ಳನಾಗಿಲ್ವ ? ಬದಲಾಗಿರಬಹುದು."

"ಅದಲ್ಲ, ನಿನ್ನ ಚುರುಕುತನ ಮಾಯವಾಗಿ ಅಳುಬುರಕತನ ಬರ್ತಾ ಇದೆ, ಗೊತ್ತಾ ? "

ನಾನು ಮೌನವಾಗಿ ಅಮೀರನ ಮುಖವನ್ನೇ ನೋಡಿದೆ. ಇತ್ತೀಚೆಗೆ ಕೆಲವು ದಿನಗಳಿಂದ ನಾನು ಉತ್ಸಾಹಿಯಾಗಿರಲಿಲ್ಲ. ಕಾರ್ಯಕ್ರಮಗಳಲ್ಲಿ ಗೆಲುವಿನಿಂದ ಭಾಗವಹಿಸುತ್ತಿರಲಿಲ್ಲ. ಇದರಿಂದ ಅಮೀರನಿಗೆ ತೊಂದರೆಯಾಗುತ್ತಿತ್ತು. ಬೇಟೆಯನ್ನು ಹುಡುಕಿಕೊಂಡು ಅವನೊಬ್ಬನೇ ಹೋಗಬೇಕಾಗುತ್ತಿತ್ತು.

ಅಮೀರ್ ಮಾತು ಮುಂದುವರಿಸಿದ :

"ಶೇಖರ್, ಎಷ್ಟೋ ಸಾರಿ ಅಣ್ಣಾ ಅಂತ ನನ್ನ ಕರೆದಿದ್ದೀಯಾ. ಆ ದೃಷ್ಟಿಯಿಂದಲೇ ಅಧಿಕಾರದಿಂದ ಒಂದೆರಡು ಮಾತು ಹೇಳ್ತೀನಿ, ಕೇಳು. ನೀನು ಮಗುವಲ್ಲ. ನಿನಗೆ ವಯಸ್ಸು ಹದಿನೆಂಟೊ ಹತ್ತೊಂಭತ್ತೊ ಆಗಿದೆ. ಎಳೆ ಹುಡುಗಿಯರ ಹಾಗೆ ಮನೆ ಯೋಚನೆ ಮಾಡೋದನ್ನು ಬಿಟ್ಬುಟ್ಟು ಮೀಸೆ ಹೊತ್ತ ಗಂಡಸಾಗಿ ನೀನು ಬೆಳೀಬೇಕು. ನೀನು ಸಿಗರೇಟು ಬೀಡಿ ಮುಟ್ಟದೇ ಇರೋದರ ಅರ್ಥವೇನು ? ಕುಡಿಯೋಕೆ ಬಾ ಎಂದರೂ ಹಿಂದೇಟು ಹೊಡೆಯೋದರ ಅರ್ಥವೇನು ? ನಿನ್ನ ಸಂಸಾರದ ವಿಚಾರ. ನನ್ನ ರಕ್ತ ಸಂಬಂಧಿಗಳೇ ನಾಲ್ಕಾರು ಜನ ಇದ್ದಾರೆ. ಪ್ರೀತಿಯ ಅಮ್ಮಾ ಜಾನ್ ಇದ್ದಾಳೆ. ನನಗೂ ಅವರ ನೆನಪಾಗ್ತದೆ. ಆದರೆ ನಾನು ಹೃದಯಾನ ಗಟ್ಟಿ ಮಾಡ್ಕೊಂಡಿಲ್ವಾ ? ಇನ್ನು ಶೀಲಳ ವಿಷಯ. ನನಗೆ ಜೀವನ ಅನ್ನೋದು ಏನೂ ಅಂತ ಗೊತ್ತಿದೆ. ನಿನ್ನ ವಯಸ್ಸಿನಲ್ಲಿ ನಾನು ಯಾರೊ ಹುಡುಗಿ ಜತೇಲಿ ಮಲಗಿದ್ದುಂಟು. ಆದರೆ ನಾನು ವ್ಯಕ್ತಿತ್ವ ಇಲ್ಲದ ಪ್ರಾಣಿಯಾಗೋಕೆ ಇಷ್ಟ ಪಡೋದಿಲ್ಲ. ಒಳ್ಳೆಯ ಮನುಷ್ಯನಾಗಿರಬೇಕೂಂತಲೇ ಈಗ ಶೀಲಳನ್ನ ಹೆಂಡತಿ ಅಂತ ಸಾಕ್ತೀನಿ.

ನೀನೂ ಕೂಡಾ ಯಾರನ್ನಾದರೂ ಗುರ್ತು ಮಾಡ್ಕೊಂಡು ಮನೆಗೆ ಕರ್‍ಕೊಂಡು ಬಾ. ಆದರಿಂದ ನಿನ್ನ ಮನಸ್ಸಿಗೆ ಸಮಾಧಾನವಾದರೂ ಆಗ ಬಹುದು. ನೀನು ವಿದ್ಯಾವಂತ, ಇಂಗ್ಲಿಷ್ ಬರತ್ತೆ ನಿಂಗೆ. ನಿನ್ನಂಥ ವರು ನಮ್ಮ ವೃತ್ತೀಲಿ ಪಳಗಿದರೆ, ಏನು ಬೇಕಾದರೂ ಮಾಡಬಹುದು. ನೀನು ಹೀಗೆ ಕರಗಿ ಹೋಗೋದನ್ನ ಸಹಿಸೋದು ನನ್ನ ಕೈಲಾಗೋದಿಲ್ಲ. ಏನಪ್ಪಾ ಶೇಖರ್ ?"

ಆ ಮಾತುಗಳನ್ನು ಹೇಳುತ್ತಾ ಆತನೇ ಕರಗುತ್ತಿದ್ದ. ಅವನ ಸ್ವರ ಕಂಪಿಸುತಿತ್ತು. ನನ್ನನ್ನು ಆತ ಬಲುವಾಗಿ ಪ್ರೀತಿಸುತ್ತಿದ್ದ ನೆಂಬುದರಲ್ಲಿ ಸಂಶಯವೇ ಇರಲಿಲ್ಲ. ಪ್ರಾಯಶಃ ನಾನು ವೃತ್ತಿಯ ಬಗ್ಗೆ ಪೂರ್ಣ ಆಸಕ್ತಿ ವಹಿಸದೆ ತಪ್ಪು ಮಾಡುತ್ತಿರುವೆನೋ ಏನೋ ಅನಿಸಿತು. ಹಿಂದೆ, ಬೇಡ ಬೇಡವೆಂದು ಅಜ್ಜಿ ಹೇಳುತ್ತಿದ್ದಾಗ ಮನೆಬಿಟ್ಟು ಹೊರಟ ನಾನು, ಹೀಗೆ ಮಾಡುವುದು ತಪ್ಪೇನೊ— ಎಂದು ಯೋಚಿಸಿದ ಹಾಗೆ, ನಾನು ಹೇಳಿದೆ :

" ಅಮೀರ್, ನೀನು ನನಗೊಬ್ಬ ಅಣ್ಣ ಇದ್ದಹಾಗೆ ನಾನು ಏನೇನೋ ಆಗಬೇಕೂಂತ ಆಸೆ ನಿನಗೆ. ನಮ್ಮಪ್ಪನೂ ಹಾಗೆಯೇ. ನಾನು ದೊಡ್ಡ ಮನುಷ್ಯನಾಗಬೇಕೂಂತ ಬಯಸಿದ್ದ. ನಾನು ಹಾಗಾಗ ಲಿಲ್ಲ. ಈಗ ಇನ್ನೇನಾಗುತ್ತೋ ಏನೋ."

" ಯಾಕೆ, ನಿನ್ನ ಜೀವ ನಿನ್ನ ಕೈಲಿ ಇಲ್ಲವೇನು ?"

ನನ್ನ ಜೀವ ನನ್ನ ಕೈಲಿ ಇತ್ತೆ ? ದೈವ ಭೀರುವಾಗಿ ನಾನು ಬೆಳೆದು ಬಂದಿರಲಿಲ್ಲ ನಿಜ. ಹೇಮಾವತಿ ನದಿಯಲ್ಲಿ ದೇವರು ತೇಲಿ ಹೋದ ಮೇಲೆ, ಸರ್ವಾಂತರ್ಯಾಮಿಯಾದ ಅವನ ಸಾಕಾರ ಮೂರ್ತಿಯನ್ನು ನಾವು ಪೂಜಿಸಿರಲಿಲ್ಲ. ಗುಡಿಗಳಿಗೆ ಹಗಲೆಲ್ಲಾ ಹೋಗಿ ಪ್ರದಕ್ಷಿಣೆ ಬರುತ್ತಿರಲಿಲ್ಲ. ನನ್ನ ಓದು ನನ್ನನ್ನು ಸಂಶಯ ಪ್ರವೃತ್ತಿಯವನನ್ನಾಗಿ ಮಾಡಿತ್ತು. ಆದರೂ—

ಈಗ ನನ್ನ ಜೀವ ನನ್ನ ಕೈಯಲ್ಲಿ ಇದೆ ಎಂದು ಹೇಳಬಲ್ಲೆ. ಆದರೆ ಆಗ ಹಾಗೆ ಹೇಳುವ ಸ್ಥಿತಿಯಲ್ಲಿ ನಾನಿರಲಿಲ್ಲ. ಯಾವುದೋ ಅಗೋಚರ ಶಕ್ತಿಯೊಂದು ನನ್ನ ಜೀವನ ಗತಿಯ ಮೇಲೆ ಪ್ರಭುತ್ವ

ಸ್ಥಾಪಿಸಿಂದತೆ, ಭಾಸವಾಗುತ್ತಿತ್ತು.

ನನ್ನ ಮೌನ ಅಮಿರಾರನಿಗೆ ಅಸಹನೀಯವಾಗಿತ್ತು. ಅವನು ಎದ್ದು ಕೊರಳಿಗೆ ಕರ ವಸ್ತ್ರ ಬಿಗಿದುಕೊಳ್ಳುತ್ತಾ ಬೀದಿಗಿಳಿದ.

ಆ ಮೇಲೆ ಶೀಲ ಮಾತನಾಡಿಸಿದಳು.

" ಏನಪ್ಪ, ನೀವಿಬ್ಬರೂ ಜಗಳವಾಡಿದಿರಾ ? "

" ಇಲ್ವಲ್ಲಾ ಅತ್ತಿಗೆ."

" ಮತ್ಯಾಕೆ, ಒಂಥರಾ ಇದ್ದೀಯೆ ? "

" .................. "

" ನೀನು ಊರಿಗೆ ಹೋಗ್ಬೇಕೂಂತ ಇದೀಯಂತೆ ನಿಜವಾ ? "

" ಹೌದು ಅತ್ತಿಗೆ. ನನ್ನಜ್ಜಿಗೆ ಕಾಹಿಲೆನಂತೆ. ಅವಳಿಗೆ ಬೇರೆ ಯಾರೂ ಇಲ್ಲ. ನಾನು ಹೋಗಬೇಕು ಅತ್ತಿಗೆ."

ಅವಳ ಸ್ತ್ರೀ ಹೃದಯ ಮೃದುವಾಗಿತ್ತು. ದಿನದಿನಕ್ಕೂ ಅಮಿರಾರನಂತೆ ಹೆಚ್ಚು ಹೆಚ್ಚಾಗಿ ಹೃದಯವನ್ನು ವಜ್ರ ಶಿಲೆಯಾಗಿ ಅವಳು ಕಠಿಣಗೊಳಿಸುತ್ತಿರಲಿಲ್ಲ. ಅವಳು ನಿಟ್ಟುಸಿರು ಬಿಟ್ಟು ಸುಮ್ಮನಾದಳು.

" ಅಮಿರಾರಣ್ಣನಿಗೆ ನಾನು ಹೋಗೋದು ಇಷ್ಟವಿಲ್ಲ."

" ಹೇಗಿದ್ದೀತು ಹೇಳು ? ನಿನ್ನ ಅವನೆಷ್ಟೊಂದು ಪ್ರೀತಿಸ್ತಾನೆ ಗೊತ್ತಾ ? ನಾನಾದ ಮೇಲೆ ಅವನ ಜೀವನದಲ್ಲಿ ಮುಖ್ಯ ವ್ಯಕ್ತಿ ಎಂದರೆ ನೀನೇ. ಅದು ನಿನಗೆ ಗೊತ್ತಾ ? "

" ಗೊತ್ತು ಅತ್ತಿಗೆ. ಆದ್ದರಿಂದಲೇ ನಾನು ಹೊರಟು ಹೋಗೋದು ಕಷ್ಟವಾಗಿದೆ ಯಾವುದೋ ಕಾಣದ ಬಳ್ಳಿ ನನ್ನನ್ನು ಇಲ್ಲಿಗೆ ಕಟ್ಟಿ ಹಾಕಿದೆ."

" ಅಮಿರಾರ್ ಯಾವತ್ತೂ ಊರಿಗೆ ಹೋಗೊ ಯೋಚನೆ ಮಾಡಲ್ಲ. ಮತ್ತೆ ನೀನು ಯಾಕೆ ಮಾಡ್ಬೇಕು ? "

" ಅಲ್ಲೇ ಅಮಿರಾರ್‌ಗೂ ನನಗೂ ಇರೋ ವ್ಯತ್ಯಾಸ."

" ಏನೋಪ್ಪ ನಿನ್ಮಾತೇ ಅರ್ಥವಾಗೋದಿಲ್ಲ ನನಗೆ."

" ................ "

" ಊರಿಗೆ ಹೋಗಿ ಏನ್ಮಾಡ್ಬೇಕೂಂತ ಇದೀಯಾ ? "

"ಅಜ್ಜೀನ ನೋಡ್ಕೊಳ್ಳೋದು."

"ಅಪ್ಪರಿ, ಅದಾದ್ಮೇಲೆ? ಅಜ್ಜಿಗೆ ಗುಣವಾದ್ಮೇಲೆ?"

ಅದೊಂದು ಮುಖ್ಯ ಪ್ರಶ್ನೆ. ನಾನು ಮುಂದೇನು ಮಾಡಬೇಕು? ಮುಂದೇನಾಗಬೇಕು? ಜೀವನದಲ್ಲಿ ನಾನು ಸಾಧಿಸಬೇಕಾದ್ದೇನಾದರೂ ಉಂಟೆ? ಏನಾದರೂ ಉಂಟೆ?

ನಾನು ಸುಮ್ಮನಿದ್ದೆ. ಅತ್ತಿಗೆ 'ಸ್ಟವ್' ಹಚ್ಚಿದಳು. ಅದರ ಸಪ್ಪಳ ಹಿತಕರವಾಗಿ ಹೊರಡುತ್ತಿತ್ತು. ಆ ಏಕಪ್ರಕಾರದ ಸ್ವರವೆದುರು ನನ್ನ ವಿಚಾರತರಂಗಗಳು ದೂರ ಸರಿಯುತ್ತಿದ್ದುವು. ಇನ್ನು 'ಚಾ.' ಅತ್ತಿಗೆಯ ಕೈಯಿಂದ ರುಚಿರುಚಿಯಾದ ಇನ್ನೊಂದು ಕಪ್ಪು ಚಾ....

ಯಾರೋ ತಂತಿ ಕಳುಹಿಸಿದ್ದರು.

"ಅಜ್ಜಿಗೆ ಸಕತ್ ಕಾಹಿಲೆ. ಒಡನೆಯೆ ಹೊರಟು ಬಾ."

ಶೀಲ ಅದೇನೆಂದು ಕೇಳಿದಳು. ನಾನು ಉತ್ತರವೀಯಲಿಲ್ಲ. ಒಂದು ಕೈಚೀಲದೊಳಕ್ಕೆ ನನ್ನ ಸೂಟನ್ನು ತುರುಕಿದೆ. ಪಾಯಜಾಮೆ ಷರಟುಗಳ ಮೇಲೆ ಒಂದು ಸ್ವೆಟರ್ ತೊಟ್ಟುಕೊಂಡೆ. ಸ್ವೆಟರಿನ ಕೆಳಗೆ ಜೇಬಿನೊಳಗೆ ನೂರರಷ್ಟು ಹಣವಿತ್ತು.

ಅತ್ತಿಗೆ ನೋಡುತ್ತಲೇ ಇದ್ದಳು. ಅವಳ ರೋಗಿಯಾದ ತಂದೆಯೂ ನೋಡುತ್ತಲೇ ಇದ್ದ. ನಾನು ಮುಖದ ಭಾವನೆಗಳನ್ನು ಹತ್ತಿಕ್ಕಿಕೊಳ್ಳುತ್ತಾ ಬಾಗಿಲಿನಿಂದ ಹೊರಬಂದೆ.

"ಬರ್ತೀನಿ ಅತ್ತಿಗೆ ತಿರ್‍ಗಾ ಬರ್ತೀನಿ."

ಆದರೆ ನನ್ನ ಸ್ವರದಲ್ಲಿ ನನಗೇ ನಂಬಿಕೆ ಇರಲಿಲ್ಲ.

...... ಆ ಮೇಲೆ ಒಂದು ಘಂಟೆಯ ಹೊತ್ತಿನಲ್ಲಿ ರೈಲು ಹೊರಟಿತು. ಅಜ್ಜಿಯಿಂದ ತಂತಿ ಬಂದಿತ್ತಲ್ಲವೆ? ಹಾದಿಯಲ್ಲಿ ತೊಂದರೆಯಾಗಬಾರದೆಂದು ನಾನು ಟಿಕೇಟು ಪಡೆದುಕೊಂಡೇ ಹೊರಟೆ.

ಎಂಜಿನ್ ಬೊಂಬಾಯಿಗೆ ವಿದಾಯ ಹೇಳಿತು. ಕಿಟಕಿಯಿಂದ ಹೊರಕ್ಕೆ ನಾನು ಇಣಿಕಿನೋಡಿದೆ. ಗಾಡಿ ಚಲಿಸುತ್ತಿತ್ತು. ಅತ್ತ ಹೆಬ್ಬಾಗಿಲನ್ನು ದಾಟಿ ಯಾರೊ ಓಡಿ ಬರುತ್ತಿದ್ದರು. ವ್ಯಕ್ತಿ ಸಮೀಪಿಸಿ

ದಂತೆ ನನಗೆ ಸುಲಭವಾಗಿ ಗುರುತು ಸಿಕ್ಕಿತು. ಆದರೆ ತಡವಾಗಿತ್ತು. ....ಅಮೀರ್ ತಡವಾಗಿ ಬಂದಿದ್ದ.

ಆ ಕ್ಷಣದಲ್ಲೆ, ನಾನು ಗಟ್ಟಿಯಾಗಿ ಕೂಗಿದೆ.

"ಅಮೀರ್! ಅಮೀರ್!"

ಅವನಿಗೆ ಅದು ಕೇಳಿಸಿತು. ಆತ ಕೈ ಬೀಸಿದ ಅಷ್ಟೆ.

ಗಾಡಿ ದೂರ ಹೊರಟುಬಿಟ್ಟಿತ್ತು. ಗಾಡಿ ನಮ್ಮೂರಿನ ಹಾದಿ ಹಿಡಿದಿತ್ತು.

## . . . ಶುಕ್ರವಾರ

ಈತನಗಿನ್ನೂ ಎಳೆಯ ವಯಸ್ಸು. ಮೂವತ್ತೊ ಮೂವತ್ತೆರಡೊ. ಇಷ್ಟರಲ್ಲೇ ಈತ ಪ್ರಸಿದ್ಧನಾದ ಡಾಕ್ಟರ್. ಜೈಲಿನ ವೈದ್ಯಕೀಯ ಅಧಿಕಾರಿ. ಈತನ ಜೀವನದ ಇತಿಹಾಸವನ್ನು ನಾನು ಸ್ವಲ್ಪ ಮಟ್ಟಿಗೆ ಕೇಳಿ ತಿಳಿದಿದ್ದೇನೆ ಇವನು ಕಷ್ಟಪಟ್ಟೇ ಓದಿದನಂತೆ. ವಿದ್ಯಾರ್ಥಿ ವೇತನ, ಹೆಣ್ಣು ಕೊಡಲು ಬಂದ ಮಾವನಿಂದ ಮುಂಗಡ ಹಣ, ಅವರಿವರ ಸಹಾಯ........ಜೊತೆಯಲ್ಲಿ ಕಟ್ಟುನಿಟ್ಟಿನ ಜಿಪುಣ ಜೀವನ. ಆದರೆ ಯಾರನ್ನಾದರೂ ಚಕಿತಗೊಳಿಸುವಂತಹ ದೇಹ ಸೌಷ್ಟವವಿದೆ ಈತನಿಗೆ—ಸುಂದರ ಕಾಯ. ಆ ಕೆನ್ನೆಗಳು ಕೆಂಪಗಿವೆ—ಈಗ ತಾನೆ ಪ್ರೇಯಸಿ ಅವುಗಳ ನೆಮ್ಮದಿಗೆ ಭಂಗ ತಂದಹಾಗೆ. ನುಣುಪಾದ ತಲೆಗೂದಲು ಸುರುಳಿ ಸುರುಳಿಯಾಗಿ ಬಾಚಣಿಗೆಯ ಹತೋಟಿಗೆ ಸಿಗದೆ ಗಾಳಿಯಲ್ಲಿ ಓಲಾಡುತ್ತಿದೆ. ಮುಗುಳುನಗೆಯೊಂದು ಬೇಕೋ ಬೇಡವೋ ಎನ್ನುವಂತೆ ತುಟಿಗಳ ಮೇಲೆ ಮಿನುಗಿ ಮಾಯವಾಗುತ್ತಿದೆ. ಆತನ ಪೋಷಾಕು ಶುಭ್ರವಾಗಿ ಮೋಹಕವಾಗಿದೆ. ಸ್ಟೆತಸ್ಕೋಪನ್ನು ಒಂದು ಕೈಯಲ್ಲಿ ಹಿಡಿಯುತ್ತ ಎಡಬಲಕ್ಕೆ ನೋಡುತ್ತಾ ಆತ ಹೋಗುತ್ತಿದ್ದರೆ, ಮತ್ತೆ ಮತ್ತೆ ಅವನನ್ನೆ ನೋಡುವ ಹಾಗಿರುತ್ತದೆ. ಶ್ರೀಮಂತವರ್ಗಕ್ಕೆ ಮೀಸಲಾದ ಈ ಸೊಬಗು ಸಂಪತ್ತು, ಬಡ ಕುಟುಂಬದಲ್ಲಿ ಹುಟ್ಟಿ ಬಂದ ನಮ್ಮ ಡಾಕ್ಟರರ ಸೊತ್ತಾಗಿದೆ. ಬಡವರೆಲ್ಲಾ ಸಾಮಾನ್ಯವಾಗಿ ತಮ್ಮ ಆವರಣದ ಕೂಸುಗಳಾಗಿ ಬಾಗಿ ಬಾಗಿ ಬೆಳೆಯುತ್ತಾರೆ. ಆ ಆವರಣವನ್ನು ಮೀರಿ ತಲೆಯೆತ್ತಿ ಸೆಟೆದು ನಿಲ್ಲುವವರ ಸಂಖ್ಯೆ ಬಲು ಕಡಿಮೆ.

ಆ ಕಡಿಮೆ ಸಂಖ್ಯೆಯವರಲ್ಲಿ ಒಬ್ಬರು ಈ ಡಾಕ್ಟರು—ಖಾನಿದ್ದ

ಹಾಗೆ, ನನ್ನ ಹಾಗೆ.

ಪ್ರತಿ ದಿನವೂ ಬೆಳಿಗ್ಗೆ ಈತ ಸೆರೆಮನೆಯ ಒಳಗೆ ಒಂದು ಸುತ್ತು ಬರಬೇಕು. ಸಮಾಜದಿಂದ ಬಾಹಿರರಾದ, ಸಮಾಜ ರಕ್ಷಕರು ಗೊತ್ತು ಮಾಡಿದ ನೀತಿ ನಿಯಮುಗಳಿಗೆ ವ್ಯತಿರಿಕ್ತವಾಗಿ ನಡೆದ, ರೋಗಿಗಳನ್ನು ಆತ ಪರೀಕ್ಷಿಸಬೇಕು. ಆ ಮನಸ್ಸಿನ ಒಳಹೊಕ್ಕು ಆತನ ಮನೋ ವ್ಯಾಪಾರಗಳನ್ನು ತಿಳಿದುಕೊಳ್ಳಲು ನಾನು ಯತ್ನಿಸಿದ್ದುಂಟು. ಆತನ ಪಾಲಿಗೆ ಇವೆಲ್ಲವೂ ಸಾಮಾನ್ಯ ವಿಷಯಗಳಾಗಿದ್ದವು. ರೋಗಿಗಳು ಕೈದಿಗಳಾಗಿದ್ದರೇನು? ಸ್ವತಂತ್ರರಾಗಿದ್ದರೇನು ? ಅವನ ಪಾಲಿಗೆ ಎಲ್ಲರೂ ಒಂದೇ. ಇಲ್ಲಿಯೂ ಆತ ಗೆಳತನದಿಂದ ಸಿರಿವಂತಿಕೆಯಿಂದ ನಡೆನುಡಿಯಿಂದ ಪ್ರಭಾವಿತನಾಗುತ್ತಾನೆ. ಈತ ನನ್ನ ವಕೀಲರ ಸ್ನೇಹಿತ—ಸೆರೆ ಮನೆಯ ಅಧಿಕಾರಿ ಇರುವ ಹಾಗೆ. ಆ ಕಾರಣ ದಿಂದಲೇ ನನ್ನ ಬಗೆಗೆ ಇಲ್ಲದ ಆಸಕ್ತಿ ಅವನಿಗೆ.

"ಹಲೋ ಚಂದ್ರಶೇಖರ್—ಹೇಗಿದೀರಾ?"

"ಇದೀನಿ ಡಾಕ್ಟರೆ—ಹೀಗೇ ಇದೀನಿ. ನಿಮ್ಮ ಕೃಪೆ ಇರು ವಾಗ ಚಿಂತೆ ಯಾತರದು?"

"ಏನಂತಾ ಇದೆ ನಿಮ್ಮ ಕರುಳು?"

"ಓ ಬಿಡಿ, ಡಾಕ್ಟರೆ. ಕರುಳಿಗೇನು? ಅದರ ಗೋಳು ನನಗೆ ತೀರಾ ಸಾಮಾನ್ಯವಾಗಿದೆ."

"ಹಾಗನ್ಬಾರದು ಇವರೆ. ಒಂದು ಸಾರಿ ಸರಿಯಾಗಿ ಪರೀಕ್ಷೆ ಮಾಡೋಣ. ವೈದ್ಯವೃತ್ತಿಗೇ ಸವಾಲು ಹಾಕೊ ಕಾಹಿಲೆ ಅದೆಂ ಥದೋ ನೋಡೋಣ."

ಹಾಗೆ ಹೇಳುವಾಗ ಆತನ ಮುಖ ಗಂಭೀರವಾಯಿತು. ಸೋಲ ನ್ನೊಪ್ಪಿಕೊಳ್ಳಲು ಯಾವ ಡಾಕ್ಟರೂ ಇಷ್ಟಪಡುವುದಿಲ್ಲ.........

ಡಾಕ್ಟರು ಮುಂದೆ ಹೋದಮೇಲೆ ಮತ್ತೆ ಅದೇ ಮೌನ. ಯಾರ ತೊಂದರೆಯೂ ಇಲ್ಲದೆ ಬರೆಯುತ್ತ ಹೋಗುವ ಅವಕಾಶ.

ಈ ದಿನ ಶುಕ್ರವಾರ. ನನ್ನ ಜೀವನವೃತ್ತದ ದೀರ್ಘ ಪಯಣದಲ್ಲಿ ಬಾಲ್ಯದ ಹರದಾರಿಗಳನ್ನು ಹಾದು ಬಂದಿದ್ದೇನೆ.

ದೂರದ ಮುಂಬಯಿಯಿಂದ ಮತ್ತೆ ಊರಿಗೆ ಮರಳಿದ್ದೇನೆ.

ಈ ಡಾಕ್ಟರು—.

ಹದಿನೆಂಟು-ಹತ್ತೊಂಭತ್ತು ವರ್ಷಗಳ ಹಿಂದೆ ಪ್ರಾಯಶಃ ಈತ ಮಿಡಲ್ ಸ್ಕೂಲ್ ಪರೀಕ್ಷೆ ಮುಗಿಸುತ್ತಲಿದ್ದನೇಸೋ. ಆದರೆ ನಾನು ಜೇಬಿನಲ್ಲಿ ದುಡ್ಡಿಟ್ಟುಕೊಂಡು, ಕಣ್ಣುಗಳಲ್ಲಿ ಭಯ ಭೀತಿಯ ಗೊಂದಲ ತುಂಬಿಕೊಂಡು, ಒಬ್ಬ ಡಾಕ್ಟರಿಗಾಗಿ ಬೀದಿ ಬೀದಿ ಅಲೆಯುತ್ತಿದ್ದೆ.

ನಾನು ಊರಿಗೆ ಹಿಂತಿರುಗಿದಾಗ ಅಜ್ಜಿಯ ಜೀವ ಕೊನೆಯ ಹೋರಾಟ ನಡೆಸಿತ್ತು. ನಾನು ಊರು ಸೇರಿದ್ದು ಸಂಜೆ. ಬೀದಿ ಯುದ್ದಕ್ಕೂ ಧಾವಿಸಿ ಹೋಗಿ ಅಂಗಳಮೊಳಕ್ಕೆ ನಾನು ಕಾಲಿರಿಸಿದೆ. ಎದುರಿನ ಕೊಟ್ಟಿಗೆಯಿಂದ ಸೆಗಣಿ ಗಂಜಳದ ವಾಸನೆ ಬರುತಿತ್ತು. ನಮ್ಮಜ್ಜಿಯ ಎಮ್ಮೆ, ಕರು........ಒಳಗೆ ಚಿಮಿಣಿಯ ದೀಪವೊಂದು ಗಾಳಿಯಲ್ಲಿ ತೂರಾಡುತಿತ್ತು. ಅಲ್ಲಿಯೇ ಚಾಪೆಯ ಮೇಲೆ ಮಲಗಿತ್ತು ಆ ಜೀವ. ಕ್ಷೀಣವಾಗಿದ್ದ ದೇಹ, ಬೆಳ್ಳಿ ಕೂದಲಿಂದ ಮುಚ್ಚಿಹೋಗಿದ್ದ ತಲೆ, ಗುಳಿ ಬಿದ್ದಿದ್ದ ಕಣ್ಣುಗಳು, ಎದ್ದು ನಿಂತು ಅಣಕಿಸುತ್ತಿದ್ದ ಕಪೋಲದ ಎಲುಬುಗಳು—ಜೊತೆಯಲ್ಲೆ ರೋಗಿಯ ದೇಹದಿಂದ ಸಾಮಾನ್ಯವಾಗಿ ಹೊರಡುವ ದುರ್ಗಂಧ........ನನ್ನಜ್ಜಿ........

"ಅಜ್ಜೀ ಅಜ್ಜೀ........"

"... ..."

"ಅಜ್ಜೀ ಅಜ್ಜೀ........"

ಆಕೆ ಮೆಲ್ಲನೆ ಕಣ್ಣು ತೆರೆದರು. ಆ ಒಂದು ನಿಮಿಷ ನನ್ನ ಪಾಲಿಗೆ ಯುಗವಾಗಿತ್ತು. ನನ್ನ ಎಳೆಯ ಬಾಳನ್ನು ಹಸನಾಗಿ ಇರಿಸಿದ ಆತ್ಮೀಯ ಜೀವ ಹೀಗೆ ನರುಳುತ್ತಿದ್ದಾಗ ನಾನು ದೂರದ ಊರಿನಲ್ಲಿ ದಿನ ಕಳೆದಿದ್ದೆ. ನಾನು ಪಾಪಿ, ನಿಷ್ಠುರಣಿ. ಆ ವಿಷಯದಲ್ಲಿ ಸಂದೇಹವೇ ಇರಲಿಲ್ಲ.

"ಯಾರು ?"

ಆ ಸ್ವರ ಕ್ಷೀಣವಾಗಿತ್ತು.

"ನಾನಜ್ಜೀ, ನಾನು—ಚಂದ್ರು. ನಾನಜ್ಜೀ, ನಾನು."

ಹೇಳಿದ್ದನ್ನೆ ನಾನು ಪುನರುಚ್ಚರಿಸುತ್ತಿದ್ದೆ. ಆ ಜೀವ ನನ್ನನ್ನು ಗುರುತು ಹಿಡಿಯುವುದಲ್ಲವೆ? ತಪ್ಪುಗಳನ್ನು ಮರೆತು ಕ್ಷಮಿಸುವು ದಲ್ಲವೆ?

"ಯಾರು ಮಗು, ಯಾರಪ್ಪ?"

—ಮತ್ತೆ ಕ್ಷೀಣವಾದ ಸ್ವರ ತೊದಲಿತು. ಆ ದೃಷ್ಟಿಗಳು ಯೋಚನಾಮಗ್ನವಾಗಿದ್ದವು. ಸ್ವಲ್ಪ ಗಟ್ಟಿಯಾಗಿಯೆ, ದುಡುಕಿನ ಸ್ವರದಲ್ಲೆ, ಉತ್ತರವಿತ್ತೆ.

"ನಾನಜ್ಜೀ, ಚಂದ್ರು — ಚಂದ್ರಶೇಖರ. ಬೊಂಬಾಯಿಂದ ಬಂದಿದೀನಿ ಅಜ್ಜೀ."

ನನ್ನೆದೆ ಡವಡವನೆ ಹೊಡೆದುಕೊಳ್ಳುತಿತ್ತು. ಅಜ್ಜಿ ನನ್ನ ನ್ನೆಂದಿಗೂ ಗುರುತಿಸಲಾರರೆ ಹಾಗಾದರೆ? ನಾನು ತಡವಾಗಿ ಬಂದೆನೆ? ಬಂದುದು ತಡವಾಯಿತೆ?

"ಚಂದ್ರೂ ಚಂದ್ರೂ" ಎಂದು ಅವರ ನಾಲಿಗೆ ತೊದಲಿತು. ನಾನು ಕೈ ಚೀಲವನ್ನು ನೆಲದ ಮೇಲಿರಿಸಿ, ಅಜ್ಜಿಯ ಕೈಯ ಮೇಲೆ ಮುಖದ ಮೇಲೆ ತಲೆಯ ಮೇಲೆ ಕೈ ಓಡಿಸಿದೆ. ನನ್ನ ಅಜ್ಜಿ ಮತ್ತೆ ಹೆಸರು ಹಿಡಿದು ನನ್ನನ್ನು ಕರೆದಿದ್ದರು! ನನ್ನ ನೆನಪಿತ್ತು ಅವರಿಗೆ! ಮಾತು ಮೀರಿ ಪರದೇಶಿಯಾಗಿ ಹೋದ ನನ್ನ ನೆನಪಿತ್ತು!

ನಾನು ಬಂದುದರಿಂದ ಅವರಿಗಾದ ಸಂತೋಷ ಅಪರಿಮಿತ ವಾಗಿತ್ತು. ಆ ಅನುಭವವನ್ನು ದಾಟಿ ತಿರುಗಿ ಮಾತಾಡಲು ಬಲು ಹೊತ್ತು ಹಿಡಿಯಿತು. ಆ ಬತ್ತಿದ ಬಾವಿಯಂತಹ ಕಣ್ಣುಗಳಿಂದ ಕಂಬನಿಯ ಹರತೆಗಳು ಚಿಮ್ಮಿ ಬಂದುವು. ನನಗೆ ಕಸಿವಿಸಿಯಾಯಿತು. ಆಕೆಯ ಬಲಹೀನ ಬಲಗೈ ನನ್ನ ಮೈದಡವುತಿತ್ತು.

"ಬಂದಿಯಾ ಚಂದ್ರು? ಬಂದಿಯೇನೋ ಮರಿ?"

ಮರಿಯೇನೋ ಬಂದಿದ್ದ. ಆದರೆ — ಆದರೆ?

ಆಗಲೆ ಹೇಳಿದೆನಲ್ಲ? ನನಗೆ ಡಾಕ್ಟರರ ಅವಶ್ಯತೆ ಇತ್ತು. ನಾನು ಅಲ್ಲಿ ಇಲ್ಲಿ ಓಡಿದೆ. ಯಾರನ್ನೊ ಕರೆದುತಂದೆ. ಆದರೆ

ಆ ವರೆಗೆ ನನ್ನ ಅಜ್ಜಿಗೆ ಅಲ್ಪ ಸ್ವಲ್ಪ ಸಹಾಯ ಮಾಡುತ್ತಿದ್ದ ನೆರೆ ಮನೆಯವರು, ನನಗೆ ತಂತಿ ಕಳುಹಿದ್ದವರು, ನನ್ನ ಓಡಾಟವನ್ನು ತಿರಸ್ಕಾರದಿಂದ ನೋಡಿದರು. ಅನ್ಯ ಜಾತಿಯ ಪೋಲಿ ಹುಡುಗನೊಬ್ಬ ಮರಣೋನ್ಮುಖಳಾದ ವೃದ್ಧ ಸ್ತ್ರೀಯೊಬ್ಬಳ ಶುಶ್ರೂಷೆ ಮಾಡುವುದೆಂದರೇನು? ಅದರ ಅರ್ಥವೇನು?

ಅರ್ಥವಿತ್ತು ಅದಕ್ಕೆ. ಅಜ್ಜಿಯ ಆಸ್ತಿಯನ್ನು ಹೊತ್ತು ಹಾಕಲು ನಾನು ಯತ್ನಿಸುತ್ತಿದ್ದೆನೆಂದು ಅವರು ಬಹಿರಂಗವಾಗಿಯೇ ಆರೋಪಿಸಿದರು.

ನಾನು ಬಂದ ಮೂರನೆಯ ದಿನ ಅಜ್ಜಿ ಎದ್ದು ಕುಳಿತುಕೊಳ್ಳಲು ಸಮರ್ಥರಾದರು. ತನ್ನನ್ನು ಅದೆ ಕ್ಷಣವೂ ಬಿಟ್ಟಿರಬಾರದೆಂದು ಆಜ್ಞೆ ಕೊಟ್ಟರು. ವಾಂತಿ ಭೇದಿ ನಿಂತು, ಜ್ವರ ಇಳಿಮುಖವಾಗಿತ್ತು. ಲೋಕವನ್ನು ನೋಡಿ ನಗುತಲಿತ್ತು ಮೂಳೆಯ ಹಂದರ........ಆ ನೆರೆಮನೆಯವರು ದೂರವೇ ನಿಂತರು. ತಮ್ಮ ಆಚಾರ ನೀತಿಗಳಿಗೆ ನನ್ನಿಂದ ಆತಂಕವಾಗಬಾರದೆಂದು ದೂರವೇ ನಿಂತರು.

ಆಕೆಯನ್ನು ಬಿಟ್ಟುಹೋಗಿ ನಾನು ಮಾಡಿದ ಅಪರಾಧಕ್ಕೆಲ್ಲಾ ಪ್ರಾಯಶ್ಚಿತ್ತ ಎನ್ನುವಂತೆ, ಹಗಲೂ ರಾತ್ರಿ ನಿಷ್ಠೆಯಿಂದ ಆ ಮುದುಕಿಯ ಸೇವೆ ಮಾಡಿದೆ.

ಆದರೆ ಕಾಹಿಲೆ ಮರಳಿ ಬಂತು.

ನಾನು ದಿಗ್ಮೂಢನಾದೆ. ಈ ರೋಗದಿಂದ ಅಜ್ಜಿಗೆ ಬಿಡುಗಡೆಯೇ ಇಲ್ಲವೆ ಹಾಗಾದರೆ?

ನಾನು ನಮ್ಮ ಬೀದಿಯ ದೊಡ್ಡ ಡಾಕ್ಟರಲ್ಲಿಗೆ ಧಾವಿಸಿದೆ.

ಬಂದಿದ್ದ ರೋಗಿಗಳೆಲ್ಲಾ ಹಿಂತಿರುಗಿದ ಮೇಲೆ ಅವರು ನನ್ನನ್ನು ಮಾತನಾಡಿಸಿದರು.

"ಏನಪ್ಪ, ಏನು ವಿಶೇಷ?"

"ನಮ್ಮಜ್ಜಿಗೆ ಸಾರ್, ನಮ್ಮಜ್ಜಿಗೆ ಕಾಹಿಲೆ ಸಾರ್."

"ಏನು ಕಾಹಿಲೆಯೋ?"

"ವಾಂತಿ ಭೇದಿ ಸಾರ್. ನಿಂತಿತ್ತು, ಆದರೆ ತಿರ್ಗಾ ಹತ್ಕೊಂಡು

ಬಿಟ್ಟಿದೆ.''

"ಶೀಷೆ ತಂದಿದಿಯೇನು ?"

ನಾನು ಶೀಷೆ ತಂದಿರಲಿಲ್ಲ. ಆ ಹೆಸರಾಂತ ಡಾಕ್ಟರನ್ನು ನಮ್ಮ ಮನೆಗೆ ಕರೆದೊಯ್ಯುವುದು ನನ್ನ ಉದ್ದೇಶವಾಗಿತ್ತು.

"ನೀವು ಒಂದುಸಾರಿ ಬಂದು ಅಜ್ಜಿನ ನೋಡ್ಬೇಕು ಡಾಕ್ಟರೆ."

ಅವರು ನನ್ನನ್ನೆ ದಿಟ್ಟಿಸಿ ನೋಡಿದರು.

"ವಿಸಿಟಿಂಗ್ ಫೀಸ್ ಕೊಡ್ತಿಯೇನು ?"

"ಎಷ್ಟು ಸಾರ್ ?"

"ಐದು ರೂಪಾಯಿ.''

ನನ್ನಲ್ಲಿ ಹಣವಿತ್ತು. ನಾನು ಮುಂಗಡವಾಗಿಯೇ ಅವರ ಫೀಸ್ ಕೊಟ್ಟೆ.

"ಹೋಗು ಜಟಕ ಮಾಡ್ಕೊಂಡು ಬಾ.''

ಆಗಿನ ಕಾಲದಲ್ಲಿ ಡಾಕ್ಟರೆಲ್ಲಾ ಕಾರುಗಳನ್ನಿಡುವಷ್ಟು ರೋಗಗಳು ಪ್ರಬಲವಾಗಿರಲಿಲ್ಲ; ರೋಗಿಗಳು ಬಡಕಲಾಗಿರಲಿಲ್ಲ. ನಾನು ಜಟಕಾ ತಂದೆ. ಕತ್ತೆಯಂತಿದ್ದ ಆ ಕುದುರೆ ಡಾಕ್ಟರರ ಭಾರವನ್ನೂ ನನ್ನನ್ನೂ ಎಳೆದು ಮನೆಗೆ ಕೊಂಡೊಯ್ದಿತು.

ಡಾಕ್ಟರರ ಪರೀಕ್ಷೆ ಎರಡು ನಿಮಿಷವೂ ಇರಲಿಲ್ಲ. ಐದು ರೂಪಾಯಿ ವಿಸಿಟಿಂಗ್‌ಫೀಸ್‌ಕೊಟ್ಟ ಗಿರಾಕಿಯ ಮನೆಯಲ್ಲಿ ಕುಳಿತುಕೊಳ್ಳಲು ಒಂದು ಕುರ್ಚಿಯೂ ಇರಲಿಲ್ಲ. ನನ್ನಜ್ಜಿಯನ್ನು ಮುಟ್ಟಿದ ಮೇಲೆ ಕೈ ತೊಳೆಯಲು ಬಿಸಿ ನೀರಿರಲಿಲ್ಲ. ಹಚ್ಚಲು ಸೋಪಿರಲಿಲ್ಲ. ಕೈ ಒರೆಸಲು ಶುಭ್ರವಾದ ಬಟ್ಟೆಯಿರಲಿಲ್ಲ ಆದರೂ ಅವರು ಪರೀಕ್ಷೆ ಮುಗಿಸಿದರು. ಮನೆಯೊಳಗಿನ ದುರ್ಗಂಧದ ಒತ್ತಡಕ್ಕೆ ಸಿಲುಕಿ, ಅವರ ಮೂಗಿನ ಸೊಳ್ಳೆಗಳು ಚಡಪಡಿಸುತ್ತಿದ್ದವು.

"ನಾನು ಹೋಗಿರ್ತಿನಿ—ಶೀಷೆ ತಗೊಂಡು ಬಂದ್ಬಿಡು. ಔಷಧಿ ಕೊಡ್ತೀನಿ."

ವಾಪಸು ಹೋಗುವಾಗ ಗಾಡಿಯಲ್ಲಿ ನಾನಿರಲಿಲ್ಲ. ಕಡು ಬಡವನಂತಿದ್ದ ನಾನು ನಡೆದು ಬರುವುದು ಸಾಧ್ಯವಿತ್ತು.

ಆ ಔಷಧಿಯಿಂದಲೂ ಅಜ್ಜಿಗೆ ಗುಣವಾಗಲಿಲ್ಲ.

ಅದಾದ ಎರಡು ದಿನಗಳ ಮೇಲೆ ಅಜ್ಜಿ ನನ್ನನ್ನು ಸಮೀಪಕ್ಕೆ ಕರೆದು, ನನಗೊಂದು ಕೆಲಸ ವಹಿಸಿಕೊಟ್ಟರು.

“ಒಬ್ಬರು ವಕೀಲರನ್ನ ಕರಕೊಂಡು ಬಾ.”

“ವಕೀಲರು? ವಕೀಲರೆ-ಡಾಕ್ಟರೆ? ಯಾರಜ್ಜಿ?”

“ವಕೀಲರು ಕಣೋ. ಕರೆ ಕೋಟು ಹಾಕಿ ಪೇಟ ಇಟ್ಕೋತಾರಲ್ಲಾ. ಅಂಥವರು ಕಣೋ—ವಕೀಲರು.”

“ಅಂಥವರು ಯಾಕಜ್ಜೀ?”

“ನೀನು ಕರ್ಕೊಂಬಾ, ಹೇಳ್ತೀನಿ.”

ಆದರೆ ಆ ಕರಿಯ ಕೋಟಿನವರೂ ಫೀಸಿನ ಪ್ರಸ್ತಾಪಮಾಡಿದರು. ಅವರನ್ನೂ ಬಡಕಲು ಕುದುರೆಯೊಂದು ನಮ್ಮ ಮನೆಗೆ ಎಳೆದು ತಂದಿತು.

ಅಜ್ಜಿ ಆ ವಕೀಲರ ನೆರವಿನಿಂದ ತಮ್ಮ ಮರಣ ಶಾಸನ ಬರೆಸಿದರು. ತಮ್ಮ ಗಂಡನಿಂದ ತಮಗೆ ದೊರೆತಿದ್ದ ಆ ಮನೆ-ಅಂಗಳವೆಲ್ಲಾ, ನನಗೆ ಸೇರಿದುದೆಂದು ಅವರು ಬರೆಸಿದರು. ತಾನು ಕಾಹಿಲೆ ಬಿದ್ದಾಗ ತನ್ನನ್ನು ನೋಡಿಕೊಂಡ ನೆರೆಮನೆಯವರಿಗೆ ಉಳಿದಿದ್ದ ಒಂದೇ ಒಂದು ಎಮ್ಮೆಯನ್ನೂ ಅದರ ಕರುವನ್ನೂ ವಹಿಸಿಕೊಟ್ಟರು.

“ಚಂದ್ರೂ ಬರೋತನಕ ಕಷ್ಟಪಟ್ಟು ನನ್ನ ನೋಡ್ಕೊಂಡಿರಿ. ಅಷ್ಟೇ ಅಲ್ದೆ, ಆ ಪಾಪಿಗಳು ಯಾರೂ ಸಂಬಂಧಿಕರು ಅಂತ ಬಡಕೊಂಡು ಈವರೆಗೆ ಹತ್ತಿರ ಬರದಹಾಗೆ ಮಾಡಿದಿರಿ. ಆ ಋಣಾನೆಲ್ಲಾ ಸಂದಾಯ ಮಾಡೋದು ಸಾಧ್ಯವೇ ಇಲ್ಲ....ಆದರೂ ಈ ಎಮ್ಮೇನ ನೀವು ತಗೋಬೇಕು—ಖಂಡಿತಾ ತಗೋಬೇಕು.”

ಆ ವಕೀಲರು ಇಪ್ಪತ್ತೈದು ರೂಪಾಯಿ ಸಂಪಾದಿಸಿಕೊಂಡು ತಮ್ಮ ಮನೆಗೆ ಹೋದರು. ಎಮ್ಮೆ ಅಂದಿನಿಂದಲೇ ನೆರೆಮನೆ ಸೇರಿತು.

“ಯಾಕೆ ಹೀಗ್ಮಾಡ್ತಾ ಇದ್ದೀರಿ ಅಜ್ಜಿ? ನಿಮಗೆ ಗುಣವಾಗುತ್ತೆ. ನಾಳೆ ನಾಡಿದ್ದರಲ್ಲಿ ಗುಣವಾಗುತ್ತೆ.”

ನಾನೇನೋ ಸಮಾಧಾನದ ಮಾತುಗಳನ್ನಾಡುತ್ತಿದ್ದೆ. ಆದರೆ

ಆ ಮಾತುಗಳಲ್ಲಿ ತಿರುಳಿರಲಿಲ್ಲವೆನ್ನುವುದು ನನಗೆ ಗೊತ್ತಿತ್ತು. ನನ್ನ ಅಜ್ಜಿಯ ಕೊನೆಯ ಘಳಿಗೆ ಸಮಿಾಪಿಸುತ್ತಲಿತ್ತು. ಸಾವು ನನಗೆ ಅಪರಿಚಿತವಾಗಿರಲಿಲ್ಲ. ತಂದೆಯ ಸುತ್ತಲೂ ಬಲು ಸುಲಭವಾಗಿ ಅದು ಬಲೆ ಬೀಸಿ ಆತನ ಜೀವ ಹಿಂಡಿದ್ದನ್ನು ನಾನು ಕಂಡಿದ್ದೆ. ಈಗ ಇನ್ನೊಂದು ಜೀವ. ಇದಾದ ಮೇಲೆ ನನ್ನವರೆನ್ನುವ ಒಬ್ಬರೂ ಈ ಪ್ರಪಂಚದಲ್ಲಿ ಇಲ್ಲವೇ ಇಲ್ಲ. ಆಗ ನಾನು ಏಕಾಕಿ. ಈ ಪ್ರಪಂಚ ಒತ್ತಟ್ಟಿಗೆ—ನಾನು ಒತ್ತಟ್ಟಿಗೆ.

ಮರು ದಿನ ದೂರದ ಊರಿನಿಂದ ಇಬ್ಬರು ಬಂದರು. ಒಬ್ಬರ ಜುಟ್ಟು ಶಾಲುಗಳು ವಿಭೂತಿ ನಾಮಗಳು ಅವರ ಮಡಿವಂತಿಕೆಯನ್ನು ತೋರಿಸುತ್ತಿದ್ದವು. ಇನ್ನೊಬ್ಬ ಎಳೆಯ ಹುಡುಗ—ಆ ಮಡಿವಂತಿಕೆಯ ಮರಿ. ತಾವು ಅಜ್ಜಿಯ ಸಂಬಂಧಿಕರೆಂದು ಇವರು ಜಾಹೀರು ಮಾಡಿಕೊಂಡರು. ನನ್ನನ್ನು ಆ ವ್ಯಕ್ತಿ ಕೆಂಗಣ್ಣಿನಿಂದ ನೋಡಿದ. ನಶ್ಯ ತೀಡುತ್ತಾ ನೆರೆ ಮನೆಯವರ ಎದುರು ನನ್ನನ್ನು ಉದ್ದೇಶಿಸಿ, "ಯಾವುದು ಇದು — ಮುಂಡೇದು?" ಎಂದು ಕೇಳಿದ.

ಕಾಹಿಲೆಯಿಂದ ನರಳುತ್ತಿದ್ದ ಅಜ್ಜಿ ಅಲ್ಲದೆ ಇರುತ್ತಿದ್ದರೆ, ಈ ಮುಂಡೇದು ಯಾವುದೆಂಬುದನ್ನು ಆತನಿಗೆ ಬಲು ಸುಲಭವಾಗಿ ತೋರಿಸಿಕೊಡುತ್ತಿದ್ದೆ.

ಆದರೆ ಅಜ್ಜಿಯೇ ನನ್ನ ಪಾಲಿನ ಕೆಲಸ ಮಾಡಿದರು.

"ಶಂಕರಾ" ಎಂದು ಆಕೆ ಆ ಮನುಷ್ಯನನ್ನು ಕರೆದರು. ಆ ಶಂಕರ ಅವಳೆಡೆಗೆ ಬಂದು ಕುಳಿತ.

"ಇಲ್ನೋಡು, ಸಂಸಾರ ಸಂಬಂಧ ಅವರು ಹೋದ ದಿವಸವೇ ಹರಿದು ಹೋಯ್ತು. ಈಗ ಉಳಿದದ್ದೇನೂ ಇಲ್ಲ. ನೀವು ಬೇರೆ, ನಾನು ಬೇರೆ."

ಆ ಮನುಷ್ಯ ಅಷ್ಟು ಸುಲಭವಾಗಿ ಅಜ್ಜಿಯ ಮಾತಿಗೆ ತಲೆ ಬಾಗುವ ಹಾಗಿರಲಿಲ್ಲ.

"ಎಲ್ಲಾದರೂ ಉಂಟೆ? ಕಡೆ ಘಳಿಗೇಲಿ ನಾವಾಗದೆ ಇನ್ಯಾರು ಆಗ್ತಾರೆ? ಆ ಮುಂಡೇದರ ಕೈಲಿ ಕ್ರಿಯೆ ಮಾಡಿಸ್ಕೊಳ್ತಿ ಏನು?"

ಅಜ್ಜಿ ಕೆರಳಿದರು.

"ನೀನೇನಾದಾರೂ ಆ ಮಗೂಗೆ ಅಂದುಗಿಂದಿ ಅಂದರೆ ನಿನ್ನ ನಾಲಿಗೆ ಸೀದು ಹೋಗುತ್ತೆ. ಪಾಪಿ ಚಂಡಾಲ. ಅವರು ಬದುಕಿದ್ದಾಗ ನನ್ನನ್ನ ಪೀಡಿಸಿದ ಪಿಶಾಚಿ, ಈಗಲೂ ಬಂದಿಯಾ?"

ನಾನು ಧೈರ್ಯ ತಾಳಿ, "ನೀವು ಯಾರೇ ಇರಿ. ದಯವಿಟ್ಟು ಈಗ ಹೊರಟುಹೋಗಿ. ಅಜ್ಜಿಗೆ ತೊಂದರೆ ಆಗುತ್ತೆ. ದಯವಿಟ್ಟು ಹೊರಟುಹೋಗಿ," ಎಂದು ಗಟ್ಟಿಯಾಗಿ ಹೇಳಿದೆ.

ತಪೋಬಲ ಇರುತ್ತಿದ್ದರೆ ಅಲ್ಲೆ ನನ್ನನ್ನು ಅವರು ಸುಟ್ಟು ಬಿಡುತ್ತಿದ್ದರೇನೋ. ಆದರೆ ಆ ಕೆರಳಿದ ನೋಟಕ್ಕೆ ನಾನು ಮಿಸುಕಲಿಲ್ಲ.

ನೆರೆ ಮನೆಯವರು ಬಂದರು. ಮತ್ತೆ ಗದ್ದಲವಾಯಿತು. ಅಜ್ಜಿಯ ಅಪೇಕ್ಷೆಯಂತೆ ಎಮ್ಮೆಯ ದಾನ ಪಡೆದಿದ್ದ ಅವರು, ಅಜ್ಜಿಯ ಪಕ್ಷವನ್ನೆ ವಹಿಸಿದರು. ಬಂದಿದ್ದ ಶಂಕರ ಕೆರಳಿ ಕಿರಿಚಿಕೊಂಡ.

"ಪಾಪಿಗಳು. ಮುದುಕಿ ಸಾಯ್ತಾ ಇದ್ದರೆ, ಆಸ್ತಿ ಹೊತ್ತಾಕೋಕೆ ನೋಡ್ತಾ ಇದ್ದಾರೆ. ತೋರಿಸ್ತೀನಿ, ಕೋರ್ಟಿಗೆ ಎಳೀತೀನಿ. ಆಗ ಗೊತ್ತಾಗುತ್ತೆ. ನ್ಯಾಯ ಧರ್ಮ ಮಣ್ಣುಪಾಲಾಯಿತೇನು ಇಷ್ಟರಲ್ಲೆ?"

ಆತನಿಗೇನು ಬೇಕಾಗಿತ್ತು? ಆ ಮನೆಯೆ? ಅದಾಗಿದ್ದರೆ ಅದನ್ನು ಕೊಟ್ಟು ಬಿಡಬಹುದು. ಅಷ್ಟು ದೊರೆತರೆ ಆತ ಅಲ್ಲಿಂದ ತೊಲಗಲಾರನೆ? ಅಜ್ಜಿಯನ್ನು ನೆಮ್ಮದಿಯಲ್ಲಿ ಬಿಟ್ಟು ಹೋಗಲಾರನೆ?

ಆ ವ್ಯಕ್ತಿ ಅಜ್ಜಿಯ ಭಾವ ಮೈದುನನಾಗಿದ್ದ. ಆ ಹುಡುಗ ಆತನ ಕಿರಿಯ ಮಗ. ಆ ಮಗನೊಡನೆ, ಬಂದವನು ಹೊರಟು ಹೋದ. ನ್ಯಾಯಾಸ್ಥಾನದ ಕಟ್ಟೆಯೇರಲು ನಿರ್ಧರಿಸಿದ್ದ ಅವನು, ನಮ್ಮ ಮನೆಯ ಮೆಟ್ಟಿಲಿಳಿದು ಹೋಗಲು ತಡಮಾಡಲಿಲ್ಲ.

ಆ ಮೇಲೊಂದು ದಿನ, ಮಧ್ಯಾಹ್ನದ ಹೊತ್ತಿಗೆ ಅಜ್ಜಿಗೆ ಮಾತು ಕುಂಠಿತವಾಗ ತೊಡಗಿತು. ಆಕೆ ನನ್ನನ್ನು ಸಮೀಪಕ್ಕೆ ಕರೆದು ಕ್ಷೀಣ ಸ್ವರದಲ್ಲಿ ಹೇಳಿದರು.

"ಚಂದ್ರೂ........ಇನ್ನೇನು ಆಗ್ತಾ ಬಂತು........ಅಲ್ನೋಡ್ದಾ

........ಅಲ್ಲಿ, ಆ ನಿಚ್ಚಣಿಕೆ ಕೆಳಗೆ, ಆ ಮೂಲೇಲಿ........ ನೋಡ್ದೇನೋ ಸರಿಯಾಗಿ........ಆ ಮೂಲೇಲಿ ಮರಿ .......ಅಲ್ಲೆ ಕೆಳಕ್ಕೆ ನೆಲ್ದಲ್ಲೆ.... ಮುನ್ನೂರು........ಮುನ್ನೂರು ರೂಪಾಯಿ ಕಣೋ........"

ಒಮ್ಮೆಲೆ ಹೃದಯ ಕಿವುಚಿಬಂದ ಹಾಗಾಯಿತು ನನಗೆ. ಅದು ಅವರ ಮಹಾ ಆಸ್ತಿ. ಅದರಿಂದಾಗಿಯೇ ಅವರ ಕೊನೆಯ ದಿನಗಳ ನೆಮ್ಮದಿ ನಾಶವಾಯಿತು. ಬೇಸರದ ಧ್ವನಿಯಿಂದ, "ಇರಲಿ ಅಜ್ಜೀ. ಹಾಗಿರಲಿ....... ನೀವು ಮಲಕ್ಕೊಳ್ಳಿ ಅಜ್ಜೀ." ಎಂದೆ.

ಆಕೆ ಮಲಗಿಕೊಂಡರು. ಮುಚ್ಚಂಜೆಯ ಹೊತ್ತಿಗೆ ಅವರಿಗೆ ಎಚ್ಚರವಾಯ್ತು.

ಬಾಯಾರುತ್ತಿದೆ—ನೀರು—ಎಂದು ಸನ್ನೆ ಮಾಡಿದರು. ಸ್ವಲ್ಪ ನೀರನ್ನು ಆ ಗಂಟಲಲ್ಲಿ ನಾನು ಇಳಿಬಿಟ್ಟೆ. ಗೊರಕ್ ಗೊರಕ್ ಎಂದು ಸದ್ದಾಯಿತು. ಆ ನೀರು ನಡು ಹಾದಿಯಲ್ಲೇ ನಿಂತಿತ್ತು. ಅಜ್ಜಿ ಜೀವಂತರಾಗಿರಲಿಲ್ಲ. ಅಜ್ಜಿ—ಅಜ್ಜಿ—

........ನೆರೆ ಮನೆಯವರು ನೆರವಾದರು. ಅಜ್ಜಿಯ ಜಾತಿಯವರನ್ನೆ ಕರೆದುಕೊಂಡು ಬಂದೆ. ಆಕೆಯನ್ನು ಸುಡುಗಾಡಿಗೆ ಒಯ್ದು ಸುಟ್ಟರು. ಆ ದೇಹ ಸುಡುತ್ತಿತ್ತೆಂದು ಖಚಿತವಾದ ಮೇಲೆ ಅವರೆಲ್ಲಾ ಹಿಂತಿರುಗಿದರು. ನಾನು ಅಲ್ಲೆ ನಿಂತೆ. ಛಟಲ್ ಛಟಲ್ ಎಂದು ಬೆಂಕಿಯೊಳಗಿಂದ ಸದ್ದಾಗುತ್ತಿತ್ತು.

ನಾನು ದೀರ್ಘಕಾಲ ಸ್ಮಶಾನ ಭೂಮಿಯಲ್ಲೆ ಕುಳಿತೆ. ನಾನು ಅಳಲಿಲ್ಲ. ಅಳಬೇಕೆಂದು ನನಗೆ ತೋಚಲಿಲ್ಲ.

ಮತ್ತೆ ದಿನಗಳು ಉರುಳಿದವು. ದಿನಗಳೊಡನೆ ನೆನಪುಗಳೂ ಕೂಡ. ಆ ಮನೆ ಭಣಗುಡುತಿತ್ತು. ಕೈಯಲ್ಲಿದ್ದ ಬೊಂಬಾಯಿ ಹಣವೆಲ್ಲಾ ಖರ್ಚಾಗುವತನಕ ಅಲ್ಲಿ ಇಲ್ಲಿ ಏನನ್ನೋ ತಿಂದು ಕುಡಿದು ದೇಹದ ಬೇಡಿಕೆಗಳನ್ನು ಪೂರೈಸುತ್ತಿದ್ದೆ.

ಭವಿಷ್ಯತ್ತಿನ ಪ್ರಶ್ನೆ ನನ್ನನ್ನು ಕಾಡುತ್ತಿತ್ತು.

ಪೇಪರು ಮಾರುತ್ತಿದ್ದ ಶೇಷಗಿರಿ ಈಗ ಪತ್ರಿಕೆ ಪುಸ್ತಕಗಳ ಪುಟ್ಟ

ಅಂಗಡಿ ಇಟ್ಟಿದ್ದ. ಹಾದಿಯಲ್ಲೊಂದು ದಿನ ನನ್ನನ್ನು ತಡೆದು ನಿಲ್ಲಿಸಿ ಸುಖದುಃಖ ವಿಚಾರಿಸಿದ. ಅವನ ಜಗತ್ತು ಬಲು ಚಿಕ್ಕದಾಗಿ ನನಗೆ ತೋರಿತು. ನನ್ನ ಮತ್ತು ಅವನ ನಡುವೆ ಅಳೆಯಲಾಗದ ಅಂತರ ವಿತ್ತು. ಅವನು ನನ್ನ ಮುಂದಿನ ಉದ್ಯೋಗದ ಪ್ರಶ್ನೆ ಎತ್ತಿದ. ನಾನು ಉತ್ತರವೀಯಲಿಲ್ಲ. ಊರಿನ ಹೊರಗೆ ನಾನು ಕಲಿತ ಪಾಠಗಳ, ಪಡೆದ ಅನುಭವಗಳ, ವರದಿಯನ್ನು ಅವನಿಗೆ ಒಪ್ಪಿಸಲಿಲ್ಲ. ನನಗರಿಯದೆಯೇ ನಾನು ರಹಸ್ಯ ಜೀವಿಯಾಗಿ ರೂಪುಗೊಂಡಿದ್ದೆ. ಎಷ್ಟೋ ವಿಷಯಗಳು ನನ್ನಲ್ಲಿ ರಕ್ತಗತವಾಗಿದ್ದುವು. ಹೊರಗೆ ಇನ್ನೊಬ್ಬರಿಗೆ ಅವುಗಳನ್ನು ತಿಳಿಯ ಹೇಳುವುದು ಸಾಧ್ಯವೇ ಇರಲಿಲ್ಲ.

ಕೈ ಖಾಲಿಯಾಗಿದ್ದಾಗ, ಅಜ್ಜಿ ತೋರಿಸಿದ್ದ ನೆಲದ ಮೂಲೆಯನ್ನು ಕೆದಕಿದೆ. ವಿಕ್ಟೋರಿಯಾ ರಾಣಿಯ ಬೊಂಬೆ ಇದ್ದ ಮುನ್ನೂರು ರೂಪಾಯಿ ನಾಣ್ಯಗಳು ಅಲ್ಲಿದ್ದುವು. ನಾನು ಅವುಗಳನ್ನು ವಶಪಡಿಸಿಕೊಂಡೆ. ಅಜ್ಜಿಯ ದೃಷ್ಟಿಯಲ್ಲಿ ಅದು ದೊಡ್ಡ ಆಸ್ತಿಯಾಗಿತ್ತು. ಆದರೆ ನನಗೆ ಹಣದ ಬಗ್ಗೆ ಗೌರವವಿರಲಿಲ್ಲ. ಅದು ಯಾರದು ಏನು ಎಂಬುದು ನನಗೆ ಮುಖ್ಯವಾಗಿರಲಿಲ್ಲ. ಮಾನವನ ಆವಶ್ಯತೆಗಳನ್ನು ಪೂರೈಸಬೇಕಾದರೆ ಹಣ ಬೇಕು—ಅಷ್ಟನ್ನು ಮಾತ್ರ ನಾನು ತಿಳಿದಿದ್ದೆ.

ಅಜ್ಜಿಯ ಸಂಬಂಧಿಕರು ನ್ಯಾಯಾಸ್ಥಾನಕ್ಕೆ ಬರಲಿಲ್ಲ. ನೆರೆ ಮನೆಯವರಲ್ಲಿದ್ದ ಎಮ್ಮೆ, ಕಾಲಿಗೆ ಹುಳು ತಗಲಿ ಸತ್ತುಹೋಯಿತು. ಅದರ ಕರುವನ್ನವರು ಐದು ರೂಪಾಯಿಗೆ ಮಾರಿದರು.

"ಮನೇನ ಯಾತಕ್ಕೆ ಮಾರ್‍ಬಾರ್‍ದು?" ಎಂದು ಉಯಿಲು ಬರೆದಿದ್ದ ವಕೀಲರು ಒಂದು ದಿನ ಕೇಳಿದರು. "ಆ ಹಣದಿಂದ ಏನಾದರೂ ಅಂಗಡಿ ತೆರೆಯಬಹುದಲ್ಲಾ. ಮದುವೆ ಮಾಡ್ಕೊಂಡು ಹಾಯಾಗಿ ಇರ್‍ಬಹುದಲ್ಲಾ."

ನಾನು ನಕ್ಕು ಸುಮ್ಮನಾದೆ. ಆ ಮನೆಯನ್ನು ನಾನು ಮಾರಲಿಲ್ಲ. ಅಜ್ಜಿ ನನಗೆ ಕೊಟ್ಟುದನ್ನು ಹಾಗೆ ಬಿಟ್ಟು ಕೊಡಲು ನಾನು ಇಷ್ಟಪಡಲಿಲ್ಲ.

ಹೊರಗೆ ನಡೆದು ಆಯಾಸವಾದಾಗ ಮನೆಗೆ ಬಂದು ಮಲಗಿ ಕೊಳ್ಳುತ್ತಿದ್ದೆ. ಹದಿನಾಲ್ಕು ವರ್ಷಗಳಿಂದಲೂ ನಾನು ಕುಡಿದು ಬೆಳೆದಿದ್ದ ಬಾವಿ ನೀರು........ಅದರಿಂದ ನಾಲ್ಕು ಕೊಡ ಸೇದಿ ತಲೆಯ ಮೇಲೆ ಸುರಿದುಕೊಂಡರೆ, ಹಾಯೆನಿಸುತ್ತಿತ್ತು.

ಆಗಾಗ್ಗೆ ಅಮೀರನ ನೆನಪಾಗುತ್ತಿತ್ತು—ಶೀಲಳ ನೆನಪಾಗು ತ್ತಿತ್ತು. ಆದರೆ ಬೊಂಬಾಯಿಯ ಕರೆ ನನಗೆ ಕೇಳಿಸಲಿಲ್ಲ. ಕಟುಕ ನಾಗಿ ಬಾಳಲು ಆ ಮಹಾ ನಗರವೇ ಆಗಬೇಕೆ? ನಮ್ಮ ಊರು ಸಾಲದೆ? ನಮ್ಮ ಊರು—

........ಆ ದಿನಗಳನ್ನು ಈಗ ಸ್ಮರಿಸಿಕೊಂಡಾಗ ಸಂದೇಹದ ಅಲೆಗಳೇಳುತ್ತವೆ. ಒಂದು ವೇಳೆ ಹಾಗಾಗಿದ್ದರೆ? ಹೀಗಾಗಿದ್ದರೆ? ಆ ಅವಕಾಶದ ಬದಲು ಬೇರೊಂದು ಅವಕಾಶ ದೊರೆಯುತ್ತಿದ್ದರೆ? ಅಂಥ! ಕಟು ಅನುಭವದ ಬದಲು ಬೇರೇನೋ ಇರುತ್ತಿದ್ದರೆ?........ ಹೀಗೆ ಚಿಂತಿಸುವುದರಲ್ಲಿ ಅರ್ಥವೇನೂ ಇಲ್ಲ ಎಂಬುದನ್ನು ನಾನು ಬಲ್ಲೆ. ಆದರೂ ಮನಸ್ಸು ಅತ್ತ ಧಾವಿಸುತ್ತಿದೆ. ಗತಕಾಲದ ಬಗೆಗೆ ನನ್ನಲ್ಲಿರುವ ಕನಿಕರ ಕಳವಳವನ್ನೆಲ್ಲಾ ಒಂದೇ ಸಂಜ್ಞೆಯಿಂದ ತೊಡೆದು ಹಾಕುವುದು ಹೇಗೆ ಸಾಧ್ಯ?

ನಾನು ಊರು ಬಿಟ್ಟು ಮತ್ತೊಮ್ಮೆ ಪರದೇಶಿಯಾಗಲಿಲ್ಲ. ತಂದೆಯ ಸಾವಿಗೆ ಮೊದಲು ನನಗಿದ್ದ ಉದ್ಯೋಗದ ಎಳೆಯನ್ನು ಮತ್ತೆ ಎತ್ತಿಕೊಂಡು ಜೀವನದ ಬುಗರಿಯನ್ನಾಡುವುದು ಅಷ್ಟು ಸುಲಭವಾಗಿರಲಿಲ್ಲ. ಬೊಂಬಾಯಿಯ ಅನುಭವಗಳು ನನ್ನ ಬಾಳಿನಲ್ಲಿ ಹಾಸುಹೊಕ್ಕಾಗಿದ್ದುವು.

ಆದರೂ ನಾನು ಸಮಾಜದ ದೃಷ್ಟಿಯಲ್ಲಿ ಸಂಭಾವಿತನಾಗಿ ಇರುವುದಕ್ಕೋಸ್ಕರ ಉದ್ಯೋಗ ಹುಡುಕಿದೆ.

ಅಮೀರನ ಸ್ವರ ನನ್ನನ್ನು ಅಣಕಿಸುತ್ತಿತು :

"ಒಬ್ಬರನ್ನೊಬ್ಬರು ಸುಲಿದು ತಿನ್ನೋದೇ ಈ ಪ್ರಪಂಚದ ಸೂತ್ರ ಶೇಖರ್."

ತಂದೆಯ ಸ್ವರ ಮೈದಡವುವ ಹಾಗೆ ಕೇಳಿಬರುತ್ತಿತ್ತು:

"ನೀನು ದೊಡ್ಡಮನುಷ್ಯನಾಗ್ಬೇಕು ಚಂದ್ರೂ. ದೊಡ್ಡ ಮನುಷ್ಯ ನಾಗಬೇಕಪ್ಪ."

ತಂದೆಯ ಬಯಕೆಯನ್ನು ನಾನು ಈಡೇರಿಸುವುದು ಎಂದಿಗೂ ಸಾಧ್ಯವಿರಲಿಲ್ಲ. ಆತನ ಕಲ್ಪನೆಯ ದೊಡ್ಡಮನುಷ್ಯನಾಗುವುದು ಎಂದಿಗೂ ಸಾಧ್ಯವಿರಲಿಲ್ಲ. ಇಪ್ಪತ್ತು ವರ್ಷಗಳ ಅವಧಿಯ ಜೀವನ ವನ್ನು ನಾನು ಕಂಡಿದ್ದೆ. ಅದು ಮಧುರವಾಗಿರಲಿಲ್ಲ, ಕಹಿಯಾಗಿತ್ತು. ಶಾಲೆಗೆ ಹೋಗದೆ ಇದ್ದರೂ ಜ್ಞಾನಿಯಾಗಿದ್ದ ಅಮೀರನ ಮಾತುಗ ಳಲ್ಲಿ ಸತ್ಯಾಂಶ ಒಡೆದು ತೋರುತ್ತಿತ್ತು: ಈ ಸಮಾಜ....ಒಬ್ಬರನ್ನೊ ಬ್ಬರು ಸುಲಿಯುವ ಸೂತ್ರ........

ಹೀಗಿದ್ದರೂ ನಾನು, ಸುಲಿಗೆಯ ಒಂದು ಯಂತ್ರಕ್ಕೆ ಸಣ್ಣಕೀಲಿ ಯಾಗಿ ಬದುಕಲು ಯತ್ನಿಸಿದೆ. ಆ ಯತ್ನಕ್ಕಾಗಿ ನಾನು ಜವಾಬ್ದಾರ ನಾದ ಯುವಕನಾಗಬೇಕಿತ್ತು. ಮುಖದ ಮೇಲಿನ ಮಗುತನದ ಬದಲು, ಎಲ್ಲರನ್ನೂ ದಿಟ್ಟತನದಿಂದ ನೋಡುವ ನೋಟ ಬೇಕಿತ್ತು. ಅಂಥಾ ನೋಟ ನನ್ನಲ್ಲಿದ್ದರೂ ಮುಖದ ಮುಗ್ಧತೆ ಮಾಯವಾಗಿರಲಿಲ್ಲ. ಕನ್ನಡಿಯಲ್ಲಿ, ಮುಖ ಸುಂದರವಾಗಿ ಕಾಣುತ್ತಿತ್ತು. ತೆಳ್ಳನೆಯ ಬಾಲಮೀಸೆಯೊಂದು ಅಲಂಕಾರವಾಗಿತ್ತು. ಗಲ್ಲದ ಕೆಳಗೆ ಮೂರು ನಾಲ್ಕು ಕೂದಲುಗಳು ವಿನಯದಿಂದ ನೀಳವಾಗಿ ಬೆಳೆಯುತ್ತಿದ್ದವು. ನಾನು ಪೇಟೆಗೆ ಹೋಗಿ ಆರಾಣೆ ಕೊಟ್ಟು, ಒಂದು ಷೇವಿಂಗ್ ಸೆಟ್ಟು ತಂದೆ. ತಂದ ಮರುದಿನ ಬಲು ಶ್ರಮಪಟ್ಟು ಮುಖಕ್ಷೌರಮಾಡಿ ಕೊಂಡೆ. ಗಲ್ಲದಲ್ಲಿ ಎರಡು ಪುಟ್ಟ ಗಾಯಗಳಾಗಿ ರಕ್ತ ಸೋರಿತು. ಮುಖವೆಲ್ಲಾ ಉರಿಯಿತು. ತಣ್ಣೀರಿನಲ್ಲಿ ಚೆನ್ನಾಗಿ ನೀರು ಹನಿಸಿ ಮುಖ ಒರೆಸಿದೆ. ನನ್ನನ್ನು ಕಂಡು ನನಗೇ ತಮಾಷೆ ಎನ್ನಿಸಿತು. ವಯಸ್ಸಿನ ಮಾರ್ಪಾಟನ್ನು ತಂದುಕೊಟ್ಟಿತ್ತು ಆ ಮುಖ ಕ್ಷೌರ.

ಉಣ್ಣೆಯ ಸೂಟು ತೊಟ್ಟು, ನಾನು ಕೆಲಸದ ಬೇಟೆಗೆ ಹೊರಟೆ. ನಾನು ವಿದ್ಯಾವಂತನಾಗಿದ್ದೆ—ಗುಮಾಸ್ತನಾಗಲು ಸಾಕಷ್ಟು ಸಾಮರ್ಥ್ಯವಿದ್ದ ವಿದ್ಯಾವಂತ.

ಆ ಮಿಲ್ಲಿನ ಮ್ಯಾನೇಜರರ ಮನೆಯ ಮುಂದೆ ಸುಳಿದುದಾಯಿತು. ಆದರೆ ನಾನು ಹೋದ ಘಳಿಗೆ ಸರಿಯಾಗಿರಲಿಲ್ಲ. ಭಾನುವಾರವಾಗಿತ್ತೇನೋ ನಿಜ. ಆದರೆ, ಅದು ಅವರು ನಿದ್ದೆಮಾಡುತ್ತಿದ್ದ ಘಳಿಗೆಯಾಗಿತ್ತು. ಎದ್ದವರು ಕೆಂಗಣ್ಣುಗಳಿಂದಲೇ ನನ್ನನ್ನು ನೋಡಿದರು. ಲೋಕವನ್ನೆ ತೂಗಿ ಅಳೆಯುವ ಸಾಮರ್ಥ್ಯವಿತ್ತೇನೋ ಆ ದೃಷ್ಟಿಗೆ. ನನ್ನದು ಖೋಟಾ ದೌಲತ್ತೆಂದು ಅವರು ಸುಲಭವಾಗಿ ಕಂಡು ಹಿಡಿದಿರಬೇಕು.

"ಏನು ನೀವು ಗ್ರ್ಯಾಜುಯೇಟೇ ?"

"ಇಲ್ಲ ಸಾರ್, ವಿದ್ಯಾಭ್ಯಾಸ ಪೂರ್ತಿ ಮಾಡ್ಲಿಲ್ಲ."

ಇಂಗ್ಲಿಷಿನಲ್ಲೆ ಮಾತುಕತೆಯಾಗುತ್ತಿತ್ತು.

"ಯಾವುದಾದರೂ ಸ್ಪೆಷಲೈಸ್ ಮಾಡ್ಕೊಂಡಿದಿರಾ ?"

ನಾನು ಉತ್ತರವೀಯಲಿಲ್ಲ. ಒಂದು ವಿಷಯದಲ್ಲಿ ನಾನು ಸ್ಪೆಷಲೈಸ್ ಮಾಡಿಕೊಂಡಿದ್ದೆ—ಪರಿಣತನಾಗಿದ್ದೆ. ಆದರೆ ಅದನ್ನು ಆ ಮಹಾನುಭಾವರಿಗೆ ತಿಳಿಸುವುದು ಸಾಧ್ಯವಿತ್ತೆ ?

"ಸರಿ, ಮಿಲ್ಲಿಗೆ ಬರುವುದು ಬಿಟ್ಟೆಟ್ಟು ನಮ್ಮನೇಗೆ ಯಾಕ್ ಬಂದಿರಿ ?"

"................"

"ಏನಾದರೂ ತಂದಿದೀರೇನು ?"

ನನಗೆ ಮೊದಲು ಅರ್ಥವಾಗಲಿಲ್ಲ. ಅವರೇನು ಕೇಳುತ್ತಿದ್ದರು ? ಪ್ರಮಾಣ ಪತ್ರವನ್ನೆ ? ಪರಿಚಯದ ಕಾಗದವನ್ನೆ ? ಅಥವಾ, ಅಥವಾ........

ಅವರು ನನ್ನನ್ನೆ ನೋಡುತ್ತಿದ್ದರು. ಸ್ವಲ್ಪ ಸ್ವಲ್ಪವಾಗಿ ನನಗೆ ಅರ್ಥವಾಗುತ್ತಿತ್ತು. ನಾನು ಏನನ್ನೂ ತಂದಿರಲಿಲ್ಲ. ಅವರಿಗಾಗಿ ಯಾವ ಕಾಣಿಕೆಯನ್ನೂ ತಂದಿರಲಿಲ್ಲ.

"ಸರಿ, ಈಗ ಹೋಗು."

ನನ್ನ ಮುಖ ಕೆಂಪಗಾಯಿತು. ಬಹು ವಚನದ ಸಂಬೋಧನೆಯನ್ನು ಆತ ಏಕ ವಚನಕ್ಕೆ ಇಳಿಸಿದ್ದ. ನಾನು ಎದ್ದು ನಿಂತೆ.

"ಅರ್ಜಿ ಕೊಟ್ಟಿರು. ಉತ್ತರ ಬಂದರೆ ಮತ್ತೆ ಬಾ."

ಉತ್ತರ ಬರುವುದಕ್ಕೂ ಮತ್ತೆ ಹೋಗುವುದಕ್ಕೂ ಅವಕಾಶವೇ ದೊರೆಯಲಿಲ್ಲ. ನಾನು ಅರ್ಜಿ ಬರೆಯಲೇ ಇಲ್ಲ.

ಆ ಬಳಿಕ ನಾನು ಮಂಡಿಪೇಟೆಯಲ್ಲಿ ಸುತ್ತಾಡಿದೆ. ಪದ್ಮಾಸನ ಹಾಕಿ ಮಂಡದ ಮೇಲೆ ಕುಳಿತು, ಎಲೆಯಡಿಕೆ ಜಗಿದು ಉಗುಳುತ್ತಾ ದುಡ್ಡೆಣಿಸುತ್ತಿದ್ದ ವ್ಯಾಪಾರಿಗಳು, ನನ್ನ ಸೂಟನ್ನು ನೋಡಿ ನಕ್ಕರು. ನನ್ನನ್ನು ಮಾತನಾಡಿಸುವುದಕ್ಕೆ ಮುಂಚೆ, ಸ್ವರಕ್ಕೆ ಹಾದಿ ಮಾಡಿ ಕೊಡಲೆಂದು, ಅವರು ಎಂಜಲು ಉಗುಳುತ್ತಿದ್ದರು. ಕೆಲವರು ಪೀಕ ದಾನಿಯಲ್ಲಿ, ಕೆಲವರು ಹೊರಕ್ಕೆ ಬೀದಿಯಲ್ಲಿ. ಆ ಮೇಲೆ ಹೊರಡು ತ್ತಿದ್ದ ಮಾತುಗಳೆಲ್ಲ, ಏಕ ಪ್ರಕಾರವಾಗಿದ್ದವು. ನನ್ನನ್ನು ನೋಡಿ ದಾಗಲೆಲ್ಲಾ ಬೇಕುಬೇಕೆಂದೇ ಅವರು ಎಂಜಲು ಉಗುಳುತ್ತಿದ್ದರೆಂಬ ಭ್ರಮೆಯ ಆರೋಪವನ್ನೂ ಅವರ ಮೇಲೆ ನಾನು ಹೊರಿಸಿದೆ—ಮೌನ ವಾಗಿ ಮನಸ್ಸಿನಲ್ಲೇ ಹೊರಿಸಿದೆ.

ಬೇರೆ ಕೆಲಸಗಳಿದ್ದವು. ಆದರೆ ಅದಕ್ಕೆ ನಿರ್ದಿಷ್ಟ ವಿದ್ಯೆ ದೊರಕಿಸಿ ಕೊಂಡ ವ್ಯಕ್ತಿಗಳೇ ಬೇಕಾಗಿದ್ದರು. ಆ ನಿರ್ದಿಷ್ಟ ವಿದ್ಯೆಯ ಪ್ರಮಾಣ ಪತ್ರವನ್ನು ಅವರು ಕೇಳುತ್ತಿದ್ದರು. ನನ್ನಲ್ಲಿ ಯಾವ ಪ್ರಮಾಣ ಪತ್ರವೂ ಇರಲಿಲ್ಲ.

ಹೀಗೆ ಊರೆಲ್ಲಾ ಸುತ್ತಾಡಿ, ಒಮ್ಮೊಮ್ಮೆ ಅಜ್ಜಿಯ ಮನೆಗೆ ಹಿಂತಿರುಗುತ್ತಿದ್ದೆ. ಅಜ್ಜಿಯ ಪಾತ್ರೆ ಸರಂಜಾಮುಗಳು, ಡಬ್ಬ ತಪ್ಪಲೆ ಗಳು, ಮಡಿಕೆ ಕುಡಿಕೆಗಳು, ಇನ್ನೂ ಅಲ್ಲೆ ಇದ್ದುವು. ನನ್ನ ಹಾಗೆಯೇ ಅವು ಕೂಡ, ಆ ಮನೆಯ ಸದಸ್ಯರಾಗಿದ್ದುವು........

ಜೀವನದ ಪ್ರವಾಹದಲ್ಲಿ ಅನಿರೀಕ್ಷಿತವಾದ ಒರತೆಗಳಿರುತ್ತವೆ, ಸುಳಿಗಳಿರುತ್ತವೆ. ಇಂಥದು ಹೀಗೆಯೇ ಆಗುವುದೆಂದು ಹೇಳುವ ಸಾಮರ್ಥ್ಯ ಆಗ ನನಗಿರಲಿಲ್ಲ.

ಆ ಸಂಜೆ ಮತ್ತೊಮ್ಮೆ ಜೀವನದೊಂದು ಸುಳಿಯೊಳಕ್ಕೆ ಸಿಕ್ಕು ನಾನು ಎತ್ತಲೋ ಸಾಗಿಹೋದೆ.

ಕತ್ತಲಾಗುತ್ತ ಬಂದಿತ್ತು. ಆ ಅಗ್ರಹಾರದ ಬೀದಿಯಲ್ಲಿ ನಾನು ನಡೆದು ಬರುತ್ತಿದ್ದೆ ಒಂದೆಡೆ ನಾಲ್ಕಾರು ಜನ, ನೆಲದ ಮೇಲು ರುಳಿದ್ದ ಯುವತಿಯೊಬ್ಬಳನ್ನು, ಸುತ್ತುವರಿದಿದ್ದರು. ಎಲ್ಲರೂ ಮಾತ ನಾಡುವವರೇ, ಎಲ್ಲರೂ ಶಪಿಸುವವರೇ. ನಾನು ಆ ಗುಂಪನ್ನು ಸಮೀಪಿಸಿದೆ. ಒಂದು ಕ್ಷಣ ಕಿವಿಗೊಟ್ಟು ನಿಂತೆ. ಆದರೆ ಏನೂ ಅರ್ಥವಾಗಲಿಲ್ಲ. ನೆಲದ ಮೇಲೆ ಮುಖ ಮರೆಸಿ ಬಿದ್ದಿದ್ದ ಆ ಹೆಂಗಸು ನನ್ನ ವಯಸ್ಸಿನಾಕೆಯೇ ಇದ್ದಿರಬೇಕು. ಬಿಚ್ಚಿಹೋಗಿದ್ದ ತಲೆಗೂದಲು ಸುರುಳಿ ಸುರುಳಿಯಾಗಿ ಧೂಳರಾಶಿಯ ಮೇಲೆ ಬಿದ್ದಿತ್ತು. ಬಡತನದ ಸೀರೆ ರವಕೆ, ಮೈಮುಚ್ಚಲು ಯತ್ನಿಸುತ್ತಿದ್ದುವು........

"ಪಾಪಿ ರಂಡೆ........ಏನೂ ತಿಳೀದ ಮೊದ್ದಿನ ಹಾಗೆ ಬಿದ್ಕೊಂಡಿ ದಾಳೆ. ಎಷ್ಟು ಚೆನ್ನಾಗಿ ಮಾಡ್ತಾಳೆ ಪಾರ್ಟು! ನಾಟ್ಕದ್ಕಂಪನಿ ಸೇರ್ಕೊಳ್ಳೆ ಮಾರಾಯ್ತಿ. ನಮ್ಮನೇನ ಯಾತಕ್ಕೆ ಬೀದಿಗೆಳೀ ತೀಯ........"

ಹಾಗೆ ಶಪಿಸುತ್ತಿದ್ದವಳು ವಯಸ್ಸಾದ ಒಬ್ಬ ಸ್ತ್ರೀ. ಇನ್ನೊಬ್ಬ ಒಂದು ದೊಣ್ಣೆ ತಂದುಬ್ಬಿದಿದ್ದ ಹೆಣ್ಣಿಗೆ ಬಡೆಯತೊಡಗಿದ.

"ಹಾಗೆ, ಹಾಗೆ, ನೋವಾಗತ್ತೇನೊ ಪಾಪ."

ಅದನ್ನು ನೋಡುತ್ತ ಸುಮ್ಮನಿರುವುದು ನನ್ನಿಂದಾಗಲಿಲ್ಲ. ಮುಂದಕ್ಕೆ ಸಾಗಿ ಆ ದೊಣ್ಣೆಯನ್ನು ಕಸಿದುಕೊಂಡೆ. ಅದನ್ನು ಹಿಡಿದವ ನನ್ನು ಹಿಂದಕ್ಕೆ ತಳ್ಳಿದೆ. ಅಲ್ಲಿದ್ದವರೆಲ್ಲಾ ಕ್ಷಣಕಾಲ ಸತ್ತ ಶವ ಗಳಾದರು. ಮರುಕ್ಷಣವೇ ಅವುಗಳಿಗೆ ಜೀವ ಬಂತು.

"ಓ ಹೋ ಹೋ," ಎಂದು ಯಾರೋ ವ್ಯಂಗ್ಯವಾಗಿ ನಕ್ಕರು.

ನಾನು ಕಣ್ಣು ಕೆರಳಿಸಿ ಹಾಗೆ ನಕ್ಕವನನ್ನೆ ನೋಡಿದೆ.

"ಎಂಥ ಮನುಷ್ಯರೋ ನೀವು? ಏನಿದರರ್ಥ? ಹೀಗೆಯೋ ನೀವು ಹೆಂಗಸರನ್ನ ರಕ್ಷಣೆ ಮಾಡೋದು?"

ನಾನು ಏನನ್ನೊ ಮಾತನಾಡುತ್ತಿದ್ದೆ. ನೆಲದ ಮೇಲೆ ಬಿದ್ದಿದ್ದ ಆ ಹೆಂಗಸು ಮುಖವೆತ್ತಿ ನನ್ನನ್ನೆ ನೋಡಿದಳು. ಆ ನೋಟದಲ್ಲಿ ದೈನ್ಯತೆ ಇತ್ತು; ಸಹಾಯದ ಯಾಚನೆಯಿತ್ತು; ತಾನು ನಿರಾಪರಾಧಿ

ಎಂಬ ಘೋಷಣೆ ಇತ್ತು. ಆ ನೋಟ ನಾನು ಮಾಡಬೇಕಾದ ಕಾರ್ಯ ವೇನೆಂಬುದನ್ನು ತಿಳಿಯಹೇಳಿತು.

ಆ ಗುಂಪಿನವರಲ್ಲೊಬ್ಬ ನನ್ನ ಮೈ ಮೇಲೆ ಕೈ ಮಾಡಿದ. ಕೈ ಲಿದ್ದ ದೊಣ್ಣೆಯನ್ನು ಬೀಸಿದೆ. ಅವನು ಕುಂಟುತ್ತಾ ದೂರ ಹೋದ —ಕಾಲುಗಳೆಡೆಯಲ್ಲಿ ಬಾಲ ಮಡಚಿ ಹೋಗುವ ಪುಕ್ಕಲು ನಾಯಿಯು ಹಾಗೆ.

"ಯಾರು ಬರ್‍ತೀರ ಇನ್ನು? ಬನ್ನಿ........ಬಂದ್ಬಿಡಿ........"

ಯಾರೂ ಬರಲಿಲ್ಲ. ಅವರಲ್ಲಿ ವಯಸ್ಸಾದವನೊಬ್ಬ ತೀರ್ಪು ಕೊಡುವ ಧ್ವನಿಯಲ್ಲಿ ಹೇಳಿದ.

"ಅಂಥ ಸಾಹಸಿಯಾಗಿದ್ದರೆ ಕರ್‍ಕೊಂಡು ಹೋಗೋ ಅವಳ್ನ. ನೋಡ್ಕೋತೀವಿ........"

"ಏಳಮ್ಮ," ಎಂದೆ ನಾನು—ಆ ಹೆಂಗಸನ್ನು ಉದ್ದೇಶಿಸಿ.

ಆಕೆ ಪ್ರಯಾಸದಿಂದ ಎದ್ದಳು. ಆ ಜನ ಮತ್ತೆ ಕಿರಿಚಿಕೊಂಡರು. ಅವರ ನಡುವೆ ಇದ್ದ ವೃದ್ಧೆ, ಲೊಬೋ ಲೊಬೋ ಎಂದು ಬಾಯಿ ಬಡೆದುಕೊಂಡಳು.

ಏನಾಗುತ್ತಿದೆ ಎಂದು ನಾನು ಊಹಿಸುವುದೂ ಸಾಧ್ಯವಿಲ್ಲದ ಹಾಗೆ ಘಟನೆ ನಡೆದು ಹೋಗಿತ್ತು. ಅಷ್ಟು ಜನರ ಕೋಪಕ್ಕೆ ಗುರಿ ಯಾಗಿದ್ದ ಹೆಣ್ಣೊಂದು ನನ್ನನ್ನು ಹಿಂಬಾಲಿಸಿ ಬಂತು. ದೊಣ್ಣೆ ಹಿಡಿದು ನಾನದರ ರಕ್ಷಕನಾಗಿ ಮುಂದುವರಿದೆ. ಸ್ವಲ್ಪ ದೂರದ ತನಕ ಯಾರೋ ಒಬ್ಬಿಬ್ಬರು, ಉಗುಳುತ್ತ ಬಗುಳುತ್ತ ನಮ್ಮ ಹಿಂದೆಯೇ ಬಂದರು.

"ಪೋಲೀಸರನ್ನ ತರ್‍ತೀವಿ. ಕೋರ್ಟಿಗೆಳೀತೀವಿ ನಿನ್ನ. ಆಗ ಗೊತ್ತಾಗುತ್ತೆ."

ನನ್ನನ್ನು ಕುರಿತಾದ ಬೆದರಿಕೆ ಇದು. ಆ ಮಾನವ ಜಂತು ಗಳು ಬಲು ತುಚ್ಛವಾಗಿ ನನಗೆ ಕಂಡರು. ಒಂದು ಹೆಣ್ಣು ಜೀವ ವನ್ನು ಬೀದಿಗೆಸೆದು ಶೌರ್ಯ ಪ್ರದರ್ಶನ ಮಾಡುತ್ತಿದ್ದವರು, ತಾವೇ ಅನ್ಯಾಯಕ್ಕೆ ಗುರಿಯಾದವರ ಹಾಗೆ, ಪೋಲೀಸರ—ನ್ಯಾಯಾಸ್ಥಾನದ

ಮಾತನ್ನಾಡುತ್ತಿದ್ದರು !

ಆ ಹೆಂಗಸನ್ನು ಕರೆದುಕೊಂಡು ನಾನು ಅಜ್ಜಿಯ ಮನೆಗೆ ಬಂದೆ. ದೀಪ ಉರಿಸಿದೆ. ಅದರ ಎದುರು ಆಕೆ ತರಗೆಲೆಯ ಹಾಗೆ ನಡುಗುತ್ತಿದ್ದುದನ್ನು ಕಂಡೆ. ಹಲವು ಪ್ರಶ್ನೆಗಳನ್ನು ಮುಂದಿಟ್ಟು, ಆ ಕಣ್ಣುಗಳೆರಡೂ ನನ್ನನ್ನು ನೋಡುತ್ತಿದ್ದವು. ಆ ನೋಟದಲ್ಲಿ ಒಂದು ಬಗೆಯ ಶೂನ್ಯ ಸ್ವರೂಪವಿತ್ತು.

ಮತ್ತೆ ಆ ಮುಖವನ್ನು ನೋಡಿದೆ, ನೋಡಿ ತಲೆ ಬಾಗಿದೆ. ನನ್ನ ನೆಮ್ಮದಿಗೆ ಭಂಗ ಬಂದಿತ್ತು. ಆದರೂ ಸ್ವರವನ್ನು ಶಾಂತವಾಗಿಡಲು ಯತ್ನಿಸುತ್ತಾ ಹೇಳಿದೆ.

"ಅಮ್ಮಾ, ನೀನು ಹೆದರ್‍ಬೇಡ. ಅಗಣಿ ಹಾಕಿಕೊಂಡು ಈ ರಾತ್ರೆ ಇಲ್ಲೆ ಮಲಕ್ಕೊ. ನಾನು ಜಗಲಿ ಮೇಲಿರ್ತೀನಿ. ಇಲ್ಲಿಗೆ ಬರೋ ಧೈರ್ಯ ಯಾರಿಗೂ ಇಲ್ಲ. ನಾನು ನೋಡ್ಕೋತೀನಿ."

ಅವಳು ಮೂಕಿಯಾಗಿಯೇ ಇದ್ದಳು.

"ಯಾಕಮ್ಮಾ—ನನ್ ಮಾತ್ನಲ್ಲಿ ನಂಬಿಕೆ ಬರಲಿಲ್ವ? ನಾನಿನ್ನೂ ಹುಡುಗ. ನೋಡಿದರೆ ಗೊತ್ತಾಗಲ್ವೇನು?"

"ಇಲ್ಲಪ್ಪ, ನೀವು ಒಳ್ಳೆಯವರು. ನೀವಲ್ಲದೆ ಹೋಗಿದ್ದರೆ ಈ ದಿವ್ಸ ಅವರೆಲ್ಲಾ ಸೇರಿ ನನ್ನ ಗತಿ ಕಾಣಿಸ್ತಾ ಇದ್ದರು."

ಆ ಸ್ವರ ಕೋಮಲವಾಗಿತ್ತು. ನನ್ನ ತಾಯಿ ಚಿಕ್ಕಂದಿನಲ್ಲಿ ಹೀಗೆಯೇ ಮಾತನಾಡುತ್ತಿದ್ದಳೇನೋ? ಆ ಶೀಲ—ಆಕೆಯ ಸ್ವರ—

ನಾನು ಅಲ್ಲಿಂದ ಎದ್ದೆ ಹೊದ್ದುಕೊಳ್ಳಲು ಒಂದು ಚಾದರ ಎತ್ತಿಕೊಂಡು ಹೊರಕ್ಕೆ ನಡೆದೆ.

ಗಾಳಿ ಮೈ ಕೊರೆಯುವ ಹಾಗೆ ತಣ್ಣನೆ ಬೀಸುತ್ತಿತ್ತು. ಆದರೆ ಈ ಗಾಳಿಯನ್ನೆ ಕುಡಿದು ಬೆಳೆದವನು ನಾನು. ಬೇಸಗೆ ಇರಲಿ, ಚಳಿಗಾಲವಿರಲಿ, ಆ ಗಾಳಿ ನನಗೆ ಪ್ರಿಯವಾಗಿತ್ತು. ಹತ್ತಿ ಬಟ್ಟೆಯ ಆ ಚಾದರದಲ್ಲಿ ಒಂದೆರಡು ತೂತುಗಳಿದ್ದವು. ಕೋಟಿನ ಗುಂಡಿಗಳನ್ನು ಮತ್ತೊಮ್ಮೆ ಬಿಗಿಯಾಗಿ ಹಾಕಿ ನಾನು ನಿದ್ದೆಹೋದೆ.

ಅದು ನನ್ನದೊಂದು ಅಭ್ಯಾಸ. ಒಂದು ಕೆಲಸ ಪೂರೈಸಿದಾಗ,

ನನಗೆ ಸುಲಭವಾಗಿ ನಿದ್ದೆ ಬರುತ್ತಿತ್ತು. ಮುಂದಿನ ಕೆಲಸದ ಯೋಚನೆಯಿಂದ ನಾನು ನಿದ್ದೆಯ ಹೊತ್ತಿನಲ್ಲಿ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಯಾವ ಗಂಡಾಂತರವೇ ಕಾದು ನಿಂತಿರಲಿ, ತೋಳನ್ನು ಮಡಚಿ ದಿಂಬಾಗಿ ಮಾಡಿ, ಅದರ ಮೇಲೆ ತಲೆ ಇರಿಸಿದೊಡನೆ, ನನಗೆ ನಿದ್ದೆ ಬರುತ್ತಿತ್ತು. ಆದರೆ ಸಾಮಾನ್ಯವಾಗಿ ಸಣ್ಣ ಸಪ್ಪಳವಾದರೂ ಸಾಕು, ಒಮ್ಮೆಲೆ ಎಚ್ಚರವಾಗುತ್ತಿತ್ತು.

ಆ ರಾತ್ರೆ ಮಾತ್ರ ನನಗೆ ಎಚ್ಚರವಾಗಲಿಲ್ಲ. ಸಣ್ಣ ಸಪ್ಪಳವಾಗಿತ್ತು. ಆದರೆ ನನಗೆ ಎಚ್ಚರವಾಗಿರಲಿಲ್ಲ.

ಬೆಳಗು ಮುಂಜಾನೆ ದೂರದಲ್ಲಿ ಉದಿಸುತ್ತಿದ್ದ ಸೂರ್ಯನ ಮೊದಲ ಕಿರಣಗಳನ್ನು ಎದಿರ್ಗೊಳ್ಳಲು ನಾನು ಕಣ್ಣು ತೆರೆದೆ. ಹಿಂದಿನ ರಾತ್ರೆಯ ಘಟನೆಗಳು ನೆನಪಿಗೆ ಬಂದುವು. ದಿಗ್ಗನೆ ಎದ್ದು ಕುಳಿತು, ಮನೆಯ ಒಳ ಬಾಗಲಿನತ್ತ ದೃಷ್ಟಿ ಹಾಯಿಸಿದೆ. ಅದು ತೆರೆದಿತ್ತು. ಒಳಗೆ ಇಣಿಕಿ ನೋಡಿದೆ. ಆಕೆ ಹೊರಟುಹೋಗಿದ್ದಳು.

ಆಮೇಲೆ ಸ್ವಲ್ಪ ಹೊತ್ತಿನಲ್ಲೆ ಪೋಲೀಸರು ಬಂದರು. ಮನೆಯ ಕೊಠಡಿಗಳನ್ನೂ ಹಿತ್ತಿಲನ್ನೂ ಶೋಧಿಸಿದರು. ಒಳಗೆ ಪಾತ್ರೆಗಳನ್ನು ಚೆಂಡಾಡಿದರು. ಇಬ್ಬರು ನನ್ನ ಎಡ ಬಲಗಳನ್ನು ಹಿಡಿದು ನಿಲ್ಲಿಸಿ, "ಬೊಗಳು ಎಲ್ಲಿದಾಳೆ?" ಎಂದರು. ಅವರೊಡನೆ ಮಾತನಾಡುವುದು, ನನ್ನ ಗೌರವಕ್ಕೆ ಕುಂದು ಎಂಬುದನ್ನು ನಾನು ಚೆನ್ನಾಗಿ ತಿಳಿದು ಮೌನವಾಗಿದ್ದೆ. ನನ್ನನ್ನು ಆ ದಫೇದಾರ ದುರದುರನೆ ನೋಡಿದ. ನನ್ನ ಕೈಗಳಿಗೆ ಬೇಡಿತೊಡಿಸಲು ಆಜ್ಞೆಯನ್ನಿತ್ತ.

ಆ ಪೋಲೀಸರ ಹಿಂಬದಿಯಲ್ಲೆ ಒಂದು ಮುಖ ಕಾಣಿಸಿತು. ಯಾರಿರಬಹುದೆಂದು ಊಹಿಸುವುದು ಕಷ್ಟವಾಗಲಿಲ್ಲ. ಆ ಬಡ ಹೆಣ್ಣನ್ನು ಸಾಯಬಡೆಯಲು ಮುಂದೆ ಬಂದಿದ್ದ ಧೀರರಲ್ಲಿ ಆತನೊಬ್ಬ. ಒಬ್ಬ ಪೋಲೀಸನೊಡನೆ ಆತ ಒಂದೇ ಸಮನೆ ಪಿಸುಮಾತನಾಡುತ್ತಿದ್ದ. ಎಡಗೈಗೂ ಬಲಗೈಗೂ ಬೇರೆ ಬೇರೆಯಾಗಿ ಬೇಡಿಹಾಕಿ ಇಬ್ಬರು ಪ್ರತ್ಯ ಪ್ರತ್ಯೇಕವಾಗಿ ಅದನ್ನು ಹಿಡಿದಿದ್ದರು. ನನ್ನನ್ನು ಹೊರಕ್ಕೆ ಒಯ್ಯಲು ಆಜ್ಞೆಯಾಯಿತು.

ನಾನೆಂದೆ:

"ದಫೇದಾರ್, ಮನೆಗೆ ಬೀಗ ತಗಲಿಸ್ಬೇಕು. ಇಲ್ಲಿ ಕೋಟಿನ ಜೇಬ್ನಲ್ಲಿ ಬೀಗದ ಕೈ ಇದೆ."

"ಮುಚ್ಕೊ ಬಾಯಿ!" ಎಂದನೊಬ್ಬ ಪೋಲೀಸಿನಾತ. "ದಫೇದಾರ್ನ ಸಾಹೇಬರೆ-ಎಂತ ಕೂಗು."

"ದಫೇದಾರ್ ಸಾಹೇಬರೇ ದಯವಿಟ್ಟು ಮನೆಗೆ ಬೀಗ ತಗಲ್ಸೊ ಉಪಕಾರ ಮಾಡ್ತೀರ?" ಎಂದು ಅಣಕದ ಸ್ವರದಲ್ಲಿ ನುಡಿದೆ. ಆತ ಹರಿದು ತಿನ್ನಲು ಬಯಸುವವರ ಹಾಗೆ ನನ್ನನ್ನು ನೋಡಿದ.

ಮನೆಯ ಬಾಗಿಲುಗಳು ತೆರೆದೇ ಇದ್ದವು. ನನ್ನನ್ನು ಅಲ್ಲಿಂದ ಒಂದು ಮೈಲಿನಾಚೆಯಿದ್ದ ಸ್ಟೇಷನ್ನಿಗೆ ನಡೆಸಿಕೊಂಡು ಹೋದರು.

ಅದೇ ಸ್ಟೇಷನು. ಅದೇ ಲಾಕಪ್ಪು.

ಆಗ ಜೇಬುಗಳ್ಳನೆಂಬ ಆರೋಪದ ಮುದ್ರೆಯೊಡನೆ ಬಂದಿದ್ದೆ. ಈಗ—?

ಒಂಭತ್ತು ಗಂಟೆಗೆ ಸ್ಟೇಷನ್ನಿಗೆ ಬಂದ ಅಧಿಕಾರಿ, ಆಳಕ್ಕೆ ತಿವಿದು ನೋಡುವ ನೋಟದಿಂದ ನನ್ನನ್ನು ನೋಡಿದ. ಆತ ನನಗೆ ಅಪರಿಚಿತನಾಗಿರಲಿಲ್ಲ. ಅಷ್ಟು ಬೇಗನೆ ಅವನನ್ನು ನಾನು ಮರೆಯುವುದು ಸಾಧ್ಯವಿತ್ತೆ?

ಆತ ನನ್ನನ್ನು ನೋಡುತ್ತಾ ಇಂಗ್ಲಿಷಿನಲ್ಲಿ ಹೇಳಿದ.

"ಓ ನೀವೇನಾ! ಮಿಸ್ಟರ್ ಚಂದ್ರಶೇಖರ್. ಮನೆಯಲ್ಲಿ ಚಂದ್ರೂ. ಬೊಂಬಾಯಲ್ಲಿ? ಈಗ?"

ನಾನು ಕ್ಷಣ ಕಾಲ ಅವಕ್ಕಾದೆ. ಈತನಿಗೆ ಕುಲಗೋತ್ರಗಳಲ್ಲದೆ ಇತ್ತೀಚಿನ ಮಾಹಿತಿಯೂ ಹೇಗೆ ದೊರೆಯಿತು?

"ಯಾಕೆ ಆಶ್ಚರ್ಯವಾಯ್ತೇನು? ಪೋಲೀಸರ ಕೈ ಭಾರೀ ಉದ್ದ ಚಂದ್ರಶೇಖರ್........ನಿಮ್ಮ ಫೈಲು ಸಿದ್ಧವಾಗಿದೆ. ಇವತ್ತಿನದೊಂದು ವರದಿ ಸೇರಿಸಿ ಸಂಟ್ರಲ್ ಸ್ಟೇಷನಿಗೆ ರವಾನಿಸ್ತೇನೆ."

ನಾನು ಉತ್ತರವೀಯಲಿಲ್ಲ. ಲಾಕಪ್ಪಿನೊಳಗೆ ಮೌನವಾಗಿ ನಿಂತೆ. ಪೋಲೀಸರು, ತಮ್ಮ ಸಾಹೇಬರು ನನ್ನೊಡನೆ ಇಂಗ್ಲಿಷಿನಲ್ಲಿ

ಮಾತನಾಡಿದುದನ್ನು ಕಂಡ ಮೇಲೆ, ನನ್ನನ್ನು ಅವಮಾನಿಸಲಿಲ್ಲ. ಇನ್ನು ಮುಂದೆ ನಾನು ಗುಮಾನಿ ವ್ಯಕ್ತಿ. ಆದರೆ ಸಾಮಾನ್ಯ ಪೋಲೀಸರು ನನಗೆ ಗೌರವ ನೀಡುವರು. ಒಂದು ಕಟ್ಟು ಬೀಡಿಗಾಗಿ ನಾನು ಅವರಿಗೆ ಆರೆಂಟು ಕಾಸು ಕೊಟ್ಟರೂ ಕೊಡಬಹುದು. ಇನ್ನು ಮುಂದೆ ಹೊರಗಿಳಿದಾಗ ಬೀದಿಯಲ್ಲಿ ಅವರು ನನ್ನನ್ನು ಸೆಲ್ಯೂಟು ಹೊಡೆದು ಮಾತನಾಡಿಸುವರು. ಈ ರಾಜ್ಯರಚನೆಯಲ್ಲಿ ಅವರ ಶಾಖೆಗೂ ನನಗೂ ನೆಂಟಸ್ಥನವಿನ್ನು........

ಹೊತ್ತು ಕಳೆಯಿತು. ಅಧಿಕಾರಿ ನನಗಾಗಿ ಇಡ್ಲಿ ಕಾಫಿ ತರಿಸಿದ.

"ಸಿಗರೇಟ್ ಬೇಕೆ ಚಂದ್ರಶೇಖರ್ ?"

"ಕ್ಷಮಿಸಿ. ಸೇದೋ ಅಭ್ಯಾಸವಿಲ್ಲ."

"ವಿಚಿತ್ರ ! ನಿಜವಾಗ಼್ೂ ವಿಚಿತ್ರ !"

ಅವನ ತುಟಿಗಳ ಕೊನೆಯಲ್ಲಿ ಅಪನಂಬುಗೆಯ ನಗುವಿತ್ತು. ನಾನು ಹೇಳಿದುದೊಂದನ್ನೂ ಎಂದಿಗೂ ನಂಬಲಾರದ ವ್ಯಕ್ತಿಯಾತ. ನಾನು ಆ ನಗುವನ್ನು ಲೆಕ್ಕಿಸಲಿಲ್ಲ.

ಕಾವಲಿನ ಪೋಲೀಸರನ್ನು ಹೊರಗೆ ಕಳುಹಿಸಿ ಆತ್ಮೀಯತೆಯ ನಟನೆ ಮಾಡುತ್ತಾ ಅಧಿಕಾರಿ ಮಾತನಾಡಿದ :

"ನೋಡಿ ಚಂದ್ರಶೇಖರ್. ನಿಮ್ಮನ್ನು ಆ ದಿನ ನೋಡ್ದಾಗಲಿಂದ ಮರೆಯೋಕೇ ಆಗಿಲ್ಲ."

ನಾನು ಸ್ವರಕ್ಷಣೆಯ ಮುಖವಾಡ ಧರಿಸಿ ಆ ಮಾತುಗಳನ್ನು ತೂಗಿ ನೋಡಿದೆ.

"ಚಂದ್ರಶೇಖರ್, ಈ ಹಾದಿ ಬಿಟ್ಟು ನೀವು ಎಲ್ಲರ ಹಾಗೆ ಯಾಕಿರಬಾರ್ದು ?"

"ಯಾವ ಹಾದಿ ಸಾರ್ ?"

"ನೋಡಿ, ಅಂಥ ಪ್ರಶ್ನೆ ಕೇಳ಼್ಾರ್ದು. ಅದೆಲ್ಲಾ ಬಿಚ್ಚಿ ಹೇಳ್ಬೇಕಾದ ವಿಷಯವೆ ?"

ಆ ಅಧಿಕಾರಿಯ ಕುಡಿ ಮೀಸೆ ಕುಣಿಯುತ್ತಿತ್ತು. ಕತ್ತಿನ

ಲ್ಲೊಂದು ಕಪ್ಪಗಿನ ಮಚ್ಚೆಯಿತ್ತು. ಹಿಂದಕ್ಕೆ ಬಾಚಿದ್ದ ಕ್ರಾಪು ಶಿರಸ್ತ್ರಾಣದ ಒತ್ತಡಕ್ಕೆ ಸಿಲುಕಿ ಧೋಬಿ ಇಸ್ತ್ರಿ ಒರೆಸಿದಂತೆ, ತಲೆ ಅಂಟಿಕುಳಿತಿತ್ತು.

ಒಮ್ಮೆಲೆ ನಾನೊಂದು ಪ್ರಶ್ನೆ ಕೇಳಿದೆ:

"ಸಾರ್ ನಿಮಗೆ ಮಕ್ಕಳಿದಾರ?"

ಭಾವನಾರಹಿತವಾಗಿದ್ದ ಆತನ ಗಾಜಿನಂತಹ ಕಣ್ಣುಗಳು ಕ್ಷಣ ಕಾಲ ಚಲಿಸದೆ ನಿಂತುವು. ಎರಡು ಕ್ಷಣ ಸ್ಟೇಷನ್ನಿನ ಆ ಹಳೆಯ ಗಡಿ ಯಾರವೊಂದೇ ಟಿಕಾ ಟಿಕ್ ಎಂದಿತು.

"ಇದಾರೆ ಚಂದ್ರಶೇಖರ್. ದೊಡ್ಡ ಹುಡುಗನಿಗೆ ನಿಮ್ಮ ವಯಸ್ಸು. ಈ ವರ್ಷ ಬಿ. ಎ. ಪರೀಕ್ಷೆ ಕಟ್ಟಿದಾನೆ."

"ಸಂತೋಷ ಸಾರ್. ದೊಡ್ಡ ಹುಡುಗನಿಗೆ ಮುಂದೆ ಏನು ಓದಿಸ್ಬೇಕೂಂತ ಇದೀರಿ ಸಾರ್? ವೈಯಕ್ತಿಕ. ಪ್ರಶ್ನೆ ಕೇಳ್‌ಬಾರ್ದು ಆದರೂ........"

"ವಕೀಲಿ ಓದಿಸ್ತೀನಿ. ಆತ ಪೋಲೀಸ್ ಪ್ರಾಸಿಕ್ಯೂಟರ್ ಆಗ ಬೇಕೂಂತ ನನ್ನ ಆಸೆ."

ನಾನು ಮುಗುಳು ನಕ್ಕೆ. ಹಾಗೆ ನಕ್ಕು ತಲೆಬಾಗಿ ನೆಲವನ್ನೇ ನೋಡಿದೆ. ನನ್ನನ್ನು ತಿಳಿಯಲಾರದೆ ಹೋದ ಆ ಅಧಿಕಾರಿ ಮತ್ತೆ ಮಾತನಾಡಿದ:

"ಅದು ಬೇರೆ ವಿಷಯ. ಎಲ್ಲರಿಗೂ ಹುಡುಗರ್ನ ಜಾಸ್ತಿ ಓದಿ ಸೋಕೆ ಆಗಲ್ಲ. ಆದರೆ ಇಷ್ಟು ವಿದ್ಯಾಭ್ಯಾಸ ಇರೋ ನಿಮ್ಮಂಥವರು ಸಂಭಾವಿತರಾಗಿ ಬದುಕೋದು ಸಾಧ್ಯ."

ನನಗೆ ಸಂಭಾವಿತತನದ ದೀಕ್ಷೆಕೊಡಲು ಆತ ಯತ್ನಿಸುತ್ತಿದ್ದ ನೇನೋ!

"ಸಾರ್, ನನ್ನ ಬಗ್ಗೆ ನಿಮ್ಮ ಅಭಿಪ್ರಾಯವೇನು?"

"ಮತ್ತೆ ಅದೇ ಪ್ರಶ್ನೆ. ಹಾಗೆ ಕೇಳಬಾರ್ದು ಚಂದ್ರಶೇಖರ್, ಅವೆಲ್ಲಾ ಕೇಳಿ ತಿಳಿದುಕೊಳ್ಳೊ ವಿಷಯಗಳೇ ಅಲ್ಲ."

"ಥ್ಯಾಂಕ್ಸ್. ನಿಮ್ಮ ಹಿತ ವಚನಗಳಿಗಾಗಿ ಕೃತಜ್ಞ."

ನನ್ನ ಧ್ವನಿ ಕಠಿಣವಾಗಿತ್ತು. ಅಧಿಕಾರಿಯ ಹುಬ್ಬು ಚಲಿಸಿದ ಹಾಗಾಯಿತು. ಕಣ್ಣುಗಳು ಅರಳಿದವು. ಆತ ಸ್ವರ ಬದಲಿಸಿ ನುಡಿದ:

". ಚಂದ್ರಶೇಖರ್, ಏನೋ ಪಾಪ ಅಂತ ಇಷ್ಟು ಹೇಳಿದೆ. ಆದರೆ ನಿನ್ನ ಎಳೆ ನಿಂಬೇಕಾಯಿತನ ನೀನು ಬಿಡೋ ಲಕ್ಷಣ ಕಾಣಿಸ್ಲಿಲ್ಲ. ನೀನು ಏನು ಮಾಡ್ತಾ ಇದೀಯಾ ಅನ್ನೋದು ನಿನಗೆ ಗೊತ್ತಾ?"

"ಏನು ಮಾಡ್ತಾ ಇದೀನಿ ಸಾರ್?"

"ನಿನ್ಮೇಲೆ ಏನೇನು ಆರೋಪಗಳಿವೆ ಗೊತ್ತಾ?"

"............"

"ಇನ್ನೊಬ್ಬರ ಹೆಂಗಸನ್ನ ಓಡಿಸಿಕೊಂಡು ಹೋಗಿದೀಯಾ. ಆಕೆ ಮನೆಯವರು ದೂರು ಕೊಟ್ಟಿದಾರೆ. ಅವಳು ಪತ್ತೆಯಾಗದೆ ಹೋದರೆ ನೀನು ಬಚ್ಚಿಟ್ಟಿದೀಯಾಂತ ಇನ್ನೊಂದು ಆರೋಪ."

ನಾನು ಮುಗುಳು ನಕ್ಕೆ. ಅಧಿಕಾರಿ ಆ ನಗುವನ್ನು ನೋಡಿದ. ಸ್ವರ ಮತ್ತಷ್ಟು ಗಡಸಾಯಿತು.

"ಇದೇನೋ ತಮಾಷೆ ಅಂತ ತಿಳ್ಕೊಂಡಿದ್ದೀ ಏನು? ಆರು ಆರು ವರ್ಷ ಆಗತ್ತೆ. ಆಗ ತಿಳಿದೀತು."

........ನನಗೆ ಆರು ಆರು ವರ್ಷಗಳ ಶಿಕ್ಷೆಯಾಗಲಿಲ್ಲ. ಹೆಂಗಸೊಬ್ಬಳನ್ನು ನಾನು ಓಡಿಸಿಕೊಂಡು ಬಂದಿದ್ದೆನೆನ್ನುವುದಕ್ಕೆ ರುಜುವಾತೇ ಇರಲಿಲ್ಲ. ಆ ತಾಯಿ ಯಾರ ಕಣ್ಣಿಗೂ ಬೀಳಲಿಲ್ಲ. ನ್ಯಾಯಾಸ್ಥಾನದತ್ತ ಹೋಗದೆ ಪೊಲೀಸು ಅಧಿಕಾರಿ ಆ ಸಂಜೆಯೇ ನನ್ನನ್ನು ಹೊರ ಬಿಟ್ಟ. ಕಳುಹಿಸಿಕೊಟ್ಟಾಗ ಆತನಲ್ಲಿ ವಿನಯವಿರಲಿಲ್ಲ. ಒರಟು ಒರಟಾಗಿ ಅವನು ಹೇಳಿದ:

"ಹುಷಾರ್! ಈ ಸಾರಿ ತಪ್ಪಿಸಿಕೊಂಡೆ. ಇನ್ನೊಮ್ಮೆ ನನ್ನ ಕೈಗೆ ಸಿಕ್ದೇಂತಂದರೆ ಸೆಂಟ್ರಲ್ ಜೈಲಿಗೇ ರವಾನಿಸ್ತೀನಿ!"

ಮೈ ನಿಡಿದುಕೊಂಡು ನೀಳವಾಗಿ ತಲೆಯೆತ್ತಿ ನಿಶ್ಚಲವಾಗಿ ಆ ಮಾತುಗಳನ್ನು ಕೇಳುತ್ತಿದ್ದ ನಾನು, ಮಾತು ಪೂರೈಸುವುದಕ್ಕೆ ಮುಂಚೆಯೇ ಸ್ಟೇಷನ್ನಿನಿಂದ ಹೊರಕ್ಕಿಳಿದೆ.

ಬೀದಿಯ ದೀಪಗಳು ಹತ್ತಿಕೊಂಡಿದ್ದವು. ಹೊರಗೆ ನಿಂತಿದ್ದ ನಾಲ್ಕಾರು ಜನ, ಸೂಟುಧಾರಿಯಾಗಿದ್ದ ನನ್ನನ್ನು ಕುತೂಹಲದಿಂದ ನೋಡಿದರು. ತಲೆಗೂದಲನ್ನು ಬದಿಗೆ ಸರಿಸಿ ಗಂಭೀರವಾಗಿ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು, ನಾನು ಮುಂದೆ ನಡೆದೆ. ಸಾವಿರ ಕಣ್ಣುಗಳು ನನ್ನನ್ನೆ ನೋಡುತ್ತಿದ್ದಂತೆ ಭಾಸವಾಗುತ್ತಿತ್ತು. ಆ ತೀಕ್ಷ್ಣ ದೃಷ್ಟಿಗಳ ಮುಂದೆ ನಾನು ತಲೆಬಾಗಲಿಲ್ಲ ಬಾಹ್ಯ ಜಗತ್ತು ನನ್ನನ್ನು ಅಣಕಿಸುತ್ತಿದ್ದಂತೆ ತೋರಿತು. ನಾನು ಎದೆಗುಂದದೆ ಮುಂದುವರಿದೆ.

ಮನೆಯ ನೆನಪಾಯಿತು. ಬೀಗ ತಗುಲಿಸಿರಲಿಲ್ಲ. ಬೆಳಿಗ್ಗೆ ಹೊರ ಬಿದ್ದಾಗ ಬಾಗಿಲುಗಳು ತೆರೆದೇ ಇದ್ದುವು........

ಬಲು ವೇಗವಾಗಿ ನಾನು ಮನೆಯತ್ತ ನಡೆದೆ. ಆದರೆ ತಡವಾಗಿ ನಾನು ಮನೆ ಸೇರಿದ್ದೆ. ನೆರೆ ಮನೆಯಲ್ಲಿ ತಂದೆ ಮಗನಿಗೆ ಪಾಠ ಓದಿಸುವುದು ಕೇಳುತ್ತಿತ್ತು. ನಾನು ಬಂದ ಸದ್ದಾದಾಗ ಆತ ಎದ್ದು ಹೊರಕ್ಕೆ ಬಂದರು.

"ಚಂದ್ರಶೇಖರ್, ವಿಷಯ ತಿಳೀತಾ ನಿನಗೆ?"

ಆ ಮಾತಿನಲ್ಲಿ ಕಾತರವಿತ್ತು.

"ಏನು ವಿಷಯ?"

"ನೀನು ಹೋದ್ಮೇಲೆ ಬಾಗಿಲು ಹಾಕ್ಕೊಳ್ಳೋಣಾಂತ ಇದ್ವಿ. ಆದರೆ ಧೈರ್ಯ ಬರ್ಲಿಲ್ಲ. ಪೋಲೀಸರ ಸಹವಾಸ ಬೇರೆ. ಆದರೂ ಮನೆ ಮೇಲೆ ನಿಗಾ ಇಟ್ಟಿದ್ವಿ. ಮಧ್ಯಾಹ್ನ ಇಬ್ಬರು ಬಂದ್ರು. ಯಾರೂಂತ ನಾನು ಕೇಳಿದಾಗ ಸ್ಟೇಷನ್ನಿನಿಂದ ಬಂದಿದೀವಿ ಅಂತ ದಬಾಯಿಸಿದರು. ನಾನು ಮನೆ ಸೇರ್ಕೊಂಡ್ಬಿಟ್ಟೆ. ಅಂತೂ ಎರಡು ದೊಡ್ಡ ಮೂಟೆ ಕಟ್ಕೊಂಡು ಹೋದ ಹಾಗಿತ್ತಪ್ಪ."

ಆ ಮಾತಿನಲ್ಲಿ ಸಹಜತೆ ಇತ್ತು. ನನ್ನ ಕಣ್ಣೆದುರಲ್ಲೆ ಅವರು ಬೆಳೆದು ಮುದುಕರಾಗಿದ್ದರು. ಅವರ ಸಂಸಾರ ರಥ ಸಾಗಿಸುವುದರಲ್ಲೆ ಅವರ ಕೂದಲು ಹಣ್ಣಾಗಿತ್ತು.

ನಾನು ಮೌನವಾಗಿ ಕಡ್ಡಿ ಕೊರೆದೆ. ಗಾಳಿಗೆ ಅದು ನಿಲ್ಲಲಿಲ್ಲ. ಮತ್ತೆ ಮತ್ತೆ ಕಡ್ಡಿ ಗೀರಿದೆ. ನೆರೆಮನೆಯಾತ ಕಂದೀಲು ತಂದು

ಕೊಟ್ಟರು. ಹಿಂದೊಮ್ಮೆ, ಮತ್ತೆ ಈಗ, ಎರಡು ಸಾರೆ ಅವರ ಪಕ್ಕದ ಅಂಗಳಕ್ಕೆ ಪೋಲೀಸರ ಆಗಮನವಾಗಿತ್ತು. ನಾನು ಕಂದೀಲನ್ನೆತ್ತಿ ಕೊಂಡು, ಒಳ ಮನೆಯನ್ನು, ದೇವರ ಮನೆಯನ್ನು, ಅಡುಗೆ ಮನೆ ಯನ್ನು—ಎಲ್ಲವನ್ನೂ ಶೋಧಿಸಿದೆ. ಒಡೆದು ಹೋಗಿದ್ದ ನಾಲ್ಕಾರು ಮಡಿಕೆಗಳ ಹೋಳುಗಳು ಮಾತ್ರ ನನ್ನ ಕಾಲಿಗೆ ಅಡ್ಡವಾಗಿ ಬಂದುವು. ಕಣ್ಣಿಗೆ ಬೇರೇನೂ ಕಾಣಿಸಲಿಲ್ಲ. ಎಲ್ಲವೂ ಖಾಲಿಯಾಗಿತ್ತು—ಎಲ್ಲವೂ—. ಆ ಬಡಕಲು ಗೋಡೆ ಬಿದಿರು ಥಾವಣಿಯ ಮನೆಯ ಹೊರತು, ನನ್ನ ಪಾಲಿಗೆ ಬೇರೇನೂ ಉಳಿದಿರಲಿಲ್ಲ. ಜೀವಮಾನ ವೆಲ್ಲಾ ಒಂದೊಂದು ತುತ್ತು ಎತ್ತಿಟ್ಟು ಕೂಡಿಸಿದ್ದ ವಿಕ್ಟೋರಿಯಾ ರಾಣಿಯ ನಾಣ್ಯಗಳು....ಅವುಗಳಲ್ಲಿ ಇನ್ನೂರಕ್ಕೂ ಹೆಚ್ಚು ಅಲ್ಲಿ ಉಳಿ ದಿದ್ದುವು. ಬಂದಿದ್ದವರ ಪಾಲಿಗೆ ಅದೇ ದೊಡ್ಡ ಸಂಪಾದನೆಯಾಗಿತ್ತು. ಆದರೂ ಸಣ್ಣ ಪುಟ್ಟ ವಸ್ತುಗಳನ್ನೂ ಅವರು ಬಿಟ್ಟಿರಲಿಲ್ಲ. ಹರಿದು ಹೋಗಿದ್ದ ಚಾದರವನ್ನೂ ಒಯ್ದಿದ್ದರು. ಒಳಗೆ ಗೂಟಕ್ಕೆ ತಗುಲಿ ಹಾಕಿದ್ದ ಕೈಯಿಲ್ಲದ ಬೀಗವನ್ನೂ ಅವರು ಹೊತ್ತಿದ್ದರು. ಯಾವ ಅವಸರವೂ ಇಲ್ಲದೆ ಮನೆ ಖಾಲಿಮಾಡುವ ಕೆಲಸ ಬಲು ಶಿಸ್ತಿನಿಂದ ನಡೆದಿತ್ತು. ನಗಬೇಕೋ ಮುಖ ಬಾಡಿಸಿಕೊಳ್ಳಬೇಕೋ ನನಗೆ ತಿಳಿಯಲಿಲ್ಲ. ಒಳಗೆ ಮನಸ್ಸು ಸುಣ್ಣವಾಗಿತ್ತು. ಆದರೆ ಹೊರಗೆ ಮುಖಭಾವನೆ ಹಾಗಿರಲಿಲ್ಲವೇನೋ. ನೆರೆಮನೆಯವರು ಬಲು ಆಶ್ಚರ್ಯದಿಂದ ನನ್ನನ್ನೇ ನೋಡುತ್ತಿದ್ದರು

"ಸ್ಟೇಷನ್ನಿಗೆ ತರಲೇ ಇಲ್ಲವೇನು ಹಾಗಾದರೆ?"

ಯೋಚನೆಯ ಲೋಕದಿಂದ ಭೂಮಿಗೆ ಇಳಿದೆ ನಾನು.

"ಏನನ್ನು?" ಎಂದೆ.

"ಅದೇ ಇವನ್ನ—ಸಾಮಾನುಗಳ್ನ."

"ಸಾಮಾನುಗಳನ್ನೆ? ತಗೊಂಡು ಹೋಗಿದ್ದಾಯ್ತು. ಇನ್ಯಾವ ಯೋಚನೆಯೂ ಇಲ್ಲವಲ್ಲ."

ಅವರು ಅವಾಕ್ಕಾದರು.

"ಒಂದು ಚಿಮಿಣಿ ದೀಪ ತಂದುಕೊಡ್ಲೇನು?"

"ಬೇಡಿ, ಏನೂ ಬೇಡಿ."

"ಮತ್ತೆ ?"

"ಬೇಡಿ ಎಂದೆನಲ್ಲ. ಈ ರಾತ್ರೆ ನಾನು ಇಲ್ಲಿರೋದಿಲ್ಲ."

ಅವರು ನಿಟ್ಟುಸಿರುಬಿಟ್ಟರು.

"ಏನೋಪ್ಪ ಚಂದಶೇಖರ್. ಹೀಗಾಗುತ್ತೇಂತ ಯಾರಿಗೆ ಗೊತ್ತಿತ್ತು ಹೇಳು........ಒಂದೂ ಅರ್ಥವಾಗೋದಿಲ್ಲ ಈ ಕಾಲದಲ್ಲಿ."

ನಾನು ಅವರ ಕಂದಿಲ್ಲಿನೊಡನೆ ಬಾಗಿಲನ್ನು ದಾಟಿ ಹೊರಬಂದೆ. ಅವರು ತಮ್ಮ ಕಂದೀಲನ್ನು ಹಿಂಬಾಲಿಸಿ ಬಂದರು. ಹೊರಗೆ ದಟ್ಟವಾದ ಕತ್ತಲು ನಮ್ಮನ್ನೂ ಕಂದೀಲನ್ನೂ ಅಣಕಿಸುತ್ತಿತ್ತು.

ನನ್ನನ್ನು ಅಲ್ಲೆ ಬಿಟ್ಟು ನೆರೆಮನೆಯಾತ ಕಂದೀಲನ್ನು ಆಡಿಸುತ್ತಾ, ತಮ್ಮ ಮನೆಯೊಳಕ್ಕೆ ಹೋದರು. ನಾನು ಗೊತ್ತು ಗುರಿ ಇಲ್ಲದೆ ರಸ್ತೆಗಿಳಿದೆ.

ಬಾರಿ ಬಾರಿಗೂ ನನ್ನನ್ನು ಇದಿರಿಸುತ್ತಿದ್ದ ಆ ಶೂನ್ಯ. ಬಾರಿ ಬಾರಿಗೂ ಅದನ್ನು ನಾನು ದಾಟಿ ಮುಂದೆ ಸಾಗಬೇಕಾಗುತ್ತಿತ್ತು. ಅಂತಹ ಒಂದೊಂದು ಕಾಲಘಟ್ಟವೂ ನನಗೆ ಬಳಲಿಕೆಯನ್ನು ತರುತ್ತಿತ್ತು. ಜೀವನದ ಆ ಒಂದೊಂದು ಹೆಜ್ಜೆಗೂ ನಾನು ಹೆಚ್ಚು ವಯಸ್ಕನಾಗುತ್ತಿದ್ದೆ.

ಹಿಂದಿನ ಸಂಜೆ, ಬಡಪಾಯಿ ಹೆಂಗಸೊಬ್ಬಳಿಗೆ ನ್ಯಾಯ ದೊರಕಿಸಲು ಹೋದಾಗ, ಒಂದು ದಿನದೊಳಗೆ ಹೀಗಾಗುವುದೆಂದು ಯಾರು ಭಾವಿಸಿದ್ದರು ? ಹಿಂದಿನ ಸಂಜೆ, ಆಕೆಯನ್ನು ಮನೆಗೆ ಕರೆದು ತಂದು ದೀಪ ಹಚ್ಚಿದಾಗ, ಮುಂದೆ ಒಂದು ದಿನದೊಳಗಾಗಿ ಆ ದೀಪವೇ ಮಾಯವಾಗುವುದೆಂದು ಯಾರು ತಿಳಿತಿದ್ದರು ?

ಸಾವಧಾನವಾಗಿ ಚಲಿಸಿದರೆ ಒಂದು ವರ್ಷ ಬೇಕಾಗುವಷ್ಟು ದೂರವನ್ನು ಒಂದೇ ದಿನದಲ್ಲಿ ನಾನು ಕ್ರಮಿಸಿದ್ದೆ.

....ಇನ್ನು ಮುಂದಿನ ಹಾದಿ ಹುಡುಕಬೇಕು. ಉಣ್ಣೆಯ ಪೋಷಾಕಿನ ಹೊರ ಜೇಬುಗಳೂ ಒಳ ಜೇಬುಗಳೂ ಖಾಲಿಯಾಗಿದ್ದುವು. ಹೊಟ್ಟೆ ಹಸಿದಿತ್ತು. ಮೈಯಲ್ಲಿ ಉತ್ಸಾಹವೆಲ್ಲಾ ಮಾಯವಾಗಿ ಕಾಲು

ಗಳು ಜಡವಾಗಿದ್ದುವು.

ಅಂಗಡಿ ಬೀದಿಯ ದೀಪಗಳು ಹೆಚ್ಚು ಹತ್ತಿರವಾದುವು. ನಾನು ಮೆಲ್ಲ ಮೆಲ್ಲನೆ ಹೆಜ್ಜೆಯಿಡುತ್ತಾ, ಆರನೆಯ ಕ್ರಾಸನ್ನು ತಲಪಿದೆ. ಶೇಷಗಿರಿ ತನ್ನ ಪುಟ್ಟ ಅಂಗಡಿಯನ್ನು ಮುಚ್ಚುವ ಸಿದ್ಧತೆಯಲ್ಲಿದ್ದ. ನಾನು ಅಂಗಡಿಯ ಎದುರು ನಿಂತು, ಬಣ್ಣ ಬಣ್ಣದೊಂದು ಪತ್ರಿಕೆಗೆ ಕೈ ಹಾಕಿದೆ. ಮೊದಲು ಕೈಯನ್ನು ನೋಡಿದ ಶೇಷಗಿರಿಯ ದೃಷ್ಟಿ ಬಳಿಕ ನನ್ನ ಮುಖದತ್ತ ಹೊರಳಿತು.

"ನೀನೇನೋ. ಯಾವುದೋ ಗಿರಾಕಿ ಸಿಗುತ್ತೇಂತ ಇದ್ದೆ ........ಏನಪ್ಪ ದೊರೆ, ಏನ್ಸಮಾಚಾರ? ಹೆಂಡ್ತಿ ಸತ್ತೋರ ಹಾಗೆ ಮುಖ ಬಾಡಿಸ್ಕೊಂಡು ಇದೀಯಲ್ಲೊ!"

ನಾನು ಮುಗುಳು ನಕ್ಕೆ.

"ಮದುವೆ ಮಾಡ್ಕೋಬೇಕೂಂತ ಇರೋವರು ಹಾಗೆ ಅಮಂಗಳ ಮಾತಾಡ್ಬಾರದು ಕಣಯ್ಯ," ಎಂದೆ.

"ಸಾಕು ಬಿಡು ವೇದಾಂತ. ಮದ್ವೆ ಮಾಡ್ಕೊಳ್ಳೋದು ಅಂದ್ರೆ ಒಂದೇ ಸಾರಿ ದೊಡ್ಡ ಖರೀದಿ ಮಾಡ್ದಹಾಗೆ. ಹೆಂಡ್ತಿ ಸಾಯೋದೂಂ ತಂದ್ರೆ ಪಾಪರ್ ಎದ್ದ ಹಾಗೆ."

"ಎಲ್ ಕಲ್ತೆ ಇದ್ನ? ಈ ಹೊಸ ಪೇಪರ್‌ನೋರು ಪ್ರಿಂಟು ಮಾಡಿದಾರೇನು?"

"ಪೇಪರಿನಲ್ಲೇನಿದಿಯೋ ಮಣ್ಣು! ಎಲ್ಲಾ ಇರೋದು ಇಲ್ಲಿ ಶೇಷಗಿರಿ ಮೆದುಳ್ನಲ್ಲಿ"

"ಹೂಂ?"

"ಹೌದು ಕಣಯ್ಯ. ನಾಳೆ ದಿವ್ಸ ನಾನೆ ಸ್ವತಃ ಒಂದು ಪೇಪರ್ ತೆಗೀತೀನಿ ನೋಡ್ಕೊ."

ಶೇಷಗಿರಿ ಎಂದಾದರೊಮ್ಮೆ ಅಂತಹ ಗುಂಗಿನಲ್ಲಿರುತ್ತಿದ್ದ. ಆ ಲಹರಿಯಲ್ಲಿ ನನ್ನ ಸಂಕಟಗಳನ್ನೂ ನಾನು ತೇಲಿಬಿಟ್ಟೆ.

"ಭೇಷ್. ಅಂತೂ ಒಂದೆರಡು ಮೂರು ಸಾವಿರ ಮಾಡಿ ಇಟ್ಟಿದಿಯಾಂತನ್ನು."

" ಪೇಪರ್ ಮಾಡೋದಕ್ಕೆ ಹಣ ಯಾತಕ್ಕಯ್ಯ ಬೇಕು ? "

ಆ ವಾದವನ್ನು ಮುಂದುವರಿಸಲು ನನಗೆ ಇಷ್ಟವಿರಲಿಲ್ಲ. ಮಾತಿನಲ್ಲಿ ಸೋಲುವ ಗುಣ ಅವನದಾಗಿರಲಿಲ್ಲ.

" ಸರಿ ಬಿಡಪ್ಪ, ನಾಳೆ ದಿನ ನೀನು ದಿವಾನನೇ ಆಗಬಹುದು. ಯಾರು ಕಂಡೋರು ? "

ಶೇಷಗಿರಿ ಸಿಳ್ಳು ಹಾಕುತ್ತಾ ಹೊರಗೆ ಬೆಂಚಿನ ಮೇಲಿದ್ದುವನೆಲ್ಲಾ ಒಳಕ್ಕೆ ಎತ್ತಿ ಹಾಕಿ, ಬೆಂಚನ್ನು ಒಳಭಾಗಕ್ಕೆ ತುರುಕಿಸಿ, ದೀಪ ಆರಿಸಿ, ಬಾಗಿಲು ಮುಚ್ಚಿ, ಬೀಗ ತಗುಲಿಸಿದ. ತಗುಲಿಸಿದ ಮೇಲೆ ಗಟ್ಟಿಯಾಗಿ ಎಳೆದು ನೋಡಿದ.

" ಹುಷಾರಾಗಿರಬೇಕಪ್ಪ. ಬೀಗ ಭದ್ರವಾಗಿದೆ ತಾನೆ? "

ಆ ಅಂಗಡಿಯ ಬೀಗ ಭದ್ರವಾಗಿತ್ತು. ಬೀಗ ಇಲ್ಲದೆ ಇದ್ದುದು ನನ್ನ ಪಾಲಿಗೆ ಬಂದಿದ್ದ ಬಡಕಲು ಮನೆಗೆ ಮಾತ್ರ. ಕೋಟಿನ ಜೇಬಿನೊಳಕ್ಕೆ ಕೈ ಇಳಿ ಬಿಟ್ಟೆ. ಅಲ್ಲಿ ಬೀಗದ ಕೈ ಅನಾಥವಾಗಿ ಕುಳಿತಿತ್ತು.

" ಏನಮ್ಮಾ, ಯೋಚಿಸ್ತಾ ಸಿಂತ್‌ಬಿಟ್ಟೆ, ಏನ್ಕಥೆ? "

ಮತ್ತೂ ಎರಡು ಕ್ಷಣ ನಾನು ಸುಮ್ಮನಿದ್ದೆ.

ಅವನೊಡನೆ ಮುಂದೆ ನಡೆಯುತ್ತಾ ಹೇಳಿದೆ :

" ತುಂಬಾ ಹಸಿವಾಗ್ತ ಇದೆ ಶೇಷಗಿರಿ, ಹೊಟ್ಟೆಯೂ ಖಾಲಿ, ಜೇಬೂ ಖಾಲಿ."

" ಅದಕ್ಕೆಲ್ಲಾ ಇಷ್ಟೊಂದು ಅಳುಮೋರೆ ಹಾಕ್ತಾರೇನೋ? " ಎಂದ ಶೇಷಗಿರಿ. ನನಗೆ ನಗು ಬಂತು.

ನಾವು ಮೂಲೆಯ ಹೋಟೆಲನ್ನು ಹೊಕ್ಕೆವು. ನನ್ನ ಕಣ್ಣುಗಳು ಕುಳಿತಿದ್ದವರ ಮೇಲೆಲ್ಲಾ ಅವಸರ ಅವಸರವಾಗಿ ಹೊರಳಿ ನೋಡಿದವು.

" ಯಾರ್ನ ಹುಡುಕ್ತಾ ಇದೀಯೋ ? "

ನಾನು ಯಾರನ್ನೂ ಹುಡುಕುತ್ತಾ ಇರಲಿಲ್ಲ. ಆದರೆ, ನನ್ನ ಬಂಧುಗಳಾಗಿದ್ದ ನ್ಯಾಯ ಪರಿಪಾಲನಾ ಶಾಖೆಯವರು, ಅಲ್ಲಿ ಕುಳಿತಿದ್ದರೇನೋ ಎಂದು ತಿಳಿಯಲು, ನಾನು ದೃಷ್ಟಿ ಬೀರಿದ್ದೆ ಅಷ್ಟೆ.

"ಯಾರೂ ಇಲ್ಲ ಕಣೋ. ಸುಮ್ ಸುಮ್ನೆ ನೋಡ್ದೆ."

ನಿಜ ಸಂಗತಿಯನ್ನು ನಾನು ಶೇಷಗಿರಿಗೆ ಹೇಳುವ ಹಾಗಿರಲಿಲ್ಲ. ಕಳೆದ ಒಂದು ಹಗಲು ಒಂದು ರಾತ್ರಿಯಲ್ಲಿ ನನಗಾದ ಅನುಭವಗಳನ್ನು, ನಾನು ಆತನಿಗೆ ತಿಳಿಯ ಹೇಳುವುದು ಸಾಧ್ಯವಿರಲಿಲ್ಲ. ಆ ಅನುಭವಗಳೆಲ್ಲಾ ನನ್ನವಾಗಿಯೇ, ನನ್ನೊಬ್ಬನ ಸೊತ್ತಾಗಿಯೇ, ಉಳಿಯಬೇಕಾಗಿತ್ತು.

ಆ ಹೋಟೆಲಿನಲ್ಲಿ ಕೊನೆಯದಾಗಿ ಉಳಿದಿದ್ದ ತಿಂಡಿಗಳನ್ನು ತಿಂದೆವು. ಕಾಫಿ ಕುಡಿದೆವು. ಹೊರ ಬರುತ್ತಾ ಶೇಷಗಿರಿ ಹಣವನ್ನು ತೆತ್ತ.

"ಎಲ್ಲಪ್ಪ ಒಂದು ರೂಪಾಯಿ ಸಾಲ ಕೊಟ್ಟಿರು."

ಅವನು ಚಿಲ್ಲರೆ ಹದಿನಾರು ಆಣೆಗಳನ್ನೆಣಿಸಿ ನನ್ನ ಕೈಗೆ ಕೊಟ್ಟ.

"ಇನ್ನೂ ಒಂದು ನಾಲ್ಕಾಣೆ ಕೊಡ್ಲೇನು?"

"ಬೇಡ ಇಷ್ಟು ಸಾಕು."

ನಾನು ಅವನನ್ನು ಬೀಳ್ಕೊಟ್ಟೆ.

........ಬೀಡಿ ಸಿಗರೇಟಿನ ಅಂಗಡಿಗೆ ಹೋಗಿ ನನ್ನ ಜೀವನದ ಮೊದಲ ಪ್ಯಾಕೇಟನ್ನು ಕೊಂಡು ಕೊಂಡೆ. ರಾತ್ರಿ ಸಂಚಾರಿಯಾದ ನನ್ನ ಕೈಯಲ್ಲಿ ಬೆಂಕಿಯ ಪೊಟ್ಟಣ ಯಾವಾಗಲೂ ಇರುತ್ತಿತ್ತು. ಯಾವ ಅಳುಕೂ ಅಲ್ಲದೆ, ಸಿಗರೇಟನ್ನು ಬಾಯಿಗಿರಿಸಿ, ಅದಕ್ಕೆ ಬೆಂಕಿ ಹಚ್ಚಿದೆ. ಅಳುಕುವುದರಲ್ಲಿ ಅರ್ಥವಿರಲಿಲ್ಲ. ಸಿಗರೇಟು ಸೇದುವುದನ್ನೇ ಮಹಾ ಕೆಲಸವೆಂದು ಭಾವಿಸಿದರೆ, ಬೇರೇ ಏನು ಮಾಡುವುದು ಸಾಧ್ಯವಿತ್ತು.?

ಹೊಗೆಯುಗುಳುತ್ತ ನಾನು, ಆ ಚೌಕದತ್ತ ಹೋದೆ. ಪತ್ರಿಕೆ ಮಾರುವ ಹುಡುಗರಲ್ಲಿ ಹೆಚ್ಚಿನವರು ಮನೆಗೆ ಹೋಗಿದ್ದರು. ಯಾವನೋ ಒಬ್ಬ ಪುಟ್ಟ ಹುಡುಗ ಮಾತ್ರ ಮುಖ ಬಾಡಿಸಿಕೊಂಡು ನಿಂತಿದ್ದ.

ಆ ಚೌಕ! ನಾಲ್ಕು ವರ್ಷಗಳ ಹಿಂದೆ ನಾನು ಅಲ್ಲಿ ಪತ್ರಿಕೆ ಮಾರುತ್ತಿದ್ದೆ. ನಾಲ್ಕು ವರ್ಷಗಳ ಹಿಂದೆ ಅಲ್ಲೆ, ಮಾಡದೆ ಇದ್ದ ಅಪರಾಧಕ್ಕಾಗಿ ನನ್ನನ್ನು ಜೇಬುಗಳ್ಳನೆಂದು ಕರೆದಿದ್ದರು. ಆ ಚೌಕ!

ಜನ ಸಂದಣಿಯೂ ಅಷ್ಟಾಗಿ ಇರಲಿಲ್ಲ. ಆದರೂ ಬರಲಿದ್ದ ಕೊನೆಯ ಬಸ್ಸಿಗಾಗಿ, ಆರೇಳು ಜನ ಕಾದಿದ್ದರು. ನಾನು ಅವರ ಬಳಿ ಹೋಗಿ ನಿಂತೆ. ನನ್ನ ಕಣ್ಣುಗಳು ಅಲ್ಲಿದ್ದ ಅವರನ್ನು ಪರೀಕ್ಷಿಸುತ್ತಲಿದ್ದುವು.

ಅಷ್ಟರಲ್ಲೆ ಮೋಟಾರು ಬಂತು. ಆ ಜನರೆಲ್ಲಾ ಒಮ್ಮೆಲೆ ನುಗ್ಗಿದರು. ಸಿಗರೇಟನ್ನೆಸೆದು ಅವರ ನಡುವೆ ನಾನೂ ನುಗ್ಗಿದೆ. ಅವರೆಲ್ಲಾ ಒಳ ಹೊಕ್ಕರು. ನಾನೊಬ್ಬನೇ ಹಿಂದೆ ಉಳಿದೆ........ ಗಾಡಿ ಚಲಿಸಿತು. ಇನ್ನೊಂದು ಸಿಗರೇಟು ಹೊರ ತೆಗೆದು ಹಚ್ಚುತ್ತಾ, ಮೋಟಾರು ಹೋದ ಹಾದಿಯನ್ನೆ ನೋಡಿದೆ........ಆ ಮೋಟಾರು ಒಮ್ಮೆಲೆ ನಿಂತಿತು. ಯಾರೋ ಕೂಗಾಡುತ್ತಿದ್ದರು. ಆ ನಿಲ್ದಾಣದಲ್ಲಿ ಮತ್ತೆ ನಿಲ್ಲದೆ, ಮೆಲ್ಲನೆ ಗಂಭೀರವಾಗಿ ಅಲ್ಲಿಂದ ನಡೆದು ಹೋದೆ.

ಅದು ದೊಡ್ಡ ಸಂಪಾದನೆಯಾಗಿರಲಿಲ್ಲ. ಆ ಬೇಟೆಯ ಪಾಕೀಟಿನಲ್ಲಿ ಐದು ರೂಪಾಯಿಯ ಒಂದು ನೋಟು, ಒಂದು ರೂಪಾಯಿ ನಾಣ್ಯ, ಮತ್ತು ಚಿಲ್ಲರೆ ಏಳು ಆಣೆಗಳಿದ್ದುವು. ಆಸ್ಪತ್ರೆಯ ಚೀಟಿಯೊಂದಿತ್ತು. ಆ ಚೀಟಿಯಲ್ಲಿ, ಹೆಸರು ಬರೆದಿದ್ದರು ಕಾವೇರಮ್ಮ, ವಯಸ್ಸು ಐವತ್ತಾರು....ಆ ವೃದ್ಧನ ಪತ್ನಿಯಾಗಿರಬಹುದು. ಪಾಕೀಟಿನೊಳಗೆ ವಿಳಾಸ ಮುದ್ರಿಸಿದ ಗುರುತು ಚೀಟಿಯಿರಲಿಲ್ಲ. ಆ ಪಾಕೀಟೇ ಹಳೆಯದಾಗಿ ಹರಿದಿತ್ತು. ನಾನು ದೊಡ್ಡ ಮನುಷ್ಯರನ್ನು ಬಲಿ ತೆಗೆದುಕೊಂಡಿರಲಿಲ್ಲ. ಮಧ್ಯಮ ವರ್ಗದ್ದೊಂದು, ಕಾಹಿಲೆ ಕಸಾಲೆಗಳಿದ್ದ ತಾಪತ್ರಯಗಳಿದ್ದ ಬಡಪ್ರಾಣಿಯನ್ನು ಬಲೆಗೆ ಕೆಡವಿದ್ದೆ. ನನಗೆ ಹಣದ ತೀವ್ರ ಅವಶ್ಯಕತೆಯಿತ್ತು. ಅದಕ್ಕಾಗಿ ಇನ್ನೊಂದು ಜೀವದ ಸುಖದುಃಖ ನೋಡದೆ ನನ್ನ ಕೆಲಸ ನಡೆಸಿದೆ. ಆದರೂ ಆ ಔಷಧಿ ಚೀಟಿಯನ್ನು ನೋಡಿದಾಗ, ಆ ಹೆಸರನ್ನೋದಿದಾಗ, ತಾಯಿಯ ನೆನಪಾಯಿತು. ಕಾಹಿಲೆ ನರಳುತ್ತಿದ್ದ ತಂಡೆಯ ನೆನಪಾಯಿತು. ವಾಂತಿ ಭೇದಿಯಿಂದ ನರಳಿ ಸತ್ತ ಅಜ್ಜಿಯ ನೆನಪಾಯಿತು. ಯಾರಿಗೋ ಅನ್ಯಾಯ ಮಾಡಿದ ಹಾಗೆ ನನಗೆ ತೋರುತ್ತಿತ್ತು. ಸಾಧ್ಯವಿದ್ದಿದ್ದರೆ ಅಷ್ಟನ್ನೂ ವಾಪಸ್ಸು ಒಯ್ದು ಮುಟ್ಟಿಸಿ ನಮಸ್ಕರಿಸಿ ಕ್ಷಮೆಯಾಚಿಸಿ ಹಿಂತಿರುಗುತ್ತಿದ್ದೆನೇನೋ.

ಹಾಗೆ ಮಾಡಿದ್ದರೆ, ನಾನು ಮಹಾ ಮೂರ್ಖನಾಗುತ್ತಿದ್ದೆ. ನನ್ನನ್ನು ನೋಡಿ, ಸದಾ ಕಾಲವೂ ಗೇಲಿ ಮಾಡುತ್ತಿದ್ದ ಅಮೀರ ನನ್ನೆದುರು ಬಂದ. ನನ್ನದು ಹೆಣ್ಣು ಕರುಳೆಂದು ಆತ ಹೇಳುತ್ತಿದ್ದ. ಅದು ಅರ್ಥವಿಲ್ಲದ ಮಾತು. ಕರುಳು ಹೆಣ್ಣಿನದಿರಲಿ ಗಂಡಿನದಿರಲಿ ಎಲ್ಲರದೂ ಒಂದೇ ತರಹೆ. ಆದರೆ ದುಡಿಮೆಗೆ ಅನುಸಾರವಾಗಿ ಆ ಕರುಳು ಕಲ್ಲಾಗುತ್ತದೆ.....ಆದರೂ ಅಮೀರನನ್ನು ನೆನೆಸಿಕೊಂಡು ನನ್ನ ಮೃದುತನದ ಬಗ್ಗೆ ನಾನು ನಕ್ಕೆ. ಆ ಔಷಧಿ ಚೀಟಿಯನ್ನು ಎರಡು ಚೂರಾಗಿ ಹರಿದು, ಗಾಳಿಗೆ ತೂರಿದೆ. ಪಾಕೀಟನ್ನು ಮೋರಿಗೆ ಎಸೆದೆ........

ಆ ಮೇಲೆ ಮತ್ತೊಮ್ಮೆ ಏನನ್ನಾದರೂ ಕುಡಿಯಬೇಕೆನಿಸಿತು ಆ ಹಾದಿಯಲ್ಲಿ ಒಂದೇ ಒಂದು ತೆರೆದಿದ್ದ ಇಸ್ಲಾಮಿಯಾ ಹೋಟೆಲಿತ್ತು. ಒಳಹೋಗಿ ಕುಳಿತು, "ಚಾ ಲಾವ್," ಎಂದೆ. ಆ ಹುಡುಗ ನನ್ನನ್ನೆ ನೋಡಿದ. ನಾನು ಹಿಂದುವೆ? ಮುಸಲ್ಮಾನನೆ? ಮತ್ತೆ ಸಿಗರೇಟು ಉರಿಸಿ ಮುಖದ ಎದುರು ಹೊಗೆಯ ತೆರೆಯೆಬ್ಬಿಸುತ್ತಾ, ನನ್ನನ್ನೆ ದಿಟ್ಟಿಸುತ್ತಿದ್ದ ಆ ಹುಡುಗನನ್ನು ನೋಡಿದೆ. ನನ್ನ ಕಿವಿಗಳಲ್ಲಿ ತೂತುಗಳಿರಲಿಲ್ಲ. ನನ್ನ ನಡಿಗೆಯಲ್ಲಿ ಹಿಂದುತನ ವಿರಲಿಲ್ಲ. ನಾನು ಮುಸಲ್ಮಾನನಿದ್ದರೂ ಇರಬಹುದು........ಆ ಹುಡುಗ ಅಂತಹ ಸಂದೇಹಗಳಲ್ಲಿ ತೇಲಿ ಮುಳುಗುತ್ತಿದ್ದ. ಅವನನ್ನು ಗೊಂದಲದಲ್ಲಿ ಕೆಡವಿದ ನಾನು ಸಮಾಧಾನದಲ್ಲಿದ್ದೆ. ಹೌದು ಯಾಕಾಗಬಾರದು? ನಾನು ಯಾವ ಜಾತಿಯವನೂ ಆಗಬಹುದು. ಮುಖ್ಯ ವಿಷಯವೆಂದರೆ ನನ್ನನ್ನಿವರು, ಮನುಷ್ಯಜಾತಿಯವನೆಂದು ಒಪ್ಪಿಕೊಂಡಿದ್ದಾರೆ........ಚಹದ ಲೋಟವನ್ನು ಎರಡು ಗುಟುಕಿಗೆ ಬರಿದು ಮಾಡಿದೆ........ಇದೇ ಆಶ್ಚರ್ಯ! ನಾನು ಮನುಷ್ಯ ಜಾತಿಯವನೆಂದು ಇವರು ಒಪ್ಪಿಕೊಂಡಿದ್ದಾರೆ. ಸುತ್ತಲೂ ಕಾಣುವವರನ್ನೆಲ್ಲಾ, ಮನುಷ್ಯರೆಂದು ಒಪ್ಪಿಕೊಳ್ಳಲು, ನಾನು ಸಿದ್ಧನಿರಲಿಲ್ಲ ಅದು ನನಗೆ ಅವಮಾನದ ಮಾತಾಗುತಿತ್ತು. ಈ ಸಮಾಜದಲ್ಲಿ, ಮನುಷ್ಯರು ಹಲವರಿದ್ದರು ನಿಜ. ಆದರೆ ಎಲ್ಲರೂ ಮನುಷ್ಯರಾಗಿರಲಿಲ್ಲ.

ಅದಾದ ಮೇಲೆ ಮತ್ತೆ ಬೀದಿ. ಯಾವುದು ನನ್ನ ಮನೆ? ಯಾರು ನನ್ನವರು? ಎಲ್ಲಿಗೆ ನನ್ನ ಪಯಣ? .......ನಾನು ನಡೆಯುತ್ತಲೇ ಇದ್ದೆ. ಇನ್ನು ಜನ ಸಂಚಾರ ಮತ್ತಷ್ಟು ನಿಬಿಡವಾಗುವುದು. ಆ ಮೇಲೆ, ಬೂದು ಕೋಟು ಹೊದ್ದುಕೊಂಡು, ಕೈ ದೊಣ್ಣೆಯಿಂದ ನೆಲವನ್ನು ಕುಟ್ಟಿ ಟಕ್ ಟಕ್ ಸದ್ದು ಮಾಡುತ್ತಾ ಸೀಟಿ ಊದಿಕೊಂಡು, ಪೋಲೀಸರು ಬರುವರು—ಗಸ್ತಿನ ಪೋಲೀಸರು.

ಇವರ ಬಗ್ಗೆ, ನಾನು ಯೋಚಿಸಬೇಕಾದ್ದಿರಲಿಲ್ಲ. ಆದರೆ, ಆ ಬಿ. ಎ. ಕಟ್ಟೆದ ಹುಡುಗನ ತಂದೆಯಾದ ಪೋಲೀಸು ಅಧಿಕಾರಿ, ಫೈಲು ಸಿದ್ಧವಾಗುತ್ತಿದೆ ಎಂದಿದ್ದನಲ್ಲವೆ? ಆ ಫೈಲು—........ಇನ್ನು ನಾನು ಮಹತ್ವದ ವ್ಯಕ್ತಿ. ನಾನು ಎತ್ತ ತಿರುಗಿದರೂ ಏನು ಮಾಡಿದರೂ, ತಮ್ಮ ಡೈರಿಯಲ್ಲಿ ಅದನ್ನು ಅವರು ಬರೆದಿಡುವರು—ತಾವು ಕಂಡರೆ, ತಮಗೆ ಗೊತ್ತಾದರೆ ಬರೆದಿಡುವರು. ಹೀಗೆ ನನ್ನ ಫೈಲು ದಪ್ಪ ದಪ್ಪನಾಗುತ್ತ ಹೋಗುವುದು.

ಇದೊಂದು ತಮಾಷೆ. ಆ ಫೈಲನ್ನು ಓದಿ ನೋಡಬೇಕೆಂಬ ಆಸೆ ನನಗೆ. ಬೇರೆಯವರು ನಮ್ಮನ್ನು ಕಾಣುವ ರೀತಿಯನ್ನು ತಿಳಿದುಕೊಳ್ಳುವುದರಲ್ಲೂ ಸ್ವಾರಸ್ಯವಿರುತ್ತದೆಯಲ್ಲವೆ?........

ನಡೆಯುತ್ತಾ ನಾನು ಆ ಹೈಸ್ಕೂಲಿನತ್ತ ಬಂದೆ. ಅಜ್ಜಿಯ ಮರಣದಿಂದ ನಿನ್ನೆಯವರೆಗೆ, ಎಷ್ಟೋ ಕಾಲ ಕಳೆದಿತ್ತು. ಆದರೆ ಎಲ್ಲವೂ ಏಕ ಪ್ರಕಾರವಾದ ದಿನಗಳು. ಕಾಲ ಕಳೆದಿತ್ತು,—ಆದರೆ ನನ್ನ ಜಗತ್ತು ಚಲಿಸಿರಲಿಲ್ಲ. ಈಗ ಮಾತ್ರ ನಾನು ಎಷ್ಟೊಂದು ದೂರ ಬಂದ ಹಾಗಾಯ್ತು—ಎಷ್ಟೊಂದು ದೂರ!

ನನಗೆ ಆಯಾಸವಾಗಿತ್ತು. ಆ ಹೈ ಸ್ಕೂಲಿನ ಆವರಣವನ್ನು ನಾನು ಹೊಕ್ಕೆ. ನಗರದ ಇನ್ನೊಂದು ಮೂಲೆಯಲ್ಲಿ, ಹಿಂದೆ ನಾನು ಓದುತ್ತಿದ್ದ ಹೈಸ್ಕೂಲಿತ್ತು. ಆದರೆ ಅಲ್ಲಿ ಓದು ಪೂರ್ಣವಾಗಿರಲಿಲ್ಲ. ಇಲ್ಲಿ ಈ ಹೈಸ್ಕೂಲಿನ ಜಗಲಿಯ ಮೇಲೆ, ಕೈ ತೋಳನ್ನೆ ದಿಂಬಾಗಿ ಮಾಡಿ ನಾನು ಮಲಗಿಕೊಂಡಾಗ, ಒಂದೊಂದು ತರಗತಿಯಲ್ಲೂ ಕಲಿತ, ವಿಧ ವಿಧದ ಪಾಠಗಳು ನೆನಪಿಗೆ ಬಂದುವು. ಒಂದು ಕಾಲ

ದಲ್ಲಿ ನಾನು ತರಗತಿಗೆ ಮೊದಲಿಗನಾಗಿದ್ದೆ—ಹಿರೇಮಣಿ ಈಗ........

ಮತ್ತೆ ಆ ಚೌಕದ ನೆನಪು........

ಆ ನೆನಪಿನಲ್ಲೇ ನಿದ್ದೆ........

ನಿದ್ದೆಯಲ್ಲಿ ನಾನು ಆಗ, ಗೊರಕೆ ಹೊಡೆಯುತ್ತಿದ್ದೆನೋ ಇಲ್ಲವೋ ತಿಳಿಯದು. ಅಮೀರ್ ಮತ್ತು ಶೀಲಾ ಗೊರಕೆಗಾಗಿ ನನ್ನನ್ನು ಎಂದೂ ಗೇಲಿ ಮಾಡಿದವರಲ್ಲ.

ನನ್ನ ಜೀವನದಲ್ಲಿ ಮತ್ತೊಂದು ರಾತ್ರಿ ಕಳೆದು ಬೆಳಗಾಯಿತು. ಅಲ್ಲಿಂದೆದ್ದು, ಬೀದಿಯುದ್ದಕ್ಕೂ ಉರಿಯುತ್ತಿದ್ದ ಸಿಗರೇಟಿನ ಜೊತೆ ಗೂಡಿ ನಡೆದು, ನಮ್ಮ ಮನೆ ಸೇರಿದೆ.

ನೆರೆಮನೆಯವರಿಗೆ, ನನ್ನನ್ನು ಮಾತನಾಡಿಸುವ ಆಸಕ್ತಿ ಇದ್ದಂತೆ ತೋರಲಿಲ್ಲ ಆ ದಿನವೇನೋ ನೀರು ಸೇದಲೆಂದು ಕೊಡ ಹಗ್ಗವನ್ನು ಎರವಲು ಪಡೆದೆ........ಇದೊಂದು ಮನೆಯಾಗಬೇಕಾದರೆ ಇಲ್ಲಿ ಕೆಲವು ಸಾಮಾನುಗಳಾದರೂ ಇರಬೇಕು. ಇಲ್ಲದೆ ಹೋದರೆ, ಹೈಸ್ಕೂಲಿನ ಜಗಲಿಯೂ ಒಂದೇ ಈ ಮನೆಯೂ ಒಂದೇ.

ಸೇವೆ ಮಾಡಿ ಚೋಟುದ್ದವಾಗಿದ್ದ ಪರಕೆಯೊಂದು, ಒಂದೆಡೆ ಕುಳಿತಿತ್ತು. ಅದನ್ನೆತ್ತಿಕೊಂಡು, ಮನೆಯನ್ನೆಲ್ಲಾ ಗುಡಿಸಿದೆ. ಈ ಮನೆಯ ಗೋಡೆಗಳಿಗೆ ಸುಣ್ಣ ಸಾರಿಸಿದರಾಗಬಹುದೆಂದು ತೋರಿತು ಅಜ್ಜಿ ನನಗೋಸ್ಕರ ಬಿಟ್ಟುಹೋದ ಈ ಮನೆ ಎಷ್ಟೊಂದು ವಿಶಾಲವಾಗಿಲ್ಲ! ಅಮೀರನೂ ಶೀಲಳೂ ಇದ್ದ ಆ ಗೂಡು?........ನನಗೊಬ್ಬನಿಗೇ ಇಷ್ಟೊಂದು ದೊಡ್ಡಮನೆ ಯಾಕೆ ಬೇಕು? ಆದರೆ ನನ್ನ ಜೀವನದಲ್ಲೂ ಯಾರಾದರೊಬ್ಬಳು ಶೀಲ—ಥೂ! ಧೂಳು ನನ್ನ ಮೂಗಿನ ಒಳಹೊಕ್ಕಿತ್ತು. ನಾನು ಸೀನಿದೆ. ಮೂಗಿನ ನೀರನ್ನು, ಅಲ್ಲೆ ಎಸೆಯಲು ಇಷ್ಟಪಡದೆ ಹಿತ್ತಿಲ ಬಾಗಿಲಿಗೆ ಹೋದೆ. ಅಲ್ಲಿ ಆ ಗುಡಿಸಲು ನಿಂತಿತ್ತು. ನಾನು ಬೆಳೆದು ದೊಡ್ಡವನಾದ, ದೊಡ್ಡವನಾದ ನನ್ನ ತಂದೆ ಬೆಳೆದು ಮುದುಕನಾದ, ಆ ಕೊಟ್ಟಿಗೆ. ಅಲ್ಲಿ ರುಕ್ಕೂ ಚಂದ್ರೂ ಎನ್ನುತ್ತಾ, ತಂದೆ ಸತ್ತಿದ್ದ........"ಚಂದ್ರೂ, ನೀನು ಆ ದಿವ್ಸ ಪಾಕೀಟು ಕದ್ದಿರಲಿಲ್ಲ ಅಲ್ವ? ಅಲ್ವ ಚಂದ್ರೂ?"........ ನನ್ನೆದೆ

ಒಂದೇ ಸಮನೆ ಹೊಡೆದುಕೊಳ್ಳುತ್ತಿತ್ತು. "ನಾನು, ಪಾಕೀಟು ಕದ್ದಿದೀನಿ ಅಪ್ಪಾ. ನಾನು ಪಾಕೀಟು ಕದ್ದಿದೀನಿ. ಅವತ್ತಲ್ಲ, ಈಗ. ಕದೀಬೇಕೂಂತ ನಾನಾಗಿ ಇಷ್ಟಪಡಲಿಲ್ಲ, ಆದರೆ ಬೇರೆ ಹಾದೀನೇ ಇರಲಿಲ್ಲ ಅಪ್ಪ. ದೊಡ್ಡ ಮನುಷ್ಯ ಆಗೋದು ಸಾಧ್ಯವಾಗಲಿಲ್ಲ ಅಪ್ಪ"........

........ನಾನು ಮುಖ ಮುಚ್ಚಿಕೊಂಡು ಒಳಕ್ಕೆ ಓಡಿದೆ. ಅಳಲಿಲ್ಲ. ನಾನು ಅಳುವುದು ಸಾಧ್ಯವೇ ಇರಲಿಲ್ಲ........ಹೊರಗೆ ತಂಗಾಳಿ ಬೀಸಿತು. ಬಲು ನಿಧಾನವಾಗಿ ಮನಸ್ಸಿನ ನೆಮ್ಮದಿ ಮರಳಿ ಬಂತು. ಮತ್ತೆ ದೀರ್ಘವಾದೊಂದು ಹಗಲು, ನೀಳವಾಗಿ ನನ್ನ ಮುಂದೆ, ಮೈ ಚಾಚಿ ಮಲಗಿತ್ತು. ಅದು ಮುಂಜಾವದಲ್ಲಿ ಕಾಣುವ ದೀರ್ಘವಾದ ಕರಿ ನೆರಳು. ಸಂಜೆಯೂ ಆ ನೆರಳು ಕಾಣಿಸುವುದು. ಆದರೆ ಅದು ಮೈ ಚಾಚಿದ ದೀರ್ಘವಾದ ಕತ್ತಲೆಯ ಸಂಕೇತ.

ಒಳ ಮನೆಯಲ್ಲಿ ತಣ್ಣನೆ ನೆಲದ ಮೇಲೆ ನಾನು ಮಲಗಿದೆ. ನುಣುಪಾಗಿತ್ತು ಆ ನೆಲ. ಪುಟ್ಟದಾದೊಂದು ನಯವಾದ ಕಲ್ಲನ್ನು ನೆಲದ ಮೇಲೆ ತೀಡಿ ತೀಡಿ ಸಾರಣೆ ಮಾಡಿ ಆ ನೆಲವೆಲ್ಲಾ ನುಣುಪಾಗುವ ಹಾಗೆ ಅಜ್ಜಿ ಮಾಡಿದ್ದಳು. ನೆಲವೂ ನುಣುಪಾಗಿತ್ತು. ತೀಡಿ ತಿಕ್ಕಿ ಆ ಕಲ್ಲೂ ನುಣುಪಾಗಿತ್ತು. ತೀಡಿ ತಿಕ್ಕಿ, ಸವೆದು ಹೋದ ಆ ಕಲ್ಲು ಮತ್ತು ಹಾಗೆಯೇ ಸವೆದು ಹೋದ ಆ ಜೀವ........

ಬರಿ ಹೊಟ್ಟೆಯಲ್ಲೇ ಮಲಗಿದ್ದೆನಾದರೂ ನಿದ್ದೆ ಬಂತು. ಎಚ್ಚೆತ್ತಾಗ, ನಡು ಹಗಲು ದಾಟಿರಬೇಕು........ಆ ಮೇಲೆ ಊಟದ ಬೇಟೆ. ಅಜ್ಜಿ ಮಾಡಿದ ಅಡುಗೆಯಲ್ಲ, ಶೀಲಳ ಕೈ ಅಡುಗೆಯಲ್ಲ. ಯಾವುದೋ ಅಯ್ಯರ್ ಮಾಣಿಯ ಹುಳಿ ಸಾರು. ಇಲ್ಲವೆ ಯಾವುದೋ ಮಲಬಾರು ಹುಡುಗನ ಬಿರಿಯಾಣಿ-ಚಾಪೀಸು.

ಹೇಗೋ ಹೊಟ್ಟೆ ತುಂಬಿಸಿಕೊಂಡೆ. ಕಳವಾಗಿದ್ದ ರೇಜರ್ ಸೆಟ್ಟಿನ ಬದಲು ಇನ್ನೊಂದನ್ನು ತಂದೆ. ಮತ್ತೆ ಮುಖ ಕ್ಷೌರ. ಆ ಪೋಷಾಕಿಗೆ ಕೈ ಇಸ್ತ್ರಿ. ಷೂಗಳಿಗೆ ಕಾಗದದ ಚೂರಿನಿಂದ ಧೂಳೊರೆಸುವ ಪಾಲೀಶು........

ತಡಮಾಡುವುದರಲ್ಲಿ ಅರ್ಥವಿರಲಿಲ್ಲ. ಉಪವಾಸ ಸಾಯು ವುದರಲ್ಲಂತೂ ಯಾವ ಅರ್ಥವೂ ಇರಲಿಲ್ಲ. ಕೂಲಿಯಾಗಿದ್ದು ಬಾಳ ಬೇಕಿತ್ತೆಂದು ನೀತಿ ಬೋಧಕರು ಹೇಳುವುದು ಸಾಧ್ಯ. ಆದರೆ ಕೂಲಿ ಯಾಗಿ ನನ್ನ ತಂದೆ, ಕ್ಷಯರೋಗ ಸಂಪಾದಿಸಿದ........ಆ ಸಂಪಾದನೆ ನನಗೆ ಇಷ್ಟವಿರಲಿಲ್ಲ. ಇಲ್ಲ, ಯಾವ ತೊಂದರೆಯೂ ಇಲ್ಲದೆ ನಾನು ಬಾಳಬೇಕು........

ನನ್ನ ಫೈಲನ್ನು ಸಿದ್ಧಗೊಳಿಸಿದ ಅಧಿಕಾರಿಯ ಕ್ಷೇತ್ರದಿಂದ ದೂರವಾಗಿ, ನಗರದ ಇನ್ನೊಂದು ಭಾಗದಲ್ಲಿ ಆ ಸಂಜೆ ಬೀಡು ಬಿಟ್ಟೆ. ಆ ಥಿಯೇಟರಿನ ಹೊರ ಭಾಗದಲ್ಲೆ, ಎಲ್ಲರೂ ನನಗೆ ಕಾಣುವ ಒಂದು ಜಾಗದಲ್ಲಿ ನಿಂತೆ. ಆರೂವರೆಗೆ ಆ ಇಬ್ಬರು ಜಟಕಾದಲ್ಲಿ ಬಂದಿಳಿ ದರು—ಹುಡುಗ ಮತ್ತು ಯುವತಿ. ಅಕ್ಕ ತಮ್ಮ ಇದ್ದ ಹಾಗಿದ್ದರು. ಮೂರೆಳೆಯ ಬಂಗಾರದ ಸರ ಬಲು ಮಾಟವಾಗಿ ಅವಳ ಕತ್ತಿನ ಸುತ್ತಲೂ ತೂಗಾಡುತ್ತಿತ್ತು. ಆ ಸರಕ್ಕಿಂತಲೂ ಹೆಚ್ಚಾಗಿ, ತನ್ನ ವಕ್ಷ ಸ್ಥಳದ ಪ್ರದರ್ಶನವೇ ಅವಳಿಗೆ ಮುಖ್ಯವಾಗಿತ್ತು. ಬಾರಿ ಬಾರಿಗೂ ಜಾರುತ್ತಿದ್ದ ಬೆಲೆ ಬಾಳುವ ರೇಶ್ಮೆ ಸೀರೆ. ಆಗರ್ಭ ಶ್ರೀಮಂತಿಕೆಯ ಸರಳತನವನ್ನು ತೋರುವ ತೆಳು ಚಪ್ಪಲಿ. ದೇಹ, ಎತ್ತರಕ್ಕೆ ಬೆಳೆ ಯುವುದನ್ನು ನಿಲ್ಲಿಸಿ ಸುತ್ತಲೂ ಜಾಗ ಆಕ್ರಮಿಸಿಕೊಳ್ಳತೊಡಗಿತ್ತು. ಊದಿಕೊಳ್ಳುತ್ತಿದ್ದ ಮುಖದಿಂದ ಕಾಡಿಗೆ ತುಂಬಿದ ಎರಡು ಕಣ್ಣುಗಳು ಬಲು ಆತುರದಿಂದ ಇದ್ದವರನ್ನೆಲ್ಲಾ ನೋಡುತ್ತಿದ್ದುವು. ಅಂಥ ವರ್ಗದ ಆ ಪಾತ್ರ ನನಗೆ ಅಪರಿಚಿತವಾಗಿರಲಿಲ್ಲ. ನಿಂತಲ್ಲಿಂದ ಮುಂದೆ ಬಂದು ಅವರ ಹಿಂಭಾಗದಲ್ಲೆ ನಡೆದು, ನಾನೂ ಅದೇ ಟಿಕೆಟು ಪಡೆದೆ. ಮೊದಲ ತರಗತಿಯ ಒಂದೂವರೆ ರೂಪಾಯಿ ಟಿಕೆಟು.

ತನ್ನ ಹಿಂದೆಯೇ ನಿಂತಿದ್ದ ನನ್ನನ್ನು ಆಕೆ ಅರೆ ಕ್ಷಣ ನೋಡಿ ದಳು. ಆ ತುಟಿಗಳು ಏನನ್ನೋ ಮಾತನಾಡಲು ಬಯಸುತ್ತಿದ್ದವು. ನಿನ್ನ ಸಂಕಟವನ್ನು ನಾನು ಬಲ್ಲೆ ಎನ್ನುವ ಹಾಗೆ, ಹೌದೋ ಅಲ್ಲವೋ ಅನ್ನುವಷ್ಟು ಸೂಕ್ಷ್ಮವಾಗಿ, ನಾನು ಮುಗುಳು ನಕ್ಕೆ.

ಅವರಿಬ್ಬರೂ ತಮ್ಮ ಸ್ಥಾನಗಳಲ್ಲಿ ಕುಳಿತರು. ಅವರ ಹಿಂದಿ

ದ್ದುದು ಒಂದೇ ಸಾಲು. ನಾನು ಅತ್ತ ನಡೆದೆ. ಅದೆಂತಹ ಚಿತ್ರವೋ ಏನೋ. ಬಾಲ್ಕನಿಯಲ್ಲಿ ಹೆಚ್ಚು ಜನರಿರಲಿಲ್ಲ. ನಾಲ್ಕಾರು ಜನ ಮುಖ ತಿರುಗಿಸಿ, ಚಿಕ್ಕ ಹುಡುಗಿಯ ಹಾಗೆ ಕಿಲಕಿಲನೆ ನಗುತ್ತಿದ್ದ ಈ ತಾಯಿಯನ್ನೆ ನೋಡುತ್ತಿದ್ದರು. ಆಕೆ ಅತ್ತ ಇತ್ತ ಕತ್ತು ತಿರುಗಿಸು ತ್ತಿದ್ದಳು. ಅವಳ ಕಟಾಕ್ಷ ಹಿಂಭಾಗದಲ್ಲೆ ಇದ್ದ ನನ್ನ ಮೇಲೂ ಬೀಳ ದಿರಲಿಲ್ಲ. ದೀಪ ಆರಿಕೊಂಡಿತು. ಚಿತ್ರದ ಆರಂಭ.

ಸಿಗರೇಟು ಹೊರ ತೆಗೆದು ಮುಖ ಬಾಗಿಸಿ, ನಾನು ಸೇದ ಬಹುದೆ? ಆಕ್ಷೇಪವಿಲ್ಲವಷ್ಟೆ? ಎಂದು ಇಂಗ್ಲಿಷಿನಲ್ಲಿ ಕೇಳಿದೆ.

" ಸೇದಿ, ಅದಕ್ಕೇನಂತೆ? ಏನು ಮಾಡೋದಕ್ಕೂ ನೀವು ಸ್ವತಂತ್ರರು."........

ಆ ಭಾಷೆ ನನಗೆ ಹೊಸದಾಗಿತ್ತು. ಆದರೆ ಅರ್ಥವಾಗುವುದು ತಡವಾಗಲಿಲ್ಲ........ಏನು ಮಾಡುವುದಕ್ಕೂ ನಾನು ಸ್ವತಂತ್ರ........

ಅವರು ತೆರೆಯ ಮೇಲಿನ ಚಿತ್ರಗಳನ್ನು ನೋಡುತ್ತಿದ್ದರು. ನಾನು ಆ ಶ್ರೀಮತಿಯ ಕತ್ತಿನ ಮೇಲ್ಲಿನ ಸರವನ್ನು ನೋಡುತ್ತಿದ್ದೆ. ದೃಷ್ಟಿ ಮತ್ತೂ ಅತ್ತಿತ್ತ ಚಲಿಸುತ್ತಿತ್ತು. ಆ ಬ್ಲೌಸಿನ ಆಕೃತಿ, ತೆರೆದು ನಿಂತ ಕೊರಳ ಭಾಗ, ಮತ್ತೂ ಕೆಳಗೆ—ಇಷ್ಟಿದ್ದರೂ ದೃಷ್ಟಿ ನನ್ನ ಹತೋಟಿಯನ್ನು ತಪ್ಪಿಹೋಗದೆ ಆ ಸರದ ಮೇಲೆಯೇ ಕುಳಿತಿತ್ತು. ಆ ಸರ....... ಅದರ ಸುಲಭವಾದ ಕೊಂಡಿ........ಅದಕ್ಕೆ ದೊರೆಯ ಬಹುದಾದ ಬೆಲೆ........ಇಂಥದನ್ನು ಮಾರಲು ಬೇಕಾಗುವ ಏರ್ಪಾಟು ........ಯೋಚನೆ ಮುಂದೆ ಧಾವಿಸಿದಾಗ ಮತ್ತೆ ಹಿಡಿದು ತಂದು ವಸ್ತು ಸ್ಥಿತಿಗೆ ನಿಲ್ಲಿಸುತ್ತಿದ್ದೆ. ಮೊದಲ ಕೆಲಸ ಮೊದಲು.

ಎಡ ಕಾಲ ಮೇಲೆ ವಿರಮಿಸಿದ್ದ ನನ್ನ ಬಲ ಕಾಲು ಆಕೆಯ ಕುರ್ಚಿಯ ಹಿಂಭಾಗದಲ್ಲಿ ಮೌನವಾಗಿ ನಿಶ್ಚಲವಾಗಿ ನಿಂತಿತ್ತು. ತನ್ನ ಮಗ ನೊಡನೆ ಮಾತನಾಡುತ್ತಿದ್ದ ಉತ್ಸಾಹದ ಭರದಲ್ಲಿ, ಒಮ್ಮೆ ಆಕೆ ಎಡ ಗೈಯನ್ನು ಹಿಂಭಾಗಕ್ಕೆ ಇಳಿಬಿಟ್ಟಳು. ಆ ಕೈ ನನ್ನ ಉಣ್ಣೆಯ ಪ್ಯಾಂಟನ್ನು ಸೋಂಕಿತು. ಅದು ಹತ್ತಿಯ ಬಟ್ಟೆಯಲ್ಲವೆಂದು ಅದಕ್ಕೆ ಸಮಾಧಾನವಾಯಿತೇನೋ? ನಾನು ಕಾಲನ್ನು ಚಲಿಸಲಿಲ್ಲ. ಆಕೆಯ

ಕ್ಕೆ ವಾಪಸು ಹೋಗಬಹುದೆಂದಿದ್ದೆ. ಅದು ಹೋಗಲೂ ಇಲ್ಲ........

........ನಿಮಿಷಗಳು ಕಳೆದುವು. ನಾನು ಇನ್ನೊಂದು ಸಿಗರೇಟು ಉರಿಸಿದೆ. ಬೇಕೆಂದೇ ಹೊಗೆಯನ್ನು ನೇರವಾಗಿ ಮುಂದಕ್ಕೆ ಉಗುಳಿದೆ. ಅವಳು ಉನ್ಮಾದಗೊಂಡವಳಂತೆ ತಲೆ ಕೊಂಕಿಸಿದಳು. "ಥೂ" ಎಂದು ಅಲ್ಲಿಂದ ಎದ್ದು ಹೋಗಬೇಕೆನಿಸಿತು........ಬೀದಿಯಲ್ಲಿ ಆ ದಿನ ಧರ್ಮರಕ್ಷಕರ ಹೊಡೆತಗಳನ್ನು ಸಹಿಸಲಾರದೆ ಬಿದ್ದಿದ್ದ ಆ ಮುಗ್ಧ ಜೀವ. .....ಸಮಾಜದ ದೃಷ್ಟಿಯಲ್ಲಿ ಆಕೆ ಪಾಪಿ. ಆದರೆ ನನ್ನ ಪ್ಯಾಂಟನ್ನು ಸೂಕ್ಷ್ಮವಾಗಿ ಮುಟ್ಟಿ ನೋಡುವ ಈ ಹೆಣ್ಣು ಮೃಗ, ಸಮಾಜದಲ್ಲಿ ಪ್ರತಿಷ್ಠಿತರಾದ ಯಾರೋ ದೊಡ್ಡ ಮನುಷ್ಯರ ಮಗಳು........

ಅಂತೂ ವಿರಾಮದ ವೇಳೆ ಬಂತು. ಆಗ ಆ ಕೈ ಮುಂದಕ್ಕೆ ಸರಿಯಿತು. ದೀಪದ ಬೆಳಕಿನಲ್ಲಿ ಅವಳು ತಲೆ ಕೊಂಕಿಸಿ, ನನ್ನನ್ನೊಮ್ಮೆ ನೋಡಿದಳು. ಆ ಮುಖದಲ್ಲಿ ಅಸಮಾಧಾನ ತುಂಬಿತ್ತು. ನಾನು, ಅರ್ಧ ಮುಚ್ಚಿದ ಎವೆಗಳೆಡೆಯಿಂದ, ಅವಳನ್ನೆ ನೋಡಿದೆ.

ಮತ್ತೊಮ್ಮೆ ದೀಪ ಆರಿತು. ಅದನ್ನೆ ಕಾದಿದ್ದವಳ ಹಾಗೆ ಆಕೆ ಕೈಯನ್ನು ಹಿಂದಕ್ಕೆ ಇಳಿಬಿಟ್ಟಳು. ನಾನು ಮುಂದಕ್ಕೆ ಕೊಂಚ ಬಾಗಿದೆ. ಆ ಭುಜವನ್ನು ನನ್ನ ಬಲಗೈ ಸೋಂಕಿತು. ಬಲು ನಿಧಾನವಾಗಿ ಕಳೆದ ಕೆಲವು ನಿಮಿಷಗಳು........ಬಿಸಿಯುಸಿರು ಬಿಡುತ್ತಿದ್ದ ಆ ಜೀವಕ್ಕೆ ರವಕೆಯ ಮೇಲಿನಿಂದ ಸರ ಹರಿದು ಹೋದ ಸಪ್ಪಳ ಕೇಳಿಸಲಿಲ್ಲವೇನೊ? ಹರಿದಾಟದ ಅನುಭವವಾಗಲಿಲ್ಲವೇನೊ? .......ನಾನು ಮತ್ತೆ ನಾಲ್ಕು ನಿಮಿಷಗಳಾದ ಮೇಲೆ ಹಿಂದಕ್ಕೆ ಸರಿದೆ. ಮತ್ತೊಂದು ಸಿಗರೇಟು. ನನ್ನ ಮುಖ ಸ್ವಲ್ಪ ಬೆವತಿತ್ತು. ಬೆವರು ಆರುವವರೆಗೂ ಅಲ್ಲೆ ಕುಳಿತೆ. ಆ ಮೇಲೆ ಕೃತಕವಾಗಿ ಒಂದೇ ಸಮನೆ ಕೆಮ್ಮಿದೆ, ಕೆಮ್ಮು ಉಗುಳಲು ಹೊರಟವನ ಹಾಗೆ ಬಲು ನಿಧಾನವಾಗಿ, ನಡೆದು ಹೊರ ಹೋದೆ. ನನ್ನ ಪಾಲಿನ ಚಲಚ್ಚಿತ್ರ ಆ ದಿನದ ಮಟ್ಟಿಗೆ ಮುಕ್ತಾಯವಾಗಿತ್ತು.

ಅಲ್ಲಿಂದ ಮನೆಗೆ ಜಟಕ ಬಲು ವೇಗವಾಗಿ, ನನ್ನನ್ನು ಹೊತ್ತು ತಂದಿತು. ಜಟಕಾದ ಸಾಬಿ, 'ಸಾಹೇಬರೇ' 'ಸಾಹೇಬರೇ'

ಎಂದು ನನ್ನನ್ನು ಗೌರವಿಸುತ್ತಿದ್ದ. ಅವನ ಪಾಲಿಗೆ ನಾನೊಬ್ಬ ಅಮಾರನಾದ ವ್ಯಕ್ತಿ. ಕುಡಿದು, ಗಂಭೀರನಾಗಿದ್ದವನ ಸೋಗು ಹಾಕಿ, ನಾನು ನಮ್ಮ ಹಿಂದೆ ಹಾದು ಹೋದ ದೀಪದ ಕಂಬ ಗಳನ್ನು ಎಣಿಸಿದೆ—ಜನರನ್ನು ಎಣಿಸಿದೆ.

ಮನೆ ಸೇರಿದ ಮೇಲೆ, ಮಲಗುವ ಯೋಚನೆ. ನಾನು ಹಿತ್ತಿಲ ಬಾಗಿಲು ತೆರೆದು ಆ ಕೊಟ್ಟಿಗೆಯ ಮುಖ ನೋಡಲಿಲ್ಲ........ಹಾಸಿ ಕೊಳ್ಳಲು ನನ್ನಲ್ಲಿ ಬಟ್ಟೆ ಚೂರಿರಲಿಲ್ಲ. ಹೊದ್ದುಕೊಳ್ಳಲೂ ಇರಲಿಲ್ಲ. ನಾಳೆಯೇ ಅಷ್ಟನ್ನೂ ಕೊಂಡು ತರಬೇಕು........ ಹೊಸ ದೀಪ, ಎಣ್ಣೆ, ಕೊಡ ಹಗ್ಗ, ಬಟ್ಟೆ ಬರೆ—ಇವೆಲ್ಲವನ್ನೂ ಭದ್ರವಾಗಿಡಲು ಬೀಗ. ಇವಿಷ್ಟನ್ನೂ ಹೊಸದಾಗಿ ತರಬೇಕು. ಅದಕ್ಕೆ ಹಣ?........ತಡ ಮಾಡದೆ ಆ ಸರವನ್ನು ನಾನು ಮಾರಬೇಕು.

........ಆ ಮಾರಾಟ ಸುಲಭವಾಗಿರಲಿಲ್ಲ. ನನ್ನ ಪಾಲಿಗೆ ಅಂತಹ ಮಾರಾಟ ಹೊಸದು. ಬೊಂಬಾಯಲ್ಲಿ ಆ ರೀತಿಯ ಕೆಲಸ ಕಾರ್ಯಗಳನ್ನು ಅಮಾರ ವಹಿಸಿಕೊಳ್ಳುತ್ತಿದ್ದ. ಆದಕ್ಕೆ ಬಲು ಭದ್ರ ವಾದ ವ್ಯವಸ್ಥೆಯಿತ್ತು. ಎಂತಹ ವಸ್ತುವೂ ಒಂದೆರಡು ಗಂಟೆಗಳ ಹೊತ್ತಿನೊಳಗಾಗಿ ಹಣವಾಗಿ ಮಾರ್ಪಡುತ್ತಿತ್ತು. ತಡವಾಗುವ ಲಕ್ಷಣವಿದ್ದರೆ, ಸ್ವಲ್ಪ ಹಣ ಮುಂಗಡವಾಗಿ ದೊರೆಯುತ್ತಿತ್ತು. ನಮ್ಮ ಊರು ಬೊಂಬಾಯಿಯಲ್ಲ. ಕಳ್ಳತನ ಇಲ್ಲಿ ಯಾವತ್ತೂ ಇರಲಿಲ್ಲ ವೆಂದಲ್ಲ. ಆದರೆ ಇಲ್ಲಿನ ಕಳ್ಳರಿಗೆ, ಆಧುನಿಕ ವ್ಯವಹಾರ ಚಾತುರ್ಯ ಗಳು ತಿಳಿದಿರಲಿಲ್ಲ.

ಹೀಗೆ ಬಲು ತೊಡಕಿನ ಸಮಸ್ಯೆಯನ್ನು ಮರುದಿನ ನಾನು ಎದುರಿಸಬೇಕಾಯಿತು. ಅಂಗಡಿ ಬೀದಿಗಳಲ್ಲಿ, ಎರಡು ಸಾರೆ ಬಲು ನಿಧಾನವಾಗಿ ನಡೆದು ಹೋದೆ. ಸರಾಫ ಕಟ್ಟೆಯ ಅಂಗಡಿಗಳಿಗೆ ಎರಡು ಸುತ್ತು ಬಂದೆ. ಹಣ ಸಾಲ ಕೊಡುವ ಮಾರವಾಡಿಗಳನ್ನೂ ದೂರದಿಂದ ಪರೀಕ್ಷಿಸಿದೆ. ಯಾವ ಆಧಾರದ ಬೆಂಬಲವೂ ಇಲ್ಲದೆ, ನಾನು ಹೆಜ್ಜೆಯನ್ನು ಮುಂದಿಡಬೇಕಾಗಿತ್ತು. ಸಾಮಾನ್ಯವಾಗಿ ಇಂಥ ವರಲ್ಲಿ ನ್ಯಾಯವಾದಿಗಳು ಯಾರೂ ಇಲ್ಲವೆಂಬುದನ್ನು ನಾನು ತಿಳಿದಿದ್ದೆ.

ಆದರೂ ಆಕಸ್ಮಿಕವಾಗಿ ತಪ್ಪು ಹೆಜ್ಜೆಯನ್ನಿಟ್ಟೆನೆಂದರೆ, ಅಪಘಾತ ವಾಗುವುದು.

ಕೊನೆಗೆ ವಿವಿಧ ವ್ಯಕ್ತಿಗಳ ಸ್ವರೂಪ ನಿರೀಕ್ಷಣೆ ಮಾಡಿದ ಮೇಲೆ, ಆ ನಂಬುಗೆಯ ಆಧಾರದ ಮೇಲೆ, ಒಬ್ಬಿಬ್ಬರನ್ನು ನಾನು ಆರಿಸಿದೆ. ತೊಂದರೆಯಾದರೆ ತಪ್ಪಿಸಿಕೊಳ್ಳುವ ಅನುಕೂಲತೆ ಇರಲೆಂದು, ಇತರ ಅಂಗಡಿಗಳಿಗಿಂತ ಸ್ವಲ್ಪ ದೂರವಾಗಿಯೇ ಇದ್ದ ಚಿನ್ನ ಬೆಳ್ಳಿ ವ್ಯಾಪಾರಿಯೊಬ್ಬನ ಅಂಗಡಿಯೊಳಕ್ಕೆ ನಾನು ಕಾಲಿರಿಸಿದೆ.

ಮಧ್ಯಾಹ್ನದ ಹೊತ್ತು. ಇದ್ದ ಒಬ್ಬನೇ ಗಿರಾಕಿ ಹೊರಟುಹೋಗ ಲೆಂದು, ಗಾಜಿನ ಬೀರುಗಳಲ್ಲಿದ್ದ ಆಭರಣಗಳನ್ನು ನೋಡುತ್ತಾ ನಿಂತೆ. ಆ ಗಿರಾಕಿ, ಹೊರಟೊಡನೆಯೇ ಸಹಾಯಕ ಹುಡುಗ ನನ್ನಬಳಿಗೆ ಬಂದ. ಯಾರಿಗೂ ತಿಳಿಯದ ಹಾಗೆ, ತುಟಿಯೊಣಗದಂತೆ ತೇವ ಬರಿಸಿಕೊಂಡೆ. ಅಂಗಡಿಯ ಯಜಮಾನ ದೂರದಲ್ಲಿ ಕುಳಿತು ನನ್ನನ್ನು ನಿರೀಕ್ಷಿಸುತ್ತಲಿದ್ದ.

ಹುಡುಗ, ಬಾಯ್ದೆರೆಯುವುದಕ್ಕೆ ಮುಂಚೆಯೇ, "ಒಂದಿಷ್ಟು ನೆಕ್‌ಲೇಸು ತೋರ್ಸಪ್ಪಾ" ಎಂದೆ.

ಯಜಮಾನ ಅದೆಷ್ಟು ಸೂಕ್ಷ್ಮವಾಗಿ ನನ್ನನ್ನು ನೋಡುತ್ತಿ ದ್ದನೊ ಏನೋ? ಕುಳಿತಿದ್ದಲ್ಲಿಂದ ಎದ್ದು ಬಂದ.

ಹುಡುಗ, ನನ್ನೆದುರು ಎರಡು ಮೂರು ಕೇಸುಗಳನ್ನು ಬಿಚ್ಚಿಟ್ಟು ಒಳ ಹೋದ. ನಾನು ಬೀದಿಗೆ ಮರೆಯಾಗಿದ್ದೆ. ಆ ಯಜಮಾನ ಪರೀಕ್ಷಕನ ದೃಷ್ಟಿಯಿಂದ ನನ್ನನ್ನು ನೋಡಿದ.

"ಸರ ಉಡುಗೊರೆ ಕೊಡೋಕೆ ಬೇಕಾಗಿತ್ತಾ?"

"ಹೌದು, ನೀವೇ ಚೆನ್ನಾಗಿರೋದು ಸೂಚಿಸಿ."

ನನಗೆ, ಇಂತಹ ಆಭರಣಗಳ ಪರಿಚಯವಿರಲಿಲ್ಲವೆಂಬುದು ಆ ಸೂಕ್ಷ್ಮಗ್ರಾಹಿಗೆ, ನನ್ನ ನೋಟದಿಂದಲೇ ತಿಳಿದುಹೋಗಿರಬೇಕು. ನಾನು ಕೋಟಿನ ಒಳಜೇಬಿಗೆ ಕೈ ಹಾಕಿದೆ. ಆ ಯಜಮಾನ ಅದನ್ನು ನೋಡಿದ.

"ಯಾವುದಾದ್ರೂ ಪ್ಯಾಟರ್ನ್ ಇದೆಯೇನು? ತೋರಿಸಿ.

ಬೇಕಿದ್ರೆ ಅಂಥದೇ ಹುಡುಕೋಣ."

ನನ್ನ ಬೆರಳುಗಳು ಬೆವರತೊಡಗಿದ್ದುವು. ಮತ್ತೆ ನನಗೆ ನಾನೆ ಧೈರ್ಯ ತಂದುಕೊಂಡೆ. ಇಂತಹ ಘಟ್ಟಗಳನ್ನು ನಾನು ದಾಟಲೇ ಬೇಕು. ದಾಟಿ ಮುಂದುವರೆಯಲೇ ಬೇಕು. ನೀರಿಗೆ ಹಾರಿದ ಮೇಲೆ ಈಸು ಬರುವುದಿಲ್ಲವೆಂದು ಹೇಳಿಕೊಳ್ಳುವುದರಲ್ಲಿ ಅರ್ಥವಿಲ್ಲ. ಈಸಿ ಜಯಿಸಬೇಕು ; ಇಲ್ಲವೆ ಮುಳುಗಬೇಕು.

ನಾನು ತಡಮಾಡದೆ ಸರವನ್ನು ಹೊರ ತೆಗೆದೆ. ಆತನ ತಿಳಿ ವಳಿಕೆಯ ಕಣ್ಣುಗಳು ನೋಟದಲ್ಲೆ ಆ ಆಭರಣವನ್ನು ತೂಗಿ ನೋಡುತ್ತಿದ್ದವು.

"ಇದನ್ನ ಮಾರ್ತೀನಿ. ಕೊಂಡ್ಕೋತೀರೇನು ?"

ಅಷ್ಟು ಹೇಳಿದ ಮೇಲೆ ಸರಾಗವಾಗಿ ಉಸಿರು ಬಿಡಲು ನನಗೆ ಸಾಧ್ಯವಾಯಿತು. ಬಂದ ಕೆಲಸದಲ್ಲಿ ಅರ್ಧವನ್ನು ನಾನು ಪೂರೈಸಿದ್ದೆ.

ಆತ ಆಶ್ಚರ್ಯವನ್ನೇನೂ ವ್ಯಕ್ತಪಡಿಸಲಿಲ್ಲ. ಗಂಭೀರವಾಗಿ ನೇರವಾಗಿ ನನ್ನನ್ನು ನೋಡಿದ. ಆ ದೃಷ್ಟಿಯನ್ನು ಇದಿರಿಸುವ ಸಾಮರ್ಥ್ಯ ನನಗೆ ಆಗ ಇರಲಿಲ್ಲ. ಕಾಲುಗಳು ಕುಸಿಯುತ್ತಿದ್ದಂತೆ ಭಾಸವಾಯಿತು. ಎದುರಿಗಿದ್ದ ನಿಲುವುಗನ್ನಡಿಯಲ್ಲಿ ನನ್ನ ಪ್ರತಿಬಿಂಬ ಕಾಣಿಸಿತು. ನನಗೇನೂ ಆಗಿರಲಿಲ್ಲ. ಹೊರಗಿನ ನೋಟಕ್ಕೆ ಪ್ರಶಾಂತನಾಗಿಯೇ ಆ ಕನ್ನಡಿಯಲ್ಲಿ ನಾನು ಕಾಣಿಸುತ್ತಿದ್ದೆ.

"ಇದು ನಿಮ್ಮದೇ ಏನು" ?

ಆತ ಘಾಟಿ ಆಸಾಮಿ. ನನ್ನ ಪರೀಕ್ಷೆಗೆ ಅದು ಆರಂಭ.

"ಏನೆಂದಿರಿ ?"

"ಇದು ನಿಮ್ಮದೆ ಎಂದು ಕೇಳಿದೆ."

ನಾನು ನಗಲು ಯತ್ನಿಸಿದೆ.

"ಬೇರೊಬ್ಬರದನ್ನ ಮಾರೋದಕ್ಕೆ ತರ್ತಾರೇನು ? ಎಂಥ ಮಾತು !"

"ಕ್ಷಮಿಸಿ. ನಿಮ್ಮದೇ ಅಂದರೆ ನಿಮ್ಮ ಸ್ವಂತದ್ದೇ ಅಥವಾ ಮನೆಯವರದೇ ಅಂತ ಕೇಳಿದೆ. ಲೇಡೀಸ್ ಚೈನ್ ಇದ್ದ ಹಾಗಿದೆ,

ಅದಕ್ಕೆ."

ಆತ, ನಾನು ಎಣಿಸಿದುದಕ್ಕಿಂತ ಹೆಚ್ಚು ಚತುರನಾಗಿದ್ದ.

"ಹಾಗೊ? ಇದು ನನ್ನ ತಂಗೀದು."

ಬೀದಿಯ ಕಡೆ ಗಮನದ ದೃಷ್ಟಿಯನ್ನಿಡುತ್ತಾ ನಾನು ಮತ್ತೊಮ್ಮೆ ಕೇಳಿದೆ.

"ಕೊಂಡ್ಕೋತೀರೇನು?"

"ತುಂಬಾ ಅವಸರದಲ್ಲಿದೀರಾ? ಸಾವಧಾನವಾಗಿ ಮಾತಾಡೋಣ. ಬನ್ನಿ ಒಳಕ್ಕೆ ಬನ್ನಿ."

ಒಂದು ಕ್ಷಣ ಏನು ಮಾಡಬೇಕೋ ತಿಳಿಯಲಿಲ್ಲ. ಆದರೆ ಯೋಚಿಸಲು ಅಲ್ಲಿ ಅವಕಾಶವಿರಲಿಲ್ಲ. ಅವನನ್ನು ಹಿಂಬಾಲಿಸಿದೆ. ಒಳಗಿನ ಕೋಣೆಯಲ್ಲಿ ಎರಡು ಕುರ್ಚಿಗಳಿದ್ದವು. ನಡುವೆ ಮೇಜಿನ ಅಂತರದಲ್ಲಿ ನಾವು ಕುಳಿತೆವು.

ಆತ ಒರೆಗಲ್ಲನ್ನು ತೆಗೆದು ಸರವನ್ನು ತೀಡಿ ತೀಡಿ ಪರೀಕ್ಷಿಸಿದ, ಕ್ಷಣಕಾಲ. ನಾನು ಸರಿಯಾದ ಜಾಗಕ್ಕೇ ಬಂದಿದ್ದೆ. ಸಾವಕಾಶವಾಗಿ ಮಾತಾಡಲು ಅಪೇಕ್ಷಿಸಿದ್ದ ಯಜಮಾನ, ವಾಸ್ತವವಾಗಿ ನನ್ನಷ್ಟೇ ಆತುರವಾಗಿದ್ದ.

"ಮಿಸ್ಟರ್, ನೀವು ಹೆಚ್ಚು ಹೇಳಬೇಕಾದ್ದಿಲ್ಲ. ಈಗ, ನಿಮ್ಮ ಭವಿಷ್ಯತ್ತು ನನ್ನ ಕೈಲಿದೆ. ಈ ಸರವನ್ನು ನಾನು ಬಲ್ಲೆ. ಏನು ಹೇಳುತ್ತೀರಿ?"

"ನಿಮ್ಮ ಪಾಟೀ ಸವಾಲು ಅರ್ಥವಾಗ್ತಾ ಇಲ್ಲ. ಏನು ನಿಮ್ಮ ಉದ್ದೇಶ?"

"ಬಾಯಿ ಬಿಟ್ಟು ಹೇಳ್ಬೇಕೇನು? ನಿಮ್ಮನ್ನ ಪೋಲೀಸರಿಗೆ ಒಪ್ಪಿಸಬಲ್ಲೆ."

"ಓ! ಪ್ರಾಯಶಃ ನಿಮಗೆ ನನ್ನ ಪರಿಚಯವಿಲ್ಲ. ಪೋಲೀಸರೂ ನಾನೂ ಹಳೆಯ ಸ್ನೇಹಿತರು."

ಆತ ಮುಗುಳ್ನಕ್ಕ. ನಾನು ಮತ್ತೊಮ್ಮೆ ಬೀದಿಯ ಕಡೆ ನೋಡಿದೆ.

"ಗಾಬರಿಯಾಗಬೇಡಿ. ನಿಮ್ಮಂಥ ಸದ್ಗೃಹಸ್ಥರನ್ನು ಪೋಲೀಸರಿಗೆ ಒಪ್ಪಿಸೋಕೆ ನಾನೇನು ಮೂರ್ಖನೆ?"

ಸದ್ಗೃಹಸ್ಥನಾದ ನಾನು ಏನು ಉತ್ತರ ಕೊಡಬೇಕೊ ತಿಳಿಯಲಿಲ್ಲ. ಆತನೇ ಹೇಳಿ:

"ನೀವು ಯಾರೇ ಆಗಿರಿ. ಅದು ನನಗೆ ಮುಖ್ಯವಲ್ಲ. ನಮ್ಮ ಗಿರಾಕಿಯಾಗಿ ಯಾವಾಗಲೂ ಬನ್ನಿ. ನಿಮಗೆ ಸ್ವಾಗತ ಇದ್ದೇ ಇದೆ."

ಆತ ನೂರರ ಎರಡು ನೋಟುಗಳನ್ನು ಹೊರ ತೆಗೆದು ಮೇಜಿನ ಮೇಲಿಟ್ಟ.

"ನಾನ್ನೂರು" ಎಂದೆ ನಾನು.

"ಚರ್ಚೆ ಬೇಡಿ."

"ಅದು ಸರಿಯಲ್ಲ. ಹೊಸ ಪರಿಚಯ ಆಗೋ ರೀತಿ ಹೀಗಲ್ಲ."

ಆತ ಹತ್ತು ರೂಪಾಯಿಗಳ ಐದು ನೋಟುಗಳನ್ನು ಮತ್ತೆ ಎಣಿಸಿ, ಮೇಜಿನ ಮೇಲಿಟ್ಟ.

"ತೃಪ್ತಿಯಾಯಿತೋ?"

"ಇಲ್ಲ."

"ಅಪ್ಪಾ. ನೀವಿನ್ನೂ ಹುಡುಗ. ತಿಳಿವಳಿಕೆಯಿಲ್ಲದೆ ಹೀಗೆ ಚಂಡಿತನ ಮಾಡ್ಬೇಡಿ. ಅಪಾಯಾನ ಹಂಚಿಕೋ ಬೇಕಾದರೆ ಲಾಭಾನೂ ಹಾಗೆಯೇ ಹಂಚಿಕೋ ಬೇಕು."

"..............."

ನಾನು ನೋಟುಗಳನ್ನು ಜೇಬಿನೊಳಕ್ಕೆ ತುರುಕಿದೆ. ಆ ಸರ ಕಾಣಿಸಲೇ ಇಲ್ಲ. ಆತನ ಕೈ ಬೆರಳುಗಳ ಎಡೆಯಿಂದ ಇಳಿದು ಅದೆಲ್ಲಿಗೋ ಮಾಯವಾಗಿತ್ತು.

ಆತ ನನ್ನನ್ನು ಬೀಳ್ಕೊಡಲೆಂದು ಬಾಗಿಲವರೆಗೂ ಬಂದು ಬರುತ್ತಾ ಗಟ್ಟಿಯಾಗಿ ಹೇಳಿದ.

"ನಿಮಗೆ ಬೇಕಾದ ಸರ ಮಾಡ್ಸಿ ಇಟ್ಟಿರ್ತೀವಿ. ನೀವು ಯಾವತ್ತು ಬೇಕಾದರೂ ಬನ್ನಿ."

"ಸರಿ."

" ನಿಮ್ಮ ಹೆಸರು ? "

ಮತ್ತೊಮ್ಮೆ ನನ್ನ ನಾಲಿಗೆ ಸರಳವಾಗಿ ಮಗುಚಿತು.

" ರಾಘವ."

ಆತ ಮುಗುಳ್ನಕ್ಕ. ಅದು ಸುಳ್ಳಿರಬಹುದೆಂದು ಅವನು ತಿಳಿದು ಕೊಂಡನೇನೋ.

ಇನ್ನೂರ ಐವತ್ತು ರೂಪಾಯಿಗಳ ಒಡೆಯನಾಗಿ ನಾನು ಬೀದಿಗಳಲ್ಲಿ ಸುತ್ತಾಡಿದೆ. ಮನೆ ತುಂಬಿಸುವ ಸದ್ಗೃಹಸ್ಥನಾಗಿ, ನಾನು ಸಾಮಗ್ರಿಗಳನ್ನು ಕೊಂಡುಕೊಂಡೆ. ನನಗೆ ನೂರು ರೂಪಾಯಿಯ ನೋಟಿಗೆ ಚಿಲ್ಲರೆ ಕೊಡಲು ಯಾವ ಅಂಗಡಿಯವರೂ ಹಿಂಜರಿಯಲಿಲ್ಲ. ನನ್ನ ನಡೆ ನುಡಿ, ನನ್ನ ದೊಡ್ಡಸ್ತಿಕೆಗೆ ಸಾಕ್ಷಿಗಳಾಗಿದ್ದವು.

ಹೀಗೆ ಜೀವನದ ಅಧ್ಯಾಯದೊಂದು ಹಾಳೆ ಮುಗುಚಿಕೊಂಡಿತು.

ಎಷ್ಟೋ ದಿನಗಳ ಮೇಲೆ, ಮನಸ್ಸಿನ ಚಿಂತೆ ನನ್ನನ್ನು ಕೊರೆದುದುಂಟು. ಅದು ಕ್ಷಣಿಕ ಮಾನಸಿಕ ದೌರ್ಬಲ್ಯಕ್ಕೆ ತುತ್ತಾದಾಗ. ಬೊಂಬಾಯಿಯ ಬೀದಿಯ ಬದಿಗಳಲ್ಲಿ ಬಾಯ್ತೆರೆದು ಮಲಗಿದ್ದಾಗ ಹಸಿವು ಎಷ್ಟು ಕ್ರೂರವೆಂಬುದನ್ನು ನಾನು ಪೂರ್ಣವಾಗಿ ಮನಗಂಡಿದ್ದೆ. ಬಡತನವನ್ನು ಎಲ್ಲರೂ ತುಚ್ಛೀಕರಿಸುತ್ತಿದ್ದರು. ಬಡವ, ಮಾನವಂತನಾಗಿ ಬಾಳ್ವೆ ನಡೆಸುವುದು ಬರಿಯ ಭ್ರಮೆಯಾಗಿತ್ತು. ಹಸಿವೆಯಿಂದ ತೊಳಲಾಡಲು ನಾನೆಂದೂ ಇಚ್ಛಿಸಲಿಲ್ಲ. ನಾನು ದ್ವೇಷಿಸುತ್ತಿದ್ದ ಬಡತನದಲ್ಲಿ ನರಳಲು ಎಂದೂ ಅಪೇಕ್ಷಿಸಲಿಲ್ಲ.

ಕಾವೇರಮ್ಮನ ಔಷಧಿ ಚೀಟಿ. ಆ ಚಿಲ್ಲರೆ ರೂಪಾಯಿ ಆಣೆಗಳು ........ಆ ದಿನ ನನ್ನ ಮನಸ್ಸಿಗೆ ನೆಮ್ಮದಿಯೇ ಇರಲಿಲ್ಲ. ಆದರೆ, ಮಾನವತೆಯ ಗಡಿ ದಾಟಿ ಮೃಗವಾಗಿ ಮಾರ್ಪಡುತ್ತಿದ್ದ ಶ್ರೀಮಂತ ಯುವತಿಯೊಬ್ಬಳಿಂದ ಆ ಹಾರವನ್ನು ನಾನು ಕೈವಶಪಡಿಸಿಕೊಂಡಿದ್ದೆ. ಅದು ಸರಿಯೆ ? ತಪ್ಪೆ ? ಆ ಹಾರ ಅವಳಿಗೆ ಹೇಗೆ ದೊರಕಿತು ? ಆಕೆಯ ಅಪ್ಪ ಬೇರೆ ಯಾರನ್ನೋ ನೂರಾರು ಜನರನ್ನು ಸುಲಿದುದರ ಫಲವೇ ಅಲ್ಲವೆ? ಅಂಥ ಸುಲಿಗೆಯ ವಸ್ತುವನ್ನು ನಾನು ಎತ್ತಿ ಹಾಕಿದ್ದು ತಪ್ಪೆ ?

ಈ ರೀತಿಯ ಮಾನಸಿಕ ತುಮುಲ ಯಾವಾಗಲೂ, ನಾನೇ ಸರಿ ಎಂಬ ತೀರ್ಮಾನದಲ್ಲೆ ಪರ್ಯವಸಾನವಾಗುತ್ತಿತ್ತು.

ಉದ್ಯೋಗವಿಲ್ಲದ ಸಂಪಾದನೆಯಿಲ್ಲದ ಯುವಕನೊಬ್ಬ, ಒಬ್ಬಂಟಿಗನಾಗಿ ಒಂದು ಮನೆಯಲ್ಲಿ ಜೀವಿಸುವುದೆಂದರೇನು? ಪ್ರಾಯಶಃ ಅಜ್ಜಿ ಉಳಿಸಿ ಹೋಗಿದ್ದ ಹೇರಳವಾದ ಆಸ್ತಿ ಈತನ ಕೈ ಸೇರಿರಬೇಕು.— ಇದೀಗ ನಾಲ್ಕು ಜನ ಆಡಿಕೊಂಡ ಮಾತು.

ಅದೊಂದು ಸಂಜೆ, ಬಿಳಿಯ ಷರಟು ತೊಟ್ಟು ಶುಭ್ರವಾದ ಬೂದು ಬಣ್ಣದ ಪ್ಯಾಂಟು ಧರಿಸಿ, ಉಣ್ಣೆಯ ಮೇಲಂಗಿಯನ್ನು ಅಲಂಕಾರವಾಗಿ ಭುಜದ ಮೇಲಿರಿಸಿ, ಕನ್ನಡಿಯಂತೆ ಮಿನುಗುತ್ತಿದ್ದ ಷೂ ಮೆಟ್ಟಿಕೊಂಡು, ನಾನು ಮಾರ್ಕೆಟ್ಟಿನ ಚೌಕದಲ್ಲಿ ನಿಂತಿದ್ದೆ.

ಸಂಜೆಯ ಜನ ಜಂಗುಳಿಯನ್ನು ನೋಡುತ್ತಲಿದ್ದರೆ, ನನ್ನ ಪಾಲಿಗೆ ಯಾವಾಗಲೂ ಅದೊಳ್ಳೆಯ ಮನೋರಂಜನೆಯಾಗುತ್ತಿತು. ಮನೆಗಳಿಂದ ಹೊರಡಲು ಇಚ್ಛಿಸಿದ ಹೆಂಡಿರೊಡನೆ, ನಾಲ್ಕಾರು ಅಂಗಡಿಗಳ ಮೆಟ್ಟಲೇರಿ ಇಳಿಯುವ ಗಂಡಸರು. ಯಾವಾಗಲೂ ಅವಸರ ಅವಸರವಾಗಿ ಆಫೀಸುಗಳಿಂದ ಮನೆಗೆ ಹಿಂತಿರುಗುವ ನಿತ್ಯ ಕರ್ಮಿಗಳು. ತಮ್ಮಷ್ಟಕ್ಕೆ ತಾವು ಜನ ಸಮೂಹದೆಡೆಯಿಂದ ನಡೆದು ಹೋಗಲು ಯತ್ನಿಸುತ್ತಿದ್ದ ದನಕರುಗಳು. ಆ ಸನ್ನಿವೇಶದಲ್ಲೂ ಅಲ್ಲಲ್ಲಿ ಬಡ ಹುಡುಗರು. "ಇವೊತ್ತಿನ ಸಾಯಂಕಾಲದ ಪತ್ರಿಕೆ ಸಾರ್. ಬಿಸಿ ಬಿಸಿ ಸಮಾಚಾರ. ಒಂದೇ ಆಣೆ" ........ "ಸಾರ್ ಮೂರು ದಿವ್ಸದಿಂದ ಊಟ ಇಲ್ಲ ಸಾರ್. ಒಂದಾರ್ಕಾಸು ಕೊಡಿ ಸಾರ್." ........ನನ್ನ ವೃತ್ತಿಯವರೂ ಅಲ್ಲಿ ಇರಲಿಲ್ಲವೆಂದರೆ ತಪ್ಪಾದೀತು. ಆದರೆ ಅವರಿಗೆ ನನ್ನ ವಿದ್ವತ್ತಿನ, ನಾಗರಿಕತೆಯ, ರಕ್ಷಣೆಯಿರಲಿಲ್ಲ.... ....ಅವರ ದೃಷ್ಟಿಯಲ್ಲಿ ನಾನು ವೃತ್ತಿಬಾಂಧವನಾಗುವುದು ಸಾಧ್ಯವೇ ಇರಲಿಲ್ಲ.

ಮಾರ್ಕೆಟ್ಟಿನ ಚೌಕದ ಹೆಬ್ಬಾಗಿಲಿನಿಂದ ಕೆಲವು ದಂಪತಿಗಳು ಹೊರಬರುತ್ತಿದ್ದರು. ಅವರನ್ನೆ ನೋಡುತ್ತಾ, ಅಲ್ಲಿ ನಿಂತೆ.

ನೋಡುತ್ತ ಇದ್ದ ನನಗೆ ಕ್ಷಣಕಾಲ ಯಾವುದೋ ನೆನಪು ಬಾಧಿಸತೊಡಗಿತು. ನನ್ನೆದುರು ಬರುತ್ತಿದ್ದ ಒಂದು ಗಂಡು ಮತ್ತು ಹೆಣ್ಣು, ಆ ಕುತೂಹಲಕ್ಕೆ ಕಾರಣರಾದರು. ಆತನ ಮುಖ ನನಗೆ ಪರಿಚಿತವಾಗಿ ತೋರುತ್ತಿತ್ತು. ಯಾರಿರಬಹುದು? ಯಾರು?

ಅವರು ನೇರವಾಗಿ ಬೀದಿ ದಾಟುತ್ತಿದ್ದರು. ದಾಟಿದ ಬಳಿಕ ಅವರು ನನ್ನೆಡೆಗೆ ಬಂದೇ ತೀರಬೇಕು.

ಆತ ನನ್ನ ಸಹಪಾಠಿಯಾಗಿದ್ದ ಶ್ರೀಕಂಠ. ನಾನು ಸುಮ್ಮನಿದ್ದೆ.

ಬೀದಿ ದಾಟಿದೊಡನೆಯೇ ಅವನ ಕಣ್ಣುಗಳು ನನ್ನನ್ನು ನೋಡಿದುವು. ಮತ್ತೆ ಮತ್ತೆ ನೋಡಿದುವು. ಕೈ ತುಂಬಾ ಸಾಮಾನು ಹೊತ್ತಿದ್ದವನು, "ಹಲೋ" ಎಂದ. ಅವನು ನನ್ನನ್ನು ಮರೆತಿರಲಿಲ್ಲ. ಸಾಮಾನುಗಳನ್ನು ಕೆಳಕ್ಕೆ ಕೊಡವಿ, ದಿಗ್ಭ್ರಮೆಗೊಂಡ ಆ ಹೆಣ್ಣಿನ ನೋಟವನ್ನೂ ಗಮನಿಸದೆ, ಆತ ನನ್ನೆಡೆಗೆ ಹಾರಿದ. ಸುತ್ತಲಿದ್ದ ಜನರು ನೋಡುತ್ತಲೇ ಇದ್ದರು.

"ಹಲೋ ಚಂದ್ರೂ! ಎಷ್ಟು ವಿಚಿತ್ರ! ಎಷ್ಟೊಂದು ಸೊಗಸು! ಯುಗಗಳಾದ ಮೇಲೆ ಭೇಟಿ! ಹೇಗಿದ್ದೀಯ ದೊರೆ?

ನಾನು ಅಷ್ಟು ಕಾಲ ಬಲು ಪ್ರಯಾಸದಿಂದ ಕಲಿತಿದ್ದ ಮೋಹಕ ನಗೆಯನ್ನು ಬೀರಿದೆ.

ಅವನ ಕೈ ಕುಲುಕುತ್ತಾ ಮೇಲಿಂದ ಕೆಳತನಕ ಅವನನ್ನು ನೋಡಿದೆ. ಶ್ರೀಮಂತರ ಹಾಗೆ ಪೋಷಾಕು ಧರಿಸಿದ್ದ.

"ಗಾಬರಿ ಬೀಳಬೇಡ ಚಂದ್ರೂ. ಬಟ್ಟೆ ನೋಡಿ ತಪ್ಪು ತಿಳ್ಕೊಂಡು ಬಿಟ್ಟೇಯೋ? ಇದಕ್ಕೆಲ್ಲಾ ಇವರೇ ಕಾರಣ!"

ಆತನ ದೃಷ್ಟಿಯನ್ನು ಹಿಂಬಾಲಿಸಿ ನಾನೂ ಅವರನ್ನು—ಆ ಯುವತಿಯನ್ನು ನೋಡಿದೆ. ಆಕೆಯ ಮುಖ ಲಜ್ಜೆಯಿಂದ ಕೆಂಪೇರಿತ್ತು.

"ಶಾರದಾ, ಈತ ಚಂದ್ರೂ. ಮಹಾ ಖಿಲಾಡಿ. ನಮ್ಮ ಹಳೇ ಸಹಪಾಠಿ........ನೋಡ್ ಚಂದ್ರೂ. ಈ ಯಮ್ಮಣ್ಣಿಯವರೇ ನಮ್ಮ ಧರ್ಮ ಪತ್ನಿ."

ಶ್ರೀಕಂಠನ ಸರಸ ಮನೋವೃತ್ತಿ ನನಗೇನೂ ಹೊಸತಾಗಿರಲಿಲ್ಲ. ನಾನು ನಕ್ಕೆ.

" ತುಂಬಾ ಸಂತೋಷ. ಇಬ್ಬರಿಗೂ ಧನ್ಯವಾದಗಳು ! "

ಆಕೆ ಕೈ ಚೀಲವನ್ನು ಎಡಗೈಗೆ ದಾಟಿಸುತ್ತಾ ಸೀರೆಯ ಸೆರಗು ಸರಿಪಡಿಸಿಕೊಂಡಳು. ನೈಸರ್ಗಿಕವಾದ ಸೌಂದರ್ಯಕ್ಕೆ, ಅತ್ಯಂತ ಸ್ವಲ್ಪವಾಗಿ ಬೆಡಗು ಬಿನ್ನಾಣದ ಚೌಕಟ್ಟನ್ನು ಹಾಕಿದಂತಿತ್ತು. ಮತ್ತೊಮ್ಮೆ ಆ ಮುಖ ಕಣ್ಣುಗಳನ್ನು ನೋಡಿದೆ. ಶ್ರೀಕಂಠ ನನ್ನನ್ನೆ ಪರೀಕ್ಷಿಸುತ್ತಿದ್ದ.

" ಎಲ್ಲಪ್ಪ ಚಂದ್ರೂ, ಏನ್ಸಮಾಚಾರ ? ಎಲ್ಲಿದೀಯಾ ? ಏನ್ಕತೆ ? ಇನ್ನೂ ಒಬ್ನೇ ಇದಿಯೋ ಅಥವಾ—"

" ನಾವೆಲ್ಲಾ ಅಂಥ ಪುಣ್ಯ ಎಲ್ಲಿ ಮಾಡಿದ್ವಿ ಶ್ರೀಕಂಠಾ. ಹೀಗೇ ಇದೀನಿ,—ನೋಡು."

ಆತ ನನ್ನ ಉಡುಗೆ ತೊಡುಗೆಯನ್ನು ನೋಡಿದ. ಆಗಿನ ಬಡ ಚಂದ್ರೂ ಮತ್ತು ಈಗಿನ ನಾನು.

" ಏನಾದ್ರೂ ಕೆಲಸ ನೋಡ್ಕೊಂಡಿದೀಯೇನು ? "

" ಇಲ್ಲವಪ್ಪಾ, ಅಂತಾ ಪಾಪಕ್ಕೆ ಹೋಗಿಲ್ಲ."

" ಬಿಸಿನೆಸ್ಸು ? "........

" ಹೂಂ."

" ಸ್ವಂತದ್ದಾ ? "

" ಸದ್ಯ ಸ್ವಂತದ್ದೇನೇ. ನೀನು ? "

" ಬಿ. ಎಸ್‌ಸಿ. ಮುಗಿಸ್ದೆ. ಇನ್ನು ಇದ್ದೇ ಇದೆಯಲ್ಲ ಹೊಂಚು ಹಾಕೋದು."

ಹೀಗೆ ಹೇಳುತ್ತಾ ಶ್ರೀಕಂಠ ತನ್ನಹೆಂಡತಿಯ ಮುಖ ನೋಡಿದ. ಆಕೆ ರೇಗಿದಂತೆ ತೋರಿತು. ಅದನ್ನು ನೋಡಿದವನೇ ಮತ್ತೆ ಮಾತು ಹರಿಸಿದ.

" ಆದರೆ, ನನ್ಗೆಲ್ಲಿಂತು ಸ್ವಾತಂತ್ರ್ಯ ? ನಾನೊಬ್ಬ ಕೈದಿ. ಏನಿದ್ರೂ ಇಲ್ಲೇ ಇರ್ಬೇಕೂಂತು ಇವರೂ ಇವರ ತಂದೆಯವರೂ ಆಜ್ಞೆ

ಕೊಟ್ಟಿದ್ದಾರೆ."

ಸದ್ಯಃ ಯಾವ ಗೊಡವೆಯೂ ಇಲ್ಲದೆ ಸ್ವಚ್ಛಂದವಾಗಿದ್ದ ಎರಡು ಹಕ್ಕಿಗಳು. ಮಧ್ಯಮ ವರ್ಗದ ಸಂತಾನ ನಿಜ. ಆದರೆ ಸಿರಿವಂತಿಕೆ ಆತನನ್ನು ತನ್ನೆಡೆಗೆ ಕರೆಯುತ್ತಿತ್ತು. ಕ್ರಮಬದ್ಧವಾದ ವಿದ್ಯಾಭ್ಯಾಸ. ಬಳಿಕ ಪದವಿ. ಪದವಿಯ ಜೊತೆಯಲ್ಲೇ ಮದುವೆ. ಇನ್ನು ಕೈ ತುಂಬಾ ಸಂಪಾದನೆಯ ಕೆಲಸ. ಬರುವ ಹಣದ ಆವರಣದಲ್ಲಿ ಸುಖ ಸಂಸಾರ........

"ಬಸ್ ಬಂತು," ಎಂದಿತು ಮಧುರ ಸ್ವರ. ತಪ್ಪು ಮಾಡುತ್ತಿದ್ದ ಎಳೆಯ ಹುಡುಗನ ಹಾಗೆ ಶ್ರೀಕಂಠ ಬೆಚ್ಚಿಬಿದ್ದು ಕೆಳಗಿದ್ದ ಸಾಮಾನುಗಳನ್ನು ಎತ್ತಿಕೊಂಡು ನನ್ನನ್ನು ಅಲ್ಲಿಯೇ ಬಿಟ್ಟು ಹೆಂಡತಿಯೊಡನೆ ಮುಂದಕ್ಕೆ ನುಗ್ಗಿದ. ನುಗ್ಗುತ್ತಾ, "ಆ ಮೇಲೆ ಸಿಕ್ತೀನಪ್ಪಾ. ಮರೀಬೇಡ ಕಣೋ. ನಮ್ಮನೆಗೂ ಬಾ. ನಮ್ಮನೇಂತಂದ್ರೆ ಹೊಸ್ತು ಕಣೋ, ಇವರ್ದು," ಎಂದ.

ನಾನು "ರೈಟೋ" ಎಂದೆ.

ಆ ಗೊಂದಲದಲ್ಲಿ ಆತನೇನೂ ವಿಳಾಸ ಕೊಟ್ಟಿರಲಿಲ್ಲ· ನನ್ನದನ್ನೂ ಕೇಳಿರಲಿಲ್ಲ. ನನಗೆ ಆ ಬಗ್ಗೆ ಆಗ ಉತ್ಸುಕತೆಯೂ ಇರಲಿಲ್ಲ.

ಆ ಇಬ್ಬರ ಜೀವನದ ರೀತಿ ನನ್ನದಕಿಂತ ಬಲು ಭಿನ್ನವಾಗಿತ್ತು. ಶ್ರೀಕಂಠ ತರಗತಿಯಲ್ಲಿ ಎಂದೂ ಜಾಣ ಎನ್ನಿಸಿಕೊಂಡವನಲ್ಲ. ಇಂಗ್ಲಿಷು ಯಾವಾಗಲೂ ಅವನಿಗೆ ತೊಂದರೆ ಕೊಡುತಿತ್ತು,-ಕನ್ನಡವೂ ತೊಂದರೆ ಕೊಡುತಿತ್ತು. ನಾನೇ ಎಷ್ಟೋ ಸಾರೆ ಆತನ ನೆರವಿಗೆ ಹೋಗುತ್ತಿದ್ದೆ. ಆದರೆ ಈ ದಿನ ಅಂತಹ ಚಿಂತೆ ಶ್ರೀಕಂಠನಿಗೆ ಇಲ್ಲ. ದುಡ್ಡಿನವರೊಬ್ಬರು ತಮ್ಮ ಮಗಳಿಗಾಗಿ ಅವನ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ........

....ನಾನು ಸಿಗರೇಟು ಹೊರತೆಗೆದು ಕಡ್ಡಿ ಗೀರಿದೆ. ಶ್ರೀಕಂಠ, ನಾನು ಸಿಗರೇಟು ಸೇದುವುದನ್ನು ನೋಡಬೇಕಾಗಿತ್ತು. ಆಗ ಅವನು ಖಂಡಿತವಾಗಿಯೂ ಮತ್ತಷ್ಟು ಆಶ್ಚರ್ಯಪಡುತ್ತಿದ್ದ.

ನನಗೂ ಅವನಿಗೂ ಇರುವ ಅಂತರ. ಆಕೆ, ಅವನ ಶಾರದಾ ದೇವಿ........ಬೇಡ ಬೇಡವೆಂದರೂ ನನಗೆ ಶೀಲಳ ನೆನಪಾಗುತ್ತಿತ್ತು. ಆ ಬಳಿಕ ಬೀದಿಯಿಂದ ನಾನು ರಕ್ಷಣೆ ಕೊಟ್ಟು ಕರೆದೊಯ್ದಿದ್ದ ಆ ಹೆಣ್ಣು. ಆ ಸರದ ಯಜಮಾನಿತಿ....ನಾನು ಚಲಿಸತೊಡಗಿದೆ. ಎದುರು ಭಾಗದಿಂದ ಇಬ್ಬರು ಬಿನ್ನಾಣಗಿತ್ತಿಯರು ಬರುತ್ತಿದ್ದರು. ನಾನು ತಲೆಯೆತ್ತಿ ಅವರನ್ನು ನೋಡಿದೆ. ಆ ನಾಲ್ಕು ಕಣ್ಣುಗಳೂ ನನ್ನನ್ನು ನೋಡಿದುವು. ಆ ಇಬ್ಬರಲ್ಲೂ ನನ್ನ ಬಗ್ಗೆ ಒಂದೇ ರೀತಿಯ ಪ್ರತಿ ಕ್ರಿಯೆ ಇತ್ತು. ನಗೆ ಮಿಂಚುತ್ತಿತ್ತು—ಆ ಇಬ್ಬರ ತುಟಿಗಳಲ್ಲಿ........ ಅದಕ್ಕೆ ಅರ್ಥವೇನೂ ಇರಲಿಲ್ಲ. ಆಧುನಿಕತೆಯ ಪರೀಕ್ಷೆಯಲ್ಲಿ ನಾನು ಸೋತಿಲ್ಲ ಎನ್ನುವುದಕ್ಕೆ ಬೇಕಾದ ಪ್ರಮಾಣ ಪತ್ರವನ್ನು ಅವರು ಕೊಡುತ್ತಿದ್ದರು, ಅಷ್ಟೆ.

ಹೊತ್ತು ಕಳೆದಂತೆ, ಜನಜಂಗುಳಿ ಕರಗಿತು. ಕತ್ತಲಾಯಿತು. ಸಂಜೆಯಿದ್ದ ಉತ್ಸಾಹ ನನ್ನಲ್ಲಿ ಆಗ ಉಳಿದಿರಲಿಲ್ಲ. ಇನ್ನು ಊಟ ಮುಗಿಸಿದ ಬಳಿಕ ಮನೆಗೆ. ಎಲ್ಲರಿಗಿಂತ ದೂರವಾದ ಒಂಟಿಯಾದ ಬಾಳ್ವೆ. ಅದರ ಅರ್ಥವೇನು ? ಅದರ ಗುರಿ ಏನು ?....ಹಾಗೆ ಯೋಚಿಸ ಹೊರಟಾಗ, ನನಗೆ ನಗು ಬರುತ್ತಿತ್ತು. ಕಸಾಯಿ, ತಾನು ಮಾಂಸದ ತುಣುಕಾಗಿ ಮಾರ್ಪಡಿಸಬೇಕಾದ ಮೂಕ ಜೀವಿಗಳ ಹೃದಯದಲ್ಲಿ ಎಂಥ ಭಾವನೆಗಳಿವೆ ಎಂದು ಯೋಚಿಸುವ ವಿಷಯ ಎಂದಾದರೂ ಕೇಳಿದ್ದೀರಾ ? ಸಾಮಾನ್ಯ ಸಾಮಾಜಿಕ ಜೀವನವನ್ನು ಬಿಟ್ಟುಕೊಟ್ಟ ನಾನು, ಬಾಳ್ವೆಯ ವಿಶಾಲ ಸ್ವರೂಪದ ಬಗ್ಗೆ ಯೋಚಿಸುವುದರಲ್ಲಿ ಅರ್ಥವಿರಲಿಲ್ಲ.

ಮನೆಯ ಕಡೆಗೆ ಹೊರಟವನು ನಡೆಯುತ್ತಾ ಆ ಹೈಸ್ಕೂಲನ್ನು ಸಮೀಪಿಸಿದೆ. ಅದು ಹಲವಾರು ರಾತ್ರಿ ನನಗೆ ಆಸರೆ ಒದಗಿಸಿದ್ದ ವಿದ್ಯಾಛತ್ರ. ಎರಡು ನಿಮಿಷ ಆ ಜಗುಲಿಯ ಮೇಲೆ ವಿರಮಿಸಿ ಮುಂದೆ ಪ್ರಯಾಣ ಬೆಳೆಸುವುದೇ ವಿಹಿತವೆನಿಸಿತು. ಕರವಸ್ತ್ರವನ್ನು ಹಾಸಿ ಅದರ ಮೇಲೆ ಕುಳಿತು, ಜಗುಲಿಯ ಕೆಳಕ್ಕೆ ಕಾಲುಗಳನ್ನು ಇಳಿ ಬಿಟ್ಟು ಆಕಾಶವನ್ನೇ ದಿಟ್ಟಿಸಿದೆ.

ಸ್ವಲ್ಪ ಹೊತ್ತಿನಲ್ಲೆ ನನ್ನ ಸಮೀಪದಲ್ಲಿ ಇನ್ನೊಂದು ಜೀವ ವಿದ್ದುದು ನನಗೆ ಅರಿವಾಯಿತು. ಒಮ್ಮೆಲೆ ಆ ರಾತ್ರಿಯ ನೀರವತೆ ಯನ್ನು ಭೇದಿಸುತ್ತಾ ಅಲೆಯಲೆಯಾಗಿ ಬಂದ ಆ ಕೆಮ್ಮು...... ಈ ರೀತಿಯ ಕೆಮ್ಮು ನನಗೆ ಪರಿಚಿತವಾದುದಲ್ಲವೆ? ನನ್ನ ಆತ್ಮೀಯರಾದ ವರೊಬ್ಬರು ಹಾಗೆಯೇ ಕೆಮ್ಮುತ್ತಿದ್ದರಲ್ಲವೆ?........

ಕೆಮ್ಮು ನಿಂತು, ಮತ್ತೆ ಮೌನ್ಮನೆಲೆಸಿದ ಮೇಲೆ ನಾನು ಕೇಳಿದೆ.

"ಯಾರಪ್ಪ ನೀನು?"

ಉತ್ತರ ಬರಲಿಲ್ಲ.

"ಯಾವೂರಪ್ಪಾ?"

ಪ್ರಾಯಶಃ, ನನ್ನ ಸ್ವರವನ್ನು ಕೇಳಿ ಆತ ಧೈರ್ಯ ತಳೆದಿರಬಹುದು.

"ಕ್ಯಾತನಹಳ್ಳಿ ಬುದ್ಧಿ."

"ಏಟ್ ದಿವ್ಸ ಆಯ್ತು ಇಲ್ಲಿಗೆ ಬಂದು?"

ಆತ ಉತ್ತರವೀಯುವುದರ ಬದಲು ಮತ್ತೊಮ್ಮೆ ವಿಕಾರವಾಗಿ ಕೆಮ್ಮಿದ. ಎರಡು ಮೂರು ನಿಮಿಷಗಳ ಮೇಲೆ ಮತ್ತೆ ನೀರವತೆ ನೆಲೆಸಿತು.

"ಔಷಧ ಗಿವ್‌ಷಧ ತಗೊಂಡಿಲ್ವಾ?"

"ಇಲ್ಲ ಬುದ್ಧಿ.........ನಮ್ಗೆಂಥಾ ಔಷಧ ಬುದ್ಧಿ?"

"ಬಾಳಾ ದಿವ್ಸದಿಂದ ಹಿಂಗೇ ಐತ?"

"ಹೌದು ಬುದ್ಧಿ. ಎಂಟು ತಿಂಗ್ಳಾಯ್ತು ಹಳ್ಳಿ ಬಿಟ್ಟು ಬಂದು. ಮಿಲ್ನಲ್ಲಿ ಕೆಲ್ಸ ಸಿಕ್ತು. ಆದರೆ ಜ್ವರ ಬಂದ್ಬಿಡ್ತು. ಆಮೇಕೆ ಕೆಲ್ಸಾನೇ ಇಲ್ಲ. ಬಿಕ್ಸ ಎತ್ತಾ ಇವ್ನಿ ಬುದ್ಧಿ"

ಆ ಮಾತುಗಳನ್ನು ಕೇಳಿಕೊಂಡು ಮೆಲುಕು ಹಾಕುತ್ತಾ ಇರಲು ನಾನು ಸಿದ್ಧನಿರಲಿಲ್ಲ. ಷರಾಯಿಯ ಜೇಬಿಗೆ ಕೈ ಹಾಕಿ ಅಲ್ಲಿದ್ದ ಚಿಲ್ಲರೆ ದುಡ್ಡನ್ನೆಲ್ಲಾ ನಾನು ಹೊರಕ್ಕೆ ತೆಗೆದೆ. ಅಷ್ಟನ್ನೂ ಕತ್ತಲಲ್ಲಿ ಕೈ ಚಾಚಿ ಆತನ ಬಳಿಯಲ್ಲಿಟ್ಟೆ. ಆ ಬಳಿಕ ಅಲ್ಲಿಂದೆದ್ದು ಮತ್ತೆ ಹಾದಿ ಹಿಡಿದೆ...........ಆತ ಹೇಳಿದ ಮಾತುಗಳನ್ನು ನಾನು ಂಬಬೇಕೆ? ಆ ಮಾತುಗಳೆಲ್ಲಾ ನಿಜವೆ? ನಾನು ಹೃದಯ ಹೀನ

ಯಂತ್ರವಾಗಿ ಮಾರ್ಪಟ್ಟಿರಲಿಲ್ಲ. ಆತನ ಜೀವನದ ಕತೆಯನ್ನು ಸುಳ್ಳೆಂದು ಹೇಳಲು ನಾನು ಸಿದ್ಧನಿರಲಿಲ್ಲ. ಆದರೆ ಅಂತಹ ಕತೆಯನ್ನು ನಾನು ದ್ವೇಷಿಸುತ್ತಿದ್ದೆ. ಇದು ಜೀವನದ ಪುನರಾವರ್ತನೆಯೆ? ಆತ ಕ್ಯಾತನಹಳ್ಳಿಯಿಂದ ಬಂದಿದ್ದ ಬಡ ಗೌಡ. ಹಳ್ಳಿಯಿಂದ ಬರುವುದು........ಮಿಲ್ಲಿನಲ್ಲಿ ಕೆಲಸ .......ಕೆಮ್ಮು, ಭಿಕ್ಷೆ ಹದಿನೈದು ವರ್ಷಗಳ ಹಿಂದೆ, ತಂದೆ ನನ್ನ ತಂದೆ, ಹಾಗೆಯೇ ಬಂದಿದ್ದ. ಆದರೆ ನಾನು ಅವನಿಗೆ ಜೊತೆಗಾರನಾಗಿದ್ದೆ. ಈ ಮುದುಕನಿಗೆ ಅಂತಹ ಜೊತೆಗಾರರಿದ್ದರೊ ಇಲ್ಲವೊ ತಿಳಿಯದು. ತಿಳಿಯುವ ಇಚ್ಛೆಯೂ ನನಗಿರಲಿಲ್ಲ. ಇಂತಹ ಗೋಳಿನ ಕತೆಗಳನ್ನು ನಾನು ಯಾಕೆ ಕೇಳಬೇಕು? ಸುತ್ತ ಮುತ್ತಲಿನ ಸಂಕಟವನ್ನೆಲ್ಲಾ ಕಂಡು ಕನಿಕರಪಡುತ್ತಾ ಹೃದಯ ಕರಗಿಸಲು, ನಾನು ಸುಖದ ಸುಪ್ಪತ್ತಿಗೆಯಿಂದ ಇಳಿದು ಬಂದ ದೇವತೆಯಾಗಿರಲಿಲ್ಲ........ದೇವತೆಯಾಗುವ ಇಚ್ಛೆ ನನಗಿರಲಿಲ್ಲ.

....ಶ್ರೀಕಂಠನ ಹಾಗೆಯೇ ನನಗೆ ಬಾಲ್ಯ ಸ್ನೇಹಿತರು ಹಲವರಿದ್ದರು. ವರ್ಷ ವರ್ಷಗಳು ಕಳೆದ ಹಾಗೆ ಅವರೆಲ್ಲ ಬೇರೆ ಬೇರೆಯಾಗಿ ಬೆಳೆದು ತಮ್ಮ ತಮ್ಮ ಹಾದಿ ಹಿಡಿದಿದ್ದರು. ನಾನು ಆ ಹಿಂಡಿಗಿಂತ ದೂರವಾದವನು—ಅನಿವಾರ್ಯ ಕಾರಣಗಳಿಗಾಗಿ ದೂರವಾದವನು. ಅವರು ಯಾರನ್ನೂ ಕಾಣಲು ನಾನು ಇಷ್ಟ ಪಡಲಿಲ್ಲ. ಆದರೂ ಬೊಂಬಾಯಿಗಿಂತ ಚಿಕ್ಕದಾದ ನನ್ನ ಊರಿನಲ್ಲಿ ಅವರಲ್ಲಿ ಎಂದಾದರೂ ಯಾರಾದರೂ ಒಬ್ಬರನ್ನು, ನಾನು ಅಪೇಕ್ಷಿಸದೆ ಇದ್ದರೂ ಕೂಡ, ಬೀದಿಯಲ್ಲಿ ಕಾಣಬೇಕಾಗುತ್ತಿತ್ತು.

ಮತ್ತೊಂದು ಸಂಜೆ, ನಾರಾಯಣ ನನಗೆ ಕಾಣಲು ದೊರೆತ. ಹುಡುಗನಾಗಿದ್ದಾಗ ಜೊತೆಯಲ್ಲಿ ಓದುತ್ತಿದ್ದಾಗ ಅವನ ಮುಖ ದುಂಡಗೆ ತುಂಬಿಕೊಂಡು ಸದಾ ಗೆಲುವಾಗಿರುತ್ತಿತ್ತು. ತಾನೂ ನಕ್ಕು ಎಲ್ಲರನ್ನೂ ನಗಿಸುವ ಮಹಾ ಸಾಮರ್ಥ್ಯ ಆತನಿಗಿತ್ತು. ಆದರೆ ಈಗ? ಆತ ಎತ್ತರವಾಗಿ ಬೆಳೆದಿದ್ದ—ಒಣಗಿದ ಕಡ್ಡಿಯಂತೆ. ಕಪೋಲಗಳು ಬತ್ತಿದ್ದುವು. ಮುಖದ ಮೂಳೆಗಳು ಎದ್ದು ಕಾಣಿಸುತ್ತಿದ್ದುವು..........

ಒಂದಕ್ಕೊಂದು ಅತು ಕುಳಿತಿದ್ದ ಆ ತುಟಿಗಳು ಬಲು ಆಳವಾದ ಯಾವುದೋ ನೋವಿಗೆ ಮುಖವಾಡವಾಗಿದ್ದುವು. ಕೊಳೆಯಾಗಿದ್ದ ಷರಟು ಪಾಯಜಾಮುಗಳನ್ನು ಅವನು ತೊಟ್ಟಿದ್ದ........ನನ್ನನ್ನು ಆತ ಗುರುತಿಸಿದಂತೆ ತೋರಲಿಲ್ಲ.

ಬೇಕು ಬೇಕೆಂದೇ ನಾನು ಆತನ ಭುಜ ಒರೆಸಿದೆ. ಅದನ್ನೂ ಮೌನವಾಗಿ ಸಹಿಸಿಕೊಂಡು ಆತ ಹೋಗುತ್ತಿದ್ದ. ನಾನು "ನಿಲ್ಲಿ ಅಲ್ಲಿ!" ಎಂದು ತಡೆದು ನಿಲ್ಲಿಸಿದೆ.

ಆತ ನಿಂತು ನನ್ನೆಡೆಗೆ ತಿರುಗಿ ನೋಡಿದ ಆ ನೋಟದಲ್ಲಿ ಗಾಬರಿ ತುಂಬಿತ್ತು.

"ಸ್ವಲ್ಪ ನೋಡ್ಕೊಂಡು ಹೋಗ್ಬಾರ್ದೇನು ?"

"ಕ್ಷಮಿಸ್ಬೇಕು. ಏನೋ ಯೋಚಿಸ್ತಾ ಇದ್ದೆ. ನೋಡ್ಲಿಲ್ಲ."

ಇಷ್ಟು ಹೇಳಿ ಆತ ಪುನಃ ತನ್ನ ಹಾದಿ ಹಿಡಿಯತೊಡಗಿದ. ಆ ದೀನತನವನ್ನು ನೋಡಿ ನಗುವ ಚೈತನ್ಯವೂ ನನ್ನಲ್ಲಿ ಉಳಿಯಲಿಲ್ಲ. ಆದರೂ ಹೇಳಿದೆ.

"ಅದೇನು ಯೋಚ್ನೆ ಮಾಡ್ತಾ ಇದೀಯೋ? ಯಾವನಾದರೂ ನನ್ನಂಥ ಪಾಪಿ ಬೀದೀಲಿ ಸಿಕ್ಕರೂ ಮಾತ್ನಾಡಬಾರದೇನು ?"

ಈಗ ತಿರುಗಿ ನೋಡಿದಾಗ ಆತನ ಮುಖ ಆಶ್ಚರ್ಯದಿಂದ ಅರಳಲು ಯತ್ನಿಸುತ್ತಿತ್ತು—ಹಿಂದಿನ ಹಾಗೆ. ಆದರೆ ರೂಢಿ ತಪ್ಪಿಹೋಗಿತ್ತೇನೋ? ಮತ್ತೆ ಕುಂಠಿತವಾಯಿತು.

"ನಾನ್ಕಣೋ ನಾಣಿ. ನಾನು ಚಂದ್ರು."

"ತಿಳೀತು. ಚೆನ್ನಾಗಿದೀಯೇನಪ್ಪ ?"

ನಾನು ಉತ್ತರಕೊಡದೆ ಅವನನ್ನು ಸಮೀಪದ ಹೋಟೆಲಿಗೆ ಎಳೆದೊಯ್ದೆ. ಅವನು ಎಷ್ಟು ಬೇಡ ಬೇಡವೆಂದರೂ ಕೇಳದೆ, ಕಾಫಿ ತಿಂಡಿ ತರಿಸಿದೆ. ಆ ಪ್ರಾಣಿ ತಿಂಡಿ ತಿಂದ, ಕಾಫಿ ಕುಡಿದ. ಆದರೆ ಬಾಯಿ ತೆರೆದು ತನ್ನ ಬಾಳ್ವೆಯ ಪರಿಚಯ ಮಾಡಿಕೊಡಲಿಲ್ಲ.

"ಏನಪ್ಪ ನಾಣಿ? ಮನೇಲಿ ತಂಗಿ ತಾಯಿ ತಂದೆ ಚೆನ್ನಾಗಿದಾರೇನಪ್ಪ ?"

ಆತ ನಗಲು ಯತ್ನಿಸಿದ—ಸಿನಿಕತನದ ನಗು.

"ಯಾಕೆ, ಏನಾಯ್ತು ನಾಣಿ?"

"ನನ್ನ ತಂಗಿ ನಿನ್ನೆ ತೀರ್ಕೊಂಡ್ಳು."

ಆರು ವರ್ಷಗಳ ಹಿಂದೆಯೊಮ್ಮೆ ಅವರ ಮನೆಗೆ ಹೋಗಿದ್ದಾಗ ಆ ಪುಟ್ಟ ತಂಗಿಯನ್ನು ನೋಡಿದ್ದೆ. ಆಗ ಆಕೆಗೆ ಹತ್ತೋ ಹನ್ನೊಂದೋ ಇರಬೇಕು. ಲಂಗ ತೊಟ್ಟು ಓಡಾಡುತ್ತಿದ್ದಳು. ಅಣ್ಣನಂತೆಯೇ ಮನೆ ಬೆಳಗುವ ನಗು ನಗುತ್ತಿದ್ದ ಆಹುಡುಗಿಯನ್ನು ಸ್ಮರಿಸಿಕೊಳ್ಳುತ್ತಾ ಕುಳಿತೆ.

"ಹೆರಿಗೆಗೆ ಬಂದಿದ್ಳು. ಹೆರಿಗೆ ಏನೋ ಆಯ್ತು. ಮಗುವೂ ಇಲ್ಲ, ಅವಳೂ ಇಲ್ಲ, ಅಷ್ಟೆ."

ಲಂಗ ತೊಟ್ಟಿದ್ದ ಹುಡುಗಿ ಬೆಳೆದು ದೊಡ್ಡವಳಾಗಿದ್ದಳು. ಸೀರೆಯುಟ್ಟು ಗಂಡನ ಮನೆಗೆ ಹೋಗಿದ್ದಳು. ಗರ್ಭಿಣಿಯಾಗಿ ಅಲ್ಲಿಂದ ಹೆರಿಗೆಗೆಂದು ತವರಿಗೆ ಬಂದಿದ್ದಳು. ಆಗ ಸಾವು—

ನನ್ನ ಯೋಚನೆಯ ಸರಣಿ ಕಡಿದು ಹೋಯಿತು.

"ಎಲ್ಲಾಯ್ತು ಹೆರಿಗೆ? ಆಸ್ಪತ್ರೇಲೊ?"

"ಆಸ್ಪತ್ರೆ ಎಲ್ಬಂತು? ಎಲ್ಲಾ ನಮ್ಮನೇಲೆ........ ನೋಡಿದ್ಯಲ್ಲಾ ನಮ್ಮ ಹಟ್ಟೀನಾ........"

ಆ ಮೇಲೆ ಮುರುಕು ಮುರುಕಾಗಿ ಅವನ ಬಾಯಿಂದ ಕೆಲವು ಮಾತುಗಳು ಹೊರಬಿದ್ದವು. ಒಂದಕ್ಕೊಂದು ಜೋಡಿಸಿ ಅವುಗಳಿಗೆ ಅರ್ಥ ಕಲ್ಪಿಸಿದೆ.

ಅತನ ತಂದೆ ಬಲು ಪ್ರಯಾಸ ಪಟ್ಟು ಇಂಟರ್ ತನಕ ಅವನನ್ನು ಓದಿಸಿದರು. ತಂಗಿಗೆ ಮದುವೆ ಮಾಡಿಕೊಡುವ ಪ್ರಶ್ನೆ ದೊಡ್ಡದಾಗಿ ಎದುರು ಬಂದುದರಿಂದ ನಾರಾಯಣನ ವಿದ್ಯಾಭ್ಯಾಸ ಅಲ್ಲಿಗೇ ನಿಂತಿತು. ಅಲ್ಲಿ ಇಲ್ಲಿ ಸಾಲ ಮಾಡಿ ಅವನ ತಂದೆ, ಮಗಳ ಮದುವೆ ನೆರವೇರಿಸಿದರು. ನಾರಾಯಣನಿಗೆ ಹೆಣ್ಣು ಕೊಡುವವರು ಬರಬಹುದು. ಅವರಿಂದ ವರದಕ್ಷಿಣೆ ಪಡೆದು ಅವನ ಓದು ಮುಂದುವರಿಸಬೇಕು—ಎನ್ನುವುದು ಅವನ ತಂದೆಯ ಯೋಜನೆಯಾಗಿತ್ತು. ಆದರೆ ಆ ಯೋಜನೆ

ಕಾರ್ಯರೂಪಕ್ಕೆ ಇಳಿಯಲಿಲ್ಲ. ಅವನ ತಂದೆ ನಿವೃತ್ತ ಗುಮಾಸ್ತೆ. ಇನ್ನು ಯಾವುದೋ ಅಂಗಡಿಯಲ್ಲಿ ಲೆಕ್ಕ ಬರೆದು ಮನೆಯ ಸಂಸಾರ ಸಾಗಿಸಲು ಆತ ಸಂಪಾದಿಸಬೇಕಾಗಿತ್ತು. ನಾರಾಯಣ ಕೆಲಸಕ್ಕೋಸ್ಕರ ಅಲೆದ. ಅವನು ಹೋದಲ್ಲಿ ಅದು ಇರಲಿಲ್ಲ........

....ಹೊರಡುವ ಹೊತ್ತಿಗೆ ನಾಣಿ ಕೇಳಿದ:

"ಇದೇ ಊರಲ್ಲಿ ಇರ್ತಿ ಏನು ?"

"ಇಲ್ಲ ಬೊಂಬಾಯಲ್ಲಿ ಇರ್ತೀನಿ. ಯಾವತ್ತಾದರೂ ಇಲ್ಲಿಗೆ ಬರ್ತೀನಿ ಅಷ್ಟೆ."

ಅದು ಸುಳ್ಳಾಗಿತ್ತು. ಆದರೆ ಸುಳ್ಳು ಸತ್ಯಗಳ ನಡುವಿನ ವ್ಯತ್ಯಾಸ ನನ್ನ ಪಾಲಿಗೆ ಎಷ್ಟೋ ಕಡಿಮೆಯಾಗಿತ್ತಲ್ಲವೆ ?

"ಹೂಂ. ನೋಡಿದರೆ ಗೊತ್ತಾಗುತ್ತೆ. ಬೊಂಬಾಯಿ ಒಗ್ಗಿದೆಯೇನೋ ?"

"ಪರವಾಗಿಲ್ಲ."

"ಯಾವತ್ತಾದರೂ ಇಲ್ಲಿದ್ದಾಗ ನಮ್ಮನೇ ಕಡೆ ಬಾ. ಇನ್ನೂ ನಮ್ತಾಯಿ ಉಪ್ಪಿಟ್ಟು ಚೆನ್ನಾಗಿಯೇ ಮಾಡ್ತಾರೆ."

"ಬರ್ತೀನಿ."

ನನ್ನ ಕೈಯಲ್ಲಿದ್ದ ಕೆಲವು ರೂಪಾಯಿಗಳನ್ನು ಆತನಿಗೆ ಕೊಡೋಣವೇ ಎನಿಸಿತು. ಆದರೆ ಅದೆಂತಹ ದಾನಶೀಲತೆ ? ಅಂತಹ ದಾನಕ್ಕೆ ಅರ್ಥ ಉಂಟೆ ? ಹಾಗೆ ದುಡ್ಡು ಕೊಟ್ಟು ಅವನ ಹೃದಯವನ್ನು ಘಾಸಿಗೊಳಿಸಲೇ ?

ನಾನು ಹಾಗೆ ಮಾಡಲಿಲ್ಲ. ಮನಸ್ಸನ್ನು ಕಲ್ಲಾಗಿ ಮಾರ್ಪಡಿಸಿ ನನ್ನ ಹಾದಿ ಹಿಡಿದಿದೆ....

....ಆದರೆ ಮತ್ತೆ ಮನಸ್ಸು ಹಿಂಡುವ ಯೋಚನೆಗಳು ಧಾವಿಸಿ ಬರುತ್ತಿದ್ದವು. ಎಲ್ಲದರಲ್ಲೂ ಅತೃಪ್ತಿ. ವಿವರಿಸಲಾಗದ ಅಶಾಂತಿ. ನಾನು ಸಾಗುತ್ತಿದ್ದ ಹಾದಿ ಎಲ್ಲಿ ಮುಕ್ತಾಯವಾಗುವುದು ? ಅದರ ಮೈಲುಗಲ್ಲಾವುದು, ಯಾವುದು ? ಹೀಗೆಯೇ ಬೆಳೆಯುತ್ತಾ ಹೋಗುವುದೇ ಮಾನವ ಜೀವನವೆ ?

........ಕತ್ತಲೆಯ ಗವಿಯಂತೆ ಬಲು ಆಳವಾಗಿರುವ ಗತ ಕಾಲದ ನನ್ನ ಬಾಳ್ವೆಯಿಂದ ಇಷ್ಟು ಸಂಗತಿಗಳನ್ನು ಈ ದಿನ ಹೊರ ತೆಗೆದು ನಿಮ್ಮ ಮುಂದಿರಿಸಿದ್ದೇನೆ. ಬೆಳಗಿನಿಂದ ಹಿಡಿದು, ನಡುವೆ ಹೆಚ್ಚಿನ ವಿರಾಮಕ್ಕೂ ಅವಕಾಶವಿಲ್ಲದ ಹಾಗೆ, ಈಗ ಈ ನಡುವಿರುಳಿನ ವರೆಗೂ ಬರೆದಿದ್ದೇನೆ. ಅತ್ಯಂತ ಕಟುವಾದ ಈ ಅಂಶಗಳನ್ನು ಬರೆಯುವ ಕೆಲಸ ಸುಲಭವಾಗಿಲ್ಲ. ನನ್ನ ಮುಂದೆ ಹಲವು ಹಾದಿಗಳಿದ್ದುವು—ಎಲ್ಲರ ಮುಂದೆಯೂ ಇರುವಂತೆ. ಆದರೆ ಬೇರೆ ಗತಿ ಇಲ್ಲದೆ, ನಾನು ನನ್ನ ಜೀವನದ ಹಾದಿಯನ್ನು ಆ ರೀತಿ ರೂಪಿಸಿಕೊಂಡೆ. ಅದನ್ನು ನಿಮ್ಮೆದುರು ವಿವರಿಸುತ್ತಾ ಸಮರ್ಥಿಸುವ ಇಚ್ಛೆ ನನಗಿಲ್ಲ. ನಿಮ್ಮನ್ನು ಯಾವುದೇ ನಿರ್ದಿಷ್ಟ ಅಭಿಪ್ರಾಯದತ್ತ ಒಯ್ದು ತಲಪಿಸುವ ಉದ್ದೇಶ ನನ್ನದಲ್ಲ. ನಾನು ಮಾಡಬೇಕಾದ ಕೊನೆಯ ಕರ್ತವ್ಯವೆಂದು ಇದನ್ನು ಬರೆಯುತ್ತಿದ್ದೇನೆ.

ಒಣ ವಾದ ನಿಮಗೆ ಇಷ್ಟವಿಲ್ಲದಿರಬಹುದು. ನನಗೂ ಅದು ಇಷ್ಟವಿಲ್ಲ. ಇಲ್ಲಿಗೆ ಸಾಕು.

ನಾಳೆ ಶನಿವಾರ. ನನ್ನ ವಕೀಲರು ಬಂದು ಹೋಗಬಹುದು. ಅವರಿಗೆ ನನ್ನಿಂದ ಸರಿಯಾದ ಸಹಕಾರ ದೊರೆಯದಲ್ಲಾ ಎಂದು ನನಗೆ ದುಃಖವಾಗುತ್ತಿದೆ........

ಲೇಖನಿಯನ್ನು ಕೆಳಗಿಟ್ಟು, ನೆಟಿಕೆಗಳನ್ನು ಮುರಿದು, ದೇಹವನ್ನು ಸಡಿಲಿಸಿ, ಈ ಚಾಪೆಯ ಮೇಲೆ ಕಾಲು ಚಾಚಿಕೊಳ್ಳುವೆ. ನಿದ್ದೆಹೋಗುವೆ. ಕನಸಿನಲ್ಲಿ ಯಾರು ಬೇಕಾದರೂ ಬರಬಹುದು—ಯಾರು ಬೇಕಾದರೂ.

## . . . ಶನಿವಾರ

ನಿತ್ರಾಣನಾದ ನಾನಿಂದು, ಬರೆಯುವ ಮಹಾ ಯಜ್ಞದ ಇನ್ನೊಂದು ದಿನವನ್ನು ಆರಂಭಿಸುತ್ತಿದ್ದೇನೆ. ಕಳೆದ ರಾತ್ರಿ ನನಗೆ ಪ್ರತಿಕೂಲವಾಗಿತ್ತು. ನಿದ್ದೆ ನನಗೆ ಕೈ ಕೊಟ್ಟಿತು. ನಿನ್ನೆ ಹಗಲೆಲ್ಲಾ ಒಂದೇ ಸಮನೆ ವಿಶ್ರಾಂತಿಯ ಯೋಚನೆ ಇಲ್ಲದೆ ಬರೆದುದರ ಫಲವಿರ ಬೇಕು. ಮೈ ಮನಸ್ಸು ಮೆದುಳು ಕಾದು ನನಗೆ ನಿದ್ದೆ ಬರಲಿಲ್ಲ. ಕರುಳು ವಿಕೃತವಾಗಿ ಕೆರಳಿಕೊಂಡು ಹೊತ್ತು ಕಳೆಯುವುದನ್ನು ಅಸಹ ನೀಯಗೊಳಿಸಿತು. ಒಂದು ಕಾಲದಲ್ಲಿ ಡಾಕ್ಟರು ಅದನ್ನು ಅಪೆಂಡಿ ಸೈಟಿಸ್ ಎಂದು ಕರೆದರು. ಬೇರೊಬ್ಬ ವಿಚಕ್ಷಣರು ಬರಿಯ ಕ್ರಿಮಿ ದೋಷವೆಂದರು. ಮೂರನೆಯವರು ಹುಣ್ಣಿರಬೇಕು ಎಂದು ಅಭಿ ಪ್ರಾಯಪಟ್ಟರು. ಅವರು ಯಾರೂ ಆ ಬಗ್ಗೆ ಏಕಾಭಿಪ್ರಾಯವನ್ನು ಕೊಟ್ಟುದಿಲ್ಲ. ಕೊನೆಯ ತೀರ್ಮಾನವನ್ನಿತ್ತುದಿಲ್ಲ. ನಾನು ನರ ಳುತ್ತಾ ಬಂದಿದ್ದೇನೆ—ನಗು ನಗುತ್ತ ನರಳುತ್ತಾ ಬಂದಿದ್ದೇನೆ. ಇಷ್ಟು ವರ್ಷಗಳಾದ ಮೇಲೆ ಈಗ ?

ಬೆಳಗು ಮುಂಜಾವದ ಮುಂಚೆ ಚುಮು ಚುಮು ಎನ್ನುವ ಹಾಗೆ ಕಣ್ಣಿಗೊಂದಿಷ್ಟು ಜೊಂಪು ಹತ್ತಿತು. ಆದರೆ ಅದು ಸ್ವಲ್ಪ ಹೊತ್ತು ಮಾತ್ರ. ಬಿರಿದು ಬಂದ ಕರುಳಿನ ನೋವು ಮತ್ತೆ ನನ್ನನ್ನು ಈಗ ಎಚ್ಚರಗೊಳಿಸಿದೆ.

....ಸರಳುಗಳ ಎಡೆಯಿಂದ ಸ್ವರ ಹೊರ ಹಾಕಿ ಕರಿಯ ಕೇಳಿದ :

" ರಾತ್ರಿ ನಿದ್ದೆ ಮಾಡ್ದಂಗೇ ಇಲ್ಲ ನೀವು."

ಕತ್ತಲಾದರೆ ಸಾಕು, ಗೊರಕೆ ಹೊಡೆಯಲು ತೊಡಗುವ ಕರಿಯ ನನಗೆ ಆ ಪ್ರಶ್ನೆ ಕೇಳುತ್ತಾನೆ !

“ ನಿಂಗೆ ಎಚ್ಚರವಿತ್ತೇನೋ ? ”

“ ಎಲ್ಲೋ ಒಂದ್ಸಾರಿ ಉಚ್ಚೆ ಹುಯ್ಯೋಕೆ ಅಂತ ಎದ್ದಿದ್ದೆ, ಆಗ ಬೆಳಕು ಕಾಣಿಸ್ತಿತ್ತು ”

ನಿಜವಿರಬಹುದು.

ನಾನು ಬಂದ ಮೊದಲಿನಲ್ಲಿ ಒಮ್ಮೆ ‘‘ಬುದ್ಧೀ’’ ಎಂದು ನನ್ನನ್ನು ಸಂಬೋಧಿಸಿದ್ದ. ಬಾಲ್ಯದಿಂದಲೇ ಅವನಿಗೆ ಅಂಟಿಕೊಂಡಿದ್ದ ಅಭ್ಯಾಸ. ಹಾಗೆ ಕರೆಯಬಾರದೆಂದು ನಾನು ಪುಟ್ಟ ಭಾಷಣವನ್ನೇ ಕೊಟ್ಟಿದ್ದೆ. ಅಂದಿನಿಂದ ನಮ್ಮೊಳಗೆ ಆತ್ಮೀಯ ಸಂಬಂಧ ನೆಲೆಸಿತ್ತು. ಆದರೂ ನನ್ನನ್ನು ಗೌರವದ ಬಹು ವಚನದಿಂದ ಆತ ಕರೆಯುತ್ತಿದ್ದ.

“ ರಾಯರೇ—ರಾಯರೇ........”

ನಾನು ರಾಯನಾಗಿರಲಿಲ್ಲ. ಆದರೆ, ಈ ಮೂವತ್ತೆಂಟು ವರ್ಷಗಳ ಅವಧಿಯಲ್ಲಿ ಎಷ್ಟೊಂದು ಹೆಸರುಗಳಿಗೆ ನಾನು ಒಡೆಯನಾಗಿದ್ದೆ ! ಅದರ ಜತೆಯಲ್ಲಿ ಇದೊಂದು !

ನಾಲ್ಕು ಜನರಿದ್ದಲ್ಲಿ ನಾನು ಯಾವಾಗಲೂ ಅವರ ಗಮನ ಸೆಳೆಯುತಿದ್ದೆ ; ಅವರ ಮಾತು ಕತೆಯ ಕೇಂದ್ರವಾಗುತಿದ್ದೆ. ಮೊದಲಿನಿಂದಲೂ ಅದು ನನ್ನಲ್ಲಿ ಬೆಳೆದು ಬಂದ ಗುಣ ಇಲ್ಲವೆ ದೋಷ. ಇಪ್ಪತ್ತೊಂದು—ಇಪ್ಪತ್ತೆರಡು—ಇಪ್ಪತ್ತಮೂರು ವರ್ಷಗಳ ವಯಸ್ಸಿನ ಆ ಅವಧಿಯಲ್ಲೂ ಇತರರ ಮಾತು ಕತೆಗಳಿಗೆ ನಾನು ಕೇಂದ್ರವಾಗುತಿದ್ದೆ. ನನ್ನ ವೃತ್ತಿಯಲ್ಲಿ ಏಕಾಕಿ ಜೀವನ ಸಾಧ್ಯವಿರಲಿಲ್ಲ. ನಾನು ಎಷ್ಟು ಪ್ರಯತ್ನಪಟ್ಟರೂ ವೃತ್ತಿಬಾಂಧವರ ಬಳಗದಿಂದ ದೂರವಿರುವುದಕ್ಕಾಗಲಿಲ್ಲ.

ಒಂದು ದಿನ ನಮ್ಮ ನಗರದ ದೊಡ್ಡ ಬೀದಿಯಲ್ಲಿ ಆ ಮಾರವಾಡಿಯನ್ನು ಕಂಡೆ. ಕಂಡವನೇ ಅವನನ್ನು ಹಿಂಬಾಲಿಸಿದೆ. ಆತ ಒಂದು ಹೋಟೆಲಿನ ಒಳ ಹೊಕ್ಕು ಮೂಲೆಯಲ್ಲಿ ಕುಳಿತು ಕಾಫಿ ತರಿಸಿದ. ಅವನು ನನಗೆ ಕಾಣಿಸುವಷ್ಟು ದೂರದಲ್ಲಿ ಕುಳಿತು, ಅವನನ್ನೆ ನಾನು ದಿಟ್ಟಿಸುತಿದ್ದೆ. ಆತ ಕೋಟಿನ ಒಳಜೇಬಿನಿಂದ ಒಂದು ಪುಟ್ಟ ಗಂಟನ್ನು

ಹೊರತೆಗೆದು ತೆರೆದು, ನೂರು ನೂರರ ಅದೆಷ್ಟೋ ನೋಟುಗಳನ್ನು ಮೇಜಿಗೆ ಮರೆಯಾಗಿ ತೊಡೆಯ ಮೇಲಿರಿಸಿಕೊಂಡು ಎಣಿಸತೊಡಗಿದ. ಅವನ ತುಟಿಗಳು ಎಣಿಕೆಯ ಸಂಖ್ಯೆಯೊಡನೆ ಚಲಿಸುತ್ತಿದ್ದರೂ ದೃಷ್ಟಿ ಸುತ್ತಮುತ್ತಲಿನ ಜನರ ಮೇಲೆಲ್ಲಾ ಓಡಾಡುತ್ತಿತ್ತು.

ಕಾಫಿ ಮುಗಿಯಿತು. ಬ್ಯಾಂಕಿನ ಕಡೆಗೆ ಆತ ಹೊರಟಿರ ಬೇಕೆಂದು ನಾನು ಊಹಿಸಿಕೊಂಡೆ. ಹಿಂದೂ ಮುಂದೂ ದೃಷ್ಟಿ ಹಾಯಿಸುತ್ತ ಆ ಮಾರವಾಡಿಯನ್ನು ಹಿಂಬಾಲಿಸಿದೆ. ವಯಸ್ಸಾಗಿದ್ದ ವ್ಯಕ್ತಿ. ಬೆನ್ನು ಸ್ವಲ್ಪ ಬಾಗಿತ್ತು. ಆದರೂ ಇನ್ನೂ ಇಪ್ಪತ್ತು-ಮೂ ವತ್ತು ವರ್ಷಗಳ ಕಾಲ ನಮ್ಮ ಊರಿನಲ್ಲೆ ಆತ ವ್ಯಾಪಾರ ಮಾಡುವು ದರಲ್ಲಿ ಸಂಶಯವಿರಲಿಲ್ಲ. ಐದು ನಿಮಿಷಗಳ ಕಾಲ ನಡೆದ ಮೇಲೆ ಬ್ಯಾಂಕು ಬಂತು. ನಾನು ವೇಗವಾಗಿ ಹೆಜ್ಜೆ ಇಟ್ಟೆ. ಆತ ಒಳ ಹೋಗಿ ಡಿಪಾಜಿಟ್ ಕೌಂಟರಿನ ಬಳಿ ನಿಂತು, ಹಣವನ್ನು ಹೊರ ತೆಗೆದ........

ಒಂದು ಕ್ಷಣದಲ್ಲೆ ಆ ಕೆಲಸವಾಗಿತ್ತು. ಆ ನೋಟುಗಳ ಮೇಲೆ ನಾನು ಕೈ ಇರಿಸಿದ್ದೆ. ಆದರೆ ಒರಟಾದ ಇನ್ನೊಂದು ಕೈ ನನ್ನದನ್ನು ಬಿಗಿಹಿಡಿದಿತ್ತು. ನಾನು ಗಾಬರಿಗೊಂಡು ಮುಖವೆತ್ತಿದೆ. ಆ ಕೈ ಸರ ಕ್ಕನೆ ಹಿಂದಕ್ಕೆ ಸರಿಯಿತು. ಆತ ನನಗೆ ಅಡ್ಡಿಯಾಗಲಿಲ್ಲ. ಮಾರ ವಾಡಿಯ ಗಂಟಲಿನಿಂದ ಪ್ರಾಣಹೋಯಿತೇನೋ ಎಂಬಂತೆ ಆರ್ತ ನಾದ ಹೊರಟಿತು. ಅದನ್ನು ಕೇಳಲು ನಾನು ಅಲ್ಲಿರಲಿಲ್ಲ.

ಕೈಯನ್ನು ಷರಾಯಿಯ ಜೇಬಿನೊಳಕ್ಕೆ ಇಳಿಬಿಟ್ಟಿದ್ದೆ. ಇಷ್ಟು ಅನುಭವಿಯಾದರೂ ಹೃದಯ ಡವಡವನೆ ಹೊಡೆದುಕೊಳ್ಳುತಿತ್ತು. ಆ ಇನ್ನೊಂದು ಕೈ—. ಆ ವ್ಯಕ್ತಿ ಪೋಲೀಸು ಖಾತೆಗೆ ಸಂಬಂಧಿಸಿದವ ನಾಗಿರಲಿಲ್ಲ. ಹಾಗೇನಾದರೂ ಆಗಿದ್ದರೆ, ಸೆಂಟ್ರಲ್ ಜೈಲಿನಲ್ಲಿ ವಿರಮಿಸುವ ಅವಕಾಶ ನನಗೆ ದೊರೆಯುತ್ತಿತ್ತು.

ಹಿಂತಿರುಗಿ ನೋಡದೆ ನಾನು ಸಂದಿಗೊಂದಿಗಳಲ್ಲಿ ಹಾದು ಹೋದೆ. ಹೆಚ್ಚು ಹೊತ್ತು ನಾನು ನಡೆಯುತ್ತಿರಬಾರದು. ಯಾವು ದಾದರೂ ಹೋಟೆಲಿನ ಒಳಹೊಕ್ಕು ಸ್ವಲ್ಪ ಕಾಲ ಅಲ್ಲಿ ಕುಳಿತಿರಬೇಕು.

ನಾನು ಸುರಕ್ಷಿತನೆ? ನನ್ನನ್ನು ಯಾರೂ ಹಿಂಬಾಲಿಸುತ್ತಿಲ್ಲ, ಅಲ್ಲವೆ? ಆ ಬಗ್ಗೆ ನನ್ನಲ್ಲಿ ಬಗೆಹರಿಯದ ಶಂಕೆಗಳಿದ್ದುವು. ಆ ವ್ಯಕ್ತಿ—ಆ ವ್ಯಕ್ತಿ........

ಅಲ್ಲಿದ್ದೊಂದು ಹೋಟೆಲು ನನಗೆ ಆಹ್ವಾನವಿತ್ತಿತು. ಆದಷ್ಟು ಗಂಭೀರವಾದ ನಡಿಗೆಯಲ್ಲಿ ಒಳ ಪ್ರವೇಶಿಸಿ, ಖಾಲಿಯಾಗಿದ್ದೊಂದು ಮೇಜಿನ ಬಳಿ ಸಾಗಿದೆ

"ಏನು ಕೊಡ್ಲಿ ಸಾರ್?"

"ಏನಪ್ಪಾ?"

ಆ ಹುಡುಗನಿಗೆ ಸ್ವಲ್ಪ ನಗು ಬಂತು. ವಿಚಾರದಲ್ಲಿ ಮುಳು ಗಿದ್ದ ನನಗೆ ಆ ಪ್ರಶ್ನೆ ಕೇಳಿಸಿರಲಿಲ್ಲ. ನನ್ನ ತಪ್ಪು ನನಗೆ ಮನವರಿಕೆ ಯಾಗಿ ಮುಗುಳ್ನಕ್ಕೆ.

"ಬಿಸಿ ಏನಾದರೂ ಇದೆಯೊ?"

"ವಾಂಗಿ ಭಾತ್ ಇದೆ ಸಾರ್."

"ಸರಿ, ತಗೊಂಡು ಬಾ."

ಹುಡುಗ ಹೊರಟನೊ ಇಲ್ಲವೊ. ಆಗಲೆ ಆ ಸ್ವರ ಕೇಳಿಸಿತು:

"ಎರಡು ಪ್ಲೇಟು."

ಹುಡುಗ ಮುಖ ತಿರುಗಿಸಿ ನನ್ನನ್ನು ನೋಡಿದ.

ಇಲ್ಲ, ತಪ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಆ ವ್ಯಕ್ತಿ ಹಿಂಬಾ ಲಿಸಿಕೊಂಡು ಬಂದಿದ್ದ. ಪೋಲೀಸರಾಗಿದ್ದರೆ ಹಿಂಬಾಲಿಸಲಾರದೆ, ಯಾವುದೊ ಗಲ್ಲಿಯಲ್ಲಿ ದಾರಿ ತಪ್ಪಿ ಬೇಸತ್ತು ಹೋಗುತ್ತಿದ್ದರು. ಅವನು ಪೋಲೀಸರವನಾಗಿರಲಿಲ್ಲ.

ನಾನು ಮುಗುಳು ನಗಲು ಯತ್ನಿಸಿದೆ:

"ಹೌದು, ಎರಡು ಪ್ಲೇಟು."

ಆತ ನನಗಿಂತಲೂ ಹತ್ತು ಹದಿನೈದು ವರ್ಷಗಳ ಮಟ್ಟಿಗೆ ದೊಡ್ಡವನಾಗಿದ್ದ. ಎತ್ತರವಾದ ಕಪ್ಪು ಬಣ್ಣದ ದೇಹ. ಮುಖದ ಮೇಲೆ ಸಿಡುಬಿನ ಕಲೆಗಳಿದ್ದುವು. ಗೆರೆ ಮೀಸೆ, ಕ್ರೌರ್ಯದ ನೋಟ ವನ್ನು ಮುಖಕ್ಕೆ ಕೊಟ್ಟಿತ್ತು. ಕೆಂಪಗಿದ್ದುವು ಕಣ್ಣುಗಳು. ರಕ್ತ ಹೀನ

ವಾದ ತುಟಿಗಳು, ಒಣಗಿದ ತೊಂಡೇ ಕಾಯಿಯಾಗಿದ್ದುವು. ಅವನು ಹಳೆಯ ಸ್ನೇಹಿತನಂತೆ ನಕ್ಕ. ಆ ರೀತಿ ನಕ್ಕಾಗ ಒಂದು ರೀತಿಯ ಮೃದುತನ ತೋರಿಸಿಕೊಳ್ಳುತಿತ್ತು. ಆ ಹಲ್ಲುಗಳು ದೊಡ್ಡವಾಗಿ ದ್ದುವು—ಅವುಗಳಲ್ಲೆರಡು ಬಂಗಾರದ ಹಲ್ಲುಗಳು.

"ಗಾಬರಿಯಾಯ್ತಾ ?"

"ಈವರೆಗೆ ಹಾಗಂದರೇನೂಂತ ತಿಳಿದಿಲ್ಲ."

ಅವನ ಪದೋಚ್ಚಾರಣೆ ಸರಳವಾಗಿರಲಿಲ್ಲ. ಅವನದು ಕಲಿತ ಕನ್ನಡ. ಸ್ವಲ್ಪ ರಾಗವಾಗಿರುತಿತ್ತು. ಆತ, ತಮಿಳನೊ ತೆಲುಗನೊ ಮಲೆಯಾಳಿಯೊ ಸುಲಭವಾಗಿ ಹೇಳುವುದು ಸಾಧ್ಯವಿರಲಿಲ್ಲ.

ನನ್ನನ್ನು ಸೂಕ್ಷ್ಮವಾಗಿ ಆತ ನಿರೀಕ್ಷಿಸುತ್ತಿದ್ದ.

ತಿಂಡಿ ಮತ್ತು ನೀರು ಬಂದುವು.

"ಕಾಫಿ" ಎಂದೆ, ಹುಡುಗನನ್ನು ಉದ್ದೇಶಿಸಿ.

ಆ ವ್ಯಕ್ತಿ ಗೊಣಗಿತು.

"ಈ ಬ್ರಾಹ್ಮಣರ ಕಾಫಿ ಕುಡಿದು ಸಾಕಾಯಿತು. ಒಂದಿಷ್ಟು ಬೀರ್ ಸಿಕ್ಕಿದ್ದರೆ—?"

ನಾನು ಮಾತನಾಡಲಿಲ್ಲ.

ಹೊರ ಹೊರಟಾಗ, ಅವನು ಬಿಲ್ ತೆತ್ತ. ಬಹಳ ದಿನಗಳಿಂದ ಪರಿಚಯವಿದ್ದವರ ಹಾಗೆ ನಾವು ನಡೆದೆವು. ಒಂದು ಜಟಕಾ ಮಾಡಿ ಕೊಂಡು ನಾಲ್ಕಾರು ಮೈಲಿ ದೂರ ಹೋದೆವು........ನನ್ನ ಮುಂದಿದ್ದ ಹಾದಿ ಸ್ಪಷ್ಟವಾಗಿತ್ತು. ಅದು ಪ್ರಾಯಶಃ ಜನತೆ ಎಲ್ಲಾ ಕಾಲ ದಿಂದಲೂ ತುಳಿದು ಬಂದಿರುವ ಹಾದಿ. ಅದು ವೃತ್ತಿಗೆ ಸಂಬಂಧಿಸಿದ ಸಾಂಘಿಕ ಜೀವನ.

ಆ ಮಟ ಮಟ ಮಧ್ಯಾಹ್ನ, ಉತ್ತರದ ಆಟದ ಬಯಲಿನ ಮೂಲೆಯಲ್ಲಿ, ಮರದ ನೆರಳಿನಲ್ಲಿದ್ದ ಕಲ್ಲು ಬೆಂಚಿನ ಮೇಲೆ ಕುಳಿತೆವು.

"ನಿನಗೇನೂ ಹೇಳಬೇಕಾದ್ದಿಲ್ಲ. ವೃತ್ತಿಯ ನಿಯಮ ನಿನಗೆ ಗೊತ್ತಿರಬೇಕು. ನೋಡೋದಿಕ್ಕೆ ನೀನು ಹುಡುಗನ ಹಾಗಿದ್ದರೂ ಕಸಬಿನಲ್ಲಿ ಪಳಗಿದ ಕೈಯೇ ಸರಿ."

ಅವನ ಹೊಗಳಿಕೆ ಹಿತಕರವಾಗಿತ್ತು. ಆದರೆ ಅದು ಬೆದರಿಕೆಯ ಗುಡುಗೂ ಬೆರೆತಿದ್ದ ಧ್ವನಿ.

"ನಿನ್ನ ಪಾಲು ತಗೋ," ಎನ್ನುತ್ತಾ, ನೋಟುಗಳನ್ನು ಎಣಿಸಿದೆ. ಒಬ್ಬೊಬ್ಬರ ಪಾಲಿಗೆ ಆರುನೂರ ಐವತ್ತು ಬಂತು.

ಆತ ಮೌನವಾಗಿ ಆ ಹಣವನ್ನು ತನ್ನ ಕಿಸೆಗೆ ಸೇರಿಸಿಕೊಂಡ.

"ದುಡ್ಕೊಡ್ಬೇಕಾಯ್ತೂಂತ ಸ್ವಾಮಿಗೆ ದುಃಖವಾಗ್ತಾ ಇರಬೇಕು."

"ನಾನು ಸ್ವಾಮಿಯಲ್ಲ. ನನಗೆ ದುಃಖವೂ ಇಲ್ಲ. ನನ್ನ ಹೆಸರು ಶೇಖರ್."

"ಓ! ನಿಜವಾದ ಹೆಸರಾ?"

ಅವಮಾನವಾದವರ ಹಾಗೆ ಅವನನ್ನು ನೋಡಿದೆ.

"ಹೌದು, ಪೂರ್ತಿಯಾಗಿ ಚಂದ್ರಶೇಖರ್ ಅಂತ. ಅದು, ಪೋಲೀಸರು ದಾಖಲೆ ಮಾಡಿಕೊಂಡಿರೋ ಮೂಲ ಹೆಸರು. ಬೇರೆಯೂ ಇವೆ. ಹೇಳ್ಲೇನು?"

"ಬೇಡ........ಅಲ್ಲಾ, ಇಷ್ಟಕ್ಕೆಲ್ಲ ಸಿಟ್ಟಾದರೆ ಹೇಗೆ?"

"................"

"ಇನ್ಮುಂದೆಯೂ ನಾವು ಸ್ನೇಹಿತರಾಗಿರೋಣವೊ?"

"ಹೂಂ."

"ಎಲ್ಲಿ, ತಾ ಕೈ."

ಮತ್ತೊಮ್ಮೆ ಅವನ ಬಲಗೈ ನನ್ನದನ್ನು ಸೋಂಕಿತು. ಆ ಬೆರಳುಗಳು ನೀಳವಾಗಿ ಕುರೂಪವಾಗಿದ್ದುವು. ಹಿಂಗೈಯ ಮೇಲು ಭಾಗದಲ್ಲಿ ನರಗಳು ಸಿಕ್ಕುಗಟ್ಟಿದ್ದುವು.

ನಾನು ಮತ್ತು ಚಲಂ ಸ್ನೇಹಿತರಾದುದು ಹಾಗೆ. ಆ ಗೆಳೆತನ ಅಲ್ಲಿಗೇ ನಿಲ್ಲಲಿಲ್ಲ. ಅವನಿಗೆ ಮೂವರು ಸಂಗಡಿಗರಿದ್ದರು. ಅವರಿಗೆಲ್ಲಾ ಆತನೇ ನಾಯಕ. ಆ ಮೂವರು ಆತ ಹೇಳಿದ್ದನ್ನು ಮಾಡುವ, ಅಕ್ಷರಶಃ ಪಾಲಿಸುವ, ಭಟರಾಗಿದ್ದರು. ಒಂಟಿ ಜೀವವಾಗಿದ್ದ ನಾನು

ಅವರ ಸಂಗದಲ್ಲಿ ಒಂದು ರೀತಿಯ ಸಮಾಧಾನವನ್ನು ಪಡೆದೆ. ಅಲ್ಲಿ ಅವರೊಡನೆ ಮುಖವಾಡ ಧರಿಸಿ ಮಾತನಾಡಬೇಕಾಗಿರಲಿಲ್ಲ. ಮಾತು ಮಾತಿಗೂ ರಹಸ್ಯ ಜೀವಿಯಾಗಿ ಸುಳ್ಳಿನ ಸರಮಾಲೆ ನೇಯುಬೇಕಾಗಿರಲಿಲ್ಲ.

ಅವರು ಬಲು ಸುಲಭವಾಗಿ ನನ್ನನ್ನು ಪ್ರೀತಿಸಿದರು. ನಾನು ಅವರೆಲ್ಲರಿಗಿಂತ ಚಿಕ್ಕವನಾಗಿದ್ದೆ. ಆದರೆ ನನಗೆ ಬರುತಿದ್ದ ಓದು ಬರೆಹ ವಯಸ್ಸಿನ ಅಂತರವನ್ನು ಕಡಿಮೆ ಮಾಡಿತ್ತು. ಅಕ್ಷರಗಳ ಮಾತು ಬಂದಾಗ, ನನ್ನ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಅವರು ಚಕಾರವೆತ್ತುತ್ತಿರಲಿಲ್ಲ.

ಅವರಲ್ಲೊಬ್ಬ ಮುಸಲ್ಮಾನರವನಿದ್ದ. ಅವನೂ ಒಂದು ಕಾಲದಲ್ಲಿ ಬೊಂಬಾಯಿಯಲ್ಲಿದ್ದನಂತೆ. ನಾನು ದೇಶ ಪರ್ಯಟನ ಮಾಡಿದವನೆಂದು ತಿಳಿದ ಮೇಲೆ ನನ್ನ ಬಗ್ಗೆ ಅವನಿಗಿದ್ದ ಗೌರವ ಇಮ್ಮಡಿಯಾಯಿತು. ತನ್ನ ವಿಶಿಷ್ಟ ಹಿಂದೂಸ್ಥಾನಿಯಲ್ಲಿ ಅವನು ಹೇಳಿದ:

"ಶೇಖರ್ ಸಾಹೆಬ್. ನಾನು ನಿಮ್ಮನ್ನ ಬಾಷ ಎಂತಲೇ ಕರೀತೀನಿ."

"ಅದು ಹ್ಯಾಗಾದೀತು? ಬಾಷ ಎನ್ನೋದು ನನ್ನ ಸ್ನೇಹಿತ ಅಮೀರನ ಹೆಸರು."

"ಅದಕ್ಕೇನಂತೆ? ಅವನು ಬೊಂಬಾಯಿ ಬಾಷ. ನೀವು ಇಲ್ಲಿಯವರು."

ಹೀಗೆ ನನ್ನ ಹಲವು ಹೆಸರುಗಳಿಗೆ ಮತ್ತೊಂದು ಸೇರಿತು.

ಆದರೆ, ಯಾವ ಹೆಸರಾದರೇನು? ನಾವೆಲ್ಲ ಒಂದೇ ರೀತಿಯಾಗಿದ್ದೆವು. ಹೆಸರುಗಳಲ್ಲಿ ವೈವಿಧ್ಯವಿದ್ದರೂ ನಮ್ಮ ಮನೋಪ್ರವೃತ್ತಿಯಲ್ಲೂ ವ್ಯಕ್ತಿತ್ವದಲ್ಲೂ ಏಕರೂಪತೆ ಇತ್ತು. ಅಷ್ಟೇ ಅಲ್ಲ, ನಮ್ಮ ಬಾಲ್ಯದ ಇತಿಹಾಸದಲ್ಲೂ ಸಾಮ್ಯವಿತ್ತು.

ಆ ಚಲಂ, ನನಗಿಂತ ಹೆಚ್ಚು ಚಳ್ಳೇಕಾಯಿ ತಿಂದವನು. ಅವನು ತಂದೆಯ ಮುಖವನ್ನೂ ಕಂಡವನಲ್ಲ; ತಾಯಿಯ ಮುಖವನ್ನೂ ಕಂಡವನಲ್ಲ. ಅವನು ತೊಟ್ಟಿಲ ಮಗುವಾಗಿರಲಿಲ್ಲ. ಕಸದ

ತೊಟ್ಟಿಯ ಕೂಸಾಗಿದ್ದ. ಮದರಾಸಿನ ಬೀದಿಗಳಲ್ಲಿ ಹಾಗೆ ಬೆಳೆದ ಚಲಂ, ಒಂದು ದಿನವೂ ಶಾಲೆಗೆ ಮಣ್ಣು ಹೊತ್ತಿರಲಿಲ್ಲ. ದೊಡ್ಡ ಮನುಷ್ಯನಾಗಲು ಯತ್ನಿಸೆಂದು ಯಾವ ಹಿರಿಯರೂ ಅವನಿಗೆ ಪ್ರೇರೇಪಿಸಿರಲಿಲ್ಲ. ನಡು ನಡುವೆ ಅವನು ಹೊಟ್ಟೆಯ ಪಾಡಿಗಾಗಿ ಆ ಕೆಲಸ ಈ ಕೆಲಸ ಕೈಕೊಂಡ. ಆದರೆ ಆಗಾಗ್ಗೆ ಅವನ ಅತಿಥಿಯಾಗುತಿದ್ದ ದೀರ್ಘ ಉಪವಾಸ, ಕೈ ಚಳಕದ ವೃತ್ತಿಗೆ ಅವನನ್ನು ತಳ್ಳಿತು. ಆ ಪ್ರತಿಭೆ ಆವನಲ್ಲಿ ಲೀಲಾಜಾಲವಾಗಿ ಪ್ರಕಟಗೊಂಡು ಅವನ ವೃತ್ತಿಯಾಗೂಡಿತು.

"ಜೀವನ ಒಮ್ಮೆಯೂ ನನ್ನನ್ನು ಕಂಡು ಮುಗುಳ್ನಕ್ಕಿದ್ದಿಲ್ಲ ಶೇಖರ್. ಹಾಗಿರೋದರಿಂದ ಮುಗುಳ್ನಗೋದು ನನಗಾದರೂ ಹ್ಯಾಗೆ ತಿಳಿದಿರ್ಬೇಕು ಹೇಳು?........"

"ಎಲ್ಲರ ಕತೆಯೂ ಹಾಗೆಯೇ."

ಹಾಗೆ ಉತ್ತರ ಕೊಡುತ್ತ ನಾನು ಅನುಭವದಿಂದ ಕಂಡು ಬಂದುದನ್ನೆಲ್ಲ ಸಾಮಾನ್ಯ ನಿಯಮವಾಗಿ ತೋರಿಸಲು ಯತ್ನಿಸುತ್ತಿದ್ದೆ. ಆದರೆ ಆ ತತ್ವಜ್ಞಾನ ಚಲಂಗೆ ಅರ್ಥವಾಗುತ್ತಿರಲಿಲ್ಲ. ಆತ ಮಾತುಗಾರನಾಗಿರಲಿಲ್ಲ.

ಚಲಂನನ್ನು ನಮ್ಮ ಮನೆಗೆ ಆಹ್ವಾನಿಸಿದೆ.

"ಇಲ್ಲಿಯೇ ಇರಬಹುದಲ್ಲಾ," ಎಂದೆ.

ಅವನು ಒಪ್ಪಲಿಲ್ಲ.

"ನಾವೆಲ್ಲಾ ಜತೆಯಾಗಿ ಇರೋದು ಸರಿಯಲ್ಲ ಶೇಖರ್. ಅದು ಅಪಾಯದ ಹಾದಿ. ನಮ್ಮ ಸಂಘಟನೆ ಯಾವಾಗಲೂ ವಿಂಗಡ ವಿಂಗಡವಾಗಿ ಬೇರೆ ಬೇರೆಯಾಗಿ ಇರಬೇಕು."

ಅದು, ಅನುಭವದ ಆಳದಿಂದ ಬಂದ ಮಾತು.

"ಸರಿ, ಚಲಂ."

ಚಲಂ ನಮ್ಮ ಮನೆಯಲ್ಲಿ ಇರಲು ಇಚ್ಛಿಸಲಿಲ್ಲ. ಆದರೆ ಆತ, ನಮ್ಮ ಊರಿನಲ್ಲಿ ಇದ್ದಾಗಲೆಲ್ಲ ಒಬ್ಬಾಕೆಯ ಮನೆಯಲ್ಲಿರು ತಿದ್ದ. ಊರ ವಿಸ್ತರಣದಲ್ಲಿ ಆ ಮನೆಯಿತ್ತು.

ಆ ವಿಷಯ ನನಗೆ ತಿಳಿದ ಬಗೆ ಹೀಗೆ.

ಬೇಸಗೆಯ ವಿಶ್ರಾಂತಿಗಾಗಿ ಹೈದರಾಬಾದಿನಿಂದ ಇಲ್ಲಿಗೆ ಬಂದು ದೊಡ್ಡದೊಂದು ಬಂಗಲೆಯಲ್ಲಿ ಆಗರ್ಭ ಶ್ರೀಮಂತನೊಬ್ಬ ಇಳಿದು ಕೊಂಡಿದ್ದ ವಿಷಯ ನನಗೆ ತಿಳಿಯಿತು. ಆತ ಬಂದು ಎರಡು ದಿನ ಗಳೂ ಆಗಿರಲಿಲ್ಲ. ಅವನ ಊಳಿಗದವರು ಇನ್ನೂ ಬಂದಿರಲಿಲ್ಲ. ಆ ರಾತ್ರೆಯೇ ಕಾರ್ಯಾಚರಣೆ ಮಾಡಿದರೆ ಸುಲಭವಾಗಿ ಬೇಟೆ ಬಲೆಗೆ ಬೀಳುವ ಹಾಗಿತ್ತು. ನಾನು ಗುಂಪಿನವರಲ್ಲಿ ಒಬ್ಬನನ್ನು ಸಂಧಿಸಿ, "ಈಗಿಂದೀಗ ಚಲಂನನ್ನು ನೋಡಬೇಕು," ಎಂದೆ.

ಉತ್ತರ ನಿಧಾನವಾಗಿ ಬಂತು:

"ಸಾಯಂಕಾಲ ಐದು ಘಂಟೆಗೇನೇ ಉಸ್ತಾದ್ ಬರೋದು."

"ಇಲ್ಲ. ಅಷ್ಟು ತಡಮಾಡೋದು ಸಾಧ್ಯವಿಲ್ಲ. ಬಹಳ ಜರೂರು ವಿಷಯ."

"ಇನ್ನೂ ಒಂದು ಘಂಟೆ ಹೊತ್ತು ಇಲ್ಲೇ ಇರಿ. ಹೇಳಿ ಕಳಿಸ್ತೀನಿ"

ಬೇರೊಬ್ಬನನ್ನು ಆತ ಸೈಕಲಿನ ಮೇಲೆ ಕಳುಹಿಸಿಕೊಟ್ಟ.

ಆ ದೂತ ವಾಪಸು ಬಂದವನು ಸಂದೇಶ ತಂದ.

"ಶೇಖರ್, ನಿಮ್ಮನ್ನ ಅಲ್ಲಿಗೇ ಬರಹೇಳಿದ್ದಾರೆ."

ಹಾಗೆ ನಾನು, ಚಲಂ ವಾಸವಾಗಿದ್ದ ಮನೆಗೆ ಹೋದೆ. ಪುಟ್ಟ ದಾಗಿದ್ದರೂ ಸೊಗಸಾದ ಮನೆ. ಮೂವತ್ತು ಮೂವತ್ತೈದು ರೂಪಾಯಿ ಬಾಡಿಗೆ ಬರುವಂಥಾದ್ದು—ಆಗಿನ ಕಾಲದ ಬಾಡಿಗೆ.

ಹೊರಬಾಗಿಲನ್ನು ನಾನು ಸಮಾಪಿಸುತಿದ್ದಾಗಲೇ ಚಲಂ ಸ್ವರ ಕೇಳಿಸಿತು.

"ಬಾ ಶೇಖರ್, ಒಳಕ್ಕೆ ಬಾ."

ನಾನು ಒಳಹೋದೆ. ತಪ್ಪು ತಪ್ಪಾಗಿ ಮುದ್ದು ಮುದ್ದಾಗಿದ್ದ ತೊದಲು ಮಾತಿನ ಎಳೆಯ ಮಗುವೊಂದನ್ನು ಎತ್ತಿಕೊಂಡು ಚಲಂ ನನಗೆ ಸ್ವಾಗತಬಯಸಿದ. ಚಲಂ ಮತ್ತು ಮಗು! ಇದು ನನ್ನ ಊಹೆಗೆ ನಿಲುಕದ ವಿಷಯವಾಗಿತ್ತು. ಆದರೂ ನನ್ನ ಭಾವನೆಗಳನ್ನು

ತೋರಗೊಡದೆ ಮಗುವಿನತ್ತ ಕೈ ಬಾಚಿದೆ. ಆದರೆ ಅದು ನನ್ನ ಮುಖ ನೋಡಿ ಅಳತೊಡಗಿತು. ಚಲಂನ ವಿರೂಪ ಮುಖಕ್ಕೇ ತೆಕ್ಕೆ ಬಿದ್ದು ರಕ್ಷಣೆ ಪಡೆಯಿತು.

ಆ ಮನೆಯತನಕ ನನ್ನನ್ನು ಕರೆದುಕೊಂಡು ಬಂದಿದ್ದವನು ಹೊರಟು ಹೋಗಿದ್ದ. ನಾನೊಬ್ಬನೇ ಚಲಂ ಜತೆಯಲ್ಲಿ ಕುಳಿತೆ.

"ಏನು ವಿಷಯ?" ಎಂದ ಚಲಂ.

ನಾನು, ಹೇಳಲು ಅನುಮಾನಿಸುವವನಂತೆ, ತೆರೆದಿದ್ದ ಒಳ ಬಾಗಿಲಿನತ್ತ ನೋಡಿದೆ.

"ಪರವಾಗಿಲ್ಲ, ಹೇಳು."

ನಾನು ನನಗೆ ದೊರೆತಿದ್ದ ಮಾಹಿತಿಯನ್ನು ಅವನ ಮುಂದಿಟ್ಟೆ. ಆ ರಾತ್ರೆಯ ಕಾರ್ಯಕ್ರಮವನ್ನು ಇಬ್ಬರೂ ಗೊತ್ತುಮಾಡಿದೆವು.

ಒಮ್ಮೆಲೆ ಚಲಂ, ಮಗುವನ್ನು ಎತ್ತರಕ್ಕೆ ಎತ್ತುತ್ತಾ, ಮೈ ಕೊಡವಿ ಎದ್ದು ನಿಂತ. ಮಗು ಸದ್ದಿಲ್ಲದೆ ಇಶ್ಶಿ ಮಾಡಿತ್ತು.

"ಥೂ ಮುಂಡೇ ಗಂಡ! ಏ ಸಾವಿತ್ರಿ, ಇಲ್ನೋಡು. ನಿನ್ನ ಮಗ ಏನ್ಮಾಡಿದಾನೆ ನೋಡು!"

ತಮಿಳು ಮಾತು ಕೇಳಿ, ಮಗನನ್ನು ಎತ್ತಿಕೊಳ್ಳಲು ಸಾವಿತ್ರಿ ಬಂದಳು—ಮನೆಯೊಡತಿ. ವಯಸ್ಸಿನಲ್ಲಿ ನನಗಿಂತ ನಾಲ್ಕು ವರ್ಷ ದೊಡ್ಡವಳಿದ್ದಿರಬೇಕು. ಮಗುವಿನದೇ ಬಣ್ಣ. ನುಣುಪಾದ ಕೇಶ ರಾಶಿಯೊಂದು, ಮಾಟವಾಗಿ, ನಡುವಿನಿಂದಲೂ ಕೆಳಕ್ಕೆ ಇಳಿದಿತ್ತು. ಆಕೆ ನನ್ನನ್ನು ನೋಡಿ, "ನಿನ್ನ ವಿಷಯ ಕೇಳಿ ಬಲ್ಲೆ" ಎನ್ನುವ ಹಾಗೆ ಮುಗುಳ್ನಕ್ಕಳು. ನಾನು ಸುಮ್ಮನಿರಲಾರದೆ, ನನ್ನ ಹಣೆಯ ಕೆಳಕ್ಕೆ ಇಳಿದು ಬರುತಿದ್ದ ಕ್ರಾಪನ್ನು ಬದಿಗೆ ತೀಡುತ್ತಾ ಕುಳಿತೆ.

ಚಲಂ ಬಟ್ಟೆ ಬದಲಾಯಿಸಿದ.

ಆ ಮೇಲೆ ಚಹಾ ಬಂತು.

ಅಲ್ಲಿಂದ ಇಬ್ಬರೂ ಜತೆಯಾಗಿಯೇ ಹೊರಟೆವು. ಹಾದಿ ನಡೆಯುತ್ತಾ ಚಲಂ, ತನ್ನ ಮತ್ತು ಸಾವಿತ್ರಿಯ ಕತೆ ಕೇಳಿದ.

"ಹೆಸರೂ ಸಾವಿತ್ರಿ. ಗುಣದಲ್ಲೂ ಸಾವಿತ್ರಿ, ನಿನಗೆ ಗೊತ್ತಾ

ಶೇಖರ್ ? "

ಮದರಾಸಿನ ಸೂಳೆಗೇರಿಯೊಂದರಿಂದ ಮೂರು ವರ್ಷಗಳ ಹಿಂದೆ ಅವಳನ್ನು ಚಲಂ ರಕ್ಷಿಸಿ ತಂದು, ತನ್ನ ರಕ್ಷಣೆಯ ಆಶ್ರಯ ನೀಡಿದ್ದ. ಆಗಬಾರದ ಜಾಡ್ಯ ಅವಳಿಗೆ ಅಂಟಿ ಕೊಂಡಿತ್ತಂತೆ. ನೀರಿನಂತೆ ಹಣ ಸುರಿದು ಚಲಂ ಚಿಕಿತ್ಸೆ ಮಾಡಿದ. ಆ ಮೇಲೆ ಈ ಸಂಸಾರ, ಇಲ್ಲಿ, ನೆರೆ ಮನೆಯವರ ದೃಷ್ಟಿಯಲ್ಲಿ ಚಲಂ, ರಾತ್ರೆ ಹೊತ್ತು ಯಾವುದೋ ಫ್ಯಾಕ್ಟರಿಯಲ್ಲಿ ದುಡಿಯುವ ಮೇಸ್ತ್ರಿ ;—ಊರಲ್ಲಿ ಇಲ್ಲದೆ ಇದ್ದಾಗ, ಫ್ಯಾಕ್ಟರಿಯ ಪರವಾಗಿ ಸಂಚಾರ ಹೋಗಿರುವ ವ್ಯಾಪಾರ ಪ್ರತಿನಿಧಿ............

ಆ ದಿನದ ಕಾರ್ಯಕ್ರಮ ಯಶಸ್ವಿಯಾಗಿಯೆ ನಡೆಯಿತು. ಆಭರಣವನ್ನೆಲ್ಲ ಸರಾಫರ ಬೀದಿಯಲ್ಲಿದ್ದ ನನ್ನ ಪರಿಚಯದ ಅಂಗಡಿ ಗೊಯ್ದೆ. ಸಾವಿರ ಚಿಲ್ಲರೆ ಹಣವನ್ನು ನಾವು ಹಂಚಿಕೊಂಡೆವು.

.........ಗುಂಪಿನವರಲ್ಲಿ ಒಬ್ಬನನ್ನು ಟ್ಯಾಕ್ಸಿ ಡ್ರೈವರಾಗಿರುವಂತೆ ಚಲಂ ಏರ್ಪಾಟು ಮಾಡಿದ.

ಅದರ ಬಗ್ಗೆ ಸಮ್ಮತಿ ಸೂಚಿಸುತ್ತಾ, "ಅದೇನೋ ಸರಿ. ಆದರೆ ನನಗೊಂದು ಸೈಕಲ್ ಬೇಕು," ಎಂದೆ.

ಅವರಲ್ಲೊಬ್ಬ ಕೇಳಿದ:

" ಶೇಖರ್, ನಿನ್ನ ಹುಟ್ಟಿದ ಹಬ್ಬ ಯಾವತ್ತು ? "

" ನಿನ್ನದು ? "

" ಯಾವ ದಿನ ಹುಟ್ಟಿದೆನೋ ನೆನಪಿಲ್ಲ."

" ನನ್ನದೂ ಅಷ್ಟೆ."

"ಎಂಥಾ ಅನ್ಯಾಯ ! ಹುಟ್ಟು ಹಬ್ಬದ ದಿವಸ ನಿನಗೊಂದು ಸೈಕಲ್ ಉಡುಗೊರೆ ಕೊಡೋಣಾಂತಿದ್ರೆ...."

"ಓ ! ಅದಕ್ಕೇನು ? ಇವತ್ತು ಕೊಡೋ ಹಾಗಿದ್ರೆ ಇವತ್ತೇ ನನ್ನ ಹುಟ್ಟು ಹಬ್ಬ."

ಎಲ್ಲರೂ ನಕ್ಕರು.

ಆ ದಿನವನ್ನಲ್ಲ, ಮರು ದಿನವನ್ನು ನನ್ನ ಹುಟ್ಟು ಹಬ್ಬವನ್ನಾಗಿ ಆಚರಿಸಿದೆವು. ಕಳವು ಮಾಡಿದ್ದ ಮೂರು ಸೈಕಲುಗಳನ್ನು ಮಾರಿ ಹೊಸದೊಂದನ್ನು ಕೊಂಡು ತಂದು ನನಗೆ ಉಡುಗೊರೆ ಕೊಟ್ಟರು.

ನನ್ನನ್ನು ಬಾಷಾ ಎಂದು ಕರೆಯುತ್ತಿದ್ದವನು ಹೇಳಿದ:

"ಹುಟ್ಟು ಹಬ್ಬಕ್ಕೆ ಇಷ್ಟಾಯಿತು. ಬಾಷಾ ಏನಾದರೂ ಉಸ್ತಾದ್ ಹಾಗೆ ಸಂಸಾರ ಗಿಂಸಾರ ಮಾಡ್ಕೊಳ್ಳೋ ಹಾಗಿದ್ದರೆ ಒಂದು ಮೋಟಾರ್ ಕಾರ್ನೇಯ—"

"ಓ! ಹಾಗಾದರೆ ಈಗಲೇ ಯಾರನ್ನಾದರೂ ಕರ್ಕೊಂಡು ಬರ್ತೀನಿ."

........ಅಂತಹ ಮಾತು ಹಗುರವಾಗಿತ್ತು. ಅದಕ್ಕೆ ಅರ್ಥವಿರ ಲಿಲ್ಲ. ಆದರೂ ನಾನು ಒಬ್ಬನೇ ಉಳಿದಾಗ ಮನಸ್ಸು ಎಲ್ಲೆಲ್ಲೋ ಅಲೆಯುತಿತ್ತು. ಆ ಚಲಂ ಸಂಗಡಿಗರು ಕುಡಿಯುತ್ತಲಿದ್ದರು. ಸೂಳೆ ಗೇರಿಗೆ ಹೋಗಿ ಬರುತಿದ್ದರು. ಬಾಯಾರಿದಾಗ ಬೀದಿ ಕೊಳಾಯಿಗೆ ಕೈಯೊಡ್ಡಿದ ಹಾಗಿರುತಿತ್ತು—ಅವರು ಹೆಣ್ಣನ್ನು ಬಯಸುತ್ತಿದ್ದ ರೀತಿ.

ಆದರೆ, ಚಲಂ? ಅವನೇ ಹೇಳಿದಂತೆ ಹಿಂದೆ ಆತ, ಯಾವುದೋ ಸಮಾಧಾನಕ್ಕಾಗಿ, ದೊರೆಯದ ಯಾವುದೋ ತೃಪ್ತಿ ಗಾಗಿ, ಸ್ತ್ರೀಯನ್ನು ಬಯಸುತಿದ್ದ. ಹಲವು ವರ್ಷಗಳ ಅಂತಹ ಜೀವನ ಅವನಿಗೆ ಸಮಾಧಾನವನ್ನೂ ತಂದಿರಲಿಲ್ಲ, ತೃಪ್ತಿಯನ್ನೂ ತಂದಿರಲಿಲ್ಲ. ಅದರ ಫಲವಾಗಿಯೇ, ನಂಬಿ ಬಂದ ಸಾವಿತ್ರಿಯೊಡನೆ ಆತ ಸಂಸಾರ ಹೂಡಿದ.

ನನಗೆ ಅಂತಹ ಬಯಕೆಗಳಾಗುತ್ತಿರಲಿಲ್ಲ. ಆದರೆ ಪೂರ್ಣತೆಯ ಕಡೆಗೆ ಮಾನವ ಹೋಗುವುದೆಂದರೇನು? ಜೀವನದಲ್ಲಿ ಆತನಿಗೆ ಇರ ಬೇಕಾದ ಗುರಿ ಯಾವುದು? ಈ ಪ್ರಶ್ನೆಗಳು ಮನಸ್ಸಿನಲ್ಲಿ ಮೂಡಿದಾಗ ಹೆಣ್ಣು ಗಂಡಿನ ಸಮಸ್ಯೆ ನನ್ನನ್ನು ಕಾಡುತ್ತಿತ್ತು. ಆದರೆ ನನಗೊಂದೂ ಅರ್ಥವಾಗುತ್ತಿರಲಿಲ್ಲ. ನಾನು ಆ ಯೋಚನೆಯನ್ನೇ ಬಿಟ್ಟು ಕೊಡು ತ್ತಿದ್ದೆ.

ಬಿಡುವಿನ ಅವಧಿಯೆಲ್ಲಾ ಪುಸ್ತಕಗಳ ಸಂಗದಲ್ಲಿ ಕಳೆದು

ಹೋಗುತ್ತಿತ್ತು. ಹೆಚ್ಚು ಹೆಚ್ಚಾಗಿ ಬರತೊಡಗಿದ್ದ ಕನ್ನಡ ಪುಸ್ತಕಗಳು, ಎಷ್ಟು ಓದಿದರೂ ಮುಗಿಯದಂತಹ ಇಂಗ್ಲಿಷ್ ಪುಸ್ತಕಗಳು....

ಒಂದು ದಿನ ಹಾಗೆ ಪುಸ್ತಕ ಹಿಡಿದು ಕುಳಿತಿದ್ದಾಗ ಆ ಮಹಾನುಭಾವ ನಮ್ಮ ಮನೆಯ ಮೆಟ್ಟಲೇರಿ ಬಂದ. ತೀರ ಅಪರಿಚಿತವಾಗಿದ್ದ ಮುಖ.

"ಯಾರು? ಏನು ಬೇಕಾಗಿತ್ತು?"

"ತಮ್ಮ ಸಹವಾಸ ಲಾಭ, ಬಹಳ ದಿನಗಳಿಂದ ನಿಮ್ಮನ್ನ ಭೇಟಿಯಾಗ್ಬೇಕೂಂತಿದ್ದೆ."

"ನನ್ನ ಭೇಟಿ?"

"ತಾವು ಚಂದ್ರಶೇಖರ್ ಅಲ್ವೆ?"

"ಹೌದು."

"ತಮ್ಮ ಭೇಟಿಯೇ."

"ತಾವು ಯಾರೋ ಗೊತ್ತಾಗಲ್ಲಿಲ್ಲಪ್ಪ!"

ಅವನು ತನ್ನ ಪರಿಚಯ ಹೇಳಿದ. ಪೋಲೀಸು ಖಾತೆಯ-ಸ್ಪೆಷಲ್ ಬ್ರಾಂಚಿನಲ್ಲಿ ಅವನೊಬ್ಬ ಸಬ್ ಇನ್ಸ್‌ಪೆಕ್ಟರು. ಎಳೆ ವಯಸ್ಸಿನ ಹೊಸ ಉದ್ಯೋಗಿ. ಹಾಗೆ ಪರಿಚಯ ಮಾಡಿಕೊಡುತಿದ್ದಾಗಲೇ, ಅವನ ಸ್ವರದೊಳಕ್ಕೆ ಅಧಿಕಾರದ ದರ್ಪ ನುಸುಳಿಕೊಂಡಿತು. ನನ್ನ ಬಳಿ ಅರೆತೆರೆದು ಬೋರಲಾಗಿ ಬಿದ್ದಿದ್ದ ಡಿಕನ್ಸನ ಕಾದಂಬರಿಯೊಂದನ್ನು ಎತ್ತಿಕೊಂಡ.

"ಓ! The Great Expectations! ನಾನು ಕೂಡ ಇದನ್ನ ತುಂಬ ಮೆಚ್ಚಿಕೊಂಡಿದೀನಿ........ಐ ಸೀ........ನೀವು ತುಂಬ ಸಾಹಿತ್ಯ ಓದ್ತೀರಿ ಹಾಗಾದರೆ."

ನಾನು ಎಚ್ಚರವಾಗಿದ್ದೆ. ಈ ಬೆಸ್ತರವನು ಬಲೆ ಬೀಸಲು ನೀರಿನ ಆಳ ನೋಡುತಿದ್ದ ಹಾಗೆ ತೋರಿತು.

"ಚಂದ್ರಶೇಖರ್, ನಾನು ಹಳೇ ರೀತಿಯವನಲ್ಲ. ನೀವೇನೂ ಯೋಚಿಸ್ಬೇಕಾದ್ದಿಲ್ಲ. ನನ್ನಿಂದ ನಿಮಗೆ ಯಾವ ತೊಂದರೇನೂ ಆಗದು."

ಆ ಮಾತುಗಳಲ್ಲಿ ಕಪಟವಿತ್ತು. ಆ ಕಪಟವನ್ನು ಮರೆಸುವ ನಯನಾಜೂಕಿನ ಆಟ ನನ್ನೆದುರು ನಡೆಯುವ ಹಾಗಿರಲಿಲ್ಲ.

“ಸಾರ್, ನನ್ನ ವಿಷಯ ನಿಮಗೆ ಹ್ಯಾಗೆ ತಿಳೀತು?”

“ಅದೇನು ಮಹಾ ವಿಷಯ. ನಿಮ್ಮ ಫೈಲು ಬಂದಿತ್ತು. ಓದ್ಕೊಂಡೆ.”

“ನನ್ನಿಂದ ನಿಮಗೆ ಏನಾಗ್ಬೇಕಾಗಿದೆ?”

ಆ ಶನಿ ತೊಲಗಿದರೆ ಸಾಕು ಎನಿಸಿತು. ಮತ್ತೆ ಸ್ವರ ಬದಲಿ ಷುತ್ತ ಆತ ಹೇಳಿದ.

“ನೋ ನೋ ಮಿಸ್ಟರ್ ಚಂದ್ರಶೇಖರ್. ಆ ರೀತಿ ನೀವು ನನ್ನ ನೋಡ್ಬಾರ್ದು. ನಿಮ್ಮನ್ನ ಸ್ವತಃ ಕಂಡ ಹಾಗಾಯ್ತು. ನಿಮ್ಮ ಸ್ಟಡಿ, ನಿಮ್ಮ ಕಲ್ಚರು, ಪರಿಚಯವಾಯ್ತು. ನೀವು ನಿಜವಾಗ಼್ೂ ಸದ್ಗೃಹಸ್ಥರು.”

ಅವನ ಹೊಗಳಿಕೆ! ನಾನು ಮುಗಳ್ನಕ್ಕೆ. ಸಿಗರೇಟಿನ ಕೇಸ ನ್ನೆತ್ತಿಕೊಂಡೆ.

“ನಿಮ್ಮದು ಯಾವ ಬ್ರಾಂಡು? ಪ್ಲೇಯರ್ಸ್ ಆಗುತ್ತೇನು?”

“ಓ ಥ್ಯಾಂಕ್ಸ್. ನನ್ನದು ಬೇರೆಯೇ ಬ್ರಾಂಡಿದೆ.”

ಸಭ್ಯ ಗೃಹಸ್ಥನಾಗಿ ನಾನು ಸಿಗರೇಟು ಕೊಡ ಹೋಗಿದ್ದೆ. ಆದರೆ ಆ ಖದೀಮನಿಗೆ ಅದನ್ನು ಮುಟ್ಟುವ ಧೈರ್ಯವಿರಲಿಲ್ಲ. ನನ ಸಿಗರೇಟು ಎಲ್ಲಿ ವಿಷ ಮಿಶ್ರಿತವಾಗಿರುತ್ತದೋ ಎಂಬ ಭಯ ಅವನಿಗೆ! ಅಗ್ಗದ ಸೆಕ್ಸ್‌ಟನ್ ಬ್ಲಾಕ್ ಪತ್ತೇದಾರಿ ಕಾದಂಬರಿಗಳನ್ನೋದಿ ಆತ ದೊಡ್ಡ ವಿದ್ವನ್‌ಮಣಿಯಾಗಿದ್ದ.

ಬಲು ಪ್ರಾಮಾಣಿಕನ ಹಾಗೆ ಆತ್ಮೀಯತೆಯನ್ನು ನಟಿಸುತ್ತಾ, ಗೋಪ್ಯವಾಗಿ ಮಾತನಾಡ ಬಯಸಿದವನಂತೆ ಸ್ವರವಿಳಿಸುತ್ತಾ, ಆತ ಹೇಳಿದ.

“ಮಿಸ್ಟರ್ ಚಂದ್ರಶೇಖರ್. ನಾನು ನಿಜ ಹೇಳೋದೇ ವಾಸಿ. ಉದ್ದೇಶವಿಲ್ದೆ ಇಲ್ಲಿಗೆ ಬಂದಿಲ್ಲ........”

ನಾನು ಹೊಗೆಯುಗುಳುತ್ತಾ ಸೂಕ್ಷ್ಮವಾಗಿ ಆತನನ್ನೇ ನಿರೀಕ್ಷಿ

ಸುತ್ತಾ ಕುಳಿತೆ :

" ....ಇತ್ತೀಚೆಗೆ ಇಲ್ಲಿ ಹೈದರಾಬಾದಿನ ಶ್ರೀಮಂತರೊಬ್ಬರ ಮನೇಲಿ ಲೂಟಿ ಆದ ವಿಷಯ ನಿಮಗೆ ಗೊತ್ತಿರ್ಬೇಕು. ಪತ್ರಿಕೇಲಿ ನೀವು ವಿವರ ಓದಿರ್ಬೇಕು."

" ಓದಿರೋ ಹಾಗೆ ನೆನಪು."

" ದಟ್ಸಟ್. ನೋಡಿದಿರಾ ? ನೀವು ಓದಿರ್ತೀರಿ ಅಂತ ನನಗೆ ಗೊತ್ತಿತ್ತು.....ಅದೇ ಆ ಸಂಬಂಧದಲ್ಲಿ ನಿಮ್ಮಿಂದೇನಾದರೂ ನಮಗೆ ಸಹಾಯ—"

" ಬಹುಮಾನ ಜಾಹೀರು ಮಾಡಿದೀರ ? "

" ಬಹುಮಾನ ಇದ್ದೇ ಇದೆ. ಅದಕ್ಕಿಂತಲೂ ಹೆಚ್ಚು, ನಿಮ್ಮನ್ನ ನಮ್ಮ ಶಾಖೆಗೇ ಸೇರಿಸ್ಕೊಳ್ತೀವಿ. ಪ್ರಾಯೋಗಿಕ ಜ್ಞಾನ ಇರೋರು ನಮಗೆ ಬೇಕು."

" ಏನು ನಿಮ್ಮ ಊಹೆ ? "

" ಒಂದು ದೊಡ್ಡ ಗ್ಯಾಂಗೇ ಇಲ್ಲಿ ಕೆಲಸ ಮಾಡ್ತಿರೋ ಹಾಗಿದೆ. ಮದರಾಸಿಗೂ ಇಲ್ಲಿಗೂ ನೇರವಾದ ಸಂಬಂಧ ಇರೋ ಹಾಗಿದೆ."

" ಇಷ್ಟರಲ್ಲೇ ಏನಾದರೂ ಕಂಡು ಹಿಡಿದಿದೀರಾ ? "

" ಇನ್ನೂ ಇಲ್ಲ. ಅದಕ್ಕೇ ನಿಮ್ಮಿಂದೇನಾದರೂ ಸಹಾಯ—"

ಅವನ ಮುಖಕ್ಕೆ " ಥೂ " ಎಂದು ಉಗುಳಿ ಅಲ್ಲಿಂದ ಅವನನ್ನು ಹೊರ ಹಾಕಬೇಕು ಎಂದು ತೋರಿತು. ನಾನು ಎದ್ದು ನಿಂತೆ. ಮನಸ್ಸಿಲ್ಲದಿದ್ದರೂ ಆತನೂ ಏಳಬೇಕಾಯಿತು.

" ದಯವಿಟ್ಟು ಹೊರಟ್ಹೋಗಿ. ನನಗೆ ಈ ಕೊಲೆ ದರೋಡೆ ವಿಷಯಗಳಲ್ಲಿ ಆಸಕ್ತಿ ಇಲ್ಲ. ಶಾಂತಿಯಿಂದ ಒಂದಿಷ್ಟು ಕಾದಂಬರಿ ಗೀದಂಬರಿ ಓದೋಕೆ ಅವಕಾಶ ಕೊಡಿ."

" ಆ ಹಾ ! "

" ಹೌದು ; ಈಗ ಹೊರಟ್ಹೋಗಿ."

ಎಲ್ಲಾ ಯತ್ನಗಳೂ ವಿಫಲವಾದುವೆಂದು ತಿಳಿದು ಆತ ಕಿಡಿಕಿಡಿಯಾದ. ಜೇಬಿನಿಂದ ಕೈಬೇಡಿಗಳನ್ನು ಹೊರಗೆತೆದು, " ನೋಡಿ

ದೀರಾ ? '' ಎಂದ.

'' ಕಾಣಿಸ್ತಿದೆ. ವಾರಂಟ್ ಇದ್ದರೆ, ನಿಮಗೆ ಧೈರ್ಯವಿದ್ದರೆ, ಮುಂದಿನ ಕೆಲಸ ಮಾಡಬಹುದು.''

ಆತ ಮುಂದಿನ ಕೆಲಸ ಮಾಡಲಿಲ್ಲ.

ನಾನು ನಗುತ್ತಾ ಹೇಳಿದೆ.

'' ಹೀಗೆ ಮಾಡಿದರೆ ನೀವು ಇನ್ಸ್‌ಪೆಕ್ಟರ್ ಪದವಿಗೇರೋದು ಬಹಳ ನಿಧಾನವಾದೀತು. ಹತ್ತು ನಿಮಿಷಗಳಲ್ಲೇ ಎಷ್ಟೊಂದು ಬದಲಾಯಿಸ್ಬಿಟ್ಟರಿ .......! ''

ಅವನು ಮರುಮಾತನಾಡದೆ ಬೀದಿಗಿಳಿದು ಹೋದ. ನನ್ನ ಸಿಗರೇಟಿನ ಹೊಗೆ ಮೆಟ್ಟಲು ತನಕವೂ ಆತನನ್ನು ಹಿಂಬಾಲಿಸಿತು.

ಆ ಪ್ರಕರಣಕ್ಕೆ ಸಂಬಂಧಿಸಿ ಪೋಲೀಸರು ಮತ್ತೇನನ್ನೂ ಮಾಡಲು ಸಮರ್ಥರಾಗಲಿಲ್ಲ. ಆದರೆ ನನ್ನ ಚಟುವಟಿಕೆಗಳನ್ನು ಮಾತ್ರ ಹೆಚ್ಚು ಎಚ್ಚರದಿಂದ ಮಾಡಬೇಕಾಗುತಿತ್ತು. ಬಳಗದವರು ಯಾರನ್ನೂ ಹಗಲು ಹೊತ್ತು ಭೇಟಿಯಾಗುವುದು ಸಾಧ್ಯವಿರಲಿಲ್ಲ.

ಈ ಅವಧಿಯಲ್ಲಿ, ಹೆಚ್ಚು ಹೆಚ್ಚಾಗಿ ಸಿಗರೇಟು ಸೇದುವುದು ನನ್ನಗೊಂದು ಚಟವಾಯಿತು. ಪುಸ್ತಕಗಳು ಮತ್ತು ಸಿಗರೇಟು. ಚಲಂ, ನನ್ನ ಓದುವ ಹವ್ಯಾಸದ ಬಗ್ಗೆ ಗೇಲಿ ಮಾಡುತ್ತಿರಲಿಲ್ಲ. ಆದರೆ ಹಲವೊಮ್ಮೆ ಮಾಡಬೇಕಾದ ಕೆಲಸವನ್ನೂ ಮರೆತು ನಾನು ಓದುವುದರಲ್ಲೇ ತಲ್ಲೀನನಾದಾಗ ಮಾತ್ರ, ಅವನಿಗೆ ಕಸಿವಿಸಿಯಾಗುತಿತ್ತು. ಹೀಗಿದ್ದರೂ ಒಮ್ಮೆಯೂ ಕೆಟ್ಟ ಮಾತನ್ನು ಅವನು ಆಡಿದವನಲ್ಲ.

" ಶೇಖರ್, ಆಗಾಗ್ಗೆ ಮನೆಗೆ ಬರುತ್ತಿರು," ಎಂದು ಆತ ಆಹ್ವಾನಿಸುತಿದ್ದ. ಆದರೆ ನಾನು, ಆತನ ಮತ್ತು ಸಾವಿತ್ರಿಯ ಸಂಸಾರದೊಳಕ್ಕೆ ಪ್ರವೇಶಿಸಲು ಇಚ್ಛಿಸಲಿಲ್ಲ. ಮುಂಬಯಿಯಲ್ಲಿ ಅಮೀರ ಮತ್ತು ಶೀಲರ ಜೀವನದಲ್ಲಿ ನಾನೊಬ್ಬ ಪಾಲುಗಾರನಾಗಿ ಮಾನವೀಯ ಪ್ರೇಮದ ರುಚಿಯನ್ನು ಕಂಡಿದ್ದೆ. ಆದರೆ ಇನ್ನು ನನ್ನ ಬಗ್ಗೆ ಬೇರೆಯವರಿಂದ ಅಂತಹ ಒಲವನ್ನು ನಾನು ಅಪೇಕ್ಷಿಸಲಿಲ್ಲ.

ಬಾಳ್ವೆ ನನ್ನ ಬಗ್ಗೆ ಕಟುವಾಗಿ ವರ್ತಿಸಿಕೊಂಡಿತ್ತು. ಆ ಭಾವನೆ ಸರಿಯಲ್ಲವೆಂದು ತೋರಿಸುವಂತಹ ಯಾವ ಸಂಬಂಧಕ್ಕೂ ನಾನು ಸಿದ್ಧನಿರಲಿಲ್ಲ............

......ನನ್ನ ಆ ರೀತಿಯ ಮನೋವೃತ್ತಿಗೆ ಇನ್ನೂ ಒಂದು ಕಾರಣವಿದ್ದಿರಬೇಕು. ಪ್ರಾಯಶಃ ಬಾಳಿನ ಜತೆಗಾತಿಯೊಬ್ಬಳಿಗಾಗಿ ನಾನು ಹಂಬಲಿಸುತಿದ್ದೆನೇನೊ. ಚಲಂ ನಡೆಸುತಿದ್ದ ಕುಟುಂಬ ಜೀವನ ನನ್ನಲ್ಲಿ ಅವ್ಯಕ್ತವಾದ ಅಸೂಯೆಯನ್ನು ಪ್ರಚೋದಿಸಿತ್ತೇನೋ. ಆದರೆ, ಹಾಗೆಂದು ಯಾರಾದರೂ ಆಗ ಹೇಳಿದ್ದರೆ, ನಾನು ಖಂಡಿತವಾಗಿಯೂ ನಕ್ಕುಬಿಡುತಿದ್ದೆ. ಸೋದರನಂತಿದ್ದ ಚಲಂ ವಿಷಯವಾಗಿ ನಾನು ಅಸೂಯಾಪರನಾಗುವುದೆಂದರೇನು? ನನಗಿಂತಲೂ ವಯಸ್ಸಿನಲ್ಲಿ ಬಲು ದೊಡ್ಡವನಾದ ಆತನ ಬಗ್ಗೆ ನಾನು ಇಂತಹ ಕಾರಣಕ್ಕಾಗಿ ಅಗೌರವ ಸೂಚಿಸುವುದೆಂದರೇನು?

ಆ ಸಂಜೆ ಮೋಡ ಕವಿದಿತ್ತು. ಮಳೆ ಬರುವ ಮುನ್ ಸೂಚನೆ. ಹೊರಗೆ ಹೋಗಲೊ ಬೇಡವೊ ಎಂದು ಹಿಂದುಮುಂದು ನೋಡಿದೆ. ಅಂತೂ ಬಾಹ್ಯ ಜಗತ್ತಿನ ಆಕರ್ಷಣೆಗೇ ಜಯವಾಯಿತು. ಬಟ್ಟೆ ಹಾಕಿಕೊಂಡೆ.

ಹೊಸತಾಗಿ ಹೊಲಿಸಿಕೊಂಡಿದ್ದ ಆ ಗ್ಯಾಬರ್ಡೀನ್ ಸೂಟು ನನಗೆ ಚೆನ್ನಾಗಿ ಒಪ್ಪುತಿತ್ತೆಂದು ಚಲಂ ಮತ್ತು ಉಳಿದವರೆಲ್ಲಾ ಹೇಳಿದ್ದರು.

"ನೀನು ನಿಜವಾಗ಼್್ಲೂ, ಅಂದವಾದ ಬಟ್ಟೆ ಉಡೋಕೇ ಹುಟ್ಟಿದೋನು ಶೇಖರ್. ಏನೋ ಅಪ್ಪಿತಪ್ಪಿ ಬಡವರ ಹಟ್ಟೇಲಿ ಮುಖ ತೋರಿಸ್ದೆ."

ಆ ರೀತಿ ಹೇಳಿ ಚಲಂ ನನ್ನನ್ನು ಪರಿಹಾಸ್ಯ ಮಾಡುವುದಿತ್ತು. ಆ ಪರಿಹಾಸ್ಯದ ಜತೆಯಲ್ಲೇ ಪ್ರಾಯೋಗಿಕವಾದ ಇನ್ನೊಂದು ಮಾತನ್ನೂ ಅವನು ಹೇಳುತ್ತಿದ್ದ.

"ನಿನಗಿರೋ ಈ ರೂಪು ನಮ್ಮ ವೃತ್ತಿಗೆ ಎಷ್ಟೊಂದು ಅನು

ಕೂಲ ಗೊತ್ತಾ ? ನೀನು ಹೀಗೆ ನಡೆದು ಹೋಗ್ತಾ ಇದ್ರೆ, ನಿನ್ಮೇಲೆ ಕಳ್ತನದ ಆರೋಪ ಹೊರಿಸೋ ಎದೆಗಾರಿಕೆ ಯಾವನ್ಗಿದೆ? ನೀನು ಷಾಪಿಂಗ್ ಹೋದರೂ ಅಷ್ಟೆ. ದುಡ್ಡು ಆ ಮೇಲೆ ಕೊಡ್ತೀನೀಂತ ಸಾಮಾನು ಹೊರಿಸ್ಕೊಂಡು ಬಂದ್ರೂ ನಿನ್ನ ತಡಿಯೋರಿಲ್ಲ."

ಅಷ್ಟೇ ಆಗಿರಲಿಲ್ಲ. ಕೊನೆಯಲ್ಲಿ ಅವನಿಗೆ ಪ್ರಿಯವಾಗಿದ್ದ ಇನ್ನೊಂದು ಮಾತಿತ್ತು.

"ಹುಷಾರಾಗಿರ್ಬೇಕಪ್ಪಾ ಶೇಖರ್, ಕಾರು ನಿಲ್ಸಿ, ನಿನ್ನ ಸೈಕಲ್ನಿಂದ ಇಳಿಸಿ, ಆ ದೊಡ್ಮನುಷ್ಯರ ಹುಡುಗೀರು ನಿನಗೆಲ್ಲಾದರೂ ತೊಂದರೆ ಕೊಡಬಹುದು!"

ಆಗ ನನಗೆ ನಗು ಬರುತಿತ್ತು.

"ಅದೆಲ್ಲಾ ಸಿನಿಮಾದಲ್ಲಿ ಚಲಂ. ಜೀವನದಲ್ಲಿ ಅಂಥಾದ್ದೆಲ್ಲಾ ಎಲ್ಲಿ ಸಾಧ್ಯ?"

"ಯಾರು ಕಂಡೋರು?"

ಯಾರೂ ಕಾಣದ ಹಾಗೆಯೇ ಆ ದಿನ ಆ ಘಟನೆ ನಡೆಯಿತು. ಆಕಾಶದ ಮೋಡಗಳು ಬೇರೆ ಊರಿಗೆ ತೇಲಿ ಹೋದುವು. ನಗರದ ಉದ್ಯಾನದತ್ತ ನಾನು ಸೈಕಲ್ ತುಳಿದೆ. ಉದ್ಯಾನದ ಹೋಟೆಲಿನಲ್ಲಿ ಅದನ್ನಿರಿಸಿ ಬೀಗ ತಗುಲಿಸಿದೆ. ಕಾಫಿ ಕುಡಿದು ಹೊರ ಬಂದು, ಸುತ್ತಮುತ್ತಲೂ ಇದ್ದ ಜನರನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಾ ನಿಂತೆ.

ಉದ್ಯಾನದ ಒಂದು ಮೂಲೆಯಲ್ಲಿ, ಎಳೆಯ ಹುಡುಗನ ಹಾಗೆ ತೋರುತಿದ್ದ ಆ ಯುವಕ ಸಿಮೆಂಟಿನ ಒರಗು ಬೆಂಚಿನ ಮೇಲೆ ಕುಳಿತಿದ್ದ. ನಾನು ನಿರ್ದಿಷ್ಟವಾದ ಯಾವ ಯೋಚನೆಯೂ ಇಲ್ಲದೆ ಅವನ ಬಳಿ ಸಾರಿದೆ.

"ಇಲ್ಲಿ ಕೂತ್ಕೋಬಹುದಾ?"

"ಅದಕ್ಕೇನಂತೆ?"

"ಅಲ್ಲ, ಬೇರೆ ಯಾರಾದ್ರೂ ಬರ್ತಾರೇನೋಂತ."

"ಯಾರೂ ಇಲ್ಲ. ನೀವು ಕೂತ್ಕೊಳ್ಳಿ."

ಆ ಸ್ವರ ಕ್ಷೀಣವಾಗಿತ್ತು. ನನ್ನ ದೃಷ್ಟಿಯ ಕ್ಷ–ಕಿರಣ ಅವನ ಅಂಗಾಂಗಗಳನ್ನು ಪರೀಕ್ಷಿಸಿತು.

"ಮೈ ಚೆನ್ನಾಗಿಲ್ಲಾಂತ ತೋರುತ್ತೆ."

"ಹೌದು; ಡ್ರೈವರ್ ಇಲ್ಲಿಯವರೆಗೆ ಕರಕೊಂಡು ಬಂದ. ಎಂಟು ಘಂಟೆಗೆ ಬಾ ಅಂತ ಹೇಳ್ಬಿಟ್ಟು, ಅವನ್ನ ಕಳಿಸ್ಬಿಟ್ಟೆ."

ಕಾರಿನ ಬಗ್ಗೆ ಮಾತನಾಡಿದಾಗ, ತನ್ನ ಅಂತಸ್ತನ್ನು ಸೂಕ್ಷ್ಮವಾಗಿ ತೋರಿಸುವ ಉತ್ಸುಕತೆ ಅವನಲ್ಲಿತ್ತು. ಒಂದು ತುತ್ತು ಅನ್ನ ಹೆಚ್ಚು ಸಂಪಾದಿಸುತ್ತಿರುವ ಮೇಲಿನ ಮಧ್ಯಮ ವರ್ಗದವರಿರಬೇಕು. ....ಹಿರಿಯ ಶ್ರೀಮಂತಿಕೆ ಅವನಲ್ಲಿ ಒಡೆದು ತೋರುತ್ತಿರಲಿಲ್ಲ. ಅದರ ಬದಲು ತಮ್ಮ ಅಂತಸ್ತಿನ ಬಗ್ಗೆ ಕೇಳುವವರು ಸಂದೇಹ ವ್ಯಕ್ತಪಡಿಸಬಹುದೇನೊ ಎಂಬ ಶಂಕೆ ಆ ತುಟಿಗಳ ಮೇಲೆ ತೇಲುತಿತ್ತು.

ಕನಿಕರ ಸೂಚಿಸುವ ಧ್ವನಿಯಲ್ಲಿ ನಾನು ಕೇಳಿದೆ:

"ಏನಾಗಿತ್ತು? ಜ್ವರವಾ?"

"ನ್ಯುಮೋನಿಯಾ. ಇದೇ ಈಗ ಹತ್ತು ದಿವಸಗಳಿಂದ ಓಡಾಡ್ತಿದೀನಿ."

"ಓದ್ತಾ ಇದೀರ?"

"ಹೂಂ. ಈ ಸಾರೆ ಬಿ.ಎ. ಗೆ ಕಟ್ಬೇಕು. ಆದರೆ ಏನಾಗುತ್ತೋ ಏನೊ. ಈ ಕಾಹಿಲೆ ಬಹಳ ಸತಾಯಿಸ್ಬಿಟ್ಟಿದೆ."

ಬಹಳ ಸತಾಯಿಸುವ ನ್ಯುಮೋನಿಯ. ಆ ವಿಷಯ ನನಗೆ ಗೊತ್ತಿರಲಿಲ್ಲವೆ? ತನಗೇ ಧೈರ್ಯ ಉಂಟಾಗುವಂತೆ ಆತ ಹೇಳಿದ:

"ಇನ್ನೇನು ಗುಣವಾದ ಹಾಗೇ. ಸ್ವಲ್ಪ ದಿವಸದಲ್ಲೇ ಪುನಃ ಶಕ್ತಿ ಬರತ್ತೆ. ನ್ಯುಮೋನಿಯಾ ಹೆದರ್ಕೋಬೇಕಾದ ಜ್ವರವೇನೂ ಅಲ್ಲ."

ಜ್ವರಕ್ಕೆ ಹೆದರದೇ ಇದ್ದ ಆ ಧೈರ್ಯವಂತನಲ್ಲಿ, ಬಂದವರನ್ನು ದೂರವಿಡುವ ಮನೋವೃತ್ತಿ ಇರಲಿಲ್ಲ. ಇನ್ನೊಂದು ಜೀವದೊಡನೆ ಮಾತನಾಡಲು ಆತ ಬಲು ಆತುರನಾಗಿದ್ದ.

"ಸಿಗರೇಟು?"

ಆತ ಮೌನವಾಗಿ ನನ್ನನ್ನೆ ನೋಡಿದ.

ನಾನೆಂದೆ :

" ಸಾರಿ, ಕಾಓಲೆಯಿಂದ ಎದ್ದಿರೋರು ಸೇದಬಾರ್ದು ಅನ್ನೋದನ್ನ ಮರೆತ್ಬಿಟ್ಟೆ."

" ಅದ್ಸರಿ. ಅಲ್ದೆ, ನನಗೆ ಸಿಗರೇಟು ಸೇದೊ ಅಭ್ಯಾಸವೂ ಇಲ್ಲ."

" ಈವರೆಗೆ ಒಂದೂ ಸೇದಿಲ್ಲ ಅಂತೀರಾ ? "

ಈ ಪಾಟೀ ಸವಾಲಿಗೆ ಆತನ ಬಿಳುಪೇರಿದ್ದ ಮುಖ ಸ್ವಲ್ಪ ಕೆಂಪಗಾಯಿತು.

" ಹಾಗೆ ಒಂದೂ ಸೇದ್ದೆ ಇರ್ತಾರ ? ನನಗೆ ಅಭ್ಯಾಸವಿಲ್ಲ, ಅಷ್ಟೆ. ನಮ್ಮನೇಲಿ ನಮ್ತಂದೇನೂ ಸೇದೋದಿಲ್ಲ."

" ನಾನೂ ಅಷ್ಟೆ. ನನಗೂ ಅಭ್ಯಾಸವಿಲ್ಲ. ಎಲ್ಲೋ ಒಂದೊಂದು.... "

—ಆ ಮಾತು ಸುಳ್ಳಾಗಿತ್ತು. ಆದರೆ ಆ ಸರಳ ಹೃದಯದ ಹುಡುಗನೆದುರು ನಾನು ಸಿಗರೇಟು ಚಟದ ಅಪರಾಧಿಯೆಂದು ತೋರಿಸಿಕೊಳ್ಳಲು ಇಷ್ಟಪಡಲಿಲ್ಲ. ನನಗೂ ಆತನಿಗೂ ವಯಸ್ಸಿನಲ್ಲಿ ಎರಡು ಮೂರು ವರ್ಷಗಳ ಅಂತರವಿತ್ತೇನೊ. ಆದರೂ ಆತ ಎಷ್ಟೊಂದು ಚಿಕ್ಕ ಹುಡುಗನಾಗಿ ಕಾಣುತಲಿದ್ದ !

ಸ್ವಲ್ಪ ಹೊತ್ತಾದ ಮೇಲೆ ಆತನೆ ಮೌನವನ್ನು ಮುರಿದ.

" ನೀವೇನು ಮಾಡ್ಕೊಂಡಿದೀರ ? "

" ಇದೇ ಈಗ ಕೋರ್ಸು ಮುಗೀತು ಬೊಂಬಾಯಿನ ಒಂದು ಇಂಪೋರ್ಟ್- ಫರ್ಮಿಗೆ ಪ್ರತಿನಿಧಿಯಾಗಿದೀನಿ."

" ಓ ! ಬಿಸಿನೆಸ್ಸು ! ನೋಡೋಕೆ ನೀವಿನ್ನೂ ಹುಡುಗರ ಹಾಗೆ ಇದ್ದೀರಾ ! "

ಅಂತೂ ಆ ಹುಡುಗ, ನಾನೂ ಹುಡುಗನೇ ಎಂದು ಪ್ರಮಾಣ ಪತ್ರ ಕೊಟ್ಟಿದ್ದ !

ಸಂಜೆ, ಕತ್ತಲಿನೊಡನೆ ಕಚಕುಳಿ ಆಡುತ್ತಿತ್ತು. ಘಂಟೆ ಏಳು.

ಅಲ್ಲಿಂದೆದ್ದು, ಸಿಗರೇಟು ಸೇದುವ ಸ್ವಾತಂತ್ರ್ಯವನ್ನಾದರೂ ಸಂಪಾದಿಸೋಣವೆಂದುಕೊಂಡೆ. ಆ ಮಬ್ಬು ಬೆಳಕಿನಲ್ಲಿ ಆತನ ಮುಖ ಮತ್ತಷ್ಟು ರಕ್ತ ಹೀನವಾಗಿ ಕಾಣುತಿತ್ತು. ಸುಮ್ಮನಿರು ಎಂದು ಬೆದರಿಸಿ, ಅಲ್ಲೇ ಅವನ ಜೇಬುಗಳನ್ನು ನಾನೂ ಶೋಧಿಸಿದ್ದರೂ ಆತ ಪ್ರತಿಭಟಿಸುವ ಸ್ಥಿತಿಯಲ್ಲಿರಲಿಲ್ಲ. ಅಂತೂ ಅವನನ್ನು ಕಂಡು ನನಗೆ ತಿರಸ್ಕಾರ ಹುಟ್ಟಿತು. ಮನಸ್ಸಿನ ಬೇಸರವನ್ನು ಮತ್ತಷ್ಟು ಹುಟ್ಟಿಸುವ ನಿಶ್ಪ್ರಾಣ ಜೀವಿಗಳು!

"ಸಾರ್, ಒಂದುಪಕಾರ ಮಾಡ್ತೀರ?"

ಆತನ ಸ್ವರ, ಕೇಳಿಸದಷ್ಟು ಕ್ಷೀಣವಾಗಿತ್ತು.

"ಏನು? ಏನಾದರೂ ಬೇಕಿತ್ತೇನು?"

"ನೋಡಿ....ಇಲ್ಲಿ ಕೂತಿರೋಕೆ ಆಗಲ್ಲ. ವನಜ ಬರ್ತೀನಿ ಅಂತಂದ್ಲು. ನಾನೇ ಬೇಡ ಅಂತ ಒಬ್ನೇ ಹೊರಟೆ....ಡ್ರೈವರ್ ಬರೋದು ಇನ್ನೂ ತಡ. ನಂಗೆ ಇಲ್ಲಿ ಈ ಗಾಳಿ ಈ ಕತ್ತಲೆ ಇದೆಲ್ಲಾ"

"ಮನೆಗೇ ಹೋಗ್ತೀರೇನು?"

"ಹೌದು....ನಿಮ್ಗೆ ತೊಂದರೆ ಆಗ್ದೇ ಇದ್ರೆ ದಯವಿಟ್ಟು ಒಂದು ಟ್ಯಾಕ್ಸಿ—"

"ಅದಕ್ಕೇನಂತೆ........ಇಲ್ಲೇ ಕೂತಿರಿ. ಬಂದೆ."

ನಾನು ಪರೋಪಕಾರಿಯಾದ ಒಳ್ಳೆಯ ಮನುಷ್ಯನಾಗಿ ಟ್ಯಾಕ್ಸಿ ಹುಡುಕಿಕೊಂಡು ಹೊರಟೆ. ಅದೆಲ್ಲವೂ ದೊಡ್ಡ ತಮಾಷೆಯಾಗಿತ್ತು ...ಮೇಲಿನ ಬೀದಿಯಲ್ಲಿ ಎರಡು ಟ್ಯಾಕ್ಸಿಗಳು ಗಿರಾಕಿಗಳ ಹಾದಿ ನೋಡುತಿದ್ದುವು. ಒಂದರಲ್ಲಿ ಕುಳಿತು ಉದ್ಯಾನದ ಬೀದಿಗೆ ಬಂದೆ.

ನಾನು ಟ್ಯಾಕ್ಸಿಯಿಂದಿಳಿದು ಸಮೀಪಿಸುತಿದ್ದಂತೆ ಆತ ಕೇಳಿದ:

"ಟ್ಯಾಕ್ಸಿ ಸಿಗ್ತೆ?"

"ಸಿಗ್ತು, ಬನ್ನಿ."

"ಇನ್ನೊಂದುಪಕಾರ ಮಾಡ್ತೀರ?........ದಯವಿಟ್ಟು ನೀವು ನಮ್ಮನೇತನಕ—"

ಯೋಚನೆ ಮಾಡಲು ಅಲ್ಲಿ ಸಮಯವಿರಲಿಲ್ಲ. ನನಗಾಗಿ

ಕಾದಿದ್ದ ಹೊಸ ಸಾಹಸವನ್ನು ಇದಿರ್ಗೊಳ್ಳಲು ನಾನು ಮುಂದಾದೆ.

ಹೋಟೆಲಿನ ಬಳಿ ಹೋಗಿ, ಸೈಕಲನ್ನು ಅಲ್ಲೇ ಇರಿಸುವ ಏರ್ಪಾಟು ಮಾಡಿ, ಆ ಹುಡುಗನೊಡನೆ ಟ್ಯಾಕ್ಸಿ ಏರಿದೆ.

ಆತ ಮನೆಯ ವಿಳಾಸ ಹೇಳಿದ. ನನ್ನ ತೋಳಿನ ಆಧಾರ ಅವನಿಗೆ ಬಲು ಹಿತಕರವಾಗಿತ್ತು.

"ಸಾರ್, ನೀವು ನಿಮ್ಮ ಹೆಸರು ಹೇಳಲೇ ಇಲ್ಲ."

"ನೋಡಿ. ನಾವೀಗ ಸಾಕಷ್ಟು ಸ್ನೇಹಿತರಾಗಿದ್ದೇವೆ. ಒಂದೇ ಓರಗೆಯವರು ಬೇರೆ. ಸಾರ್-ಸಾರ್ ಅನ್ಬಾರ್ದು."

"ಸರಿ ಸಾರ್."

"ಮತ್ತೆ ಅದೇ!........ಹುಂ....ನನ್ನ ಹೆಸರು ರಾಧಾಕೃಷ್ಣ.... ಸ್ನೇಹಿತರು ಕೂಗೋದು ರಾಧಾ ಎಂತ."

ಆ ಕಾಹಿಲೆಯ ಮನುಷ್ಯ ನಕ್ಕ.

"ನಗ್ತೀನಿ ಅಂತ ಕೋಪಿಸ್ಕೋಬೇಡಿ. ವನಜಾ ಸ್ನೇಹಿತೆ ಒಬ್ಬಿದಾಳೆ. ಅವಳ ಹೆಸರೂ ರಾಧಾ ಎಂತ."

"ವನಜ? ಯಾರು ವನಜ?"

"ವನಜ ಬರ್ತೀನಿಂತಂದ್ಲು ಅಂತ ಆಗಲೇ ಹೇಳಿದ್ನೆಲ್ಲ....ವನಜ ನನ್ತಂಗಿ. ಈ ವರ್ಷ ಇಂಟರ್‌ಗೆ ಕಟ್ಟಿದ್ದಾಳೆ. ಆ ಮೇಲೆ ಬಾಟನಿ ಆನರ್ಸ್ ತಗೋತಾಳಂತೆ, ಇಂಗ್ಲೆಂಡಿಗೆ ಹೋಗ್ಬಂದು ವಿಜ್ಞಾನಿ ಆಗ್ತಾಳಂತೆ!"

ಎರಡು ನಿಮಿಷ ಸುಮ್ಮನಿದ್ದೆ. ಟ್ಯಾಕ್ಸಿ ಮನೆ ಸೇರಿದಾಗ ನಾನು ಕಾಣಲಿದ್ದ ವನಜಳನ್ನು ಚಿತ್ರಿಸಿಕೊಂಡೆ. ಪುಟ್ಟ ಹುಡುಗಿ. ಫೂ ಎಂದು ಊದಿದರೆ ಗಾಳಿಗೆ ಹಾರಿ ಹೋಗುವಂತಹ ಶರೀರ. ಬಿಳಿಚಿಕೊಂಡ ಮುಖ. ಕುರುಚಲು ಜಡೆ. ಕಣ್ಣುಗಳು? ....ಕೊರಳಿನ ಸರದ ಲಾಕೆಟಿನಲ್ಲಿ ಮೇಡಂ ಕ್ಯೂರಿಯ ಚಿತ್ರ ಬೇರೆ!........

ಕಲ್ಪನೆ ಸಾಕೆಂದು, ವನಜಳ ಅಣ್ಣನನ್ನು ಮಾತನಾಡಿಸಿದೆ:

"ನಿಮ್ಮ ತಂದೆ—"

"ವಕೀಲರು, ಶ್ರೀನಿವಾಸಯ್ಯ ಎಂತ. ಕೇಳಿದೀರಾ?"

ನಾನು ಕೇಳಿರಲಿಲ್ಲ. ಆದರೆ ಹಾಗೆಂದು ಅವನೆದುರು ಹೇಳುವುದುಂಟೆ?

"ಓ ಹೋ! ಕೇಳಿದೀನಿ....ಅವರೇ ಏನು? .. ನಿಮ್ಮ ಹೆಸರು?"

"ನನ್ನದು ಹೇಳೇ ಇಲ್ಲವೆ? ಎಂಥ ಮರೆವು! ನಾನು ಮುರಲಿ—ಮುರಲೀಧರ್."

"ಮುರಲೀಧರ ರಾವ್ ಏನೋ?"

"ಇಲ್ಲ, ನಾವೀಗ ರಾವ್ ಅಂತ ಸೇರಿಸ್ಕೊಳ್ಳಲ್ಲ."

"ಐ ಸೀ."

ಟ್ಯಾಕ್ಸಿ ಆ ಮನೆಯ ಬಳಿಗೆ ಬರುತಲಿತ್ತು. ಮುರಲಿ ನಿರ್ದೇಶಗಳನ್ನು ತೊಟ್ಟಂತೆ ಟ್ಯಾಕ್ಸಿ ನಿಂತಿತು.

"ತಗೊಳ್ಳಿ ಪರ್ಸು. ಟ್ಯಾಕ್ಸೀದು ದಯವಿಟ್ಟು ಕೊಟ್ಬಿಡಿ."

ನಾನು ಆತನ ಹಣದ ಪಾಕೀಟನ್ನು ಮುಟ್ಟಲಿಲ್ಲ. ನನ್ನದನ್ನು ತೆಗೆಯಲೂ ಇಲ್ಲ. ಟ್ಯಾಕ್ಸಿಯವನಿಗೆ, "ಇಲ್ಲೇ ನಿಂತಿರು," ಎಂದೆ.

"ನೋಡಿದಿರಾ........ವಾಪಸು ಹೋಗೇಕೆ ನಿಮಗೆ ಟ್ಯಾಕ್ಸಿ ಯಾತಕ್ಕೆ? ನಮ್ಮನೇ ಕಾರಿದೆ."

"ಇರಲಿ ಮುರಲೀಧರ್. ಬನ್ನಿ ಒಳಕ್ಕೆ ಹೋಗೋಣ."

ಮಹಡಿ ಇಲ್ಲದ ವಿಶಾಲವಾದ ತಾರಸಿ ಮನೆ. ಹೊರಗೆ ಕ್ರೋಟನ್ ಗಿಡಗಳ ಉದ್ಯಾನ. ಬಲಭಾಗದ ಮೂಲೆಯಲ್ಲಿ ಗ್ಯಾರೇಜು.

"ಪಪ್ಪ ಇನ್ನೂ ಬಂದೇ ಇಲ್ಲ. ವನೂ ಏ ವನೂ—"

ಮುರಲಿ ಕಾಲ್ ಬೆಲ್ಲನ್ನು ಒತ್ತುವುದಕ್ಕೆ ಮುಂಚೆಯೇ ಯಾರೋ ಬಾಗಿಲು ತೆರೆದರು. ಅವರ ಮುಖವನ್ನು ಸರಿಯಾಗಿ ನೋಡದೆ, ಆ ಭುಜಗಳಾಚೆ ಮರೆಯಾಗಿರಬಹುದಾದ ಪುಟ್ಟ ವನಜಳನ್ನು ಹುಡುಕಿದೆ. ಆದರೆ ಮುರಲಿ ನನ್ನನ್ನು ದಿಗ್ಭ್ರಮೆಗೊಳಿಸಿದ.

"ಇವಳೇ ನೋಡಿ ವನಜ. ನೋಡಮ್ಮ ವನೂ, ಇವರು ಮಿಸ್ಟರ್ ರಾಧಾಕೃಷ್ಣ. ಒಂದು ದೊಡ್ಡ ಫರ್ಮಿಗೆ ಸೇರ್ಕೊಂಡಿರು."

ನಾನು ಕ್ಷಣ ಕಾಲ ತಬ್ಬಿಬ್ಬಾದೆ. ನೀಳದೇಹದ ವಿಶಾಲನೇತ್ರೆಯೊಬ್ಬಳು ನೆಟ್ಟ ದೃಷ್ಟಿಯಿಂದ ನನ್ನನ್ನೆ ನೋಡುತ್ತಿದ್ದಳು. ಸುಧಾರಿಸಿ-

ಕೊಂಡು ನಾನೂ ನೆಟ್ಟ ದೃಷ್ಟಿಯಿಂದ ನೋಡಿದೆ. ಅದು ತಬ್ಬಿಬ್ಬಾಗಲು ಆಕೆಯ ಸರದಿ. ಆಕೆ ಮುಗುಳ್ನಕ್ಕಳು.

"ಬನ್ನಿ. ಒಳಕ್ಕೆ ಬನ್ನಿ. ಮುರಲಿ ಎಲ್ಲಿ ಸಿಕ್ದ ?"

ಮುರಲಿ ಮಾತನಾಡಲು ನನಗೆ ಅವಕಾಶ ಕೊಡಲಿಲ್ಲ.

"ವನೂ, ಇವರಿಂದ ಎಷ್ಟೊಂದು ಉಪಕಾರವಾಯ್ತೂಂತ.... ಬಹಳ ಒಳ್ಳೇವರು. ಅವರು ಇಲ್ದೇ ಇದ್ದಿದ್ರೆ, ಪಾರ್ಕ್‌ನಲ್ಲೇ ನಾನು ಬಿದ್ದಿರ್ತಿದ್ದೆ. ಆ ಮೇಲೆ ನೀನು, ಟಾರ್ಚ್ ತಗೊಂಡು, ಹುಡುಕೋಕೆ ಬರಬೇಕಾಗ್ತಿತ್ತು."

"ಶುದ್ಧ ಸಿಲ್ಲಿ!" ಎಂದಳು ವನಜ.

ನನ್ನೆಡೆಗೆ ನೋಡಿ, "ಇರಿ, ಬಂದೆ" ಎನ್ನುತ್ತಾ ಆಕೆ ಒಳ ಹೋದಳು.

ಆ ನೋಟ—

ಆಕೆ ಇಲ್ಲದ ಆ ಅವಧಿಯಲ್ಲಿ ಮುರಲಿ ಮತ್ತಷ್ಟು ಮಾಹಿತಿ ಒದಗಿಸಿದ. ಐದು ವರ್ಷಗಳ ಹಿಂದೆ ಅವರ ತಾಯಿ ತೀರಿ ಹೋದ ವಿಷಯ ತಿಳಿಸಿದ. ಆತ ಸದಾ ಕಾಲವೂ ಕಾಹಿಲೆಯ ಕೂಸು. ಮನೆಯ ನಿಜವಾದ ಒಡೆತನವೆಲ್ಲಾ ಅವನ ತಂಗಿಯದು.

"ಇನ್ನೂ ನಿಮಗೆ ವನಜಾ ಪರಿಚಯ ಸರಿಯಾಗಿ ಇಲ್ಲ ಮಿಸ್ಟರ್ ರಾಧಾಕೃಷ್ಣ."

"ರಾಧಾ ಎನ್ನಿ"

"ಸರಿಯಪ್ಪಾ, ಮಿಸ್ಟರ್ ರಾಧಾ."

"ಊಹೂಂ. ಬರೇ ರಾಧಾ."

"ಓ. ಕೆ.—ರಾಧಾ."

ಬೆಳ್ಳಿಯ ತಟ್ಟೆಯಲ್ಲಿ ಮಾವಿನ ಹಣ್ಣಿನ ಹೋಳುಗಳನ್ನು ಹೊತ್ತು ವನಜ ಬಂದಳು; ಮುರಲಿಯನ್ನು ಕುರಿತು ಗದರಿಕೆಯ ಮಾತನ್ನಾಡುತ್ತಲೇ ಬಂದಳು.

"ಏನೋ ಅದು? ಅದೇನೊ ರಾಧಾ ಅಂತಿದ್ದೀಯಾ?"

ಮುರಲಿ ನಗುನಗುತ್ತ ಚೇತರಿಸಿ ಕೊಳ್ಳುತಿದ್ದ.

" ನೋಡಿದಿರಾ ರಾಧಾ? ಹ್ಯಾಗಿದೆ ತಮಾಷೆ ? "

ವನಜಳಿಗೆ ತನ್ನ ತಪ್ಪು ತಿಳಿದು ಆಕೆಯ ಮುಖ ಕೆಂಪಗಾಯಿತು. ನಿರ್ಲಜ್ಜನಾಗಿ ಅವಳನ್ನೆ ನೋಡಿದೆ. ಆ ಮುಖ ನಿಜವಾಗಿಯೂ ಸುಂದರವಾಗಿತ್ತು. ಮೇಕಪ್ ಮಾಡಿಕೊಂಡಿರಲಿಲ್ಲ. ಮುಂಗುರುಳಿನ, ಸೀರೆಯ ಸೆರಗಿನ, ಜಡೆಯ ಬಗ್ಗೆ, ಅವಳು ತೋರುತಿದ್ದ ಆಲಕ್ಷ್ಯ, ಆ ಸೊಬಗಿನ ತೂಕವನ್ನು ಹೆಚ್ಚಿಸಿತ್ತು.

" ಹೊತ್ತಲ್ಲದ ಹೊತ್ತು. ಆದರೂ ಒಂದಿಷ್ಟು ಹಣ್ಣು ತಗೊಳ್ಳಿ."

" ವನೂ, ಅವರಿಲ್ಲೇ ಊಟಕ್ಕೇಳ್ತಾರೆ ಕಣೇ."

ಒಲ್ಲೆನೆನ್ನಬೇಡ— ಎನ್ನುವ ಒತ್ತಾಯದ ಭಾವ ಆಕೆಯ ಕಣ್ಣುಗಳಲ್ಲಿತ್ತು. ಆದರೆ ನಾನೊಪ್ಪಲಿಲ್ಲ.

" ಇಲ್ಲ, ಇಲ್ಲ, ಕ್ಷಮಿಸಿ. ನಾನು ಹೋಗ್ಬೇಕು."

ವನಜ ಕತ್ತು ಕೊಂಕಿಸುತ್ತ ಕೇಳಿದಳು.

" ಮನೇಲಿ ಕಾದಿರ್ತಾರೇನೊ ? "

ನನ್ನ ಇರುವಿಕೆಯನ್ನು ತಿಳಿದುಕೊಳ್ಳುವ ಸೂಕ್ಷ್ಮ ಯತ್ನ ಅದು.

" ಕಾದಿರೋರು ಯಾರೂ ಇಲ್ಲ. ನಾನೊಬ್ನೇ ಇದೀನಿ. ಆದರೂ ಎಂಟು ಘಂಟೆಗೆ ಬರ್ತೀನಿ ಅಂತ ಸ್ನೇಹಿತರಿಗೆ ಮಾತು ಕೊಟ್ಟಿದ್ದೆ. '

'ಒಬ್ಬನೇ ಇದ್ದ' ನನ್ನನ್ನು ವನಜ ಅರಳುಗಣ್ಣುಗಳಿಂದ ನೋಡಿದಳು. ಊಟಕ್ಕೇಳಲಿಲ್ಲವೆಂದು ಅವಳಿಗೆ ನಿರಾಸೆಯಾಗಿತ್ತು ನಿಜ. ಆದರೂ—

" ಹೋಗ್ಲಿ. ಹಣ್ಣನ್ನಾದರೂ ತಗೊಳ್ಳಿ."

ಸೋಫದ ಮೇಲೆ ಕುಳಿತಿದ್ದ ನಾನು, ಎದುರಿಗಿದ್ದ ಅಣ್ಣ ತಂಗಿಯರನ್ನು ನೋಡುತ್ತ, ನಿಧಾನವಾಗಿ ಒಂದೊಂದೆ ಹೋಳನ್ನು ತೂಗಿ ನೋಡುತ್ತ, ತಿಂದೆ. ಹಣ್ಣು ಬಲು ಸಿಹಿಯಾಗಿತ್ತು.

" ಹುಳಿಯೇನೊ ? ಇಂಥ ಹಣ್ಣು ನಿಮಗೆ ಅಭ್ಯಾಸವಿದೆಯೊ ಇಲ್ಲವೊ ? "

" ಪರವಾಗಿಲ್ಲ. ತಕ್ಕ ಮಟ್ಟಿಗೆ ಚೆನ್ನಾಗಿಯೇ ಇದೆ," ಎನ್ನುತ್ತ

ನಾನು ಇನ್ನೂ ರುಚಿಕರವಾದ ಹಣ್ಣುಗಳನ್ನಷ್ಟೆ ತಿನ್ನುವವನಂತೆ ಮಾತನಾಡಿದೆ. ನಾಲ್ಕಾರು ಹೋಳುಗಳಾದ ಮೇಲೆ ಕರವಸ್ತ್ರದಿಂದ ಕೈ ಒರೆಸಿದೆ.

"ಯಾಕೆ, ಬಿಟ್ಬಿಟ್ರಲ್ಲಾ?"

"ಇಲ್ಲ, ಥ್ಯಾಂಕ್ಸ್. ಇಷ್ಟು ಸಾಕು."

ಹೊರಡಲೆಂದು ನಾನು ಎದ್ದು ನಿಂತೆ. ಮುರಲಿ ಏಳಲು ಪ್ರಯತ್ನಿಸಿದ. "ಬೇಡಿ ಆಯಾಸವಾಗುತ್ತೆ. ಇಲ್ಲೇ ಕೂತಿರಿ," ಎಂದೆ. ವನಜ ನನ್ನನ್ನು ಹಿಂಬಾಲಿಸಿಕೊಂಡು ಗೇಟಿನವರೆಗೂ ಬಂದಳು.

"ಹೊರಡ್ತೀರಾ ಹಾಗಾದರೆ?"

"ಹೌದು, ಆತಿಥ್ಯಕ್ಕೆ ಥ್ಯಾಂಕ್ಸ್. ನಿಮ್ತಂದೆ ಬಂದ ಮೇಲೆ ನನ್ನ ನಮಸ್ಕಾರ ತಿಳಿಸಿ."

"ಆದ್ರೆ....ನೀವೇ ಬಂದು ಅವರ್ನ ಕಾಣಬಹುದಲ್ಲ?"

ದೀಪದ ಬೆಳಕಿನಲ್ಲಿ ಆ ಕಣ್ಣುಗಳು "ಬಾ" ಎಂಬ ಆಹ್ವಾನ ನೀಡುತ್ತ ಜ್ವಲಿಸುತಿದ್ದುವು.

"ಆಗಲಿ, ಬರ್‍ತೀನಿ."

"ನಾಳೆ?"

"ಎಷ್ಟು ಹೊತ್ತಿಗೆ?"

"ಸಂಜೆ ಐದು ಘಂಟೆಗೆ ಬರ್‍ತೀರ?"

"ಬರ್‍ತೀನಿ."

....ಮಾಯೆಯ ಬಲೆ ಬೀಸಿದ್ದಳು ಆ ಹುಡುಗಿ. ಮಂಕಾದ ಮನಸ್ಸಿನೊಡನೆ ನಾನು ಹಿಂತಿರುಗಿದೆ.

....ಟ್ಯಾಕ್ಸಿಯಲ್ಲೆ ಉದ್ಯಾನದ ಹೋಟೆಲಿಗೆ ಹೋಗಿ ಸೈಕಲನ್ನೇರಿ ನಾನು ಮನೆಗೆ ಮರಳಿದೆ. ಬಹಳ ಹೊತ್ತು ನನಗೆ ನಿದ್ದೆ ಬರಲಿಲ್ಲ. ನನ್ನ ಜೀವನದಲ್ಲಿ ನಾನು ಅನುಭವಿಸದ ಎಷ್ಟೊಂದು ವಿಷಯಗಳಿರಲಿಲ್ಲ! ನನ್ನ ಪಾಲಿಗೆ, ಸಂಸಾರವಂದಿಗರ ಅಣ್ಣ ತಂಗಿಯರ ತಾಯಿ ತಂದೆ ಮಕ್ಕಳ ಒಲವು ನಲವಿನ ಲೋಕವೆಲ್ಲ ಬರಿಯ ಭ್ರಮೆಯಾಗಿತ್ತು.

ಆ ಲೋಕದೊಳಗಿನ ವ್ಯವಹಾರಗಳನ್ನು ಕಾಣಲು—ಕ್ಷಣ ಕಾಲವಾದರೂ ಕಾಣಲು—ನನಗೆ ಅವಕಾಶ ದೊರೆತಾಗ, ಹೃದಯ ನೋವಿನಿಂದ ತತ್ತರಿಸುತಿತ್ತು. ಚಲಂ ಬಳಗದ ಆ ಸದಸ್ಯರೇ ವಾಸಿ. ಅವರಿಗೆ ಯಾವ ಚಿಂತೆಯೂ ಇರಲಿಲ್ಲ. ಅವರಲ್ಲಿಬ್ಬರು ಸಂಸಾರಗಳನ್ನೇ ಬಿಟ್ಟು ಬಂದಿದ್ದರು. ಅಂದ ಮೇಲೆ, ನಾನು ಯಾಕೆ ಈ ರೀತಿ ಸಂಕಟ ಅನುಭವಿಸಬೇಕು? ಇದು, ನನಗೆ ದೊರೆತಿರುವ ಸಂಸ್ಕಾರದ ಫಲವೆ? ಸ್ವಯಂಪ್ರೇರಣೆಯಿಂದ ನಾನು ಸಂಪಾದಿಸಿದ ವಿದ್ಯೆಯ ಫಲವೆ?

ಆಕಸ್ಮಿಕವಾಗಿ ಆ ಮುರಲಿ ಕಾಣಲು ದೊರೆತ ಬಳಿಕ ಅನಿರೀಕ್ಷಿತವಾಗಿ ನಡೆದ ಘಟನೆಗಳು........ವನಜಳ ಭೇಟಿ........ನಾಳೆ ಮತ್ತೆ....
"ಸಂಜೆ ಐದು ಘಂಟೆಗೆ ಬರ್ತೀರ?"........"ಬರ್ತೇನಿ"........

ನನ್ನ ಯೋಚನೆಗಳು ಸರಾಗವಾಗಿ ಏಕಪ್ರಕಾರವಾಗಿ ಹರಿಯುತ್ತಿರಲಿಲ್ಲ. ನಿದ್ದೆ ಬಲು ಪ್ರಯಾಸದಿಂದ ನನ್ನೆಡೆಗೆ ಬಂತು.

ಮರು ದಿನ ಹೊತ್ತಾರೆ ಚಲಂ ನಮ್ಮ ಮನೆಗೆ ಬಂದ.

"ಶೇಖರ್, ಒಂದು ಹತ್ತು ದಿನ ಮದ್ರಾಸಿಗೆ ಹೋಗಿರ್ತೀನಿ ... ನನ್ನಲ್ಲಿರೋ ಚಿಲ್ಲರೆ [illegible]ಗೆ ಸಾಲದು. ಏನಾ[illegible] ಯೇನು?"

ಅವನ[illegible]

ಇನ್ನೂರು [illegible]

ಕೊಂಡ.

ವ[illegible]

ಪದೇ ಪ[illegible]

ಮಲಗಿದ್ದವ[illegible]

ನಿಧಾನವಾಗಿ ಪ[illegible]

ನಾ[illegible]

ಪ್ರದೇ[illegible]

ನಿಸಲಿಲ್ಲ.

....ಆ ಮನೆಯ ಗೇಟಿನ ಬಾಗಿಲು ತೆರೆದು ಸೈಕಲನ್ನು ಒಳ ತಳ್ಳಿದಾಗ, ಐದು ಘಂಟೆಗಿನ್ನೂ ಮೂರು ನಿಮಿಷಗಳಿದ್ದುವು. ಬಾಗಿಲ ಬಳಿ ಸಾರಿ, ದೀರ್ಘವೆಂದು ಕಂಡ ಎರಡು ನಮಿಷಗಳನ್ನು ಕಳೆದು ಕಾಲ್ ಬೆಲ್ಲನ್ನು ಒತ್ತಿದೆ. ಬಾಗಿಲು ತೆರೆದವಳು ವನಜ. ಅವಳ ಹಿಂದಿನಿಂದ ಗೋಡೆಯ ಗಡಿಯಾರ ಐದು ಹೊಡೆಯುತ್ತಿತ್ತು.

ಬಾಗಿಲು ತೆರೆದವಳು ಕ್ಷಣ ಕಾಲ ಆದಕ್ಕೊರಗಿ ನಿಂತಳು. ಈ ದಿನ ಸಿಂಗರಿಸಿಕೊಂಡು ಸಿದ್ಧವಾಗಿದ್ದ ಬಿನ್ನಾಣಗಿತ್ತಿ ಆಕೆ. ಹುಬ್ಬು ಗಳು ಬಿಲ್ಲಿನಂತೆ ಬಾಗಿದ್ದುವು. ಹಿರಿದಾದ ಕಣ್ಣುಗಳು ಮಂದಗಮನ ದಿಂದ ಅತ್ತಿತ್ತ ಚಲಿಸುತ್ತಿದ್ದುವು. ಪೌಡರು ಆ ಗೌರಾಂಗಕ್ಕೆ ಅವ ಮಾನ ಮಾಡಿತ್ತು, ಆ ತುಟಿಗಳು........ಏರಿಳಿಯುತಿದ್ದ ವಕ್ಷಸ್ಥಳ....

ನಾನು ಆಕೆಯ ದೃಷ್ಟಿಯನ್ನು ಇದಿರಿಸುತಿರಲಿಲ್ಲ. ನನಗೆ ಣಿಸುತಿದ್ದವಳು ಆಕೆ—ಅವಳ ದೃಷ್ಟಿಯಲ್ಲ.

"ಕೂ ಬಂದ್ರಿ. ನೀವು ಬರೋದೇ ಇಲ್ವೇನೋ ಅಂತಿದ್ದೆ."

ಬೋರ್.

ಗಿಯೇ

ನ್ನ

ಂತೆ.

ಳ

"ಬನ್ನಿ ರಾಧಾ. ಬಹಳ ಕ್ಷೀಣ. ಆದಕ್ಕೋಸ್ಕರ ಮಲಕೊಂಡಿ ದೀನಿ. ಹ್ಯಾಗ್ಬಂದ್ರಿ? ಟ್ಯಾಕ್ಸೀಲೆ?"

"ಇಲ್ಲ, ಸೈಕಲ್ ಮೇಲ್ಬಂದೆ."

"ನೋಡಿದಿಯಾ ವನೂ? ನಾನು ಹೇಳಿರ್ಲಿಲ್ವ? ಸೈಕಲ್ ಇದೆ ಇವರಿಗೆ. ಇಲ್ನೋಡಿ ರಾಧಾ, ನನಗೂ ಸೈಕಲ್ ಸವಾರಿ ಮಾಡ್ಬೇಕೂಂತ ಆಸೆ. ಆದರೆ ನಮ್ತಂದೆ ಒಪ್ಪೋದಿಲ್ಲ."

"ಹೋಗಲಿ ಬಿಡಿ. ನಿಮ್ತಂದೆಗೆ ತಿಳೀದ ಹಾಗೆ ನಾನು ಕಲಿಸ್ತೀನಿ."

ವನಜ ಒಳಹೋಗಿ ಅಡಗೆಯ ಹುಡುಗನಿಗೆ ನಿರ್ದೇಶಗಳನ್ನು ಕೊಟ್ಟು ಬಂದಳು. ಸ್ವಲ್ಪ ಹೊತ್ತು ಮೌನವಾಗಿಯೇ ಕಳೆಯಿತು. ಆ ಮೌನದಿಂದ ಗಮನವನ್ನು ಬೇರೆ ಕಡೆಗೆ ಸೆಳೆಯಲೆಂದು ವನಜ ರೇಡಿಯೋ ಹಾಕಿದಳು. ಯಾವುದೋ ಕೇಂದ್ರದಿಂದ ಸಿತಾರ ವಾದನ ಕೇಳಿಸುತ್ತಿತು.

ರೇಡಿಯೋದ ಧ್ವನಿಯನ್ನು ಕಿರಿದು ಗೊಳಿಸುತ್ತಾ ವನಜ ಕೇಳಿದಳು.

"ನೀವು ಸಿನಿಮಾ ನೋಡೋಕೆ ಹೋಗಲ್ವ?"

"ಹೋಗ್ತೀನಿ. ಇಂಗ್ಲಿಷ್ ಫಿಲಂಸ್‌ಗೇ ಹೋಗೋದು ಜಾಸ್ತಿ."

"ನಾವೂ ಅಷ್ಟೆ."

"ನಿನೋಚ್ಕಾ ನೋಡಿದಿರಾ?"

"ಓ! ಗ್ರೆಟಾ ಗಾರ್ಬೋ ನಟಿಸಿರೋದು! ಚೆನ್ನಾಗಿದೆ!"

ಅಲ್ಲಿಂದ ಮಾತು ಪತ್ರಿಕೆ ಪುಸ್ತಕಗಳ ಕಡೆಗೆ ತಿರುಗಿತು. ಮುರಲಿ ತಮ್ಮ ಮನೆಯ ಪುಸ್ತಕ ಸಂಗ್ರಹದ ಬಗ್ಗೆ ಅಭಿಮಾನಪಡುತ್ತಾ ಹೇಳಿದ:

"ನಮ್ತಂದೆಗೆ ಪುಸ್ತಕ ಅಂದರಾಯ್ತು. ಎರಡು ಬೀರು ತುಂಬಾ ಲಾ ಜರ್ನಲ್‌ಗಳು, ನಾಲ್ಕು ಬೀರು ಜನರಲ್ ಬುಕ್ಸ್."

ತಿಂಡಿ ಬಂತು—ಸಿಹಿ ಖಾರದ ತಿಂಡಿ. ಕಾಫಿ ಬಂತು—ಸೊಗ

ಸಾದ ಕಾಫಿ. ಮುರಲಿ ಕಾಫಿಯನ್ನು ಕುಡಿದ.

"ಬನ್ನಿ, ಲೈಬ್ರೆರಿ ತೋರಿಸ್ತೀನಿ," ಎಂದು ವನಜ ಕರೆದಳು.

ನಾನು ಅವಳನ್ನು ಹಿಂಬಾಲಿಸಿದೆ.

ಪುಸ್ತಕಗಳಿಗೋಸ್ಕರವೇ ಸಿಂಗರಿಸಿದ್ದ ವಿಶಾಲವಾದೊಂದು ಕೊಠಡಿ. ಒಂದೇ ಒಂದು ದೊಡ್ಡ ಭಾವ ಚಿತ್ರ ಆ ಗೋಡೆಗಳನ್ನು ಅಲಂಕರಿಸಿತ್ತು. "ನಮ್ಮ ತಾಯಿ," ಎಂದಳು ವನಜ. ನನಗೆ ತಾಯಿ ಇರಲಿಲ್ಲ ಆಕೆಯ ಭಾವಚಿತ್ರವೂ ನನ್ನಲ್ಲಿರಲಿಲ್ಲ. ತಂದೆಯ ಭಾವ ಚಿತ್ರವೂ ನನ್ನಲ್ಲಿ ಇರಲಿಲ್ಲ. ನಾನಿರುವವರೆಗೂ ನನ್ನ ಕಲ್ಪನೆಯಲ್ಲಿ ಅವರನ್ನು ಚಿತ್ರಿಸಿಕೊಳ್ಳಬಹುದು. ಆ ಮೇಲೆ ನನ್ನೊಡನೆ ಅವರ ಕಲ್ಪನೆಯ ಚಿತ್ರಗಳೂ ಮಣ್ಣುಗೂಡುವುವು .......

"ಏನು ಯೋಚಿಸ್ತಿದೀರಿ ?"

"ತಾಯಿಯ ನೆನಪಾಯ್ತು."

"ಓ, ನೀವೂ ನಮ್ಮ ಹಾಗೇನೆ ಹಾಗಾದರೆ."

"ಅದಕ್ಕಿಂತ್ಲೂ ಸ್ವಲ್ಪ ಹೆಚ್ಚು. ನನಗೆ ತಂದೆಯೂ ಇಲ್ಲ."

"ಅವರೇನು ಕೆಲಸದಲ್ಲಿದ್ರು ?"

ಅವರೇನು ಕೆಲಸದಲ್ಲಿದ್ದರು? ನನ್ನ ತಂದೆಗೆ ಏನುಕೆಲಸವಿತ್ತು ?

"ಕೆಲಸ ? ಬೊಂಬಾಯಿಯ ಒಂದು ದೊಡ್ಡ ಫರ್ಮ್‌ನಲ್ಲಿ ಪಾರ್ಟ್ನರ್ ಆಗಿದ್ರು. ನಾನು ಚಿಕ್ಕ ಮಗುವಾಗಿದ್ದಾಗ್ಲೇ ಆ ಊರಿಗೆ ಹೊರಟು ಹೋಗಿದ್ವಿ."

"ಸೋ ಸಾರಿ."

ಹಾಗೆ ಸಹಾನುಭೂತಿ ತೋರಿಸಿದಳು ವನಜ. ಮೌನವಾಗಿಯೇ ಹಲವು ನಿಮಿಷಗಳು ಕಳೆದುವು. ಆದರೆ ಆ ಮೌನಕ್ಕೆ ಅರ್ಥವಿತ್ತು. ನಮ್ಮಿಬ್ಬರ ಯೋಚನೆಗಳನ್ನು ಪರಸ್ಪರ ಸಮೀಪಕ್ಕೆ ತರುವ ಸಾಮರ್ಥ್ಯವಿತ್ತು.

"ನಿಮ್ಮ ತಂದೆ ಒಳ್ಳೊಳ್ಳೆ ಪುಸ್ತಕಗಳನ್ನ ಕೂಡಿಸಿಟ್ಟಿದಾರೆ."

"ಅವರಿಗಿನ್ನೇನು ಕೆಲಸ ಹೇಳಿ? ತಾಯಿ ತೀರ್ಕೊಂಡ್ಮೇಲೆ ಹೆಚ್ಚಾಗಿ ಈ ಕೊಠಡೀಲೇ ಇರ್ತಾರೆ."

" ನೀವು ಪುಸ್ತಕಗಳ್ನ ಓದಲ್ವೆ? "

" ಓದ್ತೀನಿ. ಕಾದಂಬರಿಗಳಾದರೆ ಓದ್ತೀನಿ. ಇಂಗ್ಲಿಷು ಕನ್ನಡ ಎರಡಲ್ಲೂ ಓದ್ತೀನಿ."

ಮತ್ತೆ ಮೌನ.

" ನೀವು—ಇಲ್ನೋಡಿ—"

ಯಾವುದೋ ಪುಸ್ತಕ ಓದುತಿದ್ದ ನಾನು, ವನಜಳ ಮಾತು ಕೇಳಿಸದವನ ಹಾಗೆ ನಟಿಸಿದೆ.

" ಕೇಳಿಸ್ಲಿಲ್ವಾ? "

" ನನಗೊಂದು ಹೆಸರಿದೆ."

ಅವಳು ನಕ್ಕಳು.

" ಮಿಸ್ಟರ್ ರಾಧಾಕೃಷ್ಣ—"

" ಮಿಸ್ಟರ್ ಬೇಡಿ."

ಲಜ್ಜೆಯಿಂದ ಅವಳ ಮುಖ ಕೆಂಪೇರಿತು. ಆಕೆ ಮಾತು ಮುಂದುವರಿಸಲಿಲ್ಲ. ನಾನು ಸುಮ್ಮನೆ ಪುಟಗಳನ್ನು ತಿರುವಿ ಹಾಕುತಿದ್ದರೆ, ನನ್ನನೇ ನುಂಗುವವರ ಹಾಗೆ ಅವಳು ನೋಡುತಿದ್ದಳು.

" ವನಜ, ನಿಮ್ಮ ಲೈಬ್ರೆರಿಯಿಂದ ಪುಸ್ತಕ ಇಸಕೊಂಡು ಹೋಗ್ಲೇನು ?"

" ಅವನ್ನೇ ಹೇಳೋಣಾಂತ ನಾನು ಬಾಯಿ ತೆರೆದಿದ್ದು."

ಮುರಲಿ ನಮ್ಮನ್ನು ಕೂಗಿ ಕರೆದ.

" ಈ ದಿವ್ಸ ನೀವಿಬ್ಬರೂ ಇಷ್ಟು ಮಾತನಾಡಿದ್ದು ಸಾಕು. ಉಳಿದದ್ದೆಲ್ಲಾ ಆ ಮೇಲೆ ಮುಗಿಸ್ಕೊಳ್ಳಿ. ಇವತ್ತು ರಾಧಾ ನನ್ನ ಸಮೀಪವೇ ಇರ್ಬೇಕು."

ನಾನು ನಗುತ್ತಾ ಒಪ್ಪಿಕೊಂಡೆ. ಅಷ್ಟರಲ್ಲೆ ಅವರ ತಂದೆ ಬಂದರು ಎತ್ತರವಾಗಿದ್ದ ತೆಳ್ಳಗಿನ ದೇಹ. ಅವರು ರುಮಾಲನ್ನೆತ್ತಿ ಸ್ಟ್ಯಾಂಡಿನ ತಗಲು ಮೊಳೆಯ ಮೇಲಿರಿಸಿದಾಗ, ನುಣ್ಣಗೆ ಬೆಳ್ಳಗೆ ತಲೆಯ ಇಕ್ಕೆಲಗಳಿಗೂ ಚಾಚಿಕೊಂಡಿದ್ದ ಅವರ ಸೊಗಸಾದ ಕ್ರಾಪನ್ನು ಕಂಡೆ.

"ಪಪ್ಪಾ, ಇವರೇ ರಾಧಾಕೃಷ್ಣ........ಇವರೇನೆ ಮುರಲೀನ ಪಾರ್ಕ್‌ನಿಂದ ಕರೆದು ತಂದೋರು."

"ಮಿಸ್ಟರ್ ರಾಧಾಕೃಷ್ಣ, ಇವರೇ ನಮ್ತಂದೆ."

ತಂದೆಯ ಪರೀಕ್ಷಕ ದೃಷ್ಟಿ ನನ್ನನ್ನು ತೂಗಿ ನೋಡುತಿತ್ತು. ನನ್ನ ಸುತ್ತಲೂ ನಿಶ್ಚಲಭಾವಮುದ್ರೆಯ ಭದ್ರವಾದ ಕೋಟೆಯನ್ನು ರಚಿಸಿ ನಾನು ಎದ್ದು ನಿಂತು ಮುಗುಳ್ನಕ್ಕು ವಿನಯದಿಂದ ವಂದಿಸಿದೆ.

"ಕೂತಿರಿ, ಕೂತಿರಿ ಮಿಸ್ಟರ್ ರಾಧಾಕೃಷ್ಣ. ನಿಮ್ಮಿಂದ ಬಹಳ ಉಪಕಾರವಾಯ್ತೂಂತ ಹುಡುಗರು ಆಗ್ಲೇ ವರದಿ ಮಾಡಿದಾರೆ."

ಲಜ್ಜೆಯಿಂದ ಮುಖ ಕೆಂಪೇರಿಸಿಕೊಂಡವರಂತೆ, "ಅಯ್ಯೊ! ಅದೇನು ಮಹಾ!" ಎಂದೆ.

ಅವರು ಮಗಳ ಕಡೆಗೆ ತಿರುಗುತ್ತಾ, "ಏನಮ್ಮಾ, ಅತಿಥಿಗೆ ಕಾಫಿ ತಿಂಡಿ ಆಯ್ತೋ?" ಎಂದರು.

"ಓಹೋ, ಆಗಲೇ ಆಯ್ತು."

"ನನಗೇನಾದರೂ ಇಟ್ಟಿದೀರೊ?"

"ಬಾ ಪಪ್ಪ. ಬಟ್ಟೆ ಬದಲಾಯಿಸ್ಕೊ. ಕ್ಲಬ್ಬಿಗೆ ಹೋಗಲ್ವ?"

ಅವರ ತಂದೆ ಕ್ಲಬ್ಬಿಗೆ ಹೋದರು........

....ಕತ್ತಲಾಗುವ ತನಕವೂ ಅಲ್ಲಿದ್ದೆ. ಎರಡು ಪುಸ್ತಕಗಳನ್ನು ಎತ್ತಿಕೊಂಡು ಹೊರಟ ನನ್ನನ್ನು ಬೀಳ್ಕೊಡಲು ವನಜ ಬಂದಳು. ಗೇಟಿನ ಬಳಿ ಮತ್ತೂ ಒಂದಷ್ಟು ಹೊತ್ತು ಮಾತನಾಡಿದೆವು. ಮೂರು ನಾಲ್ಕು ದಿನಗಳ ಬಳಿಕ ಮತ್ತೊಮ್ಮೆ ಬರುವ ಆಶ್ವಾಸನೆಯನ್ನಿತ್ತೆ.

"ಪುಸ್ತಕ ವಾಪಸು ಕೊಡೋಕೋಸ್ಕರ ಬರ್ತೀನಿ."

"ಹುಂ....ಪುಸ್ತಕಕ್ಕೋಸ್ಕರ ಬರ್ತೀರಿ ಅಂತನ್ನಿ."

ನಾನು ನಕ್ಕೆ. ಪ್ರತ್ಯುತ್ತರವಾಗಿ ಅವಳೂ ನಕ್ಕಳು.

....ನಿಮ್ಮ ಜೀವಮಾನದಲ್ಲಿ ಎಂದಾದರೂ ನಿಮಗೆ ಈ ಹುಡುಗ-ಹುಡುಗಿ ಪ್ರೇಮದ ಅನುಭವವಾಗಿದೆಯೊ ಇಲ್ಲವೊ ನನಗೆ ತಿಳಿಯದು.

ಪ್ರೇಮದ ವಿಷಯ ನಾನು ಪುಸ್ತಕಗಳಲ್ಲಿ ಓದಿದ್ದೆ. ಪ್ರೇಮ, ಎಷ್ಟೊಂದು ಸಾಹಿತ್ಯ ಸೃಷ್ಟಿಗೆ ಪ್ರೇರಕವಾಗಿಲ್ಲ! ಆ ಸಾಹಿತ್ಯ ದೊಳಗಿನ ಪ್ರೇಮ, ನನ್ನ ಪಾಲಿಗೆ ಕಲ್ಪನೆಯ ಲೋಕದ ಕೈಗೆಟಕದ ವಸ್ತುವಾಗಿತ್ತು—ಚಲಚ್ಚಿತ್ರದೊಳಗಿನ ಆದರ್ಶ ಜೀವನದ ಹಾಗೆ.... ನನ್ನ ಜೀವನದಲ್ಲೂ ಆ ಪ್ರೇಮದೊಂದು ಪ್ರಕರಣ ಆಗಿಯೇ ತೀರುವು ದೆಂದು— ಹಾಗೆ ಆಗಿಯೇ ತೀರುವುದೆಂದು—ಯಾರು ಊಹಿಸಿದ್ದರು ?

ಆ ಪ್ರಕರಣ—

ವನಜ ಎಂತಹ ಹುಡುಗಿಯೆಂದು ತಿಳಿಯಲು ನಾನು ಯತ್ನಿಸ ಲಿಲ್ಲ. ಅವರ ಮನೆಗೆ ಸಂಬಂಧಿಕರಾದ ಸ್ನೇಹಿತರಾದ ಬೇರೆ ಬೇರೆ ಯುವಕರು ಬರುತ್ತಿದ್ದರು. ಹೀಗಿದ್ದೂ ನನ್ನನ್ನು ಅವಳು ಪ್ರೀತಿಸಿ ದಳು. ನನಗೆ ಅಷ್ಟೇ ಸಾಕಾಗಿತ್ತು. ಜೀವನದಲ್ಲಿ ಹೆಣ್ಣಿನ ಪ್ರೀತಿ ಎಂದರೇನೆಂಬುದನ್ನು ತಿಳಿಯದೇ ಇದ್ದ ನಾನು, ವನಜಳ ತೇವ ತುಂಬಿದ ಕಣ್ಣುಗಳಿಗೆ, ನಡುಗುವ ಸ್ವರಕ್ಕೆ, ತುಟಿಗಳ ಕಂಪನಕ್ಕೆ, ಮನೋವಿಕಾರದ ಅರ್ಥ ಹೀನ ಮಾತುಗಳಿಗೆ ಮಾರುಹೋದೆ.

ನನ್ನ ಇರುವಿಕೆಯ ವೆಚ್ಚಕ್ಕಾಗಿ ಅಲ್ಲಿಂದ ಇಲ್ಲಿಂದ ಅಷ್ಟಿಷ್ಟು ಹಣ ನನ್ನ ರೀತಿಯಲ್ಲೆ ನಾನು ದೊರಕಿಸಿಕೊಳ್ಳಬೇಕಾಗುತಿತ್ತು.... ಹಾಗೆ ಮಾಡುವಾಗ ವನಜಳ ನೆನಪಾಗುತಿತ್ತು.

ಊರಿಗೆ ಹಿಂತಿರುಗಿದ ಚಲಂ ನನ್ನನ್ನು ಕಂಡು, ಹಾದಿ ತಪ್ಪಿದ ಎಳೆಯ ತಮ್ಮನಿಗೆ ಹಿತ ವಚನಗಳನ್ನು ಆಡಿದ ಹಾಗೆ ನನ್ನೊಡನೆ ಮಾತನಾಡಿದ.

"ಇಲ್ಲ. ನನಗೇನೂ ಆಗಿಲ್ಲ ಚಲಂ. ಇಲ್ಲದ ಚಿಂತೆ ಹಚ್ಚಿಕೋ ಬೇಡ....ನನಗೇನೂ ಆಗಿಲ್ಲ."

"ಶೇಖರ್, ಯಾಕೆ ಸುಳ್ಳು ಮಾತು ? ಸುಳ್ಳು ಹೇಳಿ ನನ್ನನ್ನು ಯಾಕೆ ನೀನು ನೋಯಿಸ್ಬೇಕು ?"

ನಾನು ನೋಯಿಸುವುದು ಹಾಗಿರಲಿ. ನನಗೇ ವಿಚಿತ ರೀತಿಯ ನೋವಿನ ಅನುಭವವಾಗುತಿತ್ತು.

"ಚಲಂ, ನನಗೆ ಮೈ ಚೆನ್ನಾಗಿಲ್ಲ."

"ಕಾಹಿಲೆ ಏನು ಅನ್ನೋದು ನನಗೆ ಗೊತ್ತಿದೆ."

"ಗೊತ್ತಿದ್ದೂ ಯಾಕೆ ಹಿಂಸೆ ಕೊಡ್ತೀಯಾ?"

"ಹಿಂಸೆ?"

ಅಲ್ಲಿಗೆ ಮಾತು ನಿಂತಿತು.

ಆ ಸಂಜೆ ನಾನು ವನಜಳನ್ನು ನೋಡಬೇಕಾಗಿತ್ತು. ಆದರೆ ಮನಸ್ಸಿನ ಯಾತನೆ ನನ್ನನ್ನು ನಿಜವಾಗಿಯೂ ಕಾಹಿಲೆಯವನಾಗಿ ಮಾಡಿತು. ಈ ಪ್ರೀತಿ—ಪ್ರೇಮ—ಬಲು ಕಠಿನವಾಗಿತ್ತು. ಕತೆ ಕಾದಂಬರಿಗಳಲ್ಲಿ ನಾನು ಓದಿದ್ದ ಪ್ರೇಮದ ಪ್ರಕರಣಗಳಿಗಿಂತಲೂ ವಾಸ್ತವ ಜೀವನದ ಪ್ರೇಮ ಹೆಚ್ಚು ಕಠಿನವಾಗಿತ್ತು.

ವನಜಳನ್ನು ನಾನು ಪ್ರೀತಿಸುತಿದ್ದೆ. ಅವಳಿಗೋಸ್ಕರ ಎಂತಹ ತ್ಯಾಗ ಮಾಡುವುದಕ್ಕೂ ಸಿದ್ಧವಾಗಿದ್ದೆ.....ನನ್ನ ಬಾಳ್ವೆಯ ಕರ್ಮ ಕಥೆ ಅವಳಿಗೆ ತಿಳಿದಿರಲಿಲ್ಲ. ತಿಳಿಸುವ ಇಚ್ಛೆಯೂ ನನಗಿರಲಿಲ್ಲ. ಅದು ತಿಳಿದರೆ ಏನಾಗುವುದೋ ಯಾರಿಗೆ ಗೊತ್ತಿತ್ತು? ಯಾರ ಆತಂಕವೂ ಇಲ್ಲದೆ ಕನಸಿನಲ್ಲಿ ಕಟ್ಟುತಿದ್ದ ಸುಂದರ ಸೌಧವನ್ನು ನಿಷ್ಕಾರಣವಾಗಿ ಕುಸಿದು ಕೆಡವಲು ನಾನು ಬಯಸಲಿಲ್ಲ....ಆದರೂ ಅದೊಂದು ಪ್ರಶ್ನೆ ನನ್ನನ್ನು ಕಾಡುತಿತ್ತು. ಮುಂದೇನಾಗುವುದು? ಮುಂದೇನು? ವನಜ ಹೆಚ್ಚಿನ ವಿದ್ಯಾಭ್ಯಾಸದ ಮಾತನ್ನೆ ಬಿಟ್ಟಿದ್ದಳು. ಬೇಸಗೆಯ ರಜ ಬಂದ ಮೇಲೆ ನಾವಿನ್ನು ಆಗಲಿರುವುದು ಸಾಧ್ಯವಾಗ ದೆಂದು ಅಂತಿಮ ನಿರೂಪ ಕೊಟ್ಟಿದ್ದಳು. ಆ ಅಗಲಿಕೆ ದುಸ್ಸಾಧ್ಯ ವಾಗಿದ್ದುದು ಅವಳಿಗೊಬ್ಬಳಿಗೆ ಅಲ್ಲ. ಪ್ರತಿ ದಿನವೂ ಆಕೆಯನ್ನು ಕಾಣದೇ ಇದ್ದರೆ, ಪರಸ್ಪರ ಆತುಕೊಂಡು ಕ್ಷಣ ಕಾಲ ನಿಲ್ಲದೇ ಇದ್ದರೆ, ನಾನು ಹುಚ್ಚನಾಗುತಿದ್ದೆ........ನಾನು ಮತ್ತು ವನಜ ಜತೆಯಾಗಿ ಜೀವನ ಮಾಡುವುದು ಸಾಧ್ಯವೆ? ನನ್ನ ಸಹಪಾಠಿ ಶ್ರೀಕಂಠನ ಹಾಗೆ ನಾನು ವಿವಾಹಿತನಾಗುವುದು ಸಾಧ್ಯವೆ? ಅಮಾರ–ಶೀಲರ ಹಾಗೆ, ಚಲಂ-ಸಾವಿತ್ರಿಯರ ಹಾಗೆ, ನಾನು ಮತ್ತು ವನಜ ಬಾಳ್ವೆನಡೆಸುವುದು ಸಾಧ್ಯವೆ?....ಇಲ್ಲ, ವನಜ ಎಂದೆಂದಿಗೂ ಶೀಲಳಾಗುವುದು ಸಾಧ್ಯ ವಿರಲಿಲ್ಲ; ಸಾವಿತ್ರಿಯಾಗುವುದು ಸಾಧ್ಯವಿರಲಿಲ್ಲ. ವನಜ ಸಂಭಾವಿತ

ಸದ್ಗೃಹಸ್ಥನ ಮಡದಿಯಾಗಬೇಕು-ಮಿಸೆಸ್ ಸೋ ಅಂಡ್ ಸೋ. ಹಾಗಾದರೆ, ನಾನು ಮೊದಲು ಸಂಭಾವಿತನಾಗಬೇಕು, ಸದ್ಗೃಹಸ್ಥನಾಗಬೇಕು. ಅಂದರೆ ?

....ಯೋಚನೆಗಳಿಂದ ನನ್ನ ಮೆದುಳು ಸಿಡಿಯುತಿತ್ತು. ಇದು ಎಂದಾದರೂ ಸಾಧ್ಯವೆ? ನನ್ನ ಜೀವನದ ಈವರೆಗಿನ ಅಧ್ಯಾಯಗಳನ್ನು ಕೊನೆಗಾಣಿಸಿ, ಮತ್ತೆ ಹೊಸ ಪುಸ್ತಕದಲ್ಲಿ ಓಂ ಶ್ರೀ ಎಂದು ಆರಂಭಿಸುವುದು ಸಾಧ್ಯವೆ?

ಇದು ಅಸಂಭವವಾದುದೆಂದೇ ನನಗೆ ಹಲವೊಮ್ಮೆ ತೋರುತಿತ್ತು. ಆದರೆ, ಯಾಕಾಗಬಾರದು—ಈ ರೀತಿ ಯಾಕಾಗಬಾರದು—ಎಂಬ ಸಾಧ್ಯತೆಯ ಸಂದೇಹವೂ ಕೆಲವೊಮ್ಮೆ ನನ್ನನ್ನು ಕಾಡಿಸುತಿತ್ತು........ಆದರೆ, ಎಂದಾದರೊಮ್ಮೆ ನನ್ನ ಗತಜೀವನ ವನಜಳಿಗೆ ತಿಳಿದಾಗ? ನನ್ನ ಜಾತಿ ಕುಲ ಗೋತ್ರಗಳ ವಿಷಯ ತಿಳಿದಾಗ? ಹೈಸ್ಕೂಲಿನ ವಿದ್ಯಾಭ್ಯಾಸವನ್ನು ಅರ್ಧದಲ್ಲೆ ಬಿಟ್ಟು ನಾನು ಕೈಕೊಂಡ ವೃತ್ತಿಯ ಸ್ವರೂಪದ ಪರಿಚಯ ಅವಳಿಗೆ ಆದಾಗ? ಈ ಬೆಲೆಬಾಳುವ ಪೋಷಾಕಿನ ಒಳಗೆ ಗ್ರಹಣ ಹಿಡಿದ ಮಾನವ ಹೃದಯ ಇದೆ ಎಂಬುದು ಅವಳಿಗೆ ಅರಿವಾದಾಗ ?

ಒಮ್ಮೊಮ್ಮೆ ಆ ಆಸೆಯೂ ತಲೆದೋರುತಿತ್ತು. ಈ ಪ್ರಪಂಚ ಹುಟ್ಟಿದಂದಿನಿಂದ ಪ್ರೇಮಕ್ಕಾಗಿ ಪ್ರಣಯಿಗಳು ಎಷ್ಟೊಂದು ತ್ಯಾಗ ಮಾಡಿಲ್ಲ? ನನ್ನ ನಿಜ ಸ್ಥಿತಿ ತಿಳಿದ ಮೇಲೂ ವನಜ ನನ್ನನ್ನು ಪ್ರೀತಿಸಲಾರಳು ಎನ್ನುವುದಕ್ಕೆ ಆಧಾರವೇನಿದೆ? ನನ್ನ ಕನಸು ಆಗ ಒಡೆದು ಚೂರಾಗಬಹುದೆಂದು ನಾನು ಶಂಕಿಸುತ್ತಿರುವುದು ಪ್ರಾಯಶಃ ತಪ್ಪಲ್ಲವೆ ?

ಆದರೆ ಚಲಂ ನನ್ನನ್ನು ಸುಲಭವಾಗಿ ಬಿಟ್ಟುಕೊಡುವ ಹಾಗಿರಲಿಲ್ಲ. ಮಂತ್ತೊಂದು ಸಂಜೆ ಅವನು ನನ್ನನ್ನು ತಡೆ ಹಿಡಿದ.

"ಶೇಖರ್, ನಿನಗೆ ಹಿತವಾಗ್ಬೇಕೊಂತ಼್ಲೇ ನನ್ನ ಮನಸ್ನಲ್ಲಿರೋದು. ನೀನು ಹೆಣ್ಣಿನ ಸಮೀಪ ಹೋಗಕೂಡದು ಅಂತ ಹೇಳೋದಿಕ್ಕೆ ನಾನು ಯಾರು? ನಾವು ಸನ್ಯಾಸಿಗಳು ಅಂತ ನಾನು ಯಾವತ್ತೂ

ತಿಳಕೊಂಡಿಲ್ಲ. ಆದರೆ ನೀನು ಈಗ ಮಾಡ್ತಿರೋದು ಸರಿಯಾದ್ದು ಮಾತ್ರ ಅಲ್ಲ. ಇದರಿಂದ ನಿನಗೆ ಖಂಡಿತ ಸುಖ ಸಿಗೋದಿಲ್ಲ"

"ಚಲಂ, ನೀನು ಹಾಗನ್ಬಾರ್ದು ?"

"ನೀನು ಸಂಪಾದಿಸ್ತಿರೋ ರೀತಿ ಅವಳಿಗೆ, ಅವಳ ತಂದೆಗೆ, ಗೊತ್ತಾ ?"

"ಇಲ್ಲ."

"ಮತ್ತೆ ? ಈ ವೃತ್ತಿ ಬಿಟ್ಬಿಡ್ಬೇಕು ಅಂತಿದೀಯೊ ?"

"............"

"ಶೇಖರ್, ನಾನು ಆ ಹುಡುಗೀನ ನೋಡ್ಬೇಕು. ಅವಳ ಜತೇಲಿ ಮಾತಾಡ್ಬೇಕು."

"ಓ—ಅದು ಸಾಧ್ಯವಿಲ್ಲ."

ಸಿಡುಬಿನ ಕಲೆಗಳ ಕಪ್ಪಗಿನ ಕುರೂಪ ಮುಖದ ಚಲಂನನ್ನು ನನ್ನ ಆಪ್ತನೆಂದು ವನಜಳಿಗೆ ಪರಿಚಯ ಮಾಡಿಕೊಡುವ ಚಿತ್ರವನ್ನು ಕಲ್ಪಿಸಿಕೊಂಡೇ ನಾನು ತಣ್ಣಗಾಗಿ ಹೋದೆ.

"ಸರಿ ಹಾಗಾದರೆ—" ಎಂದ ಚಲಂ .

ವನಜಳನ್ನು ಕಾಣ ಹೊರಟಾಗ ನನ್ನ ಮನಸ್ಸು ಕಸಿವಿಸಿಗೊಂಡು ಕೇಳುತ್ತಿತ್ತು : ಏನಾದರೊಂದು ತೀರ್ಮಾನವಾಗಬೇಕು ; ಬೇಗನೆ ಏನಾದರೂ ತೀರ್ಮಾನವಾಗಲೇಬೇಕು....

ಒಂದು ಘಂಟೆಯಿಂದಲೂ ಆಕೆಯೊಬ್ಬಳೇ ನನಗಾಗಿ ಕಾದಿದ್ದಳು. ನಾನು ಬಂದೊಡನೆ, ನೊಂದ ಧ್ವನಿಯಲ್ಲಿ ಕೇಳಿದಳು.

"ಯಾಕೆ ರಾಧಾ—ಯಾಕೆ ಹೀಗೆ? ನೀನು ಇಷ್ಟು ನಿರ್ದಯಿ ಅಂತ ನನಗೆ ಗೊತ್ತಿರಲಿಲ."

ನಮ್ಮೊಳಗೆ ನಾನು ನೀನುಗಳ ಆತ್ಮೀಯತೆ ಬೆಳೆದಿತ್ತು. ಅವಳ ಮಾತಿಗೆ ನಾನು ಉತ್ತರ ಕೊಡಲಿಲ್ಲ.

"ಇಷ್ಟರಲ್ಲೇ ವನಜಾ, ಸಹವಾಸ ಬೇಸರ ಬಂತೇನು ?"

"ವನಜ, ಸಿಲ್ಲಿ ಸಿಲ್ಲಿಯಾಗಿ ಮಾತನಾಡಬೇಡ."

" ಮೈ ಚೆನ್ನಾಗಿಲ್ವೆ ರಾಧಾ ? "

" ಹೂಂ. ಅದಕ್ಕೇ ನಾಲ್ಕು ದಿವಸ್ದಿಂದ ಬರಲಿಲ್ಲ. "

ಆಕೆ ನನ್ನ ಕೈ ಮುಟ್ಟಿ ನೋಡಿದಳು ; ಹಣೆಯ ಮೇಲೆ ತನ್ನ ಕೈಯನ್ನಿಟ್ಟಳು.

" ಇಲ್ಲ ವನಜ, ಈಗ ಚೆನ್ನಾಗಿದೀನಿ. "

" ನಾನೊಂದು ಪ್ರಶ್ನೆ ಕೇಳಲಾ ರಾಧಾ ? "

" ಕೇಳು. "

" ನೀನು ನಿಜವಾಗ಼್್ಲೂ ನನ್ನ ಪ್ರೀತಿಸ್ತೀಯೊ ? "

" ನೀನು ನಿಜವಾಗ಼್್ಲೂ ನನ್ನ ಪ್ರೀತಿಸ್ತೀಯಾ ? "

" ಅದು ನಾನು ಕೇಳಿದ ಪ್ರಶ್ನೆ. "

" ಗೊತ್ತು. ನನ್ನ ಉತ್ತರವೂ ನಿನ್ನ ಪ್ರಶ್ನೇಲೇ ಇದೆ."

ವನಜ ಸೋಲನ್ನೊಪ್ಪಿಕೊಂಡಳು. ಆದರೆ ಆಕೆಯ ಬತ್ತಳಿಕೆ ಬರಿದಾಗಿರಲಿಲ್ಲ.

" ನೀನು ಯಾತಕ್ಕೋಸ್ಕರ ನನ್ನ ಪ್ರೀತಿಸ್ತೀಯಾ ? "

" ನಿನ್ನ ಪ್ರಶ್ನೆಯೇ ನನ್ನ ಉತ್ತರ."

" ಹೋಗಪ್ಪ."

ಕೃತಕವಾದ ಮುನಿಸು ಅವಳ ರೂಪಕ್ಕೆ ಶೋಭೆ ಕೊಟ್ಟಿತು.

" ನೀನು ಎಷ್ಟೊಂದು ಸುಂದರಿ ವನಜ ! "

ಗಾಳಿಗೆ ಹಾರಾಡುತಿದ್ದ ಅವಿಧೇಯವಾದ ಮುಂಗುರುಳನ್ನು ಹಿಂದೋಟಿಗೆ ತರುತ್ತಾ ವನಜ ಹೇಳಿದಳು.

" ನಾಳೆ ದಿವಸ ಮುದುಕಿಯಾಗಿ ಕೂದಲು ನರೆತು ಮುಖ ಸುಕ್ಕು ಗಟ್ಟಿದಾಗ ? "

" ಆಗ ಡೈವೋರ್ಸ್ ಮಾಡ್ಕೊಂಡು ಬಿಡ್ತೀನಿ."

" ಥೂ ! "

ಹಾಗೆ ಮಾತನಾಡುತ್ತಾ ಹೃದಯದ ನೋವನ್ನು ಮರೆಯಲು ನಾನು ಯತ್ನಿಸುತಿದ್ದೆ. ಆದರೂ ಮೌನದ ಅವಧಿಯಲ್ಲೆಲ್ಲಾ ನೋವು ಮರುಕಳಿಸುತಿತ್ತು.

ಆಳುಕುತ್ತ ಅಳುಕುತ್ತ ನಾನು ಆ ಪ್ರಶ್ನೆ ಕೇಳಿದೆ.

" ವನಜ, ನಾಳೆಯೊಂದು ದಿನ ನಾನು ಭಿಕಾರಿಯಾದರೆ? ನಿರುದ್ಯೋಗಿಯಾದರೆ? "

" ಎಷ್ಟು ಅಸಹ್ಯವಾದ ಮಾತು ಆಡ್ತೀಯಪ್ಪ! "

ಯೋಚನೆಯಿಂದ ನನ್ನ ಮುಖ ಬಾಡಿತು. ಅಂತಹ ಮಾತು ಆಕೆಗೆ ಅಸಹ್ಯವಾಗಿತ್ತು—ಅಲ್ಲವೆ? " ನೀನು ಏನೇ ಆದರೂ ನನ್ನ ಪಾಲಿನ ರಾಧಾ," ಎಂಬ ಉದ್ಗಾರ ಅವಳಿಂದ ಹೊರ ಬೀಳಲಿಲ್ಲ— ಅಲ್ಲವೆ?

" ಬಾ ರಾಧಾ. ಐಸ್ ಕ್ರೀಮ್ ಮಾಡ್ಸಿದೀನಿ. ನಂದೇ ಮೇಲ್ವಿಚಾರಣೆ. ಮುರಲಿ ಇನ್ನೂ ಮನೆಗೆ ಬಂದಿಲ್ಲ. ಬಾ."

ನಾವು ಒಳ ಹೋದೆವು ಚಮಚ ಐಸ್‌ಕ್ರೀಮನ್ನು ಎತ್ತಿ ಬಾಯಿಯ ಬಳಿ ತಂದಿತು. ನವುರಾಗಿ ಬರುತಿದ್ದ ಬಾದಾಮಿಯ ಆ ಸುವಾಸನೆ........ಇಪ್ಪತ್ತು ವರ್ಷಗಳ ಹಿಂದೆ, ತಂದೆಯೂ ನಾನೂ ಯಾರದೋ ಮನೆಯ ಹೊಲಸು ಜಗಲಿಯ ಮೇಲೆ ಮಲಗಿ, ಬಡವರ ಬಾದಾಮಿಯಾದ ಕಡಲೇಕಾಯಿ ತಿಂದಿದ್ದೆವು.

" ಏನು ಯೋಚನೆ ರಾಧಾ? "

ನನ್ನ ಹುಬ್ಬು ಗಂಟಿಕ್ಕಿದರೂ ಮುಗುಳ್ನಗಲು ಯತ್ನಿಸಿದೆ. ಪಕ್ಕದಲ್ಲೇ ಕುಳಿತಿದ್ದ ಅವಳು ಕುರ್ಚಿಯನ್ನು ನನ್ನ ಬಳಿಗೆ ಸರಿಸಿದಳು. ಚಮಚವನ್ನು ಕೆಳಗಿಟ್ಟು ಭದ್ರವಾಗಿ ನನ್ನ ಬಲಗೈಯನ್ನು ಹಿಡಿದು ಕೊಂಡಳು. ನನ್ನೆದೆ ಡವಡವನೆ ಹೊಡೆದುಕೊಂಡಿತು. ನಾನು ಈ ವನಜಳಲ್ಲಿ ಅಪಾರ ವಿಶ್ವಾಸವಿಟ್ಟಿದ್ದೆ. ನನ್ನ ಹೃದಯದ ಎಲ್ಲವನ್ನೂ ಅವಳಿಗಾಗಿ ಅರ್ಪಿಸಿದ್ದೆ. ನಾನಿನ್ನು ಏಕಾಕಿಯಾಗಿ ಇರುವುದು ಸಾಧ್ಯ ವಿರಲಿಲ್ಲ. ನನ್ನಲ್ಲಿ ಸುಪ್ತವಾಗಿದ್ದ ಮಧುರ ಭಾವನೆಗಳಿಗೆಲ್ಲ ಆಕೆ ಜೀವ ತುಂಬಿದ್ದಳು—ನನ್ನನ್ನು ಹೆಚ್ಚು ಮಾನವೀಯವಾಗಿ ಮಾಡಿದ್ದಳು.

ಕ್ಷಣಕಾಲ ಆಕೆ ಕೈ ಬಿಗಿ ಹಿಡಿದೇ ಇದ್ದಳು. ಅವಳ ಮಡಿಲಲ್ಲಿ ಮುಖವಿಟ್ಟು ಅಳಬೇಕೆಂದು ತೋರಿತು. ಗಂಟಲು ಗೊರಕ್ ಎಂದು ಸದ್ದು ಮಾಡುತಿತ್ತು. ಆದರೆ ಸ್ವರ ಹೊರಡುತ್ತಿರಲಿಲ್ಲ. ಕುತ್ತಿಗೆಯ

ನರಗಳು ಬಿಗಿದು ಬಂದಿದ್ದುವು.

ಆಕೆ ಒಮ್ಮೆಲೆ ನನ್ನ ಕೈ ಬಿಟ್ಟು ಸ್ವಲ್ಪ ದೂರ ಸರಿದಳು. ಅಂತ ಮೂರ್ಖಿಯಾಗಿದ್ದ ನಾನು ಅವಳ ಭಾವನೆಗಳನ್ನು ತಿಳಿದುಕೊಳ್ಳಲು ಸಮರ್ಥನಾಗಿರಲಿಲ್ಲ. ಮೌನವಾಗಿ ನಾವು ಕುಳಿತೆವು. ಐಸ್ ಕ್ರೀಮ್ ನಮ್ಮನ್ನೆ ಕನಿಕರದಿಂದ ನೋಡುತ್ತಲಿತ್ತು.

"ಇಷ್ಟವಿಲ್ದಿದ್ರೆ ಏಳ್ಬಾರ್ದ ?....ಲೈಬ್ರೆರಿಗಾದರೂ ಹೋಗೋಣ."

ಆ ಮಾತು, ಅದರಲ್ಲಿದ್ದ ಬೇಸರದ ಆಸೆಯ ಧ್ವನಿ, ನನಗೆ ಅರ್ಥವಾದವು.

ಆದರೆ—?

ನನ್ನ ಪಾಲಿಗೆ ಪ್ರೀತಿ ಆಟದ ವಸ್ತುವಾಗಿರಲಿಲ್ಲ. ಪ್ರೀತಿಯ ಪ್ರೇಮದ ಆಸರೆಯಲ್ಲಿ, ಬರಡಾಗಿದ್ದ ನನ್ನ ಬಾಳ್ವೆಯನ್ನು ಹಸನು ಗೊಳಿಸಲು ನಾನು ಬಯಸಿದ್ದೆ. ಬಹಳ ದಿನಗಳಿಂದ ನಾನು ಇದಿರು ನೋಡುತಿದ್ದ ಪ್ರಥಮ ಚುಂಬನ....ಎರಡು ಹೃದಯಗಳು ಒಂದಾಗಿ ಎರಕ ಗೊಂಡುದಕ್ಕೆ ಸಾಕ್ಷ್ಯವಾದ ಪ್ರಥಮ ಆಲಿಂಗನ....ಯಾವ ನಿಮಿಷಬೇಕಾದರೂ ಅದು ನನ್ನದಾಗುತಿತ್ತು. ಆದರೆ ಯೌವನದ ಬರಿಯ ಹುಚ್ಚಾಟವಾಗಿ ಅದನ್ನು ನಾನು ಬಯಸಲಿಲ್ಲ. ಜೀವನದ ನಿರಂತರ ಪಯಣದ ಮೊದಲ ಮಹಾ ಸಂಭವವಾಗಿ ಅದು ನನಗೆ ಬೇಕಾಗಿತ್ತು.

ನಾನು....ನನ್ನ ಬಾಳ್ವೆ....ಭೂತಕಾಲ, ವರ್ತಮಾನ ಕಾಲ ಮತ್ತು ಭವಿಷ್ಯತ್ಕಾಲ.

ವನಜ ಮತ್ತು ನನ್ನ ಜೀವನ ಪ್ರವಾಹಗಳ ಮಹಾ ಸಂಗಮ ಸಾಧ್ಯವೆ ?

ಮನಸ್ಸಿನ ದೇಹದ ಬಯಕೆಗಳು ವನಜಳಿಗಷ್ಟೇ ಅಲ್ಲ, ನನಗೂ ಇದ್ದುವು. ಆದರೆ ಅವು ಈಡೇರಬೇಕಾದ ರೂಪುಗೊಳ್ಳಬೇಕಾದ ಬಗೆ ?

........ನಾನು ಮತ್ತು ವನಜ ಲೈಬ್ರೆರಿಗೆ ಹೋದೆವು. ಮುದ್ದಾಗಿದ್ದ ಅವಳ ಎರಡು ಅಂಗೈಗಳನ್ನೂ ಎತ್ತಿ, ಅವುಗಳಿಂದ ನನ್ನ ಮುಖ

ಮುಚ್ಚಿಕೊಂಡೆ. ಅಳುವ ಹಂಬಲ........ಮತ್ತೆ ನಾನು ಎಳೆಯ ಹುಡುಗನಾಗುವುದು ಸಾಧ್ಯವೆ ?

ವನಜ ನನ್ನ ಭುಜದಮೇಲೆ ತಲೆ ಬಾಗಿಸುತ್ತಾ, ಆಸೆಯ ದೃಷ್ಟಿಯಿಂದ ನನ್ನ ಕಣ್ಣುಗಳನ್ನೆ ನೋಡಿದಳು.

" ನನ್ನ ರಾಧಾ, ನನ್ನ ರಾಧಾ—ನೀನು ಬರೀ ಮಗು. ನಿನಗೇನೂ ತಿಳೀದು."

ಇದೀಗ ಸರಿಯಾದ ಸಮಯ. ಮಗುವಾದ ನಾನು ಹೃದಯದಲ್ಲಿರುವುದನ್ನು ಈಗಲೆ ತೆರೆದು ತೋರಿಸಬೇಕು........ನನ್ನ ದೇವಿ ನನ್ನನ್ನು ಕ್ಷಮಿಸಲಾರಳೆ ?........ನನ್ನನ್ನು ಅರ್ಥಮಾಡಿಕೊಳ್ಳಲಾರಳೆ ?

" ವನಜಾ, ನನ್ನ ವನೂ—"

ಒಂದೇ ಸಮನೆ ಕಿರಿಚಿಕೊಂಡ ಕಾಲ್ ಬೆಲ್. ಆತ ಬಂದಿದ್ದ—ಮುರಲಿ. ಏಕಾಂತಕ್ಕೆ ಮತ್ತೆ ಅವಕಾಶವಿರಲಿಲ್ಲ.

ಆ ದಿನವೂ ನಿರ್ಧಾರವಾಗಲಿಲ್ಲ.

ಮುರಲಿ ಮುಖ ತೊಳೆಯಲು ಹೋದಾಗ ಹೇಳಿದೆ.

" ವನಜಾ, ಬಹಳ ಮಾತನಾಡಬೇಕು. ನೀನೊಬ್ಬಳೇ ಯಾವತ್ತು ಸಿಗ್ತೀಯಾ ? "

" ಅಂತೂ ಮಾತನಾಡೋ ಆಶ್ವಾಸನೆಯಾದರೂ ಕೊಡ್ತಾ ಇದೀಯಲ್ಲ ! "

" ವನಜ, ನೀನು ಗೇಲಿ ಮಾಡಬಾರದು. ಹೃದಯ ಬಿರಿದು ಹೋಗುತ್ತೆ."

"............"

" ಹೇಳು, ಯಾವತ್ತು ಸಿಗ್ತೀಯ ? "

" ನಮ್ಮನೇ ವಿಳಾಸ ನಿನ್ನಲ್ಲಿದೆ. ಕಾಗದ ಬರೆ. ಪೋಸ್ಟ್ ನನ್ನ ಕೈಗೇ ಬರತ್ತೆ—ಯಾವಾಗಲೂ."

" ಹಾಗೇ ಆಗ್ಲಿ ವನೂ........ಬೇಗನೆ ಬರೀತೀನಿ."

ಬೇಗನೆ ಬರೆಯುವೆನೆಂದು ಹೇಳಿ ಬಂದಿದ್ದೆ. ಆದರೆ ಅದು

ಸಾಧ್ಯವಾಗಲಿಲ್ಲ. ನಿರೀಕ್ಷಿಸದೆ ಇದ್ದೊಂದು ಘಟನೆ ಸಂಭವಿಸಿ ನನ್ನನ್ನು ಕಾತರಕ್ಕೆ ಗುರಿಮಾಡಿತು.

ಒಂದು ಸಂಜೆ, ನಮ್ಮೂರಿನ ಪ್ರಮುಖ ವಜ್ರ ವ್ಯಾಪಾರಿಯೊಬ್ಬನ ಮಗನು ನಾಪತ್ತೆಯಾಗಿರುವನೆಂಬ ವಾರ್ತೆ ಪತ್ರಿಕೆಯಲ್ಲಿ ಪ್ರಕಟವಾಯಿತು. ವಿಹಾರಕ್ಕೆಂದು ಕಾರಿನೊಡನೆ ಹಿಂದಿನ ಸಂಜೆ ಹೋದವನು ವಾಪಸು ಬಂದಿರಲಿಲ್ಲವಂತೆ. ಅದನ್ನು ಕುರಿತು ತುಸು ಯೋಚಿಸಿದೆನಾದರೂ ವನಜಳ ನೆನಪು ಉಳಿದುದೆಲ್ಲವನ್ನೂ ತೊಡೆದು ಹಾಕಿತು.

ಮರುದಿನ ಸಂಜೆ ಅದೇ ಪತ್ರಿಕೆಯಲ್ಲಿ ವಾರ್ತೆ ಬಂತು. ಹುಡುಗ ಊರ ಹೊರಗೆ ಹತ್ತು ಮೈಲುಗಳಾಚೆ ಗಾಯಗೊಂಡು ಬಿದ್ದಿದ್ದ. ಧಾವಿಸುತ್ತಿದ್ದ ಕಾರಿನಿಂದ ಉರುಳಿಬಿದ್ದು ಗಾಯವಾಗಿತ್ತು. ರಕ್ತ ಕೋಡಿ ಕಟ್ಟಿ ಹರಿದು ಪ್ರಜ್ಞಾಹೀನನಾಗಿದ್ದ. ಅವನ ಜೀವ ಆಸ್ಪತ್ರೆಯಲ್ಲಿ ಬದುಕು ಸಾವುಗಳ ನಡುವೆ ತೂಗಾಡುತಿತ್ತು.

ಮೂರನೆಯ ದಿನ ಸಂಜೆಯು ಪತ್ರಿಕೆ ನೋಡಿ ನನ್ನ ಹೃದಯ ಸ್ವಲ್ಪ ಹೊತ್ತು ಹೊಡೆತ ನಿಲ್ಲಿಸಿತು. ಮದರಾಸಿನಲ್ಲಿ ಕಾರನ್ನು ಮಾರಲೆತ್ನಿಸುತಿದ್ದಾಗ ಚಲಂನನ್ನು ಹಿಡಿದಿದ್ದರು. ಇತ್ತ ಆ ಹುಡುಗ ಸತ್ತಿದ್ದ.

ಹಾಗೆಲ್ಲ ಸುಲಭವಾಗಿ ಎಡವಿ ಬೀಳದ ಹಳೆಯ ಹುಲಿ ಚಲಂಗೆ ಆ ದುರವಸ್ಥೆ ಒದಗಿತ್ತು.

ರಾತ್ರೆ ಕಳೆದು ಬೆಳಗಾಗುವ ಹೊತ್ತಿಗೆ ಚಲಂ ಬಳಗದವನೊಬ್ಬ ಸಾವಿತ್ರಿಯೊಡನೆ ನಮ್ಮ ಮನೆಗೆ ಬಂದಿದ್ದ. ಕೈ ಹಿಡಿದ ಹೆಣ್ಣಿಗಿಂತಲೂ ಹೆಚ್ಚಾಗಿ ಸಾವಿತ್ರಿ ಅಳುಮೋರೆ ಹಾಕಿದಳು.

"ಏನಾದರೂ ಮಾಡಿ ಅವರ್ನ ಬಿಡಿಸ್ಕೊಂಡು ಬರಬೇಕಪ್ಪ."

"ಹೂನಕ್ಕ."

"ಹಣದ ಯೋಚ್ನೆ ಮಾಡಬಾರ್ದು."

"ಇಲ್ಲಕ್ಕ. ಈಗ್ಲೇ ಹೊರಡ್ತೀನಿ.'

ಆಕೆ ಕೊರಳ ಹಾರ ಕೈಬಳೆಗಳನ್ನು, ತೆಗೆದು ಕಟ್ಟಿಕೊಂಡೇ

ಬಂದಿದ್ದಳು.

"ಎಲ್ಲಾದರೂ ಉಂಟೆ ಅಕ್ಕ ? ಬೇಡಿ, ಬೇಡಿ."

"ಹಾಗನ್ಬೇಡವಪ್ಪಾ. ಅವರೇ ಇಲ್ಲದ ಮೇಲೆ ಇವು ಯಾವ ಸೌಭಾಗ್ಯಕ್ಕೆ ? ವಕೀಲರ ಖರ್ಚಿಗೆ ಬೇಕಾಗುತ್ತೆ. ತೆಗೆದಿಟ್ಕೊ."

ನಾನು ಸುಮ್ಮನಿದ್ದೆ.

ಹಿಂದೊಮ್ಮೆ ಬಳಗದವನೊಬ್ಬನ ಮೇಲೆ ಒಂದು ಮೊಕದ್ದಮೆ ಯಾವಾಗ ಚಲಂ ಗೊತ್ತುಮಾಡಿದ್ದ ಯುವಕ ವಕೀಲನ ಬಗ್ಗೆ, ಸಾವಿತ್ರಿಯೊಡನೆ ಬಂದವನು ಹೇಳಿದ. ನಾನು ಆ ವಕೀಲನ ಹೆಸರು ವಿಳಾಸ ತಿಳಿದುಕೊಂಡೆ.

....ಭವ್ಯಲೋಕವೊಂದರ ಬಾಗಿಲಲ್ಲಿ ನಿಂತು ವನಜ "ಬಾ" ಎಂದು ಕರೆಯುತ್ತಿದ್ದಳು. ಎಲ್ಲವನ್ನೂ ಬಿಟ್ಟು ಅಲ್ಲಿಗೆ ಹೊರಟು ಹೋಗಲು ಮನಸಾಗುತಿತ್ತು. ಅದಕ್ಕೆ ಮುಂಚೆ, ಜೀವನದ ಆದೊಂದು ಅಧ್ಯಾಯದ ಕೊನೆಯ ಗೆರೆಯನ್ನು ಬರೆದು ಹೊರಡಬೇಕಾಗಿತ್ತು. ಆ ಗೆರೆಯನ್ನು ಬರೆಯುವುದು ಸುಲಭವಾಗಿರಲಿಲ್ಲ. ಚಲಂ ಬಂಧನ ಆ ಕೆಲಸವನ್ನು ಮತ್ತಷ್ಟು ಕಠಿನಗೊಳಿಸಿತ್ತು.

....ಸಂಜೆ ಆ ವಕೀಲರ ಆಫೀಸಿನ ಹೊರನಿಂತಿದ್ದು, ಕಕ್ಷಿಗಾರ ರೆಲ್ಲ ಹೊರಟು ಹೋಗುವುದನ್ನೆ ಕಾಯುತಿದ್ದೆ. ಅವರೊಬ್ಬರೆ ಉಳಿ ದಾಗ ನಾನು ಮೆಟ್ಟಲೇರಿ ಒಳಬಂದೆ.

ಪ್ರಶ್ನಾರ್ಥಕ ಚಿಹ್ನೆಯಾಗುವಂತೆ ಅವರು ಹುಬ್ಬುಗಳನ್ನೇರಿಸಿ ದರು. ನಾನು ನೇರವಾಗಿ ವಿಷಯವನ್ನೇ ಪ್ರಸ್ತಾಪಿಸಿದೆ.

"ನಿನ್ನೆಯ ಪತ್ರಿಕೇಲಿ, ಕಾರಿನ ಕಳವಿಗೆ ಸಂಬಂಧಿಸಿ ಚಲಂ ಅಂತ ಒಬ್ಬರ್ನ ಹಿಡಿದದ್ದು ನೀವು ಓದಿರ್ಬೇಕು."

"ಹೌದು."

"ಆ ಚಲಂ ನಿಮಗೆ ಪರಿಚಿತರು ಅಲ್ವೆ ?"

"ಯಾರು ನೀವು ?"

"ಅವರ ಸ್ನೇಹಿತ, ಕೇಶವ ಎಂತ."

"ನಿಮಗೇನು ಬೇಕು ?"

" ಡಿಫೆನ್ಸ್‌ಗೆ ನಿಮ್ಮನ್ನ ಗೊತ್ಮಾಡ್ಬೇಕೂಂತ ಚಲಂ ಹೇಳಿ ಕಳ್ಸಿ ದಾರೆ."

ಅವರ ಸ್ವರದಲ್ಲಿ ಕೃತಕ ಕಾಠಿನ್ಯ ಬೆರೆತುಕೊಂಡಿತು :

" ಪಾತಕಿಗಳ ಡಿಫೆನ್ಸ್ ನಾನು ಮಾಡೋದಿಲ್ಲ."

" ಪೋಲೀಸರಿನ್ನೂ ಆರೋಪ ಕೂಡಾ ಹೊರಿಸಿಲ್ಲ. ನೀವು ತೀರ್ಪೇ ಕೊಡ್ತಾ ಇದೀರಲ್ಲ ಸಾರ್."

ಅವರ ಕಿವಿಗಳು ಕೆಂಪಗಾದುವು.

" ಇದ್ದೀತು....ಈಗ ನೀವು ಹೋಗ್ಬಹುದು."

ನಾನೆದ್ದು ನಿಂತು, ಕೊನೆಯ ಬಾಣವನ್ನೆಸೆದೆ.

" ಡಿಫೆನ್ಸ್ ವೆಚ್ಚಕ್ಕೆಲ್ಲಾ ನಾನೇ ಜವಾಬ್ದಾರ. ಎಷ್ಟಾದರೂ ಸರಿಯೆ. ನೋಡಿ, ನಿಮಗಿಷ್ಟವಿಲ್ಲವಾದರೆ ಬೇರೆ ಎಲ್ಲಿಗಾದರೂ ಹೋಗ್ತೀನಿ."

ಫೈಲುಗಳನ್ನು ಬದಿಗೆ ಸರಿಸುತ್ತಾ ಅವರೆಂದರು ;

" ಸೆಷನ್ಸ್ ಮುಗಿಯೋವರೆಗೂ ಹತ್ತು ಸಾವಿರ ಕೊಡ್ತೀರೋ."

" ಆಗಲಿ, ಕಂತುಗಳಲ್ಲಿ ಹಣ ತಗೊಳ್ಳಿ. ಚಲಂನನ್ನ ಪಾರು ಮಾಡಿ."

" ಪ್ರಯತ್ನ ಮಾಡೋಣ."

" ಇನ್ನೊಂದು ವಿಷಯ. ಬಹಿರಂಗವಾಗಿ ನನಗೂ ಈ ಡಿಫೆನ್ಸ್‌ಗೂ ಸಂಬಂಧವಿಲ್ಲ."

" ಅರ್ಥವಾಯ್ತು."

ಹತ್ತರ ಐವತ್ತು ನೋಟುಗಳನ್ನು ಅವರ ಮೇಜಿನ ಮೇಲಿಟ್ಟೆ. ಆಗ ಯುವಕ ವಕೀಲರು ಹಸನ್ಮುಖರಾದರು.

" ಆಗಲಿ ಮಿಸ್ಟರ್ ಕೇಶವ್ ನಾಳೆ ಲಾಕಪ್ನಲ್ಲಿ ಚಲಂನ ಭೇಟಿ ಯಾಗ್ತೀನಿ."

ಬಳಗದವನೊಬ್ಬ ನೋಡಿ ಬಂದ. ಬೇಡಿ ತೊಡಿಸಿ ಕಟ್ಟಿ ಚಲಂನನ್ನು ನಮ್ಮೂರಿಗೆ ಕರೆದು ತಂದಿದ್ದರು. ಆ ಹಗಲು ಬಲು ಮೆಲ್ಲನೆ ಕಳೆಯಿತು.

ರಾತ್ರೆ ಆ ವಕೀಲರು ಹೇಳಿದರು :

" ನೋಡಿ ಕೇಶವ್. ನಿಮ್ಮ ಸ್ನೇಹಿತರು ಚೆನ್ನಾಗಿದ್ದಾರೆ. ನೀವು ಬಂದಿದ್ದ ವಿಷಯ ಹೇಳ್ತಿ."

" ಯಾರೂಂತ ಅವರಿಗೆ ಗೊತ್ತಾಯ್ತೆ ಸಾರ್ ? "

" ಯಾಕೆ ? "

" ಸುಮ್ನೆ ಕೇಳ್ದೆ, ಅಷ್ಟೆ."

ಕೇಶವ ಎಂದರೂ ಚಲಂಗೆ ಗೊತ್ತಾಗಿತ್ತು.

ವಕೀಲರು ಇನ್ನೊಂದು ವಿಷಯ ಹೇಳಿದರು :

" ಇದು ಚಿಲ್ಲರೆ ಕೇಸಲ್ಲ. ಆದರಲ್ಲಿ ಸೋತರೆ ನನಗೆ ಕೆಟ್ಟ ಹೆಸರು ಬರತ್ತೆ. ಸೀನಿಯರ್ ಲಾಯರೊಬ್ಬರ ಸಹಾಯ ತಗೋತೀನಿ."

" ಹಾಗೇ ಮಾಡಿ."

" ನಾಳೆ ಇಲ್ಲಿಗೆ ಬರೋ ಬದಲು ನಮ್ಮನೇಗೆ ಬನ್ನಿ."

ಅವರು ಮನೆಯ ವಿಳಾಸಕೊಟ್ಟರು.

ಆ ಮರುದಿನ, ನನ್ನ ಜೀವನದ ನಾವೆಯನ್ನೇ ತಿರುಗಿಸುವ ಚುಕ್ಕಾಣಿಯಾಗಲಿತ್ತೆಂಬ ವಿಷಯ ಯಾರಿಗೆ ಗೊತ್ತಿತ್ತು ?

ವಕೀಲರ ಮನೆ ಸಮೀಪಿಸಿದಾಗ ಎಂಟು ಘಂಟೆ ಹೊಡೆದಿತ್ತು. ಅಲ್ಲಿ ಕಾಲ್‌ಬೆಲ್ಲಿರಲಿಲ್ಲ. ಆದರ ಅವಶ್ಯತೆಯೇ ಇಲ್ಲದಂತೆ ಆಫೀಸು ಕೊಠಡಿ ತೆರೆದೇ ಇತ್ತು. ಯಾರೋ ಒಬ್ಬರು ಬಾಗಿಲಿಗೆ ಬೆನ್ನು ಹಾಕಿ ಕುಳಿತಿದ್ದರು. ಆ ಬಿಳಿಗೂದಲು—ನಾನು ಗಾಬರಿಯಾಗಿ ಹಿಂತಿರುಗಲು ಅಣಿಯಾಗಿದ್ದೆ. ವನಜಳ ತಂದೆಗೆ ಅಂಥದೇ ಕ್ರಾಪು ಇತ್ತಲ್ಲವೆ ? ಆತ ಈ ಯುವಕ ವಕೀಲರ ಸ್ನೇಹಿತನಾಗಿರಬಹುದೆಂಬ ವಿಷಯ ನನ್ನ ಗಮನಕ್ಕೆ ಬರದೇ ಹೋಯಿತಲ್ಲ!....ಆದರೆ ಆವರು ತಿರುಗಿನೋಡಿಯೇ ನೋಡಿದರು. ಹೀಗಿದ್ದರೂ ನಾನು ಹೊರಟು ಬಿಡಬಹುದಾಗಿತ್ತು. ನನ್ನ ಹಿಂಬದಿಯಿಂದ " ಹಲೋ ಬನ್ನಿ " ಎನ್ನುತ್ತ ಯುವಕ ವಕೀಲರು ಬರದೇ ಇದ್ದಿದ್ದರೆ, ನಾನು ಹೊರಟೇ ಬಿಡಬಹುದಾಗಿತ್ತು.

ಉಡುಗಿಹೋಗಿತ್ತು ನನ್ನ ಜಂಘಾಬಲ. ನಾನು ತೊದಲಿದೆ :

" ಕ್ಷಮಿಸಿ ಸಾರ್. ಈಗ ಬಿಡುವಿಲ್ಲ. ನಾಳೆ ಬರ್ತೀನಿ."

ವನಜಳ ತಂದೆ ಶ್ರೀನಿವಾಸಯ್ಯ ಬೆರಗುಗಣ್ಣಿನಿಂದ ನಮ್ಮಿಬ್ಬರನ್ನೂ ನೋಡುತಿದ್ದರು ಆ ನೋಟ ನನ್ನ ನರನಾಡಿಗಳನ್ನು ಇರಿದು ಸುಡುತಿದ್ದಂತೆ ನನಗೆ ಭಾಸವಾಗುತಿತ್ತು.

"ಐದೇ ನಿಮಿಷ. ಇದ್ಬಿಟ್ಟು ಹೋಗಿ. ನಮ್ಮ ಸೀನಿಯರ್ ಲಾಯರು ಬಂದಿದ್ದಾರೆ. ನೋಡ್ಬಿಟ್ಟು ಹೋಗಿ."

ಎಲ್ಲವೂ ಮುಗಿದುಹೋಗಿತ್ತು. ಚಲಂ ಬಾಂಧವ್ಯದ ಬಂಡೆಗಲ್ಲಿಗೆ ತಗಲಿ ನನ್ನ ನಾವೆ ಪುಡಿ ಪುಡಿಯಾಗುವ ಹೊತ್ತು. ಕೊನೆಗೆ ಹೀಗೂ ಆಗಬೇಕಾಯಿತೆ ?

........ಜೀವಚ್ಛವದಂತೆ ನಾನು ವಕೀಲರನ್ನು ಹಿಂಬಾಲಿಸಿ, ಕಕ್ಷಿಗಾರರಿಗೋಸ್ಕರವೇ ಇದ್ದ ಮುರುಕು ಕುರ್ಚಿಯೊಂದರ ಮೇಲೆ ಕುಳಿತುಕೊಂಡೆ.

"ನೀವು!" ಎಂದು ಉದ್ಗಾರವೆತ್ತಿದರು ಶ್ರೀನಿವಾಸಯ್ಯ.

"ಈ ವಕೀಲರು ಪರಿಚಯಸ್ಥರು. ನೋಡ್ಕೊಂಡು ಹೋಗೋಣಾಂತ ಬಂದೆ."

"ಓ! ನನಗೆ ಗೊತ್ತೇ ಇರಲಿಲ್ಲ. ಮಾಧೂ ಹೇಳಿಯೇ ಇರಲಿಲ್ಲ."

ಯುವಕ ವಕೀಲ ಮಾಧವರಾಯರು ಆಶ್ಚರ್ಯದ ನೋಟದಿಂದ ನಮ್ಮಿಬ್ಬರನ್ನೂ ನೋಡುತಿದ್ದರು. ಅವರೆಂದರು :

"ನೀವಿಬ್ಬರೂ ಪರಿಚಿತರು ಅನ್ನೋದನ್ನ ಮಿಸ್ಟರ್ ಕೇಶವ್ ನನಗೆ ಹೇಳಿರಲಿಲ್ಲ."

"ಕೇಶವ—ಯಾರು ಕೇಶವ ?"

"ಯಾಕೆ, ಇವರೇ !"

ಮುಳುಗುತಿದ್ದವನು ಹುಲ್ಲುಕಡ್ಡಿಗೆ ಆತುಕೊಳ್ಳುವ ಹಾಗೆ ನಾನೆಂದೆ :

"ಅದು ನಮ್ಮನೇಲಿ ಇಟ್ಟಿದ್ದ ಪ್ರೀತಿ ಹೆಸರು ಸಾರ್."

"ಓ!" ಎಂದರು ಮಾಧವರಾಯರು. ಅವರ ನೆಟ್ಟ ದೃಷ್ಟಿ ಬೆಂಕಿಯಂತೆ ನನ್ನನ್ನು ಕರಗಿಸತೊಡಗಿತು.

" ನೀವು ಈ ನಾಲ್ಕೈದು ದಿವಸ ನಮ್ಮನೆಗೇ ಬಂದಿಲ್ವಂತೆ ರಾಧಾಕೃಷ್ಣ. ಮುರಲಿ ಮತ್ತು ವನಜ ನಿಮ್ಮ ಹಾದಿ ನೋಡ್ತಾನೇ ಇದ್ರು."

" ಹೌದು ಸಾರ್, ಬರೋಕಾಗಲಿಲ್ಲ."

ಯಾವುದೋ ಗವಿಯೊಳಗಿಂದ ಪ್ರತಿಧ್ವನಿಸುವಹಾಗೆ ಮಾಧವ ರಾಯರು ಮಾತನಾಡುತಿದ್ದರು :

" ಅವಸರವಾಗಿದ್ದರೆ ಈಗ ಹೋಗಿ ಮಿಸ್ಟರ್ ಕೇಶವ್, ನಾಳೆ ಬನ್ನಿ."

ಬುದ್ಧಿ ಭ್ರಮಣವಾದವನ ಹಾಗೆ ನಾನೆದ್ದು, " ಬರ್‍ತೀನಿ ಸಾರ್, ಬರ್‍ತೀನಿ ಸಾರ್," ಎಂದೆ, ಇಬ್ಬರಿಗೂ ನಮಸ್ಕರಿಸುತ್ತಾ.

ಸೈಕಲು ತಂದಿರಲಿಲ್ಲ ಯಾವುದೋ ಹಾದಿ ಹಿಡಿದು ನಾನು ಮುಂದೆ ಸಾಗಿದೆ. ನಡೆಯುತಿದ್ದೆನೋ ಓಡುತಿದ್ದೆನೋ ನನಗೆ ತಿಳಿಯದು. ತುಂತುರು ಹನಿ ಬೀಳುತಿತ್ತು ಆಗಲೆ. ಕ್ರಮೇಣ ಆ ಹನಿ ಬಲವಾಯಿತು. ಯಾರದೊ ಮನೆಯ ಮಾಡದ ಆಸರೆಯಲ್ಲಿ ನಿಂತೆ. ಮಳೆ ಸುರಿಯಿತು ಧಾರಾಕಾರವಾಗಿ. ಆ ಬೀದಿಯ ವಿದ್ಯುದ್ದೀಪಗಳೂ ಆರಿ ಹೋದವು. ಗುಡುಗು ಮಿಂಚು ಮಳೆ. ಚರಂಡಿಯಲ್ಲಿ ನೀರು ತುಂಬಿ ಹರಿಯುತಿತ್ತು. ಎಲ್ಲವೂ ತೇಲಿ ಹೋಗುತಿತ್ತೇನೋ—ತಿಪ್ಪೆ ರಾಶಿ ಎಲ್ಲವೂ. ಆಗಾಗ್ಗೆ ಒಂದೊಂದು ಕಾರು ಆ ಬೀದಿಯಲ್ಲಿ ಧಾವಿಸುತ್ತ ಬಂದು, ಕಣ್ಣು ಕೋರೈಸುವಂತೆ ನನ್ನ ಮೇಲೆ ಬೆಳಕು ಬೀರುತಿತ್ತು.......ಅದಾದ ಮೇಲೆ ಎಲ್ಲವೂ ಕತ್ತಲು, ಗಾಢವಾದ ಕತ್ತಲು.

ಮಳೆ ಸುರಿಯಿತು ಅರ್ಧ ಘಂಟೆಯ ಹೊತ್ತು. ನನ್ನ ಹೃದಯ ಹೆಪ್ಪುಗಟ್ಟಿತ್ತು—ದೇಹವೂ ಕೂಡಾ. ಅಂತೂ ಎಲ್ಲಿ ತನಕ ನಾನು ಬಂದ ಹಾಗಾಯಿತು? ಎಲ್ಲಿ ತನಕ? ನನ್ನ ಮುಂದಿದ್ದುದು ತಳವಿಲ್ಲದ ಪ್ರಪಾತ—ಪಾರವಿಲ್ಲದ ಪ್ರವಾಹ. ನನಗಿನ್ನು ಉಳಿಗಾಲ ಉಂಟೆ? ಉಂಟೆ?

ಮಳೆ ನಿಂತ ಮೇಲೆ ನಾನು ಬೀದಿಗಿಳಿದು ಮನೆಯತ್ತ ಸಾಗಿದೆ.

ಹೊರಗೆ ಎಲ್ಲವೂ ಶಾಂತವಾಗಿತ್ತು. ಆದರೆ ಒಳಗೆ, ನನ್ನೊಳಗೆ, ಗುಡುಗು ಮಿಂಚುಗಳು ಆರ್ಭಟಿಸುತಿದ್ದುವು. ಹೃದಯ ಸೀದು ಹೋಗುತಿತ್ತು ಬಾರಿ ಬಾರಿಗೂ.

ಆ ರಾತ್ರಿ ನನಗೆ ನಿದ್ದೆ ಹತ್ತಲೇ ಇಲ್ಲ. ನಾನು ಮಾಧವ ರಾಯರ ಮನೆ ಬಿಟ್ಟ ಮೇಲೆ ಅಲ್ಲಿ ನಡೆದಿರಬಹುದಾದ ಸಂಭಾಷಣೆ; ಆ ಬಳಿಕ ವನಜಳ ಮನೆಯಲ್ಲಿ ತಂದೆ ಮಕ್ಕಳ ಮಾತುಕತೆ;........ ಇಲ್ಲ, ಯಾವುದನ್ನೂ ಊಹಿಸಿಕೊಂಡು ಯೋಚಿಸುವುದು ನನ್ನಿಂದಾಗ ಲಿಲ್ಲ. ಮೆದುಳು ಚೇಂಯ್ ಗುಡುತಿತ್ತು. ಅದು ಎಚ್ಚರವೊ ನಿದ್ರಾ ವಸ್ಥೆಯೊ ನನಗೆ ತಿಳಿಯದು.

...ಮತ್ತೆ ಸೂರ್ಯೋದಯ, ಹೊಂಬಿಸಿಲು, ಬಿಸಿಲು.

"ಸಾರ್...."

ನನ್ನ ಸ್ವರ ನಡುಗುತಿತ್ತು. ನಾನು ಮಾಧವರಾಯರ ಮನೆ ಸೇರಿದ್ದೆ.

ಕಂಡೂ ಕಾಣದ ಹಾಗೆ ಮುಗುಳ್ನಗುತ್ತ ಅವರೆಂದರು:

"ನಮಸ್ಕಾರ ಮಿಸ್ಟರ್ ಕೇಶವ್ ಉರುಫ್ ರಾಧಾಕೃಷ್ಣ. ಅಭಿನಂದನೆಗಳು. ನೀವು ಇಷ್ಟು ಸಾಹಸಿ ಅಂತ ಗೊತ್ತಿರಲಿಲ್ಲ."

ನನಗೆ ಬೇಕಾಗಿದ್ದ ಉತ್ತರಕ್ಕಾಗಿ ನಾನು ಅವರ ಮುಖವನ್ನೆಲ್ಲ ಹುಡುಕುತಿದ್ದೆ.

"ಹೋಗಲಿ ಬಿಡಿ. ಅವರವರ ಕಷ್ಟ—ಸುಖ ಅವರವರಿಗೆ."

ತತ್ವಜ್ಞಾನಿಯ ಹಾಗೆ ಅವರು ಆಡಿದ ಮಾತು ಅರ್ಥವಾಗಲಿಲ್ಲ.

"ಶ್ರೀನಿವಾಸಯ್ಯ ಏನೆಂದರು ಸಾರ್?"

"ಅನ್ನೋದೇನು? ನೀವು ನನ್ನ ಕಕ್ಷಿಗಾರರಲ್ಲದೇ ಇರುತಿದ್ದರೆ, ಹಿಡಿದು ಪೋಲೀಸರಿಗೆ ಕೊಡುತ್ತಿದ್ದರು."

"............ ."

"ದಿಗಿಲು ಬೀಳ್ಬೇಡಿ. ನನಗೋಸ್ಕರ ಅವರು ಅಂಥಾದ್ದು ಮಾಡೋಲ್ಲ."

ನನ್ನ ತುಟಿಗಳು ಚಲಿಸುತಿದ್ದುವು. ಆದರೆ ನಾನು ಮಾತನಾ

ಡುತ್ತಿರಲಿಲ್ಲ. ಆ ಬಳಿಕ ಮಾಧವರಾಯರೊಂದು ಮಾತು ಹೇಳಿದರು

"ನಿಮ್ಮ ಒಳ್ಳೇದಕ್ಕೆ ಹೇಳ್ತೀನಿ ಕೇಶವ್. ಇನ್ನು ನೀವು ಅವರ ಮನೆಗೆ ಕಾಲಿಡ್ಬೇಡಿ."

ನಾನು ಆ ಮೇಲೆ ಶ್ರೀನಿವಾಸಯ್ಯನವರ ಮನೆಗೆ ಕಾಲಿಡಲಿಲ್ಲ. ಆದರೆ ವನಜಳನ್ನು ಕಾಣಲು ಯತ್ನಿಸಿದೆ. ನೀರು, ಮೂಗು ಕಿವಿಗಳನ್ನು ಹೊಗುತಿದ್ದರೂ ಆಸೆಯಿಂದ ನಾನು ಪಿಳಿಪಿಳಿ ಕಣ್ಣು ಬಿಡುತಿದ್ದೆ. ನನ್ನ ಪಾಲಿನ ದೇವಿಯಾಗಿ ಬಂದಿದ್ದ ವನಜಳಲ್ಲಿ ನನಗೆ ನಂಬುಗೆ ಇತ್ತು. ನನ್ನದಾಗಿ ಬಂದಿದ್ದ ಹೃದಯದ ಸಿರಿಸಂಪತ್ತು ಅಷ್ಟು ಬೇಗನೆ ಮಾಯವಾಗುವುದೆಂದು ನಾನು ನಂಬಿರಲಿಲ್ಲ.

ಆ ಸಂಜೆ ಆರು ಘಂಟೆಗೆ ಅವಳನ್ನು ನಗರದ ಉದ್ಯಾನವನಕ್ಕೆ ಬರಹೇಳಿದೆ. ಎಲ್ಲವನ್ನೂ ಹೃದಯ ತೆರೆದು ಹೇಳಬೇಕು; ನನ್ನ ಬಾಳ್ವೆಯ ಹೊಸ ಅಧ್ಯಾಯದ ಓಂ ಶ್ರೀಯನ್ನು ಅವಳಿಂದ ಬರೆಸಬೇಕು; ಅವಳ ಮಡಿಲಲ್ಲಿ ಮುಖವಿಟ್ಟು ಎಲ್ಲವನ್ನೂ ಮರೆಯಬೇಕು; ಕತ್ತಲಾದ ಮೇಲೆ ಅವಳ ತೋಳ ತೆಕ್ಕೆಯಲ್ಲಿ ಮೈಮರೆತು ಸಮಾಧಿಸ್ಥನಾಗಬೇಕು—ಎಂಬುದು ನನ್ನ ನಿರ್ಧಾರವಾಗಿತ್ತು.

ಆ ಕಲ್ಲು ಬೆಂಚು. ಅಲ್ಲಿಯೇ ಆರು ತಿಂಗಳ ಹಿಂದೆ ನಾನು ಮುರಲಿಯನ್ನು ಕಂಡಿದ್ದೆ. ಆ ಬಳಿಕ ವನಜಳನ್ನು....

ಅದೇ ಬೆಂಚಿನ ಮೇಲೆ ನಾನು ಕುಳಿತು ಸಿಗರೇಟಿಗೆ ಕೈ ಹಾಕಿದೆ. ಹಿಂದೊಮ್ಮೆ ವನಜ ಕೇಳಿದ್ದಳು :

"ನೀವು ಪ್ಲೇಯರ್ಸ್ ಯಾಕೆ ಸೇದ್ತೀರಾ? ಗೋಲ್ಡ್‌ಫ್ಲೇಕ್ ಮೇಲಲ್ವಾ?"

ಅದು 'ನೀವು' 'ನೀನು' ಆದುದಕ್ಕೆ ಮುಂಚೆ. ಆ ಮೇಲೆ ಅವಳೇ ಹೇಳಿದ್ದಳು :

"ಒಂದ್ಸಾರಿ ನಾನೂ ಸೇದ್ಬೇಕು. ಹೇಗಿರುತ್ತೋ ನೋಡ್ಬೇಕು."

ಹಾಗೆ ಹೇಳಿದಾಗ, ಮಾದಕತೆ ಅವಳ ಕಣ್ಣಾಲಿಗಳಲ್ಲಿ ತೇಲಿ ಬಂದಿತ್ತು....ಎಷ್ಟು ಕಠಿನ! ಈ ಬಾಳ್ವೆ ಎಷ್ಟೊಂದು ಕಠಿನ!

ನಿರ್ಮಲವಾದ ಆಕಾಶ, ನೆಮ್ಮದಿ ಇಲ್ಲದ ನನ್ನ ಹೃದಯವನ್ನು ನೋಡಿ ನಗುತಿತ್ತು. ಸದ್ಯಃ ಮಳೆ ಬರಲಾರದು....ಓ ದೇವರೇ, ಸದ್ಯಃ ಮಳೆ ಬಾರದಿರಲಿ....

ದೇವರು? ಎಲ್ಲವೂ ನನ್ನ ಕೈತಪ್ಪಿ ಹೋಗುತಿದ್ದುವು—ತಾವರೆ ಎಲೆಯ ಮೇಲಿನ ನೀರು ಗುಳ್ಳೆಯ ಹಾಗೆ. ನನಗಿಂತ ಹೆಚ್ಚು ಶಕ್ತಿವಂತರಾದವರು ಯಾರಾದರೂ ಅದನ್ನು ಹಿಡಿದು ನಿಲ್ಲಿಸಬಾರದೆ? ಈ ಲೋಕವನ್ನೆಲ್ಲಾ ತನ್ನ ಇಚ್ಛೆಯಂತೆ ಕುಣಿಸುತ್ತಿರುವನೆಂದು ಹೇಳಲಾದ ಆ ದೇವರು ನನಗೆ ನೆರವಾಗಬಾರದೆ?

ಅವರ ಕಾರು ಬಂತು. ಆದರೆ ವನಜ ಇಳಿದು ಬರಲಿಲ್ಲ. ಮುರಲಿಯೊಬ್ಬನೇ ನಡೆದು ನನ್ನೆಡೆಗೆ ಬಂದ. ಹಿಂದೆ ಅವನು ಆ ಬೆಂಚಿಗೆ ಒರಗಿ ಕುಳಿತಿದ್ದಾಗ ನಾನು ಬಂದಿದ್ದೆ. ಈಗ ಒರಗಿರುವವನು ನಾನು—ಕಾಹಿಲೆಯವನು ನಾನು.

ಅವನು "ಹಲೋ" ಎನ್ನಲಿಲ್ಲ.

ನನ್ನ ಸಿಗರೇಟು ಸುಟ್ಟುಕೊಂಡು ಹೊಗೆಯ ಎಳೆ ಮೇಲಕ್ಕೆ ಏಳುತಿತ್ತು. ಅದನ್ನು ದೂರವೆಸೆದೆ.

"ಬಾ ಮುರಲಿ........"

ಅವನು ಕುಳಿತುಕೊಂಡ. ಸಾಕಷ್ಟು ರಕ್ತ ಸಂಚಾರವಿಲ್ಲದ ಅವನ ಮುಖದಿಂದ ಎಳೆಯ ಕಣ್ಣುಗಳೆರಡು ನನ್ನನ್ನೆ ದಿಟ್ಟಿಸಿದುವು. ಆ ದೃಷ್ಟಿಯಲ್ಲಿ ಕನಿಕರವಿತ್ತೊ ದ್ವೇಷವಿತ್ತೊ ನನಗೆ ತಿಳಿಯಲಿಲ್ಲ.

ಕ್ಷೀಣವಾದ ಸ್ವರದಲ್ಲಿ ನಾನು ಕೇಳಿದೆ.

"ವನಜಾ ಬರಲಿಲ್ವಾ?"

"ಬರೋದಿಲ್ಲ."

"ನನ್ನ ಕಾಗದ ಬಂತೇನು?"

"ಬಂತು. ವನಜಾ ಬರೋದಿಲ್ಲ. ಅದನ್ನ ಹೇಳೋದಿಕ್ಕೇ ನಾನು ಬಂದೆ."

"ಓ !........"

ಮುಂದೇನು ಹೇಳಬೇಕೋ ತೋಚಲಿಲ್ಲ. ತಡವರಿಸುತ್ತ

ಜೇಬಿನೊಳಕ್ಕೆ ಕೈಹಾಕಿ ಇನ್ನೊಂದು ಸಿಗರೇಟು ತೆಗೆದೆ. ಮುರಲಿ ಮೌನವಾಗಿ, ನಡುಗುವ ಬೆರಳುಗಳಿಂದ ನಾನು ಕಡ್ಡಿಗೀರಿದುದನ್ನು ನೋಡಿದ........ನಿಮಿಷಗಳು ಯುಗಗಳಂತೆ ಕಳೆದುವು.

"ವನಜಾಗೆ ಮೈ ಚೆನ್ನಾಗಿಲ್ವೇನು ?

ಯಾವುದೋ ಆಸೆಯ ಎಳೆ ಸಿಕ್ಕಿತೆಂಬಂತೆ ನಾನು ಹೇಳಿದೆ.

"ಚೆನ್ನಾಗಿಯೇ ಇದೆ. ಇಲ್ಲದೇನು ?"

"ಮತ್ತೆ ?"

ಆ ಪ್ರಶ್ನೆಗೆ ಉತ್ತರವಾಗಿ ಅವನಿಂದ ಮಾತುಗಳು ಹೊರಟುವು. ಪಾಠ ಒಪ್ಪಿಸುವವರಂತೆ ಅವನು ಮಾತನಾಡಿದ.

"ರಾಧಾಕೃಷ್ಣ ! ನೀವು ಇಂಥವರೂಂತ ನಮಗೆ ಗೊತ್ತಿರಲಿಲ್ಲ. ನೀವು ಹೀಗೆ ಮಾಡ್ಬಾರ್ದಾಗಿತ್ತು. ನೀವು ದೊಡ್ಡ ತಪ್ಪು ಮಾಡಿದಿರಿ. ನಾವು ಸುಖವಾಗಿಯೇ ಇದ್ದೆವಲ್ಲ? ಎಷ್ಟೊಂದು ಶಾಂತವಾಗಿತ್ತು ! ನೀವು ಬಂದು ಎಂಥ ಅನ್ಯಾಯ ಮಾಡಿದಿರಿ ! ನಮ್ಮ ವನಜಾ ಗತಿ ಇನ್ನೇನಾಗ್ಬೇಕು ?........ನಾನು ನಿಮ್ಮನ್ನ ಒಳ್ಳೆಯವರೂಂತ ತಿಳಿದಿದ್ದೆ—ನಾಗರಿಕರು, ಸುಸಂಸ್ಕೃತರು, ಅಂತ. ಆದರೆ ನೀವು—ನೀವು—ಹುಂ ! ನಮ್ಹತ್ತಂದೆ ಬಂದು ಹೇಳ್ದಾಗ ಹೇಗಾಯ್ತು ಗೊತ್ತೆ ? ಓ ದೇವರೆ ! ವನಜಾ ಅದನ್ನ ಸಹಿಸಿಕ್ಕೊಂಡಳು. ನಾನಾಗಿದ್ದರೆ ತುಂಬ ಕಷ್ಟವಾಗಿತ್ತು. ಅದನ್ನೆಲ್ಲಾ ಸಹಿಸೋದು ನನ್ನಿಂದಾಗ್ತಲೇ ಇರ್ಲಿಲ್ಲ. ನಾನು ಏನಾದರೂ ಮಾಡ್ಕೊಂಡು ಬಿಡ್ತಿದ್ದೆ. ಆದರೆ ವನಜ—"

"ವನಜ ಏನೆಂದಳು ?"

ನನ್ನದಲ್ಲದ ಸ್ವರ ಮಾತನಾಡುತಿತ್ತು.

"ವನಜ, ಹುಂ ! ಏನನ್ಬೇಕು? ಇನ್ನು ನಿಮ್ಮ ಮುಖ ನೋಡೋದಿಲ್ಲ ಅಂದಳು. ನಿಮ್ಮನ್ನ—ನಿಮ್ಮನ್ನ—"

"ಹೇಳು ಮುರಲಿ. ಹೇಳು."

"ನಿಮ್ಮನ್ನ ಬ್ರೂಟ್ ಅಂದಳು, ಲೋಫರ್ ಅಂದಳು. ಇನ್ನು ಮನೆಗೆ ಬಂದರೆ, ಒದ್ದು ಹೊರಹಾಕ್ತೀನಿ ಅಂದಳು !"

"ಓ !"

" ಆಕೆ ಧೈರ್ಯವಂತೆ ರಾಧಾಕೃಷ್ಣ—ನನ್ನ ಹಾಗಲ್ಲ."

" ಅಲ್ಲವೆ ? "

" ನೀವು ಇನ್ನೂ ನಾಲ್ಕು ದಿನ ಅವಕಾಶ ಸಿಕ್ಕಿದ್ದರೆ ಅನಾಹುತ ಮಾಡ್ಬಿಡ್ತಿದ್ರಿ........ಪಾಪ! ವನೂ ನಿಮಗಾಗಿ ಸೈಂಟಿಸ್ಟ್ ಆಗೋದನ್ನೂ ಬಿಟ್ಕೊಟ್ಟಿದ್ದಳು....ನಿಮಗೆ ಹೃದಯವಿಲ್ಲ."

" ವನಜಾ ಹಾಗಂದಳೆ ? "

" ಇನ್ನು ನಮ್ಮನ್ನ ನೀವು ಏಕವಚನದಲ್ಲಿ ಕರೀಬೇಡಿ. ನಿಮಗೆ ಆ ಅಧಿಕಾರವಿಲ್ಲ."

" ಹೂಂ."

" ಒಂದಲ್ಲ ಒಂದಿವ್ಸ ನಿಮ್ಗೆ ಸರಿಯಾದ ಶಾಸ್ತ್ರಿ ಆಗತ್ತೇಂತ ಹೇಳೊಂತಂದ್ಳು. ಮಾಧವರಾಯರಲ್ದೇ ಹೋಗಿದ್ರೆ, ನಮ್ತಂದೆ ನಿಮ್ಮನ್ನ ಜೈಲಿಗೆ ಕಳಿಸ್ತಿದ್ರು."

" ಪುಟ್ಟ ಹುಡುಗೀನ. ಹಾರಿಸ್ಕೊಂಡು ಹೋಗೋಕೆ ಯತ್ನಿಸ್ದೆ ಅಂತಲೋ ? "

" ಅದೇನೋ ನಮ್ತಂದೆ ಸಾಮಾನ್ಯರಲ್ಲ ರಾಧಾಕೃಷ್ಣ........"

ಎಲ್ಲವೂ ಕಹಿಕಹಿಯಾಗಿ ತೋರುತ್ತಿತ್ತು—ಎಲ್ಲವೂ! ಆತನ ಮಾತುಗಳೇ ನನಗೆ ಕೇಳಿಸುತ್ತಿರಲಿಲ್ಲ. ನಾನು ಕಿವುಡನಾಗುತಿದ್ದೆನೇನೊ—ಕುರುಡನಾಗುತಿದ್ದೆನೇನೊ.

" ನಾನು ಕೂಡ ಬರ್ತಾ ಇರ್ಲಿಲ್ಲ. ವನಜಾನೇ ನನ್ನ ಕಳಿಸಿಕೊಟ್ಟವಳು. ಇಷ್ಟು ಹೇಳ್ಬಿಟ್ಟು ಬಾ ಅಂತಂದ್ಳು."

" ಸರಿ ಇನ್ನು. ಹೇಳಿದ್ದಾಯ್ತು ತಾನೆ ? "

" ಮಾತೇ ಹೊರಡ್ದೆ ಸುಮ್ಮನಿದ್ದೀರಲ್ಲ ! "

" ಏನು ಹೇಳೋದಕ್ಕೂ ಇಷ್ಟಪಡೋಲ್ಲ."

" ಅಷ್ಟೇನೊ ? "

" ಅಷ್ಟೆ, ಮುರಲೀಧರ್........"

ನಾನೆದ್ದು ನಿಂತೆ. ತಲೆ ಗಿರ್ ಎನ್ನುತಿತ್ತು. ಆದರೂ ಔಡು ಕಚ್ಚಿಕೊಂಡು ಕೇಳಿದೆ:

"ಟ್ಯಾಕ್ಸಿ ಗೀಕ್ಸಿ ಬೇಕೇನು ತಮಗೆ ?"

ಆತನ ಕಣ್ಣುಗಳಲ್ಲಿ ಬಂಜೆ ಕ್ರೋಧ ಮಿನುಗಿತು. ಕುಳಿತಲ್ಲಿಂದ ಎದ್ದು, ಉತ್ತರವೀಯದೆ ಅವನು ಹೊರಟು ಹೋದ.

ಬಿರುಗಾಳಿಗೆ ಬುಡ ಸಹಿತ ಕಿತ್ತು ಹೋದ ಮರ........ಹರಿತ ವಾದ ಕತ್ತಿಗೆ ಸಿಕ್ಕಿ ಬರಿ ಮುಂಡವಾದ ಬಾಳೆ........ಯಾರೋ ಕೊಯ್ದು ಹಿಚುಕಿದ್ದ ಬಿಳಿಯಗುಲಾಬಿ........

ತತ್ತರಿಸುತಿದ್ದರೂ ನಾನು ಉಸಿರಾಡಲು ಯತ್ನಿಸಿದೆ.

ಮನಸಿನ ಕಾಹಿಲೆ ದೇಹದ ಕಾಹಿಲೆಯಾಗಿ ಮಾರ್ಪಟ್ಟ ಆ ಅನುಭವ. ಆಗ ನಾನು ಕೊರಡಿನಂತೆ ಬಿದ್ದಿರುತಿದ್ದೆ, ಘಂಟೆ ಘಂಟೆ ಗಳ ಕಾಲ. ಮೈ ಕಾವೇರುತಿತ್ತು, ಆರುತಿತ್ತು. ನಾಲಿಗೆಗೆ ರುಚಿ ಇರಲಿಲ್ಲ. ಬದುಕುವುದರಿಂದ ಏನು ಪ್ರಯೋಜನವಿತ್ತು ? ಸಾವು ಸದ್ದಿಲ್ಲದೆ ಬಂದು ಕಣ್ಣೆವೆಗಳನ್ನು ಮೆಲ್ಲನೆ ಮುಚ್ಚಿದ್ದರೆ ನಾನು ಬೇಡ ವೆನ್ನುತ್ತಿರಲಿಲ್ಲ. ಇಪ್ಪತ್ತಾರು—ಇಪ್ಪತ್ತೇಳನೆಯ ಆ ವಯಸ್ಸಿನಲ್ಲಿ ಮೊದಲ ಬಾರಿ ಮೂಡಿದ ಮರಣ ದಾಹ........

ನಾನು ಸಾಯಲಿಲ್ಲ. ಸಾಯುವುದರಲ್ಲಿ ಅರ್ಥವಿರಲಿಲ್ಲ.

ಹೃದಯ ತೋಡಿಕೊಂಡು ದೀರ್ಘ ಕಾಗದವೊಂದನ್ನು ವನಜ ಳಿಗೆ ಬರೆದೆ. ಆದರೆ ಅದನ್ನು ಅಂಚೆಗೆ ಸೇರಿಸಲಿಲ್ಲ ; ಕಳುಹಿಕೊಡಲಿಲ್ಲ. ಅವರ ಅಡುಗೆಯ ಹುಡುಗನನ್ನು ಕಂಡು ಮಾತನಾಡಿಸಬೇಕೆಂದು ತರಕಾರಿಯ ಮಾರುಕಟ್ಟೆಯಲ್ಲಿ ಕಾದುನಿಂತೆ. ಹುಡುಗ ಬರುತಲಿದ್ದ ; ನಾನು ಅವನನ್ನು ನೋಡುತ್ತಲೂ ಇದ್ದೆ ; ಆದರೆ ಮಾತನಾಡಿಸಲಿಲ್ಲ ಮಾತ್ರ. ಆ ಬಳಿಕ ಸ್ವತಃ ನಾನೇ ವನಜಳನ್ನು ಕಾಣಬೇಕೆಂದು ಎರಡು ಬಾರಿ ಆ ಮನೆಯಿದ್ದ ಪ್ರದೇಶಕ್ಕೆ ಹೋದೆ. ಆದರೆ ಮನೆಯನ್ನು ಮಾತ್ರ ಸಮೀಪಿಸಲಿಲ್ಲ.

ದಿನವೂ ಬ್ಲೇಡು ಕಾಣುತಿದ್ದ ಗಲ್ಲಗಳು ದೊರಗು ಗಡ್ಡದಿಂದ ಮುಚ್ಚಿಕೊಂಡುವು. ಕ್ರಾಪು ಅಸ್ತವ್ಯಸ್ತವಾಗಿ ಅಂದಗೆಟ್ಟಿತು. ಬಟ್ಟೆ ಬರೆಗಳು ಮಲಿನವಾದುವು.

ಚಲಂ ಬಳಗದವರು ಕೇಳುತಿದ್ದರು :

" ಏನಾಗಿದೆ ಶೇಖರ್ ? ಏನಾಗಿದೆ ಬಾಷಾ? ವ್ಯೈ ಚೆಸಾಗಿಲ್ವಾ—ಏನಾಗಿದೆ ? "

ಅದೊಂದು ಕಾಹಿಲೆ ; ಏನಾಗಿದೆ ಎಂದು ಬೇರೆಯವರಿಗೆ ವಿವರಿಸಲಾಗದಂತಹ ಕಾಹಿಲೆ.

ಪ್ರಾಯಶಃ ಚಲಂ ಮೇಲಿನ ವ್ಯವಹರಣೆಯಲ್ಲದೆ ಹೋಗಿದ್ದರೆ ನನಗೆ ಏನಾಗುತಿತ್ತೋ ಹೇಳಲಾರೆ. ಆದರೆ ಸದ್ಯಃ ನನ್ನ ಹಿರಿಯ ಸೋದರನಂತಿದ್ದ ಒಬ್ಬನ ರಕ್ಷಣೆಯ ಕೆಲಸದ ನಡುವೆ ನಾನು ಬದುಕಿ ಉಳಿದೆ. ಸಾವಿತ್ರಿಯ ಆಭರಣಗಳು ಸರಾಫಕಟ್ಟೆ ಸೇರಿದುವು. ವಕೀಲರ ಕರಿಯ ಕೋಟಿನ ಜೇಬುಗಳು ತುಂಬಿದುವು. ವಿಚಾರಣೆ ನಡೆಯಿತು.

ನ್ಯಾಯಾಸ್ಥಾನಗಳ ಈ ವಿಚಾರಣೆಯ ಬಗ್ಗೆ ನಾನು ಬರೆಯಬಾರದು. ಅಲ್ಲಿ ವಿಚಾರಣೆ ಎಂಬುದು ಒಂದು ದೊಡ್ಡ ತಮಾಷೆ. ಕರಿಯ ಕೋಟು ಧರಿಸಿದವರು, ತಮ್ಮದು ಬಿಳಿಯ ಕೋಟೆಂದು ಅಲ್ಲಿ ಸಾಧಿಸುತಿದ್ದರು. ಬಿಳಿಯ ರುಮಾಲು ಹೊತ್ತಿದ್ದವರು, ತಮ್ಮ ರುಮಾಲು ಕರಿಯದೆಂದು ಹಟತೊಡುತಿದ್ದರು. ಮಟಮಟ ಮಧ್ಯಾಹ್ನವನ್ನು ನಡುರಾತ್ರಿಯೆಂದು ಪ್ರಮಾಣ ಬದ್ಧವಾಗಿ ಪ್ರತಿಪಾದಿಸುವ ಅವರ ವೈಖರಿ! " ದೇವರಾಣೆಯಾಗಿ ಸತ್ಯ ಹೇಳ್ತೀನಿ " ಸಾಕ್ಷಿಗಳು ಬೇರೆ! .. ....ನಾನು, ಚಲಂ ವಿಚಾರಣೆಯಾಗುತ್ತಿದ್ದಾಗ ನ್ಯಾಯಾಸ್ಥಾನಕ್ಕೆ ಹೋಗುತ್ತಿರಲಿಲ್ಲ. ಆದರೆ ಆ ಆಸ್ಥಾನದೊಳಗಿನ ನಾಟಕವೆಲ್ಲ ಇಂಥದೇ ಎಂದು ನನಗೆ ತಿಳಿದಿತ್ತು.

ಆ ಅವಧಿಯಲ್ಲಿ ಚಲಂ ಬಳಗ ಮೆಲ್ಲಮೆಲ್ಲನೆ ಕರಗಿ ಹೋದುದನ್ನು ನಾನು ಕಂಡೆ.

ಮೂರು ತಿಂಗಳಲ್ಲೆ ತೀರ್ಪು ಹೊರಬಿತ್ತು. ಏಳು ವರ್ಷ ಮತ್ತು ಐದು ವರ್ಷ—ಒಟ್ಟು ಹನ್ನೆರಡು ವರ್ಷಗಳ ಸಶ್ರಮ ಸಜೆಯನ್ನು ಚಲಂಗೆ ವಿಧಿಸಿದ್ದರು

ನಾನು ವಕೀಲ ಮಾಧವರಾಯರನ್ನು ಕಾಣಲು ಮತ್ತೆ ಹೋಗಲಿಲ್ಲ. ಸತ್ಯದ ನ್ಯಾಯದ ಹೆಸರಿನಲ್ಲಿ ಭರ್ಜರಿಯಾಗಿ ದಕ್ಷಿಣೆ ಪಡೆದು

ತಮ್ಮ ಕೆಲಸವನ್ನು ಅವರು ಮಾಡಿದ್ದರು.

.........ಚಲಂನನ್ನು ನಂಬಿಕೊಂಡು ನಮ್ಮೂರಿಗೆ ಬಂದಿದ್ದ ಆ ಸಾವಿತ್ರಿಯ ಕೊನೆಯ ಭೇಟಿ.........ಗಂಟು ಮೂಟೆ ಕಟ್ಟಿಕೊಂಡು ಮಗನನ್ನೆತ್ತಿಕೊಂಡು ಕಣ್ಣೀರಿನ ಎರಡು ಕಾಲಿವೆಗಳನ್ನು ಹರಿಯ ಬಿಡುತ್ತಾ ಅವಳು ನಿಂತಿದ್ದಳು........

"ಬರ್ತೀನಪ್ಪಾ....... ಆತ ದೇವರ ಹಾಗಿದ್ದ .......ಆತನನ್ನೇ ನಂಬಿದ್ದೆ.......ಇದು ಅವನು ಕೊಟ್ಟುಹೋದ ಸಂತಾನ........ಇನ್ನು ಯಾರು ಗತಿ ನನಗೆ? ಯಾರು ಗತಿ ?"

"ಅಮ್ಮಾ ಈ ಊರು ಇಷ್ಟವಾದರೆ ಇಲ್ಲೇ ಇರು. ಚಲಂ ಬರುವರೆಗೂ ನಿನಗೆ ಯಾವ ತೊಂದರೆಯೂ ಆಗದ ಹಾಗೆ ನೋಡ್ಕೋತೀನಿ."

ಅದು ಔಪಚಾರಿಕವಾಗಿ ನಾನು ಹೇಳಿದ ಮಾತು........ಆದರೆ ಹೃದಯ ಬೇರೆಯೇ ಹೇಳುತಿತ್ತು :

"ನಿನಗೆ ಇದೊಂದೂ ಬೇಡ........ಹೇಗೋ ಒದಗಿ ಬಂದಿದೆ.... ಇದು ಇಲ್ಲಿಗೇ ಕೊನೆಗಾಣಲಿ........"

ಸಾವಿತ್ರಿ, ಕಣ್ಣೀರೊರೆಸಿಕೊಳ್ಳುತ್ತಾ ಹೇಳಿದಳು :

"ಬೇಡವಪ್ಪಾ........ಮದರಾಸಿಗೇ ಹೋಗ್ತೀನಿ........ಗುರುತಿನವರಿದ್ದಾರೆ........"

ಮದರಾಸು—ಗುರುತಿನವರು—.....ನಾನು ನೆಟ್ಟ ದೃಷ್ಟಿಯಿಂದ ಅರೆಕ್ಷಣ ಅವಳನ್ನು ನೋಡಿದೆ. ಈ ಹೆಣ್ಣು ಧರ್ಮದ ಹಾದಿಯಲ್ಲೆ ಸಾಗಿ ದುಡಿದು ಆ ಮಗನನ್ನು ದೊಡ್ಡವಳಾಗಿ ಮಾಡುವಳೆಂಬುದು ಅರ್ಥವಿಲ್ಲದ ಮಾತು. ಆದರೆ ಧರ್ಮದ ಹಾದಿ ಯಾವುದು ? ಧರ್ಮವೆಂದರೇನು ?

"ನನ್ನ ಮರೀಬೇಡಿ ಅಕ್ಕಾ........ಅಕ್ಕಾ.... ..."

ಆ ಸಾವಿತ್ರಿ ಹೊರಟುಹೋದಳು.

ಎಲ್ಲವೂ ಬರಿದು ಬರಿದಾಗಿತ್ತು ನನ್ನೆದುರು........ಹೆಜ್ಜೆ ಹೆಜ್ಜೆಗೂ ನನ್ನನ್ನು ಇದಿರಿಸುತ್ತಿದ್ದ ಶೂನ್ಯ.

—ತಂದೆ ಸತ್ತಾಗಲೊಮ್ಮೆ; ಅಜ್ಜಿ ಸತ್ತಾಗಲೊಮ್ಮೆ; ಆ ಬಳಿಕ ಈಗ.

ಈ ಸಾರೆ ಬೇರೆ ಯಾರೂ ಸತ್ತಿರಲಿಲ್ಲ. ನಾನೇ ಸತ್ತಿದ್ದೆ. ನಾನೇ ಸತ್ತು ಬದುಕಿದ್ದೆ.

ಸತ್ತು ಬದುಕಿದ ಮೇಲಿನ ಆ ಜೀವನ........

ನೆನಪುಗಳನ್ನು ಕೊಂದು ಮಣ್ಣು ಮಾಡಿ ತೆರೆದ ಇನ್ನೊಂದು ಅಧ್ಯಾಯ........

## . . . ಭಾನುವಾರ

ಭಾನುವಾರ ಎಂದೊಡನೆ ವಿಶಿಷ್ಟ ಭಾವನೆಗಳು ಉಂಟಾಗುತ್ತವೆ. ದುಡಿಯುವವರಲ್ಲಿ. ಅದು ರಜಾ ದಿನ. ಕುಂಪನಿ ಸರಕಾರದ ಕೆಳಗೆ ನಾವು ಗುಮಾಸ್ತೆಗಳಾಗತೊಡಗಿದಂದಿನಿಂದ, ತಲೆತಲಾಂತರಗಳಿಂದ, ಈ ದೇಶದಲ್ಲಿ ಭಾನುವಾರವೊಂದು ರಜಾ ದಿನವಾಗಿದೆ.

ಆದರೆ ನನ್ನ ಪಾಲಿಗೆ ಎಲ್ಲವೂ ರಜಾದಿನಗಳೇ—ಎಲ್ಲವೂ ದುಡಿಯುವ ದಿನಗಳೇ. ಈಗ ಈ ಸೆರೆಮನೆಯಲ್ಲೂ ಅಷ್ಟೆ ; ಹಿಂದೆ ಆ ಸೆರೆಮನೆಯಲ್ಲೂ ಅಷ್ಟೆ.

ಹಿಂದಿನ ಆ ಸೆರೆಮನೆಯೆಂದು ಸಂಬೋಧಿಸುತ್ತಿರುವುದು, ನಾನು ವಾಸವಾಗಿದ್ದ ಬಾಹ್ಯ ಜಗತ್ತನ್ನು.

ಬಿಡುಗಡೆಯನ್ನು ಇದಿರುನೋಡುತ್ತಿರುವ ನಾನೀಗ ಮುಖಕ್ಷೌರದ ಗೊಡವೆಗೆ ಹೋಗಬೇಕಾದ್ದಿಲ್ಲ. ಯಾರ ಪ್ರೀತ್ಯರ್ಥಕ್ಕಾಗಿ ಸಂತೃಪ್ತಿಗಾಗಿ ಈ ಮುಖ ಕ್ಷೌರ? ನನ್ನ ನುಣ್ಣನೆಯ ಮುಖವನ್ನು ಇನ್ನೊಬ್ಬರು ನೋಡುವುದರಿಂದ, ನನಗಿನ್ನು ಆಗಬೇಕಾದ ಲಾಭವೇನೂ ಇಲ್ಲ—ಪ್ರಯೋಜನವೇನೂ ಇಲ್ಲ.

ಹನ್ನೆರಡು ವರುಷಗಳಿಗೆ ಹಿಂದೆ, ನಾನು ಇಪ್ಪತ್ತಾರರ ಯುವಕನಾಗಿದ್ದಾಗಲೂ, ಹಾಗೆಯೇ ಆಯಿತು. ಆಗ ನಾನು ಪ್ರಪಂಚದ ಮೇಲೆಯೇ ಮುನಿದು ದೂರವಾಗಿದ್ದೆ. ಕಾದು ಬೆಂದಿದ್ದ ಹೃದಯದ ಮೇಲೆ ನಿರಾಸೆಯ ತಣ್ಣೀರೆರಚಿ ಕೆಡಿಸಿದ್ದರು ಕೆಟ್ಟವರು. ಹೆಣ್ಣೊಂದು ನನ್ನ ಜೀವನದ ಒಳ ಪ್ರವೇಶಿಸಿದಾಗ, ನೇರವಾದೊಂದು ಹೊಸ ದಾರಿಯನ್ನು ಹಿಡಿಯಲು ನಾನು ಇಚ್ಛಿಸಿದೆ. ಆದರೆ ಅವರು ಬರಬೇಡವೆಂದರು. ಆ ಹೆಣ್ಣು ನನ್ನನ್ನು ಅಣಕಿಸಿ ಅವಮಾನಿಸಿತು........ಆಗ

ಎಷ್ಟೋ ದಿನ ನಾನು ಮುಖ ಕ್ಷೌರಮಾಡಿಕೊಳ್ಳುತ್ತಿರಲಿಲ್ಲ. ಬಟ್ಟೆಗಳು ಮಾಸಿರುತ್ತಿದ್ದುವು. ಪ್ರೇತಕಳೆಯಿತ್ತು ಮುಖದ ಮೇಲೆ. ಮಾನವರಿಂದ ದೂರ ದೂರ ಹೋಗಲು ನಾನು ಬಯಸುತ್ತಿದ್ದೆ. ಮನುಷ್ಯರು ಯಾರ ಸಹವಾಸವೂ ನನಗೆ ಬೇಕಾಗಿರಲಿಲ್ಲ.

ಅದರ ಬದಲಾಗಿ ನಾನು ಬಾಟಲಿಯ ಸಹವಾಸಮಾಡಿದೆ. ಮುಗುಳು ನಗು ಬರಿಸಿದ ಮೊದಲ ಗುಟುಕು........ಆ ಬಳಿಕ ಎಂದಿಗೂ ತೃಪ್ತಿಕೊಡದೇಹೋದ ಬರಿದು ಬಾಟಲಿಗಳು.........ದುಡ್ಡಿನ ಪ್ರಮಾಣಕ್ಕೆ ಅನುಸಾರವಾಗಿ ಬಾಟಲಿಯ ಗುಣವಿರುತ್ತಿತ್ತು. ಹಣದ ಪರಿಮಾಣ ಹೆಚ್ಚಿದಷ್ಟೂ ಹೆಚ್ಚುತ್ತಿತ್ತು ದ್ರಾವಕದ ಗುಣ.

ಕುಡಿತ ಅಧಃಪತನದ ಚಿಹ್ನೆ ಎಂದು ಆರೋಪಿಸುವವರಿದ್ದಾರೆ. ಅದು ನನ್ನ ಅಭಿಪ್ರಾಯವಲ್ಲ. ಒಳ್ಳೆಯ ಮನುಷ್ಯರು ಹಾಗೆ ಹೇಳಬಹುದು. ಆದರೆ ನಾನು ಒಳ್ಳೆಯ ಮನುಷ್ಯನೆಂದು ಯಾವ ದಿನ ಸಾಧಿಸಿದ್ದೆ? ಇನ್ನೊಬ್ಬರ ಸಂಪಾದನೆಯಿಂದ ಒಂದಂಶವನ್ನು ಕಸಿದು ಜೀವಿಸಿದ ನಾನು ಒಳ್ಳೆಯವನೆಂದು ಹೇಳುವುದು ಹೇಗೆ ಸಾಧ್ಯ?

ಜನ, ಯುದ್ಧದ ಮಾತನ್ನಾಡುತ್ತಿದ್ದರು. ಜಗತ್ತನ್ನು ಆವರಿಸಿದ ಎರಡನೆಯ ಘೋರ ಮಹಾಯುದ್ಧ. ಒಂದು ವರ್ಷ, ಎರಡು ವರ್ಷ, ... ಯಾರು ಯಾರೋ ಎಲ್ಲೋ ಕಾಳಗ ನಡೆಸಿದ್ದರು. ಬಾಂಬು—ಅಗ್ನಿವರ್ಷ—ಟ್ಯಾಂಕು ತೋಪುಗಳು-ಮೃಗಮಾನವರು. ಪ್ರಜಾಪ್ರಭುತ್ವದ ಸ್ವಾತಂತ್ರ್ಯದ ಮಾತುಗಳು ಕೇಳಿ ಬರುತ್ತಿದ್ದುವು—ಅರ್ಥವಿಲ್ಲದ ಮಾತುಗಳು.

ಆದರೆ ಬೀದಿಗಳಲ್ಲಿ ಖಾಕಿ ಜವಾನರು ಓಡಿಯಾಡುತ್ತಿದ್ದರು. ಯಾವುದೋ ದೇಶಗಳ ಬಿಳಿಯ ಸೈನಿಕರು ನಮ್ಮ ಗಲ್ಲಿಗಳನ್ನು ಗಲೀಜು ಮಾಡುತ್ತಿದ್ದರು. ಅವರು ಮನುಷ್ಯರಾಗಿರಲಿಲ್ಲ. ಹಾಗೆಂದೇ ಅವರ ಸಾಮಿಪ್ಯದಲ್ಲಿದ್ದು ಸಮಯ ಕಳೆಯಬೇಕು ಎನಿಸುತ್ತಿತ್ತು. ಆದರೆ ಅದಕ್ಕೆ ಅವಕಾಶವಿರಲಿಲ್ಲ. ನಾನು ಮಿಲಿಟರಿ ಸೇರಿದರೆ? ಮಿಲಿಟರಿ ಸೇರುವುದರಿಂದ ನನ್ನ ವೈಯಕ್ತಿಕ ಸಮಸ್ಯೆ ಪರಿಹಾರವಾಗುವುದಲ್ಲವೆ?.... ಆದರೆ ಪೋಲೀಸರು ಫೈಲು ಸಿದ್ಧಗೊಳಿಸಿರುವ ನನ್ನಂಥವನಿಗೆ ಖಾಕಿ

ಬಟ್ಟೆಯ ರಕ್ಷಣೆ ದೊರೆಯುವುದು ಸಾಧ್ಯವಿರಲಿಲ್ಲ....

ದಿನಕಳೆದಂತೆ ಸೈನ್ಯದ ಕರೆ ಮಾತ್ರ ಹೆಚ್ಚು ಹೆಚ್ಚಾಗಿ ಕೇಳಿಸು ತಿತ್ತು. ದೇಶದ ಸ್ವಾತಂತ್ರ್ಯದ ಹೆಸರಲ್ಲಿ ಜನಯುದ್ಧದ ಹೆಸರಲ್ಲಿ ಆ ಕರೆ ಬರುತಿರಲಿಲ್ಲ. ನನ್ನ ಪಾಲಿಗೆ ಅದು ಸಾವು ಎಸೆಯುತಿದ್ದ ಸಮ್ಮೋಹನಾಸ್ತ್ರ. ಆಳವರಿಯದ ಆ ನೀರಿಗೆ ಇಳಿದು ಬಿಡಲು ಮನ ಸಾಗುತಿತ್ತು. ಹಾಗೆ ಮಾಡಬೇಕಾದರೆ ತಲೆ ಮರೆಸಿಕೊಂಡು ಬೇರೆ ಊರಿಗೆ ಹೋಗಿ ಸುಳ್ಳು ಹೇಳಿ ಸೈನ್ಯ ಸೇರಬೇಕು....

ಮತ್ತೆಯೂ ನಾಲ್ಕು ದಿನ ಅವಕಾಶ ದೊರೆತಿದ್ದರೆ ಹಾಗೆಯೇ ಮಾಡುತಿದ್ದೆನೇನೋ. ಆದರೆ—

ಸಿಗರೇಟಿನ ಹೊಗೆಯ ತೆರೆಯ ಹಿಂದೆ ಮುಖ ಮರೆಸಿ, ಆ ಬಾರ್ ನಲ್ಲಿ ಕುಳಿತಿದ್ದ ನನಗೆ ಕರೆ ಬಂತು:

"ಚಂದ್ರೂ........"

ಎಷ್ಟು ಹಿತಕರವಾಗಿತ್ತು ಆ ಸಂಬೋಧನೆ! ಎಂಥ ದೀರ್ಘ ಅವಧಿಯ ಬಳಿಕ ಆ ಪದೋಚ್ಚಾರಣೆಯನ್ನು ಕೇಳುತ್ತಿದ್ದೆ!

"ಚಂದ್ರೂ!"

ನಾನು ಉತ್ತರವೀಯಲಿಲ್ಲ. ಮತ್ತೊಮ್ಮೆ ಆ ಹೆಸರನ್ನು ಕೇಳುವ ಭಾಗ್ಯ ನನ್ನದಾಗಬಾರದೆ?

ಈ ಸಾರೆ ಬಲು ಹತ್ತಿರದಲ್ಲೆ ಸ್ವರ ಕೇಳಿಸಿತು.

"ಚಂದ್ರೂ!"

"ಆಂ?"

ಅವನು ನಗುತ್ತಿದ್ದ—ಶ್ರೀಕಂಠ.

"ಸೈತಾನ ಕಣೋ ನೀನು. ಈ ದೇಶದಲ್ಲೇ ನೀನಿಲ್ಲಾಂತಿದ್ದೆ. ಅಂತೂ ಸಿಕ್ದೆ."

"ಬಾ ಕಂಠಿ."

ಹಾಗೆ ನಾನು ಸಲಿಗೆಯಿಂದ ಇನ್ನೊಬ್ಬರನ್ನು ಕರೆಯದೆ ಬಹಳ ದಿನಗಳಾಗಿದ್ದುವಲ್ಲವೆ? ವನಜಾ—ವನೂ; ಶ್ರೀಕಂಠ-ಕಂಠಿ....

ಆತ ಕುಳಿತುಕೊಂಡ.

" ಏನು ತರಿಸ್ಲಿ ಹೇಳು ? "

" ಚಂದ್ರೂ....ನಾನು ಇಲ್ಲಿ ಕೂತಿರೋಕೆ ಆಗಲ್ಲ. ಕೊಂಡು ಕೊಂಡದ್ದಾಯ್ತು. ಇನ್ನು ಮನೆಗೆ....ನಡಿ ಹೋಗೋಣ."

" ನಾನು ? ನಾನು ? "

" ನೀನೆ. ನಡಿ ಹೋಗೋಣ."

ಯೋಚಿಸಲು ಸಮಯವಿರಲಿಲ್ಲ. ಸಮಯವಿದ್ದಳೂ ಯೋಚಿ ಸುತಿದ್ದೆನೋ ಇಲ್ಲವೋ .. ಹಣದ ಪಾಕೀಟಿಗಾಗಿ ನಾನು ತಡವರಿಸಿದೆ. ಶ್ರೀಕಂಠ ಬಿಲ್ ನೋಡುತ್ತ ರೂಪಾಯಿಯ ಮೂರು ನಾಣ್ಯಗಳನ್ನು ಟ್ರೇಯ ಮೇಲಿರಿಸಿದ. ಕಾಣಿಕೆಯು ಎರಡಾಣೆಯೂ ಹೊರಬಿತ್ತು.

ಹೊರಗೆ ಕಾರು ನಿಂತಿತ್ತು. ಶ್ರೀಕಂಠನೇ ಚಾಲಕ. ಶಾರದಾ ಇರಲಿಲ್ಲ........ಯಾರೂ ಇರಲಿಲ್ಲ....

" ಒಬ್ನೇ ಇದೀಯೇನು ? "

ಆತ ಮಾತನಾಡಲಿಲ್ಲ. ವೇಗ ವೇಗವಾಗಿ ಕಾರು ಓಡಿಸಿದ.

ಊರಿನ ಹೊರಗೆ ವಿಸ್ತರಣದಲ್ಲಿ ಸೊಗಸಾದ ಆ ಮಹಡಿ ಮನೆ ಇತ್ತು. ಹೆಬ್ಬಾಗಿಲಲ್ಲೆ ಅಲ್ಸೇಷಿಯನ್ ನಾಯಿಯ ಸ್ವಾಗತ." ಬುದ್ಧೀ ಬುದ್ಧೀ " ಎನ್ನುತ್ತ ಬಾಗಿ ಬಾಗಿ ಓಡುತಿದ್ದ ಆಳುಮಕ್ಕಳಿಬ್ಬರು.

ಕಾರಿನೊಳಗಿದ್ದ ಪತ್ರಿಕೆ ಪುಸ್ತಕ ಬಾಟಲಿಗಳು ಮೇಲೆಹೋದುವು.

" ಬಾ ಚಂದ್ರೂ. .ಮೇಲಕ್ಕೆ ಬಾ....ನನ್ ರೂಮಿಗೆ."

. . ಹಾಗೆ ನಾನು ಮೇಲಕ್ಕೆ ಹೋದೆ. ನನ್ನದಲ್ಲದ ಒಂದು ಲೋಕ ಮತ್ತೆ ಕರೆದಿತ್ತು.

" ಚಂದ್ರೂ ಹೀಗ್ಯಾಕಿದೀಯಾ ? "

" ಹ್ಯಾಗಿದೀನಿ ? "

" ಕನ್ನಡೀಲಿ ನೋಡ್ಕೊ."

ಆ ಕೊಠಡಿಯಲ್ಲಿ ಎರಡು ದೊಡ್ಡ ನಿಲುವುಗನ್ನಡಿಗಳಿದ್ದುವು. ಪ್ರತಿ ಹೆಜ್ಜೆಗೂ ಪ್ರತಿಬಿಂಬ ಕಾಣುವಂತೆ ಯಾಕೆ ಅಂಥ ಕನ್ನಡಿಗಳನ್ನಿ ಡುವರೊ ! ವಿಸ್ತಾರವಾದ ಜಾಗದಲ್ಲಿ ಓರಣವಾಗಿ ಸೋಫಾಗಳನ್ನಿರಿಸಿ ದ್ದರು. ಯಾವುದೋ ದೇಶದ ನಿಸರ್ಗ ಸೌಂದರ್ಯವನ್ನು ತೋರಿಸುವ

ಎರಡು ಮೂರು ಚಿತ್ರಗಳಿದ್ದುವು ಗೋಡೆಯ ಮೇಲೆ. ವಿಶಾಲವಾದ ಕಿಟಕಿಗಳಿಗೆ ತೆಳುವಾದ ಬಣ್ಣದ ಬಟ್ಟೆಯ ಕವಾನು ಕಟ್ಟಿದ್ದರು. ಆ ಕಿಟಕಿಯಾಚೆ ನಮ್ಮೂರು ಕಾಣಿಸುತ್ತಿತ್ತು—ಇನ್ನೂ ಎಚ್ಚರವಿದ್ದ ನಮ್ಮೂರು. ಸಹಸ್ರ ಚಿಕ್ಕೆಗಳಾಗಿ ವಿದ್ಯುದ್ದೀಪಗಳು ಕಾಣಿಸುತಿದ್ದುವು ....ಅಲ್ಲೇ ಎಲ್ಲೋ ಒಂದೆಡೆ ನನ್ನ ಮನೆ ಇರಬೇಕು....ಅದರಾಚೆಗೆ ಎಲ್ಲೋ ಆ ಹುಡುಗಿ....

"ಏನೋ ಇದು? ಕವಿ ನಿಂತ ಹಾಗೆ ನಿಂತೀದೀಯಲ್ಲೋ?"

ರಾತ್ರೆಯ ಪಾಯಜಾಮೆ ಗೌನು ತೊಟ್ಟು ಶ್ರೀಕಂಠ ನಗುತ್ತ ಕೇಳುತಿದ್ದ. ಅವನ ಅಂಗಾಂಗಗಳು ತುಂಬಿಕೊಂಡಿದ್ದುವು. ಆ ಕಣ್ಣುಗಳಲ್ಲಿ ದಿಟ್ಟತನವಿತ್ತು.

"ಸಂಕೋಚ ಪಟ್ಕೋಬೇಡವಮ್ಮಾ. ನಾನೊಬ್ನೇ ಇದೀನಿ ........ಒಳಗೆ ವಾಷ್ ಬೇಸಿನ್ನಿದೆ, ಮುಖ ತೊಳಕೊ. ಬಟ್ಟೆ ಇಟ್ಟಿ ದೀನಿ, ಬದಲಾಯಿಸ್ಕೊ."

........ನಾನು ಹೊಸಬನಾಗಿ ತೋರುತ್ತ ಕೊಠಡಿಗೆ ಹಿಂತಿರುಗಿ ಸೋಫಾದ ಮೇಲೆ ಒರಗಿ ಕುಳಿತೆ.

ಕೇಳಿಯೂ ಕೇಳಿಸದಂತೆ ರೇಡಿಯೋ ಹಾಕುತ್ತ ಶ್ರೀಕಂಠನೆಂದ.

"ಇನ್ನು ಹೇಳು ನಿನ್ಕತೆ."

"ನಮ್ಮ ಬೊಂಬಾಯಿ ಫರ್ಮು ದಿವಾಳಿ ಎದ್ದೋಯ್ತು ಕಂಠಿ. ಸದ್ಯಕ್ಕೆ ಬೀದೀಲಿದೀನಿ."

"ಸರಿ. ಒಬ್ನೇನೊ ಇನ್ನೂ?"

"ಹೂನಪ್ಪಾ."

"ಭಾಗ್ಯವಂತ ನೀನು!"

ಅಡುಗೆಯ ಹುಡುಗ ಬಂದು ಹೋದ. ಇಬ್ಬರೂ ಊಟದ ಕೊಠಡಿಗೆ ಹೋದೆವು. ಆ ಕುರ್ಚಿ ಮೇಜು ಬಿಳಿಬಟ್ಟೆ ಸ್ವಚ್ಛವಾಗಿದ್ದುವು. ಊಟವೂ ಅಷ್ಟೆ. ಆದರೆ ನನಗೆ ಏನೂ ಸೇರಲಿಲ್ಲ. ಕತ್ತಲು ಕವಿದಿದ್ದ ಮೆದುಳಿಗೆ ಹೆದರಿ ನಾಲಿಗೆ ನಿರಾಕರಿಸಿತ್ತು. ಶ್ರೀ ಕಂಠನೂ ಉಂಡುದು ಸ್ವಲ್ಪವೇ........

ಕೊಠಡಿ ಸೇರಿದಮೇಲೆ ಗ್ಲಾಸುಗಳ ಸದ್ದು. ಶ್ರೀಕಂಠ ಬಾಗಿಲಿಗೆ ಅಗಣಿ ತಗಲಿಸಿದ. ಆತ ವ್ಹಿಸ್ಕಿ-ಸೋಡಾಗಳನ್ನು ಬೆರೆಸುತಿದ್ದಾಗ ಕೇಳಿದೆ.

" ಯಾವತ್ತಿಂದ ಅಭ್ಯಾಸ ? "

" ಮೂರು ವರ್ಷಗಳಾದುವು ಚಂದ್ರೂ. ನಮ್ಮ ಶಾರದಾ ಮೊದಲ ಕಹಿ ಗುಟುಕು ಕೊಟ್ಟಮೇಲೆ ಇದಕ್ಕೆ ಆತುಕೊಂಡಿದ್ದೀನಿ."

" ಅದೇನು ಒಗಟು ? "

ಅವನು ನೋವಿನ ನಗೆ ನಕ್ಕ. ಎರಡು ಗ್ಲಾಸುಗಳಲ್ಲೆ ಸುಲಭ ವಾಗಿ ಅವನ ನಾಲಿಗೆ ಸಡಿಲಿಕೊಂಡಿತು. ಆತನ ಆತ್ಮ ಕಥೆಯನ್ನು ಕೇಳುತ್ತ ಕುಳಿತೆ.

ಬಿ.ಎಸ್‌ಸಿ. ಮುಗಿಸಿದ ಶ್ರೀಕಂಠ ಉದ್ಯೋಗ ಹುಡುಕಿಕೊಂಡು ಹೋಗಲಿಲ್ಲ. ಕುಳಿತಲ್ಲೆ ಹಣಸಂಪಾದಿಸುತಿದ್ದ ರಖಂ ವ್ಯಾಪಾರಿ ಯಾದ ಆತನ ಮಾವ, ಅಳಿಯ ದೇವರನ್ನು ಪರೀಕ್ಷಿಸಿ ನೋಡಿದರು. ಅವರ ಒಬ್ಬಳೇ ಮಗಳ ಗಂಡ, ಸಾವಿರ-ಸಾವಿರದ ವ್ಯಾಪಾರದಲ್ಲಿ ನಿಷ್ಣಾ ತನಾಗಿ ಕಂಡುಬಂದ. ಊರ ವಿಸ್ತರಣದಲ್ಲಿ ನವ ದಂಪತಿಗಳಿಗಾಗಿ ಸ್ವಂತದ ಮನೆಯನ್ನು ಕಡಿಮೆಗೆ ಕೊಂಡುದಾಯಿತು........ಶಾರದಾ ಬಂದಳು........ಎಲ್ಲ ಸೌಕರ್ಯಗಳೂ ಬಂದುವು. ಆದರೆ ಸುಖ— ಶಾಂತಿ ?

" ಗಂಡ-ಹೆಂಡತಿ ಅಂದರೆ ಏನು ಚಂದ್ರೂ ? ಅದೇನು ಒಪ್ಪಂ ದವಾ ? ಆಕೆ ಪೂರ್ತಿ ಒಪ್ಪಿಗೆಯಿಲ್ಲದೆ, ಎಷ್ಟು ಬೇಕೊ ಅಷ್ಟನ್ನೇ ಕೊಡ್ತಿದ್ಲು. ಶ್ರೀಮಂತರ ಹುಡುಗೀನಪ್ಪಾ ! .. ....ಆದರೆ ನಾನು ಎಂಥಾ ಘಾಟಿ ! ದುಡ್ಡೊಂದಿದ್ದರೆ ಧಿಮಾಕು ಸ್ಥಾನ ಮಾನ ಏನು ಬೇ ಕಾದರೂ ಕೊಂಡ್ಕೋಬಹುದು .... ಹುಂ. ಶಾರದಾ .......ನೀನು ಭಾಗ್ಯವಂತ ಚಂದ್ರೂ ..... ನೀನು ಮದುವೆ ಬೇಡಿ ತೊಟ್ಕೊಂಡಿಲ್ಲ ...........ವಿಷಯ ಗೊತ್ತೆ ಚಂದ್ರು ?.......... ಶಾರದಾ ಸ್ವಲ್ಪ ವಿಚಿತ್ರ ಪಾಣಿ. ದೊಡ್ಡ ಮನೆತನಾಂತ ಹೇಳಿದೆನಲ್ಲ ? ಸಂಬಂಧಿಕರು ಗೆಳೆಯರು ಯಾರು ಯಾರೋ ಬರ್ತಿದ್ರು—ಹೋಗ್ತಿದ್ರು. ಅಂತೂ

ಯಾರನ್ನೋ ಆಗ ಆಕೆ ಮೆಚ್ಚಿರ್ಬೇಕು ...ಈಗ? ಅವಳ್ನ ದೂರಬಾರ್ದೇನೊ? ಅದು ನಿಜಾನ್ನು. ಆದರೆ ಒಮ್ಮೆ ನನ್ನ ಬಲಿ ತೆಗೆದುಕೊಂಡ್ಮೇಲೆ, ಹೊಸ ಎಂಟ್ರೀ ಪುಸ್ತಕ ಷುರು ಮಾಡ್ಬೇಕೋ ಬೇಡ್ವೊ ? ''....

" ವೈಮನಸ್ಸು ಅನ್ನು ಹಾಗಾದರೆ. ಇಲ್ಲಿಗೆ ಬರೋದೇ ಇಲ್ವೇನು ಈಗ? ''

" ಹಾಗೇನಿಲ್ಲಪ್ಪಾ.... ಹೆರಿಗೆಗೆ ಹೋಗಿದಾರೆ ಸಾಹೇಬರು!.... ಇದೇ ಊರಲ್ಲೆ—ಆರು ಮೈಲಿ ಆಚೆ ಇರೋ ತವರ್ಮನೆಗೆ! ''

" ಅಭಿನಂದನೆ.''

" ಥೂ !....''

....ಶ್ರೀಕಂಠ, ತನ್ನ ಮಲಗುವ ಕೊಠಡಿಗೆ ನನ್ನನ್ನು ಒಯ್ದ. ಬೇರೆ ಬೇರೆ ಭಾಗಗಳಲ್ಲಿ ಕಿಟಿಕಿಗಳಿಗೆ ಸಮೀಪವಾಗಿದ್ದ ಕೆತ್ತನೆಯ ಕೆಲಸದ ಮಂಚಗಳು. ಇಳಿಬಿಟ್ಟಿದ್ದ ಸೊಳ್ಳೆಯ ಪರದೆ. ಎಲ್ಲವೂ ಶುಭ್ರ ಶುಭ್ರವಾಗಿದ್ದ ಹಾಸಿಗೆ-ದಿಂಬು ಹೊದಿಕೆಗಳು.

" ಅದು ಶಾರದಾ ಹಾಸಿಗೆ-ಅಲ್ಲೇ ಮಲಕೋ.''

" ಉಂಟೇ ಎಲ್ಲಾದರೂ ? ಅವರೇನೆಂದಾರು ? ''

" ಒಳ್ಳೇ ಹುಡುಗಿ ಶಾರದಾ. ಅವಳೇನೂ ಆಕ್ಷೇಪಿಸೋಲ್ಲ . ''

ಉದ್ವಿಗ್ನಗೊಂಡಿದ್ದ ಶ್ರೀಕಂಠನನ್ನು ಸಂತವಿಸುವ ಮಾತುಗಳನ್ನಾಡಬೇಕೆಂದು ಮನಸ್ಸು ಬಯಸಿತು. ಆದರೆ ಸರಿಯಾದ ಮಾತೇ ಹೊಳೆಯಲಿಲ್ಲ. ಶ್ರೀಕಂಠನೇ ಕಹಿಯಾಗಿ ನಗುತ್ತ ಹೇಳಿದ:

" ಅದು ಬರೇ ಹಾಸಿಗೆ ಕಣೋ.... ಹೆದರ್ಕೋಬೇಡ. ನಾನು ಮಲಕೋತೀನಿ .. ನಿದ್ದೆ ಬರುತ್ತೆ ನನಗೆ.... ಫ್ಯಾನ್ ಹಾಕ್ಕೊ. ಪೇಪರ್ ಓದೋ ಹಾಗಿದ್ರೆ ಓದು.... ನಿದ್ದೆ ಬಂದ್ರೆ ದೀಪ ಆರಿಸ್ಬಿಡು. ನಿನ್ತಲೇ ಮೇಲ್ಗಡೇನೇ ಸ್ವಿಚ್ಚಿದೆ........''

ಬಹಳ ಹೊತ್ತು ನನಗೆ ನಿದ್ದೆ ಬರಲಿಲ್ಲ. ಎಷ್ಟೋ ಕಾಲದಿಂದ ನಿದ್ದೆಹೋಗಿದ್ದ ಮನಸ್ಸು ಜಾಗೃತವಾಗಿತ್ತು.... ಜೀವನ ಹೀಗೂ ಇದೆ ಅಲ್ಲವೆ ? ಮೇಲ್ಮಟ್ಟದ ಜೀವನ ರಂಗಕ್ಕೆ ಶ್ರೀಕಂಠ ಕಾಲಿರಿಸಿದ್ದ. ಆದರೆ ಭಾರವಾದ ಹೂವಿನ ಹಾರ ಅವನ ಕೊರಳನ್ನು ಬಾಗಿಸಿ ಉಸಿರು ಕಟ್ಟಿ

ಸಿತ್ತು ...ದೀಪ ಆರಿಸಿದರೂ ನನಗೆ ನಿದ್ದೆ ಬರಲಿಲ್ಲ....ಎವೆ ತೆರೆದೇ, ಕತ್ತಲು—ಬೆಳುಪಿನ ಮಿಲನದ ಮಸಕು ರೂಪವನ್ನು ನಾನು ಕಂಡೆ. ಶಾರದಾ ರಸಿಕಳಿರಬೇಕು....ಸಿಂಗರಿಸಿದ್ದ ಆ ಕೊಠಡಿ....ನನ್ನ ಮುಖ ದಿಂಬನ್ನು ಮುಟ್ಟಿತು....ಆಕೆಯೂ....ಥೂ....ಎಂಥ ಸುವಾಸನೆ!.... ಆದರೆ ಆ ದಿನ ಸಾಯುತ್ತಿದ್ದ ಅಜ್ಜಿಯ ದೇಹದಿಂದ ಹೊರಟ ಆ ದುರ್ಗಂಧ? ... ಹುಚ್ಚು ಯೋಚನೆಗಳು....ಮುಂದೇನು ಇನ್ನು? ನಿದ್ದೆ ಯಾಕೆ ಬರಬಾರದು? ಶಾರದಾ-ಶ್ರೀಕಂಠ ಈ ಹಾಸಿಗೆಯ ಮೇಲೆಯೇ ....ಊ ...ವನಜಾ—ವನಜಾ....

ಬಲು ಪ್ರಯಾಸಪಟ್ಟು ನಿದ್ದೆ ಹೋದೆನಾದರೂ ಮರುದಿನ ಬೆಳಗ್ಗೆ ನಾನೇ ಮೊದಲು ಎದ್ದಿದ್ದೆ.

ಅಡುಗೆಯವನು ಬಂದು ಹೇಳಿದ:

"ಸಾಹೇಬರು ಏಳೋದು ಎಂಟು ಘಂಟೆಗೆ. ನೀವು ಕಾಫಿ ತಗೊಳ್ಳಿ...." ಆ ಕಾಫಿ ರುಚಿಕರವಾಗಿತ್ತು.

ಎಂಟು ಘಂಟೆಗೆ ಶ್ರೀಕಂಠ ಮಲಗುವ ಕೊಠಡಿಯಿಂದ ಎದ್ದು ಬಂದ.

"ಅಂತೂ ಇದೀಯಲ್ಲಾ! ಹೊರಟೇ ಹೋಗಿರ್ತೀಯೇನೋ ಅಂತಿದ್ದೆ."

"ಹೋಗಿ ಮಾಡ್ಬೇಕಾದ್ದೇನು?"

"ಹುಂ....ನಿನ್ನೆ ರಾತ್ರೆ ನಾನು ಏನೇನ್ಮಾತಾಡ್ದೆ ಸ್ವಲ್ಪ ಹೇಳು."

"ಒಂದೂ ನೆನಪಿಲ್ಲ."

"Good. ಒಂದೂ ನೆನಪಿಟ್ಕೋಬೇಡ. ನಾನು ಹೇಳಿದ್ದೆಲ್ಲಾ ಸುಳ್ಳು."

ಅವನು ಹೇಳಿದ್ದೆಲ್ಲವೂ ಸತ್ಯವಾಗಿತ್ತು. ತನ್ನ ಮನಸ್ಸಿನ ಅಳುಕನ್ನು ತಾನೇ ಬಗೆಹರಿಸಲು ಆತ ಯತ್ನಿಸುತ್ತಿದ್ದ—ಅಷ್ಟೆ.

ಆ ಮೇಲೆ ಅನಿರೀಕ್ಷಿತವಾಗಿ ಅವನು ಕೇಳಿದ:

"ತಿಂಗಳಿಗೆ ಎಷ್ಟಪ್ಪಾ ನಿನ್ಸಂಪಾದ್ನೆ?"

"ಲೆಕ್ಕವಿಟ್ಟಿದ್ದರೆ ತಾನೆ?"

" ಬ್ಯಾಂಕ್‌ನಲ್ಲೇನೂ ಇಟ್ಟಿಲ್ಲ ಅನ್ನು. "

ನನಗೆ ನಗುಬಂತು. ಆದರೆ ಶ್ರೀಕಂಠ ನಗಲಿಲ್ಲ. ಆತ ಏನನ್ನೋ ಯೋಚಿಸುತ್ತಲಿದ್ದ. ಆ ಬಳಿಕ ಆತ ಬಾಯ್ತೆರೆದಾಗ ನಿರ್ಧಾರದ ಸ್ವರವಿತ್ತು ಆ ಮಾತಿನಲ್ಲಿ.

" ಚಂದ್ರೂ....ಏನೂ ತಪ್ಪು ತಿಳ್ಕೋಬೇಡ. ನನ್ಜತೇಲಿ ಇರ್ತಿಯೇನು ? ಯಾರಾದರೂ ನನ್ನ ಸಮೀಪದಲ್ಲೇ ಇದ್ದು ನಂಬಿಕೆಯ ಸ್ನೇಹಿತರಾಗಿರ್ಬೇಕು. "

ಸಿಗರೇಟು ಹಚ್ಚುತ್ತಾ ಯೋಚಿಸಲೆತ್ನಿಸಿದೆ. ಆದರೆ ಮೆದುಳು ನಿಷ್ಕ್ರಿಯವಾಗಿತ್ತು.

" ನಿನಗೆ ಯಾವುದಕ್ಕೂ ಕಡಿಮೆಯಾಗೋದಿಲ್ಲ. ಪ್ರತಿ ತಿಂಗಳೂ ನಿನಗೆ ಬೇಕಷ್ಟು ಕೇಳಿ ತಗೋ. ಶಾರದಾ ಬರೋತನಕ ಈ ಮನೇಲಿ ಇರು. ಆಮ್ಲೇಲೆ ನೀನು ಇರೋಕೆ ಬೇರೆ ಏರ್ಪಾಟು ಮಾಡ್ತೀನಿ. ಈಗ ನೀನಿರೋ ಜಾಗದಲ್ಲೆ ಇರ್ತೀಂತಾದರೆ ಅದೂ ಸರಿಯೆ........ ಏನಂತೀಯಾ ? "

" ಮೌನವಾಗಿದ್ದರೆ ಏನರ್ಥ ಹೇಳು ? "

" ಅರ್ಧ ಒಪ್ಪಿಗೇಂತ. "

" ಇಲ್ಲ, ಪೂರ್ತಿ ಒಪ್ಪಿಗೆ. "

" ಥ್ಯಾಂಕ್ಸ್ ಚಂದ್ರೂ........ "

ಮತ್ತೆ ಜೀವನ ರಥ ಚಲಿಸಿತು.

ಅದು ಸೋಮಾರಿ ಜೀವನ, ಸುಖವಾಗಿ ತಿಂದುಣ್ಣುವುದು. ಒಳ್ಳೆಯ ಬಟ್ಟೆ ಬರೆ. ಸಂಜೆ ಜತೆಯಾಗಿಯೇ ವಿಹಾರ. ಶ್ರೀಕಂಠ ಹಗಲು ಸ್ವಲ್ಪ ಹೊತ್ತು ಮಾವನ ಮಳಿಗೆಯಲ್ಲಿರುತಿದ್ದ. ಶಾರದಾಳನ್ನು ಕಂಡು ಬರುತಿದ್ದ. ನನಗೆ ಅಷ್ಟು ಕೆಲಸವೂ ಇರಲಿಲ್ಲ.

ಒಮ್ಮೆ, ಲಕ್ಷಲಕ್ಷ ರೂಪಾಯಿ ಸಂಪಾದನೆಯಾಗುವ ಒಂದು ಸನ್ನಿವೇಶ ಒದಗಿ ಬಂತು. ಮಿಲಿಟರಿಯವರಿಗೆ ವಿಧವಿಧದ ಸಾಮಗ್ರಿಗಳನ್ನು ಪೂರೈಸುವ ಜವಾಬ್ದಾರಿ. ಮಿಲಿಟರಿ ಅಧಿಕಾರಿಯೊಬ್ಬ—ಶ್ರೀಕಂಠನನ್ನು ಕಾಣಲು ಬಂದ. ಆತನನ್ನು ಇದಿರ್ಗೊಳ್ಳಲು ರಾಜ—

ಸತ್ಕಾರವನ್ನೆ ಏರ್ಪಡಿಸಿದೆವು.

ಅವನೆದುರು ಶ್ರೀಕಂಠ ಹೇಳಿದ:

"ಇವರು ಮಿಸ್ಟರ್ ಚಂದ್ರಶೇಖರ್, ನನ್ನ ಕಾರ್ಯದರ್ಶಿ."

ಕಾರ್ಯದರ್ಶಿ! ನನ್ನ ಮುಖ ಉರಿಯಿತು ಕ್ಷಣಕಾಲ. ಆದರೆ ಹೌಡ್ಯುಡುಗಳ ನಡುವೆ ಚೇತರಿಸಿಕೊಂಡೆ. ಜೇಬುಗಳ್ಳ ಎನಿಸಿಕೊಳ್ಳು ವುದಕ್ಕಿಂತ ಕಾರ್ಯದರ್ಶಿ ಎಂದು ಕರೆಸಿಕೊಳ್ಳುವುದು ಮೇಲಾಗಿತ್ತಲ್ಲವೆ?

ಆ ಬಂಗಾಳಿ ಹೊರಟು ಹೋದ ಮೇಲೆ ಶ್ರೀಕಂಠನೆಂದ:

"ಈ ಕಂಟ್ರಾಕ್ಟು ದೊರಕ್ಸೋಕೆ ಅರ್ಧ ಲಕ್ಷ ಖರ್ಚಾಗುತ್ತೆ. ಆದರೆ ಆ ಮೇಲೆ ತೊಂದರೆ ಇರೋಲ್ಲ. ಯುದ್ಧ ಇರೋವಷ್ಟು ಕಾಲವೂ ಮಜಾ. ಏನಂತೀಯಾ ಕಾರ್ಯದರ್ಶಿ?"

ನಾನು ಮೆಚ್ಚುಗೆಯ ಮುಗುಳು ನಗು ಸೂಸಿದೆ.

ಶ್ರೀಕಂಠನಿಗೆ ಸ್ವಂತದ ವ್ಯಕ್ತಿತ್ವವಿಲ್ಲವೆಂದು ನಾನು ಭಾವಿಸಿದ್ದು ತಪ್ಪಾಗಿತ್ತು. ಆ ಬಾಲ್ಯದ ಸಹಪಾಠಿ ಬೆಳೆದು ಹೊಸ ವ್ಯಕ್ತಿಯಾಗಿದ್ದ. ಹಣ ಅವನಿಗೆ ಸಮಾಜದಲ್ಲಿ ಮನ್ನಣೆಯ ಸ್ಥಾನವನ್ನು ದೊರಕಿಸಿ ಕೊಟ್ಟಿತ್ತು. ಆತ್ಮ ವಿಶ್ವಾಸದಿಂದ ಅತ ವ್ಯವಹಾರ ನಡೆಸುತ್ತಿದ್ದ. ದರ್ಪದ ಠೀವಿಯಿಂದ ಇತರರೊಡನೆ ವರ್ತಿಸುತ್ತಿದ್ದ. ಮೂವತ್ತರ ಯುವಕನಾಗಿದ್ದರೇನಾಯಿತು? ಅವನ ಮಾತಿಗೆ ಬೆಲೆ ಇರುತಿತ್ತು. ಶ್ರೀಕಂಠನ ಮತ್ತು ಅವನ ಮಾವನ ಹೆಸರೆತ್ತಿದರೆ ಸಾಕು, ಸರಕಾರಿ ವೃತ್ತಗಳಲ್ಲಿ ಗೌರವ ಕಾಣಬರುತಿತ್ತು.

ರಾಜ್ಯ ಯಂತ್ರ ಮತ್ತು ಶ್ರೀಮಂತಿಕೆ.....

ಅದೊಂದು ಸಂಜೆ ಶ್ರೀಕಂಠ ನನ್ನನ್ನು ಕಂಡಾಗ, ಬಲವಾಗಿ ಕೈ ಹಿಡಿದು ಕುಲುಕಿ, ನನ್ನ ಬೆನ್ನು ತಟ್ಟಿ, ಹೇಳಿದ.

"ಏನೋಂತಿದ್ದೆ. ಭೇಷ್....ನಿನ್ನ ಸ್ನೇಹಿತನಾದ್ದು ಸಾರ್ಥಕ ವಾಯ್ತು."

"ಏನ್ಸಮಾಚಾರ?"

"ಐ ಜಿ ಪಿ ಫೋನ್ ಮಾಡಿದ್ರು ಕಣೋ."

"ನನ್ನ ಮುಖ ಕಪ್ಪಿಟ್ಟಿತು. ನನ್ನ ಹಿಂದೆಯೇ ಬಂದಿದ್ದ

ಶನೀಶ್ವರ. ಒಂದಲ್ಲ ಒಂದು ದಿನ ಶ್ರೀಕಂಠನಿಗೆ ನನ್ನ ಗತ ಜೀವನದ ಅರಿವಾಗುತ್ತದೆಂಬುದು ನನಗೆ ಗೊತ್ತಿತ್ತು. ಆದರೂ—

"ಏನೂ ಗಾಬರಿ ಬೀಳ್ಬೇಡ. ಆತ ನಮ್ಮನವೇ."

"ಏನಂತೆ ಅವರಿಗೆ ?"

"ನಿನ್ನ ಸಾಹಸದ ವಿಷಯ ಚುಟುಕಾಗಿ ವರದಿಕೊಟ್ಟೆ. ಅದನ್ನ ಕೇಳ್ತಾ ಇದ್ದರೆ ಥ್ರಿಲ್ ಆಯ್ತು."

"ಹುಂ. ಆ ಮೇಲೆ ?"

"ನೀನು ನನ್ನ ಕಾರ್ಯದರ್ಶೀಂತ ಹೇಳ್ದೆ. ತೆಪ್ಪಗಾದ."

"ಅಷ್ಟೇನೆ ?"

"ನಾನು ಹುಷಾರಾಗಿರ್ಬೇಕೂಂತ ಎಚ್ಚರಿಕೆ ಕೊಟ್ಟ !"

"ಹೌದು ಕಂಠಿ. ಬಹಳ ದಿವಸ್ದಿಂದ ನಾನೂ ನಿನಗೆ ಹೇಳ್ಬೇಕೂಂತಲೇ ಇದ್ದೆ. ನನ್ನ ವಿಷಯ ನೀನು ಯೋಚಿಸ್ಬೇಕಾದ್ದೇ."

"ಹುಚ್ಚನ ಹಾಗೆ ಆಡ್ಬೇಡ. ನಾನಿರೋವರೆಗೂ ಪೋಲೀಸರ್ನ ಮರೆತ್ಬಿಡು."

"ನಾನೇ ನಿನಗೇನಾದರೂ ಮೋಸ ಮಾಡಿದ್ರೆ ?"

"ಒಳ್ಳೇ ಜೋಕು. ಮಾಡು. ನೋಡೋಣ."

........ಆ ದಿನ ನನ್ನ ತಂದೆ ಹರಕು ಕಂಬಳಿ ಹೊದ್ದು ಬಂದು ಜಾಮೀನು ನಿಲ್ಲುವೆನೆಂದಿದ್ದ. ಆದರೆ ಇನ್ಸ್‌ಪೆಕ್ಟರ್ ಮರಿ ಸಾಹೇಬರು ನನ್ನನ್ನು ಬಿಟ್ಟುಕೊಟ್ಟಿರಲಿಲ್ಲ. ಈಗ ನಗರದ ಗಣ್ಯವ್ಯಕ್ತಿಯೊಬ್ಬರ ಆಶ್ವಾಸನೆ ಕೇಳಿ, ಸ್ವತಃ ಐ ಜಿ ಪಿ ಹಿರಿ ಸಾಹೇಬರೇ ತೃಪ್ತರಾಗಿದ್ದರು. ದೂರದಿಂದ ನೋಡಿದಾಗ ರಾಜ್ಯ ಯಂತ್ರ ಗಂಭೀರವಾಗಿ ಭೀತಿಕಾರಕವಾಗಿ ಕಾಣುತಿತ್ತು. ಆದರೆ ಹತ್ತಿರಬಂದಾಗ ? ಪರೀಕ್ಷಿಸಿದಾಗ ? ಎಷ್ಟೊಂದು ಸುಲಭವಾಗಿತ್ತು ಅದರ ಯಾಂತ್ರಿಕ ರಚನೆ !.... ಹತ್ತಿರ ಬರುವ ಭಾಗ್ಯ ಮಾತ್ರ ಎಲ್ಲರಿಗೂ ಇರಲಿಲ್ಲ, ಅಷ್ಟೆ.

ಶಾರದಾ, ಕುಮಾರ ಕಂಠೀರವನನ್ನು ಹೆತ್ತಳು. ಶ್ರೀಕಂಠ ಆ ದಿನ ಸಂತೋಷದಿಂದ ಮಿತಿಮೀರಿ ಕುಡಿದ. ತನಗೊಬ್ಬ ಮಗನನ್ನು

ಕೊಟ್ಟ ಶಾರದೆಯನ್ನು ಆತ ಆಗ ದೇವಿಯೆಂದು ಕರೆದ.

ಆದರೆ ಶಾರದಾ ಬೇಗನೆ ಮನೆಗೆ ಬರಲಿಲ್ಲ. ಮಗುವನ್ನು ನೋಡಿಕೊಳ್ಳುವ ಸಂಭ್ರಮದಲ್ಲಿ ಆಕೆ ಶ್ರೀಕಂಠನನ್ನು ಮರೆತಳು. ಅಥವಾ ಮಗುವನ್ನೆ ನೆಪವಾಗಿರಿಸಿ ಆವನನ್ನು ದೂರವಿಟ್ಟಳೇನೊ! ಎರಡು ಮೂರು ಸಾರೆ ನಾನು ಶ್ರೀಕಂಠನೊಡನೆ ಅವರ ಮಾವನ ಮನೆಗೆ ಹೋಗಿ, ಮಹಾರಾಣಿಗೂ ರಾಜಕುಮಾರನಿಗೂ ಗೌರವ ಸಲ್ಲಿಸಿ ಬಂದೆ. ಆಗ ಶಾರದಾ ನನ್ನನ್ನು ಕಂಡು ಮುಗಳ್ನಗುತಿದ್ದಳು. ಅದು ಭಾವನೆಗಳಿಗೆಲ್ಲ ಮುಖವಾಡವಾದ ಮುಗುಳ್ನಗು.

ಶ್ರೀಕಂಠನ ಪಾಲಿಗೆ ಮಗನ ಆಗಮನದ ಸಂಭ್ರಮ ಬಹಳ ದಿನ ಉಳಿಯಲಿಲ್ಲ. ನಾವಿಬ್ಬರೇ ಇದ್ದಾಗ ಪದೇ ಪದೇ ಶಾರದಾಳ ಮಾತು ಬರುತಿತ್ತು.

"ಚಂದ್ರೂ.......ನಾನು ಸ್ವಾರ್ಥಿ........ಒಪ್ಕೋತೀನಿ. ನಾವು ಗಂಡಸರೆಲ್ಲಾ ಹೀಗೆಯೊ ಏನೊ. ನಾನು ಶಾರದಾನ ಪ್ರೀತಿಸ್ತೀನಿ. ಅವಳೂ ನನ್ನ ಪ್ರೀತಿಸ್ತಾಳೆ. ಆದರೂ ಅದು ಸಾಲದು ಅನ್ನಿಸುತ್ತೆ.... ಏನಂತೀಯಾ?"

ಅಂಥ ಸಂದರ್ಭಗಳಲ್ಲಿ ನಾನು ಸುಮ್ಮನಿರ ಬಯಸುತ್ತಿದ್ದೆ.

"ಅಲ್ಲ ಚಂದ್ರೂ ...ಈ ಪ್ರೇಮ ಅಂತಾರಲ್ಲ, ಅದೇನು ಹೇಳು. ಓದಿ ತಿಳ್ದೋನು—ನಾಲ್ಕು ಊರು ನೋಡಿರೋನು—ನೀನೇ ಹೇಳಪ್ಪ ಸ್ವಲ್ಪ........ಪ್ರೇಮ ಮತ್ತು ಕಾಮ, ಅದೇನು ನಿಷಯ ಹೇಳ್ಕೋಡೋಣ .. ...."

"................"

"ಯಾಕೊ ಸುಮ್ನಿದೀಯ? ನಿನ್ನ ಈ ಮುಚ್ಚುಮರೆ ನನಗಾಗೊಲ್ಲ ನೋಡು."

....ಯಾವುದೋ ಥಿಯೇಟರಿನ ಬಳಿ ಕಾರು ನಿಂತಿತು. ಅದನ್ನು ಅಲ್ಲಿ ಬಿಟ್ಟು, ಶ್ರೀಕಂಠ ನನ್ನನ್ನು ಕರೆದುಕೊಂಡು ನೇರವಾದ ಬೀದಿಯಿಂದ ಸ್ವಲ್ಪ ದೂರ ನಡೆದು ಹೋದ.

"ಎಲ್ಲಿಗೆ?" ಎಂದೆ.

" ಬಾ, ಇಲ್ಲೊಬ್ಬರು ಸ್ನೇಹಿತರಿದ್ದಾರೆ. ಪರಿಚಯ ಮಾಡ್ಕೊಡ್ತೀನಿ."

" ಶ್ರೀಕಂಠನನ್ನು-ಅವನ ಜತೆಯಲ್ಲಿದ್ದುದರಿಂದ ನನ್ನನ್ನೂ—ಅಲ್ಲಿ ಆದರದಿಂದ ಕಂಡರು. ಅಲ್ಲಿದ್ದ ಒಬ್ಬನೆ ಯುವಕ ಹುಡುಗ " ಸಾರ್ ಸಾರ್ " ಎನ್ನುತ್ತ ಶ್ರೀಕಂಠನ ಹಿಂದೂ ಮುಂದೂ ಓಡಾಡುತಿದ್ದ.

ತಿಂಡಿ ಬಂತು; ಕುಡಿತ ಬಂತು; ಆ ಬಳಿಕ....

ಮನೆಯೊಡತಿಗೆ ಶ್ರೀಕಂಠ ಹೇಳಿದ:

" ಅಮ್ಮಾ, ಈತ ನನ್ನ ಪ್ರಾಣ ಸ್ನೇಹಿತ. ಯಾರಾದರೂ ಒಳ್ಳೆಯವರ ಪರಿಚಯ ಮಾಡಿಸ್ಕೊಡಿ .. ಬರ್‍ತೀನಪ್ಪ ಚಂದ್ರೂ.... ಆ ಮೇಲೆ ಸಿಗ್ತೀನಿ '..."

ಅಷ್ಟು ಹೇಳಿ ಅವನು ಮಹಡಿಯ ಮೆಟ್ಟಲೇರಿ ಹೋದ.

...ಭ್ರಮೆಗೊಂಡು ಅಂತರ್ಮುಖಿಯಾಗಿ ಕುಳಿತಿದ್ದ ನನ್ನ ಕೊರಳನ್ನು ಮೃದುವಾದ ಬಾಹುಗಳೆರಡು ಬಳಸಿದುವು. ನಾನು ಎದ್ದು ವಿಧೇಯನಾಗಿ ಅವಳನ್ನು ಹಿಂಬಾಲಿಸಿದೆ........ಅಚ್ಚುಕಟ್ಟಾಗಿದ್ದ ಶಯ್ಯಾಗೃಹ. ಗೋಡೆಯ ಮೇಲೆ ಪಾಶ್ಚಾತ್ಯ ನಟಿಯರ ಅಂಗವಿನ್ಯಾಸಗಳ ಭಾವಚಿತ್ರಗಳು.

ಆಕೆ ಆಹ್ವಾನದ ನೋಟದೊಡನೆ ನನ್ನೆದುರು ನಿಂತಿದ್ದಳು—ಹೆಣ್ಣು. ನೀಳವಾದ ನನ್ನ ಕ್ರಾಪನ್ನು ಬದಿಗೆ ಸರಿಸಿ, ಒಲಿಯುವ ದೃಷ್ಟಿಯಿಂದ, ಅವಳಿಗೆಂದೆ:

" ಇಲ್ಲಿ ಬಾ."

ಆಕೆ ಬಂದಳು. ನಾನವಳನ್ನು ಬರಸೆಳೆದು ಅಪ್ಪಿಕೊಂಡೆ. ದೀರ್ಘ ಕಾಲ ಪ್ರೇಮದ ಕಾಹಿಲೆಯಿಂದ ನಾನು ನರಳಿದ್ದಾಗ, ಚುಂಬನ ನನಗೆ ದೊರೆತಿರಲಿಲ್ಲ. ಇಲ್ಲಿ ಗುರುತು ಪರಿಚಯವಿಲ್ಲದ ಹೆಣ್ಣು ನನಗದನ್ನು ಕೊಟ್ಟಳು—ನನ್ನನ್ನು ಮೆಚ್ಚಿಸುವ ಆತುರದಿಂದ ಬಗೆ ಬಗೆಯಾಗಿ ಕೊಟ್ಟಳು.

ಹೃದಯದಲ್ಲಿ ಎಲ್ಲಿಯೋ ಒಂದೆಡೆ ನನಗೆ ನೋವಾಗುತಿತ್ತು. ಯಾವುದೋ ಕೀಲಿ ಕಳಚಿಕೊಂಡಿತ್ತು. ದೇಹದ ಚಲನ ವಲನಗಳು

ನನ್ನ ಹಿಡಿತದಲ್ಲಿರಲಿಲ್ಲ.

ನಾನು ವನಜಳನ್ನು ಸ್ಮರಿಸಲಿಲ್ಲ. ಯಾವ ಹುಡುಗಿಯನ್ನೂ ಸ್ಮರಿಸಲಿಲ್ಲ. ಆ ಹುಡುಗಿಯ ಮುಖವನ್ನೂ ನೆನಪಿಡಲಿಲ್ಲ. ಅಥವಾ ನಾನು ಕಂಡಿದ್ದ ಎಲ್ಲ ಹುಡುಗಿಯರ ಯುವತಿಯರ ಪ್ರತಿಮೂರ್ತಿ ಅವಳೆಂದು ಭ್ರಮಿಸಿದೆನೇನೋ ......

ಆ ಹೆಣ್ಣು. ಯಾರು ಆಕೆ? ಆ ಜೀವಕ್ಕೆ ಹೃದಯವಿತ್ತೋ ಇಲ್ಲವೋ. ಹೋಗಲಿ, ನನಗಾದರೂ ಹೃದಯವಿತ್ತೆ?........

....ಮತ್ತೆ ಉಡಿ ಬಿಗಿದಕೊಂಡು, ಹಾಸಿಗೆಯ ಮೇಲೊರಗಿ, ಅರೆತೆರೆದ ಕಣ್ಣುಗಳಿಂದ ಅವಳು ನನ್ನನ್ನೆ ನೋಡುತಿದ್ದಳು.

"ನಾಳೇನೂ ಬರ್‍ತೀರಾ?"

"ಏನು?"

ಮೌನ....ಆ ಮೇಲೆ ಅಳು....

"ಯಾಕೆ—ಏನಾಯ್ತು?"

"ನನ್ನಿಂದ ತೃಪ್ತಿಯಾಗಲಿಲ್ಲವೆ ನಿಮಗೆ?"

"ಯಾರು ಹಾಗೆಂದರು?"

"ನೀವು ನಾಳೇನೂ ಬರದೇ ಇದ್ದರೆ, ಈ ಮನೆಯವರು ನನ ಇನ್ನು ಕರೆಯೋಲ್ಲ. ಕರೆದರೂ ಕೈ ಬಿಗಿ ಹಿಡೀತಾರೆ."

ಇದು ದುಡ್ಡಿನ ಲೆಕ್ಕಾಚಾರ. ಮತ್ತೊಂದು ಪ್ರಶ್ನೆ ಕೇಳಿದೆ ನೆಂದರೆ ಗೋಳಿನ ಕತೆ ಹೊರ ಬರುವುದೇನೋ. ಹದಿನೆಂಟು—ಇಪ್ಪತ್ತರ ಆ ವಯಸ್ಸಿನಲ್ಲಿ ಆಕೆ ಅಲ್ಲಿಗೆ ಬರಲೇಬೇಕಾಗಿ ಬಂದ ಅನಿವಾರ್ಯತೆ....ಒಡೆದುಹೋದ ಕನಸುಗಳು... ಆ ಬಳಿಕ—

ಸ್ವಪ್ನಾವಸ್ಥೆಯಿಂದ ಜಾಗೃತಾವಸ್ಥೆಗೆ ನಾನು ಇಳಿದು ಬರುತಿದ್ದೆ. ಆಗಬಾರದುದೇನೋ ಆಯಿತೆನ್ನುವಂತೆ ನನ್ನೆದೆ ಡವಡವನೆ ಹೊಡೆದು ಕೊಳ್ಳುತಿತ್ತು. ನಾನೆದ್ದು, ಕೋಟನ್ನೆತ್ತಿಕೊಂಡು ಅದರ ಒಳ ಜೇಬಿನಲ್ಲಿದ್ದುದನ್ನೆಲ್ಲ ಹೊರತೆಗೆದೆ. ಹತ್ತು ರೂಪಾಯಿಯ ಐದು ನೋಟುಗಳಿದ್ದುವು.

"ತಗೋ," ಎಂದೆ.

ನಂಬಿಕೆ ಹುಟ್ಟದವಳಂತೆ ನನ್ನನ್ನೆ ಅವಳು ನೋಡಿದಳು.

"ತಗೋ ಎಂದೆ. ಕೇಳಿಸ್ಲಿಲ್ವಾ?"

ಅವಳು ಎದ್ದು ಕುಳಿತಳು.

"ನಾನು ಕಣ್ಣೀರು ಹಾಕ್ದೆ ಅಂತಾನಾ?"

ಬಿಗಿಹಿಡಿದಿದ್ದ ಅವಳ ಅಂಗೈ ತೆರೆದು ಆ ಹಣವಿಟ್ಟು, ಆಕೆಯ ಮುಂಗುರುಳನ್ನು ನೇವರಿಸಿದೆ.

"ಇದು ನಿನ್ನ ಹಣ. ತಿಳೀತೆ?"

"ಹೊರಡೋ ಹೊತ್ತಿಗೆ ಮನೆಯುವರು ಅರ್ಧ ಕಸಕೋತಾರೆ."

ಮತ್ತೆ ಸುಲಿಗೆಯ ಮಾತು. ನನಗೆ ಅದು ಅಸಹ್ಯವೆನಿಸಿತು. ಉಸಿರು ಕಟ್ಟಿದ ಹಾಗಾಗುತಿತ್ತು ನನಗೆ. ಬಹಳ ಹೊತ್ತು ಅಲ್ಲಿರಲಾರದೆ ಹೊರಟು ನಿಂತೆ. ಆಕೆ ನನ್ನೆದೆಯಲ್ಲಿ ಮುಖವಿಟ್ಟಳು. ಕನಿಕರದಿಂದ ನಾನು ಅವಳನ್ನು ಚುಂಬಿಸಿದೆ.

ಸ್ವಲ್ಪ ಹೊತ್ತಿನಲ್ಲೇ ಶ್ರೀಕಂಠನೂ ಬಂದ.

"ಹೊರಡೋಣ್ವೇನೋ ದೊರೆ?"

"ಹೂಂ."

ಥಿಯೇಟರಿಗೆ ಬಂದು ಸ್ವಲ್ಪ ಹೊತ್ತು ಚಿತ್ರ ನೋಡಿದೆವು. ನಡುವೆ, ತಪ್ಪೊಪ್ಪಿಕೊಳ್ಳುವವನ ಹಾಗೆ, ಶ್ರೀಕಂಠನೆಂದ.

"ಇದು ಆಗಾಗ್ಗೆ ನಾನು ಬಂದು ಹೋಗೋ ಮನೆ. ಯಾವತ್ತೇ ನಿನಗೆ ಹೇಳ್ಬೇಕೂಂತಿದ್ದೆ. ಅನುಭವಿಯಾದ ನೀನೇ ಮಾತಾಡ್ತೀ ಯಾಂತ ನಂಬಿಕೆ ಇತ್ತು. ಬೊಂಬಾಯಿ ಗಿಂಬಾಯಿನಾಲಿ ಮಜಾ ಮಾಡ್ತೋನು.......ಆದರೆ ನೀನೊ-ಮಹಾ ರಹಸ್ಯಮಯಿ....ನಿನಗೆ ಮೆಚ್ಕೆ ಆಯ್ತೋ ಇಲ್ಲವೋ....ಕರಕೊಂಡು ಬಂದೆ ಅಂತೂ...."

"ಥ್ಯಾಂಕ್ಸ್ ಕೊಡ್ಲೇನು?"

"ಅಂಥ ಔದಾರ್ಯ ನಿನಗೆಲ್ಬಂತು?"

ಪ್ರಯೋಜನವಿರಲಿಲ್ಲ—ನಾನು ಹೆಣ್ಣಿನ ಸಂಗಮಾಡಿದುದು ಅದೇ ಮೊದಲೆಂದು ಅವನೊಡನೆ ಹೇಳುವುದರಿಂದ ಪ್ರಯೋಜನವಿರಲಿಲ್ಲ. ಅವನ ಮಾತಿಗೆ ಪ್ರತಿಯಾಗಿ ನಾನು ನಕ್ಕು, ಸಿಗರೇಟು

ಹಚ್ಚಿದೆ.

ಸ್ವಲ್ಪ ಹೊತ್ತಾದಮೇಲೆ, ಚಲಚ್ಚಿತ್ರದ ಆದರ್ಶಪ್ರಣಯಿಗಳನ್ನು ತೆರೆಯ ಮೇಲೆಯೆ, ಅವರ ಸಂಕಟಗಳ ನಡುವೆ ಬಿಟ್ಟು, ನಾವು ಮನೆಗೆ ಹೊರಟೆವು.

ಮನಸ್ಸು ಅಳುಕುತ್ತಿದೆ. ಏನೆಂದು ಬರೆಯಲಿ? ನನ್ನ ಲೈಂಗಿಕ ಜೀವನದ ಬಗ್ಗೆ ಏನೆಂದು ಬರೆಯಲಿ? ಅದನ್ನು ಮುಚ್ಚು ಮರೆಯಿಲ್ಲದೆ ಬರೆದು ನಾನು 'ಮಹಾತ್ಮ' ತನ ಗಳಿಸಿಕೊಳ್ಳಬೇಕಾದ್ದಿಲ್ಲ. ಅದು ನನ್ನಿಂದ ಸಾಧ್ಯವೂ ಇಲ್ಲ.

ನಿಜ ಸಂಗತಿಯೆಂದರೆ, ಯಾವನೇ ವ್ಯಕ್ತಿ—ಗಂಡಾಗಲಿ, ಹೆಣ್ಣಾಗಲಿ—ತನ್ನ ಲೈಂಗಿಕ ಜೀವನದ ಬಗ್ಗೆ ಸತ್ಯನಿಷ್ಠೆಯಿಂದ ಬರೆಯಬಲ್ಲನೆಂದು ನಾನು ನಂಬುವುದಿಲ್ಲ. ಯಾವಾಗಲೂ ಒಂದು ತೂಕ ಕಡಿಮೆ ಇಲ್ಲವೆ ಒಂದು ತೂಕ ಹೆಚ್ಚು....ಹೆಚ್ಚೆಂದರೆ, ಸುಳ್ಳಿನ ಆರಡಿ ನೀರಿನಲ್ಲಿ ಸತ್ಯದ ಒಂದಿಷ್ಟು ಬೆಣ್ಣೆ ತೇಲಬಹುದು, ಅಷ್ಟೆ.

ವನಜಳನ್ನು—ಪ್ರೇಮದ ಪ್ರಕರಣವನ್ನು—ಮರೆಯಲು, ನಾನು ದೊಡ್ಡ ಬೆಲೆಯನ್ನೇ ತೆತ್ತಹಾಗಾಯಿತು: ಮೊದಲು ಕುಡಿತ, ಬಳಿಕ ಹೆಣ್ಣು.

ನೈತಿಕ ಅಧಃಪತನದ ಜಾರುಗುಂಡಿಯಲ್ಲಿ ನಾನು ಕೆಳಕ್ಕೆ ಇಳಿಯುತ್ತ ಹೋದೆ—ಎಂದು ಒಂದೇ ಮಾತಿನಲ್ಲಿ ಹೇಳಿ ಮುಗಿಸಲೆ?

ಮಾರನೆ ದಿನವೂ ಸಂಜೆ ಶ್ರೀಕಂಠ ಕೇಳಿದ.

"ಏನಪ್ಪಾ ಚಂದ್ರೂ? ಹೇಗೋಣವೊ?"

ಆದರೆ ನನ್ನ ಉತ್ತರ!

"ನನ್ನದೊಂದು ಕೆಟ್ಟ ಅಭ್ಯಾಸ ಕಂಠಿ. ಒಮ್ಮೆ ನೋಡಿದ್ಮೇಲೆ ತಿರುಗಿ ಅದೇ ಹೆಣ್ಣಿನ ಮುಖ ನಾನು ನೋಡೋದಿಲ್ಲ."

"ಊಂ?!"

"ಅದೊಂದು ಪ್ರತಿಜ್ಞೆ ಇದ್ದಹಾಗೆ. ಅದಕ್ಕೇ ನಾನು ಜಾಸ್ತಿ ಹೋಗೋದೇ ಇಲ್ಲ."

ಕ್ಷಣ ಕಾಲ ಶ್ರೀಕಂಠ ಹುಬ್ಬು ಗಂಟಿಕ್ಕಿದ. ಆಮೇಲೆ ಮುಖ ಸಡಿಲಿಸಿ ನಕ್ಕು, "ನಿನ್ನಿಷ್ಟ" ಎಂದ.

ಬಹಳ ದಿನಗಳ ಮೇಲೆ ಅವನೇ ಆ ವಿಷಯವೆತ್ತಿದ.

"ನಿನಗೋಸ್ಕರ ಏರ್ಪಾಟು ಮಾಡಿದೀನಪ್ಪ. ನಾಳೆ ಬೇರೆ ಮನೆ ತೋರಿಸ್ತೀನಿ. ನೀನು ಬೇಕು ಅಂದಾಗ ಹೊಸಬರ್‍ನ ಅಲ್ಲಿಗೆ ಕರಸ್ತಾರೆ.''

ಅದು ನಾನಿಟ್ಟ ಇನ್ನೊಂದು ಹೆಜ್ಜೆ. ಮಾನವ ಜೀವನದ ಕಟ್ಟು ಪಾಡುಗಳನ್ನು ಬಿಟ್ಟು ಸ್ವಲ್ಪ ಹೊತ್ತು ಮೃಗವಾಗುವುದು. ಬಳಿಕ ಅದನ್ನು ಸ್ಮರಣೆಯಿಂದ ತೊಡೆದು ಹಾಕುವುದು....

ಹಣದ ಏಣಿಯಲ್ಲಿ ಶ್ರೀಕಂಠ ಮೇಲಕ್ಕೇರುತಿದ್ದ. ಮಿಲಿಟರಿ ಗಾಗಿ ದೊರಗು ಬಟ್ಟೆ ತಯಾರಿಸುವ ಆರ್ಡರು ದೊರಕಿಸಿಕೊಂಡ ಆತನ ಮಾವ, ಅಳಿಯನಿಗಾಗಿ ಸಣ್ಣ ಬಟ್ಟೆ—ಕಾರ್ಖಾನೆಯೊಂದನ್ನು ಸಂಪಾದಿಸಿಕೊಟ್ಟರು. ಹಿಂದಿನ ಯಜಮಾನ ಸಾಲಮಾಡಿದ್ದ; ಯಂತ್ರಗಳು ಸವೆದು ಹೋಗಿದ್ದುವು. ಇವರು ನಗದು ಹಣ ತೆತ್ತು, ಕಾರ್ಖಾನೆಯನ್ನು ಪಡೆದರು.

ಸವೆದು ಹೋಗಿದ್ದ ಯಂತ್ರಗಳು ದುರಸ್ತಿಯಾದುವು. ಒಟ್ಟು ಸಾವಿರದ್ದೈನೂರು ಜನ ಮೂರು ಪಾಳಿಗಳಲ್ಲಿ ದುಡಿದರು....ಇಲ್ಲಿಂದ ಬಟ್ಟೆಯ ಬೇಲುಗಳು ಹೋದಂತೆ, ಅಲ್ಲಿಂದ ನೋಟಿನ ಕಟ್ಟುಗಳು ಬಂದುವು.

ಒಂದು ಕಾಲದಲ್ಲಿ, ಹೊಗೆಯುಗುಳುತಿದ್ದ ಬಟ್ಟೆ ಕಾರ್ಖಾನೆ ಯಲ್ಲಿ ಅರಳೆ ಹಿಂಜುವ ಕೆಲಸವಿತ್ತು ನನ್ನ ತಂದೆಗೆ. ಈಗ ಅಂಥ ದೊಂದು ಕಾರ್ಖಾನೆಯ ಒಡೆಯನ ಆಪ್ತ ಸಚಿವ ನಾನು.

....ಅಜ್ಜಿಯ ಮನೆಯನ್ನು ನಾನು ಎಂಟು ರೂಪಾಯಿ ಬಾಡಿಗೆಗೆ ಬೇರೆಯವರಿಗೆ ಕೊಟ್ಟೆ.

ನನಗೋಸ್ಕರ, ಒಂದು ಹೋಟೆಲಿನ ಬಳಿಯಲ್ಲೇ, ಹೆಚ್ಚು ಅನುಕೂಲತೆಗಳಿದ್ದ ಪುಟ್ಟ ಮನೆಯೊಂದನ್ನು, ಬಾಡಿಗೆಗೆ ಹಿಡಿದೆ.

ಶಾರದಾ, ಮಗುವಿನೊಡನೆ ಗಂಡನ ಮನೆಗೆ ಬಂದಳು.

—ಇವರಿಬ್ಬರ ಆಗಮನದಿಂದ ಶ್ರೀಕಂಠನ ಜೀವನ ಕ್ರಮ ಸ್ವಲ್ಪ ಅಸ್ತವ್ಯಸ್ತವಾದಂತೆ ತೋರಿತು. ಹಾಗೆ ತೋರಿದುದು ಸ್ವಲ್ಪ ದಿನ ಮಾತ್ರ. ಹಲವು ಸಂಜೆಗಳು ಮಿಲಿಟರಿ ಕ್ಯಾಂಪಿನವರ ಸಹವಾಸದಲ್ಲಿ ಕಳೆದು ಹೋಗುತಿದ್ದುವು. ರಾತ್ರಿಗಳಲ್ಲೆಲ್ಲಾ ಹಲವೊಮ್ಮೆ ಕಾರಖಾನೆಯ ನೆಪ ಹೇಳಿ ಶ್ರೀಕಂಠ ಹೊರಗೇ ಉಳಿಯುತಿದ್ದ.

ಮೊದಲು ಕೆಲವೊಮ್ಮೆ ಗಂಡನ ತಿರುಗಾಟವನ್ನು ಶಾರದಾ ನಿರೀಕ್ಷಿಸಿದ್ದುಂಟು. ರಾತ್ರೆ ಹೊತ್ತು ಗಂಡನಿಗಾಗಿ ಫ್ಯಾಕ್ಟರಿಗೆ ಫೋನ್ ಮಾಡಿದ್ದುಂಟು. ಹಾಗೆ ಮಾಡಿದುದು ಕೆಲವು ದಿನ ಮಾತ್ರ....ಆ ಮೇಲೆ ಅವಳಿಗೆ ಬಿಡುವಿರಲಿಲ್ಲ. ದಾದಿಯ ಕೈಯಲ್ಲಿ ಮಗುವನ್ನು ಬಿಟ್ಟು ಶಾರದಾ ದಿನವೂ ಲೇಡೀಸ್ ಕ್ಲಬ್ಬಿಗೆ ಹೋದಳು. ಯುದ್ಧ ರಂಗದಲ್ಲಿರುವ ಹುಡುಗರಿಗಾಗಿ ಸ್ವೆಟರ್-ಕಾಲುಚೀಲ ಹೆಣೆಯುವ ಪರೋಪಕಾರಿ ಸ್ತ್ರೀಯರ ಸಮಿತಿಗೆ ಆಕೆ ಅಧ್ಯಕ್ಷೆಯಾದಳು.

"ನಮ್ಮ ಶಾರದಾ—" ಎಂದ ಶ್ರೀಕಂಠ, ಒಮ್ಮೆ.

"ಏನು ?"

"ಮಿಲಿಟರಿ ವೃತ್ತದಲ್ಲಿ ಎಲ್ಲರ ಮೆಚ್ಚಿಗೆ ಪಡೆದಿದ್ದಾಳೆ."

ಅಸ್ವಾಭಾವಿಕವಾದ ನಗು ಮುಗಿದಮೇಲೆ ಮತ್ತೆ ಮಾತು :

"ಒಳ್ಳೇದೇ ಆಯ್ತೂಂತಿಟ್ಕೊ. ಲಕ್ಷಾಧೀಶ್ವರನ ಹೆಂಡತಿ ಆಧುನಿಕಳಾಗಿರ್ಬೇಕು. ಹಾಗಿದ್ದರೇನೇ ನನಗೆ ಲಾಭ.

ನಾನು ಸಿಗರೇಟಿಗೆ ಕೈ ಹಾಕಿದೆ.

"ಹಚ್ಚಬೇಡ ಕಣೋ—ಜಾಸ್ತಿ ಭೈರಿಗೆ ಕೊರೆಯೊಲ್ಲ........ ಒಂದೇ ಪ್ರಶ್ನೆ........ನಾನು ಶಾರದಾ ಮೇಲೆ ದೂರು ಹೊರಿಸಿ, ಬೇರೆ ಹೆಣ್ಣಿನ ಕಡೆ ಹೋಗ್ತೀನಿ. ಶಾರದಾ, ನನ್ಮೇಲೆ ದೂರು ಹಾಕಿ ಬೇರೆ ಗಂಡಿನ ಕಡೆಗೆ ಹೋದರೆ? ಆಕೆ ಹಾಗ್ಮಾಡೋದು ತಪ್ಪು ಅನ್ನೋಣವೆ ?....ಏನಂತೀಯಾ ?"

"ಕಂಠಿ, ಇದೆಲ್ಲಾ ಯೋಚಿಸಿ ಯಾಕ್ಸುಮ್ನೆ ತಲೆ ಕೆಡಿಸ್ಕೊಳ್ತೀಯೊ ?"

"ಯೋಚಿಸ್ಲೇ ಬಾರ್ದು ಅಂತೀಯೇನು? ಸರಿ ಹಾಗಾದರೆ."

ಆದರೆ ಎಂದಾದರೊಮ್ಮೆ ನಾನು ಯೋಚಿಸಬೇಕಾಗುತಿತ್ತು. ಅಂಥ ಕೆಲವು ಸನ್ನಿವೇಶಗಳು ಒದಗಿ ಬರುತ್ತಿದ್ದುವು.

ಅದೊಂದು ಸನ್ನಿವೇಶ—!

ನಾಲ್ವತ್ತೆರಡರ ಚಳವಳಿ ಆರಂಭವಾಗಿ ಆರೆಂಟು ತಿಂಗಳುಗಳಾಗಿದ್ದುವು. ದೇಶದ ಹಲವೆಡೆಗಳಲ್ಲಿ ಅರಾಜಕತೆ ನೆಲೆಸಿತ್ತು. ಹಿಂದೆಯಾಗಿದ್ದರೆ ನನಗೆ ನಿಮಿಷವೂ ಬಿಡುವೇ ಇರುತಿರಲಿಲ್ಲ. ಹನ್ನೆರಡು ವರ್ಷಗಳ ಹಿಂದೆ ಬೊಂಬಾಯಿಯ ಚೌಪಾಟಿಯಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಅಮ್ಮಾರನೊಡನೆ ನೋಡಿದ್ದೆ. ದೇಶಪ್ರೇಮಿ ಜೇಬುಗಳ್ಳರಾಗಿ ನಾವು ಕಂಡಿದ್ದ ಲಾಕಪ್ಪು....ಆದರೆ ಈ ಚಳವಳಿ ಭಿನ್ನವಾಗಿತ್ತು. ಅತ್ಯಂತ ಸಮರ್ಥನಾದ ರಾಜಕಾರಣಿಯಂತೆ ನನಗೆ ಯಾವಾಗಲೂ ಕಾಣಿಸುತಿದ್ದ ಗಾಂಧೀಜಿ ಕರೆಕೊಟ್ಟಿದ್ದರು: "ಮಾಡು ಇಲ್ಲವೆ ಮಡಿ!" ತಂತಿಗಳು ಕತ್ತರಿಸಿ ಬೀಳುತಿದ್ದುವು; ಮಿಲಿಟರಿಗೆ ಸಾಮಗ್ರಿ ಒಯ್ಯುವ ರೈಲುಗಳು ಉರುಳಿ ಹೋಗುತಿದ್ದುವು; ಈ ದೇಶದಲ್ಲಿ ಸುಭದ್ರವಾಗಿದ್ದಂತೆ ತೋರಿದ ವಿದೇಶೀಯ ರಾಜ್ಯವ್ಯವಸ್ಥೆಯ ಕಾಂಡವನ್ನೆ ಕೋಟಿ ಕೈಗಳು ಹಿಡಿದು ಭೀಮಶಕ್ತಿಯಿಂದ ಅಲುಗಿಸುತಿದ್ದುವು; ಜನ ಮಾಡುತಿದ್ದರು, ಇಲ್ಲವೆ ಮಡಿಯುತಿದ್ದರು. ಆಗಲೊಮ್ಮೆ—

ಮಳೆ ಧೋ ಎಂದು ಸುರಿಯುತಿದ್ದಾಗಲೆ ಶ್ರೀಕಂಠ ಕಾರು ಓಡಿಸಿಕೊಂಡುಬಂದ. ಅವನೊಡನೆ ಗಾತ್ರದ ಒಬ್ಬ ವ್ಯಕ್ತಿಯೂ ಕೆಳಕ್ಕಿಳಿದು, ನನ್ನ ಮನೆಯನ್ನು ಹೊಕ್ಕಿತು.

"ಚಂದ್ರೂ....ಇವರು ನಮ್ಮ ಮಾವನ ಸ್ನೇಹಿತರು....ಇವರು ಇರೋಕೆ ಮಾವ ಬೇರೆ ಕಡೆ ಏರ್ಪಾಟು ಮಾಡ್ತಾರೆ. ಆದರೆ ಅವರೆಗೆ —ಎರಡು ಮೂರು ದಿವಸ—ಇಲ್ಲೇ ಇರಿಸ್ಕೊ. ಈ ವಿಷಯ ಯಾರಿಗೂ ತಿಳೀಬಾರ್ದು."

ಆ ವ್ಯಕ್ತಿಯನ್ನು ಸೂಕ್ಷ್ಮವಾಗಿ ನೋಡಿದೆ. ಆ ಉಣ್ಣೆಯ ಪೋಷಾಕಿನೊಳಗೆ ಯಾರೋ ದೇಶಭಕ್ತರಿರಬೇಕು ಎನ್ನಿಸಿತು. ಆ

ಮುಖ ಅಷ್ಟು ಅಪರಿಚಿತವಾಗಿರಲಿಲ್ಲ. ಆತ ಸಾರ್ವಜನಿಕ ಭಾಷಣ ಜಡಿಯುತಿದ್ದಾಗ, ನಾನೆಲ್ಲಿಯೋ ಆತನನ್ನು ನೋಡಿದ ಹಾಗಿತ್ತು.

ಹೊರಬರುತ್ತ, "ಚಳವಳಿಯವರೇನೊ?" ಎಂದು ಶ್ರೀಕಂಠ ನನ್ನು ಕೇಳಿದೆ.

"ಹೂನಪ್ಪಾ. ಹುಷಾರಾಗಿ ನೊಡ್ಕೊ. ಭಾರಿ ಕುಳ."

ನನ್ನ ಕುತೂಹಲ ಕೆರಳಿದರೂ ಸುಮ್ಮನಾದೆ........ಆ ವ್ಯಕ್ತಿಗಾದರೋ ಬಾರಿಬಾರಿಗೂ ಊಟ ಉಪಚಾರಗಳ ಅವಶ್ಯತೆ ಇತ್ತು. ನಾನು ಮೈ ಸರಿ ಇಲ್ಲದವನಂತೆ ನಟಿಸಿ, ಹೋಟೆಲಿನಿಂದ ನನಗಾಗಿ ತಿಂಡಿ—ಊಟ ತರಿಸುತಿದ್ದೆ. ಒಳಗಿನ ಕೊಠಡಿಯಲ್ಲಿದ್ದ ದೇಶಭಕ್ತರು ಕೈಬಾಯಿಗೆ ಕೆಲಸ ಕೊಡುತಿದ್ದರು ......

ಹೊರಗಾದರೋ ಘೋಷ ಕೇಳಿಸುತಿತ್ತು: "ಮಾಡು ಇಲ್ಲವೆ ಮಡಿ!" ಯಾರಾದರೂ ವಿಸ್ಮಯಗೊಳ್ಳುವಂತೆ ಜನ ಸಾಮಾನ್ಯರು ಹೋರಾಡುತ್ತಿದ್ದರು. ಸ್ವಾತಂತ್ರ್ಯದ ಸ್ವರ್ಣ ಭೂಮಿ ಸೇರಲೆಂದು, ಮುಗ್ಗರಿಸಿ ಬಿದ್ದರೂ ಎದ್ದು, ಜನಕೋಟಿ ಓಡುತಿತ್ತು ನನಗೆ ಅದು ಅರ್ಥವಾಗಲಿಲ್ಲ. ಜನ ಜೀವನದಿಂದ ನಾನು ಬಲು ದೂರ ಸಾಗಿದ್ದ ರಿಂದಲೋ ಏನೋ, ನನಗದು ಅರ್ಥವಾಗಲಿಲ್ಲ.

ಆದರೆ ಶ್ರೀಕಂಠನಿಗೆ? ಅವರ ಮಾವನಿಗೆ? ಅವರ ಮನೆಯಲ್ಲಿ ದೇಶಪ್ರೇಮವಿತ್ತೆಂದು ನನಗೆ ಆ ವರೆಗೂ ಗೊತ್ತಿರಲಿಲ್ಲ ದಿವಾನರ ಬೀಗರಂತೆ ವರ್ತಿಸುತ್ತಿದ್ದ ಇವರು, ತ್ರಿರಂಗಿ ಬಾವುಟವನ್ನು ಮುಟ್ಟ ಬಯಸಿದ್ದುಂಟೆ? ಅಥವಾ—

ನನ್ನ ಸಂದೇಹವೇ ಸರಿಯಾಗಿತ್ತು. ಮೂರನೆ ದಿನ ಶ್ರೀಕಂಠ ಹೇಳಿದ:

"ಶಾರದಾ ತಂದೆ ಸಾಮಾನ್ಯ ವ್ಯಕ್ತಿ ಅಲ್ಲ ಕಣೋ. ಹ್ಯಾಗಿದೆ ಧೋರಣೆ? ಹೊರಗೆ ನಾವು ನಿಷ್ಠಾವಂತರಾದ ರಾಜಭಕ್ತರು. ಯುದ್ಧ ನಿಧಿ ಸಮಿತೀಲೆಲ್ಲಾ ನಾವೇ ಇರೋದು. ಇತ್ತ ಗುಪ್ತವಾಗಿ ನಾವು ನೆರವಾಗೋದು ರಾಜದ್ರೋಹಿಗಳಿಗೆ!"

"ಬಹಳ ಕಾಲದಿಂದಲೂ ಹೀಗೇ ನಡೀತಾ ಇದೆಯೇನು?"

"ಛೆ! ಛೆ! ವೊನ್ನೆವರೆಗೂ ಕಾಂಗ್ರೆಸು ಕಂಡರಾಗ್ತಿರ್ಲಿಲ್ಲ ಮಾ: ನಿಗೆ. ಇನ್ನು ಹ್ಯಾಗೆ ಹೇಳೋಕಾಗತ್ತೆ? ನಾಳೆ ಏನಾಗುತ್ತೋ ಯಾ: ಬಲ್ಲರು? ಈಗಿನಿಂದ್ಲೇ ಹುಷಾರಾಗಿರೋದು ಮೇಲಲ್ವಾ?"

"ಚೆನ್ನಾಗಿದೆ ರಾಜಕಾರಣ!"

"ಪಾಲಿಟಿಕ್ಸ್ ಅನ್ನೋದೇ ಅದಕ್ಕೆ ಚಂದ್ರು. ನಮ್ಮ ಮಾ: ಮಾಡ್ತಿರೋದೇ ಸರಿ ಅನಿಸುತ್ತೆ ನನಗೂ........ಏನಂತೀಯಾ?"

"ತಲೆದೂಗ್ದೆ."

"ಆತ ಹ್ಯಾಗಿದಾನೆ—ಭೂಪತಿ?"

"ಸದ್ಯಃ ಬೇರೆಲ್ಲಿಗಾದರೂ ಸಾಗ್ಸಪ್ಪಾ........ಅವನ ಸಹವಾ: ಇನ್ನು ಹೆಚ್ಚು ದಿವ್ಸ ಮಾಡೋಕಾಗಲ್ಲ. ಎಂಥ ಬೂರ್! ಎಂ: ಬೋರ್! ಇನ್ನೂ ನಾಲ್ಕು ದಿವಸ ನಮ್ಮಲ್ಲೇ ಅವನಿದ್ರಾಂತಂದ್ರೆ ಅವನ ಕತ್ತು ಹಿಸಕ್ತೀನಿ ಅಷ್ಟೆ. ದೇಶಭಕ್ತರ ಬಲಿದಾನ—ಅಂಥ ಪೇಪರ್ನೋರು ಪ್ರಿಂಟು ಮಾಡ್ತಾರೆ!"

"ಹುಚ್ಚಪ್ಪಾ, ಹಾಗೇನಾದರೂ ಮಾಡಿ ನನ್ನ ಕುತ್ಗೆಗೆ ತಂದಿಟ್ಟೀಯೆ!"

... ....ನಾವು ಊರ ಹೊರಗೆ ಹೋದೆವು. ಇಲ್ಲದ ಬಿಡುವನ್ನು ದೊರಕಿಸಿಕೊಂಡು ಶ್ರೀಕಂಠ ನನಗೆ ಡ್ರೈವಿಂಗ್ ಕಲಿಸಿದ........

ಯುದ್ಧದ ಐದನೆಯ ವರ್ಷ. ನಾಲ್ವತ್ತೆರಡರ ಚಳವಳಿಯೂ ನಿಂತು ಹೋಗಿತ್ತು—ಮಳೆ ಬಂದು ನಿಂತ ಹಾಗೆ. ಒಟ್ಡೆ ಪಾವಟಿಗೆ ಜಾರುವಂತೆ, ಅಲ್ಲೊಂದು ಇಲ್ಲೊಂದು ಬಂಧನ—ಬಿಡುಗಡೆಯ ವಾರ್ತೆ ಮಾತ್ರ ಕೇಳಿಬರುತ್ತಿತ್ತು, ಆಗಾಗ್ಗೆ.

ಆ ಅವಧಿಯಲ್ಲಿ ನಾನು ಬಾಳ್ವೆಯ ಇನ್ನೊಂದು ರೂಪವನ್ನು ಕಂಡೆ.

ಎಂದಿಗೆ ಯುದ್ಧ ನಿಂತು ಸಾಮಗ್ರಿಗಳ ಬೆಲೆ ಇಳಿಯುವುದೋ ಎಂದು ಬಡ ಸಂಸಾರಗಳು ಕಾದು ಕುಳಿತಿದ್ದರೆ, ಯುದ್ಧ ಇನ್ನು ನಿಂತು ತಮಗೆ ತೊಂದರೆಯಾಗುವುದಲ್ಲಾ—ಎಂದು ಲಕ್ಷಾಧೀಶರು ವ್ಯಥೆಪಡು

ತಿದ್ದರು. ಶ್ರೀಕಂಠ ಮತ್ತು ಆತನ ಮಾವ ಮಾತನಾಡುತ್ತಿದ್ದಾಗ ಲೊಮ್ಮೆ, ವಿಷಾದದ ಛಾಯೆ ಅವರ ಮುಖಗಳ ಮೇಲೆ ಸುಳಿದುದನ್ನು ಕಂಡೆ ಆ ದೃಶ್ಯ-ಸೋಜಿಗವನ್ನುಂಟುಮಾಡಿತು. ಮನುಷ್ಯನ ಆಸೆಗೆ ಮಿತಿಯೇ ಇಲ್ಲವೆ ಹಾಗಾದರೆ? ಹಲವು ಲಕ್ಷಗಳನ್ನು ಸುಲಭವಾಗಿ ಸಂಪಾದಿಸಿದ ಮೇಲೂ ತೃಪ್ತಿ ಇಲ್ಲವೆ ಇವರಿಗೆ? ಸುಖಜೀವನ ನಡೆ ಸಲು ಒಬ್ಬ ಮನುಷ್ಯನಿಗೆ ಎಷ್ಟು ಹಣ ಬೇಕು? ಹಾಗಾದರೆ ದೊಡ್ಡ ಮನುಷ್ಯರಾಗಿ ಬಾಳಲು ಎಷ್ಟು ಹಣಬೇಕು?

ಒಂದು ಸಂಜೆ ಶ್ರೀಕಂಠವ್ಯಗ್ರನಾಗಿದ್ದ.

"ಏನಾಯ್ತು?" ಎಂದು ಕೇಳಿದೆ.

"ಒಂದು ಹೊಸ ಪಿಡುಗು ಬಂದಿದೆ, ಅಷ್ಟೆ."

"ಪಿಡುಗು?"

"ಸಂಘ ಕಣಯ್ಯ—ಕೂಲಿಕಾರರ ಸಂಘ, ಯೂನಿಯನ್ನು. ಫ್ಯಾಕ್ಟರೀನ ತಮ್ಮ ವಶಕ್ಕೇ ತಗೋತಾರಂತೆ ಬಡ್ಡೀಮಕ್ಕಳು."

"ಓ! ಸ್ವಾರಸ್ಯವಾಗಿದೆ."

"ನಿನ್ನ ಸಿನಿಕ ಬುದ್ಧಿ ಬಿಟ್ಬಿಡು. ಈ ಗಲಾಟೆ, ಕಾಲರಾಗಿಂತ ಹೆಚ್ಚು ಅಪಾಯಕಾರಿ."

"ಗಲಾಟೆ ಮಾಡ್ತಿರೋರು ಯಾರು?"

"ಅವರೇನೇ ನಿರುದ್ಯೋಗಿಗ್ಳು. ಎಲ್ಲರೂ ಲೀಡರ್ರಾಗ್ಬಿಟ್ಟಿದಾರೆ, ಅವರ್ದೊಂದು ಹಾಡೂ ಇದೆ ಗೊತ್ತಾ? ಕೈಲಿ—ಕೆಂಪು-ಬಾ-ವು-ಟಾ.... ಹೊ ಹ್ಹೋ!"

"ರಸಿಕ ಕಣಯ್ಯ ನೀನು."

"ರ್‍ಯಾಸ್ಕಲ್ಸ್. ಬಂದೂಕು ತಗೊಂಡು ಸುಟ್ಹಾಕ್ಬಿಡೋಣಾಂತ ಅನಿಸುತ್ತೆ."

—ಹಿಂದೆ ಸಂಘಗಳು ಇರಲಿಲ್ಲವೆಂದಲ್ಲ. ಒಂದು ಕಾರ್ಖಾನೆಗೆ ಒಂದರಂತೆ ಸಂಘವಿರುತಿತ್ತು. ತಮಗೆ ಬೇಕಾದವರನ್ನು ಮಾಲೀ ಕರೇ ಆಯ್ದು ಕೂಲಿಕಾರ ಮುಖಂಡರಾಗಿ ನೇಮಿಸುತಿದ್ದರು. ಆದರೆ ಕೆಂಪು ಬಾವುಟ ಬಂದು, ಒಂದು ಉದ್ಯಮಕ್ಕೆ ಒಂದೇ ಸಂಘ—ಎಂದು

ಘೋಷಿಸಿತು. ನಮ್ಮ ನಗರದ ಆರು ಕಾರ್ಖಾನೆಗಳ ಕೂಲಿಗಾರರೂ ಒಂದಾದರು. ಬೇರೆ ಬೇರೆ ಬೀದಿಗಳಲ್ಲಿ ಪ್ರತ್ಯ ಪ್ರತ್ಯೇಕವಾಗಿ ಮೆರವಣಿಗೆಗಳು ಬಂದು, ಒಂದೇ ಒಂದಾದ ದೊಡ್ಡ ಪ್ರವಾಹ ಭೋರ್ಗರೆಯುತ್ತ ಹರಿಯಿತು....ಇಪ್ಪತ್ತು ಸಾವಿರ ಕೂಲಿಗಾರರು ಬೀದಿಯಲ್ಲಿ! ಮೊರೆಯುತ್ತಿದ್ದ ಘೋಷವಿದು: "ಮೂರು ತಿಂಗಳ ಬೋನಸ್ !" "ಯುದ್ಧ ಕಾಲದ ಲಾಭದಲ್ಲಿ ನಮಗೂ ಒಂದು ಪಾಲು ಕೊಡಿ!".... ಆ ಬಳಿಕ ಭಾಷಣಗಳು....ಮಾಲೀಕರನ್ನೆಲ್ಲ ಕಾಣಲು ಆರು ಜನರ ಒಂದು ನಿಯೋಗದ ಆಯ್ಕೆ.

ಮಾಲೀಕರ ಕೊಠಡಿಗಳಿಂದ ಫೋನ್‌ಗಳು ಟ್ರಿನ್‌ಗುಟ್ಟಿದುವು. ಸ್ವಲ್ಪ ಹೊತ್ತಿನಲ್ಲೇ, ನಗರದ ಅತಿ ದೊಡ್ಡ ಹೊಟೇಲಿನಲ್ಲಿ ತಮ್ಮ ತಮ್ಮ ಮ್ಯಾನೇಜರರೊಡನೆ ಅವರು ಒಂದುಗೂಡಿದರು. ನನ್ನನ್ನೂ ಕರೆದೊಯ್ದ ಶ್ರೀಕಂಠ. ಬಲು ಶಾಂತವಾಗಿ ಮಾತುಗಳು ಅತ್ತಿತ್ತ ತೇಲಿಹೋದುವು.

"ಕೊಡದೇಇದ್ದರೆ ಏನಂತೆ ಇವರು ಮಾಡೋದು ?"

"ಗೊತ್ತೇ ಇದೆಯಲ್ಲ—ಮುಷ್ಕರ !"

"ಉಪವಾಸ ಬಿದ್ದು ಸಾಯ್ತಾರೆ, ಅಷ್ಟೆ."

"ಒಂದು ತಿಂಗಳೇನಾದರೂ ಮುಷ್ಕರ ನಡೀತೂಂತಂದ್ರೆ ಒಟ್ಟು ನಮಗಾಗೋ ನಷ್ಟ ಎಷ್ಟು ಯೋಚಿಸಿದ್ದೀರಾ ?"

"ಒಂದು ದಿನ ಕೆಲಸ ನಿಂತರೂ ದೊಡ್ಡ ನಷ್ಟವೇ!"

"ಮತ್ತೆ !?"

"ಅವರ ನಿಯೋಗದ ಮುಖಂಡರ್‍ನ ಅರೆಸ್ಟ್ ಮಾಡಿಸೋಣ."

"ಮಾಡಿಸೋದು ಸುಲಭ. ಮುಂದಿನ ಗತಿ ? ಮುಷ್ಕರ ತಪ್ಪಿಸ್ಬೇಕೂಂತಿದ್ದರೆ, ನಾವು ದುಡುಕ್ಬಾರ್ದು."

"ಅದು ನಿಜ. ನಿಯೋಗದವರ್‍ನ ನಾವು ಜತೆಯಾಗಿಯೇ ಕಾಣೋಣ. ಮೊದಲು ನಕಾರದ ಉತ್ತರ. ಆ ಮೇಲೆ ನೋಡಿಕೊಂಡರಾಯ್ತು."

ಹೀಗೆ ಒಬ್ಬೊಬ್ಬರು ಒಂದೊಂದು ವಿಧವಾಗಿ ಮಾತನಾಡಿದರು.

ಮಾತಿನಲ್ಲಿ ವೈವಿಧ್ಯವಿತ್ತು. ಆದರೆ ಉದ್ದೇಶ ಒಂದೇ—ಒಂದೇ.

ನಗರದ ಗಣ್ಯರೂ ಆಢ್ಯರೂ ಆದ ಆರು ಜನ ಪ್ರಮುಖರನ್ನು ಕೂಲಿಗಾರರ ಪರವಾಗಿ ಆರು ಜನ ಭೇಟಿಯಾದ ಆ ದೃಶ್ಯವನ್ನು ಸುಲಭವಾಗಿ ಮರೆಯುವುದು ಸಾಧ್ಯವಿಲ್ಲ.

ಎಸ್ಕಿಮೋ ಕಾರಖಾನೆಯ ಮಾಲಿಕರ ಭವ್ಯಗೃಹಕ್ಕೆ ಬಡವರ ಆ ನಿಯೋಗ ಬಂದಿತು. ದೊಡ್ಡ ಹಾಲ್‌ನಲ್ಲಿ ನೀಳವಾದೊಂದು ಮೇಜಿನ ಒಂದು ಪಾರ್ಶ್ವದಲ್ಲಿ ಆ ಆರು ಜನ ಕುಳಿತಿದ್ದರು—ಶ್ರೀಕಂಠ ನನ್ನೂ ಒಳಗೊಂಡು. ನಾವು ಬೇರೆ ನಾಲ್ವರು, ಕುಳಿತವರ ಹಿಂಬದಿಯಲ್ಲಿ ನಿಂತಿದ್ದೆವು. ಆ ಆರು ಜನ ಒಬ್ಬರ ಹಿಂದೊಬ್ಬರಾಗಿ ಸಾಲಾಗಿ ಬಂದು ನಿಂತರು. ಕೊನೆಯದಾಗಿ ಬಂದವನು ನಾಯಕ—ಸಂಘದ ಕಾರ್ಯದರ್ಶಿ. "ನಿಮ್ಮೆಲ್ಲರನ್ನೂ ಬಲ್ಲೆ" ಎನ್ನುವ ನೋಟವಿತ್ತು ಅವನ ಕಣ್ಣುಗಳಲ್ಲಿ. ಮೋಹಕವಾದೊಂದು ಮುಗುಳುನಗೆ ತೇಲುತಿತ್ತು ಆ ತುಟಿಗಳ ಮೇಲೆ. ಆ ಷರಟು, ಪ್ಯಾಂಟು ಪಠಾಣ ಚಪ್ಪಲಿ. ವಯಸ್ಸಿನಲ್ಲಿ ನನಗಿಂತಲೂ ಚಿಕ್ಕವನಾಗಿದ್ದ. ಇನ್ನೊಬ್ಬ ವಯಸ್ಸಾದವನು—ಮುಖದ ಮೇಲೆ ನರೆತ ಗಡ್ಡವಿತ್ತು. ಇಬ್ಬರು ನಡುವಯಸ್ಕರು. ನಾಲ್ಕನೆಯವನು—

ನನ್ನ ಕಣ್ಣುಗಳನ್ನು ನಾನು ನಂಬಲಿಲ್ಲ! ಅಲ್ಲಿ ನಾರಾಯಣ ನಿದ್ದ—ಶ್ರೀಕಂಠನಿಗೂ ನನಗೂ ಸಹಪಾಠಿಯಾಗಿದ್ದ ನಾಣಿ!

ಬಂದವರು ಕ್ಷಣಕಾಲ ಹಾಗೆಯೇ ನಿಂತರು.

ಎಲ್ಲವೂ ಮೊದಲೇ ನಿಶ್ಚಿತವಾಗಿದ್ದಂತೆ, ಮಾಲೀಕರ ಪರವಾಗಿ ಎಸ್ಕಿಮೊ ಕಾರಖಾನೆಯ ಯಜಮಾನರು ಹೇಳಿದರು:

"ಬೋರಾ! ರಂಗಾ! ನಿಯೋಗದವರಿಗೆ ಕುರ್ಚಿ ತಂದ್ಹಾಕಿ!"

ಐದು ಬಡಕಲು ಕುರ್ಚಿಗಳು ಬಂದುವು.

"ನಾನು ನಿಂತೇ ಇರ್ತೇನಿ," ಎಂದನೊಬ್ಬ ಕೂಲಿಕಾರ

ಆದರೆ ಯಾರೂ ಕುಳಿತುಕೊಳ್ಳಲಿಲ್ಲ—ಆರನೆಯ ಕುರ್ಚಿ ಬರುವ ತನಕವೂ ಕುಳಿತು ಕೊಳ್ಳಲಿಲ್ಲ.

ಆ ಮುಖಂಡ ಮಾತನಾಡಿದ:

"ಆರಂಭಿಸೋಣವೇ ? "

"ನೀವು ಯಾವ ಮಿಲ್ಲಿನವರು ?"

"ನಾನು ಸಂಘದ ಕಾರ್ಯದರ್ಶಿ, ನಿಯೋಗದ ಮುಖಂಡ.... ಇವರು—ಇವರು—"

ಆತ ನಿಯೋಗದ ಸದಸ್ಯರ ಹೆಸರುಗಳನ್ನು ಹೇಳುತಿದ್ದ.

ಮತ್ತೆ ಆ ಹೆಸರು: ಟಿ. ಜಿ. ನಾರಾಯಣ್—ನಾರಾಯಣ.

ಶ್ರೀಕಂಠನ ಮುಖ ನೋಡಿದೆ. ಆತ ನಾರಾಯಣನನ್ನು ನೋಡಿದ್ದ—ಗುರುತು ಹಿಡಿದಿದ್ದ. ನಾರಾಯಣನೂ ನಮ್ಮಿಬ್ಬರನ್ನು ನೋಡಿದ. ಆದರೆ ಆ ಕಣ್ಣುಗಳು ನಿಶ್ಚಲವಾಗಿದ್ದುವು. ತುಟಿಗಳು ಬಾಡಿಬಿಗಿದಿದ್ದುವು.

"ಮಾಲೀಕರೊಡನೆ ಕೆಲಸಗಾರರೇ ಮಾತನಾಡ್ಬೆಬೇಕು."

"ಇಪ್ಪತ್ತು ಸಾವಿರ ಕೆಲಸಗಾರರು ನಮ್ಮನ್ನು ಚುನಾಯಿಸಿದ್ದಾರೆ. ನಾವೆಲ್ಲರೂ ನಿಮ್ಜುತೇಲಿ ಮಾತನಾಡ್ತೀವಿ. ಆದರೆ ವ್ಯವಹಾರದ ಅನುಕೂಲಕ್ಕಾಗಿ ಯಾರಾದರೊಬ್ಬರು ನಿಯೋಗದ ಮುಖಂಡರಾಗಿರೋದು ಪದ್ಧತಿ—ನೀವು ಏರ್ಪಾಟು ಮಾಡಿಕೊಂಡಿರೋ ಹಾಗೆ!"

ಆ ಅಧಿಕಾರವಾಣಿಯನ್ನು ಹೆದರಿಕೆ ಬೆದರಿಕೆಗಳಿಂದ ನಡುಗಿಸುವುದು ಸಾಧ್ಯವಿರಲಿಲ್ಲ.

ಅದು ನನಗೆ ವಿಚಿತ್ರವಾಗಿ ತೋರಿತು. ಅತ್ತಿತ್ತ ಮಾತುಗಳು ಹಾರಾಡುತ್ತಿದ್ದರೂ ನಾನು ಕಿವಿಗೊಡಲಿಲ್ಲ. ಬೇರೆಯೇ ಯೋಚನೆಗಳು ನನ್ನನ್ನು ಮುತ್ತುತ್ತಿದ್ದುವು.

ಪರಸ್ಪರ ಎದುರು ಬದುರಾಗಿ ನಿಂತಿದ್ದ ಈ ಎರಡು ಶಕ್ತಿಗಳು! ಆ ವರೆಗೆ ಹಣವಂತರ ಪಕ್ಷವೊಂದೇ ದೊಡ್ಡ ಶಕ್ತಿಯೆಂದು ನಾನು ಬಗೆದಿದ್ದೆ. ಅದು ನಿಜವಾಗಿರಲಿಲ್ಲ. ಇಲ್ಲಿ ಇನ್ನೊಂದು ಶಕ್ತಿಯಿತ್ತು—ಹಣವಿಲ್ಲದವರ ಶಕ್ತಿ....

ಈ ಎರಡು ಶಕ್ತಿಗಳ ನಡುವೆ ನಾನು ಎಲ್ಲಿದ್ದೆ ? ದರಿದ್ರರಾದ ಆ ಕೆಲಸಗಾರರ ಪಕ್ಷ ನನ್ನದಾಗಿರಲಿಲ್ಲ....ನನ್ನ ತಂದೆ ಹಿಂದೆ ಅದೇ

ಜಾತಿಗೆ ಸೇರಿದ್ದ....ಆದರೆ ನಾನು ಅಲ್ಲಿರುವುದು ಸಾಧ್ಯವಿರಲಿಲ್ಲ. ಆ ಇನ್ನೊಂದು ಪಕ್ಷ? ಅದು ಶ್ರೀಕಂಠನದು, ನನ್ನದಲ್ಲ.........ನಾನು ಶ್ರೀಕಂಠನ ಸ್ನೇಹಿತ ಅಷ್ಟೆ—ಪರೋಪಜೀವಿ.

ಒಂದು ವೇಳೆ ನನ್ನ ತಂದೆ ಬದುಕಿ ಉಳಿದಿದ್ದರೆ? ಇಷ್ಟು ವರ್ಷಗಳ ಕಾಲ ಆತ ದುಡಿಯುವುದು ಸಾಧ್ಯವೇ ಇರಲಿಲ್ಲ. ಆದರೆ ಒಂದು ವೇಳೆ ದುಡಿಯುತ್ತಿದ್ದರೆ? ಆಗ ಮೆರವಣಿಗೆಯಲ್ಲಿ ಅವನೂ ಇರುತಿದ್ದ. ನಿಯೋಗದ ಆಯ್ಕೆಗೆ ಸಂಬಂಧಿಸಿ ಅವನೂ ಅಭಿಪ್ರಾಯ ವ್ಯಕ್ತಪಡಿಸುತಿದ್ದ. ಅಥವಾ ಅವನನ್ನೂ ನಿಯೋಗಕ್ಕೆ ಆರಿಸುತಿದ್ದರೋ ಏನೋ.... ಹಾಗಾದರೆ, ಅದು ಅವನ ಪಕ್ಷವಾಗುತಿತ್ತು.

ತಂದೆಯ ಪಕ್ಷ....ಇಲ್ಲ, ನಾನು ದೂರಬಂದಿದ್ದೆ. ಆ ಪಕ್ಷವನ್ನು ನಾನು ಸೇರುವುದು ಸಾಧ್ಯವಿರಲಿಲ್ಲ. ಆದರೆ ಆ ಇನ್ನೊಂದು ಪಕ್ಷ?

ಇನ್ನೊಂದು ಪಕ್ಷದ ಪ್ರಮುಖರು ಏರಿದ ಸ್ವರದಲ್ಲಿ ಹೇಳುತಿದ್ದರು:

“ ಮುನಿಸ್ವಾಮಪ್ಪ, ಇದು ಯುದ್ಧಕಾಲ. ಈಗ ಇಂಥ ಕೇಳಿಕೆ ಮುಂದಿಡೋದು ಕಾನೂನು ಬದ್ಧ ಅಂತ ತಿಳ್ಕೊಂಡಿದೀರಾ?”

ಕಾರ್ಯದರ್ಶಿಯ ಉತ್ತರ ಬರುತಿತ್ತು:

“ ಕಾನೂನು ನಿರ್ಮಿಸಿರೋದು ಮನುಷ್ಯರೇ ಅನ್ನೋ ವಿಷಯ ತಮ್ಮೆಲ್ಲರಿಗೂ ತಿಳಿದಿರ್ಬಹುದು.”

“ ಪೋಲೀಸರಿಗೆ ತಿಳಿಸಿದರೆ ಏನಾಗುತ್ತೆ ಗೊತ್ತೊ? ”

“ ನಮ್ಮೆಲ್ಲರನ್ನೂ ಅರೆಸ್ಟ್ ಮಾಡಿಸೋ ಸಾಮರ್ಥ್ಯ ನಿಮಗಿದೇ ಅನ್ನೋದು ಹೊಸ ವಿಷಯವೇನೂ ಅಲ್ಲ.”

“ ಖಡಾಖಂಡಿತವಾಗಿ ಹೇಳ್ತೀವಿ: ಇನ್ನೊಂದು ವರ್ಷದ ವರೆಗೆ ಬೋನಸ್ ಕೊಡೋದು ಸಾಧ್ಯವಿಲ್ಲ! ”

“ ನಾವು ಅಷ್ಟೇ ಖಡಾಖಂಡಿತವಾಗಿ ಹೇಳ್ತೀವಿ: ಒಂದು ನಿಮಿಷವೂ ಇನ್ನು ತಡೆಯೋದು ಸಾಧ್ಯವಿಲ್ಲ! ”

“ ನೀವಿನ್ನು ಹೊರಡಬಹುದು ”

“ ಹೊರಡ್ತೇವೆ. ಇಪ್ಪತ್ತು ಸಹಸ್ರ ಕೆಲಸಗಾರರು ನಾವೇನು

ಸುದ್ದಿ ತರ್ತೀವ್ರೋ ಅಂತ ಆತುರದಿಂದ ಹಾದಿ ನೋಡ್ತಿದ್ದಾರೆ.''

ಎಂಥ ಗಡಸು ವೈಖರಿ! ಹೊರಡುವಾಗಲೂ ಮಾತಿನ ಗುಂಡು. ಇಪ್ಪತ್ತು ಸಹಸ್ರ ಜನ ಕೆಲಸಗಾರರ ಮಾತೆತ್ತಿದಾಗ, ಮಾಲೀಕರ ಎದೆಗಳಲ್ಲಿ ನಡುಕ ಹುಟ್ಟಿತ್ತು!

ಆ ಆರು ಜನರೂ ಹೊರಟು ಹೋದರು—ನಾರಾಯಣನೂ ಕೂಡಾ.

ಉಳಿದವರು—ಮಾಲೀಕರು—ತಮ್ಮ ತಮ್ಮೊಳಗೆ ಮಾತನಾಡಿ ಕೊಂಡರು.

"ಒಂದು ತಿಂಗಳ ಬೋನಸಿಗಾದರೆ ಒಪ್ತೀವಿ ಅಂತ ಹೇಳ್ಬಹು ದಾಗಿತ್ತೇನೊ?"

"ಅದ್ಯಾಕ್ಸಾರ್?"

"ಒಂದು ತಿಂಗಳಿನ್ದಲ್ಲ, ಎರಡು ತಿಂಗಳಿನ್ದೇ ಕೊಟ್ಟರೂ ಕೊಡ ಬಹುದು. ಆದರೆ ಈಗಲ್ಲ. ಅವರ್ನ ಹಣ್ಣು ಮಾಡಿ ಹಾದಿಗೆ ತರಬೇಕು; ಆ ಮೇಲೆ ಭಿಕ್ಷೆ ಅಂತ ನೀಡ್ಬೇಕು.''

"ಸರಿ!''

ಶ್ರೀಕಂಠ ನನ್ನ ಬೆನ್ನು ಮುಟ್ಟಿ, "ಹೊರಡೋಣ ಚಂದ್ರೂ,'' ಎಂದ.

ಮನೆಗೆ ಹೋಗುವುದರ ಬದಲು, ಮಧ್ಯಾಹ್ನದ ಊಟಕ್ಕಾಗಿ ಯಾವುದೋ ಹೋಟೆಲು ಸೇರಿದೆವು.

ನಾನು ನಾರಾಯಣನ ಪ್ರಸ್ತಾಪವೆತ್ತಿದೆ.

"ನಾಣಿನ ನೋಡಿದೆಯೋ ಇಲ್ಲವೋ........''

"ಅವನನ್ನ ನೆನೆಸಿಕೊಂಡರೆ ವಾಕರಿಕೆ ಬರುತ್ತೆ. ಎಷ್ಟು ಒರ ಟಾಗಿದಾನೆ ನೋಡು!"

"ಅವನೂ ಮಿಲ್ ಸೇರಿದ್ನಲ್ಲಾ.''

"ಹುಂ. ಲಿಸ್ಟ್ ನೋಡ್ದೆ. ಸೂರ್ಯಕಾಂತಿ ಮಿಲ್ನಲ್ಲಿದಾನೆ. ಗುಮಾಸ್ತೆ........ ಅವನು ಮುಂದೆ ಹೀಗೆಯೇ ಆಗ್ತಾನೇಂತ ನನ್ಗೆ ಆಗಲೇ ಗೊತ್ತಿತ್ತು .......''

ದೊಡ್ಡ ಮಾತುಗಳು. ನಾನು ಕೂಡಾ ಹೀಗೆಯೇ ಆಗುವೆನೆಂದು ಆತ ತಿಳಿದಿದ್ದನೇನೊ? ನನಗೆ ಆ ಮಾತು ರುಚಿಸಲಿಲ್ಲ. ಆದರೆ ಶ್ರೀಕಂಠೋಪಜೀವಿಯಾದ ನನಗೆ ಹಾಗೆಂದು ಹೇಳುವ ಸ್ವಾತಂತ್ರ್ಯವಿರಲಿಲ್ಲ. ಆತನ ತಂಗಿ ಬಾಣಂತಿಯಾಗಿ ಸತ್ತ ಮರುದಿನ ನಾರಾಯಣವನ್ನು ನಾನು ಕಂಡಿದ್ದೆ. ಹೋಟೆಲು—ತಿಂಡಿ—ಮಾತುಕತೆ.... ಆಗ ಅವನಿಗೆ ಉದ್ಯೋಗವಿರಲಿಲ್ಲ. ಈಗ ಉದ್ಯೋಗ ದೊರೆತಿತ್ತು.... ಅದಾದಮೇಲೆ ತನ್ನದೇ ಆದ ಹಾದಿಯನ್ನು ನಿರ್ಮಿಸಿಕೊಂಡು ಆತ ನಿಯೋಗದ ಒಬ್ಬ ಸದಸ್ಯನಾಗಿದ್ದ.

"ಏನು ಯೋಚಿಸ್ತಾ ಇದೀಯಾ, ಚಂದ್ರು?"

"ನೀನೊಂದು ಮಾತು ಹೇಳಿದರೆ ನಾರಾಯಣ ಕೇಳಿದ್ರೂ ಕೇಳ್ಬಹುದು."

"ಸಾಧ್ಯವಿಲ್ಲದ ವಿಷಯ. ಆಗ ನೋಡಿದಿಯೋ ಇಲ್ಲವೊ? ನಮಸ್ಕಾರ ಅಂತಾದರೂ ಅಂದ್ನೆ ಆತ?"

ಆದರೆ, ನಾರಾಯಣನಿಗೆ ಸಂಬಂಧಿಸಿ ಅಂತಹ ಕಾಠಿನ್ಯ ಆವಶ್ಯವಿತ್ತೆ? ಒಂದು ವೇಳೆ ನಾನೇ ನಾರಾಯಣನ ಸ್ಥಿತಿಯಲ್ಲಿ ಇದ್ದಿದ್ದರೆ? ಅಥವಾ ಶ್ರೀಮಂತ ಮಾವ ದೊರೆಯುವುದರ ಬದಲು ಸ್ವತಃ ಶ್ರೀಕಂಠನೇ ದೇಹಶ್ರಮ ಮಾರುವ ಉದ್ಯೋಗಿಯಾಗಬೇಕಾದ ಪರಿಸ್ಥಿತಿ ಒದಗಿದ್ದರೆ?

ಶ್ರೀಕಂಠ—ನಾರಾಯಣರ ನಡುವೆ ಬೆಳೆದು ಬಂದ ಆ ಅಡ್ಡ ಗೋಡೆ........

ಐ. ಜಿ. ಪಿ. ಯೇ ಫೋನ್ ಮಾಡಿ ಕೇಳಿದ್ದರು.

"ಏನ್ಮಾಡ್ತೀರಾ? ನಮ್ಮಿಂದ ಏನಾದರೂ ಆಗ್ಬೇಕಾಗಿದ್ದರೆ ಹೇಳಿ."

"ಯೂನಿಯನ್ನಿನವರು ಹದಿನಾಲ್ಕು ದಿನಗಳ ಮುಷ್ಕರ ನೋಟೀಸು ಕೊಟ್ಟಿದ್ದಾರೆ........ಇನ್ನೊಂದು ವಾರ ಕಾದು ನೋಡೋಣ ಹೇಳ್ತೀನಿ."

ಕಾದು ನೋಡಿದ್ದಾಯಿತು ; ಹೇಳಿದ್ದಾಯಿತು.

ಮುಷ್ಕರದ ಸಿದ್ಧತೆ ನಡೆದಿತ್ತು. ಆರಂಭಕ್ಕೆ ನಾಲ್ಕು ದಿನಗಳಿದ್ದಾಗ ಮಾಲೀಕರ ಸೂಚನೆಯಂತೆ ಕಾನೂನು—ನೆಮ್ಮದಿಯ ರಕ್ಷಕರು ಮುಂಜಾಗ್ರತೆಯ ಕ್ರಮಕೈಕೊಂಡರು. ನಿಯೋಗ ಬಂದಿದ್ದ ಆರು ಜನರೂ ಬಂಧಿಸಲ್ಪಟ್ಟರು. ಸಭೆ ಮೆರವಣಿಗೆಗಳನ್ನು ನಿಷೇಧಿಸುವ ಆಜ್ಞೆ ಜಾರಿಯಾಯಿತು.

ಬಂಧನವಾದುದು ರಾತ್ರೆ ಹೊತ್ತು. ಸುದ್ದಿ ಮಾತ್ರ ಆಗಲೆ ಕಾಳ್ಗಿಚ್ಚಿನಂತೆ ಹಬ್ಬಿತು. ರಾತ್ರೆ ಷಿಫ್ಟಿಗೆ ಹೋಗಿದ್ದ ಕಾರ್ಮಿಕರು ಹೊರಬಂದರು. ವಿದ್ಯುತ್ ಮುಷ್ಕರ ನಡೆದಿತ್ತು.

ಮರು ದಿನ ಒಂದೇ ಒಂದು ಬಟ್ಟೆ ಕಾರ್ಖಾನೆಯೂ ತೆರೆಯಲಿಲ್ಲ. ಕೂಲಿಕಾರರು ವಾಸವಾಗಿದ್ದ ಪ್ರದೇಶಗಳಲ್ಲೆಲ್ಲಾ ಮಿಂಚಿನ ಸಂಚಾರವಾಗಿತ್ತು. ಆ ಗುಜು ಗುಜು ಮಾತು—ಚೈತನ್ಯ ಸೂಸುತಿದ್ದ ಕಣ್ಣುಗಳು. ಅದು ಸಾಧ್ಯವಿತ್ತಲ್ಲವೆ? ನಾನು ಅಂಥ ಘಟನೆಯನ್ನು ಎಂದೂ ನಿರೀಕ್ಷಿಸಿರಲಿಲ್ಲ. ತಲೆ ಬಾಗಿ ನಡೆಯುವ ಬಡ ಕೂಲಿಕಾರ ಸೆಟೆದು ನಿಲ್ಲುವುದು ಸಾಧ್ಯವಿತ್ತಲ್ಲವೆ?

ಆದರೆ ಆಗ ನನಗಿನ್ನೂ ಅವರ ಶಕ್ತಿ ಸಾಮರ್ಥ್ಯದ ಬಗ್ಗೆ ನಂಬಿಕೆ ಇರಲಿಲ್ಲ. ಸರಕಾರದ ಬೆಂಬಲವಿದ್ದ ಬಲಾಢ್ಯ ಶಕ್ತಿಗಳೆದುರಲ್ಲಿ ಕೂಲಿಕಾರರ ಪ್ರತಿಭಟನೆ ಖಂಡಿತ ಮಣ್ಣುಗೂಡುವುದೆಂದು ನಾನು ತಿಳಿದಿದ್ದೆ.

........ಆ ತಿಳಿವಳಿಕೆ ತಪ್ಪಾಗಿತ್ತು.

ಶ್ರೀಕಂಠ ಹೇಳಿದ.

"ನೋಡಿದಿಯಾ ಚಂದ್ರು? ಈ ಕೂಲಿಕಾರರ ಪ್ರಶ್ನೆ ಇನ್ನು ಯಾವಾಗ್ಲೂ ಉಳಿಯುತ್ತೆ. ಈ ಸಾರೆ ಉಪಾಯವೇ ಇಲ್ಲ. ಒಂದು ದಿನ ಕಾರ್ಖಾನೆ ಮುಚ್ಚಿದರೂ ನಷ್ಟವಾಗತ್ತೆ........"

"ಏನ್ಮಾಡ್ಬೇಕೂಂತಿದೀರಾ?"

"ನಾಳೆಯಿಂದ್ಲೇ ಮಾತುಕತೆ ಶುರು ಮಾಡ್ಬೇಕು."

ಕಾಂಗ್ರೆಸ್ ಮುಖಂಡರೊಬ್ಬರು ನ್ಯಾಯಭಾರದ ಭಾರಹೊತ್ತರು.

ಅವರು ಮಾಡುತಿದ್ದ ಸ್ತುತ್ಯಯತ್ನವನ್ನು ಹೊಗಳಿ ಪತ್ರಿಕೆಗಳಲ್ಲಿ ವರದಿಗಳು ಬಂದುವು.

ಮೊದಲ ದಿನ ಮಾಲೀಕರೆಂದರು.

"ಒಂದು ತಿಂಗಳ ಬೋನಸ್ ಕೊಡ್ತೀವಿ."

ಬಂಧಿತರಾದವರು ಒಪ್ಪಲಿಲ್ಲ. ಅದಾದ ಮೇಲೆ ಇನ್ನೊಂದು ಉತ್ತರ ಹೋಯ್ತು.

"ಎರಡು ತಿಂಗಳ ಬೋನಸ್ ಕೊಡ್ತೀವಿ"

"ಮುಷ್ಕರ ಸಮಿತಿ ಸದಸ್ಯರ್ನ ನಾವು ಕಂಡು ಮಾತನಾಡ್ಬೇಕು."

ಆದಕ್ಕೆ ಪೋಲೀಸ್ ಅಧಿಕಾರಿಗಳು ಸಮ್ಮತಿ ಇತ್ತರು. ಲಾಕ ಕಪ್ಪಿನ ಒಳಗೆ ಆರು ಜನ, ಹೊರಗೆ ಸಮಿತಿ ಸದಸ್ಯರು, ನಿಂತು ಸಭೆ ಜರಗಿತು.

ಆ ಉತ್ತರದಲ್ಲಿ ದಿಟ್ಟತನವಿತ್ತು :

"ಮೂರು ತಿಂಗಳ ಬೋನಸ್ ದೊರೆಯುವವರೆಗೂ ನಮ್ಮ ಮುಷ್ಕರ. ನಮ್ಮ ಮುಖಂಡರೆಲ್ಲರ ಬಿಡುಗಡೆಯಾಗ್ಬೇಕು. ಯಾರೊಬ್ಬರನ್ನೂ ಕೆಲಸದಿಂದ ತೆಗೆದು ಹಾಕಕೂಡದು."

"ಸಾಧ್ಯವಿಲ್ಲ," ಎಂದರು ಮಾಲೀಕರು.

ಮರುದಿನ ನಗರದ ಇತರ ಕೈಗಾರಿಕೋದ್ಯಮದ ಕಾರ್ಮಿಕರೂ ಸಹಾನುಭೂತಿಯ ಮುಷ್ಕರ ಹೂಡಿದರು. ಪೋಲೀಸರು ಅಂಟಿಸುತಿದ್ದ ಹಲವರ ಬಂಧನವಾಯಿತು. ಬೀದಿಗಳಿಂದ ಮುಖ್ಯ ಮುಖ್ಯರಾದ ಕೆಲಸಗಾರರನ್ನು ಸ್ಟೇಷನ್ನಿಗೆ ಕರೆದೊಯ್ದರು. ನಗರದ ಎರಡು ಮೂರು ಲಾಕಪ್ಪುಗಳು ಕೂಡುದೊಡ್ಡಿಗಳಾದುವು.

"ನಾಳೆಯಿಂದ ಕಾರಖಾನೆ ಶುರುವಾಗುತ್ತಪ್ಪ," ಎಂದ ಶ್ರೀಕಂಠ.

"ಅಂದರೆ ?"

"ಕಾಣಿಸೋದಿಲ್ವೇನು ? ಹ್ಯಾಗಿದಾರೆ ಸೂಳೇ ಮಕ್ಳು ! ನಾವೇ ಸೋತ ಹಾಗಯ್ತು ಅಂತೂ."

"ಮೂರು ತಿಂಗಳ ಬೋನಸ್ ಕೊಡೋದೂಂತ ತೀರ್ಮಾನಿಸಿ

ದೀರಾ ?"

" ಈಗ ತಾನೇ ನಿರ್ಧಾರವಾಯ್ತು. ನನಗೊಬ್ಬನಿಗೇ ಇದರಿಂದ ಸುಮಾರು ಎರಡೂವರೆ ಲಕ್ಷ ಕ್ಕೆ ಬಿಡುತ್ತೆ. ಎರಡೂವರೆ ಲಕ್ಷ! "

. . ಶಾರದಾ ಬಂದು ಕೇಳಿದಳು.

" ಸಾಯಂಕಾಲ ಸಾಧನಾ ಬೋಸ್ ನೃತ್ಯ....ಬರ್ತೀರಿ ತಾನೆ ?"

ಶ್ರೀಕಂಠ ನನ್ನ ಮುಖ ನೋಡಿ, " ಏನಪ್ಪಾ, ಬೇರೇನಾದರೂ ಕಾರ್ಯಕ್ರಮ ಇದೆಯೇನಪ್ಪ ?'' ಎಂದು ಕೇಳಿದ.

" ಯಜಮಾನಿತಿ ಕೇಳ್ತಾ ಇದಾರೆ ಅಂದ್ಮೇಲೆ, ಉಳಿದ ಕಾರ್ಯಕ್ರಮವೆಲ್ಲಾ ಮನ್ನಾ—"

" ಇಷ್ಟು ಹೊತ್ತಿಗೆ ಬಾಕ್ಸು ಟಿಕೆಟು ಸಿಗುತ್ತೋ ಇಲ್ಲವೋ ? "

" ನಾನು ಈಗಾಗಲೇ ಮೂರು ಸೀಟು ಬುಕ್‌ಮಾಡ್ಸಿದೀನಿ," ಎಂದಳು ಶಾರದಾ.

" ಒಪ್ಪಿಗೆ. ಐದು ಘಂಟೆಗೇ ಸಿದ್ಧವಾಗಿರ್ತೀವಿ........ಆದರೆ ಸಾಧನಾ ಬೋಸ್‌ಗೆ ವಯಸ್ಸಾಯ್ತು, ಅಲ್ವೇನೋ ಚಂದ್ರು ? ''

ಮುಖ ಕೊಂಕಿಸದೆ ಶಾರದಾ ಹೇಳಿದಳು.

'' ಇದೇ ಕೊನೇ ದಿಗ್ವಿಜಯ. ಇನ್ನು ಆಕೆ ಟೂರ್ ಬರೋಲ್ಲ. ಇದೊಂದ್ಸಲ ನೋಡಿ....ಅವಳ ಜತೆಗಾರನೊಬ್ಬ ಚೆನ್ನಾಗಿದಾನಂತೆ—ಗೊತ್ತೆ ? ''

ಶ್ರೀಕಂಠ "ಹುಂ ! " ಎಂದ; ಬೇರೆ ಉತ್ತರವೀಯಲಿಲ್ಲ.

ಶಾರದಾ ನೆಟ್ಟ ದೃಷ್ಟಿಯಿಂದ ನನ್ನನ್ನೆ ನೋಡಿ, ಹೊರಡುವ ಸಿದ್ಧತೆಗಾಗಿ ಒಳಹೋದಳು.

........ಬಂಗಾಳದ ಪ್ರಖ್ಯಾತ ನೃತ್ಯಕಲಾವಿದೆ! ಸಾಧನಾ ಬೋಸ್‌ಗೆ ಪುರಭವನದಲ್ಲಿ ಸಂಭ್ರಮದ ಸ್ವಾಗತವೇರ್ಪಟ್ಟಿತ್ತು........ ಕಿಕ್ಕಿರಿದು ತುಂಬಿತ್ತು ಸಭಾಭವನ........ಸಾಧನಾ ಬೋಸ್ ರಾಜನರ್ತಕಿಯಾಗಿ ಕುಣಿದಳು .......ಮತ್ಸ್ಯಗಂಧಿಯಾದಳು........ಕಥಕ್ ........ ಮಣಿಪುರಿ ........ ಆಕೆ ಬೆಡಗುಗಾತಿಯಾದ ಬಿನ್ನಾಣಗಿತ್ತಿಯಾಗಿರಲಿಲ್ಲ. ಆದರೆ ಆ ಮುಖಮುದ್ರೆ ಆಕರ್ಷಣೀಯವಾಗಿತ್ತು.

ಮ್ಮೈ ಕಟ್ಟಿನ ಗಾತ್ರ ದ್ರೋಹ ಬಗೆಯುತಿದ್ದರೂ ಅದರ ಮೇಲೆ ಆಕೆ ಪ್ರಭುತ್ವ ಸ್ಥಾಪಿಸುತ್ತಿದ್ದಳು........

ನನ್ನ ಮನಸ್ಸು ಎಲ್ಲೆಲ್ಲೋ ಓಡಾಡುತ್ತಿತ್ತು. ನಡುವಿನಲ್ಲಿ ಕುಳಿತಿದ್ದ ಶ್ರೀಕಂಠನಿಗೂ ನೆಮ್ಮದಿ ಇದ್ದಂತೆ ತೋರಲಿಲ್ಲ.

ಅವನೆಂದ :

" ಇಷ್ಟೊತ್ತಿಗೆ ಎಲ್ಲವೂ ಮುಗಿದಿರತ್ತೆ. ಅವರ್ನೆಲ್ಲಾ ಬಿಟ್ಟಿದಾರೆ. ಆ ನಾರಾಯಣ್ನನ್ನೂ ಕೂಡಾ.... ..."

ಅವನ ಕಣ್ಣುಗಳು ಸಾಧನಾ ಬೋಸನ್ನು ನೋಡುತ್ತಿದ್ದರೆ, ಮನಸ್ಸು ಹೊರಗೆ ಸುತ್ತಾಡುತಿತ್ತು.

ಶಾರದಾಗೆ ನಮ್ಮ ಮಾತಿನಿಂದ ಬೇಸರವಾಯಿತೇನೋ. ಶ್ರೀಕಂಠ, ನಾನು ಮತ್ತು ಶಾರದಾ ನಡುವೆ ಗೋಡೆಯಾಗಿದ್ದ—ಯಾವಾಗಲೂ. ಅವಳ ಬಗೆಗೆ ತಿಳಿಯುವ ಇಚ್ಛೆ ಎಂದೂ ನನಗೆ ಆಗುತ್ತಿರಲಿಲ್ಲ. ಆಕೆ ನನ್ನನ್ನು ಆಗಾಗ ಶೂನ್ಯದೃಷ್ಟಿಯಿಂದ ನೋಡುತ್ತಿದ್ದಳು. ಆದರೆ ಶೂನ್ಯದೃಷ್ಟಿಯಲ್ಲಿ ಎಂದೂ ಯಾವ ಅರ್ಥವೂ ಇರುವುದಿಲ್ಲ—ಅಲ್ಲವೆ ?

ಪುರಭವನದಿಂದ ಹೊರಬಿದ್ದ ಮೇಲೆ, ನಮ್ಮ ಕಾರು ಮಾನವ ಸಾಗರದಲ್ಲಿ ಈಸಬೇಕಾಗಿ ಬಂತು.

" ಬರ್‍ತಾ ಇದೆ ಕಂಠಿ, ಮೆರವಣಿಗೆ ! "

" ಹುಂ. ಬೇರೆ ಹಾದಿಗೆ ತಿರುಗಿಕೊಳ್ಳಪ್ಪಾ ......."

ಕಾರನ್ನು ಹಿಂದಕ್ಕೆ ಸರಿಸಿ ಎಡಕ್ಕೆ ತಿರುವಿದೆ.

" ಸ್ವಲ್ಪ ನಿಲ್ಸು ಚಂದ್ರೂ.........ಕಾರ್ಮಿಕರ ವಿಜಯೋತ್ಸವ ನೋಡೋಣ."

ಶಾರದಾಗೆ ಬೇಸರವಾಯಿತು. ಪ್ರತಿಭಟನೆಯ ಸ್ವರದಲ್ಲಿ ಆಕೆ ಎಂದಳು :

" ಏನಿದು ? ಮನೆಗೆ ಹೋಗ್ಬಾರ್‍ದಾ ? "

" ನೋಡಿ ಸ್ವಲ್ಪ........ಇದೇ ಈಗ ನಮ್ಮ ಎರಡೂವರೆ ಲಕ್ಷ ಕ್ಷೌರ ಮಾಡಿದಾರೆ. ಹೊಟ್ಟೆ ಉರಿದು ಹೋಗ್ತಾ ಇದೆ ಇಲ್ಲಿ........

ನೋಡಿಯಾದರೂ ನೋಡೋಣ ಅವರ ಸಂಭ್ರಮಾನಾ.......''

ಘೋಷಣೆಗಳು– ಜಯಕಾರಗಳು ; ಕ್ರಾಂತಿಗೆ ವಿಜಯವಾಗಲಿ, ಎಂಬ ಹಾರೈಕೆ; ನಿಯೋಗದ ಪ್ರತಿಯೊಬ್ಬ ಸದಸ್ಯನ ಹೆಸರಲ್ಲೂ ಜಯಕಾರ.... ....

"ಕಾಣಿಸ್ತಾ ಇದಾನೇನೋ ನಿನ್ ಸ್ನೇಹಿತ ?''

"ಯಾರು ಕಂಠಿ ?''

"ಅವ್ನೇ ನಾಣಿ....''

"ಪಾಪ! ಎಲ್ಲಿದಾನೊ....ನೀನು ಅನ್ಯಾಯವಾಗಿ ಅವನ್ನ ಹೀನೈಸ್ತೀಯಾ.''

ಯಾವುದೋ ಹಳೆಯ ನೆನಪು ನನ್ನನ್ನು ಕಾಡಿಸಿ ಆ ಮಾತು ಹೇಳಿಸಿತು. ಆ ನಾಣಿಯ ಜೀವನದ ಬಗೆಗೆ ನನಗೆ ಗೌರವ ವಿತ್ತೇನೊ.

"ನನ್ಗೊತ್ತು ಚಂದ್ರೂ....ನೀನು ಬಹಳ ಮೃದು....ನಾಣಿಯಂಥವರಿಂದಾನೆ ನಮಗೆ ಆಪತ್ತು ಬರೋದು. ಆ ನಮ್ಮಕ್ಳು, ಒಂದು ನೋಡಿದರೆ ಕೂಲಿಕಾರರೂ ಅಲ್ಲ—ಈಚೆಗೆ ನಮ್ಮವರೂ ಅಲ್ಲ. ಈ ವಿದ್ಯಾವಂತ ಬಡ ಮಧ್ಯಮವರ್ಗ....ನಾನ್ಹೇಳ್ತೀನಿ ಚಂದ್ರೂ—ಈ ಲೋಕ್ದಲ್ಲಿ ಇರ್ಬೇಕಾದ್ದು ಎರಡೇ ವರ್ಗ: ನಮ್ಮದು—ಅವರದು. ನಡುವೆ ಮಧ್ಯಮವರ್ಗಾಂತಿರೋದರಲ್ಲಿ ಅರ್ಥವಿಲ್ಲ .......''

"ನಿನ್ದೆಲ್ಲಾ ಕಟ್ಟು ನಿಟ್ಟಾದ ಸ್ಪಷ್ಟವಾದ ಅಭಿಪ್ರಾಯ ಕಂಠಿ.''

ನಾನು ಹಾಗೆ ಹೇಳಿದೆ. ಆದರೆ ಹೇಳದ ಒಂದು ವಿಷಯ ವಿತ್ತು. "ನಿನ್ನ ಹಾಗಿಲ್ಲ ನಾನು. ನನ್ನದು ಅನಿಶ್ಚಯದ ಓಲಾಡುವ ದುರ್ಬಲ ಮನಸ್ಸು—'' ಎಂದು ಆತನಿಗೆ ತಿಳಿಸಬೇಕಾಗಿತ್ತು. ಆದರೆ ಹಾಗೆಂದು ಮಾತುಗಳಲ್ಲಿ ಹೇಳುವಂತಿರಲಿಲ್ಲ.

ಶಾರದಾಳನ್ನು ಮನೆಯಲ್ಲಿ ಬಿಟ್ಟ ಮೇಲೆ, ನಾವು ನನ್ನ ವಸತಿಗೆ ನಡೆದು ಬಂದೆವು.

"ಏನೇನಿದೆ ನೋಡು ಚಂದ್ರೂ.... ಬೀರ್‌ನಿಂದ ಹಿಡ್ದು ಏನಿದ್ದರೂ ಸರಿಯೆ—ಎಲ್ಲಾ ತೆಗೆ.''

ನಾನು ಎಲ್ಲವನ್ನೂ ತೆಗೆದೆ. ಶ್ರೀಕಂಠ ಮಿತಿಮೀರಿ ಕುಡಿದ.

“ ತ್ರೀ ಚೀಯರ್ಸ್....ಸಾಧನಾ ಬೋಸ್‌ಗೆ, ಶಾರದಾ ದೇವಿಗೆ, ಮುನಿಸ್ವಾಮಪ್ಪಿಗೆ....ಕೆಂಪು ಬಾವುಟಕ್ಕೆ....ಹಿಕ್....”

ಆ ದಿನ ಅವನು ವಾಪಸು ಹೋಗುವುದು ಸಾಧ್ಯವಿರಲಿಲ್ಲ. ನನ್ನ ಹಾಸಿಗೆಯನ್ನೆ ಎರಡು ಭಾಗಮಾಡಿ, ಮಂಚದ ಮೇಲೆ ಅವನನ್ನು ಮಲಗಿಸಿದೆ. ಮಗುವಿನಂತೆ ತೊದಲುತ್ತ ತೊದಲುತ್ತ ನಿದ್ದೆ ಹೋದ ಅವನನ್ನೆ ನೋಡುತ್ತ, ನನ್ನ ಹೃದಯ ಮುದುಡಿಕೊಂಡಿತು.

....ಆತ ಸುಖವಿಲ್ಲದ ಪ್ರಾಣಿ. ಹಣವಿತ್ತು—ಸಿರಿವಂತಿಕೆಯಿತ್ತು. ಸ್ಥಾನಮಾನಗಳಿದ್ದುವು. ಅದು ಜೀವನದ ಏಣಿಯಲ್ಲಿ ಮೇಲು ಭಾಗ. ಬಲು ಸುಲಭವಾಗಿ ಅದನ್ನವನು ತಲಪಿದ್ದ.

ನಾನು ಏಣಿಯ ಕೆಳ ಭಾಗದಿಂದ ಬಂದಿದ್ದೆ. ಅಲ್ಲಿ ಹಣವಿರಲಿಲ್ಲ—ಸಿರಿವಂತಿಕೆ ಇರಲಿಲ್ಲ. ಸ್ಥಾನಮಾನಗಳಿರಲಿಲ್ಲ. ಸುಖವೂ ಇರಲಿಲ್ಲ. ಜೀವನ ಅಲ್ಲಿ ಅಸಹ್ಯವಾಗಿತ್ತು.

ಆದರೆ ಈ ಮೇಲಿನ ಮಹಡಿಯಲ್ಲೂ ಜೀವನ ಅಸಹ್ಯವಾಗಿತ್ತಲ್ಲವೆ ?

ಇದು ಯಾಕೆ ಹೀಗೆ ? ಹೀಗೆ ಯಾಕೆ ?

ಹಾಗಾದರೆ ಸುಖವೆನ್ನುವುದು ಎಲ್ಲಿತ್ತು ? ಏಣಿಯ ಯಾವ ಹಂತದಲ್ಲಿತ್ತು ? ಸಮಾಜದಲ್ಲಿ ಯಾವನು ಸುಖವಾಗಿದ್ದ ಹಾಗಾದರೆ ?

....ಆ ಸುಖವೆನ್ನುವ ವಸ್ತು ಸಿಗುವುದು ಸಾಧ್ಯವೇ ಇಲ್ಲವೆ ?

ನಡುವಿರುಳು ದಾಟಿಯೂ ಬಲು ಹೊತ್ತಾದ ಮೇಲೆ ನನಗೆ ನಿದ್ದೆ ಬಂತು.

ಬೆಳಿಗ್ಗೆ ಎದ್ದು ನಾನು ಬಾಗಿಲು ತೆರೆದಾಗ, ಶ್ರೀಕಂಠನ ಮನೆಯ ಹಿರಿಯ ಆಳು ಮಗ ಹೊರಗೆ ಕುಳಿತಿದ್ದ.

“ ಏನೋ ? ”

“ ಅಮ್ಮಾವ್ರು ಕಳ್ಸವ್ರೆ. ಮೋಗೀಗೆ ಜರ. ಸಾಹೇಬ್ರು ಇದ್ರೆ ತಪ್ಣ ಕರ್ಕೊಂಬಾ ಅಂದ್ರು........”

" ಓ! ಆಗ಼್ಲೇ ಎಬ್ಬಿಸ್ಬೇಕಾಗಿತ್ತು."

ಆದರೆ ಹಾಗೆ ಬಾಗಿಲುತಟ್ಟಿ ಎಬ್ಬಿಸುವ ಧೈರ್ಯ ಅವನಿಗಿರಲಿಲ್ಲ. ನಾನು ಶ್ರೀಕಂಠನನ್ನು ಕರೆದೆ.

" ಕಂಠೀ ಕಂಠೀ........ಮಗೂಗೆ ಮೈ ಚೆನ್ನಾಗಿಲ್ವಂತೆ ಕಣೋ ........ಏಳು, ಏಳು."

ಧಿಗ್ಗನೆದ್ದು ಅವನು ಕಣ್ಣು ಹಿಸಕಿಕೊಳ್ಳುತ್ತಾ ಸುತ್ತಲೂ ನೋಡಿದ. ತಾನು ಎಲ್ಲಿದ್ದೆ ನೆಂಬುದನ್ನೂ ಅಲ್ಲಿದ್ದುದರ ಕಾರಣವನ್ನೂ ಆತ ತಿಳಿಯಲು ಸ್ವಲ್ಪ ಹೊತ್ತು ಹಿಡಿಯಿತು.

" ಯಾರ್ಬಂದಿದಾರೆ ? "

" ನಾಗ."

" ನಾಗ ! ನಾಗ ! "

" ಬಂದೆ ಬುದ್ಧಿ " ಎನ್ನುತ್ತ ಅವನು ಒಳಬಂದು, ಮತ್ತೊಮ್ಮೆ ಅದೇ ಸಂದೇಶವನ್ನಿತ್ತ.

ನಾವಿಬ್ಬರೂ ಹೊರಬಿದ್ದೆವು. ಹಾದಿಯಲ್ಲಿ ಯಾವ ಟ್ಯಾಕ್ಸಿಯೂ ಸಿಗಲಿಲ್ಲ. ಜಟಕಾ ಮಾಡಿಕೊಂಡು ಮನೆಸೇರಿದೆವು. ಆಳು ನಾಗ ನಮ್ಮನ್ನು ಹಿಂಬಾಲಿಸಿ ಬಂದ, ನಡೆಯುತ್ತ.

ಡಾಕ್ಟರು ಆಗಲೆ ಬಂದಿದ್ದರು. ಮೂರು ವರ್ಷ ದಾಟಿದ್ದ ಪುಟ್ಟ ಹುಡುಗ ಜ್ವರದಿಂದ ತಪ್ತನಾಗಿ ಕನವರಿಸುತಿದ್ದ : " ಅಮ್ಮಾ-ಅಪ್ಪಾ."

ದಾದಿ ಮುಖ ಬಾಡಿಸಿ ನಿಂತಿದ್ದಳು.

ಶ್ರೀಕಂಠ ರೇಗುತ್ತ ಕೇಳಿದ:

" ಎಷ್ಟೊತ್ನಿಂದ ಬೇಬಿ ಹೀಗಿದಾನೆ ? "

" ಅಂತೂ ಸುಖದುಃಖ ವಿಚಾರಿಸ್ತೀರಲ್ಲ ! "

" ಶಾರದಾ—ಪ್ರಶ್ನೆಗೆ ಉತ್ತರಕೊಡು."

" ಕೊಡ್ತೀನಿ. ನಾನು ರಾತ್ರೆ ವಾಪಸು ಬಂದಾಗಲೇ ಮೈ ಬೆಚ್ಚಗಿತ್ತು. ನೀವು ಮೇಲಕ್ಕೂ ಬರ್ಲಿಲ್ಲ........"

ಡಾಕ್ಟರೆಂದರು :

" ಮಗು ನೀರ್ನಲ್ಲಿ ನೆನೆದಿರ್ಬೇಕು."

ತಾಯಿ ಹೇಳಿದಳು :

" ನಿನ್ನೆ ಮಳೆ ಇರ್‍ಲಿಲ್ವಲ್ಲ ಡಾಕ್ಟ್ರೇ."

ಆ ದಾದಿ ಆಗ ಬಿಕ್ಕಿ ಬಿಕ್ಕಿ ಅಳುತ್ತ ಎಂದಳು :

" ನನ್ತಪ್ಪು........ನಂದು........ನೀವು ಡ್ಯಾನ್ಸಿಗೆ ಹೋದ್ಮೇಲೆ, ನಾನು ಮನೆಗೆ ಹೋಗ್ಬಂದೆ. ಬೇಗ್ನೆ ಬಂದೆ. ಆದ್ರೆ ಬೇಬಿ ಸ್ನಾನದ ಮನೇಗೆ ಹೋಗಿ ಕೊಳಾಯಿ ತಿರುಗ್ಸಿ, ಸ್ಪ್ರೇ ಸ್ನಾನ ಮಾಡ್ಕೊಂಡಿದ್ದ. ಎಷ್ಟೊತ್ತು ನೀರಲ್ಲಿದ್ನೋ... —"

" ಆ ! " ಎಂದು ಶಾರದಾ ಹಲ್ಲು ಕಡಿದಳು: " ನಾನಿದ್ದಾಗ ಮನೆಗೆ ಹೋಗಿ ಬರ್‍ಬಾರ್‍ದಾಗಿತ್ತೆ ? "

ಡಾಕ್ಟರು ಮಗುವಿನ ಕೊಠಡಿಯಿಂದ ನಮ್ಮನ್ನೆಲ್ಲ ಹೊರಹಾಕಿದರು

ಚಿಕಿತ್ಸೆ ನಡೆಯಿತು. ಮಗುವಿನ ಕಾಹಿಲೆ, ಆ ದಂಪತಿಗಳನ್ನು ಮತ್ತೆ ಒಂದುಗೂಡಿಸಿದಂತೆ ತೋರಿತು.

....—ಮಗುವಿನ ಕಾಹಿಲೆ ಗುಣವಾಯಿತು. ಗಂಡ ಹೆಂಡತಿ ಹಿಂದಿನಂತೆಯೇ ಉತ್ತರ ದಕ್ಷಿಣಗಳಾದರು.

ಅವರ ಜಗಳಗಳೂ ಹೆಚ್ಚುತಿದ್ದುವು.

ಕಂಠಿ ಕೇಳುತಿದ್ದ, ನೋಯಿಸಿ—ಕೆದಕಿ ಕೇಳುತಿದ್ದ :

" ಏನ್ರೀ ಶಾರದಾ ದೇವಿ, ರಾತ್ರೆ ಒಮ್ಮೊಮ್ಮೆ ನಾನು ಮನೆಗೆ ಬರದೇ ಇದ್ರೂ ಸುಮ್ಮಗಿದೀರಲ್ಲ."

' ವಿಚಾರಣೆ ನಡೆಸ್ಬೇಕೇನು ? "

" ಅಲ್ಲ, ನೀವು ಕೂಡಾ ಎಲ್ಲಾದರೂ ಹೋದರೆ ಬಂದರೆ ನಾನೂ ಕೇಳುವ ಹಾಗಿಲ್ವೇನೊ ? "

" ಕೇಳೋ ಅಗತ್ಯ ತೋರುತ್ತೊ ? "

ಆಮೇಲೆ ಉದ್ವಿಗ್ನತೆ.

" ಶಾರದಾ ಯಾಕೆ ಹೀಗ್ಮಾತಾಡ್ತೀಯಾ ? "

" ಹ್ಯಾಗ್ಮಾತಾಡ್ತೀನಿ ? "

“ ಡ್ಯಾಮಿಟ್.”

ಇಂಥ ಸಂಭಾಷಣೆಯನ್ನು ನಾನು ಕೇಳುತಿದ್ದೆ. ನನಗದು ಅಭ್ಯಾಸವಾಗಿತ್ತು. ಬೋರ್ಗಲ್ಲ ಮೇಲೆ ನೀರು ಸುರಿದು ಹರಿದು ಹೋದ ಹಾಗೆ. ಆದರೆ ನಾನು ಕಲ್ಲಾಗಿದ್ದೆನೆ? ಅದು ಸಂದೇಹದ ವಿಷಯ. ಆದರೆ ನನ್ನ ಕಾಲುಗಳು ಮಾತ್ರ ಕೆಸರಿನಲ್ಲಿ ಹೂತು ಹೋಗಿದ್ದ ಹಾಗೆ ಭಾಸವಾಗುತಿತ್ತು.

ಈ ರೀತಿಯ ಜೀವನ ನನಗೆ ಬೇಸರ ಬಂದರೆ ಆಶ್ಚರ್ಯಪಡ ಬೇಕಾದ್ದೇನೂ ಇರಲಿಲ್ಲ. ಆದರೆ ನಾನೇನು ಮಾಡುವುದು ಸಾಧ್ಯ ವಿತ್ತು? ಮತ್ತೆ ಸಾಯುವ ಬಯಕೆ........ಏನಾಗಿ ಬಿಟ್ಟೆ, ನಾನು!

ಆದರೆ ಬೇಬಿ........ಶ್ರೀಕಂಠ—ಶಾರದೆಯರ ನಡುವೆ ಯಾತನೆ ಗೊಳಗಾಗಿ ಬೆಳೆಯುತಿದ್ದ ಆ ಬೇಬಿ........ಜೀವನದಲ್ಲಿ ಅತ್ಯುನ್ನತ ವಾದ ಅವಸ್ಥೆಯೊಂದಿದ್ದರೆ ಅದು ಶೈಶವ. ಮಗುತನಕ್ಕಿಂತ ಹಿರಿ ದಾದುದು ಇನ್ನೊಂದಿಲ್ಲ. ಮಕ್ಕಳು ದೇವರಿದ್ದ ಹಾಗೆ ಎನ್ನುವು ದುಂಟು. ದೇವರು ಎಂದರೆ ಇಂಥದೇ ಎಂಬ ಕಲ್ಪನೆ ಹಿಂದೆ ನನ ಗಿತ್ತು. ಈಗ ಅದು ಮಾಸಿಹೋಗಿರುವ ಚಿತ್ರ. ಆದರೆ ಮಕ್ಕಳ ಹಾಗೆ ದೇವರು ಇರುವುದು ನಿಜವಾದರೆ, ನಾನು ದೇವರನ್ನೂ ಪ್ರೀತಿಸುವೆ. ದೇವರೆಂಬವನು ಸೃಷ್ಟಿ ಲಯ ಕರ್ತೃ ಎಂದು ಹೇಳುತ್ತಾರೆ. ಅದು ನಿಜವಾದರೆ, ದೇವರು ಮಕ್ಕಳ ಹಾಗಿರುವುದು ಸಾಧ್ಯವಿಲ್ಲ.

ಹಸುಳೆಯ ಮುಗುಳು ನಗು........ನಾನು ಅವರ ಬೇಬಿಯನ್ನು ಪ್ರೀತಿಸಿದೆ. ಅವನನ್ನು ನಾನು ಎತ್ತಿ ಮುದ್ದಾಡದ ದಿನವಿರಲಿಲ್ಲ ಆ ಮಗು ನನ್ನನ್ನು “ ಮಾಮಾ ” ಎಂದು ಕರೆಯುತ್ತಿದ್ದ. ಯಾವ ಮಾವನೋ ಏನೋ .. ....ಆದರೆ ಆ ಪದ ನನ್ನ ಮತ್ತು ಆತನ ಸಂ ಬಂಧವನ್ನು ಸ್ಥಿರಗೊಳಿಸಿತ್ತು.

ಅವನ ನಾಲ್ಕನೆಯ ವರ್ಷ—ಎಷ್ಟೊಂದು ಕುತೂಹಲಿಯಾಗಿ ಆತ ಬೆಳೆಯುತಿದ್ದ! ಸಾವಿರ ಪ್ರಶ್ನೆಗಳನ್ನು ಕೇಳುವ ಅಭ್ಯಾಸ ಅವ ನದು. “ಮಾಮಾ, ನಂಗೆ ನಾಯ್ಮರಿ ಬೇಕು.” “ ಮಾಮಾ, ಕೂಚ್ಮರಿ ಯಾರು ಮಾಮಾ?” “ ಆಕಾಶ್ದಲ್ಲಿ ಸ್ವಿಚ್ಚು ಹಾಕಿ ಉರಿಸೋನು

ಯಾರು ಮಾಮಾ?" "ದೇವರು ಉರಿಸ್ತಾನೆ — ಅಂತಾಳಲ್ಲ ಆಯಾ. ದೇವರು ಹ್ಯಾಗಿದಾನೆ ಮಾಮಾ?" "ಜ್ವರ ಬಂದರೆ ಚೆನ್ನಾಗಿರತ್ತೆ ಅಲ್ವಾ? ಬೆಚ್ಚಗೆ ಮಲಕೋಬಹುದು."

ಮಗು ಯಾರದು? ಯಾರ ಮಗ ಈತ? ಚಿರಜವ್ವನೆಯಾಗಿ ಇರಲು ಸರ್ವಪ್ರಯತ್ನ ಮಾಡುತ್ತಿದ್ದ ಶಾರದಾ ಅವನನ್ನು ಹೆಚ್ಚು ಮುದ್ದಾಡುತ್ತಿರಲಿಲ್ಲ. ಶ್ರೀಕಂಠ "ಎಲ್ಲೋ-ಏನೋ-ಯಾಕೋ-" ಎಂದು ದಿನಕ್ಕೊಮ್ಮೆ ಮಗನನ್ನು ಕೇಳಿದರೆ ಕೇಳಿದ, ಬಿಟ್ಟರೆ ಬಿಟ್ಟ. ಆತ ಮಗುವಿನೊಡನೆ ಮಾತನಾಡತೊಡಗಿದಾಗ ಮಾತ್ರ, ಶಾರದಳೂ ಮಾತನಾಡುತಿದ್ದಳು. ಮಗುವನ್ನೆಲ್ಲಿ ಆತ ತನ್ನದಾಗಿ ಮಾಡುವನೋ ಎಂಬ ಶಂಕೆ ಅವಳನ್ನು ಬಾಧಿಸುತ್ತಿದ್ದಿರಬೇಕು

ಆದರೆ ವಾಸ್ತವವಾಗಿ ಮಗು ಅವರದಾಗಿರಲಿಲ್ಲ. ನನ್ನದಾಗಿತ್ತು. ಬೆಳಿಗ್ಗೆ ನಾನು ಬರುವುದು ತಡವಾದರೆ ಬೇಬಿ ನನಗಾಗಿ ಕಾದಿರುತಿದ್ದ. "ಮಾಮಾ ಬಂದ್ಮೇಲೆ ಬ್ರೇಕ್‌ಫಾಸ್ಟ್" ಎನ್ನುತಿದ್ದ. ಆಡುವಾಗಲೂ ಅಷ್ಟೆ; ಉಣ್ಣುವಾಗಲೂ ಅಷ್ಟೆ.

ಅದನ್ನು ಕಂಡು ಶಾರದೆಗೆ ಅಸೂಯೆಯಾಗುತಿತ್ತು.

"ಎಲ್ಲರೂ ಸೇರಿ ಮಗೂನ ಕೆಡಿಸಿದ್ರು," ಎಂದು ಅವಳು ಆಗಾಗ್ಗೆ ಆಕ್ರೋಶಮಾಡುತಿದ್ದಳು. ಆದರೆ ಎಂದೂ ನೇರವಾಗಿ ನನ್ನನ್ನು ಬಯ್ಯುತ್ತಿರಲಿಲ್ಲ. ನನ್ನೊಡನೆ ಮಗುವಿನ ಬಗ್ಗೆ ಮಾತನಾಡುತ್ತಿರಲಿಲ್ಲ.

ಪುತ್ರಸಂತಾನವಾಗದೇ ಹೋದರೆ ಮೋಕ್ಷ ಸಿಗುವುದಿಲ್ಲವಂತೆ. ಇನ್ನೊಂದು ಲೋಕದ ಯೋಚನೆಯನ್ನೆಂದೂ ನಾನು ಮಾಡಿದವನಲ್ಲ. ಈ ಲೋಕದಲ್ಲಿ ಮಾನವನಾಗಿ ಬಾಳಬೇಕೆಂಬುದಷ್ಟೇ ನನಗಿದ್ದ ಅಪೇಕ್ಷೆ ನನ್ನ ಪಾಲಿಗೆ ಅದು ಫಲಿಸದೇ ಹೋದ ಅಪೇಕ್ಷೆ.

ಇನ್ನು ಪುತ್ರ ಸಂತಾನ? ಆಗಲೆ ಹೇಳಿದೆನಲ್ಲ? ಮಕ್ಕಳನ್ನು ನಾನು ಪ್ರೀತಿಸುತಿದ್ದೆ. ಆದರೆ, 'ವಂಶದ ಕುಡಿ' ಯಾಗಿ ನನ್ನದೊಂದು ಮಗುವಿರಬೇಕೆಂದು ನಾನೆಂದೂ ಬಯಸಲಿಲ್ಲ. ಮುದ್ದಾದ ಎಳೆಯ ಕೈಯನ್ನು ನನ್ನದರಲ್ಲಿಟ್ಟು ಪುಟ್ಟ ಹೆಜ್ಜೆಗಳನ್ನಿಡುತ್ತ ನನ್ನ ಜತೆಯಲ್ಲಿ

ನಡೆದು ಬರುವ ಒಂದು ಮಗುವಿದ್ದರಾಯಿತು. ಅದು ಯಾರದಾದರೂ ಸರಿಯೆ. ಅದಕ್ಕಿಂತ ಹೆಚ್ಚು ನನಗೆ ಬೇಕಾಗಿರಲಿಲ್ಲ........

ಯುದ್ಧ ಮುಕ್ತಾಯವಾಗಿತ್ತು ಆಗಲೆ. ಆದರೆ, ಆ ಯುದ್ಧದ ಶನಿ ಸಂತಾನಗಳಾಗಿದ್ದ ಕಳ್ಳಪೇಟೆ, ದಾಸ್ತಾನುಗಾರಿಕೆ, ಸತ್ತಿರಲಿಲ್ಲ. ಜನರ ಎಲುಬುಗೂಡುಗಳ ಮೇಲೆ ಹಣದ ಥೈಲಿ ಕಟ್ಟಿದವರು, ಕಟ್ಟು ತ್ತಲೇ ಹೋದರು.

ಜನರ ಎಲುಬು ಗೂಡು ಮತ್ತು ಹಣದ ಥೈಲಿ. ಜನರು ಎಂದರೆ ಯಾರು? ಎಲುಬು ಗೂಡುಗಳಂತಹ ಶರೀರಗಳಿದ್ದ ಜನರ ಬಗ್ಗೆ ನನಗೆ ಕನಿಕರವಿತ್ತೆ? ದುರ್ಬಲರನ್ನು ಎಂದೂ ನಾನು ಪ್ರೀತಿಸಿದವ ನಲ್ಲ. ದುರ್ಬಲನಾದ ವ್ಯಕ್ತಿಯೂ ಒಂದೇ—ಸತ್ತ ಇಲಿಯೂ ಒಂದೇ. ಆದರೆ, ಒಂದೇ ಸಮನೆ ಇಲಿ ಸತ್ತರೆ ಅಂಟು ಜಾಡ್ಯ ಬರುವುದಲ್ಲವೆ? ಹಾಗೆಯೇ, ಥೈಲಿಯ ಭಾರದಿಂದ ಎಲುಬು ಗೂಡುಗಳೂ ಪುಡಿ ಯಾದರೆ?.... .. . ..ಎಲ್ಲವೂ ದುರಂತವಾಗಿಯೇ ತೋರುತಿತ್ತು— ಎಲ್ಲವೂ.

ಶ್ರೀಕಂಠ ಹೇಳುತ್ತಿದ್ದ :

"ಚಂದ್ರೂ, ನೀನು ನಿರಾಶಾವಾದಿ ಕಣೊ."

ನಿಜವಿದ್ದಿರಬಹುದು. ಆದರೆ ಹಾಗೆ ಹೇಳಿದ ಅವನನ್ನು ಆಶಾ ವಾದಿ ಎನ್ನುವುದು ಸಾಧ್ಯವಿತ್ತೆ? ಅವನ ಆಶಾವಾದದಿಂದ, ಅವನಿ ಗೊಬ್ಬನಿಗೇ ಲಾಭವಾಗುತ್ತಿತ್ತು—ಇತರರಿಗಲ್ಲ. ಅವನ ದೃಷ್ಟಿಯಲ್ಲಿ ಎಲ್ಲವೂ ಸ್ಪಷ್ಟವಾಗಿತ್ತು: ಈ ಜಗತ್ತು ಸಮರ್ಥರದು; ಬಾಯಿ ಇದ್ದ ವನೇ ಬದುಕಿದ; ಹಣ ಸಂಪಾದಿಸಿ ಬಲಾಢ್ಯನಾದವನೇ ಮಾನವ. ಅಲ್ಲಿ ಸಂಧಾನಕ್ಕೆ ಅವಕಾಶವಿರಲಿಲ್ಲ. ರಿಯಾಯತಿಯ ಮಾತಿರಲಿಲ್ಲ. ಎಲ್ಲವೂ ಕಟ್ಟುನಿಟ್ಟಿನ ಏರ್ಪಾಟು. ಒಂದು ಕಡಿತ ಎರಡು ತುಂಡು.

ಹಾಗಿದ್ದೂ ಅವನು ತನ್ನ ಆವರಣದ ಕೈದಿಯಾಗಿದ್ದ. ಬಾರಿ ಬಾರಿಗೂ ಆತ ಮಿತಿಮೀರಿ ಕುಡಿದಾಗ ನನಗೆ ವಿಷಾದವೆನಿಸುತಿತ್ತು.

"ಕಂಠಿ, ಒಂದ್ಮಾತು ಹೇಳ್ತೀನಿ. ಕೋಪಿಸ್ಕೊಳ್ತೀಯಾ?"

"ಯಾರಿಗೂ ಇಲ್ಲದ ಸ್ವಾತಂತ್ರ್ಯ ನಿನಗಿದೆ. ಹೇಳು."

"ಇಂಥ ಕುಡಿತದಿಂದ ಹಿತವಿಲ್ಲ. ನಿನ್ನ ಆರೋಗ್ಯದ ಗತಿ ಏನು? ನಾಳೆ ಏನಾದರೂ ಆದರೆ?"

"ಏನು ಆಗೋದು? ಸುಮ್ನಿರು ಚಂದ್ರೂ........ ನಾಳೆಯ ಯೋಚ್ನೆ ನನಗಿಲ್ಲ. ಈ ಪ್ರಪಂಚ್ದಲ್ಲಿ ಇರ್ಬೇಕಾದಷ್ಟು ದಿನ ಜರ್ಬಿನಲ್ಲೇ ಇರ್ತೀನಿ."

ನಾಳೆಯ ಯೋಚನೆ ನನಗೂ ಇರಲಿಲ್ಲ. ನನ್ನ ಆರೋಗ್ಯದ ಬಗೆಗೆ ನಾನೂ ಆಸಕ್ತಿ ವಹಿಸುತಿರಲಿಲ್ಲ. ಆದರೆ ಆ ಜೀವ ಸಂಕಟಪಡು ತಿದ್ದುದನ್ನು ಕಂಡಾಗ ಏನನ್ನಾದರೂ ಹೇಳಬೇಕೆನಿಸುತಿತ್ತು........

ನನ್ನ ಆರೋಗ್ಯ. ವನಜಳ ಪ್ರಕರಣವಾದ ಮೇಲೆ ಆ ಹೊಟ್ಟೆಯ ಬಾಧೆ ನನಗೆ ತಗಲಿರಬೇಕು. ವನಜಳಿಗೂ ಅದಕ್ಕೂ ಸಂಬಂಧವಿತ್ತು ಎಂದರೆ ಯಾರಾದರೂ ನಗಬಹುದು. ಅಂಥದೇನೂ ಇರಲಿಲ್ಲ. ಆದರೆ ಆ ವರೆಗಿನ ನನ್ನ ಜೀವನಕ್ರಮ, ಸಣ್ಣ ಪ್ರಮಾಣದ ಉಡುಗೊರೆ ಯಾಗಿ ಆ ಕರುಳಿನ ಕಾಹಿಲೆಯನ್ನು ನನಗೆ ಕೊಟ್ಟಿತು. ಆ ಮೇಲೆ ಒಂದರ ಬಳಿಕ ಒಂದಾಗಿ ಹಲವು ವರ್ಷಗಳು. ಅಸಲು ಬಡ್ಡಿ ಸೇರಿ, ಬಡ್ಡಿಗೆ ಬಡ್ಡಿಯಾಗಿ, ಕಾಹಿಲೆ ಬೃಹತ್ ರೂಪ ತಾಳುತಿತ್ತು. ನಾನು ಅದನ್ನು ಗಮನಿಸುತಿರಲಿಲ್ಲ. ನನಗೆ ಅದರ ಗೊಡವೆ ಇರಲಿಲ್ಲ.

ಮಿಲಿಟರಿಗೆ ಸಾಮಾನು ಪೂರೈಕೆ ನಿಂತಿತು. ಕಾರಖಾನೆಯಲ್ಲೂ ಒಂದು ಪರಿಮಿತಿಯೊಳಗೆ ಮಾತ್ರ ಲಾಭಬರುವುದು ಆರಂಭವಾಯಿತು.

ಅಷ್ಟಿದ್ದರೂ ಅದು ಕಡಿಮೆ ಲಾಭವೇನೂ ಆಗಿರಲಿಲ್ಲ.

........ಅಂಥ ಒಂದು ದಿನ ಶ್ರೀಕಂಠ ಮತ್ತು ನಾನು ಬಲು ಸಂಭ್ರಮದಿಂದ ಹೊತ್ತು ಕಳೆದೆವು.

ಆ ಸಂಜೆ ಶ್ರೀಕಂಠ ಕೇಳಿದ:

"ಗೊತ್ತಿದೆಯೇನೋ?"

"ಹೂನಪ್ಪಾ, ಪತ್ರಿಕೇಲಿ ಓದಿದೀನಿ."

"ಇವತ್ತು ನಡು ರಾತ್ರೆ ದಾಟಿದ್ಮೇಲೆ ನಾವು ಸ್ವತಂತ್ರರು!"

ಹಿಂದೊಮ್ಮೆ ನಾನು ರಕ್ಷಣೆಕೊಟ್ಟಿದ್ದ ದೇಶಭಕ್ತರ ನೆನಪಾಯಿತು.

"ಅವರೆಲ್ಲೊ ಕಂಠಿ, ಆ ದೇಶಭಕ್ತರು ?"

"ತಾಳವಮ್ಮಾ, ತಾಳು."

ಕತ್ತಲಾದಮೇಲೆ ನಾವು, 'ಸೈಮನ್ಸ್'ಗೆ ಹೋದೆವು. ಎಸ್ಕ್ರೀನಾ ಕಾರ್ಖಾನೆಯ ಮಾಲೀಕರ ಮಗನೊಬ್ಬ ನಮ್ಮನ್ನು ಸೇರಿಕೊಂಡ. ತಿಂಡಿ, ಕುಡಿತ, ಧೂಮಪಾನ....ಕೈ ಕೈ ಹಿಡಿದು ಕುಣಿತ....ಮೈಗೆ ಮೈತಗುಲಿಸಿ ಕುಣಿತ.

ಆಂಗ್ಲರೂ ನಾವೂ ಅಂದಿನಿಂದ ಮಿತ್ರರು. ಅವರ ಸಂಸ್ಕೃತಿಯನ್ನು ಒಪ್ಪಿಕೊಳ್ಳುವುದರಲ್ಲಿ ಅಪ್ಪಿಕೊಳ್ಳುವುದರಲ್ಲಿ ತಪ್ಪಿರಲಿಲ್ಲ. ಹಾಗೆ ಮಾಡುವುದು ನ್ಯಾಯವಾಗಿತ್ತು. ದೇಶ ಸ್ವತಂತ್ರವಾದ ಆನಂದೋನ್ಮಾದದಲ್ಲಿ ಯಾರದೋ ಬಾಹು ಯಾರದೋ ನಡುವನ್ನು ಬಳಸಿದರೆ, ಅದರಲ್ಲಿ ಅನ್ಯಾಯವೇನೂ ಇರಲಿಲ್ಲ.

ಯಾರೋ ಕೇಳುತ್ತಿದ್ದರು :

"ಒಬ್ಬರೇ ಬಂದಿದೀರಲ್ಲ ? ಶ್ರೀಮತಿ ಶ್ರೀಕಂಠರು ಕಾಣಿಸ್ತಾ ಇಲ್ಲ !"

ಶ್ರೀಕಂಠ ನನ್ನೆಡೆಗೆ ತಿರುಗಿ ಕೇಳಿದ :

"ಯಾರೊ ಆ ಪ್ರಶ್ನೆ ಕೇಳ್ತಿರೋನು ? ಏನಾಗ್ಬೇಕಂತೊ ಅವನ್ಗೆ ?"

ನಾನು ವಿನಯದಿಂದ ಉತ್ತರವಿತ್ತೆ :

"ಲೇಡಿ ಶ್ರೀಕಂಠರಿಗೆ ಆರೋಗ್ಯ ಸರಿಯಾಗಿಲ್ಲ ಸಾರ್."

ಸ್ವಲ್ಪ ಹೊತ್ತಾದ ಮೇಲೆ ಶ್ರೀಕಂಠ ಪ್ರಶ್ನಿಸಿದ :

"ನೀನೇನೋ ಹಾಗಂದೆ. ಆದರೆ ಶಾರದಾ ಎಲ್ಲಿಗೆ ಹೋಗಿದಾಳೋ ಯಾರಿಗೆ ಗೊತ್ತು?.... .. ಏನಪ್ಪ........ನಮ್ಮವರು ಇಷ್ಟೊತ್ತಿಗೆ ಮನೇಲೇ ಇರ್‍ತಾರೆ ಅಂತೀಯಾ ?"

"ಈ ದಿವಸವೂ ಅದೇ ವಿಷಯ ಚರ್ಚಿಸ್ಬೇಕೆ ?"

"ಸರಿ, ಬಿಟ್ಬಿಡೋಣ ಅದನ್ನ........ಅಲ್ಲ ಚಂದ್ರೂ, ನಾನು ಇಲ್ಲಿ ಈರೀತಿ ಇರೋದು ಅವಳು ಮಾತ್ರ ಪತಿಭಕ್ತೆ ಪರಾಯಣೆ

ಯಾಗಿರ್ಬೇಕೂಂತ ಭಾವಿಸೋದು—ಇದು ಸರಿಯಾ ? ”

“ ನೋಡಪ್ಪಾ ಕಂಠಿ. ಈ ವಿಷಯ ನಿಲ್ಲಿಸ್ಟೇ ಇದ್ದರೆ, ಹೊರ ಗ್ಹೋಗಿ ನಿಂತಿರ್ತೀನಿ.''

“ ತಪ್ಪಾಯ್ತು.”

ನಮ್ಮ ಜತೆಯಲ್ಲಿದ್ದವನು ಅದಾಗಲೇ ಯಾವುದೋ ಮೂಲೆ ಸೇರಿದ್ದ. ಎಂಥೆಂಥ ಜನರಿದ್ದರು ಅಲ್ಲಿ! ಸ್ವಾತಂತ್ರ್ಯದ ಮಂಗಳೋದಯವನ್ನು ಇದಿರುನೋಡುತ್ತ ಉನ್ನತ ಅಧಿಕಾರಿಗಳು ಡ್ಯೂಟಿಯ ಮೇಲಿದ್ದರು ನಿಜ. ಆದರೆ ಅವರ ಪತ್ನಿಯರು ಅಲ್ಲಿಗೆ ಬಂದಿದ್ದರು. ನಗರದ ಗಣ್ಯರು—ಸುಸಂಸ್ಕೃತರು—ದೊಡ್ಡ ಮನುಷ್ಯರು ಅಲ್ಲಿದ್ದರು. ಹೇಳಲು ಅಪ್ರಸಿದ್ಧ ವ್ಯಕ್ತಿಗಳು, ಎರಡೆರಡು ಫೋನ್ ನಂಬರಿದ್ದವರು, ಇಂಥ ಮನೆತನದವರೆಂದು ಹೇಳಿಕೊಳ್ಳುವ ಸೌಲಭ್ಯವಿದ್ದವರು .......ಅದು ಸಮಾಜದ ಸೌರಭ........

ಎಂಥ ಸೌರಭ! .......ನನಗೆ ವಾಕರಿಕೆ ಬರುತಿತ್ತು. ಮೂಗು ಮುಚ್ಚಿಕೊಳ್ಳಬೇಕೆನಿಸುತಿತ್ತು.

ಶ್ರೀಕಂಠನನ್ನೆಳೆದುಕೊಂಡು ಬಾಲ್ಕನಿಗೆ ಹೋದೆ. ಹನ್ನೆರಡು ಹೊಡೆಯುವ ಹೊತ್ತು. ಸಿಂಗರಿಸಿದ್ದ ಬೀದಿಗಳು ವಿದ್ಯುದ್ದೀಪಗಳ ಹಾಲು ಬೆಳಕಿನಲ್ಲಿ ಹಗಲಿನಂತೆ ಕಾಣಿಸುತ್ತಿದ್ದುವು........ಆ ಜನ ಜಂಗುಳಿ! ಜನರಿಗೆ ಹುಚ್ಚು ಹಿಡಿಯಿತೇನು ಹಾಗಾದರೆ? ಆ ಸಂತೋಷ ಕೋಲಾಹಲ ...ಹಾಗಾದರೆ ನಾಳೆಯಿಂದ ನಿಜವಾಗಿಯೂ ಜಗತ್ತು—ನಮ್ಮ ಜಗತ್ತು—ಬದಲಾಗುವುದೆ ? ಮಾನವ ಬದಲಾಗುವನೆ? ಶ್ರೀಕಂಠ ಇನ್ನು ನಾರಾಯಣನನ್ನು ಅವಹೇಳನ ಮಾಡಲಾರನೆ ?

ಬೆತ್ತದ ಎರಡು ಕುರ್ಚಿಗಳನ್ನು ತರಿಸಿ ನಾವು ಅಲ್ಲಿ ಕುಳಿತೆವು. ‘ ಸ್ಪೈಮನ್ಸ್ ’ ನವರು ದೇಶಪ್ರೇಮಿಗಳಾಗಿ ಮಾರ್ಪಟ್ಟಿದ್ದರು....ಒಂದು ಹಿಂದೀ ಗೀತ........ಆ ಬಳಿಕ ಒಂದು ಇಂಗ್ಲಿಷ್........ಗಾಳಿ ತಣ್ಣನೆ ಬೀಸುತಿತ್ತು. ನನ್ನ ಎವೆಗಳು ಮುಚ್ಚಿಕೊಂಡುವು. ಕೈ ಬೆರಳುಗಳ ನಡುವೆ ಸಿಗರೇಟು ಉರಿಯುತ್ತಲೇ ಇತ್ತು........

ಸ್ಫೋಟನವಾದಂತೆ ಸದ್ದು ! ನಾನು ಬೆಚ್ಚಿ ಬಿದ್ದೆ. ನಿದ್ದೆ ಹೋ

ಗಿದ್ದ ನನಗೆ ಎಚ್ಚರವಾಯಿತು.

"ಕಂಠಿ! ಏನಾಯ್ತು? ಏನು?"

"ಕುಶಾಲು ತೋಫು ಹಾರಿಸಿದರು ಕಣೋ. ಸ್ವಾತಂತ್ರ್ಯ ಬಂದು ಆಗಲೇ ಒಂದು ನಿಮಿಷವಾಯ್ತು. ಸ್ವಾತಂತ್ರ್ಯ ಬಂದ ಶುಭ ಘಳಿಗೇಲಿ ನಿದ್ದೆ ಹೋದೆಯಲ್ಲೋ ಭೂಪ!"

ನಾನು ಆಕಳಿಸಿದೆ.

"ಬಾ ಚಂದ್ರೂ........ಡಾನ್ಸಿಂಗ್ ಹಾಲ್ನಲ್ಲಿ ವಂದೇ ಮಾತರಂ ಹಾಡ್ತಿದಾರೆ ಬಾ........"

ನಾನು ಅವನನ್ನು ಹಿಂಬಾಲಿಸಿದೆ.

"ಸಸ್ಯ ಶ್ಯಾಮಲಾ ಮಾತರಂ—ವಂದೇ ಮಾತರಂ...."

............

ನಾವು ಬೀದಿಗಿಳಿದೆವು. ಜನ ಹುಚ್ಚೆದ್ದು ಕುಣಿದಾಡುತಿದ್ದರು. ಅವರೊಡನೆ ಬೆರೆಯಬೇಕೆಂಬ ಆಸೆಯಾಯಿತು ನನಗೆ. ಆ ಪ್ರವಾಹ ದೊಡನೆ ತೇಲಿಹೋಗುವುದೇ ಜೀವನವೋ ಏನೊ! ಜನರ ಅಳುವಿ ನೊಡನೆ ನಗುವಿನೊಡನೆ ಸಹಭಾಗಿಯಾಗುವುದು........ಜನರು ಇದು ಸ್ವಾತಂತ್ರ್ಯವೆಂದು ನಂಬಿ ಸಂತೋಷಪಡುತ್ತಿರುವಾಗ ನಾನೂ ಸಂ ತೋಷ ಪಡಬೇಕು. ಅದು ಕ್ಷಣಿಕವಾದರೆ ಕ್ಷಣಿಕವಾಗಲಿ. ತಪ್ಪೇನು ಅದರಲ್ಲಿ?

"ಕಂಠಿ........ಇಲ್ನೋಡು, ಎಷ್ಟೊಂದು ಜನ ಸಂತೋಷ ದಿಂದಿದಾರೆ."

"ಎಲ್ಲಿ?"

"ಈ ಬೀದೀಲಿ."

"ಇವರ್ನ ಜನರೂಂತ ಕರೀತಿಯೇನು?........ಹುಂ. ಇನ್ನು ಇವರ್ಜತೇಲಿ ಕುಣಿಯೋಣ ಅಂತ ಬೇರೆ ಹೇಳ್ಬೇಡ."

ನನ್ನ ಉಸಿರು ಕಟ್ಟಿಹೋಯಿತು.

"ಚಂದ್ರೂ, ಯಾಕೋ ಮೈ ಭಾರವಾಗ್ತಿದೆ. ಡ್ರೈವ್ ಮಾಡೋ ಸ್ಥಿತೀಲಿ ಇದೀಯೊ?"

" ಬಾ ಕಂಠಿ........ಹೋಗೋಣ.... ...ಜನರಿಂದ.........ದೂರ ವಾಗಿ, ನಿರ್ಜನ ಬೀದಿ ಇದ್ದರೆ ಆ ಹಾದೀಲಿ, ಹೊರಟು ಹೋಗೋಣ."

" ಎಲ್ಲಿದೆ ಕಾರು ? "

" ಅಲ್ಲೇ ನಿಂತಿದೆ. ಮನೆಗೆ ತಾನೆ? "

" ನಮ್ಮನೇಗಲ್ಲ. ಶಾರದಾ ನೆನಪು ಆಗದ ಹಾಗೆ ನಿಮ್ಮನೇಗೆ ಹೋಗೋಣ. ಇದು ಸ್ವಾತಂತ್ರ್ಯದ ರಾತ್ರಿ ...ಅಲ್ಲ, ಸ್ವಾತಂತ್ರ್ಯದ ಬೆಳಗು........"

ನಾನು ವ್ಹೀಲಿನ ಬಳಿ ಕುಳಿತೆ. ಅವನು ಹಿಂಬದಿಯಲ್ಲಿ ಉರುಳಿ ಕೊಂಡ.

" ಚಂದ್ರೂ........ಏನಾದರೂ ಹಾಡೋ ದೊರೆ."

" ಕತ್ತೆಗಳು ಕಾರ್ನ ಅಟ್ಟಿಸ್ಕೊಂಡು ಬರಬಹುದು ! "

....ನಾನು ಎಚ್ಚತ್ತಿದ್ದೆ; ಆದರೆ ಶ್ರೀಕಂಠ ನಿದ್ದೆಹೋಗಿದ್ದ.

....ಇನ್ನೂ ನಾನು ಈ ರಾತ್ರೆ ಎಚ್ಚತ್ತೇ ಇದ್ದೇನೆ. ಆದರೆ ಈ ದಿನ ಇಲ್ಲಿಗೆ ಈ ಕಥೆಯನ್ನು ನಿಲ್ಲಿಸಬೇಕು. ದೇಶದ ಇತಿಹಾಸದಲ್ಲಿ ಒಂದು ಅಧ್ಯಾಯ ಮುಗಿಯಿತು ಆ ದಿನ—ಸ್ವಾತಂತ್ರ್ಯ ಬಂದ ದಿನ. ಅದೊಂದು ಮುಖ್ಯ ಮೈಲುಗಲ್ಲು.

ನನ್ನ ಜೀವನದಲ್ಲಿ ಸರಿಯಾಗಿ ಅಳತೆ ಮಾಡಿ ಮೈಲುಗಲ್ಲುಗಳನ್ನು ಹಾಕಿಯೇ ಇಲ್ಲ. ಅದು ಸಿಮೆಂಟ್ ಕಾಂಕ್ರೀಟಿನ ನೇರವಾದ ರಸ್ತೆಯಾಗಿರಲೇ ಇಲ್ಲವಲ್ಲ! ಹಾಗಿರುತ್ತ, ಸ್ವಾತಂತ್ರ್ಯ ದಿನದಂದು ನನ್ನ ಜೀವಿತ ವೃತ್ತದ ಒಂದು ಅಧ್ಯಾಯವನ್ನು ನಾನು ಮುಗಿಸಿದರೆ ತಪ್ಪಾಗಲಾರದು—ಅಲ್ಲವೆ ? ಯಾರೂ ತಪ್ಪೆಣಿಸಲಾರರು—ಅಲ್ಲವೆ ?

ಇನ್ನು ಎರಡು ದಿನಗಳುಳಿದಿವೆ—ನಾಳೆ ಮತ್ತು ನಾಡದು. ಅನಂತರದ ಅನಂತ ವಿಸ್ತಾರ ಎಷ್ಟೊಂದು ಮೋಹಕವಾಗಿದೆ !

ಕನಸು ಕಾಣುವುದರಲ್ಲಿ ಒಂದು ರೀತಿಯ ಸೊಗಸಿರುತ್ತದೆ. ನಾನು ಬಲ್ಲೆ. ಹಲವರ ಪಾಲಿಗಿರುವ ಭಾಗ್ಯ ಅದೊಂದೇ.

ನಾನು ಮಾತ್ರ ಇನ್ನು, ಬಾರಿ ಬಾರಿಗೂ ಕನಸು ಕಾಣ

ವಂತಿಲ್ಲ. ಕನಸು ಬೀಳುವಂತಹ ನಿದ್ದೆಯೂ ನನ್ನ ಪಾಲಿಗೆ ಇನ್ನು ಇರುವಂತಿಲ್ಲ.

ನನ್ನ ಜೀವನವ ಕಳೆದ ಐದು ವರ್ಷಗಳ ಬಗ್ಗೆ ನಾನು ನಾಳೆ ಬರೆಯಬೇಕು. ಆ ಸ್ಮರಣೆಗಳೊ — ಹಸುರಾಗಿವೆ. ಮುಟ್ಟಿದರೆ ಉದುರುವ ಹಾಗೆ ಮನಸ್ಸನ್ನು ಮುತ್ತಿವೆ. ಅದಕ್ಕೊಂದು ರೂಪ ಕೊಟ್ಟು ಕಾಗದದ ಮೇಲಿಳಿಸಲು ನಾಳೆ ನಾನು ಸಮರ್ಥನಾಗಬೇಕು.

ಆ ಶಕ್ತಿಯನ್ನು ಕೊಡೆಂದು ಯಾರನ್ನಾದರೂ ನಾನು ಪ್ರಾರ್ಥಿಸಲೆ ?

ಪ್ರಾರ್ಥನೆ ಮತ್ತು ನಾನು........ನಗುಬರುತ್ತಿದೆ !

ನಮ್ಮ ಜನ, ತಮ್ಮ ಶಕ್ತಿಯಲ್ಲೇ ತಾವು ವಿಶ್ವಾಸವಿಡದೆ, ಹಿಡಿದುದು ಮುಟ್ಟಿದ್ದಕ್ಕೆಲ್ಲ ಇನ್ನೊಂದು ಶಕ್ತಿಯಲ್ಲಿ ವಿಶ್ವಾಸವಿಡುತ್ತಿರುವುದರಿಂದಲೇ ಹೀಗಾಗಿರುವರೋ ಏನೋ.... ...

ಹೋಗಲಿ ಬಿಡಿ. ನನ್ನ ಅಭಿಪ್ರಾಯಕ್ಕೆ ನೀವು ಬೆಲೆಕೊಡಬೇಕಾದ್ದಿಲ್ಲ.

ಆದರೆ ನನ್ನ ಕತೆಯ ಉಳಿದ ಭಾಗವನ್ನು ನೀವು ತಿಳಿಯಲೇ ಬೇಕು. ಅದು, ಇನ್ನೂ ಬದುಕಿರುವವನೊಬ್ಬನ ಬಯಕೆ........ ನೀವು ಅದನ್ನು ಈಡೇರಿಸುವಿರೆಂದು ನಾನು ಬಲ್ಲೆ.

## . . . ಸೋಮವಾರ

ಇದೇ ಈಗ ಸೆರೆಮನೆಯ ಪಹರಿ ಏಳು ಹೊಡೆದಿದ್ದಾನೆ. ಮನಸಿಲ್ಲದ ಮನಸಿನಿಂದ ಎದ್ದು ಕುಳಿತಿದ್ದೇನೆ. ಏಳದೆ ಹೇಗಿರಲಿ? ಸಿರಿವಂತಿಕೆಯ ಸೋಮಾರಿತನ ನನ್ನ ಪಾಲಿಗೆ ಇನ್ನಿಲ್ಲ. ಪಯಣ ಹೊರಟಿರುವ ಪಥಿಕ, ಸೂರ್ಯೋದಯದಲ್ಲೆದ್ದು ಮುಂದಿನ ಮಾರ್ಗ ಕ್ರಮಿಸಲೇ ಬೇಕು. ನಿಯಮ ನಿಷ್ಠೆ ಇದ್ದರೆ ಮಾತ್ರ ಆ ಯಾತ್ರಿಕ, ಹಿಮವತ್ಪರ್ವತವನ್ನೇರಿ ಕೈಲಾಸನಾಥನನ್ನು ಕಾಣಬಲ್ಲ.

ಈ ಒಂದು ವಾರದಲ್ಲಿ ನಾನು ನಿಯಮನಿಷ್ಠೆ ಪಾಲಿಸಿದ್ದೇನೆ—ಹೊತ್ತಿಗೆ ಸರಿಯಾಗಿ ಏಳುವ ಮಟ್ಟಿಗೆ, ಹೊತ್ತಾಗುವವರೆಗೂ ಬರೆಯುವ ಮಟ್ಟಿಗೆ.

ಹಿಂದಿನ ನನ್ನ ಜೀವನದಲ್ಲಿ ಒಂದು ಸೂತ್ರವಿತ್ತೆ, ಕ್ರಮಬದ್ಧತೆಯಿತ್ತೆ? ಹಾಗೆಂದು ಯಾರಾದರೂ ಕೇಳಿದರೆ ನಾನು ಕೊಡಬಹುದಾದ ಉತ್ತರವಿಷ್ಟೆ: "ಇಲ್ಲ, ಇರಲಿಲ್ಲ." ನಾನು ಈ ಸ್ಥಿತಿಗೆ ಬಂದಿರುವುದಕ್ಕೆ, ಅಂಥ ಸೂತ್ರ ಕ್ರಮಬದ್ಧತೆ ಇಲ್ಲದೆ ಹೋದುದೂ ಒಂದು ಕಾರಣ.

ಇದು ಪ್ರಶಾಂತವಾದ ಪ್ರಾತಃಕಾಲ. ನಿಸರ್ಗದ ಮಾಧುರ್ಯವನ್ನು ಸವಿಯಲು ಕವಿ ಹೃದಯ ಬೇಕಂತೆ. ನನಗೆ ಕವಿ ಹೃದಯ ಇದೆಯೋ ಇಲ್ಲವೋ ಆ ಪರೀಕ್ಷೆಯಾಗಬೇಕಾದರೆ, ಯಾವನಾದರೊಬ್ಬ ಕವಿಯನ್ನು ಒರೆಗಲ್ಲಾಗಿ ಮಾಡಿ ನನ್ನನ್ನು ನಾನದಕ್ಕೆ ತೀಡಿ ನೋಡಬೇಕು! ಅಂತಹ ಬೌದ್ಧಿಕ ಕಸರತ್ತಿಗೆ ನಾನು ಸಿದ್ಧನಿಲ್ಲ; ಆ ಪಂದ್ಯಾಟಕ್ಕೆ ನನಗೆ ಪುರಸತ್ತಿಲ್ಲ!

ನನಗೆ ಈಗ ಆನಂದದ ಅನುಭವವೂ ಆಗುತ್ತಿದೆ; ನೋವಿನ

ಅನುಭವವೂ ಆಗುತ್ತಿದೆ

ನೋವು ನನ್ನ ಕರುಳಿಗೆ ಸಂಬಂಧಿಸಿದ್ದು. ನಿದ್ದೆ ಕೆಟ್ಟಾಗ ಈ ನೋವು ಕೆರಳುತ್ತದೆ. ಘಂಟೆಗಟ್ಟಲೆ ಸಹಿಸಲಾಗದ ವೇದನೆ ಆಗ. ಮೊದಲು, ಅನ್ನಕೋಶದಿಂದ ಆರಂಭವಾಗಿ ಮೈಲು ಮೈಲುಗಳುದ್ದ ಕರುಳಿನ ದಾರಿಯಲ್ಲಿ ಯಾವುದೋ ನೋವಿನ ಸಂಚಾರ. ಆ ಬಳಿಕ ಅತ್ತಿಂದಿತ್ತ ನೋವಿನ ತೀವ್ರ ಗಮನ. ದಿಂಬು ಕಚ್ಚಿಕೊಂಡು ಗೋಳಿಡುತ್ತಾ ಎಲ್ಲವನ್ನೂ ಮರೆಯುವ ಯತ್ನ...... ಹೃದಯದ ಮೆದುಳಿನ ನೋವು ಕಿತ್ತಾಟಗಳಿಗೆ, ಕಿರೀಟವಿಡುತ್ತಿದೆ ಈ ಕರುಳು.

ದೇಶಕ್ಕೆ ಸ್ವಾತಂತ್ರ್ಯ ಬಂದಿತ್ತು. ಆದರೆ ನನ್ನ ಜಗತ್ತಿನೊಳಗೆ ನಾನೊಬ್ಬ ಕೈದಿಯಾಗಿಯೇ ಇದ್ದೆ—ನೀರಸ ಜೀವನದ ನೂರು ನಿರ್ಬಂಧಗಳ ಬೇಡಿ ತೊಟ್ಟ ಕೈದಿ.

ನಮ್ಮ ನಾಡಿನಲ್ಲಿನ್ನೂ ಹೊಸ ಬದಲಾವಣೆಯ ನಿಜಸ್ವರೂಪದ ಅರಿವು ಎಲ್ಲರಿಗೂ ಆಗಿರಲಿಲ್ಲ. ಅದಕ್ಕೋಸ್ಕರ ಇನ್ನೊಂದು ಹೋರಾಟ ನಡೆಯಿತು—ತ್ರಿವರ್ಣ ಧ್ವಜವನ್ನು ಅರಮನೆಯ ಮೇಲೆ ಏರಿಸುವ ಹೋರಾಟ .......ಆ ಬಳಿಕ ಮಂತ್ರಿಗಳು ಬಂದರು—ಕಾಂಗ್ರೆಸ್ ಮಂತ್ರಿಗಳು.

ತನ್ನ ಕಾರಿನ ಬಾನೆಟಿಗೂ ಶ್ರೀಕಂಠ ಮೂರು ಬಣ್ಣದೊಂದು ಬಾವುಟ ಹಚ್ಚಿದ. ಅವನ ಕಾರಖಾನೆಯ ಮೇಲೆ, ಮನೆಯ ಮೇಲೆ, ರೇಷ್ಮೆಯ ದೊಡ್ಡ ಆಕೃತಿಯ ತ್ರಿವರ್ಣ ಧ್ವಜಗಳು ಹಾರಾಡಿದುವು. ಮಗು ಬೇಬಿ ಬಾವುಟ ನೋಡಿ, ಎಲ್ಲ ಮಕ್ಕಳ ಹಾಗೆ ಕೈ ತಟ್ಟಿ ಕುಣಿದ. ಶ್ರೀಕಂಠನ ಮಾವನ ಮನೆಯಲ್ಲಿ ಸಚಿವ ಸಂಪುಟದ ಗೌರವಾರ್ಥ ಭಾರೀ ಭೋಜನ ಕೂಟವೇರ್ಪಟ್ಟಿತು. ಶಾರದಾ ಸಮರ್ಥೆಯಾಗಿ ಅತ್ತಿಂದಿತ್ತ ಓಡಾಡಿ ಏರ್ಪಾಟುಗಳ ಮೇಲ್ವಿಚಾರಣೆ ವಹಿಸಿದಳು. ಮಿಲಿಟರಿಯ ಸಶಸ್ತ್ರ ಹಿರಿಯರನ್ನೇ ತೂಗಿ ನೋಡಿದ್ದ ಶಾರದೆಗೆ, ಅಹಿಂಸೆಯ ಆರಾಧಕರಾದ ಸ್ವದೇಶೀ ಸಚಿವರನ್ನೆಲ್ಲ ಅಳೆಯುವುದು ಕಷ್ಟದ ಕೆಲಸವಾಗಿರಲಿಲ್ಲ.

ಆಮಂತ್ರಿತರನ್ನೆಲ್ಲ ಕಂಡು, "ಹೀಗೆ ದಯೆಮಾಡಿಸ್ಬೇಕು" ಎಂದು ಒಳಗೆ ಕರೆದೊಯ್ದು ಶಾರದೆಯ ವಶಕ್ಕೊಪ್ಪಿಸಿ, ಕೃತಕವಾಗಿ ಬಾರಿ ಬಾರಿಗೂ ಮುಗಳ್ನಕ್ಕು ಕೈ ಜೋಡಿಸಿ ಬೇಸರವಾಗಿ, ಶ್ರೀಕಂಠ ನನ್ನನ್ನೆಳೆದುಕೊಂಡು ಹೊರಬಂದ.

ಅವನ ಮುಖ ಮ್ಲಾನವಾಗಿತ್ತು. ಎಲ್ಲಿಗೋ ಓಡುತಿದ್ದ ಅವನ ಮನಸ್ಸನ್ನು ಹಿಡಿದು ತರಲೆಂದು ಕೇಳಿದೆ:

"ಅವನೆಲ್ಲೋ ಆ ಭೂಪ? ಆದಿವ್ಸ ನಮ್ಮನೇಲಿ ಅಡಗಿದ್ದು ಕ್ರಾಂತಿ ಮಾಡ್ದೋನು?"

ತನಗಿಷ್ಟವಿಲ್ಲದೆ ಇದ್ದರೂ ಅನಿವಾರ್ಯವಾಗಿ ಮುಗುಳ್ನಗುತ್ತ ಶ್ರೀಕಂಠ ಉತ್ತರವಿತ್ತ:–

"ಆ ದಿವ್ಸವೇ ಹೇಳಿದ್ದೆ—ಅದು ಸಾಮನ್ಯ ಘಟ ಅಲ್ಲಾಂತ. ಆತ ಇನ್ನು ಕೆಂದ್ರದಲ್ಲೇ ಸಚಿವನಾಗ್ತಾನೆ. ಅದಕ್ಕೋಸ್ಕರ ದಿಲ್ಲಿಗೆ ಹೋಗಿದಾನೆ. ಇನ್ನು ನಾವು ದಿಲ್ಲಿಗೆ ಹೋದರೆ, ಉಳ್ಕೊಳ್ಳೋದು ಅವರ್ಮನೇಲೆ!"

ಶ್ರೀಕಂಠನಿಗೆ ಖುಷಿಯಾಗ ಬೇಕೆಂದು ನಾನು ಗಟ್ಟಿಯಾಗಿ ನಕ್ಕೆ. ಆದರೆ ಆತ ಸತ್ಕಾರ ಕೂಟ ನಡೆಯುತ್ತಲಿದ್ದ ಹಾಲ್‌ನತ್ತ ನೋಡುತ್ತ ಮುಖ ಗಂಟಿಕ್ಕಿಕೊಂಡು ಗೊಣಗಿದ:

"ಬೆಕ್ಕು! ಬೆಕ್ಕು!"

"ಕಂಠಿ...."

"ನೋಡಿದ್ಯೇನೋ ಚಂದ್ರು ಬೆಕ್ಕ? ಬಿಳೀ ಹೊದಿಕೆಯ ಬಿಳೀ ಬೆಕ್ಕು...."

ಬೆಲೆ ಬಾಳುವ ಬಿಳಿಯ ರೇಷ್ಮೆ ಸೀರೆಯುಟ್ಟು ಶುಭ್ರ ಖಾದಿಯ ವಾತಾವರಣಕ್ಕೆ ಹೊಂದಿಕೆಯಾಗುವಂತೆ ಶಾರದಾ, ಜಗತ್ತೆಲ್ಲವೂ ತನ್ನದೆಂಬ ಆತ್ಮವಿಶ್ವಾಸದಿಂದ ನಗುತ್ತಿದ್ದಳು.

"ನಡಿ ಚಂದ್ರು, ನಾಲ್ಕು ನಿಮಿಷ ಹೊರಗೆ ಹೋಗ್ಬಿಟ್ಟು ಬರೋಣ."

ಅಳಿಯ ಹೊರ ಹೋದುದು ತಿಳಿದರೆ, ಆ ಮಾವ ಮುನಿದು

ಕೊಳ್ಳಬಹುದು. ಆದರೆ ಶ್ರೀಕಂಠನ ಕೊರಗಿಗೆ ಬೇಕಾದ ಔಷಧಿಗಿಂತ, ಮಾವನ ಮುನಿಸು ಮುಖ್ಯವಾಗಿರಲಿಲ್ಲ.

ನಾವು ಬೇಗನೆ ವಾಪಸು ಬಂದೆವು. ಬಂದಾಗ ಸುಪ್ರಸಿದ್ಧರು ಪಿಟೀಲು ಬಾರಿಸುತ್ತಿದ್ದರು.

“ ಇನ್ನು ಭಾಷಣ ಕಣೋ ಚಂದ್ರು. ಆಮೇಲೆ ವಂದನಾರ್ಪಣೆ.”

ಮಾನ್ಯ ಮಂತ್ರಿಗಳ ಸ್ವರ ಕೇಳಿಸುತಿತ್ತು :

“ ಧರ್ಮಸೇವಾಪ್ರಸಕ್ತ ಸದಾಶಿವ ಮೂರ್ತಿಯವರೇ, ಶ್ರೀಮತಿ ಶಾರದಾದೇವಿಯವರೇ, ಶ್ರೀಮಾನ್ ಶ್ರೀಕಂಠಯ್ಯನವರೇ....”

“ ಓ! ” ಎಂದು ಅಣಕಿಸಿದ ಶ್ರೀಕಂಠ.

ಆಳೊಬ್ಬನು ಓಡಿಬಂದು ಹೇಳಿದ:

“ ದೊಡ್ಡಯಜಮಾನ್ರೂ ಚಿಕ್ಕಮ್ಮಣ್ಣಿಯವರೂ ಅಗ್ಲಿಂದ ಬುದ್ಧೀರ್ನ ಕರೀತವ್ರೆ. ತಾವು ಬರ್ಬೇಕಂತೆ—”

ಮಗನನ್ನು ಮನೆಯಲ್ಲೆ ಬಿಟ್ಟು ಬಂದಿದ್ದ ಯುವತಿ ಶಾರದಾ ನಟನೆಯ ಬೆರಗು ನೋಟದಿಂದ ಮಾತಿನ ಮಳೆ ಸುರಿಸುತಿದ್ದ ಸಚಿವರನ್ನೇ ನೋಡುತಿದ್ದಳು. ಪಕ್ಕದಲ್ಲೇ ಒಂದು ಆಸನ ಖಾಲಿಯಾಗಿ ಕಾದಿತ್ತು—ಶ್ರೀಕಂಠನಿಗಾಗಿ.

“ ಬುದ್ಧಿಯವರಿಗೆ ಮೈ ಸರಿಯಾಗಿಲ್ವಂತೆ, ಆ ಮೇಲೆ ಬರ್ತಾರಂತೆ—ಅಂತ ಹೋಗಿ ಹೇಳಪ್ಪ.”

—ಹಾಗೆ ಹೇಳುತ್ತ ಶ್ರೀಕಂಠ, ಮೈ ಸರಿಯಾಗಿಲ್ಲವೆನ್ನುವುದಕ್ಕೆ ಸೂಚನೆ ಎಂಬಂತೆ, ಮೆದುಳನ್ನು ತಟ್ಟುತಿದ್ದ.

ಪ್ರಶಂಸೆ ಗುಣಗಾನದ ಆ ಭಾಷಣ ಮುಗಿಯುತಿದ್ದಂತೆ ಶಾರದಳೇ ಅಲ್ಲಿಗೆ ಬಂದಳು—ಬಿರುಗಾಳಿಯ ಹಾಗೆ.

“ ಏನಿದು ನಿಮ್ಮ ತಮಾಷೆ? ಬನ್ನಿ. ಅಪ್ಪ ಕರೀತಾ ಇದಾನೆ. ನೀವು ವಂದನಾರ್ಪಣೆ ಮಾಡ್ಬೇಕಂತೆ.”

“ ತಲೆ ಸಿಡೀತಾ ಇದೆ ಶಾರದಾ.”

“ ಇದೇ ಈಗ ಬಂತೇನೋ ಕಾಹಿಲೆ ? ”

“ ನೀವೇ ಅರ್ಪಿಸಿ ಶಾರದಾ ”

" ನಾನು ! ? "

" ಯಾಕೆ? ಮಾತಾಡೋದು ಇದೇ ಮೊದಲಿನ ಸಾರಿಯೇನೂ ಅಲ್ಲವಲ್ಲ ? "

" ನಿಮ್ಮಿಷ್ಟ. "

ಸೂಜಿ ಬಿದ್ದರೂ ಸಪ್ಪಳವಾಗುವಂತಹ ನೀರವತೆಯಲ್ಲಿ ಆ ಕಂಠದಿಂದ ಮಧುರವಾದ ಸ್ವರ ಹೊರಡುತಿತ್ತು. ಅರೆತೆರೆದ ಕಣ್ಣುಗಳಿಂದ, ಶ್ರೀಕಂಠ ಅವಳನ್ನೇ ನೋಡಿದ.

ಕಾರ್ಯ ನಿಮಿತ್ತದಿಂದ ಶ್ರೀಕಂಠ ಮುಂಬಯಿಗೆ ಹೋದ. ಅವನಿಲ್ಲದಾಗ ನಾನು ಆ ಮನೆಗೆ ಹೋಗಲು ಇಷ್ಟಪಡಲಿಲ್ಲ.... ಶ್ರೀಕಂಠನ ಹುಡುಗನನ್ನು, ಬೆಳೆಯುತಲಿದ್ದ ನಾಗರಾಜುವನ್ನು, ನೋಡದೆ ಇರುವುದು ಕಷ್ಟವಾಗಿತ್ತು. ಆದರೆ ಬೇರೆ ಹಾದಿ ಇರಲಿಲ್ಲ. ಶ್ರೀಕಂಠನಿಲ್ಲದಾಗ ಶಾರದೆಯನ್ನು ನೋಡುವ ಅಗತ್ಯ ನನಗಿರಲಿಲ್ಲ.

ಒಂದು ಮಧ್ಯಾಹ್ನ ಶ್ರೀಕಂಠನ ಮನೆಯ ಆಳು ಬಂದ—ವರ್ಷಗಳ ಹಿಂದೆ ಮಗು ಕಾಹಿಲೆ ಮಲಗಿದ್ದಾಗ ನಮ್ಮ ಮನೆಯಿಂದ ಶ್ರೀಕಂಠನನ್ನು ಕರೆದೊಯ್ಯಲು ಬಂದಿದ್ದನಾಗ.

" ಸ್ವಾಮಿಯೋರು ಪುರಸತ್ತು ಮಾಡ್ಕೊಂಡು ಬಂದ್ಹೋಗ್ಬೇಕಂತೆ."

" ಯಾಕೊ? ಪುಟ್ಬುದ್ಧಿಯೋರಿಗೆ ಮೈ ಚೆನ್ನಾಗಿಲ್ವೇನು ? "

' ಚೆಂದಾಕೈತೆ........ಪುಟ್ಬುದ್ಧಿಯೋರೂ ಸ್ವಾಮಿಾರ್‍ನ ಕೇಳ್ತಾ ಅವ್ರೆ."

ಮನಸಿಲ್ಲದೆ ಇದ್ದರೂ ನಾನು ಶ್ರೀಕಂಠನ ಮನೆಗೆ ನಡೆದು ಹೋದೆ. ತನ್ನ ಕೊಠಡಿಗೇ ಬರಹೇಳಿದಳು ಶಾರದಾ. ಬಾಗಿಲಲ್ಲಿ ನಾನು ನಿಂತಾಗ, ನಿಲುವುಗನ್ನಡಿಯ ಮುಂದೆ ಕುಳಿತು ಅವಳು ಹೆರಳು ಹಾಕಿಕೊಳ್ಳುತಿದ್ದಳು. ಹಿಂತಿರುಗಿ ನೋಡದೆಯೇ, " ಬನ್ನಿ " ಎಂದಳು.

" ಹೊರಗೆ ಕೂತಿರ್‍ತೀನಿ."

"ಪರವಾಗಿಲ್ಲ. ಯಾಕೆ ಹೀಗೆ ಅಪರಿಚಿತರ ಹಾಗೆ ಮಾಡ್ತೀರಿ?"

" ಹಾಗೇನೂ ಇಲ್ಲವಲ್ಲ."

" ಒಳಗ್ಬನ್ನಿ ಹಾಗಾದರೆ."

ಅಪ್ಪಣೆ ಕೊಡುವ ಆ ಧ್ವನಿ. ಪ್ರಾಯಶಃ ಬಹಳ ಜನ ಆ ಧ್ವನಿಗೇ ಮರುಳಾಗಿರಬೇಕಲ್ಲವೆ? ಅಗಲ ಕಿರಿದಾದ ಕಟಿ ಭಾಗ. ತುಸು ವಿಶಾಲವೇ ಆದ ಬೆನ್ನು. ಸೆರಗು ಯಾವ ಅಳುಕೂ ಇಲ್ಲದೆ ಬದಿಗೆ ಸರಿಯುತ್ತಿದ್ದಂತೆ, ಅವಳು ಬಾಹುಗಳನ್ನೆತ್ತಿ ಹೆರಳು ಬಿಗಿದುಕೊಂಡಳು. ನನ್ನೆದೆಯಲ್ಲಿ ಶೀತಲವಾದ ನಡುಕ ಹುಟ್ಟಿ, ಕಣ್ಣುಗಳು ಭಾರವಾದುವು. ಕನ್ನಡಿಯಲ್ಲಿ ಆ ಸುಂದರಿಯ ಮುಖ ಕಾಣಿಸುತಿತ್ತು. ತನ್ನನ್ನು ತಾನೆ ನೋಡುತ್ತ, ಅವಳು ಮೋಹಿನಿಯ ಹಾಗೆ ಮುಗುಳ್ನಗುತಿದ್ದಳು.

ನಾನು ನೀಳವಾಗಿ ಉಸಿರೆಳೆದು ಚೇತರಿಸಿಕೊಂಡೆ.

" ನಾಗರಾಜು ನಿನ್ನೆ ಮೊನ್ನೆಯೆಲ್ಲಾ ಮಾವಾ ಎಲ್ಲೀಂತ ಪೀಡಿಸ್ತಲೇ ಇದ್ದ."

" ಅವನೊಬ್ಬ ಡಾರ್ಲಿಂಗ್. ಎಲ್ಲಿ, ನಿದ್ದೆಹೋಗಿದಾನೇನು?"

" ಆದರೆ ನೀವೆಂಥವರು? ಡಾರ್ಲಿಂಗ್‌ನ ನೋಡೋಕೆ ನೀವೇನೂ ಬರಲಿಲ್ಲ."

" ಏನೋ ಕೆಲಸವಿತ್ತು."

" ಸುಳ್ಳು ಹೇಳ್ಬೇಡಿ ಚಂದ್ರಶೇಖರ್. ನಿಮ್ಮ ಸ್ನೇಹಿತ ಶ್ರೀಕಂಠಯ್ಯನವರು ಇರದೇ ಇದ್ದಾಗ ಬರೋಕೆ ಹಿಂದೇಟು ಹಾಕಿದಿರಿ. ನಿಜವಾ?"

" ಹಿಂದೇಟು ಹಾಕೋ ಪ್ರಶ್ನೆಯಲ್ಲ. ನನ್ನ ಸ್ವಭಾವ ಸ್ವಲ್ಪ ನಾರ್ಮಲ್ ಅಲ್ಲ ಅನ್ನೋದು ನಿಮಗೆ ಗೊತ್ತಿದೆ ಅತ್ತಿಗೆ."

" ಅತ್ತಿಗೆ—ಚೆನ್ನಾಗಿದೆ ಸಂಬೋಧನೆ. ನಿಮ್ಮನ್ನ ಏನೂಂತ ಕರೀಬೇಕು, ತಮ್ಮಾ ಅಂತಲೋ, ಅಣ್ಣಾ ಅಂತಲೋ?"

" ನಗಬೇಕು ಅನಿಸುತ್ತೆ ನಿಮ್ಮ ಮಾತು ಕೇಳಿ."

" ಎಲ್ಲಿ ನಗಿ. ನೋಡ್ತೀನಿ."

ಅವಳು ಸರಕ್ಕನೆ ತಿರುಗಿ ನನ್ನನ್ನು ದಿಟ್ಟಿಸಿದಳು........ಆ ದಿನ, ಹನ್ನೆರಡು ಹದಿಮೂರು ವರುಷಗಳಿಗೆ ಹಿಂದೆ, ಮಾರ್ಕೆಟಿನ ಬಳಿ

ಮದುವೆಯ ಅನಂತರದ ಮೊದಲ ದಿನಗಳ ಹುಡುಗಿ ಶಾರದೆಯನ್ನು ಕಂಡಿದ್ದೆ. ಆಗ ಆಕೆ ಸೀರೆಯ ಸೆರಗು ಸರಿಪಡಿಸಿಕೊಂಡಿದ್ದಳು—ಏನನ್ನೋ ಬಚ್ಚಿಡಲು ಯತ್ನಿಸಿದಂತೆ. ಕಾರನ್ನು ಒತ್ತಟ್ಟಿಗೆ ಬಿಟ್ಟು, ನಡೆಯುತ್ತ ಹೋಗುವುದು, ಜಟಕಾ—ಬಸ್ಸುಗಳಲ್ಲಿ ಪ್ರಯಾಣ ಬೆಳೆಸುವುದು, ಆಗ ಅವರ ಪಾಲಿನ ವಿಹಾರವಾಗಿತ್ತು........ಈಗ ಶಾರದಾ ಯುವತಿ. ಸೆರಗಿನ ಕಡೆಗೆ ಗಮನವಿರಲಿಲ್ಲ. ಬಚ್ಚಿಡಬೇಕೆಂಬ ಬಯಕೆ ಇರಲಿಲ್ಲ.

ಹತ್ತಾರು ನೆನಪುಗಳು ನನ್ನನ್ನು ಬಾಧಿಸಿದುವು. ಎಷ್ಟು ಸಾರೆ ಶ್ರೀಕಂಠ ಮಗುವಿನಂತೆ ನನ್ನೊಡನೆ ಶಾರದೆಯ ಬಗ್ಗೆ ಹೃದಯ ಇರಿಯುವ ಮಾತನ್ನಾಡಿರಲಿಲ್ಲ! ಅದನ್ನೆಲ್ಲಾ ಎಂದಾದರೂ ನಾನು ಮರೆಯುವುದು ಸಾಧ್ಯವಿತ್ತೆ ?

ಆಕೆ ಶಾರದೆಯಲ್ಲದೆ ಬೇರೆ ಯಾರಾದರೂ ಆಗಿದ್ದರೆ, ನಾನು ಪ್ರಾಯಶಃ ಒಲಿದ ಹೆಣ್ಣಿನೆದುರು ಒಪ್ಪಿದ ಗಂಡಾಗುತ್ತಿದ್ದೆನೇನೋ. ಆದರೆ ಇಲ್ಲಿ ಶಾರದೆಯನ್ನು ನೋಡಿದಾಗ ಆಕೆಯ ಹಿಂದೆ ಶ್ರೀಕಂಠ ಕಾಣಿಸುತಿದ್ದ....ಅವರಿಬ್ಬರಿಂದಲೂ ದೂರವಾದ ಬೇಬಿ—ನಾಗರಾಜು ....ಆ ಬಳಿಕ ನನ್ನ ಜೀವನಕ್ಕೇ ಸಂಬಂಧಿಸಿದ ಸಂಭವಗಳು.

ಶಾರದೆಯ ನೋಟವನ್ನು ಇದಿರಿಸಲಿಚ್ಛಿಸದೆ ನಾನೆಂದೆ:

"ಬಂದದ್ದಕ್ಕೆ ಕಾಫೀನಾದರೂ ಕೊಡಿ ಅತ್ತಿಗೆ, ಅತಿಥಿ ಸತ್ಕಾರ ಮಾಡೋಕೂ ತಿಳೀದು ನಿಮಗೆ."

ಸಮಾಧಾನ—ಸಂದೇಹಗಳ ಚಿಹ್ನೆಯೊಂದು ಅವಳ ಮುಖದ ಮೇಲೆ ಮೂಡಿತು. ವಿಚಾರ ಬದಲಿಸಬೇಕೆಂದು ನಾನು ಹಾಗೆ ಹೇಳಿದ್ದರೆ, ಮತ್ತೂ ಅದೇ ವಿಚಾರಕ್ಕೆ ನಮ್ಮನ್ನು ಆ ಮಾತು ತಂದು ಮುಟ್ಟಿಸಿತ್ತು.

"ನೀವು ಅಲ್ಪ ಸಂತೋಷಿ, ಬರೇ ಕಾಫೀಲೇ ತೃಪ್ತಿ ಪಟ್ಕೋತೀರಿ."

"ಮನುಷ್ಯ ಜೀವಕ್ಕೆ ಇನ್ನೆಷ್ಟು ಬೇಕು ಹೇಳಿ ?"

"ನೀವು ಮತ್ತು ನಿಮ್ಮ ಶ್ರೀಕಂಠಯ್ಯ-ಇಬ್ಬರೂ ಈಗೀಗ

ಹೊರಗೆ ಕುಡಿಯೋದು ಜಾಸ್ತಿಯಾಗಿದೆಯಂತೆ ಹೌದೆ ? "

" ಆಡುವವರ ಬಾಯಿಗೆ ಬೀಗ ಹಾಕೋರು ಯಾರು ? "

" ನನ್ನ ವಿಷಯವಾಗಿಯೂ ಕೆಲವರು ಆಡ್ಕೋತಾರೆ, ಅಲ್ವೆ ? "

" ಏನೂಂತ ? "

" ನನ್ನ ಗುಣ ವರ್ಣನೆ ನಾನೇ ಮಾಡ್ಕೋಬೇಕೇನು ? "

" ಹೋಗಲಿ ಬಿಡಿ ಅತ್ತಿಗೆ."

"....ನನಗೂ ಕುಡಿತದ ಅಭ್ಯಾಸವಿದೆ ಅಂದರೆ ನಿಮಗೆ ಆಶ್ಚರ್ಯ ವಾಗುತ್ತೊ ? "

" ನನಗೆ ಆಶ್ಚರ್ಯವಾಗೋ ವಿಷಯ ಈ ಪ್ರಪಂಚ್ದಲ್ಲಿ ಇನ್ನೇನೂ ಉಳಿದಿರೋ ಹಾಗೆ ಕಾಣೆ."

ಕ್ಷಣಕಾಲ ಶಾರದಾ ಸುಮ್ಮನಾದಳು. ಮೇಲು ಹೊದಿಕೆಯನ್ನು ಸರಿಪಡಿಸಿಕೊಂಡು ಕೊರಳಿನ ಮಂಗಳ ಸೂತ್ರದ ಮೇಲೆ ಕೈಯಾಡಿಸಿದಳು.

" ಚಂದ್ರಶೇಖರ್, ನಿಮ್ಮನ್ನ ಇಲ್ಲಿಗೆ ಯಾಕೆ ಕರಸ್ದೆ ಗೊತ್ತೆ ? "

" ಇನ್ನೊಬ್ಬರ ಮನಸ್ಸನ್ನು ನಾನು ಹ್ಯಾಗೆ ಊಹಿಸ್ಲಿ ? "

" ಸುಳ್ಳಾಡ್ಬೇಡಿ. ನೀವು ಊಹಿಸಿರ್ತೀರಾ .. ...."

" ಹೋಗಲಿ ...ಏನಾಯಿತೀಗ ? "

" ಏನೂ ಇಲ್ಲ. ನಿಮ್ಮ ಊಹೆ ಸರಿ...."

" ಏನು ? "

" ನೀವು ಅಪ್ಪಟ ಬಂಗಾರವೋ, ರೋಲ್ಡ್ ಗೋಲ್ಡೊ, ಪರೀಕ್ಷಿಸೋಣಾಂತ ಕರೆದೆ."

" ಏನು ಪರೀಕ್ಷೆಯ ಫಲಿತಾಂಶ ? "

" ನೀವು ಚಿನ್ನವೇ ಅಲ್ಲ—ಕಲ್ಲು—ಬರಿ ಕಲ್ಲು."

" ಸಂತೋಷ ಅತ್ತಿಗೆ.... ..."

ಅನಿರೀಕ್ಷಿತವಾಗಿ ಶಾರದೆ ಬಿಕ್ಕಿ ಬಿಕ್ಕಿ ಅತ್ತಳು. ಇದು ಸ್ವಲ್ಪ ವಿಚಿತ್ರವಾಗಿಯೇ ಇತ್ತು. ಅದು ಅಭಿನಯವೆ ? ಅಥವಾ—

ಅಷ್ಟರಲ್ಲೆ ಆಕೆ ಚೇತರಿಸಿಕೊಂಡಳು.

" ನಾನು ಅಳೋದಿಲ್ಲ...... ನಾನು ವಿಷಯ ಲಂಪಟೆ ಅಂತ ತಿಳಕೊಂಡಿದ್ದಿರಿ ಅಲ್ವೆ?........ನಾನು ಅಷ್ಟು ಕೆಟ್ಟವಳಲ್ಲ ಚಂದ್ರ ಶೇಖರ್........ನಿಮ್ಮ ಸ್ನೇಹಿತ ಶ್ರೀಕಂಠಗೆ ಹೇಳಿ—ನಾನು ಕುಲಟೆ ಅಲ್ಲಾಂತ....ಆದರೆ ಇಷ್ಟು ನಿಜ. ನನಗೂ ಅವರಿಗೂ ಹೊಂದಿಕೆ ಯಾಗೋದಿಲ್ಲ........ಬೇರೆಯಾಗಿ ಹೋಗೋದಕ್ಕೂ ನಾನು ಸಿದ್ಧ ವಿಲ್ಲ. ಬಹುಶಃ ಅಷ್ಟು ಧೈರ್ಯ ನನಗಿಲ್ಲವೋ ಏನೋ........ ಆದರೆ ಇನ್ನು ನನ್ನ ಹಾದಿಗೆ ನನಗೆ, ಅವರ ಹಾದಿ ಅವರಿಗೆ."

" ಏನು ಹೇಳಬೇಕೋ ತೋಚೋದಿಲ್ಲ, ಅತ್ತಿಗೆ."

" ಏನೂ ಹೇಳ್ಬೇಡಿ. ಅದೇ ಮೇಲು. ನಾನು ತಪ್ಮಾಡ್ತಿದೀ ನೀಂತ ನೀವೇನಾದರೂ ಹಿತವಚನ ಹೇಳೋಕೆ ಬಂದರೆ ಅದರಿಂದ ಯಾರಿಗೂ ಏನು ಪ್ರಯೋಜನವಾಗೋದಿಲ್ಲ. ನನ್ನ ಮನಸ್ಸು ಕಹಿಯಾಗುತ್ತೆ ಅಷ್ಟೆ."

ಆಕೆ ಕರವಸ್ತ್ರವೆತ್ತಿಕೊಂಡು ಕಣ್ಣೊರೆಸಿಕೊಳ್ಳುತಿದ್ದಂತೆ ನಾಗ ರಾಜು ಓಡುತ್ತ ಬಂದ.

" ಮಾವಾ, ಮಾವಾ........ಎಲ್ಲೋಗಿದ್ದೆ? ಯಾಕ್ಬರ್ಲಿಲ್ಲ? ನಂಗ್ಬೇಜಾರಾಗ್ಬಿಟ್ಟಿತ್ತು ಮಾವಾ... ...... ನೀನೂ ಅಣ್ಣನ್ಜತೇಲಿ ಬೊಂಬಾಯ್ಗೆ ಹೋದಿಯೇನೋಂತಿದ್ದೆ."

" ಇಲ್ಲ ರಾಜಾ, ನಿನ್ನ ಬಿಟ್ಬಿಟ್ಟು ಹೋಗ್ತೀನಾ?"

" ನನ್ನ ಬಿಟ್ಬಿಟ್ಟು ನೀನು ಯಾವತ್ತೂ ಹೋಗಲ್ಲ ಅಲ್ವಾ?"

" ಹೋಗಲ್ಲ ರಾಜಾ...."

ಹುಡುಗ ತಾಯಿಯ ಕಡೆ ತಿರುಗಿ ಹೇಳಿದ:

" ಅಮ್ಮಾ, ಮಾವಾ ಒಳ್ಳೆಯವನು ಕಣೇ....ಅಮ್ಮಾ..."

" ಅದೇನು ಮರುಳುಮಾಡಿದೀರೋ ಮಗೂನ," ಎಂದಳು ಶಾರದೆ ನಗುತ್ತ, " ಹೋಗಪ್ಪ ರಾಜು, ಕಾಫಿ ತಗೋಂಬಾಂತ ಹೇಳು ಆಚಾರ್ರಿಗೆ"

ಮಗು ಹೋಗುತ್ತಲೇ ಶಾರದೆ ಎಂದಳು:

" ಚಂದ್ರಶೇಖರ್, ನೀವು ಯಾಕೆ ಮದುವೆ ಆಗ್ಬಾರ್ದು?

ನಗ್ತೀರೇನೋ ಹೀಗೆ ಕೇಳ್ದೆಂತಾ?"

"ಯಾಕೆ? ಮದುವೆ ಆದೋರು ಅನುಭವಿಸ್ತಿರೋ ಸುಖ ನೋಡಿದ್ದು ಸಾಲ್ದೇನು?"

ಆಕೆಯ ಮುಖ ಸ್ವಲ್ಪ ಬಾಡಿತು.

....ದೊಡ್ಡ ಗಂಡಾಂತರದಿಂದ ಪಾರಾಗಿದ್ದೆ. ಆ ಬಳಿಕ ಶಾರದೆ ನನ್ನೊಡನೆ ಮಾನವಳಾಗಿ ಮಾತನಾಡಿದಳು. ಕಾಫಿ ಬಂತು—ಕುಡಿದೆವು. ತಾಯಿ, ಮಗನನ್ನು ಮುದ್ದಾಡಿದಳು. ಆದರೆ ನಾಗ ರಾಜನಿಗೆ ಅಂಥ ಮುದ್ದಾಟದ ಅಭ್ಯಾಸವಿರಲಿಲ್ಲ. ಆತ ತಾಯಿಯಿಂದ ತಪ್ಪಿಸಿಕೊಂಡು ನನ್ನೆಡೆಗೆ ಬಂದ.

"ಮೇಷ್ಟ್ರು ಬರ್ಲಿಲ್ವಾ ರಾಜು?"

"ಬರ್ತಾರೆ ಮಾಮಾ, ಆರು ಘಂಟೆಗೆ."

ಶಾರದೆಯತ್ತ ತಿರುಗಿ ಹೇಳಿದೆ:

"ರಾಜನ್ನ ಇನ್ನು ಸ್ಕೂಲ್ಗೆ ಸೇರಿಸ್ಬೇಕು ಅತ್ತಿಗೆ."

"ಹೌದು, ಸೇರಿಸ್ಬೇಕು...."

ಮತ್ತೆ ಸ್ವಲ್ಪ ಹೊತ್ತಿನಲ್ಲೆ ಹೊರಬಿದ್ದು, ಹಾದಿಯುದ್ದಕ್ಕೂ ನಡೆದುಹೋದೆ, ನೆನಪುಗಳು ಜೆಂಗಾವಲಿಗೆ ನಿಂತುವು.

ಆ ದಿನ ಶಾರದೆಯನ್ನು ನಾನು "ಅತ್ತಿಗೆ" ಎಂದು ಸಂಬೋಧಿಸಿದ್ದೆ. ಅದು, ಆ ಹೆಸರಿನ ಢಾಲು ಹಿಡಿದು ಆ ಹೆಣ್ಣನ್ನು ದೂರ ವಿಡಲು ನಾನು ಮಾಡಿದ ಸಿದ್ಧತೆ....ಆದರೆ ಆಕೆ ಮೇಲೇರಿ ಬರಲಿಲ್ಲ. ಆ 'ಅತ್ತಿಗೆ' ಪದದಿಂದ ಮಾತ್ರ, ಕೊಂಕುತನ ಹೊರಟು ಹೋಯಿತು....ಇನ್ನು ನಾನು ಆಕೆಯನ್ನು ಅತ್ತಿಗೆಯೆಂದೇ ಕರೆಯ ಬೇಕು.

ಹದಿನೈದು ವರ್ಷಗಳಿಗೆ ಹಿಂದೆಯೊಂದು ಜೀವವನ್ನು ನಾನು "ಅತ್ತಿಗೆ" ಎಂದು ಕರೆದಿದ್ದೆ. ಆಕೆ ಶೀಲ. ಶೀಲ—ಅಮಾರರ ಆ ಬಾಳ್ವೆಯಲ್ಲಿ ಎಷ್ಟೊಂದು ಅನುನಯವಿತ್ತು—ಅನ್ಯೋನ್ಯ ಅನುರಾಗ ವಿತ್ತು! ಇಷ್ಟು ವರ್ಷಗಳಾದ ಮೇಲೆಯೂ ಅವರನ್ನು ಸ್ಮರಿಸಿ

ಕೊಂಡಾಗ, ಆಗಿನ ಅವರ ಚಿತ್ರಗಳೇ ಕಣ್ಣೆದುರು ಕಟ್ಟುತ್ತಿದ್ದುವು. ಉಲ್ಲಾಸ ಜೀವಿಗಳಾದ ಆ ಎಳೆಯರ ಬದಲು, ಹದಿನೈದು ವರ್ಷಗಳ ಅನಂತರದ ವಯಸ್ಕರಾಗಿ ಅವರನ್ನು ಚಿತ್ರಿಸಿಕೊಳ್ಳುವುದು ನನ್ನಿಂದ ಸಾಧ್ಯವಿರಲಿಲ್ಲ.

ಆದರೆ ದಿನಗಳುರುಳುತಿದ್ದುವು. ಹಣೆಯ ಮುಂಭಾಗದಲ್ಲಿ ಕೂದಲ ಪರಿಧಿ ಕಂಡೂ ಕಾಣದಂತೆ ಹಿಂದಕ್ಕೆ ಸರಿಯುತಿತ್ತು. ನೆತ್ತಿಯ ನಡುವಿನಲ್ಲೆ ತನ್ನ ಇರುವಿಕೆಯನ್ನು ಸಂಭ್ರಮದಿಂದ ಸಾರಿ ಹೇಳಿದ ನಾಲ್ಕಾರು ಬಿಳಿ ಕೂದಲು.

....ಕಾಲುಗಳು ಎತ್ತಲೋ ನನ್ನನ್ನು ಒಯ್ದಿದ್ದುವು. ಮಸಕು ಮಸಕಾಗಿ ಯಾವುದೋ ನೆನಪಾಗತೊಡಗಿತು ನನಗೆ. ಎಲ್ಲಿಗೆ ಬಂದಿದ್ದೆ ನಾನು? ಎಲ್ಲಿಗೆ?........ಆ ಕಾಲು ದಾರಿ, ಓಣಿ, ಮೂಲೇ ಮನೆ.... ಹುಡುಗನಾಗಿದ್ದಾಗ ಅಲ್ಲಿಗೊಮ್ಮೆ ನಾನು ಬಂದಿದ್ದೆನಲ್ಲವೆ? ಅದು ನಾರಾಯಣನ ಮನೆ—ನಾಣಿಯ ಮನೆ! ಆದರೆ ಅದು ಎಷ್ಟೊಂದು ವರ್ಷಗಳ ಹಿಂದಿನ ಮಾತು! ಈಗ ಆತ ಅಲ್ಲಿದಾನೋ ಇಲ್ಲವೋ....

ಶ್ರೀಕಂಠ, ನಾಣಿಯನ್ನು ಕುರಿತು ಆಡಿದ ಕಹಿಮಾತುಗಳು ನೆನಪಾದುವು....ಅಂಥ ವಿದ್ಯಾವಂತ ಬಡಪಾಯಿಗಳಿಂದಲೇ ಅಪಾಯ....

ಅವನನ್ನು ನೋಡಿ ಮಾತನಾಡಬೇಕೆಂಬ ಆಸೆ ಉತ್ಪನ್ನವಾಯಿತು. ಆ ಬಾಗಿಲ ಮುಂದೆ ನಿಂತು ಕರೆದೆ.

" ನಾರಾಯಣ! ನಾರಾಯಣ! "

ಸ್ವಲ್ಪ ತೆರೆಯಿತು ಮುಚ್ಚಿದ್ದ ಬಾಗಿಲು. ಸೊರಗಿದ ಹೆಣ್ಣು ಮುಖವೊಂದು ಹೊರಗಿಣಿಕಿ ಹೇಳಿತು:

" ಅವರಿನ್ನೂ ಬಂದಿಲ್ಲ.........ಇನ್ನೇನು ಬರೋ ಹೊತ್ತು...."

ನಾನು ಹಿಂತಿರುಗಿದೆ. ಆದರೆ ಸ್ವರ ನನ್ನನ್ನು ಹಿಂಬಾಲಿಸಿ ಕೇಳಿತು.

" ಯಾರು ಬಂದಿದ್ವರೂಂತ ಹೇಳ್ಲಿ.

" ಪರವಾಗಿಲ್ಲವ್ಮ........ನಾನೇ. ಆಮೇಲೆ ಬರ್ತೀನಿ."

........ನಾರಾಯಣನ ತಾಯಿ ಕಾಣಿಸಿರಲಿಲ್ಲ........ಈಕೆ ಸೊಸೆ

ಇರಬಹುದು ಹಾಗಾದರೆ—ನಾಣಿಯ ಹೆಂಡತಿ.

ನಾನು ಆ ಓಣಿಯಿಂದ ತಿರುಗಿಕೊಳ್ಳುತಿದ್ದಾಗಲೇ ನಾರಾಯಣ ಎದುರು ಬಂದ.

"ನಾಣಿ!"

"ಓ! ಬಾರಯ್ಯ ಚಂದ್ರು........"

ಅವನ ಕಣ್ಣುಗಳು ಕುತೂಹಲದಿಂದ ನನ್ನನ್ನು ನೋಡುತಿದ್ದುವು. ತುಟಿಗಳ ಮೇಲೆ ಮುಗುಳು ನಗು ಮೂಡಿತ್ತು.

ನಾನು ಅವನನ್ನು ಹಿಂಬಾಲಿಸಿದೆ.

"ನಾಣಿ........ಆ ದಿವಸ ನೀನು ಹೇಳಿದ್ದೆ; ತಾಯಿ ಮಾಡಿದು ಪ್ಪಿಟ್ಟು ತಿನ್ನೋಕೆ ಬಾ ಅಂದಿದ್ದೆ."

"ಓ! ನಿನ್ನ ಸ್ಮರಣಶಕ್ತಿ ಅದ್ಭುತವಾದ್ದು ಚಂದ್ರೂ. ಅದಕ್ಕೇ ಕ್ಲಾಸ್ನಲ್ಲಿ ಫಸ್ಟ್ ಬರ್ತ್ತಿದ್ದೆ. ಆದರೆ—"

ಮನೆ ಸೇರಿದೆವು. "ಕಮಲಾ" ಎಂದು ಕರೆದ ನಾಣಿ. ಬಾಗಿಲು ತೆರೆಯಿತು. ಆಕೆ ಅವಸರ ಅವಸರವಾಗಿ ದೀಪ ಹಚ್ಚಿದಳು. ಗೋಡೆಗೆ ತಗಲಿಸುವ ಲ್ಯಾಂಪು ಹೊರಬಂತು.

"ಬಾ ಚಂದ್ರೂ—ಕೂತ್ಕೊ........ಕುರ್ಚಿ ಇದೆ ಕೂತ್ಕೊ...."

ಅಲ್ಲಿ ಒಂದೇ ಕುರ್ಚಿ ಇತ್ತು—ಬಡಕಲಾದೊಂದು ಮೇಜು. ನಾನು ಹಾಸಿದ್ದ ಮಾಸಿದ್ದ ಚಾಪೆಯ ಮೇಲೆ ಕುಳಿತೆ.

"ಕಮಲಾ....ಈತ ಚಂದ್ರಶೇಖರಾಂತ–ಬಾಲ್ಯದ ಸಹಪಾಠಿ."

"ನಮಸ್ತೆ," ಎಂದಳು ಆಕೆ.

"ಇವರು ಯಾರೂಂತ ಗೊತ್ತಾಯ್ತೇನಪ್ಪಾ?"

"ಊಹಿಸ್ಕೊಂಡಿದೀನಿ."

"ಸರಿ........ಕಮಲಾ, ಒಂದಿಷ್ಟು ಉಪ್ಪಿಟ್ಟು ಕಾಫಿ ಮಾಡ್ತೀಯಾ?"

ಉತ್ತರ ನೇರವಾಗಿ ಬರಲಿಲ್ಲ. ಆಕೆ ಕರೆದಳು:

"ಇಲ್ಬನ್ನಿ.."

"ಪರವಾಗಿಲ್ಲ ಕಮ್ಲೂ—ಚಂದ್ರೂ ಎದುರಲ್ಲಿ ಹೇಳ್ಬಹುದು."

" ಹಾಗಲ್ಲ ; ಊಟಕ್ಕಾಗಿದೆ. ನಿಮ್ಮ ಸ್ನೇಹಿತರು ಊಟಕ್ಕೇ ಏಳಬಹುದಲ್ಲಾ."

ಆ ಬಡ ಸಂಸಾರದಲ್ಲಿ ಅಂತಹ ಆದರಾತಿಥ್ಯ........

" ಅದೇ ಸರಿ........ಏಳಯ್ಯಾ ಚಂದ್ರೂ—ಕೈಕಾಲು ತೊಳ್ಕೊ ಳ್ಳೋಣ."

" ನಾನೊಲ್ಲೆ ನಾಣಿ........ರಾತ್ರೆ ನಾನು ಊಟಮಾಡೋಲ್ಲ. ಹೊಟ್ಟೆ ನೋವು ನಂಗೆ."

" ಇಷ್ಟೊಳ್ಳೆ ಆರೋಗ್ಯ ಕಾಪಾಡ್ಕೊಂಡಿದೀಯಾ. ಊಟ ಮಾಡೊಲ್ಲ ಅಂದರೆ ನಗ್ತಾರೆ ಯಾರಾದರೂ."

" ತಮಾಷೆಯಲ್ಲ ನಾಣಿ, ನಿಜವಾಗ಼್ೂ ಮೈ ಚೆನ್ನಾಗಿಲ್ಲ."

" ಹೋಗಲಿ ಬಿಡು ಹಾಗಾದರೆ........ಸರಿ ಕಮ್ಲೂ, ನಿನ್ನ ಕೈ ಸಾರು-ಅನ್ನ ಉಣ್ಣೋ ಭಾಗ್ಯ ಚಂದ್ರೂಗಿಲ್ಲ........ಕಾಫೀನೆ ಮಾಡು."

ನಿಯೋಗದ ಸದಸ್ಯನಾಗಿ ಬಂದಾಗ ತುಟಿ ಬಿಗಿದು ಕುಳಿತಿದ್ದ ವನು ಇಲ್ಲಿ ಮಾತಿನಮಲ್ಲನಾಗಿದ್ದ. ಆತ ತೊಟ್ಟು ಕಳಚಿದ ತರಗೆಲೆ ಯಾಗಿ ನನಗೆ ತೋರಲಿಲ್ಲ. ಅದು ನಗುವ ಹಸುರೆಲೆಯಾಗಿತ್ತು. ಕ್ಷೀಣವಾದ ತೂತುಗಳಿದ್ದ ಹಸುರೆಲೆ ನಿಜ—ಆದರೆ ಅದು ನಗುತಿತ್ತು.

ಹಿಂದೆ ಬಂದಾಗ ಅವನ ತಾಯಿ ಹುಡುಗನಾದ ನನ್ನನ್ನು ಕೇಳಿದ್ದರು :

" ಏನಪ್ಪಾ ಮಗು ? ಚೆನ್ನಾಗಿದೀಯೇನಪ್ಪಾ ? "

ಆ ಮೇಲೆ ಉಪ್ಪಿಟ್ಟು ಕಾಫಿ. ಆ ತಾಯಿ ಮತ್ತು ನಾಣಿಯ ತಂದೆ—ಯಾರೂ ಅಲ್ಲಿ ಕಾಣಿಸಲಿಲ್ಲ. ವಯಸ್ಸಾದ ದಂಪತಿಗಳು ಹೊರಹೋಗಿರಬಹುದು ಎಂದುಕೊಂಡೆ.

" ಅಮ್ಮ ಕಾಣಿಸ್ತಾ ಇಲ್ವಲ್ಲಾ ನಾಣಿ."

" ಓ ! ಹೇಳೋದಕ್ಕೇ ಮರೆತ್ನೇನು ?........ಹುಂ. ಎಲ್ಲಪ್ಪ ಆ ಸಾರೆ ನಾನು ಕತೆ ನಿಲ್ಲಿಸಿದ್ದು ? ತಂಗಿ, ಹೆರಿಗೆಗೆ ಬಂದಿದ್ದೋಳು, ತೀರ್ಕೊಂಡ ವಿಷಯ ಹೇಳಿದ್ನೊ ? "

ಕೆಟ್ಟ ಸುದ್ದಿಯನ್ನು ನಿರೀಕ್ಷಿಸುತ್ತ, " ಹೂಂ," ಎಂದೆ.

"ಅದಾದ್ಮೇಲೆ ಈ ಮನೇಲಿ ಎರಡು ಸಾವುಗಳಾದುವು. ಒಂದು ತಾಯಿಯಾದು ಮುತ್ತೈದೆ ಸಾವು........ಆ ಮೇಲೆ ತಂದೇದು."

ತಾಯಿ ತಂದೆಯರ ಸಾವಿನ ಬಗ್ಗೆ ಅಷ್ಟೊಂದು ಸರಳವಾಗಿ ಮಾತನಾಡುತ್ತಿದ್ದ ಅವನ ರೀತಿ ನನ್ನನ್ನು ಚಕಿತಗೊಳಿಸಿತು.

"ನನಗೆ ಗೊತ್ತೇ ಇರಲಿಲ್ಲ," ಎಂದೆ. ನನ್ನ ಸ್ವರ ಎಲ್ಲೋ ಒಳಗಿಂದ, ನನಗೆ ಮಾತ್ರ ಕೇಳಿಸುವಹಾಗೆ, ಕ್ಷೀಣವಾಗಿ ಹೊರಡುತಿತ್ತು.

"ಏನು ಮಹಾ........ಇರಲಿ ಬಿಡು—ತಂದೆಯ ಪಾಲಿಗಂತೂ ಸಾವು ವಿಮೋಚ್ನೆಯೇ ಆಗಿತ್ತಪ್ಪ. ಆ ಗೂರಲು ರೋಗ ಅಷ್ಟೊಂದು ಹಿಂಸೆ ಕೊಡುತ್ತಿತ್ತು ಅವರಿಗೆ. ಇನ್ನು ತಾಯಿ ವಿಷಯ....ಬದುಕಿದ್ದಾಗಲೆಲ್ಲ ಬಡತನದ ಗೋಳು ಕಂಡೋಳು, ಮಗಳನ್ನೂ ಮೊಮ್ಮಗುವನ್ನೂ ಕಣ್ಣೆದುರಲ್ಲೇ ಕಳೆದು ಕೊಂಡೋಳು, ಸಾಯೋ ಕಾಲಕ್ಕೆ ಹಾಯಾಗಿದ್ಲು. ತಾನು ಮುತ್ತೈದೆಯಾಗಿಯೇ ಸಾಯ್ತಿದೀನೀಂತ ಅವಳಿಗೆ ಎಷ್ಟೊಂದು ಸಮಾಧಾನವಾಗಿತ್ತು ಗೊತ್ತೆ?........"

"ಹಳೇ ಕಾಲ್ದೋರು ಹಾಗೇ ನಾಣಿ."

"ಅದು ಆ ತಲೆಮಾರಿನ ಕತೆ....ಇನ್ನು ಈ ತಲೆಮಾರಿನ್ದು. ತಂದೆ ಸತ್ತು ಈ ಸೆಪ್ಟಂಬರ್‌ಗೆ ಮೂರು ವರ್ಷ ಆಯ್ತು. ಅದಕ್ಕೆ ಸ್ವಲ್ಪ ತಿಂಗಳ ಮುಂಚೆ ನನ್ನ ಮದುವೆಯಾಯ್ತು."

"................"

"ವರದಕ್ಷಿಣೆ ಇಲ್ಲದ ಮದುವೆ....ಒಲಿದು ಬಂದ ಹೆಣ್ಣು....ಆ ದಿನ ನಿಯೋಗ ಬಂದಾಗ ನನ್ನ ಪಕ್ದಲ್ಲೇ ಕೊನೇಲಿ ಒಬ್ಬ ನಿಂತಿದ್ದ— ನೆನಪಿದೆಯೊ? ವಿಶ್ವನಾಥ ಅಂತ. ಅವನ್ತಂಗಿ ಕಮಲೂ. ಯೂನಿಯನ್ ಗಲಾಟೇಲಿ ಅವನ ಪರಿಚಯ ಆಯ್ತು—ಆ ಮೇಲೆ ಕಮಲೂ ಪರಿಚಯ....ನಮ್ಮನಮ್ನೇಂತಿಟ್ಕೊ. ಹಾಗಾಗಿ ತಂದೆ ಸುಮ್ಮಗಿದ್ದ.... ಅದಕ್ಕಿಂತಲೂ ಮುಖ್ಯವಾಗಿ ಅವನ ಆರೈಕೆಗೆ ಸೊಸೆ ಬೇಕಾಗಿದ್ಲು."

"ಅಂತೂ ನೆಮ್ಮದಿಯಾಗಿದೀಯಾ ಅನ್ನು."

"ನೋಡ್ತಾ ಇದೀಯಲ್ಲ...."

ಮಾತಿನ ಒಂದು ಪುಟ ಮುಗಿದಿತ್ತು; ಇನ್ನು ಇನ್ನೊಂದು ಪುಟ.

“ಅಲ್ಲ ಚಂದ್ರೂ. ನಿನ್ನ ವಿಷಯ ಏನಪ್ಪ? ಶ್ರೀಕಂಠೂ ಜತೇಲಿ ಏನಾದರೂ ಮಾಡ್ಕೊಂಡು ಇದೀಯೋ?”

“ಹೂನಪ್ಪಾ.”

ನಿಯೋಗ ಬಂದ ಆ ದಿನದಿಂದ ಈ ವರೆಗೆ ಆಗಾಗ್ಗೆ ನಾಣಿಯ ಬಗ್ಗೆ ಶ್ರೀಕಂಠ ಮತ್ತು ನನ್ನ ನಡುವೆ ನಡೆದುದನ್ನೆಲ್ಲ ಹೇಳಿ ಬಿಡುವ ಮನಸ್ಸಾಯಿತು. ಬಾಲ್ಯದಲ್ಲಿ ಒಬ್ಬರ ಮೇಲೊಬ್ಬರು ಚಾಡಿ ಹೇಳಿ, “ಗುಟ್ಟು-ಯಾರಿಗೂ ಹೇಳ್ಬೇಡ,” ಎನ್ನುತ್ತಿರಲಿಲ್ಲವೆ ಹಾಗೆ.... ಆದರೆ ನನ್ನ ಮನಸ್ಸನ್ನು ಯಾವುದೋ ತೆರೆ ಕವಿಯುತಿತ್ತು.

ಆ ಮೇಲೆ ಆ ಮಾತು, ಈ ಮಾತು; ಅವರ ವಿಷಯ, ಇವರ ವಿಷಯ. ತರಗತಿಯಲ್ಲಿ, “ಮುತ್ಠಾಳಾ” ಎಂದು ಶಪಿಸುತ್ತ ಎಲ್ಲರ ಕಿವಿ ಹಿಂಡಿ ಕೊನೆಗೆ ಎಲ್ಲರ ಪ್ರಕೋಪಕ್ಕೆ ತುತ್ತಾಗಿದ್ದ ಕನ್ನಡ ಪಂಡಿತರನ್ನು ನೆನೆಸಿಕೊಂಡೆವು. ಆ ಮೇಲೆ ಯಾವುದೋ ಹುಡುಗಿಗೆ ಪ್ರೇಮ ಪಾಠ ಹೇಳಿ ಕೊಟ್ಟ ಹೊಸಬ ಉಪಾಧ್ಯಾಯರೊಬ್ಬರ ವಿಷಯ.

ಕಮಲಾ ತಯಾರಿಸಿದ ಉಪ್ಪಿಟ್ಟು ಮತ್ತು ಕಾಫಿ........

ನನ್ನ ನಾಲಿಗೆಯ ರುಚಿ ಕೆಟ್ಟಿತ್ತು. ಸಿಕ್ಕಿದ್ದನ್ನು ತಿಂದು, ಸಿಕ್ಕಿದ್ದನ್ನು ಕುಡಿದು, ನನ್ನ ನಾಲಿಗೆ ಬೇಸತ್ತು, ಯಾವುದೂ ಬೇಡ— ಎನ್ನುತಿತ್ತು. ಆದರೂ ನಾನು, ನಾಣಿ ಪ್ರೀತಿಯಿಂದ ಮುಂದಿಟ್ಟುದನ್ನು ತಿಂದೆ—ಕುಡಿದೆ.

ಏನಾದರೂ ಒಳ್ಳೆಯ ಮಾತನ್ನಾಡಬೇಕೆಂದು, “ಇದ್ಕೂನೂ ನಿಮ್ತಾಯಿ ಕೊಡ್ತಿದ್ದ ಉಪ್ಪಿಟ್ಟು ರುಚೀನೇ ಇದೆ ಕಣೋ” ಎಂದೆ.

ನಾಣಿ ನಕ್ಕ.

“ಕಮಲೂ ನನ್ನ ಪಾಲಿಗೆ ತಾಯಿಾನೂ ಹೌದು ಚಂದ್ರು........ ನಮ್ಮಿಬ್ಬರ ನಡುವೆ ಸುಖ ಎಂಬ ಪದಕ್ಕೆ ಬಂದಿರೋ ಅರ್ಥವೇ ಬೇರೆ. ಸಾಮಾನ್ಯವಾಗಿ ತುಂಬಿದ ಹೊಟ್ಟೆ, ಒಳ್ಳೆಯ ಬಟ್ಟೆ, ಅಚ್ಚುಕಟ್ಟಾದ ಮನೆ, ಉಳಿತಾಯದ ಹಣ—ಇದೆಲ್ಲಾ ಇದ್ದರೆ ‘ಸುಖ’ ಅನ್ತಾರೆ. ನಮಗೆ, ಹೃದಯ ತುಂಬಿದ್ದರಾಯ್ತು. ಅದೇ ಸುಖ.”

ನನ್ನ ಕಣ್ಣುಗಳು ಆ ದೀಪದ ಬೆಳಕಿನಲ್ಲಿ ಗೋಡೆಯ ಮೇಲೆಲ್ಲ ಓಡಾಡಿದುವು.

"ಏನ್ನ ನೋಡ್ತೀಯಪ್ಪಾ? ದೇವರು ದಿಂಡರನ್ನೆಲ್ಲಾ ಊಟದ ಮನೆಗೆ ವರ್ಗಾಯಿಸಿದೀನಿ. ನಮ್ಮ ಪೀಳಿಗೆಯವರ ದೈವ ಭಕ್ತಿ ವಿಷಯ ಗೊತ್ತೇ ಇದೆಯೆಲ್ಲ! ಕಮಲೂನೂ ಅಷ್ಟೆ. ದಿನವೂ ದೇವರಿಗಿಷ್ಟು ದೀಪ ಹಚ್ಚಿಡ್ತಾಳೆ. ಅಲ್ಲಿಗಾಯ್ತು........"

ಕಮಲಾ ನಮ್ಮತ್ತ ಇಣಿಕಿ ನೋಡಿ ಹೇಳಿದಳು:

"ಅವರ ಮನೆಯವರ್ನ ಕರ್ಕೊಂಡುಬರೋಕೆ ಹೇಳೀಂದ್ರೆ."

ಹುಸಿ ಮುನಿಸಿನ ಧ್ವನಿಯಲ್ಲಿ ನಾಣಿ ಉತ್ತರವಿತ್ತ:

"ನೀನೇ ಕೇಳು....... ಒಬ್ಬೆಗೇ ಬೇಸರವಾಗಿದೇಂತ ಹೇಳು. ನಿನ್ಗೆ ಸಹಾಯಾವಾಗ್ಲೀಂತಾದರೂ ಚಂದ್ರು ಮದುವೆ ಮಾಡ್ಕೋ ತಾನೆ."

ಆಕೆ ಹಿತವಾಗಿ ನಕ್ಕಳು........

ಆ ವಾತಾವರಣ ಆಹ್ಲಾದಕರವಾಗಿತ್ತು. ಜೀವನಕ್ಕೆ ಆ ಒಂದು ಮುಖವೂ ಇದೆ ಅಲ್ಲವೆ?

........ನಾನು ಹೊರಡಲೆಂದು ಎದ್ದು ನಿಂತೆ.

"ಊಟಕ್ಕೇಳು ನಾಣಿ. ಆ ತಾಯಿನಾನ ಕಾಯಿಸ್ಬೇಡ........"

"ಆಗಾಗ್ಗೆ ಬರ್ತಾ ಇರು ಚಂದ್ರು."

"ಹೂನಪ್ಪಾ........ನಾಣಿ, ಶ್ರೀಕಂಠನ್ನ ನೋಡೋಕೆ ಬರ್ತೀ ಯೇನು?"

"ಖಂಡಿತವಾಗ಼್್ಲೂ ಬರ್ತೀನಿ. ಇನ್ನೊಂದು ನಿಯೋಗ ಯಾವ ತ್ತಾದರೂ ಬರೋದು ತಪ್ಪಿದ್ದಲ್ಲವಲ್ಲಾ!"

ಇನ್ನೊಂದು ನಿಯೋಗ........!

ಆ ದಿನ ಇತರರೊಡನೆ ನಾರಾಯಣನನ್ನೂ ಲಾಕಪ್ಪಿನಲ್ಲಿರಿಸಿದ್ದರು. ಆ ವಿಷಯ ಬಂದಾಗಲೆಲ್ಲ "ನಾನು ಲಾಕಪ್ನಲ್ಲಿದ್ದಾಗ" ಎಂದು ಅಭಿಮಾನದಿಂದಲೆ ನಾಣಿ ಮಾತನಾಡುತಿದ್ದ. ನಾನು ಕೂಡಾ ಹಾಗೆ ಹೇಳುವುದು ಸಾಧ್ಯವಿತ್ತೆ? ಲಾಕಪ್ಪಿನಲ್ಲೇನೋ ನಾನಿದ್ದೆ—

ಮೂರು ಬಾರಿ. ಆದರೆ ಆ ಬಗ್ಗೆ ಅಭಿಮಾನದಿಂದ ಹೇಳುವುದು ಸಾಧ್ಯವಿತ್ತೆ ?....ಸ್ವಾತಂತ್ರ್ಯತಂದ ದೇಶಭಕ್ತರು, " ನಾನು ಜೈಲಲ್ಲಿದ್ದಾಗ" ಎಂದು ಅಭಿಮಾನದಿಂದ ಮಾತನಾಡುವುದು ಸಾಮಾನ್ಯವಾಗಿತ್ತು. ಈಗ ಕೆಂಪು ಬಾವುಟದ ಜನ, ಲಾಕಪ್ಪು—ಜೈಲುಗಳ ಬಗ್ಗೆ ಸಲಿಗೆಯಿಂದ ಮಾತನಾಡುತಿದ್ದರು. ಆದರೆ ನಾನು ?

ಶ್ರೀಕಂಠ ಬೊಂಬಾಯಿಂದ ಬಂದ. ಮಗ ನಾಗರಾಜನಿಗಾಗಿ ನೂರಾರು ಆಟದ ಸಾಮಾನುಗಳನ್ನು ಅವನು ತಂದಿದ್ದ. ಶಾರದೆಗಾಗಿ ಸೀರೆಗಳನ್ನೂ ಕೂಡಾ.

ಮುಂಬಯಿ ಪ್ರವಾಸದ ವರದಿ ಚುಟುಕಾಗಿತ್ತು.

" ನಿನಗೆ ಆಶ್ಚರ್ಯವಾದೀತು ಚಂದ್ರೂ....ಖುಷಿಯಾಗಿರೋಕೆ ಪುರಸತ್ತೇ ಆಗ್ಲಿಲ್ಲ."

" ಏನಾದರೂ ವ್ಯಾಪಾರ ಕುದುರ್ತೇನು ? "

" ಪರವಾಗಿಲ್ಲ. ಇಂಡೋನೇಷ್ಯಾದಿಂದ ಒಂದಷ್ಟು ಆರ್ಡರ್ ಬರತ್ತೆ...."

" ಶುಭ ವಾರ್ತೆ."

" ಹೊಸ ಯಂತ್ರಗಳಿಗೆ ಆರ್ಡರು ಬೇರೆ ಕೊಟ್ಬು ಬಂದಿದೀನಿ."

" ಹುಂ."

" ಅದಕ್ಕಿಂತಲೂ ಮುಖ್ಯ ವಿಷಯಾಂತಂದರೆ, ಬೊಂಬಾಯಿನ ಎರಡು ಮೂರು ಮಿಲ್‌ಗಳವರ ಜತೇಲಿ ನಾನು ಬೆಳೆಸಿಲೋ ಸ್ನೇಹ... "

ಅದಾದ ಮೇಲೆ ನಾಲ್ಕಾರು ದಿನ ಎಡೆಬಿಡದ ಚಟುವಟಿಕೆಗಳಲ್ಲಿ ಶ್ರೀಕಂಠ ನಿರತನಾದ. ಮಿಲ್‌ಮಾಲೀಕರ ಸಭೆಗಳು ಜರಗಿದುವು ... ಸಭೆಗಳಲ್ಲಿ ತೀರ್ಮಾನಗಳಾದುವು.

ಮೂರನೆಯ ಷಿಫ್ಟ್ ನಿಲ್ಲಿಸುವುದು ; ಮೂರರಲ್ಲಿ ಎರಡಂಶ ಕಾರ್ಮಿಕರಿಗೆ ಕೆಲಸದಿಂದ ವಜಾ ; ಉಳಿದವರ ತುಟ್ಟಿಭತ್ತೆಯಲ್ಲಿ ಕಡಿತ.

....ಅನಂತರದ ಘಟನೆಗಳನ್ನು ನಾನು ನಿರೀಕ್ಷಿಸಿದೆ.

" ಈ ಸಾರೆ ಯೂನಿಯನ್ನ ಪುಡಿಮಾಡ್ತೀವಿ. ಕೆಂಪು ಬಾವುಟ

ಧೂಳಿದ್ದು ಹೋಗುತ್ತೆ ...ಇದು ನಮ್ಗೆ ಚಾನ್ಸ್.... ಕೆಲಸಗಾರರನ್ನ ಕಡಿಮೆ ಮಾಡಿ, ಉಳಿದೋರಿಂದ ಅಷ್ಟೇ ಕೆಲಸ ತಗೋತೀವಿ........ ನೋಡ್ತಿರು ಚಂದ್ರೂ...."

"ಆದರೆ ಕೆಲಸಗಾರರು ಸುಮ್ನಿರ್ತಾರೇನಯ್ಯ ಕಂಠಿ?"

"ನಿನ್ಗೆ ಬಂಡವಾಳವ ಎಕನಾಮಿಕ್ಸ್ ಅರ್ಥವಾಗೊಲ್ಲ ಚಂದ್ರು, ಯೂನಿಯನ್‌ನಲ್ಲಿ ನಮ್ಮವರೇ ಇದ್ದಿದ್ರೆ ನಾವೇ ಹೇಳ್ಸಿ ಮುಷ್ಕರ ಮಾಡಿಸ್ತಿದ್ವಿ."

"ಇರೋ ಸ್ಟಾಕು ಮುಗಿಲೀಂತ ತಾನೆ?"

"ಅದ್ಸರಿ, ಸರಿಯಾಗೇ ಊಹಿಸ್ದೆ."

ಶ್ರೀಕಂಠನ ಆತ್ಮ ವಿಶ್ವಾಸದಿಂದ ನನಗೆ ಕಸಿವಿಸಿಯಾಯಿತು. ಹೋದ ಸಾರಿಯ ಹಾಗೆ, ಮಣ್ಣಿನ ರಾಶಿಯಿಂದೊಂದು ಬಡಕಲು ಶಕ್ತಿ ಎದ್ದು ನಿಂತು, ಒಮ್ಮೆಲೆ ಬಲಿಷ್ಠವಾಗಿ ಮೈ ಚಾಚಿ, ಜಗತ್ತಿನ ಒಂದೇ ಒಂದಾದ ಪ್ರಬಲ ಶಕ್ತಿಯನ್ನು ಈ ಬಾರಿ ಅಣಕಿಸಲಾರದಲ್ಲವೆ? ಆ ಶಕ್ತಿಗೆ ಆಹ್ವಾನಕೊಡಲಾರದಲ್ಲವೆ?

....ಆದರೆ ಈಗ ಸ್ವಾತಂತ್ರ್ಯ ಬಂದಿತ್ತು. ಪ್ರಾಯಶಃ ಶ್ರೀಕಂಠನ ಎಣಿಕೆ ತಪ್ಪಾಗಿತ್ತೇನೊ. ಬಡವರ ಪಕ್ಷಪಾತಿಯಾದ ಜನತಾ ಸರಕಾರ....

ಆ ಕರಪತ್ರಗಳ ಭಾಷೆಯೊ!

ಒಂದು ದಿನ ಸೊರಗಿದ ದೇಹದ ವ್ಯಕ್ತಿಯೊಬ್ಬ ಶ್ರೀಕಂಠನನ್ನು ಹುಡುಕಿಕೊಂಡು ಬಂದ.

"ಯಾರು ಬೇಕು?" ಎಂದು ಕೇಳಿದೆ.

"ನಾನು ಚೆಲುವಯ್ಯ. 'ವಿಶಾಲಭೂಮಿ' ಪತ್ರಿಕೆಯ ಚೀಫ್ ಅಸೋಸಿಯೇಟ್ ಎಡಿಟರ್—ಮುಖ್ಯ ಸಹಾಯಕ ಸಂಪಾದಕ. ಶ್ರೀಕಂಠಯ್ಯನವರು ಬರ ಹೇಳಿದ್ದರು."

"ಕೂತಿರಿ, ಈಗ ಬರ್ತಾರೆ."

ಆ ಪತ್ರಿಕೋದ್ಯೋಗಿ ಕೆಮ್ಮಿದ.

"ಇಲ್ಲಿ ಸಿಗರೇಟು ಸೇದ್ಬಹುದೆ ಸಾರ್?"

" ಸೇದಿ, ಸೇದಿ. ಅವಶ್ಯವಾಗಿ ಸೇದಿ."

ಬೂದಿ ಕರಂಡಕವನ್ನು ನಾನು ಅವನ ಬಳಿಗೆ ತಳ್ಳಿದೆ.

" ಹಾಗಿದ್ದರೆ ಒಂದು ಸಿಗರೇಟು ಕೊಡಿ."

ಅದೀಗ ಸೊಗಸುಗಾರಿಕೆ! ಆತ ನನ್ನ ಬೆಳ್ಳಿಯ ಕೇಸಿನಿಂದೊಂದು ಗೋಲ್ಡ್ ಫ್ಲೇಕನ್ನೆತ್ತಿಕೊಂಡ. ನಾನೇ ಕಡ್ಡಿಗೀರಿ, ಅವನಿಂದ " ಥ್ಯಾಂಕ್ ಯೂ " ಅನ್ನಿಸಿಕೊಂಡೆ. ಸುಟ್ಟಬೂದಿ, ಟ್ರೇಯ, ಸುತ್ತಲೂ ಬೀಳುವಂತೆ ಆತ ಸಿಗರೇಟು ಕೊಡವುತಿದ್ದ! ನಾನು ಬಲು ಕುತೂಹಲದಿಂದ ಆತನ ಮಾತುಗಳನ್ನು ಕೇಳಲು ಸಿದ್ಧನಾದೆ.

ಆದರೆ ಶ್ರೀಕಂಠ ಕೊಠಡಿಯಿಂದ ಹೊರಬಂದು ನನ್ನರಸ ನಿಮಿಷಗಳಿಗೆ ಭಂಗತಂದ.

ಆ ಚೀಫ್ ಅಸೋಸಿಯೇಟ್ ಎಡಿಟರ್ ಚೆಲುವಯ್ಯ ಎದ್ದು ನಿಂತು ಬಾಗಿ ವಂದಿಸಿದ.

" ಹಾಗಾದರೆ ಒಪ್ಪಿಗೆಯೋ ? "

ಅದು ಶ್ರೀಕಂಠನ ಪ್ರಶ್ನೆ. ಅವನ ರೀತಿಯೇ ಹಾಗೆ. ಇತರರೊಡನೆ ಮಿತವಾದ ಮಾತು—ಎಷ್ಟು ಬೇಕೋ ಅಷ್ಟು. ಇಲ್ಲಿಯೂ ಅಷ್ಟೆ....ಫೋನ್‌ನಲ್ಲಿ ಮೊದಲೇ ಮಾತುಕತೆಯಾಗಿರಬೇಕು. ಆದಾದ ಮೇಲೆ ಒಪ್ಪಿಗೆಯ ಮಾತು ಮಾತ್ರ.

" ಆದರೆ ಐದು ರೂಪಾಯಿ ಸಾಲದು ಸಾರ್."

" ಸಾಕು. ದಿನಕ್ಕೊಂದು ಕರಪತ್ರ. ಹತ್ತು ದಿವಸಗಳಿಗೆ, ಹತ್ತು ಕರಪತ್ರಗಳಿಗೆ, ಐವತ್ತು ರೂಪಾಯಿ ಪ್ರಿಂಟಿಂಗೂ ನಿಮ್ಮ ಪ್ರೆಸ್ನಲ್ಲೇ ಮಾಡಿಸಿ. ಅದರ ದುಡ್ಡು ಬೇರೆ ......."

ಚೆಲುವಯ್ಯ ಒಂದು ಕೈಯಿಂದ ಇನ್ನೊಂದನ್ನು ತೀಡುತ್ತ ನಿಂತ ಶ್ರೀಕಂಠ ಐದು ರೂಪಾಯಿಯ ನೋಟನ್ನು ಕೊಟ್ಟದ್ದಾಯಿತು.

" ಸಾಯಂಕಾಲ ಬನ್ನಿ. ಪಾಯಿಂಟ್ಸ್ ಹೇಳ್ತೀನಿ. ಬರಕೊಂಡು ಹೋಗಿ."

" ಆಗಲಿ ಸಾರ್. ಹ್ಯಾಂಡ್‌ಬಿಲ್ ಯಾರ ಹೆಸರಲ್ಲಿ ಸಾರ್ ಇರ್ಬೇಕು ? "

" ಕಾರ್ಮಿಕ ಹಿತೈಷಿಗಳು—ಅಂತ ಬರೆದರಾಯ್ತು."

" ಐದು ಘಂಟೆಗೆ ಬರಲಾ ಹಾಗಾದರೆ ? "

" ಆರು ಘಂಟೆಗೆ ಬನ್ನಿ."

ಚೆಲುವಯ್ಯ ಮತ್ತೊಮ್ಮೆ ಬಾಗಿ ನಮಿಸಿ, ನನಗೂ ಒಂದು ನಮಸ್ಕಾರ ಕೊಟ್ಟು, ಹೊರಟ.

" ಹ್ಯಾಗಿದಾನೆ ಚೆಲುವಯ್ಯ ? ಎಂಥೆಂಥವರ್ನ ಸಂಪಾದ್ನಿಟ್ಟಿದೀನಿ ನೋಡು ! "

ನಗುತ್ತಾ ಹೇಳಿದೆ :

" ಚೀಪ್ ಅಸೋಸಿಯೇಟ್ ಎಡಿಟರ್ ! "

" ಬಲು ಚೀಪ್....ಆದರೆ ಬಡ್ಡಿೀಮಗ ಚೆನ್ನಾಗಿ ಬರೀತಾನೆ ಕಣೋ. ಒಂದೊಂದು ಮಾತೂ ಹ್ಯಾಗಿರತ್ತೆ ಅಂತೀಯಾ ? "

ನಿಜವಾಗಿಯೂ ಅವನ ಶೈಲಿ ಶಕ್ತಿಪೂರ್ಣವಾಗಿತ್ತು. ಆ ಕರಪತ್ರದ ಶಿರೋನಾಮೆ ಗುಡುಗುತಿತ್ತು :

" ಮಾಸ್ಕೋ ಗೂಢಚಾರರ ಫಿತೂರಿ ! "

ಆ ಮೇಲೆ ವಿವರಣೆ : ದೇಶವನ್ನು ಪರರಿಗೆ ಮಾರಲೆತ್ನಿಸುವ ಪಂಚಮದಳದವರು-ಮಹಾ ಧೂರ್ತರು. ಮಾಲೀಕರನ್ನು ಪ್ರತಿಭಟಿಸುವುದರ ಮೂಲಕ, ಉಂಡ ಮನೆಗೆ ಎರಡೆಣಿಸುವ ಪಾಪಿಗಳು........

ಇನ್ನೊಂದು ಕರಪತ್ರ ಬಂತು.

" ಎಚ್ಚರ ! ಕಾಲರಾ ನಿಮ್ಮ ಮನೆಗೆ ಬಂದು ಬಾಗಿಲು ತಟ್ಟುತ್ತಿದೆ. ಎಚ್ಚರ ! "

ಆ ಬಳಿಕ ಕೂಲಿಕಾರ ಮುಖಂಡರಲ್ಲಿ ಮುಖ್ಯರಾದವರನ್ನು ಕುರಿತು ವೈಯಕ್ತಿಕ ನಿಂದೆ.

ಒಂದು ಕರ ಪತ್ರ ನಾರಾಯಣನನ್ನು ಬಲಿ ತೆಗೆದುಕೊಂಡಿತ್ತು. ಅದರಲ್ಲಿ ಅವನ ವಿಷಯವಾಗಿಯೂ ಅವನ ಹೆಂಡತಿ ವಿಷಯವಾಗಿಯೂ ಅವಾಚ್ಯ ಮಾತುಗಳನ್ನು ಬರೆದಿದ್ದರು.

ಅದನ್ನು ಶ್ರೀಕಂಠನಿಗೆ ತೋರಿಸುತ್ತಾ ಕೇಳಿದೆ :

" ಇದಕ್ಕೂ ನೀನೇ ಪಾಯಿಂಟ್ಸ್ ಕೊಟ್ಟಿಯೋ ? "

" ನನಗೆಲ್ಲಯ್ಯಾ ಗೊತ್ತು ಅವನ ಖಾಸಗಿ ಜೀವನ? ಇದೆಲ್ಲಾ ಮಾಹಿತಿ ತರೋರು ನಮ್ಮ ಗೂಢಚಾರರು."

ಸ್ವಲ್ಪ ನೊಂದ ಧ್ವನಿಯಲ್ಲಿ, " ಈ ಹ್ಯಾಂಡ್ ಬಿಲ್ಲಿಗೆ ಅರ್ಥವಿಲ್ಲ ಕಣೋ," ಎಂದೆ.

" ಯಾಕೆ? ನಾಣೀ ವಿಷಯ ಬಂದಿದೆ ಅಂತ ದುಃಖವೊ?"

" ಹಾಗಲ್ಲ ಕಂಠಿ. ಯಾರೇ ಆಗಲಿ ಈ ರೀತೀನೂ ಬರೀ ಬಹುದೆ?"

" ಇದೆಲ್ಲಾ ಯುದ್ಧ ಕಣೋ. ಅವರೇ ಹೇಳೋ ಹಾಗೆ ವರ್ಗ ಸಮರ. ಈ ಸಮರದಲ್ಲಿ ಉಪಯೋಗಿಸ್ದೇ ಇರೋ ಅಸ್ತ್ರವೇ ಇಲ್ಲ."

" ನಾಳೆ ದಿವಸ ಅವರೂ ಹಾಗೇ ಬರೆದರೆ? ನಿನ್ನ ವೈಯಕ್ತಿಕ ಜೀವನಾನ ಬಯಲಿಗೆಳೆದರೆ?"

" ಹುಂ. ನೋಡ್ಕೊಳ್ಳೋಣ ಆಗ."

ನಾನು ಮೌನ ತಳೆದೆ. ಸ್ವಲ್ಪ ಹೊತ್ತಿನಲ್ಲಿ ಶ್ರೀಕಂಠನೇ ಹೇಳಿದ:

" ಚಂದ್ರೂ, ಒಂದ್ವಿಷಯ ಹೇಳ್ತೀನಿ. ಒರಟಾಗಿಯೇ ಹೇಳ್ತೀನಿ. ಈ ಗಲಾಟೆ ಮುಗಿಯೋ ವರೆಗೂ ನೀನು ತಲೆಹರಟೆ ಮಾಡ್ಬಾರ್ದು."

ವ್ಯಕ್ತಿತ್ವವನ್ನೂ ಕಳೆದುಕೊಂಡ, ಎಲ್ಲವನ್ನೂ ಕಳೆದುಕೊಂಡ, ತೇಜೋಹೀನ ಮಾನವ ನಾನು. ಬರಿಯ ನೆರಳು. ಕಾಲಗತಿಗೆ ಅನು ಸಾರವಾಗಿ ಅದು ಕಿರಿದಾಗಬೇಕು, ಹಿರಿದಾಗಬೇಕು. ನನಗೆ ಅದರ ಮೇಲೆ ಪ್ರಭುತ್ವವಿಲ್ಲ. ನನ್ನ ಸ್ವಂತದ್ದೆನ್ನುವಂಥಾದ್ದು ಏನೂ ಇರಲಿಲ್ಲ.

ಆ ಪತ್ರಿಕೋದ್ಯೋಗಿಯೂ ಅಷ್ಟೆ. ಅವನ ಸ್ವಂತದ್ದೆನ್ನುವಂ ಥಾದ್ದು ಏನಿತ್ತು?

ಆ ದಿನ ಅವನು ಬಂದಾಗ ಮಾತು ತೆಗೆದೆ:

" ಕರಪತ್ರಗಳನ್ನ ಸೊಗಸಾಗಿ ಬರೀತೀರಿ ಚೆಲುವಯ್ಯ- ಎ.ಗ."

" ನಿಮಗೆ ಮೆಚ್ಚಿಗೆಯಾಯ್ತೆ? ಥ್ಯಾಂಕ್ಸ್."

ಆತನಿಗೊಂದು ಸಿಗರೇಟು ಕೊಟ್ಟೆ.

" ಆ ಹಾ! ಎಂಥ ಶೈಲಿ ನಿಮ್ಮದು!"

ಆ ತೆಳು ದೇಹವೂ ಹೊಗಳಿಕೆಗೆ ಬಲಿಯಾಗಿ ಊದಿಕೊಳ್ಳು ತಿದ್ದಂತೆ ಕಂಡಿತು. ಅವನ ಗಂಟಲಿನಿಂದ ಮಾತು ಹೊರಡುವುದಕ್ಕೆ ಮುಂಚೆ ನಾನೇ ಮುಂದುವರಿಸಿದೆ.

"ಎಲ್ಲ ಪತ್ರಿಕೋದ್ಯೋಗಿಗಳೂ ಹೀಗೆಯೇ ಇದಾರಾ ಚೆಲುವಯ್ಯ?"

"ಉಂಟೆ ಎಲ್ಲಾದರೂ? ಇಂಥ ಶೈಲಿ ಬೇರೆ ಯಾರಿಗಿದೆ?"

"ಶೈಲಿಯಲ್ಲ, ನೀತಿ. ಏನಾದರೂ ಬರ್ಕೊಡೀಂತಂದ್ರೆ ನಿಮ್ಮ ಹಾಗೆ ಎಲ್ಲರೂ ಸಹಾಯವಾಗ್ತಾರಾ?"

"ಇಲ್ಲ ಮಿಸ್ಟರ್ ಇವರೆ. ಅದು ಸಾಧ್ಯವಿಲ್ಲ....ನಮ್ಮಲ್ಲೂ ತಲೆಹರಟೆಯವರಿದ್ದಾರೆ. ತತ್ವ - ವ್ಯಕ್ತಿತ್ವ ಅಂತ ಬುರುಡೆ ಬಿಡೋರು...."

"ಐ ಸೀ."

"ನೀವು 'ವಿಶಾಲ ಭೂಮಿ' ಓದ್ತೀರಿ ತಾನೆ? ಅದರಲ್ಲಿ 'ಕೈ ಕೆಸರು ಬಾಯಿ ಮೊಸರು' ಕಾಲಂ ಬರೆಯೋನು ನಾನೇ."

"ಸಮಂಜಸವಾದ ಶಿರೋನಾಮೆ!"

ಆತನನ್ನು ಇನ್ನೂ ಒಂದಷ್ಟು ಕುಣಿಸಬೇಕೆಂದುಕೊಂಡೆ.

"ಚೆಲುವಯ್ಯ, ಆ ಯೂನಿಯನ್‌ನವರು ಬಂದು ಪಾದ ಹಿಡ್ಕೊಂಡು ಬಡ್ಕೊಂಡರೂಂತಿಟ್ಕೊಳ್ಳಿ. ಫೀಸ್ನ ಪಾದ ಕಾಣ್ಕೆಯಾಗಿ ಅವರೂ ಒಪ್ಪಿಸಿದರೆ, ಕನಿಕರ ಪಟ್ಕೊಂಡು ನೀವೊಂದು ಕರ ಪತ್ರ ಅವರಿಗಾಗಿ ಬರ್ಕೊಡಲ್ವೆ?

"ನೀವು ತಾತ್ವಿಕವಾಗಿ ಕೇಳೋದಾದರೆ,—ಯಾಕಾಗ್ಬಾರ್ದು? ಆದರೆ, ಈ ಸಂದರ್ಭದಲ್ಲಿ ನಾನು ಆ ಕೆಲಸ ಮಾಡೋಕಾಗಲ್ಲ. ವಾದಿ—ಪ್ರತಿವಾದಿಗಳಿಬ್ಬರಿಂದಾನೂ ದುಡ್ಡು ಕೀಳೋದು ಧರ್ಮ ವಲ್ಲ."

ಧರ್ಮ ಮತ್ತು ಚೆಲುವಯ್ಯ; ನ್ಯಾಯ ಮತ್ತು ಚೆಲುವಯ್ಯ!

ಆತ ತನ್ನ ಕೈಚೀಲದಿಂದ ಬೇರೆ ಎರಡು ಕರಪತ್ರಗಳನ್ನು ಹೊರ ತೆಗೆದ.

" ಇವುಗಳ್ನ ನೀವು ನೋಡಿಲ್ಲಾಂತ ಕಾಣುತ್ತೆ. ಯೂನಿಯನ್ ನವರು ಹೊರಡ್ಸಿದಾರೆ."

ಆ ಕರಪತ್ರಗಳನ್ನು " ಸತ್ಯದ ಬತ್ತಳಿಕೆಯಿಂದ ಮೊದಲ ಬಾಣ," "—ಎರಡನೆ ಬಾಣ", ಎಂದು ಕರೆದಿದ್ದರು. ನಗರದ ಮಾಲೀಕರೆಲ್ಲ ಯುದ್ಧ ಕಾಲದಲ್ಲಿ ಬಹಿರಂಗವಾಗಿ ಸಂಪಾದಿಸಿದ ಲಾಭದ ವಿವರಗಳು ಅದರಲ್ಲಿದ್ದುವು. ಆ ಬಳಿಕ ಉಕ್ಕಿನಂಥ ಐಕ್ಯಕ್ಕಾಗಿ—ಸಂಘಟಿತ ಹೋರಾಟಕ್ಕಾಗಿ—ಕರೆ.

ಯಾರೋ ಅವುಗಳನ್ನು, ಹೃದಯಕ್ಕೆ ನಾಟುವಂತೆ ಬರೆದಿದ್ದರು.

" ಇವು ಹ್ಯಾಗಿವೆ ಚೆಲುವಯ್ಯ? "

" ಹೋಪ್‌ಲೆಸ್, ಕೃಷ್ಣರಾಜ್ ಕೈಲಿ ಬರೆಸಿದಾರೆ."

" ಯಾರು ಕೃಷ್ಣರಾಜ? "

" ಅವನೇ ಸಾರ್. ಲೇಖನ, ಕತೆ-ಗಿತೆ, ಬರೆದು ತಾನೂ ಒಬ್ಬ ಪ್ರಗತಿಶೀಲ ಸಾಹಿತಿ ಅಂತ ಮೆರೀತಾನಲ್ಲ—ಅವನೇ."

ಆಗಾಗ್ಗೆ ಪತ್ರಿಕೆ ಪುಸ್ತಕಗಳನ್ನು ಓದುವ ಅಭ್ಯಾಸವಿದ್ದ ನನಗೆ ಆ ಹೆಸರು ಅಪರಿಚಿತವಾಗಿರಲಿಲ್ಲ.

" ಯೂನಿಯನ್ ನವರು ಅಂಕೆ—ಸಂಖ್ಯೆ—ವಿವರ ಒದಗಿಸ್ತಾರೆ. ಆತ ಬರಕೊಡ್ತಾನೆ."

" ಫೀಸು ಗೀಸು ಇದೆಯೋ—? "

" ಇಲ್ದೇ ಇರತ್ಯೆ ಸಾರ್........ನೋಡಿ ಎಷ್ಟು ತುಚ್ಛವಾಗಿ ಬರೆದಿದಾನೆ — ಕೈಲಿ ಲೇಖನಿ ಇದೇಂತ, ಬರೆಯೋಕೆ ಕಾಗದ ಇದೇಂತ—"

ಸ್ವತಃ ತಾನೇ ಚರಂಡಿಯಲ್ಲಿ ಬ್ರಷ್ ಅದ್ದಿ ತುಚ್ಛವಾಗಿ ಬರೆಯುವವನ ದೃಷ್ಟಿಯಲ್ಲಿ, ಜಗತ್ತೇ ತುಚ್ಛವಾಗಿ ತೋರುತಿತ್ತು. ಕಾಮಾಲೆ ಕಾಹಿಲೆಯವನಿಗೆ ಪ್ರಪಂಚವೆಲ್ಲ ಅರಸಿನ-ಅರಸಿನವಾದ ಹಾಗೆ.... ಮುಂದೆ ಅವನ ಮಾತು ಕೇಳುವ ಇಷ್ಟ ನನಗಿರಲಿಲ್ಲ—ನಾನೆದ್ದು ಒಳ ಹೋದೆ.

ನಗರದ ಕಾರ್ಮಿಕರನ್ನು ಕಾಡಿದ್ದು, ಬಟ್ಟೆ ಕಾರಖಾನೆಗಳ ಆರೆಂಟು ಸಾವಿರ ಜನರ ನಿರುದ್ಯೋಗದ ಪ್ರಶ್ನೆ ಮಾತ್ರವಲ್ಲ. ಇತರ ಉದ್ಯಮಗಳಲ್ಲೂ ಮಾಲೀಕರು ಅದೇ ನೀತಿಯನ್ನು ಅನುಸರಿಸಿದ್ದರು. ದುಡಿಯುವವರನ್ನು ಕಡಿಮೆ ಮಾಡುವುದು ; ಶ್ರಮಭಾರ ಹೆಚ್ಚಿಸುವುದು....

ಅದು ಎರಡು ಶಕ್ತಿಗಳೊಳಗೆ ನಡೆದ ಮಲ್ಲಯುದ್ಧ. ಎರಡು ಬಣಗಳಲ್ಲೂ ಇದ್ದ ಐಕ್ಯ ಸೋಜಿಗವನ್ನುಂಟು ಮಾಡುತಿತ್ತು. ಮಾಲೀಕರು ಪ್ರತಿದಿನವೂ ಸೇರಿ ಮಂತ್ರಾಲೋಚನೆ ನಡೆಸುತಿದ್ದರು. ಕೇರಿ ಕೇರಿಗಳಲ್ಲಿ ಕೂಲಿಕಾರರ ಸಭೆಗಳಾಗುತಿದ್ದುವು.

ಶ್ರೀಕಂಠ ಕೇಳಿದ.

"ಯಾಕೊ ಚಂದ್ರೂ ಹೀಗಿದೀಯ ?"

"ಮೈಲಿ ಹುಷಾರಾಗಿಲ್ಲ."

ಅದು ನಿಜವಾಗಿತ್ತು. ಕರುಳಿನ ಬಾಧೆ ನನ್ನ ನೆಮ್ಮದಿಯೆಲ್ಲವನ್ನೂ ಕಸಿದುಕೊಂಡಿತ್ತು.

"ಊಟಿಗೆ ಹೋಗಿರ್ತೀಯೇನು ಬೇಕಾದರೆ ? ವಿಶ್ರಾಂತಿ ತಗೋ."

ಒಪ್ಪಿಬಿಡೋಣವೆನ್ನಿಸಿತು. ಆದರೆ ಊಟಿಗೆ ಕಳಿಸುವ ಯೋಜನೆಯ ಹಿಂದೆ, ಮುಷ್ಕರದ ಸಮಯದಲ್ಲಿ ನನ್ನನ್ನು ಊರಿನಿಂದ ಹೊರಗಿಡುವ ಯತ್ನವನ್ನು ನಾನು ಸುಲಭವಾಗಿ ಕಂಡೆ. ನನ್ನದಲ್ಲದ ಈ ಲೋಕದಿಂದ ದೂರ ಹೋಗಿ ನಾಲ್ಕು ದಿನಗಳಿರಬೇಕು ಎನಿಸುತ್ತಿತ್ತು. ಆದರೂ ಅರ್ಧ ನೋಡಿದೊಂದು ಸ್ವಾರಸ್ಯಪೂರ್ಣ ನಾಟಕವನ್ನು ಅಲ್ಲಿಯೇ ಬಿಟ್ಟೇಳಲು ನನಗೆ ಇಷ್ಟವಾಗಲಿಲ್ಲ.

"ಬೇಡ ಕಂಠಿ. ಇಲ್ಲೇ ಔಷಧಿ ತಗೋತೀನಿ........"

ಶ್ರೀಕಂಠನ ಬಾಹ್ಯ ಜೀವನ ಮತ್ತು ಆಂತರಿಕ ಜೀವನ. ಹೊರಗೆ ಆತ ಮಾಲೀಕರ ಮುಖಂಡನಾಗಿದ್ದ ; ಒಂದು ಶಕ್ತಿಯ ಸೇನಾನಿಯಾಗಿದ್ದ ; ಆ ಕೈಗಾರಿಕೋದ್ಯಮದ ವೃದ್ಧರೂ ಕೂಡಾ ಶ್ರೀಂಠನ ಕರ್ತವ್ಯದಕ್ಷತೆಯಲ್ಲಿ ನಂಬಿಕೆ ಇಟ್ಟಿದ್ದರು. ಆದರೆ ಮನೆಯೊಳಗೆ ?

ಅದು ಕಲಹ—ರೋದನಗಳ ಕುರಕ್ಷೇತ್ರವೇನೋ ಆಗಿರಲಿಲ್ಲ. ಅಲ್ಲಿ ಒಂದು ರೀತಿಯ ಮೌನ ನೆಲೆಸಿರುತಿತ್ತು. ಯಾರಾದರೂ ಅತಿಥಿಗಳು ಮನೆಗೆ ಬಂದರೆ ಶಾರದೆ ಮಿಸೆಸ್ ಶ್ರೀಕಂಠಯ್ಯನಾಗುವಳು....ಉಳಿದ ಹೊತ್ತಿನಲ್ಲಿ ಆಕೆ ಏಕಾಂತ ಪ್ರಿಯೆ, ಮಿಸ್ ಶಾರದೆ ...

ಈ ಗೊಂದಲದ ನಡುವೆ ಆ ಹುಡುಗನೊ? ಶಾಲೆಗೆ ಹೋಗ ತೊಡಗಿದ್ದ ನಾಗರಾಜ, ತನ್ನ ಓರಗೆಯವರ ಸ್ನೇಹ ಸಂಪಾದನೆಯಿಂದ ತೃಪ್ತನಾಗುತಿದ್ದ. ಆತ ತನ್ನೊಡನೆ ಮನೆಗೆ ಕರೆದುಕೊಂಡು ಬರುತಿದ್ದ ಬಡ ಹುಡುಗನೊಬ್ಬನಿದ್ದ—ಅವನ ಸಹಪಾಠಿ. ಮನೆಯ ಭವ್ಯತೆ ಯನ್ನು ಕಂಡಾಗ ಆ ಹುಡುಗನ ದೃಷ್ಟಿ ಬೆರಗುನೋಟ ಬೀರುತಿತ್ತು; ನಾಗರಾಜನ ಆಟದ ಸಾಮಾನುಗಳನ್ನು ನೋಡಿದಾಗ ಅವನ ಮುಖ ಅರಳುತಿತ್ತು; ತಿಂಡಿವಾಸನೆ ಬಂದಾಗ ಅವನ ನಾಲಿಗೆಯಲ್ಲಿ ನೀ ರೂರುತಿತ್ತು.

ಚಿತ್ರ ಸಂಗ್ರಹಾಲಯದೊಂದು ಕೃತಿಯನ್ನು ನೋಡುವಂತೆ ನಾನು ಅವನನ್ನು ದಿಟ್ಟಿಸುತಿದ್ದೆ.

ಆ ಹುಡುಗ ಕತ್ತಲಾದಾಗ ಮನೆಗೆ ಹೊರಡುತಿದ್ದ. ನಾಗರಾಜ ನನ್ನೂ ಆಲೋಕವನ್ನೂ ಬೀಳ್ಕೊಡಬೇಕಾದ ಪ್ರಮೇಯ ಬಂದಾಗ ಆ ಹುಡುಗನ ಕಂಠ ಗದ್ಗದಿತವಾಗುತಿತ್ತು.

ಅವನನ್ನು ಹತ್ತಿರಕ್ಕೆ ಕರೆದು, ಅವನು ಯಾರೆಂದು ಕೇಳುವ ಆಸೆಯಾಗುತಿತ್ತು ನನಗೆ. ಆದರೆ ಮರುಕ್ಷಣವೆ ಏಕಾಂಗಿಯಾದ ನನ್ನ ದುರವಸ್ಥೆಯನ್ನು ಕಂಡು ಮನಸ್ಸು ನಗುತಿತ್ತು.

ಒಂದು ಸಂಜೆ ಶಾರದೆ ನಾಗರಾಜನಿಗೆ ಎಚ್ಚರಿಕೆ ಕೊಡುತಿದ್ದಳು.

"ಹುಷಾರಾಗಿರ್ಬೇಕಪ್ಪ ರಾಜು. ನಿನ್ನ ಸ್ನೇಹಿತ—ಆ ಬಡ ಮುಂಡೇದು—ಏನಾದರೂ ಕದ್ಬು ಗಿದ್ಬಾನು!"

ಕಂಠ ಬಿರಿಯುವ ಹಾಗೆ ನಾಗರಾಜ ಕೂಗಾಡಿದ:

"ನನ್ನ ಸ್ನೇಹಿತನ್ನ ಹಾಗಂತೀಯಾ! ನಾಚ್ಕೆ ಆಗ್ಬೇಕಮ್ಮ ನಿಂಗೆ!"

"ಏನಂದೆ?"

ತಾಯಿಯ ಸ್ವರ ಕಠೋರವಾಗಿತ್ತು. ಆ ಬಳಿಕ ಹೊಡೆತಗಳು.

ಒಳಗಿನಿಂದ ಶ್ರೀಕಂಠನ ಧ್ವನಿ ಕೇಳಿಸಿತು.

"ಏನೋ ಅದು ಗಲಾಟೆ?"

ನಾನು ಸಮೀಪಹೋಗಿ ನಾಗರಾಜನನ್ನು ಕರೆದುಕೊಳ್ಳುತ್ತ ಹೇಳಿದೆ.

"ಅತ್ತಿಗೆ, ಮಗೂ ಮನಸ್ನ ಯಾಕಮ್ಮ ನೋಯಿಸ್ತೀರಿ?"

ಅವಮಾನಗೊಂಡು ಶಾರದೆ ಸಿಡಿನುಡಿದಳು:

"ಸಾಕು ಸುಮ್ನಿರಿ. ನಿಮ್ಮ ಹಿತೋಪದೇಶ ಯಾರೂ ಕೇಳಿಲ್ಲ."

ನಾಗರಾಜ "ಮಾಮಾ ಮಾಮಾ" ಎನ್ನುತ್ತ ನನ್ನ ಮಡಿಲಲ್ಲಿ ಮುಖವಿಟ್ಟ. ಬೀಗಿಕೊಂಡಿದ್ದ ಆ ಮುಖದ ಸುಂದರ ಕಣ್ಣುಗಳಿಂದ ಕಂಬನಿ ತೊಟ್ಟಿಕ್ಕುತಿತ್ತು.

ಕಂಬನಿ ತೊಟ್ಟಿಕ್ಕುವ ಮುದ್ದು ಮುಖ....

ಎಲ್ಲ ಕಾರ್ಖಾನೆಗಳ ಒಡೆಯರೂ ಏಕ ಪ್ರಕಾರವಾದ ತಮ್ಮ ನಿರ್ಧಾರವನ್ನು ಜಾಹೀರು ಮಾಡಿದರು. ಅದು ಕಾರ್ಮಿಕರಿಗೆ ಅವರು ಕೊಟ್ಟ ನೋಟೀಸು.

ಉದ್ರೇಕಗೊಂಡ ವಾತಾವರಣದಲ್ಲಿ ಕೂಲಿಗಾರರ ಬಹಿರಂಗ ಸಭೆಗಳಾದುವು. ಸಂಘದ ಕಾರ್ಯಸಮಿತಿ ಸಭೆಸೇರಿತು. ಕ್ರಿಯಾ ಸಮಿತಿಯೊಂದು ರಚಿತವಾಯಿತು ಅದರ ಸದಸ್ಯರೇ ನಿಯೋಗವಾಗಿ ಹೊರಟು, ಕಾರಖಾನೆಗಳ ಒಡೆಯರನ್ನು ಕಾಣ ಬಯಸಿದರು.

ಮಾಲೀಕರು ಪ್ರತ್ಯಪ್ರತ್ಯೇಕವಾಗಿ ಉತ್ತರಕೊಟ್ಟರು.

"ನಮ್ಮ ವ್ಯವಹಾರವೆಲ್ಲ ನಮ್ಮ ಕಾರ್ಖಾನೆಯ ಕೆಲಸಗಾರ ರೊಡನೆ. ನಿಮ್ಮ ಸಂಘವನ್ನು ನಾವು ಮಾನ್ಯ ಮಾಡೋದಿಲ್ಲ."

ಹಿಂದೆ ಮೂರು ತಿಂಗಳ ಬೋನಸು ಕೊಡಲೊಪ್ಪಿ ಒಪ್ಪಂದಕ್ಕೆ ಸಹಿ ಹಾಕಿದವರು, ಈಗ ಸಂಘದ ಮೇಲಿನ ಮಾನ್ಯತೆಯನ್ನು ಹಿಂತೆಗೆದಿದ್ದರು.

ಮಾನ್ಯತೆಯ ನಿರಾಕರಣೆಯಿಂದ ಪರಿಸ್ಥಿತಿ ವಿಕೋಪಕ್ಕೆ

ಹೋಯಿತು. ಅಂತಿಮ ತೀರ್ಮಾನವಾಗಬೇಕೆಂದು ಎಲ್ಲ ಮಿಲ್ಲುಗಳ ಕೆಲಸಗಾರರ ಸಭೆ ಜರಗಿಸಲು ಏರ್ಪಾಟಾಯಿತು.

ಮನೆಯಲ್ಲಿ ಶ್ರೀಕಂಠ ಸೂಕ್ಷ್ಮವಾಗಿ ನನ್ನನ್ನೆ ನೋಡುತ್ತ ಹೇಳಿದ :

"ಆ ದಿವಸ ನಿನ್ನ ವಿಚಾರವಾಗಿ ಐ. ಜಿ. ಪಿ. ಹೇಳಿದ್ದೆಲ್ಲಾ ಸುಳ್ಳೇನೋ ಅಂತ ಅನುಮಾನವಾಗ್ತಿದೆ."

"ಏನು ?"

"ಏನಾದರೂ ಸಾಹಸದ ಕೆಲಸ ಮಾಡೋದು ನಿನ್ನಿಂದ ನಿಜವಾಗಿಯೂ ಸಾಧ್ಯವಾ ?"

ನಾನು ನಗತೊಡಗಿದೆ.

"ಏನ್ಸಂರಿ ? ನಾನೊಬ್ಬ ಹಾಲಿವುಡ್ ಗ್ಯಾಂಗ್ಸ್ಟರ್ ಅಂತ ತಿಳಕೊಂಡಿದ್ದಿಯೇನು ?"

ಹೇಳಲು ಒಂದು ಕ್ಷಣ ಆತ ಅನುಮಾನಿಸಿದಂತೆ ತೋರಿತು.

"ಇವತ್ತು ಸಾಯಂಕಾಲ ರಾತ್ರೆಯೆಲ್ಲಾ ಅವರ ಸಭೆ ಜರಗುತ್ತೆ. ಆದಾದ್ಮೇಲೆ ಮೂರು ನಾಲ್ಕು ಜನರು ಮನೆಗೆ ಹೋಗ್ತಾರ್ಲ್ವ—ಅಷ್ಟೆ."

"ಯಾರು ಯಾರು ?"

"ಅವರ ಲೀಡರು ಮುನಿಸ್ವಾಮಪ್ಪ, ದೊಡ್ಡ ಕೆಲಸ ಮಾಡ್ತಿ ದೀನೀಂತ ಇವತ್ತು ಭಾಷಣ ಕುಟ್ಟೋಕೆ ಒಪ್ಕೊಂಡಿದಾನಂತೆ—ಆ ಬರೆಯೋವ್ನು—ಕೃಷ್ಣರಾಜ ...ಆ ಮೇಲೆ ಒಬ್ಬಿಬ್ಬರು—"

ಆ ಮೇಲಿನ ಒಬ್ಬಿಬ್ಬರು: ನಾರಾಯಣನ ಹೆಸರು ಅವನ ನಾಲಿಗೆಯ ತುದಿಯ ಮೇಲೆ ಇದ್ದಿರಬೇಕು. ಆದರೆ ಆತ ಹೇಳಲಿಲ್ಲ.

"ಏನ್ಮಾಡ್ಬೇಕೂಂತೀಯ ಇವರ್ನೆಲ್ಲ ?"

"ಮುಗಿಸ್ಬಿಡೋದರಿಂದ ಹಿಡಿದು ಕೈಕಾಲು ಮುರಿದ್ಹಾಕೋ ವರೆಗೆ ಏನು ಬೇಕಾದರೂ !"

ಸಿಗರೇಟು ಹಚ್ಚಿ, ಹೊಗೆಯ ಉಗುಳು ಹೊರಹಾಕುತ್ತಾ ಹೇಳಿದೆ.

"ಸರಿ........ಅಷ್ಟು ಮಾಡ್ತೀನಿ."

ಆ ಸ್ವರ ನನ್ನದು ಹೌದೋ ಅಲ್ಲವೋ ಎನ್ನುವ ಹಾಗೆ ವಿರೂಪ

ವಾಗಿತ್ತು. ಶ್ರೀಕಂಠ ನಕ್ಕ.

"ಭೇಷ್ ಆದೀಗ ಗಂಡಸ್ತನ—ಸರಿಯಾದ ಸ್ನೇಹದ ಕಾಣಿಕೆ ........ನೀನು ಶಾರದೇನ ಅತ್ತಿಗೆ ಅಂತ ದೂರವಿಟ್ಟಿರೋದಕ್ಕಿಂತಲೂ ಅದು ದೊಡ್ಡದು."

"ಸುಮ್ನಿರು ಕಂಠಿ. ಎಂಥ ಮಾತು!"

ಆತ ಸುಮ್ಮನಾದ. ಆ ಮೌನದ ನಿಮಿಷಗಳಲ್ಲಿ ಅವನು ಏನನ್ನೋ ಯೋಚಿಸುತಿದ್ದಂತೆ ತೋರಿತು. ಮೌನವನ್ನು ಮುರಿದು ಅವನೆಂದ:

"ನಿನ್ನ ಪರೀಕ್ಷಿಸೋಣಾಂತ ಹೇಳ್ದೆ—ಅಷ್ಟೆ. ಮರೆತ್ಬಿಡು ಅದನ್ನ."

ಅದು ನಿಜವಾಗಿತ್ತೆ? ನಾನು ಆ ಕೆಲಸವನ್ನು ಮಾಡಲಾರೆನೆಂಬ ಸಂದೇಹದ ಕೀಟ ಅವನನ್ನು ಕೊರೆಯುತ್ತಿರಲಿಲ್ಲವೆ?

ಆ ವಿಷಯ ಹೆಚ್ಚು ಯೋಚಿಸಿ ತಲೆಕೆಡಿಸಿಕೊಳ್ಳಲು ನಾನು ಇಷ್ಟಪಡಲಿಲ್ಲ.

'ನಿನ್ನಿಷ್ಟ," ಎಂದು ಸುಮ್ಮನಾದೆ.

ನಾನು ಸುಮ್ಮನಾದರೂ ಶ್ರೀಕಂಠ ಸುಮ್ಮನಿರಲಿಲ್ಲ.

"ಎಲ್ಲಾದರೂ ಹೋಗೋಣವೇನೋ ಸಾಯಂಕಾಲ?" ಎಂದು ಆತ ಕೇಳಿದ.

ನನಗೆ ಯಾವುದೂ ಇಷ್ಟವಿರಲಿಲ್ಲ. ಹೃದಯವನ್ನು ಯಾರೋ ಹರಿತವಿಲ್ಲದ ಕತ್ತಿಯಿಂದ ನೋಯಿಸಿ ನೋಯಿಸಿ ಕೊಯ್ದ ಹಾಗಾಗುತಿತ್ತು.

"ಮೈ ಕೈ ನೋವು ಕಂಠಿ. ಹೊಟ್ಟೇಲಿ ಏನೋ ಆಗ್ತಾ ಇದೆ. ನಾನು ಎಲ್ಲಿಗೂ ಬರೋದಿಲ್ಲ."

ಅಸಮಾಧಾನಗೊಳ್ಳುತ್ತ ಆತ ನನ್ನನ್ನು ನೋಡಿದ.

"ದುಃಖವಾಗುತ್ತಾ ಕಂಠಿ? ನಿರೀಕ್ಷಿಸಿದಷ್ಟು ಪ್ರಯೋಜನ ನನ್ನಿಂದ ನಿನಗೆ ಇಗ್ತಾ ಇಲ್ಲ ಅಲ್ಲವೆ?"

"ಯಾಕೆ ಹಾಗಂತೀಯಾ?"

"ನಿನಗೆ ನಾನು ಸರಿಯಾದ ಜೋಡಿ ಅಲ್ಲವೇನೋ ಅಂತ ಭಾಸವಾಗ್ತಿದೆ."

"ಸುಮ್ಮನೆ ಇಲ್ಲದ ಯೋಚ್ನೆ ಮಾಡಬೇಡ."

"ಶ್ರೀಕಂಠ ನನ್ನನ್ನು ನನ್ನ ಮನೆಯ ತನಕ ಒಯ್ದು ಮುಟ್ಟಿಸಿ, ಒಬ್ಬನೇ ಎಲ್ಲೋ ಹೊರಟುಹೋದ.

ಬಟ್ಟೆಬರೆ ಕಳಚಿ ತಣ್ಣೀರಿನ ಸ್ನಾನಮಾಡಿದೆ. ತಪ್ತವಾಗಿದ್ದ ದೇಹ ತಣ್ಣಗಾಯಿತು. ಆದರೆ ಹೃದಯದ ಬೇಗ್ಗುದಿ ಕಡಿಮೆ ಯಾಗಲಿಲ್ಲ.

ಆ ಇಪ್ಪತ್ತು ಸಹಸ್ರ ಕೆಲಸಗಾರರ—ಮಕ್ಕಳು ಮುದುಕರು ಹೆಂಗಸರು ಗಂಡಸರ—ಮೆರವಣಿಗೆ ಮುಖ್ಯ ಬೀದಿಗಳಲ್ಲಿ ಸಾಗುತ್ತಿರ ಬಹುದು....ಈ ಬೀದಿಯಲ್ಲಿ ಬರಬಹುದು ಸ್ವಲ್ಪ ಹೊತ್ತಿನಲ್ಲಿ....ಆ ಮೇಲೆ ಅವರ ಸಭೆ....

ಆ ಘೋಷಗಳು....ಮೊದಲು ಮೆಲ್ಲನೆ—ಬಳಿಕ ಗಟ್ಟಿಯಾಗಿ—ಅವು ಕೇಳಿಸ ತೊಡಗಿದುವು:

"ಒಬ್ಬನೇ ಒಬ್ಬನನ್ನೂ ಕೆಲಸದಿಂದ ತೆಗೆಯಬಾರದು!"

"ಸಾಮಾನಿನ ಬೆಲೆ ಇಳಿಸಿ!"

"ತುಟ್ಟಿ ಭತ್ತೆಯಲ್ಲಿ ಕಡಿತ ಕೂಡದು!"

"ಮಾಲೀಕರ ದಬ್ಬಾಳಿಕೆ ಕೊನೆಗಾಣಲಿ!"

"ಸ್ವರಾಜ್ಯ ಯಾರದು?—ಬಡವರದು!"

............ದೊಡ್ಡದೊಂದು ಕೆಂಪು ಬಾವುಟ ಮೆರವಣಿಗೆಯ ಮುಂಭಾಗದಲ್ಲಿ ಎತ್ತರವಾಗಿ ಹಾರಾಡುತಿತ್ತು. ಮುಂದುಗಡೆ ಎಲ್ಲ ಮುಂಖಡರೂ ಇರಲಿಲ್ಲ. ಸಭೆಯ ಏರ್ಪಾಟಿನಲ್ಲಿದ್ದರೇನೊ........ ಆದರೆ, ಮೆರವಣಿಗೆಯ ಮೊದಲ ನೂರು ಗಜದೊಳಗೆ ನಾರಾಯಣ ನಿದ್ದ... ....

ಕಿಟಕಿಯಿಂದ ಹೊರಗಿಣಿಕಿ ನೋಡುತಿದ್ದ ನಾನು, ಆಕಸ್ಮಿಕ ವಾಗಿಯಾದರೂ ಆತ ನನ್ನನ್ನು ಕಾಣಬಾರದೆಂದು, ಕಿಟಕಿಯನ್ನು ಅರ್ಧ ಮುಚ್ಚಿದೆ. ಆ ಬಳಿಕ ಉಳಿದವರು....ಬೊಂಬಾಯಿಯಲ್ಲಿ

ಸುಮಾರು ಇಪ್ಪತ್ತು ವರ್ಷಗಳಿಗೆ ಹಿಂದೆ ಅಂಥದೇ ಮೆರವಣಿಗೆಗಳನ್ನು ನಾನು ಕಂಡಿದ್ದೆ....ಅವರು ಆಗಲೆ ಬೊಂಬಾಯಿಯ ಮುಂದುವರಿದ ಕಾರ್ಮಿಕರಾಗಿದ್ದರು. ಇಷ್ಟು ವರ್ಷಗಳ ಮೇಲೆ ನಮ್ಮವರಲ್ಲೂ ಸೆಟೆದು ನಿಲ್ಲುವ ಚೈತನ್ಯ ಮೂಡಿತ್ತು-ಸ್ವಲ್ಪ ಮೂಡಿತ್ತು, ಅಷ್ಟೆ. ಆದರೆ ನಮ್ಮವರಿನ್ನೂ ಪ್ಯಾಂಟು ಷರಟುಗಳ ಔದ್ಯೋಗಿಕ ಕಾರ್ಮಿಕ ರಾಗಿರಲಿಲ್ಲ. ನನ್ನ ತಂದೆಯ ತಲೆಯ ಮೇಲೆ ಆಗ ಇದ್ದಂತಹ ಜುಟ್ಟು ಈಗಲೂ ಹಲವಾರು ಕೆಲಸಗಾರರಿಗಿತ್ತು.

ನಾನು, ನನ್ನ ಕ್ರಾಪಿನ ಮೇಲೆ ಕೈಯೋಡಿಸಿದೆ. ಕೂದಲು ನೀಳವಾಗಿ ಬೆಳೆದಿತ್ತು. ಕ್ರಾಪು ಮಾಡಿಸಬೇಕಾಗಿತ್ತು. ಆದರೆ ಅಲಕ್ಷ್ಯ ಮಾಡಿದ್ದೆ. ಬಿಳಿದು—ಕರಿದುಗಳು ಮಿಶ್ರವಾಗಿ ಬೆಳೆಯುತ್ತ ಲಿದ್ದ ಕೇಶರಾಶಿ ...

ಮೆರವಣಿಗೆ ದಾಟಿ ಹೋಗಿತ್ತು....

ಭಾರವಾದ ಹೃದಯದ ಹೊರೆ ಹೊತ್ತು ಎಚ್ಚರವಿರುವುದು ಸಾಧ್ಯವಿರಲಿಲ್ಲ. ನನಗೆ ನಿದ್ದೆ ಬೇಕಾಗಿತ್ತು—ಎಲ್ಲವನ್ನೂ ಮರೆಸ ಬಲ್ಲಂತಹ ನಿದ್ದೆ.

ಮಲಗುವ ಮಂಚದ ಮೇಲೆ ಗೋಡೆಯ ಅಲಮಾರದಲ್ಲಿ ಎರಡು ಸೀಸೆಗಳಲ್ಲಿ ಬೀರ್ ಮೌನವಾಗಿತ್ತು.

ಹೊರ ಬಾಗಿಲಿಗೆ ಅಗಣಿ ತಗಲಿಸಿ, ಕಿಟಕಿಗಳೆಲ್ಲವನ್ನೂ ತೆರೆ ದಿಟ್ಟು, ಎರಡು ಸೀಸೆಗಳನ್ನೂ ಬರಿದು ಮಾಡಿ ನಾನು ಹಾಸಿಗೆಯ ಮೇಲುರುಳಿದೆ.

ಮೆಲ್ಲನೆ ಬೆಳಕನ್ನೋಡಿಸಿ ಕತ್ತಲು ಒಳನುಗ್ಗುವುದು. ರಾತ್ರೆ ಯೆಲ್ಲವೂ ಕಿಟಕಿಗಳೆಡೆಯಿಂದ ಗಾಳಿ ಓಡಿಯಾಡುವುದು ...ನಿದ್ದೆ ದೇಹದ ನರನಾಡಿಗಳನ್ನು ಸಡಿಲಗೊಳಿಸುವ ಪರಿಸ್ಥಿತಿ....ಆ ಬಳಿಕ ಸರಾಗವಾದ ಉಸಿರಾಟ........

ಹಾಗಾಗಲೆಂದು ನಾನು ಹಂಬಲಿಸಿದೆ....ಆದರೆ ಅಂಥ ಹಂಬಲ ಕೂಡಾ ಈಡೇರುವುದು ಸುಲಭವಾಗಿರಲಿಲ್ಲ. ಆ ಹಗಲು ಶ್ರೀಕಂಠ ನನ್ನೊಡನೆ ಹೇಳಿದ ಮಾತುಗಳೆಲ್ಲ ಮತ್ತೆ ಜೀವ ತಳೆದು ನನ್ನೆದುರು

ಕುಣಿಯುತ್ತಿದ್ದುವು. ಎಂಥದೊಂದು ಕೆಲಸವನ್ನು ನನಗ ವಹಿಸಿ ಕೊಡಲು ಶ್ರೀಕಂಠ ಯೋಚಿಸಿದ್ದ! ನಾನು ಆ ಕೆಲಸವನ್ನು ಮಾಡ ಬೇಕೆಂಬ ಉದ್ದೇಶ ನಿಜವಾಗಿಯೂ ಆತನಿಗೆ ಇತ್ತೊ—ಅಥವಾ ನನ್ನನ್ನು ಪರೀಕ್ಷಿಸಲೆಂದು ಹಾಗೆ ಮಾಡಿದ್ದನೊ. ಯಾವುದೋ ಒಂದು ಘಳಿಗೆಯಲ್ಲಿ, ಆ ಕೆಲಸವನ್ನು ಮಾಡುವುದಾಗಿಯೂ ನಾನು ಒಪ್ಪಿದ್ದೆನಲ್ಲ!

ಅಂತೂ ನನ್ನ ಕೈ ಹೊಲಸಾಗಬೇಕಾಗಿದ್ದ ಪ್ರಮೇಯವೊಂದು ತಪ್ಪಿ ಹೋಯಿತು.

ನಾಣಿ—ನಾಣಿಗೆ ಏನಾದರೂ ಅಪಾಯವಾಗಲಾರದಲ್ಲವೆ?

ಒಂದು ವೇಳೆ ಶ್ರೀಕಂಠನ ಯೋಜನೆ ಕಾರ್ಯಗತವಾದುದೇ ಆದರೆ—?

ಮನುಷ್ಯನಾದ ನಾನು, ಮುಂದಾಗಿ ಹೋಗಿ ನಾರಾಯಣನಿಗೆ ಗಂಡಾಂತರದ ಸೂಚನೆಕೊಡುವುದು ನ್ಯಾಯವಾಗಿತ್ತು. ಅದು ನನ್ನ ಕರ್ತವ್ಯವೂ ಆಗಿತ್ತೇನೊ?

ಆದರೆ, ಶ್ರೀಕಂಠನ ಸಹವಾಸದಲ್ಲಿ ಇಷ್ಟು ವರ್ಷಗಳಿದ್ದ ಮೇಲೆ ಹಾಗೆ ಮಾಡುವುದರಿಂದ, ಆತನಿಗೆ ನಾನು ಅನ್ಯಾಯ ಮಾಡಿದಂತಾ ಗುತ್ತಿತ್ತಲ್ಲವೆ?

ಹಾಗಾದರೆ ಯಾವುದು ನ್ಯಾಯ? ಯಾವುದು ಅನ್ಯಾಯ?

ಏನಾದರೂ ಸರಿಯೆ; ನಾರಾಯಣನಿಗೆ ಮಾತ್ರ ಏನೂ ಆಗ ದಿರಲೆಂಬುದೇ ನನ್ನ ಹಾರೈಕೆಯಾಗಿತ್ತು.

ನಾರಾಯಣ ಮತ್ತು ಕಮಲಾ....ಒಂದು ರಥದ ಎರಡು ಗಾಲಿ ಗಳು. ಒಂದು ಗಾಲಿ ಕಳಚಿದರೆ ಇನ್ನೊಂದು ಅಸಹಾಯವಾಗುವ ಸ್ಥಿತಿ.... .. ಹಾಗಾಗಬಾರದು....ನಾರಾಯಣನಿಗೇನೂ ಆಗಬಾರದು.

ಅದು ನನ್ನ ಜೀವನದ ಇನ್ನೊಂದು ಕೈ ಗೂಡದ ಬಯಕೆ ಯಾಯಿತೆಂದು ಬೆಳಗು ಮುಂಜಾನೆ ತಿಳಿಯಿತು.

ಕಾಫಿಗೆಂದು ಹೋಟೆಲಿಗೆ ಹೋದವನು, ಗಿರಾಕಿಗಳು ಹಲ

ವರು ಗುಂಪಾಗಿ ಆ ಬೆಳಗಿನ ದಿನ ಪತ್ರಿಕೆಯೋದುತಿದ್ದುದನ್ನು ಕಂಡೆ. ಕೌಂಟರಿನ ಬಳಿ ಕುಳಿತಿದ್ದ ಮ್ಯಾನೇಜರ್ ಬೇರೆ, ಪತ್ರಿಕೆಯ ವರದಿಯನ್ನೇ ವಿವರಿಸಿ ಗಟ್ಟಿಯಾಗಿ ಹೇಳುತಿದ್ದ

ಕೆಲಸಗಾರರ ಸಭೆಯಲ್ಲಿ ಗಲಭೆ; ಟೀರ್‌ಗ್ಯಾಸ್; ಲಾಠೀ ಚಾರ್ಜು........ಹಲವರ ಬಂಧನ........

ನನ್ನೆದೆ ಡವಪವನೆ ಹೊಡೆದುಕೊಳ್ಳುತಿತ್ತು. ನಾನೂ ಆ ಗುಂಪನ್ನು ಸೇರಿ ಬೇರೊಬ್ಬರ ಭುಜದ ಮೇಲಿಂದ ಹಣಿಕಿ ಹಾಕಿ ಆ ಪತ್ರಿಕೆಯನ್ನೋದಿದೆ.... ಘಾತವಾಗಿತ್ತು.... ಯುದ್ಧದಲ್ಲಿ ಗಾಯಗೊಂಡವರ ಹೆಸರುಗಳ ಪ್ರಕಟಣೆಯನ್ನು ಸಂಬಂಧಿಕರು ಪ್ರಾಯಶಃ ಹಾಗೆಯೇ ನೋಡುವರೋ ಏನೋ....ನಾನು ಆ ವರದಿಯುದ್ದಕ್ಕೂ ದೃಷ್ಟಿ ಹಾಯಿಸಿದೆ. ಅಕ್ಷರಗಳು ಮುಸಕಾದುವು. ಏನೂ ಕಾಣಿಸದೆ ಹೋದಾಗ ಸಮಾಧಾನದ ನಿಟ್ಟುಸಿರನ್ನು ಬಿಟ್ಟೆ ...... ಆದರೆ ಆ ಸಮಾಧಾನ ಕ್ಷಣಿಕವಾಗಿತ್ತು. ವಾರ್ತೆಯ ಆರಂಭದಲ್ಲೇ ಆ ಹೆಸರುಗಳಿದ್ದುವು.

"........ಕೆಲಸಗಾರರಲ್ಲಿ ಒಂದು ವಿಭಾಗದವರು ಹೊಡೆದುದರ ಫಲವಾಗಿ ಯೂನಿಯನ್ ಕಾರ್ಯದರ್ಶಿ ಮುನಿಸ್ವಾಮಪ್ಪನವರಿಗೂ ಉಪಾಧ್ಯಕ್ಷ ನಾರಾಯಣರಿಗೂ ತೀವ್ರ ಗಾಯಗಳಾಗಿವೆ. ಅತಿಥಿ ಭಾಷಣಕಾರರಾಗಿ ಸಭೆಗೆ ಬಂದಿದ್ದ ಸಾಹಿತಿ ಕೃಷ್ಣರಾಜರೂ ಆ ಗೊಂದಲದಲ್ಲಿ ಸಿಲುಕಿಕೊಂಡು, ಅವರಿಗೂ ಗಾಯಗಳಾಗಿವೆ.... .."

ಮುನಿಸ್ವಾಮಪ್ಪ, ನಾರಾಯಣ, ಕೃಷ್ಣರಾಜರು........

ಆ ಬಳಿಕ ಸಭೆ ಚದುರಿಸಲು ಅಶ್ರುವಾಯು ಪ್ರಯೋಗ, ಶಾಂತಿ ಸ್ಥಾಪಿಸಲು ಲಾಠೀ ಚಾರ್ಜು. ಒಡೆದ ತಲೆಗಳು; ಗಲಭೆ ಮಾಡಿದರೆಂದು ಇಪ್ಪತ್ತೈದು ಜನರ ಬಂಧನ........

ಗಾಯಗೊಂಡವರು ?—

ಅವರನ್ನು ಆಸ್ಪತ್ರೆಗೆ ಸಾಗಿಸಿದ್ದರು.

ಮತ್ತೊಮ್ಮೆ ನಾನು ಆ ವಾರ್ತೆಯನ್ನು ಆರಂಭದಿಂದ ಕೊನೆಯವರೆಗೂ ಓದಿದೆ—ಸಾವಕಾಶವಾಗಿ.

ಕಾಫಿ ಹೀರುವುದು ಕಷ್ಟದ ಕೆಲಸವಾಗಿತ್ತು........ ಆದರೂ ಹೀರುವ ಯಂತ್ರದಂತೆ ಕಾಫಿ ಮುಗಿಸಿದೆ.

ಜಿಲ್ಲಾಧಿಕಾರಿಗಳು ಸಭೆ ಮೆರವಣಿಗೆಗಳಾಗದಂತೆ ನಿಷೇಧಾಜ್ಞೆ ಹೊರಡಿಸಿದ್ದರು. ಅದು ಮೊದಲ ಕೆಲಸ. ಆ ಮೇಲೆ, ಕಾನೂನು—ನೆಮ್ಮದಿಯ ರಕ್ಷಕರಾದ ಪೋಲೀಸ್ ಅಧಿಕಾರಿಗಳು ತಮ್ಮ ಕೆಲಸ ನಡೆಸಿದ್ದರು.

....ಒಂದು ಕಾಲದಲ್ಲಿ ಆ ಕಾನೂನು—ನೆಮ್ಮದಿಯ ಶಾಖೆಗೂ ನನಗೂ ಸಮೀಪ ಸಂಬಂಧವಿತ್ತು. ಆದರೆ ಈಗ? ನಾನು ಪ್ರಭಾವ ಶಾಲಿಶಕ್ತಿಗಳ ಆಶ್ರಯದಲ್ಲಿದ್ದೆ........ಅದಿನ. ಬಿ.ಎ. ಕಟ್ಟಿದ್ದ ಹುಡುಗನ ತಂದೆಯಾದ ಪೋಲೀಸ್ ಅಧಿಕಾರಿ ಜಂಭದಿಂದ ಆಡಿತೋರಿಸಿದ್ದ 'ಪೋಲೀಸರ ದೀರ್ಘಹಸ್ತ' ದಿಂದ ನಾನು ದೂರವಾಗಿದ್ದೆ.

ಆದರೆ ಆ ದೀರ್ಘ ಹಸ್ತವೀಗ ನಾರಾಯಣ ಮತ್ತಿತರರನ್ನು ಬಲಿ ತೆಗೆದುಕೊಳ್ಳುತಿತ್ತು—ಬೇರೆ ಕಾರಣಕ್ಕಾಗಿ.

ನಿನ್ನೆ ಶ್ರೀಕಂಠ ಪ್ರಸ್ತಾಪಿಸಿದ ಆ ವಿಷಯ ರೂಪಾಂತರಹೊಂದಿ ಈ ರೀತಿ ಪರ್ಯವಸಾನವಾಯಿತೆ ಹಾಗಾದರೆ? ಕೆಲಸಗಾರರ ಒಂದು ವಿಭಾಗದವರು ತಮ್ಮ ನಾಯಕರಿಗೇ ಹೊಡೆಯ ಹೋಗುವುದೆಂದ ರೇನು? ನಿಯೋಜಿತರಾದ ಕೆಲವರು ಆ ಕೆಲಸ ಮಾಡಿರಬೇಕು....ಆ ಸಂದರ್ಭವನ್ನಿದಿರುನೋಡುತಿದ್ದ ಪೋಲೀಸರು ಕೈಇಕ್ಕಿದುದೂ ಪೂರ್ವ ನಿಯೋಜಿತ ವ್ಯವಸ್ಥೆಗನುಸಾರವಾಗಿಯೇ........

ಸಿಗರೇಟು ಕೊಂಡುಕೊಂಡು ಭಾರವಾದ ಹೆಜ್ಜೆಗಳನ್ನಿಡುತ್ತ ನಾನು ಮನೆಯತ್ತ ಸಾಗಿದೆ.

ಶ್ರೀಕಂಠನ ಕಾರು ಹೊರಗೆ ನಿಂತಿತ್ತು. ಆತ ಹಸನ್ಮುಖಿಯಾಗಿ ಒಳಗೆ ಕುಳಿತಿದ್ದ.

"ಕಾಫಿಗೆ ಹೋಗಿದ್ದಿಯೇನಯ್ಯಾ?"

"ಹೂಂ ಎಷ್ಟೊತ್ತಾಯ್ತು ಬಂದು?"

"ಇದೇ ಈಗ್ಬಂದೆ. ನಡಿ ಒಳಕ್ಕೆ."

ನನ್ನ ಕೊಠಡಿಯಲ್ಲಿದ್ದ ಅಸ್ತವ್ಯಸ್ತವಾದ ಹಾಸಿಗೆಯನ್ನೂ ಪಕ್ಕ

ದಲ್ಲೇ ಇದ್ದ ಖಾಲಿ ಬಾಟಲಿಗಳನ್ನೂ ನೋಡಿ ಶ್ರೀಕಂಠ ಮುಗುಳ್ನಕ್ಕ.

"ಹ್ಯಾಗಿದೆ ಚಂದ್ರೂ ಹೊಟ್ಟೆ ನೋವು ?"

"ಸ್ವಲ್ಪ ಮೇಲು ಕಂಠಿ."

"ಷೇವ್ ಮಾಡ್ಕೊಂಡು ಬಟ್ಟೆ ಹಾಕ್ಕೊ.......ಎಸ್ಟೇನಾದವರ್ನ ನೋಡ್ಕೊಂಡು ಬರೋಣ."

ನಾನು ಮುಖಕ್ಷೌರ ಮಾಡಿಕೊಳ್ಳುತ್ತಿದ್ದಂತೆ, ಕನ್ನಡಿಯಲ್ಲಿ ನನ್ನ ಮುಖವನ್ನು ಪರೀಕ್ಷಿಸಿದೆ. ಮಾಟವಾಗಿಯೇ ಇದ್ದ ಆ ಮುಖದ ಆ ವರಣದ ಹಿಂದೆ ಎಂಥೆಂಥ ಭಾವನೆಗಳಿದ್ದುವು! ಆದರೆ ಹೊರಗೆ ಏನಾದರೂ ತೋರುತಿತ್ತೆ? ಮುಖವೇ ಮುಖವಾಡವಾಗಿತ್ತಲ್ಲವೆ? ಆ ಮುಸುಕನ್ನೆತ್ತಿ ಒಳಕ್ಕೆ ಇಣಕಿನೋಡುವುದು ಶ್ರೀಕಂಠನಿಗೆ ಸಾಧ್ಯವಿತ್ತೆ?

ಕನ್ನಡಿಯಲ್ಲಿ ಬಾರಿ ಬಾರಿಗೂ ಮುಖ ನೋಡುತ್ತ ನೋಡುತ್ತ ನನಗೆ ನನ್ನ ಬಗೆಗೇ ಆತ್ಮ ವಿಶ್ವಾಸವೆನಿಸುತಿತ್ತು. ನಾನು ದಿನ ದಿನಕ್ಕೂ ದುರ್ಬಲನಾಗುತಿದ್ದೆನೆಂದು ಯೋಚಿಸುತಿದ್ದುದು ತಪ್ಪಾಗಿತ್ತಲ್ಲವೆ? ಹೃದಯವೇನೊ ದುರ್ಬಲವಾಗುತ್ತ ಸಾಗಿರಬಹುದು. ಕರುಳಿನ ಬಾಧೆಯಿಂದ ದೇಹವೂ ದುರ್ಬಲವಾಗಿರಬಹುದು. ಆದರೆ ಮುಖ ಚರ್ಯೆ ನನಗೆ ರಕ್ಷಾಕವಚವಾಗಿತ್ತಲ್ಲವೆ?

ಹರಿತವಾದ ಬ್ಲೇಡು ದಿನದ ಗಡ್ಡವನ್ನು ಬಲಿತೆಗೆದು ಕೊಳ್ಳುತಿತ್ತು. ಸಿಗರೇಟು ಸೇದುತ್ತ ಸುಖಾಸೀನನಾಗಿದ್ದ ಶ್ರೀಕಂಠ ಕೇಳಿದ.

"ಪೇಪರು ಓದಿದೆಯಾ?"

"ಈಗ್ತಾನೇ ಓದ್ದೆ."

"ನಿಜ ಹೇಳ್ತೀನೀ ಚಂದ್ರು ......ನೀನು ನಾಣಿಗಾಗಿ ಮರುಗೋದ್ನ ನೋಡಿ, ನನಗೂ ಅವನ್ಮೇಲೆ ಒಂದು ರೀತಿ ಕನಿಕರ ಹುಟ್ಟಿದೆ. ಆದರೆ ಏನ್ಮಾಡೋಕೆ ಸಾಧ್ಯವಿತ್ತು ಹೇಳು?"

ಕೇಳಬಾರದೆಂದಿದ್ದರೂ ಪ್ರಶ್ನೆ ನನ್ನ ಹಿಡಿತ ತಪ್ಪಿಸಿಕೊಂಡು ಹೊರಟಿತು :

"ಆಸ್ಪತ್ರೇಲಿದಾರೇನು ಅವರೆಲ್ಲ?"

"ಫೋನ್ ಮಾಡಿದ್ದೆ ನಿನ್ನೆ ರಾತ್ರೇನೆ. ನಾಣಿ ಮತ್ತು

ಆ ಸಾಹಿತೀನ ಬ್ಯಾಂಡೇಜ್ ಕಟ್ಟಿದ್ಮೇಲೆ ಬಿಟ್ಟೆಟ್ರಂತೆ. ಮುನಿ ಸ್ವಾಮಪ್ಪ ಅಲ್ಲೇ ಇದಾನೆ—ಇನ್ನೆರಡು ವಾರ ಅಲ್ಲೇ ಇರ್ತಾನೆ. ಅದಲ್ದೆ ಒಂದ್ನಾಲಕ್ಕನ ಕೂಲಿಕಾರರಿಗೂ ಏಟು ಜೋರಾಗಿಯೇ ಬಿದ್ದಿದೆ. ಅವರಲ್ಲಿ ಇಬ್ಬರು ನಮ್ಮವರು."

"ನಮ್ಮವರು ಅಂದರೆ?"

ಹಾಗೆ ಕೇಳುತ್ತ ತಿರುಗಿ ನೋಡಿದೆ. ಶ್ರೀಕಂಠನ ಹುಬ್ಬುಗಳು ಗಂಟಿಕ್ಕಿದುವು.

"ಚಂದ್ರೂ? ಸತ್ಯ ಹೇಳು. ನಿನ್ನ ಮನಸ್ನಲ್ಲೇನಿದೆ?"

"ಯಾಕೆ ಹಾಗೆ ಕೇಳ್ತೀಯಾ?"

ಶ್ರೀಕಂಠ ಒಂದುಕ್ಷಣ ಮೌನವಾಗಿದ್ದ.

"ಹೋಗಲಿ ಬಿಡು ಆ ವಿಷಯ."

ಆ ದಿನ ಕೆಲಸಗಾರರು ಯಾರೂ ಕಾರಖಾನೆಗಳಿಗೆ ಹೋಗಿರಲಿಲ್ಲ. ಮಾಲೀಕರಿಗೆಲ್ಲ ಅದರಿಂದ ಸಂತೋಷವಾಗಿತ್ತು. ಅಂತೂ ಬಂದಿತ್ತು ಅವರು ಬಯಸಿ ಇದಿರುನೋಡುತಿದ್ದ ಮುಷ್ಕರ. ಯುದ್ಧದ ಮೊದಲ ದಿನದಲ್ಲಿ ಅವರಿಗೇ ಜಯವಾಗಿತ್ತು. "ಕ್ರಾಂತಿಗೆ ಜಯವಾಗಲಿ" ಎಂದು ಘೋಷಿಸುತಿದ್ದವರು ಗಾಯಗೊಂಡು ಬಿದ್ದಿದ್ದರು.

ಸಂಜೆ ಕಾರಖಾನೆಯ ಯಜಮಾನರೆಲ್ಲರ ಸಭೆ ಕರೆದರು. ಶ್ರೀಕಂಠನ ಕಾರ್ಯದರ್ಶಿಯಾಗಿ ಹೋಗಬೇಕಾಗಿದ್ದ ನಾನು ಕರುಳಿನ ಕಾಹಿಲೆಯ ಕಾರಣ ಹೇಳಿ ತಪ್ಪಿಸಿಕೊಂಡೆ.. ಆದರೆ ನನ್ನ ಮನಸ್ಸು ಇನ್ನೆಲ್ಲೋ ಚಲಿಸುತಿತ್ತು ...ಆ ಇಕ್ಕಟ್ಟಾದ ರಸ್ತೆ—ಓಣಿ—ಮೂಲೆ ಮನೆ—ನಾರಾಯಣ....

ಗಾಯಗೊಂಡು ಬಿದ್ದಿದ್ದ ನಾಣಿಯನ್ನು ನೋಡಲು ನಾನು ಹೋದೆ. ಉದ್ದೇಶಪೂರ್ವಕವಾಗಿಯೋ ಏನೋ, ಗಾಯಗೊಂಡವರನ್ನು ಪೋಲೀಸರು ಬಂಧಿಸಿರಲಿಲ್ಲ.

ಮುಂತಲೆಗೆ ಬ್ಯಾಂಡೇಜು ಕಟ್ಟಿದ್ದ ನಾಣಿ, ನಾಟಕದೊಂದು ಪಾತ್ರದ ಹಾಗೆ ಕುಳಿತಿದ್ದ. ಸಂಜೆಯ ಆ ಹೊತ್ತಿನಲ್ಲಿ ಆ ಮನೆ

ಯೊಂದು ಜನಸಾಗರವಾಗಿತ್ತು. ಅಷ್ಟೊಂದು ಹೆಂಗಸರು—ಗಂಡಸರು........ಗೋಡೆಗೊರಗಿ ನಾರಾಯಣ ವಿರಮಿಸಿದ್ದ. ಆದರೆ ಆದನ್ನು ವಿರಾಮವೆನ್ನುವುದರಲ್ಲಿ ಅರ್ಥವಿರಲಿಲ್ಲ. ಆತ ಚಿಂತಾಕ್ರಾಂತನಾಗಿದ್ದುದು ಸ್ಪಷ್ಟವಾಗಿತ್ತು. ಹಾಗಿದ್ದರೂ ಉಳಿದವರು ಧೃತಿಗೆಡಬಾರದೆಂದು ಆತ ಮುಗುಳುನಗೆಯ ನಟನೆ ಮಾಡುತಿದ್ದ.

ಉಣ್ಣೆಯ ಉಡುಗೆ ಕೊಟ್ಟ ತಾನು ಆ ಹಿನ್ನೆಲೆಯಲ್ಲಿ ವಿಚಿತ್ರವಾಗಿ ತೋರುತ್ತಿದ್ದೆ. ಆದರೆ, ನಾಣಿಗೆ ನನ್ನನ್ನು ನೋಡಿದಾಗ ಸಂತೋಷವಾಯಿತು.

"ಬಾರಯ್ಯ ಚಂದ್ರೂ, ಘಳಿಗೆ ನೋಡಿ ಬಂದ ಹಾಗೆ ಬಂದಿದೀಯಲ್ಲಯ್ಯ."

"ಬೆಳಿಗ್ಗೆ ಪೇಪರ್ನಲ್ಲಿ ಓದ್ದೆ. ಔಟ್-ಪೇಷೆಂಟ್ ಆಗಿಯೇ ಇದ್ದೀಯಾ ಅನ್ನೋದೂ ತಿಳೀತು."

"ನಾನೂ ಪೇಪರ್ನಲ್ಲಿ ಓದ್ದೆ—ಎರಡರಲ್ಲೂ. ಆದರೆ, ಅಲ್ಲಿರೋದು ಸುಳ್ಳು. ಪತ್ರಿಕೆಗಳ ಮೂಲಕ ನಮ್ಮ ವಿರುದ್ಧ ಪ್ರಚಾರ ಹ್ಯಾಗೆ ಆಗತ್ತೆ ಅನ್ನೋದನ್ನ ಆ ಉದಾಹರಣೆ ಕೊಟ್ಟು ಇವರಿಗೆಲ್ಲಾ ನಾನು ವಿವರಿಸ್ತಿದ್ದೆ........ಕೆಲಸಗಾರರೊಳಗೆ ಜಗಳವಂತೆ—ಜಗಳ!"

"ಹಾಗೆ ಆಗಿರ್ಲಿಲ್ವೇನು?"

"ಒಳ್ಳೇ ಪ್ರಶ್ನೆ ಕೇಳ್ತೀಯಲ್ಲಪ್ಪ....ಸಭೆ ಮುಗಿಯೋ ಹೊತ್ತಿಗೆ ವೇದಿಕೆ ಮೇಲೆ ಧಾಳಿ ಮಾಡ್ದೋರು ಗುಂಡರು. ಮಾಲೀಕರು ದುಡ್ಡು ಕೊಟ್ಟು ನೇಮಿಸ್ದೋರು. ನಾವೆಲ್ಲ ಅವರ್ನ ತಡೆಯೋಕೆ ಹೋಗಿದ್ದೇ ತಡ, ಎರಡನೇ ಪಟಾಲಂ ಬಂತು—ಪೋಲೀಸರ್ರು. ಮೊದಲು ಕಾನೂನು ನೆಮ್ಮದಿಯ ಭಕ್ಷಕರು, ಆ ಮೇಲೆ ಅದರ ರಕ್ಷಕರು!...."

ಆ ಘಟನೆಯ ಬಗ್ಗೆ ನಾನು ಊಹಿಸಿದ್ದು ಸರಿಯಾಗಿಯೇ ಇತ್ತು.

"ಇನ್ನು ಹೋಗೀಪ್ಪಾ ನೀವೆಲ್ಲ........ಎಲ್ಲರೂ ಮನೆಗೆ ಹೋಗಿ ....ರಾತ್ರೆ ಕಮಿಟಿ ಸಭೆ ಸೇರಿ ತೀರ್ಮಾನಿಸ್ತೀವಿ ...ಮನೆಗೆ ಹೋಗೀಪ್ಪಾ ಎಲ್ಲಾ... ... "

ಆ ಜನರದು ಅದೆಂಥ ಸರಳ ಹೃದಯ! ನಿಸ್ವಾರ್ಥಬುದ್ಧಿಯಿಂದ ತಮ್ಮ ಪಕ್ಷ ವಹಿಸಿದವರ ಬಗ್ಗೆ ಅವರು ತೋರಿಸುವ ಆ ಪ್ರೇಮಾದರ ವಿಶಿಷ್ಟವಾಗಿತ್ತು. ಬಾಳ್ವೆಯಲ್ಲಿ ಸೋತು ಸುಣ್ಣವಾಗಿದ್ದ ಆ ಕೂಲಿಕಾರ ಹೆಂಗಸರು ತಮ್ಮೊಳಗೆ ಕಚ್ಚಾಡುವುದನ್ನು ನಾನು ಕಂಡಿದ್ದೆ. ಒಬ್ಬರ ವಿಷಯದಲ್ಲಿ ಇನ್ನೊಬ್ಬರು ಒರಟು ಒರಟಾಗಿ ವರ್ತಿಸುವುದನ್ನು ನೋಡಿದ್ದೆ. ಕಪಟ—ಅಸೂಯೆ—ಮೋಸ ಅವರಲ್ಲಿ ಧಾರಳವಾಗಿತ್ತು. ಹೀಗಿದ್ದರೂ ತಾವೆಲ್ಲರೂ ಒಂದು ಎಂಬ ಭಾವನೆ ಅವರಲ್ಲಿ ಬೆಳೆದು ಬಂದಿತ್ತು. ಕೆಲವೇ ವರ್ಷಗಳ ಹಿಂದೆ ಪರಕೀಯನಾಗಿದ್ದ ನಾರಾಯಣನನ್ನು ಅವರೀಗ ತಮ್ಮವನೆಂದೇ ಭಾವಿಸಿದ್ದರು.

ಆ ಕೆಲವರು ಹೆಂಗಸರ ಕಣ್ಣುಗಳಲ್ಲಿ ತುಂಬಿ ಬಂದ ಕಣ್ಣೀರು....

"ನಮ್ಮ ದೇವರು ಕಣಪ್ಪಾ ನೀನು. ಆ ಪಾಪಿಗ್ಳ ವಂಸ ನಾಸ್ವಾಗ್ದೆ ಇದ್ದಾತಾ? ಆ ಬಗ್ವಂತ ಅವ್ರಿಗೆ ಸಾಸ್ತಿ ಮಾಡ್ದೆ ಇದ್ದಾನಾ?"

....ಅಂತೂ ಬಲು ಹೊತ್ತಾದ ಮೇಲೆ ಮನೆ ಖಾಲಿಯಾಯಿತು. ಆದರೂ ಒಬ್ಬ ಹುಡುಗ ಮಾತ್ರ ಬಾಗಿಲಲ್ಲೇ ನಿಂತಿದ್ದ.

"ನೀನೂ ಹೋಗು ಯೂಸುಫ್."

"ಓಯ್ತೀನಿ ಸಾರ್....ಹೊತ್ತಾದ್ಮೇಕೆ ಓಯ್ತಾನಿ...."

ಕಮಲ ಒಳ ಬಾಗಿಲು ತೆರೆದು ನಮ್ಮನ್ನು ನೋಡುತ್ತ ನಿಂತಿದ್ದಳು

ಔಪಚಾರಿಕವಾಗಿ, "ಚೆನ್ನಾಗಿದೀರಾ ಅಮ್ಮ" ಎಂದೆ.

"ಪ್ರಶ್ನೆ ಚೆನ್ನಾಗಿದೆ!" ಎಂದಳು ಆಕೆ.

"ಅಯ್ಯೋ!" ಎಂದು ಅವಳು ಅಳುತಿರಲಿಲ್ಲ. ಆ ಸ್ಥೈರ್ಯ ಅಭಿಮಾನ ಪಡುವಂತಿತ್ತು.

ಆದರೆ ಅವಳು ಸಂಕೋಚವಿಲ್ಲದೆ ನನ್ನೊಡನೆ ದೂರುಕೊಟ್ಟಳು.

"ನೀವು ಸ್ವಲ್ಪ ಹೇಳ್ಬಾರ್ದ? ನಿನ್ನೆ ಹೀಗಾಯ್ತು. ನನ್ನ ತಾಳಿ ಗಟ್ಟೀಂತ ತೋರುತ್ತೆ, ಆದ್ದರಿಂದ ಅಷ್ಟಕ್ಕೇ ಮುಗೀತು. ಪೂರ್ತಾ ಚೇತರಿಸಿಕೊಳ್ಳೋದಕ್ಕೂ ಇಲ್ಲ ಇನ್ನೂ, ಅಷ್ಟರಲ್ಲೇ — ಕಮಿಟಿ ಮೀಟಿಂಗ್ ಅಂತ ಹೊರಟಿದಾರೆ."

ತುಂಟ ಹುಡುಗ ವಾದಿಸುವಂತೆ ನಾಣಿ ಹೇಳುತಿದ್ದ :

" ಜಟ್ಕಾ ಮಾಡ್ಕೊಂಡು ಹೋಗ್ತೀನಿ, ಕಮಲೂ."

" ಅದೊಂದು ಉಳಿದಿದೆ ನಮ್ಮ ಭಾಗ್ಯಕ್ಕೆ."

ನಾನಾದರೋ ಶ್ರೀಕಂಠನ ಜತೆಯಲ್ಲಿ ಕಾರಿನಲ್ಲೆ ಓಡಾಡು ವವನು. ಆದರೆ ನಾಣಿಯ ಪಾಲಿಗೆ ಜಟಕಾ ಪ್ರವಾಸವೂ ದೊಡ್ಡ ವಿಷಯವೇ. ಅದು ಶ್ರೀಮಂತಿಕೆಯ ಲಕ್ಷಣವೆಂದೇ ಕಮಲೆಯ ಅಭಿಪ್ರಾಯ.

ಆತಿಥ್ಯ ಸ್ವೀಕರಿಸಲು ನಾನು ಅಲ್ಲಿ ನಿಲ್ಲಲಿಲ್ಲ. ಶ್ರೀಕಂಠನೆ ಲ್ಲಾದರೂ ಮಾಲೀಕರ ಸಭೆ ಮುಗಿಸಿ ನನ್ನ ಮನೆಗೆ ಬರಬಹುದೆಂಬ ಸಂದೇಹ ನನಗಿತ್ತು.

ನಾನು ಅವಸರ ಅವಸರವಾಗಿ ಹೊರಟು ನಿಂತುದದನ್ನು ಕಂಡು ನಾಣಿಹೇಳಿದ :

" ಚಂದ್ರೂ....ಕೃಷ್ಣರಾಜರು ಗೊತ್ತೇನೋ ನಿನಗೆ ? "

" ಹೆಸರು ಕೇಳಿದೀನಿ, ಅವರು ಬರೆದದ್ದನ್ನ ಓದಿದೀನಿ. ಯಾಕೆ ?"

" ಅವರಿಗೂ ನಿನ್ನ ಏಟುಬಿತ್ತು ಪಾಪ ! ನಾವಾದರೂ ಇದಕ್ಕೇ ಇರೋದು. ಆದರೆ ಆತನ್ನ ಆಮಂತ್ರಣಕೊಟ್ಟು ಕರೆದಿದ್ವಿ. ಹೇ ಗಾಯ್ತು ನೋಡು ! ".

ನಾನು ಉತ್ತರವೀಯಲಿಲ್ಲ. ಆದರೆ ಬರಿಯ ಮೌನವೂ ಸಹಾನು ಭೂತಿಯಾಗಿ ತೋರಬಹುದಲ್ಲವೆ ?

"ಮೊನ್ನೆ ಮಾತ್ನಾಡ್ತಾ ಇದ್ದಾಗ ನಿನ್ನ ವಿಷಯ ಬಂತು. ಸ್ಕೂಲ್ನಲ್ಲಿ ನಾವಿದ್ದಾಗ ನೀನು ಎಷ್ಟೊಂದು ಕಷ್ಟಪಟ್ಟಿದ್ದೆ....ಅದನ್ನೆಲ್ಲಾ ಅವರಿಗೆ ಹೇಳ್ದೆ....ನಿನ್ನ ಸಾಹಸಮಯ ಜೀವನದ ಕಥೆ ಕೇಳಿ ಅವರಿಗೆ ಸಂತೋಷವಾಯ್ತು. ಯಾವತ್ತಾದರೂ ಭೇಟಿಮಾಡಿಸು ಅಂದರು...."

ನನ್ನ ಸಾಹಸ ಜೀವನದಕಥೆ ಇವನಿಗೇನು ತಿಳಿಯಬೇಕು ? ಆದರೂ ಅವನಿಗೆ ತಿಳಿದಿದ್ದ ಅಲ್ಪಸ್ವಲ್ಪ ವಿಚಾರವೇ ಅವನ ದೃಷ್ಟಿಯಲ್ಲಿ ದೊಡ್ಡ ವಿಷಯವಾಗಿತ್ತು........ಆ ಕೃಷ್ಣರಾಜರನ್ನು ಕಂಡು ನನಗೆ ಆಗ ಬೇಕಾದ್ದಾದರೂ ಏನು ? ಆದರೆ, ಅವರ ಕರಪತ್ರ ಬರೆಯುವ ಚೆಲು

ವಯ್ಯನನ್ನು ಕಂಡಿದ್ದ ನನಗೆ, ಇವರ ಕರಪತ್ರ ಬರೆಯುವ ಕೃಷ್ಣರಾಜ ರನ್ನು ಕಂಡರಾದೀತೆಂದು ತೋರಿತು.

"ಯಾವತ್ತಾದರೂ ಅವಶ್ಯವಾಗಿ ಬಂದು ಭೇಟಿಯಾಗ್ತೀನಿ."

"ಯಾವತ್ತಾದರೂ ಅಂತ ಯಾಕೆ? ನಾಳೆ ಸಾಯಂಕಾಲವೇ ಬಾ. ಅವರೇ ಇಲ್ಲಿಗೆ ಬರ್ತಾರೆ. ಹಾಗೇಂತ ಸಾಯಂಕಾಲವೇ ಹೇಳಿ ಕಳಿಸಿದ್ರು."

"ಆಗಲಿ ನಾಣಿ."

"ಬರ್ತೀಯೇನು ಹಾಗಾದರೆ?"

"ಹೂಂ ನಾಣಿ, ನಿನ್ನ ಆರೋಗ್ಯ ನೋಡ್ಕೊ."

ಆದರೆ ನಾನು ಮರುದಿನ ಬರಲಿಲ್ಲ. ಬರುವುದಾಕ್ಕಾಗಲಿಲ್ಲ. ಅದಕ್ಕೆ ಕಾರಣವಿತ್ತು.

ರಾತ್ರೆ ನನಗೆ ಸಿಗದೇ ಇದ್ದ ಶ್ರೀಕಂಠ, ಬೆಳಿಗ್ಗೆ ನಮ್ಮಲ್ಲಿಗೆ ಬಂದ. ಬಂದವನೇ ನಗುತ್ತ ಹೇಳಿದ.

"ಐ. ಜಿ. ಪಿ.—ಹೊಸಬಾಂತಿಟ್ಕೊ- ಫೋನ್ ಮಾಡಿದ್ರು."

"ನಿನ್ನೆಯೆ?"

"ಹೂಂ, ನಿನ್ನೆ ರಾತ್ರೇನೆ. ನಿನ್ನ ವಿಷಯಾನೆ."

"ನನ್ನ ವಿಷಯ!"

"ನಾಣಿ ಮನೆಗೆ ಹೋಗಿದಾನಲ್ಲ ಚಂದ್ರಶೇಖರ್—ಏನು ವಿಷಯ? ಅಂತ ವಿಚಾರಿಸಿದ್ರು."

"ಓ!"

ಶ್ರೀಕಂಠನಿಗೆ ತಿಳಿದಿತ್ತು ಹಾಗಾದರೆ. ನನ್ನ ಚಲನವಲನ ಗಳನ್ನ ಅವನು ನಿರೀಕ್ಷಿಸಿದ್ದ.

"ಅವರಿಗೆ ಹ್ಯಾಗಂತೆ ಗೊತ್ತಾದ್ದು?"

"ನೀನೊಳ್ಳೆ ಭೂಪತಿ........ಕೂಲಿಕಾರ ಮುಖಂಡನ ಮನೇ ಮುಂದೆ ಸ್ಪೆಷಲ್ ಬ್ರಾಂಚಿನವರು ಇಲ್ದೇ ಇರ್ತಾರೇನಯ್ಯ? ನಿನ್ನ ಅಲ್ಲಿ ನೋಡಿದ್ರು—ರಿಪೋರ್ಟ್ ಮಾಡಿದ್ರು ಅಷ್ಟೆ."

ಅದು ಸತ್ಯಾಂಶವೆಂಬುದು ನನಗೆ ಮನವರಿಕೆಯಾಯಿತು.

"ಅಂತೂ ನಾಣೀನ ನೋಡೋಕೆ ನೀನು ಹೋಗದೇ ಇರ್ಲಿಲ್ಲ!"

"ಕ್ಷಮಿಸು ಕಂಠಿ. ಅದೊಂದು ನನ್ನ ದೌರ್ಬಲ್ಯ ಅಂತಾನೆ ಇಟ್ಕೋ. ಹಾಗೆ ಗಾಳಿ ಸವಾರಿ ಹೋಗಿದ್ದೆ. ನಾಣಿ ಮನೆ ಸಿಗ್ತು ... ಒಂದು ನಿಮಿಷ ನಿಂತು ಬಂದೆ."

"ಆಗಲಿ ಬಿಡು."

"ಅಲ್ಲ. ಏನ್ಹೇಳ್ದೆ ಐ. ಜಿ. ಪಿ. ಗೆ?"

"ನಿನ್ನ ನಾನೇ ಅಲ್ಲಿಗೆ ಕಳಿಸ್ಕೊಟ್ಟಿದ್ದು—ಅಂದೆ. ಬೇರೆ ಏನು ಹೇಳಬೇಕಾಗಿತ್ತು?"

"ಸಮಾಧಾನಕರ ಉತ್ತರ."

"ಅದ್ಸರಿಯೇ. ಅಲ್ಲಿ ಬೇರೆ ಯಾರು ಯಾರ್ನ ನೋಡ್ದೆ ಹೇಳು."

"ಯಾರೂ ಬಂದಿರ್ಲಿಲ್ಲ ಕಂಠಿ."

ನನ್ನ ಮೇಲೆ ಸೂಕ್ಷ್ಮ ದೃಷ್ಟಿಯನ್ನೊಮ್ಮೆ ಬೀರಿ ಶ್ರೀಕಂಠ ಸುಮ್ಮನಾದ.

....ಅಂತಹ ಪರಿಸ್ಥಿತಿಯಲ್ಲಿ ನಾನು, ಕೃಷ್ಣರಾಜನನ್ನು ಕಾಣಲು ನಾರಾಯಣನಲ್ಲಿಗೆ ಹೋಗುವುದು ಸಾಧ್ಯವಿರಲಿಲ್ಲ. ನಾನು ಹೋಗಲೇ ಇಲ್ಲ.

ಹೋಗಿದ್ದರೂ ನಾರಾಯಣನನ್ನು ಕಾಣುವುದಕ್ಕಾಗುತ್ತಿರಲಿಲ್ಲ. ಆ ದಿನ ಮಧ್ಯಾಹ್ನ ಬಂಧಿಸಲ್ಪಟ್ಟಿದ್ದ ಹಲವಾರು ಜನರೊಡನೆ ನಾರಾಯಣನನ್ನೂ ಲಾಕಪ್ಪಿಗೆ ಒಯ್ದಿದ್ದರು. ಅಲ್ಲಿಂದ ವಿಚಾರಣೆ ಇಲ್ಲದ ಸ್ಥಾನ ಬದ್ಧತೆಗಾಗಿ ಸೆರೆಮನೆಗೆ ಸಾಗಿಸಿದ್ದರು....

ಆ ಕಮಲಾ. ಪ್ರಾಯಶಃ ಆ ಅಗಲಿಕೆಯನ್ನೂ ದಿಟ್ಟತನದಿಂದ ಆಕೆ ಇದಿರಿಸಿದ್ದಳೇನೋ, ಇಬ್ಬರ ಪಾಲಿಗೂ ಬಾಳ್ವೆ, ಬೆವರು—ಕಣ್ಣೀರಿನ ಮಿಶ್ರಣವಾಗಿತ್ತು.

ಅಮೀರಸಿಗೆ ಸಂಕಷ್ಟ ಒದಗಿದಾಗ ಶೀಲ ಅನುಭವಿಸುತ್ತಿದ್ದ ಯಾತನೆ.......ಚಲಂಗೆ ಅಪಾಯ ಒದಗಿದಾಗ ಸಾವಿತ್ರಿ ಸುರಿಸಿದ ಕಣ್ಣೀರು........ಆದಾದ ಮೇಲೆ ಈಗ ಕಮಲಾ........

ಆದರೆ ಇಲ್ಲೊಂದು ವ್ಯತ್ಯಾಸವಿತ್ತಲ್ಲವೆ? ಶೀಲ—ಸಾವಿತ್ರಿಯರು ಬೇರೆ, ಕಮಲಾ ಬೇರೆ. ಕಮಲೆಯ ಹೃದಯದಲ್ಲಿ ದುಗುಡ ತುಂಬಿದ್ದರೂ ಮುಖದ ಮೇಲೆ ಅದು ಕಾಣಿಸುತ್ತಿರಲಿಲ್ಲ. ಸಹಸ್ರ ಜನರ ಸಹಾನುಭೂತಿಯ ಆಸರೆಯಲ್ಲಿ ಆಕೆ ಸಂಕಷ್ಟಗಳನ್ನು ದಿಟ್ಟತನದಿಂದ ಇದಿರಿಸುತ್ತಿದ್ದಳು.

ಸಹಸ್ರ ಜನರ ಸಹಾನುಭೂತಿ.... ..

ಆ ಸಹಾನುಭೂತಿ ದಿನ ಕಳೆದಂತೆ ಕರಗಿ ಮಾಯವಾದುದನ್ನು ಕಂಡೆ.

ಬಂಧನಕ್ಕೊಳಗಾದವರನ್ನು ಸರಕಾರ ಹೊರಬಿಡಲಿಲ್ಲ. ಮುಷ್ಕರವೇನೋ ನಡೆಯಿತು. ನಡೆದು ಮಾಲೀಕರಿಗೆಲ್ಲ ಸಂತೋಷವನ್ನೇ ಉಂಟುಮಾಡಿತು. ಸಭೆ ಮೆರವಣಿಗೆಗಳಿರಲಿಲ್ಲ. ಯೂನಿಯನ್ನಿನ ಕರಪತ್ರಗಳಿರಲಿಲ್ಲ. ಸ್ಫೂರ್ತಿ ಹುಟ್ಟಿಸುವ ಹಾಡುಗಳಿರಲಿಲ್ಲ........

ಶ್ರೀಕಂಠ ವಿಜಯದ ನಗು ನಗುತ್ತ ಹೇಳಿದ.

"ಮುಷ್ಕರ ನಿಧಿ ಕೂಡಿಸ್ತಾ ಇದಾರಂತೆ ಕಣೋ....ನಾವೂ ಅವರ ಡಬ್ಬಕ್ಕೆ ನಾಲ್ಕು ಕಾಸು ಹಾಕೋಣವೇನು?"

"ಸತ್ತ ಹೆಣಾನ ಕಂಡು ನಗೋ ಚೈತನ್ಯ ನಿನಗಿದೆ ಕಂಠಿ."

"ಅಳೋದು ಮಾಮೂಲು ಕಣಪ್ಪ. ನಗೋದು ವೈಶಿಷ್ಟ್ಯ."

ಅವನ ಆ ಮಾತುಗಳು ಬೇಸರ ಬರಿಸುತಿದ್ದುವು.

"ನೀನು ರಾಜಕೀಯದಲ್ಲಿ ಒಂದು ಕೈ ನೋಡ್ಬೇಕಾಗಿತ್ತು ಕಂಠಿ."

"ಅದೊಂದು ಉಳಿದಿದೆ ಇನ್ನು. ನನಗ್ಯಾತಕ್ಕಯ್ಯಾ ರಾಜಕೀಯ? ರಾಜಕೀಯದವರು ಮನೆ ಬಾಗಿಲಿಗೇ ಬರ್ತಾರೆ. ಬೇಕಾದವರ್ನ ಕೊಂಡ್ಕೋಬಹುದು. ತಾತಾ—ಬಿರ್ಲಾರ್ನ ನೋಡು. ಅವರೇನು ಸ್ವತಃ ಎಲೆಕ್ಷನ್ನಿಗೆ ನಿಂತ್ಕೋತಾರೇನು?"

ಶ್ರೀಕಂಠ, ತಾತಾ—ಬಿರ್ಲಾರ ಮಾತನ್ನಾಡುವುದು, ಅವರ ಮೇಲ್ಪಂಗ್ತಿಯನ್ನು ನೋಡುವುದು, ಸ್ವಾಭಾವಿಕವಾಗಿತ್ತು.

ಏನೋ ಯೋಚಿಸುತಿದ್ದ ಶ್ರೀಕಂಠ, ವಕ್ರವಾಗಿ ನಕ್ಕು ಹೇಳಿದ:

" ಈ ವರ್ಷದ ಕೊನೇಲಿ ಸಾರ್ವತ್ರಿಕ ಎಲೆಕ್ಷನ್ ಬರತ್ತೆ, ಗೊತ್ತಾ ಚಂದ್ರೂ ? ''

" ಹೌದು, ವಯಸ್ಕರ ಮತದಾನ ಪದ್ಧತಿ ಪ್ರಕಾರವಾದ ಎಲೆಕ್ಷನ್ನು."

" ಹುಂ ! ಮೊನ್ನೆ ಕಾಂಗ್ರೆಸ್ ಸಮಿತಿ ಕಡೆಯಿಂದ ಕೆಲವರು ಬಂದಿದ್ರು........ "

" ಏನು ಎಲೆಕ್ಷನಿಗೆ ಸಿದ್ಧತೇನಾ ? ''

" ಅಲ್ಲವೆ ಮತ್ತೆ ? ಅದೂ ಎಂಥ ಸಿದ್ಧತೆ ಅಂತೀಯಾ ? ಶಾರಾ ದಾನ ಪಶ್ಚಿಮ ವಾರ್ಡ್ನಲ್ಲಿ ಉಮೇದುವಾರಳಾಗಿ ನಿಲ್ಲಿಸ್ಬೇಕೂಂತ ಅವ ರೆಲ್ಲ ಅಪೇಕ್ಷೆಪಟ್ಟಿದಾರಂತೆ."

" ಓ ! "

" ನಾವೇನೂ ಮಾಡ್ಬೇಕಾದ್ದಿಲ್ಲ. ಪ್ರಚಾರದ ಭಾರವೆಲ್ಲ ಅವರದೆ. ಸುಮ್ಮನೆ ಒಪ್ಪಿಕೊಂಡರಾಯ್ತು ನಾವು. ಜತೆಯಲ್ಲೆ ಒಂದೆರಡು ಲಕ್ಷ ಅವರ ಜನರಲ್ ಫಂಡಿಗೆ ಸುರಿದರಾಯ್ತು ! ''

" ಅತ್ತಿಗೆಗೆ ಗೊತ್ತೇನು ಈ ವಿಷಯ ? ''

" ಗೊತ್ತಿಲ್ದೆ! ಅವಳು ಈಗಾಗ್ಲೇ ಚುನಾಯಿತಳಾಗಿ ಅಸೆಂಬ್ಲಿ ಪಾರ್ಟೀಲಿ ಭಾಷಣ ಕೊಡೋದ್ನ ಕಲ್ಪಿಸಿ ಕೂತಿದಾಳೆ. ಅಷ್ಟೇ ಅಲ್ಲ- ಮಂತ್ರಿಮಂಡಲ್ದಲ್ಲಿ ತಾನಿರೋದನ್ನ ಕನಸ್ನಲ್ಲಿ ಕಾಣ್ತಿದ್ದರೂ ಇರ ಬಹುದು."

" ಏನೋಪ್ಪ—ಈ ವಿಷಯಗಳೆಲ್ಲ ! ''

ಶ್ರಮಜೀವಿಗಳ ಆ ಹೋರಾಟ ಮಣ್ಣುಗೂಡಿತು. ಹೊಗೆ ಯೊಡದ ಗುಡಿಸಲುಗಳು....ಬೆನ್ನಿಗೆ ಅಂಟಿಹೋದ ಹೊಟ್ಟೆಗಳು........ ಕಂಬನಿಯನ್ನು ಮೌನವಾಗಿ ಸುರಿಸಿದ ಕಣ್ಣುಗಳು..........

ಮಾಲೀಕರು ನೇಮಿಸಿದ ಗುಂಡರ ಪ್ರತಾಪ ಹೆಚ್ಚಿತು. ಕೆಂಪು ಬಾವುಟದ ಯೂನಿಯನ್ನಿನ ಕಚೇರಿ ಪುಡಿಪುಡಿಯಾಯಿತು.

ಇಪ್ಪತ್ತೊಂದು ದಿನ ಮುಷ್ಕರವಾದಮೇಲೆ ಒದಗಿಬಂದ ಸನ್ನಿ

ವೇಶ. ಎಲವೂ ತಣ್ಣಗಿದ್ದಂತೆ ತೋರಿದಾಗ ಜಿಲ್ಲಾಧಿಕಾರಿಗಳು ಸಭೆ ಸೇರಿಸುವುದರ ಮೇಲಿನ ನಿಷೇಧಾಜ್ಞೆಯನ್ನು ರದ್ದುಗೊಳಿಸಿದರು. ಸ್ವಲ್ಪಹೊತ್ತಿನಲ್ಲಿ ಸಂಘದ ಹೆಸರಿನಲ್ಲೊಂದು ಕರಪತ್ರ ಹೊರಟಿತು. ಆ ಸಂಜೆಯ ಮುಂದಿನ ಹಾದಿಯನ್ನು ಗೊತ್ತುಮಾಡುವುದಕ್ಕಾಗಿ ಎಲ್ಲ ಕೆಲಸಗಾರರ ಬಹಿರಂಗ ಸಭೆಯನ್ನು ಕರೆಯಲಾಗಿತ್ತು.

ಸಭೆ ಜರಗಿತು. ಸಂಘದ ನಾಯಕರ ಬಿಡುಗಡೆಯಾಗಿದೆ ಎಂದು ಸುಳ್ಳುಹೇಳಿ ಕೆಲಸಗಾರರನ್ನು ಸಭೆಗೆ ಆಕರ್ಷಿಸಿದ್ದರು. ಕತ್ತ ಲಾದಾಗ ಸಭೆ ಆರಂಭವಾಯಿತು. ಶ್ರೀಕಂಠನೂ ನಾನೂ ಬಯಲಿನ ಹೊರ ಆವರಣದಲ್ಲಿ ಕಾರಿನೊಳಗೆ ಕುಳಿತು, ಧ್ವನಿವಾಹಕ ಯಂತ್ರ ದಿಂದ ಕೇಳಿಬರುತಿದ್ದ ಭಾಷಣಗಳಿಗೆ ಕಿವಿಗೊಟ್ಟೆವು.

" ಈ ಸಾರೆ ಮೈಕ್ರೋಫೋನಿಗೆ ನಾವೇ ದುಡ್ಕೊಟ್ಟೆವು ಕಣೋ. ಸಾಧುಪ್ರಾಣಿಗ್ಳು. ಅವರ ಸಂಘದಲ್ಲಿ ಮೂರು ಕಾಸೂ ಉಳಿದಿರ್ಲಿಲ್ಲ. ಎಲ್ಲ ಹಣವನ್ನೂ ಆ ಮುಖಂಡರು ಎತ್ಹಾಕ್ಬಿಟ್ರಂತೆ........"

ಶ್ರೀಕಂಠನ ಆ ವಿವರಣೆ ಕೇಳಿದಮೇಲೆ, ಭಾಷಣವೀಯುತಿದ್ದ ವಾಚಾಳಿಯ ಮಾತಿನ ವೈಖರಿಗೆ ನನಗೆ ಅರ್ಥವಾಯಿತು. ಮುಖಂ ಡರ ಬಂಧನವಾದುದಕ್ಕೆ ಆತ ಆಕ್ರೋಶಮಾಡಿದ. ಮಾಲೀಕರು ನಿಷ್ಕರುಣಿಗಳೆಂದು ಹೇಳಿದ. ಆಮೇಲೆ ಇಪ್ಪತ್ತೊಂದು ದಿನಗಳ ಉಪ ವಾಸದಿಂದ ಆದ ಸಂಕಷ್ಟಗಳನ್ನು ಶೋಕರಸಪ್ರಧಾನವಾಗಿ ವರ್ಣಿ ಸಿದ. ಹಾಗೆ ಮಾಡಿದಾಗ ಆತನ ಕಂಠ ಗದ್ಗದಿತವಾಯಿತು. ಒಂದು ನಿಮಿಷ ತಡೆದು ನಿಂತು ಕಣ್ಣೊರೆಸಿಕೊಂಡು ಅವನು ಮಾತು ಮುಂದು ವರಿಸಿದ........

" ನೋಡಿದ್ಯೇನೋ ಮಾತಿನ ಧೋರಣೆ ? ರಾಜಕೀಯದಲ್ಲಿರೋ ದಕ್ಕೂ ಲಾಯಕ್ಕಾಗಿದ್ದಾನೆ ಆಸಾಮಿ."

" ಯಾರು ಈತ ? "

" ಸುಂದರರಾಜ ಅಂತ. ಹಿಂದೆ ಒಂದು ಕಾಲ್ದಲ್ಲಿ ಎಸ್ಕೀನಾ ಮಿಲ್ನಲ್ಲಿ ಸಂಘ ಕಟ್ಟಿದ್ದ. ಕೆಂಪು ಬಾವುಟ ಬಂದ್ಮೇಲೆ ಅವನು ಮೂಲೆಗುಂಪಾದ. ಇನ್ನು ಮುಂದೆ ಈತನೇ ಸಂಘದ ಕಾರ್ಯದರ್ಶಿ

ಆಗೋದು ಖಂಡಿತ."

ಮಾಲೀಕರ ಪರವಾಗಿಯೆ ನಿಂತು ಆತ ಭಾಷಣ ಮಾಡುತ್ತಿದ್ದ ನೆಂಬುದು ನನಗೆ ಸ್ಪಷ್ಟವಾಯಿತು. ಆದರೆ ಅಷ್ಟು ಜನ ಕೆಲಸಗಾರ ರಿಗೆ ಅದೆಲ್ಲ ಅರ್ಥವಾದಂತೆ ತೋರಲಿಲ್ಲ. ಅವರು ಅವನ ಭಾಷಣಕ್ಕೆ ತಲೆದೂಗುತ್ತಿದ್ದರು........

ಭಾಷಣದ ಕೊನೆಯಲ್ಲಿ ಆತ ಹೇಳಿದ:

"ನಾವೀಗ ಏನು ಮಾಡಬೇಕೋ ತಿಳೀದಾಗಿದೆ. ಹೇಗಾ ದರೂ ಮಾಡಿ, ಕೆಟ್ಟುಹೋಗಿರೋ ವಾತಾವರಣಾನ ನಾವು ಸರಿಪಡಿ ಸ್ಬೇಕು....ಜೈಲಿನಲ್ಲಿರೋ ಮುಖಂಡರ್ನ ಬಿಡಿಸೋದು ಸಾಧ್ಯ ಆಗೋ ಹಾಗೆ ನಾವು ನಡ್ಕೋಬೇಕು."

ಸಭೆಯಲ್ಲಿದ್ದವನೊಬ್ಬ ಕೇಳಿದ:

"ಏನ್ಮಾಡ್ಬೇಕೂಂತ ನೀನು ಹೇಳೋದು ?"

"ನಾವೆಲ್ಲ ವಾಪಸು ಕೆಲಸಕ್ಕೆ ಹೋಗ್ಬೇಕು ......"

ಒಬ್ಬ ಮುದುಕ ಎದ್ದು ನಿಂತು ಕೂಗಾಡಿದ: "ಇದು ಮೋಸ. ನಾವು ಒಪ್ಕೋಬಾರ್ದು....ಕೆಲಸಕ್ಕೋದ್ಮೇಕೆ ನಮ್ಮನ್ನ ಕೇಳೋ ರಿಲ್ಲ."

ಆದರೆ ಆ ಮುದುಕನೆದುರು ಧ್ವನಿವಾಹಕ ಯಂತ್ರವಿರಲಿಲ್ಲ. ಅವನ ಮಾತು ಹಲವರಿಗೆ ಕೇಳಿಸಲಿಲ್ಲ. ಕೆಲವರು ಗಲಾಟೆ ಮಾಡಿ ಅವನನ್ನು ಹಿಡಿದು ಕುಳ್ಳಿರಿಸಿದರು.

ಶ್ರೀಕಂಠ ನಗುತ್ತ, "ಹೋಗೋಣ ಇನ್ನು. ಇಲ್ಲಿ ಎಲ್ಲವೂ ಸರಿಯಾಗಿದೆ....ಇನ್ನು ಯಾವ ಯೋಚ್ನೇನೂ ಇಲ್ಲ," ಎಂದ.

........ಕೆಲಸಗಾರರು ಮುಂದಿನ ಎರಡು ಮೂರು ದಿನಗಳಲ್ಲಿ ಕಾರಖಾನೆಗಳಿಗೆ ಹೋದರು. ಮಾಲೀಕರೂ ಹೊರಬರಲಿಲ್ಲ. ಸುಂದರ ರಾಜನ ಗುಂಪು, ಸಂಘದ ಅಧಿಕಾರಸ್ಥಾನಕ್ಕೆ ಬಂತು. ಆಮೇಲೆ ಒಂದು ವಾರದಲ್ಲೆ ಮೂರರಲ್ಲಿ ಒಂದಂಶದಷ್ಟು ಜನ ಕೆಲಸಗಾರರು ಉದ್ಯೋಗದಿಂದ ವಜಾಮಾಡಲ್ಪಟ್ಟರು.

ಒಂದು ಕಾಲದಲ್ಲಿ ಅವರು ಸೆಟೆದು ನಿಂತಿದ್ದ ಕೂಲಿಕಾರರು. ಈಗ

ಸತ್ವಹೀನರಾಗಿ ಸಪ್ಪೆಯಾಗಿದ್ದ ಬಡವರು......

ಅದಾಗಿ ಸ್ವಲ್ಪ ದಿನಗಳಮೇಲೆ ಮುನಿಸ್ವಾಮಪ್ಪ, ನಾಣಿ ಮತ್ತಿತರರ ಬಿಡುಗಡೆಯಾಯಿತು.

....ಮತ್ತೆ ಶಂಕೆಗಳು ಮೂಡಿದುವು........ಪ್ರಾಯಶಃ ಪ್ರಪಂಚ ಹೀಗೆಯೇ ಇರಬೇಕೇನೊ. ಪ್ರಬಲವಾದ ಒಂದೇ ಶಕ್ತಿಗೆ ಮಣಿದು ಎಲ್ಲರೂ ಬಾಳ ಬೇಕೇನೋ. ಅದನ್ನು ತಿಳಿದೂ ತಿಳಿದೂ ಆ ಜನರು ಹೋರಾಡುವುದರಲ್ಲಿ ಅರ್ಥವೇನಿತ್ತು? ನಾರಾಯಣನಿಗೆ ಅಷ್ಟೂ ತಿಳಿಯದೆ?

ಆ ಒಂದು ದಿನ ಹೋಟೆಲಿನಲ್ಲಿ ಯುವಕನೊಬ್ಬ "ಚೇತನಾ" ಎಂಬ ಪತ್ರಿಕೆಯನ್ನೋದುತಿದ್ದ. ಬಣ್ಣಬಣ್ಣದ ಹೊದಿಕೆಯಿತ್ತು ಹೊರಗೆ. ಬಲು ಆಸಕ್ತಿಯಿಂದ ಆ ಯುವಕ ಯಾವುದೋ ಎರಡು ಪುಟಗಳನ್ನು ಒಂದಕ್ಷರವೂ ಬಿಡದಂತೆ ಓದುತಿದ್ದ.

ಸಮೀಪ ಕುಳಿತಿದ್ದ ನಾನು, "ಯಾವ ಲೇಖನ ಓದ್ತಾ ಇದೀರಾ?" ಎಂದು ಕೇಳಿದೆ

"ಕತೆ ಸಾರ್, ಕೃಷ್ಣರಾಜರ ಕತೆ ಬಂದಿದೆ! 'ಸೋಲಿನ ಬಳಿಕ' ಅಂತ. ಚೆನ್ನಾಗಿದೆ ಸಾರ್!"

ಕೃಷ್ಣರಾಜರ ಕತೆ. ಓದಬೇಕೆನ್ನಿಸಿತು. ಆದರೆ ಆ ಯುವಕ ಪತ್ರಿಕೆಯೊಡನೆ ಹೊರಟು ಹೋದ. ಅದು ಆತನ ಸ್ವಂತದ ಪತ್ರಿಕೆಯಾಗಿತ್ತು.

ನಾನು ಬೀದಿಯುದ್ದಕ್ಕೂ ಸ್ವಲ್ಪ ದೂರ ನಡೆದು ಹೋದೆ.

ಅಲ್ಲೊಂದು ಪತ್ರಿಕೆಯಂಗಡಿ ಇತ್ತು, ಶೇಷಗಿರಿಯದಲ್ಲ— ಬೇರೆ ಯಾರದೋ........ಚೌಕದಲ್ಲಿ ಹುಡುಗರು ನಿಂತಿದ್ದರು—ಪತ್ರಿಕೆ ಮಾರುವ ಹುಡುಗರು ...ಊರ ಚೌಕಗಳು...."ಪೇಪರ್ ಬೇಕೇ ಸಾರ್ ಪೇಪರ್!"

ಮತ್ತೆ ಬಾಲ್ಯದ ನೆನಪುಗಳು........

ನಾನು ಆ ಅಂಗಡಿಯಿಂದ "ಚೇತನಾ" ಪತ್ರಿಕೆಯ ಒಂದು

ಪ್ರತಿ ಕೊಂಡುಕೊಂಡೆ. ಮನೆ ಸೇರಿ ಆ ಕಥೆಯನ್ನೋದಿದೆ.

ಎಷ್ಟೊಂದು ಸರಳವಾಗಿ ಕಲಾತ್ಮಕವಾಗಿತ್ತು ಆ ಕಥೆ! 'ಸೋಲಿನ ಬಳಿಕ'... ಹೌದು, ಏನು ಆ ಬಳಿಕ? ಕೆಲಸಗಾರರು ನಡೆಸಿದ ಹೋರಾಟದ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ಆ ಕಥಾವಸ್ತು ರೂಪುಗೊಂಡಿತ್ತು....ಮೊದಲು ವಿಜಯ, ಆ ಬಳಿಕ ಸೋಲು—ಅನಿವಾರ್ಯವಾದ ಸೋಲು. ಆ ಮೇಲೆ ಮತ್ತೆ ಮುನ್ನಡೆ. ಕಥೆಯ ನಾಯಕನಾದ ಸಾಮಾನ್ಯ ಕೂಲಿಗಾರನೊಬ್ಬನ ಬಾಯಿಂದ ಕತೆಯ ಕೊನೆಯಲ್ಲಿ ಮಾತುಗಳು ಹೊರಡುತಿದ್ದುವು:

"ಇಂಗೇ ಇರೋಕಾತದ? ಇಂಥ ನಾಯಿ ಬಾಳು ಬಾಳೋಕಾತದ? ಒಂದಿನ್ನ—ಎರಡ್ದಿನ್ನ ಇಂಗಿರ್ಬೋದು, ಆದರೆ ಯಾವಾಗ್ಲೂ ಇಂಗೇ ಇರೋಕಾತದ? ಗಿಡ ಕಡದ್ರೆ ತಿರ್‌ಗಾ ಚಿಗ್‌ರ್ತೇತೆ. ಮರ ಕಡಿದ್ರೆ ಬುಡ ಚಿಗರ್ಕೋತದೆ. ಹೆಂಡ್ತಿ ಬಸಿರು ಕಳ್ದೋದ್ರೆ ಮತ್ತೆ ಮಗ ಆಗಾಕಿಲ್ವಾ........ಅಂಗೇ ಕಣ್ರಪ್ಪೋ ........ತಿರ್‌ಗ ಚಿಗತ್ಕೋತದೆ ಸಂಘ........ಬ್ಯಾಸ್ಗೇನೆ ಯಾವಾಗ್ಲೂ ಇದ್ದಾತಾ? ಮಳೆ ಬತ್ತದೆ ಕಣ್ರಪ್ಪೋ. ಮಳೆ ಬತ್ತದೆ ........ ಬರಾಕಿಲ್ಲಾ ಅನ್ನೋಕಾದಾತಾ? ಬತ್ತದೆ ಕಣ್ರಪ್ಪೋ, ಬಂದೇ ಬತ್ತದೆ........"

ಓದುತ್ತ ನನ್ನ ಕಣ್ಣು ಮಂಜಾಯಿತು........ಒಂದು ಕತೆಗೆ ಈ ರೀತಿ ಹೃದಯವನ್ನು ಹಿಡಿದು ಅಲುಗಿಸುವ ಸಾಮರ್ಥ್ಯವಿತ್ತೆಂಬುದು ನನಗೆ ಗೊತ್ತಿರಲಿಲ್ಲ.

ಕೃಷ್ಣರಾಜರದೊಂದು ಕತೆ........

ಶ್ರೀಕಂಠನನ್ನು ಆ ಸಂಜೆ ಕಾಣಬೇಕಾಗಿದ್ದ ನಾನು ಅತ್ತ ಹೋಗದೆ, ನಾರಾಯಣನನ್ನು ಹುಡುಕಿಕೊಂಡು ಹೋದೆ. ಹಗುರವಾಗಿದ್ದ ಹೃದಯ, ನನ್ನನ್ನು ತಿಳಿದುಕೊಳ್ಳುವ ಸಾಮರ್ಥ್ಯವಿದ್ದ ಇನ್ನೊಂದು ಹೃದಯದ ಸಾಮೀಪ್ಯಕ್ಕಾಗಿ ಹಾತೊರೆಯುತಿತ್ತು.

ಬಾಗಿಲು ತೆರೆದ ಕಮಲಾ ಕೇಳಿದಳು.

"ಇದಾರೆ, ಬನ್ನಿ. ಬಹಳ ದಿನಗಳ ಮೇಲೆ ಬಂದಿದೀರಿ."

"ಹೂನಮ್ಮ, ಬರೋಕಾಗಲೇ ಇಲ್ಲ."

" ಹ್ಯಾಗಿದೆ ನಿಮ್ಮ ಹೊಟ್ಟೇ ನೋವು ? "

ನನ್ನ ಹೊಟ್ಟೇ ನೋವನ್ನು ನೆನಪಿಟ್ಟುಕೊಂಡಿದ್ದ ಆ ತಾಯಿ !

" ಇದೆಯಮ್ಮಾ ಹಾಗೇ. ನಾಣಿ ಎಲ್ಲಿ ? "

" ಬಚ್ಚಲ್ಮನೇಲಿದಾರೆ ಬನ್ನಿ...."

ಸ್ವಲ್ಪ ಹೊತ್ತಿನಲ್ಲೇ ನಾರಾಯಣ ಬಂದ....ಅವನಿಗೆ ಕೆಲಸ ವಿರಲಿಲ್ಲ....ಅವನನ್ನು ಹೊರ ಹಾಕಿದ್ದರು....ಸಾಲದ ಆಧಾರದ ಮೇಲೆ ಜೀವನ....ನಿನ್ನೆ ನಾಯಕನಾಗಿದ್ದವನು ಇವತ್ತು ಹೇಗಾದ....ಉರುಳಿ ಹೋದ ಮಂತ್ರಿ ಮಂಡಲದ ಸಚಿವನ ಹಾಗೆ....

" ನಾಣಿ ಈ ಬೆಳಿಗ್ಗೆ ಕೃಷ್ಣರಾಜರ ಕತೆ ಓದ್ದೆ...ಆ ಸಂತೋಷ್ದಲ್ಲೇ ಬಂದೆ ಇಲ್ಲಿಗೆ."

" ಓದ್ದೆಯಾ ? ಚೆನ್ನಾಗಿದೆ ಅಲ್ವಾ? ಅವರು ಒಳ್ಳೇವರು ಚಂದ್ರೂ....ನೀನು ಅವರ್ನ—"

" ಆ ದಿವಸವೇ ನೀನು ಹೇಳಿದ್ದೆ. ಆದರೆ ಆಗ್ಲಿಲ್ಲ ನಾಣಿ. ಈಗ ನೋಡ್ಬೇಕೂಂತ ಆಸೆ...."

" ನಾಳೆ ಬಂದೇ ಬರ್ತಾರೆ ಹ್ಯಾಗೂ....ಇಲ್ಲಿಗೇ ಬಂದ್ಬಿಡು ಚಂದ್ರು."

ಉಪ್ಪಿಟ್ಟು-ಕಾಫಿಯ ನಿರೀಕ್ಷೆ ನನಗಿರಲಿಲ್ಲ....ಅದೇನು ಅಡುಗೆ ಮಾಡುತಿದ್ದರೋ, ಅದೇನು ತಿನ್ನುತಿದ್ದರೋ....ಬಟ್ಟೆ ಹಾಕಿಕೊಳ್ಳುವಂತೆ ಹೇಳಿ, ಅವನನ್ನು ಕರೆದುಕೊಂಡು ಹೊರಬಂದೆ. ಹತ್ತಿರದ ಹೋಟೆ ಲಿಗೆ ಹೋಗಿ ತಿಂಡಿ ತಿಂದೆವು........

ಕಾಫಿ ಕುಡಿಯುತ್ತಿದ್ದಾಗ ಕೇಳಿದೆ :

" ನಾಣಿ, ದುಡ್ಬೇಕಾ? ಆದರೆ ಮೊದಲೇ ಹೇಳೋದು ವಾಸಿ.... ಈ ದುಡ್ಡು ನನ್ದಲ್ಲ—ಶ್ರೀಕಂಠನ್ದು."

ಅವನ ಕಣ್ಣುಗಳು ಮಿನುಗಿದುವು.

" ಶ್ರೀಕಂಠನ ದುಡ್ಡು ? ಅದು ಸುಳ್ಳು ಚಂದ್ರೂ! ಬಡವರ ಮೆ ಬೆವರು ಆ ದುಡ್ಡು....ಎಂಥ ಮಾತಾಡ್ತೀಯಾ ನೀನು !....ಆಮೇಲ್ಲೈ ಮೊದಲ್ನೇ ಪ್ರಶ್ನೆ—ಈಗ ಬೇಡ ಚಂದ್ರೂ....ಇದೆ. ಸಾಲ ತಗೊಂಡಿ

ದೀನಿ....ಈಗ ಬೇಡ...."

ನನ್ನ ಬಗ್ಗೆ ನನಗೆ ನಾಚಿಕೆಯಾಗಿತ್ತು. ಹೇಗಾಗಿದ್ದವನು ಹೇಗಾದೆ! ಹೇಗೆ ಆಗಬೇಕಾಗಿದ್ದವನು ಯಾವ ಸ್ಥಿತಿಗೆ ಬಂದು ತಲಪಿದೆ!

ಕಮಲೆಗಾಗಿ ಏನಾದರೂ ನಾಣಿ ಕೈಯಲ್ಲಿ ಕಳುಹಿಕೊಡುವ ಮನಸ್ಸಾಯಿತು. ಆದರೆ ನನಗೆ ಆ ಅಧಿಕಾರವಿತ್ತೆ? ಹಣ ಕೊಟ್ಟು ಹೆಣ್ಣುಗಳ ಮೈಮುಟ್ಟಿದ ನಾನು, ದೇವಿಯಂಥ ಆ ಜೀವದ ಬಗ್ಗೆ ಕನಿಕರ ವ್ಯಕ್ತಪಡಿಸುವ ಅರ್ಹತೆಯನ್ನಾದರೂ ಉಳಿಸಿಕೊಂಡಿದ್ದೆನೆ?

........ಕರುಳು, ಕಿತ್ತು ಬರುವಂತೆ ಸಿಡಿಯುತ್ತಿತ್ತು....ಹೃದಯ, ಹಲವು ಆಘಾತಗಳಿಂದ ಜರ್ಜರಿತವಾಗಿತ್ತು....ಸಂಕಟ....

ಮರುದಿನ ಕಂಡಾಗ ಕೃಷ್ಣರಾಜರು ನನ್ನನ್ನು ಮರುಳುಗೊಳಿಸಿದರು. ಎಲ್ಲ ವ್ಯಕ್ತಿಗಳನ್ನೂ ತನ್ನ ಸಮಾನರೆಂದೇ ಕಾಣುವ ಆ ಹಿರಿತನ........

"ಅದು ಚಿನ್ನದಂಥ ಕತೆ ಸಾರ್."

"ನಿಮ್ಮ ಮೇಲೆ ಒಂದಿಷ್ಟು ಪರಿಣಾಮ ಮಾಡಿದೆಯಲ್ಲಾ, ಅದೇ ದೊಡ್ಡ ಸಮಾಧಾನ."

ಅವರ ಸಾಮಿಪ್ಯದಲ್ಲಿ ವಿಚಿತ್ರವಾದ ಅನುಭವವಾಗುತಿತ್ತು ನನಗೆ. ವಯಸ್ಸಿನಲ್ಲಿ ನನಗಿಂತ ಕಿರಿಯನಾದ ವ್ಯಕ್ತಿ....ಆದರೆ ಅವರದೆಂತಹ ಜನೋಪಯೋಗಿ ಜೀವನ!....ನನಗೂ ಆಗಿತ್ತು ವಯಸ್ಸು ಕೋಣನಿಗೆ ಆದ ಹಾಗೆ. ಆದರೆ ಏನು ಪ್ರಯೋಜನ? ಯಾರಿಗೇನು ಪ್ರಯೋಜನ?

ಏನೇನೋ ವಿಷಯಗಳನ್ನು ಕುರಿತು ಅವರು ಮಾತನಾಡುತಿದ್ದರು. ಮೂಕನಾಗಿ ಅವರೆದುರು ನಿಂತಿರಬೇಕೆನಿಸುತಿತ್ತು.

"ನೋಡಿ ಚಂದ್ರಶೇಖರ್, ನಮ್ಮ ಪೀಳಿಗೆಯೇ ಹಾಗೆ........ ಸಮಾಜದ ವಿಷಮ ಚಕ್ರಕ್ಕೆ ನಮ್ಮ ಬಟ್ಟೆ ಬರೆ ತಗಲಿ ಹರಿದು ಚಿಂದಿಯಾಗಿದೆ. ಮನಸ್ಸು ಹೂಗಾಡ್ತದೆ—ಗೊತ್ತು ಗುರಿ ಇಲ್ಲದೆ.

ಮನುಷ್ಯಾದ್ಮೇಲೆ ಒಂದು ಶ್ರದ್ಧೆ ಇರಲೇಬೇಕು. ನಂಬುಗೆ ಇರಲೇ ಬೇಕು. ಅದಿದ್ದರೆ ಜೀವನ ತುಂಬಿಕೊಂಡಿರ್‍ತದೆ."

"ಶ್ರದ್ಧೆ—ನಂಬುಗೆ ಶೋಷಕ ವರ್ಗದವರಲ್ಲೂ ಇರತ್ತಲ್ವೆ ಕೃಷ್ಣ ರಾಜ್ ?"

ಅದು ನಾರಾಯಣ ಕೇಳಿದ ಪ್ರಶ್ನೆ. ಆ ಪ್ರಶ್ನೆ ಎಷ್ಟೊಂದು ಸಮಂಜಸವಾಗಿತ್ತು ! ಅದರ ಜತೆಯಲ್ಲಿ 'ಕೃಷ್ಣರಾಜ್' ಎಂಬ ಸಲಿಗೆಯ ಸಂಬೋಧನೆ........ನನ್ನ ಹೃದಯ ಸ್ವಲ್ಪ ನೊಂದಿತು. ಆ ಯುವಕ ಕೃಷ್ಣರಾಜನನ್ನು ಸಲಿಗೆಯಿಂದ ಸಂಬೋಧಿಸುವ ಯೋಗ್ಯತೆ ನಾರಾಯಣನಿಗಿದೆ—ನನಗಿಲ್ಲ........

"ಸರಿಯಾದ ಪ್ರಶ್ನೆ ನಾರಾಯಣ. ಒಳ್ಳೆಯ ಶ್ರದ್ಧೆ—ನಂಬುಗೆ ಇದ್ದ ಮಾನವರು ಸದುದ್ದೇಶ ಸಾಧಿಸುತ್ತಾರೆ. ಜನರನ್ನು ಮೆಟ್ಟಿ ತುಳಿಯೋದರಲ್ಲೇ ಶ್ರದ್ಧೆ ಇರೋರು ಸಮಾಜಕಂಟಕರಾಗ್ತಾರೆ. ನ್ಯಾಯದ ಪಕ್ಷ ಹೆಚ್ಚು ಬಲಶಾಲಿಯಾದ ಹಾಗೆ ಅನ್ಯಾಯದ ಪಕ್ಷ ಒಡೆದು ಮೂರಾಬಟ್ಟೆಯಾಗಿ ಮಣ್ಣು ಮುಕ್ಕತದೆ. ಅಲ್ವೆ ?"

....ಸಾಧ್ಯವಿತ್ತೆ ಹಾಗಾದರೆ ? ನಾನು ಇನ್ನಾದರೂ ಜೀವನದಲ್ಲಿ ಶ್ರದ್ಧೆ—ನಂಬುಗೆಯನ್ನು ಬೆಳೆಸಿಕೊಳ್ಳುವುದು ಸಾಧ್ಯವಿತ್ತೆ ? ಇನ್ನು ಮೇಲಾದರೂ ನಾನು ನೇರವಾದೊಂದು ಹಾದಿಯಲ್ಲಿ ಸಾಗಬಲ್ಲೆನೆ ?

ಆ ಮೇಲೆ ಅವರ ಹಾರೈಕೆ :

"ಬರೀರಿ ಚಂದ್ರಶೇಖರ್, ನೀವು ಬರೀರಿ...."

ಆತ, ನನ್ನ ಜೀವನದ ಅನುಭವಗಳನ್ನು ನಾನು ಬರೆದರೆ ಅದೊಳ್ಳೆಯ ಸಾಹಿತ್ಯವಾದೀತೆಂದು ನನಗೆ ನಂಬುಗೆ ಹುಟ್ಟಿಸುವಂತೆ ಹೇಳಿದ ರೀತಿ....

ನಮ್ಮ ಜೀವನದ ಅನುಭವಗಳು ! ಅವುಗಳೇನೆಂದು ತಿಳಿಯದ ನಾರಾಯಣ ಏನನ್ನೋ ಕಲ್ಪಿಸಿಕೊಂಡು ಕೃಷ್ಣರಾಜರಿಗೆ ಹೇಳಿರಬೇಕು. ಆದರೆ ನನ್ನ ಅನುಭವಗಳು ನನ್ನೊಬ್ಬನ ಆಸ್ತಿ ಮಾತ್ರ ಆಗಿದ್ದುವಲ್ಲವೆ ? ನನ್ನ ಮನಸ್ಸಿನ ಆಳದ ಒಳಹೊಕ್ಕು, ಹೃದಯವನ್ನು ಕೆದಕಿ, ಆ ಸ್ಮರಣೆಯ ಭಂಡಾರದೊಳಕ್ಕೆ ಏನೇನಿತ್ತೆಂದು ಯಾರು ಕಂಡಿದ್ದರು ?....

ನನ್ನ ಗತ ಜೀವನವನ್ನು ನೆನೆಸಿಕೊಂಡಾಗ ನನ್ನ ಹೃದಯ ಅಳುಕುತಿತ್ತು. ಹೀಗಾಗಿ ಹೋಯಿತಲ್ಲವೆ? ಜೀವನದಲ್ಲಿ ಒಂದು ಶ್ರದ್ಧೆ—ನಂಬುಗೆ....ಇಲ್ಲ, ನನಗೆ ಅಂತಹ ಶ್ರದ್ಧೆ—ನಂಬುಗೆ ಯಾವ ಕಾಲದಲ್ಲೂ ಇರಲಿಲ್ಲ........

ಕೃಷ್ಣರಾಜ ಹೇಳುತ್ತಿದ್ದರು :

"ಆಗಾಗ್ಗೆ ಸಿಗ್ತಾ ಇರಿ ಚಂದ್ರಶೇಖರ್."

ನನ್ನ ಬಾಳ್ವೆಯು ಕತೆ, ಆತನ ಕೈಯಲ್ಲಿ ರುದ್ರ ಕಾದಂಬರಿಯಾಗಬಹುದು,—ರುದ್ರ ನಾಟಕವಾಗಬಹುದು !

ಆದರೆ ಅದು ರುದ್ರವೇ ಎಂದು ಆಗಲೇ ನಾನೇ ತೀರ್ಪು ಕೊಡಬೇಕೆ ?

ನಾನು ಕೃಷ್ಣರಾಜರನ್ನು ಕಾಣ ಹೋಗಲಿಲ್ಲ. ಅವರು ಕೆಲವರ ಪ್ರಾಣಕ್ಕೆ ಎರವಾಗುವೆನೆಂದು ಒಂದು ದಿನ ಒಪ್ಪಿಕೊಂಡಿದ್ದೆ. ಹಾಗಾಗಲಿಲ್ಲ. ಆಮೇಲೆ ಕೃಷ್ಣರಾಜರ ವ್ಯಕ್ತಿತ್ವ ನನ್ನನ್ನು ಆಕರ್ಷಿಸಿತು....ಆ ಆಕರ್ಷಣೆಯ ಬಳಿಕ ?

ನಾನು ಅವರಿಂದ ದೂರವಿದ್ದೆ....ನನ್ನ ಬಾಳ್ವೆಯ ದೋಣಿ ಬಂಡೆಗಲ್ಲಿಗೆ ಸಿಕ್ಕಿ ಹಲವಾರು ಬಿರುಕು ಬಿಟ್ಟಿತ್ತು. ಅದರ ಫಲವಾಗಿ ಹಲಿಗೆಗಳು ಒಂದೊಂದಾಗಿ ಕಳಚಿಹೋಗುತಿದ್ದುವು. ಹಾಗೆ ಕಳಚಿ ಹೋಗುತಿದ್ದ ಹಲಿಗೆಗಳನ್ನು ಮತ್ತೆ ಕೂಡಿಸಿ ಜೋಡಿಸುವುದು ಸಾಧ್ಯವಿತ್ತೆ ?........ಕೃಷ್ಣರಾಜರಂಥವರು ಅದೂ ಸಾಧ್ಯ, ಅದಕ್ಕಿಂತ ಕಷ್ಟತರವಾದುದೂ ಸಾಧ್ಯ, ಎನ್ನಬಹುದು....ಇನ್ನೊಬ್ಬರಿಗೆ ಸಂಬಂಧಿಸಿ ಅಂತಹ ಪ್ರಯೋಗ ನಡೆದರೆ ನಾನೂ ಅದನ್ನು ಆಸಕ್ತಿಯಿಂದ ನೋಡಬಹುದಾಗಿತ್ತು. ಆದರೆ ಆ ಪ್ರಯೋಗ ನನಗೆ ಸಂಬಂಧಿಸಿಯೇ ನಡೆಯುವ ಯೋಚನೆ ಹಿತಕರವಾಗಿರಲಿಲ್ಲ....

ನಾನು ಮುಳುಗುತ್ತಲಿದ್ದೆ, ಸ್ವಲ್ಪ ಸ್ವಲ್ಪವಾಗಿ. ಹಾಗೆಯೇ ಮುಳುಗಿ ಹೋಗುವುದೇ ಮೇಲಾಗಿರಲಿಲ್ಲವೆ ?

ಜೀವನದಲ್ಲಿ ಜಿಗುಪ್ಸೆ....

ಶ್ರದ್ಧೆ — ನಂಬುಗೆ ಇಲ್ಲದ ಮಾನವನಿಗೆ ಜೀವನದಲ್ಲಿ ಜಿಗುಪ್ಸೆ....
ಹಾಗಾದರೆ ಮುಂದೇನಾಗಬೇಕಿನ್ನು ?

ನನ್ನ ಬಾಳ್ವೆಯ ಅಂತಿಮ ಘಟ್ಟದ ಆ ಅತಿ ಮುಖ್ಯ ಘಟನೆಯ ನಾನು ಇನ್ನು ಬರೆಯಬೇಕು.

ಅದೂ ಎಂಥ ಘಟನೆ!

ಸಂಜೆಯಾಗಿ, ಕತ್ತಲು ಬಂದು, ನಿಮಿಷಗಳು ಘಂಟೆಗಳಾಗುತ್ತಿವೆ. ಈಗ—ಈ ಸೋಮವಾರ. ಸಹಿಸಲಾಗದ ಹೊಟ್ಟೆಯ ನೋವಿನಿಂದ ನನ್ನ ಲೇಖನಿ ತಡವರಿಸುತ್ತಿದೆ........ನಾನು ಬಾರಿಬಾರಿಗೂ ಬಾಳ್ವೆಯ ಪಯಣದಲ್ಲಿ ತಡವರಿಸಿದ ಹಾಗೆ........ಆದರೂ ನಾನು ಆ ಘಟನೆಯ ಬಗ್ಗೆ ಬರೆಯಬೇಕು....

ನಗು ಬರುತ್ತಿದೆ ನನಗೆ—ನೋವಿನಲ್ಲೂ ನಗು. ದೀಪ ಗಾಳಿಯಲ್ಲಿ ತೂರಾಡುತ್ತಿದೆ. ನನ್ನ ಜೀವ ತೂರಾಡುತ್ತಿರುವ ಹಾಗೆ........ ಆ ಗಾಳಿ ಎಲ್ಲಿಂದಲೋ ಮೂತ್ರದ ವಾಸನೆಯನ್ನು ಕಳ್ಳತನದಿಂದ ಹೊತ್ತುತರುತ್ತಿದೆ .......ದೊಡ್ಡ ಬೀಗ ಹೊತ್ತಿರುವ ಬಾಗಿಲಿನ ಈ ಕಂಬಿಗಳು. ಅದರ ಹಿಂದೆ ಬರೆಯುತ್ತ ಕುಳಿತಿರುವ ನಾನು. ಎಂಥ ಸನ್ನಿವೇಶ! ನನಗೆ ನಗು ಬರುತ್ತಿದೆ.

ಎಷ್ಟೊಂದು ಅನಿರೀಕ್ಷಿತವಾಗಿ ಆ ಘಟನೆಯಾಗಿತ್ತು! ನಾವು ಬೀದಿ ನಡೆಯುತ್ತಿರುವಾಗ, ಎಲ್ಲಿಯೋ ನಿಂತಿದ್ದ ಹೋರಿ ಓಡಿ ಬಂದು ನಮಗೆ ತಿವಿದ ಹಾಗೆ!

ಆ ಹೋರಿ ನನಗೆ ತಿವಿದ ಬಗೆ!

....ರಾತ್ರೆ ಹನ್ನೆರಡರ ಹೊತ್ತು ಆ ದಿನ.

ಯಾರೋ ಧಪಧಪನೆ ಬಾಗಿಲು ಬಡೆಯುತಿದ್ದರು.

ನಾನೆದ್ದು, ದೀಪ ಹಾಕಿ ಕದ ತೆರೆದೆ.

ಶ್ರೀಕಂಠ ನಿಂತಿದ್ದ ಹೊರಗೆ ಥರಥರನೆ ನಡುಗುತ್ತಾ....ಕಾರಿರಲಿಲ್ಲ....ಆತ ನಡೆದೇ ಬಂದಿದ್ದ....ತಲೆಗೂದಲು ಕೆದರಿತ್ತು. ತುಟಿಗಲ್ಲುಗಳು ಅದುರುತಿದ್ದುವು. ಕಣ್ಣುಗಳಲ್ಲಿ ಕೆಂಪು ಹರಡಿ ನೋಡಲು

ಅಸಹ್ಯವಾಗಿತ್ತು.

"ಏನಿದು ಕಂಠಿ? ಕಂಠಿ! ಕಂಠಿ!"

ಆತ ಒಳಬಂದೊಡನೆ ಬಾಗಿಲಿಗೆ ಅಗಣಿತಗಲಿಸಿದೆ.

ಶ್ರೀಕಂಠ ಸೋಫಾದ ಮೇಲೆ ಬಿದ್ದುಕೊಂಡು ನನ್ನನ್ನೆ ಬಿರಬಿರನೆ ನೋಡಿದ.

"ಕಂಠಿ! ಏನೋ ಇದು? ಏನಾಯ್ತು ಕಂಠಿ?"

ನಾನು ಆತನ ಭುಜ ಹಿಡಿದು ಕುಲುಕಿದೆ.

"ದೀಪ—ದೀಪ ಚಂದ್ರೂ....ದೀಪ ಆರ್ಸು...."

ಆತ ತೊದಲುತಿದ್ದ.

ನಾನು ದೀಪ ಆರಿಸಿ, ಅವನ ಬಳಿಯಲ್ಲೆ ಕುಳಿತು, ಆತನ ಮೈದಡವಿದೆ.

"ಕಂಠಿ! ಕಂಠಿ!"

ತಡೆದು ತಡೆದು ಸಂಕಟಪಟ್ಟುಕೊಳ್ಳುತ್ತಾ ಬಿಸಿಯುಸಿರು ಬಿಡುತ್ತಾ ಆತ ಏನನ್ನೊ ಹೇಳಲೆತ್ನಿಸುತಿದ್ದ. ಮಾತು ಹೊರಡಲಿಲ್ಲ.

ಕತ್ತಲೆಯಲ್ಲೆ ಎದ್ದು ಆಲಮಾರಿನ ಕದ ತೆರದು ಕೈಯಾಡಿಸಿದೆ. ಇಲ್ಲ, ಏನೂ ಇರಲಿಲ್ಲ........

"ಚಂದ್ರೂ....ನೀ ನೀರು...."

ಕತ್ತಲೆಯಲ್ಲಿ ತಡವುತ್ತ ಕೂಜೆಯನ್ನೆತ್ತಿ ಗ್ಲಾಸಿಗೆ ನೀರುಸುರಿದೆ. ........ಆ ನೀರು ಶ್ರೀಕಂಠನನ್ನು ಸ್ವಲ್ಪಮಟ್ಟಿಗೆ ಚೇತರಿಸಿತು.

"ಶಾರದಾ ಕಣೋ....ಚಂದ್ರೂ....ಶಾರದಾ—"

"ಹೇಳು ಕಂಠಿ."

"ಶಾರದಾ ಸತ್ತೋದ್ಲು—"

ಆ ಮಾತನ್ನು ಹೊರಹಾಕಿ ಶ್ರೀಕಂಠ ಉಗುಳು ನುಂಗಿದ. ನನ್ನ ಹೃದಯದ ಬಡಿತ ನಿಂತಿತು—ಕ್ಷಣಕಾಲ. ನರನಾಡಿಗಳು ತಣ್ಣಗಾದುವು ಆಗ.

ಶಾರದಾ—

ಆದರೆ ಏನಾಗಿತ್ತು?

ನಾನು ಆ ಪ್ರಶ್ನೆಯನ್ನು ಕೇಳುವ ಸ್ಥಿತಿಯಲಿರಲ್ಲಿಲ್ಲ. ಮಾತಿಲ್ಲದೆ ಸ್ಮಶಾನ ಸಮಾನವಾದ ನಿಮಿಷಗಳು ಉರುಳಿದುವು.

" ಯಾವಾಗ ಏನಾಯ್ತು ಕಂಠಿ ? "

ಶ್ರೀಕಂಠ ನನ್ನ ಭುಜಕ್ಕೊರಗಿದ. ಅವನ ಕಣ್ಣುಗಳಲ್ಲಿ ನೀರು ತೊಟ್ಟಿಕ್ಕುತಿತ್ತು....ಆಮೇಲೆ ನಿಧಾನವಾಗಿ ತಡೆದು ತಡೆದು ಒಂದೊಂದೆ ಮಾತು ಹೊರಬಂತು.

ಶ್ರೀಕಂಠನ ಕೈಯಲ್ಲಿ ಶಾರದೆಯ ಸಾವು.

ಒಟ್ಟಿನಲ್ಲಿ ಆಗಿದ್ದುದಿಷ್ಟು :

ರಾತ್ರೆ ಶ್ರೀಕಂಠ ಮನೆಗೆ ಬಂದಾಗ ಹತ್ತು ಹೊಡೆದಿತ್ತು. ಶಾರದೆಯ ಕೊಠಡಿಯಲ್ಲಿ ಬೆಳಕಿರಲಿಲ್ಲ. ಮಗು ನಾಗರಾಜ ತಂದೆ ತಾಯಿಯರ ಹಾದಿ ನೋಡದೆ ನಿದ್ದೆ ಹೋಗಿದ್ದ. ಅಡುಗೆಯ ಆಚಾರ್ಯ ಬಂದಾಗ ಸಿಡುಕಿನಿಂದ ಮಾತನಾಡಿ ಶ್ರೀಕಂಠ ಅವನನ್ನು ಕಳಕ್ಕಟ್ಟಿದ.

ಹನ್ನೊಂದರ ಹೊತ್ತಿಗೆ ಶಾರದಾ ಬಂದಳು. ಅದು ಯಾರದೋ ಕಾರು. ಆ ಸದ್ದು ಅವಳ ತಂದೆಯ ಕಾರಿನದಾಗಿರಲಿಲ್ಲ ...ಆಕೆ ಮಹಡಿಯ ಮೇಲೇರಿ ಬಂದಾಗಲೂ ಹಸನ್ಮುಖಿಯಾಗಿ ಯಾವುದೋ ಹಾಡನ್ನು ಗುಣ ಗುಣಿಸುತ್ತಲೇ ಇದ್ದಳು. ತೆರೆದಿದ್ದ ಬಾಗಿಲಿನೆದುರು ಆಕೆ ಹಾದು ಹೋದಾಗ, ಶ್ರೀಕಂಠ ಅವಳನ್ನು ನೋಡಿದ. ಆ ಸೀರೆ-ಕುಪ್ಪಸ....ಆ ಶೃಂಗಾರ....ಅಸ್ತವ್ಯಸ್ತವಾಗಿದ್ದ ಕೂದಲು ...... ಹಸಿವು ಇಂಗಿ ತೃಪ್ತಿ ತೋರುತಿದ್ದ ಕಣ್ಣುಗಳು.....ಮತ್ತೂ ಬೆಚ್ಚಗೆ ಇದ್ದಂತಿದ್ದ ತುಟಿಗಳು....

ಶ್ರೀಕಂಠ ಅವಳನ್ನು ಕೂಗಿ ಕರೆದ :

" ಶಾರದಾ ! "

ಉತ್ತರ ಬರಲಿಲ್ಲ.

ಮತ್ತೊಮ್ಮೆ ಶ್ರೀಕಂಠ ಏರಿದ ಧ್ವನಿಯಲ್ಲಿ ಕರೆದ :

" ಶಾರದಾ ! ಬಂದು ಹೋಗು ! "

ಅವಳು ಬರಲಿಲ್ಲ. ತನ್ನ ಕೊಠಡಿಗೆ ಹೋಗಿ ದೀಪ ಹಾಕಿದಳು.

ಅವಮಾನಿತನಾದ ಶ್ರೀಕಂಠ, ಅವಳ ಕೊಠಡಿಗೆ ನುಗ್ಗಿದ.

" ಕರೆದಿದ್ದು ಕೇಳಿಸ್ಲಿಲ್ಲ ನಿಂಗೆ."

ನಿಲುವುಗನ್ನಡಿಯ ಮುಂದೆ ಕುಳಿತು, ಆಭರಣಗಳನ್ನು ಕಳಚುತ್ತಲಿದ್ದ ಆವಳು ಹೇಳಿದಳು.

" ಕೆಲಸದಾಕೆ ಸಾಯಂಕಾಲ್ವೇ ಹೊರಟೋಗಿದ್ದಾಳೆ."

ಆ ಉತ್ತರ ಕೇಳಿ ಶ್ರೀಕಂಠನ ಮೈ ಉರಿಯಿತು. ಆತ ಕುಪಿತನಾಗಿ ಶಪಿಸಿದ.

ಅವಳ ಬಳಿ ಸಾರುತ್ತಾ ಶ್ರೀಕಂಠ ಗುಡುಗುವ ಧ್ವನಿಯಲ್ಲಿ ಕೇಳಿದ :

" ಯಾವ ನಾಯಿ ಜತೇಲಿದ್ದೆ ಸಾಯಂಕಾಲ ? "

ಆಕೆ ಜಿಗಿದೆದ್ದು ಉತ್ತರಕೊಟ್ಟಳು—ಶ್ರೀಕಂಠನ ಕೆನ್ನೆಯ ಮೇಲೆ ಬಲವಾದ ಏಟು. ಆತ ಅವಳನ್ನು ಮಾತನಾಡಗೊಡಲಿಲ್ಲ. ಅವನ ಕೈಗಳೆರಡೂ ಆಕೆಯ ಕತ್ತನ್ನು ಹಿಸುಕಿದ್ದುವು........

ಅವನಿಗೆ ಮೈಮೇಲೆ ಎಚ್ಚರವಿರಲಿಲ್ಲ. ಎಷ್ಟೋ ದಿನಗಳಿಂದ ತಡೆಹಿಡಿದಿದ್ದ ಅಣೆಕಟ್ಟು ಒಮ್ಮೆಲೆ ಕಡಿದು ಹೋಯಿತೇನೊ....ಆ ಕೈಗಳು ಮತ್ತೂ ಮತ್ತೂ ಹಿಸುಕಿದುವು....ಮೊದಲು ಪ್ರತಿಭಟಿಸಿದ ಆ ಹೆಣ್ಣು ಬರ ಬರುತ್ತ ನಿಶ್ಚೇಷ್ಟಿತವಾಯಿತು. ಶಾರದಾ ನೆಲದ ಮೇಲುರುಳಿದಳು. ಆದರೆ ಶ್ರೀಕಂಠ ಕೈಗಳ ಹಿಡಿತವನ್ನು ಸಡಿಲಿಸಿರಲಿಲ್ಲ. ಹಿಂದೆಯೊಂದು ಕಾಲದಲ್ಲಿ ಅವನ ಕೈಹಿಡಿದಿದ್ದ ಹೆಂಗಸು—ಹಾಗೆ ಕೈ ಹಿಡಿದು ಆ ಮಹಡಿಯ ಎತ್ತರಕ್ಕೆ ಅವನನ್ನು ಕರೆದು ತಂದಿದ್ದ ಹೆಣ್ಣು.

ಕೊನೆಗೆ ಬಳಲಿದ ಶ್ರೀಕಂಠ ಅವಳನ್ನು ನೆಲದಮೇಲಿನ ರತ್ನಕಂಬಳಿಯ ಮೇಲೆಯೇ ಬಿಟ್ಟು, ಅಲ್ಲೇ ಒರಗು ಕುರ್ಚಿಯ ಮೇಲೆ ಕುಳಿತ........ಆಕೆ ಎಚ್ಚರಗೊಂಡು ಏಳಬಹುದು, ಎದ್ದಾಗ ಆವಳ ಮುಖದಮೇಲೆ ಥೂ ಎಂದು ಉಗುಳಿ ಕಾಲಿನಿಂದ ಒದೆಯಬೇಕು,—ಇದೀಗ ಆತನಿಗಿದ್ದ ಯೋಚನೆ. ಆಕೆಯನ್ನು ನೋಡುತ್ತ ನೋಡುತ್ತ ಅವನು ಅಲ್ಲಿ ಕುಳಿತ. ಅವಳು ಏಳಲೇ ಇಲ್ಲ.

" ನಟನೆ ಸಾಕು. ಸಿನಿಮಾ ನಟನೆ, [illegible]ಳು ! "

ಆತ ಕೂಗಿಕೊಳ್ಳುತ್ತಿದ್ದ ನಿಜ; ಆದರೆ ಆಕೆ ಏಳಲಿಲ್ಲ.

ಸಂದೇಹ ತಲೆದೋರಿತು ಅವನಿಗೆ....ಆದರೆ ಏರಿದ್ದ ಕೋಪ ಇಳಿದಿರಲಿಲ್ಲ....ಬಿದ್ದಿದ್ದವಳು ಏಳದೇ ಇದ್ದುದನ್ನು ಕಂಡು ಆ ಕೋಪ ಇಳಿಯ ತೊಡಗಿದಾಗ—

ಶ್ರೀಕಂಠ ಧಿಗ್ಗನೆದ್ದು ಅವಳ ಮೈಮುಟ್ಟಿದ; ಕೈಕುಲುಕಿದ.... ತಣ್ಣಗಾಗಿತ್ತು ಎಲ್ಲವೂ....ಅದು ವಿಸ್ಮಯಕರವಾದ ಸಂಗತಿ. ಹಾಗಾಗುವುದು ಸಾಧ್ಯವೆ? ಹಾಗಾದುದು ನಿಜವೆ?

ತನ್ನ ಪಾಲಿಗೆ ಶಾರದಾ ಇದ್ದರೂ ಸತ್ತಹಾಗೆ—ಎಂದು ಶ್ರೀಕಂಠ ಎಷ್ಟೋ ವೇಳೆ ಭಾವಿಸಿದ್ದನೇನೋ ನಿಜ....ಆದರೆ ಅಂಥ ಸಾವು........ ಆ ಅಂಗೈಗಳು.....ಎದುರು ನಿಲವುಗನ್ನಡಿಯಿತ್ತು....ಅದರಲ್ಲಿ ತೋರಿ ಬಂದ ತನ್ನಮುಖ! ಓ!

ಆ ಮೇಲೆ ಕೆಲವು ನಿಮಿಷಗಳು—ಸಿಡಿಯುತಿದ್ದ ಮೆದುಳು ಹತೋಟಿಗೆ ಬಂದತನಕ....

ಶ್ರೀಕಂಠ ಬಾಗಿಲೆಳೆದುಕೊಂಡು, ಅದಕ್ಕೆ ಅಂಟಿಕೊಂಡಿದ್ದ ಬೀಗದ ಕೈಯನ್ನು ತಿರುವಿದ. ತನ್ನ ಕೊಠಡಿಗೂ ಬೀಗಹಾಕಿಕೊಂಡು ಹೊರ ಹೊರಟ. ಕೆಳಹಜಾರದಲ್ಲಿ ಉದ್ಯಾನವದಲ್ಲಿದ್ದ ಸೀಮೆನಾಯಿ ಬಾಲ ಹಾಡಿಸುತ್ತಾಬಂತು. ಅದನ್ನು ಗದರಿಕೆಯ ನಟನೆಯಿಂದ ದೂರ ವಿರಿಸಿ ಆತ ಬೀದಿಗಳಿದ.

ಅದೀಗ ಶ್ರೀಕಂಠ ಹೇಳಿದ ಕಥೆ.

"ನೀನೇ ಹೇಳು ಚಂದ್ರೂ....ಈಗೇನ್ಮಾಡ್ಲಿ....ಏನ್ಮಾಡ್ಲಿ ಈಗ? ........"

ನಾನು ಶಾಂತನಾಗಿ ಯೋಚಿಸಿದೆ. ಶಾರದೆ ಸತ್ತಳೆಂದು ಇನ್ನೊಂದು ಜೀವಕ್ಕೆ ಹಾನಿಯೊದಗುವುದರಲ್ಲಿ ಅರ್ಥವಿರಲಿಲ್ಲ. ಶ್ರೀಕಂಠನ ವ್ಯಕ್ತಿತ್ವಕ್ಕೆ ಕುಂದುಬರುವ ಸನ್ನಿವೇಶವನ್ನಂತೂ ಊಹಿಸುವುದಾದರೂ ಸಾಧ್ಯವೆ?

"ಕಂಠಿ, ಮನೇಲಿ ಸ್ಲೀಪಿಂಗ್ ಟೇಬ್ಲೆಟ್ಸ್ ಇವೆಯೇನು?"

"ಇರ್ಬೇಕು, ಇವೆ."

"ಅವಳ್ನ ಹಾಸಿಗೆ ಮೇಲೆ ಮಲಗಿಸ್ಬಿಟ್ಟು ಆ ಟೇಬ್ಲೆಟ್ಸ್ ಸೀಸೇನೂ ಒಂದೆರಡು ಟೇಬ್ಲೆಟ್‌ಗಳನ್ನೂ ಹತ್ತಿರವೇ ಚೆಲ್ಲಿದರಾಯ್ತು."

"ಅಷ್ಟು ಸಾಕೆ ?"

"ಧಾರಾಳವಾಗಿ, ಆದರೆ ನೀನು ಶಾಂತವಾಗಿರ್ಬೇಕು. ಏನೂ ತಿಳೀದವರ ಹಾಗೆ ಇದ್ಬಿಡ್ಬೇಕು.........ಅಷ್ಟು ಮಾಡಿ ಬರೋಣ....",

ಜೀವಚ್ಛವದಂತೆ ಆತ ನನ್ನನ್ನು ಹಿಂಬಾಲಿಸಿದ.

ಹಾದಿಯಲ್ಲಿ ಆತ ಪಿಸುಮಾತನಾಡುತ್ತಿದ್ದ :

"ದೀಪ ಉರೀತಾನೇ ಇದೆಯೋ ಏನೋ....ದೀಪ .."

ಉರಿಯುತಿದ್ದ ದೀಪ....ರಾತ್ರೆ ಎರಡು ಘಂಟೆಯ ಆ ಹೊತ್ತಿನಲ್ಲಿ ನಾಲ್ಕಾರು ಜನ ಮಹಡಿಯ ಮೇಲಿದ್ದುದು ನಮಗೆ ಕಾಣಿಸಿತು.... ... ಶ್ರೀಕಂಠನ ಮಾವ, ಪೋಲೀಸ್ ಅಧಿಕಾರಿ, ಪೋಲೀಸರು, ಮನೆಯ ಆಳುಗಳು........

"ಚಂದ್ರು, ಓಡಿ ಹೋಗೋಣ."

"ಹುಚ್ಚನ ಹಾಗೆ ಆಡ್ಬೇಡ."

"ಏನೂ ತಿಳೀದವರ ಹಾಗೆ, ಸಿನಿಮಾದಿಂದ ಬರ್‍ತಿರೋರ ಹಾಗೆ, ಒಳಕ್ಕೆ ಹೋಗೋಣ."

ನಡುಗುತಿದ್ದ ಬೆರಳುಗಳಿಂದ ಶ್ರೀಕಂಠ ಕ್ರಾಪು ಸರಿಪಡಿಸಿ ಕೊಂಡ....ನಾವು ಮೆಟ್ಟಲೇರಿದೆವು.

ಶ್ರೀಕಂಠನನ್ನು ನೋಡುತ್ತಲೆ, ಅವನ ಮಾವ ಧ್ವನಿ ತೆಗೆದು ಅಳತೊಡಗಿದರು : ಪೋಲೀಸ್ ಅಧಿಕಾರಿ, ಶ್ರೀಕಂಠನ ಬದಲು ನನ್ನನ್ನೇ ನೋಡುತ್ತಾ, "ಆಭರಣಗಳ್ನ ಕದಿಯೋಕೇ ಈ ಕೊಲೆ ಆಗಿರೋದು....ಮನೆಯ ಆಳುಗಳನ್ನೆಲ್ಲ ಅರೆಸ್ಟ್ ಮಾಡ್ಬೇಕು," ಎಂದ.

....ಆಗ ನಾನು ಎಚ್ಚರವಾಗಿದ್ದೆನೆ? ಅಥವಾ ಜೀವನದಲ್ಲಿ ಧುಮುಧುಮಿಸಿ ಒಮ್ಮೆಲೆ ಬಂದ ಕಾರ್ಗತ್ತಲೆ ನನ್ನನ್ನು ಕುರುಡನಾಗಿ ಮಾಡಿತೆ ? ನಾನು ಯಾಕೆ ಹಾಗೆ ಮಾಡಿದೆ ?

ನನ್ನ ಸ್ವರ ಹೇಳುತಿತ್ತು :

"ಸಾರ್, ನೀವು ದರೋಡೆ ಚೋರ ಚಲಂ ಹೆಸರು ಕೇಳಿ ದೀರಾ?"

"ಕೇಳಿದೀವಿ....ಈ ವರ್ಷ ಅವನ ಬಿಡುಗಡೆ....ಅವನಿನ್ನೂ ಒಳಗೇ ಇದಾನೆ. ಇದಕ್ಕೂ ಅದಕ್ಕೂ ಸಂಬಂಧ ಎಲ್ಲಿಯದು?"

"ಆದರೆ ನನಗೂ ಆ ಚಲಂಗೂ ಸಂಬಂಧ ಸಾರ್."

"ಏನು?"

"ಈ ಚಂದ್ರಶೇಖರ್‌ಗೆ ಸಂಬಂಧಿಸಿದ ಹಳೆಯ ಫೈಲೊಂದಿದೆ."

ಶ್ರೀಕಂಠನನ್ನು ನಾನು ನೋಡಲಿಲ್ಲ. ಆದರೆ ಅವನ ಮಾವ ಕೂಗಾಡುತಿದ್ದರು:

"ಎಂಥಾ ರ‍್ಯಾಸ್ಕಲ್ ಇವನು! ನನಗೆ ಮೊದಲೇ ಸಂಶಯ ಬಂದಿತ್ತು....ಇವನ್ನ ಅರೆಸ್ಟ್ ಮಾಡಿ!"

ಅವರು ನನ್ನನ್ನು ಬಂಧಿಸಿದರು, ಕೈಗಳಿಗೆ ಬೇಡಿ! ಆ! ಎಷ್ಟು ವರ್ಷಗಳ ಮೇಲೆ ಸಂಕೋಲೆಯೊಡನೆ ಮಿಲನ....!

......ಕರುಳಿನ, ಹೃದಯದ, ಮೆದುಳಿನ ಕಾಹಿಲೆಯೊಡನೆ ನಾನು ಇಲ್ಲಿಗೆ, ಸೆರೆಮನೆಗೆ, ಬಂದೆ.

ನಾನು ಯಾಕೆ ಹಾಗೆ ಮಾಡಿದೆ? ನನಗೆ ತಿಳಿಯದು. ಶ್ರೀಕಂಠ ನಿಗೆ ಅಪಾಯತಟ್ಟಬಾರದೆಂದೆ? ಹಾಗಿರಲಾರದು. ಹಾಗಾದರೆ ಯಾಕೆ? ಯಾಕೆ?

....ಪ್ರಾಯಶಃ ಆ ಬದುಕಲ್ಲದ ಬದುಕಿನಿಂದ ನನಗೆ ಬೇಕಾದ ವಿಮೋಚನೆಯನ್ನು ಹಾಗೆ ಪಡೆದೆನೆ? ಆದರೆ ಅದು ವಿಮೋಚನೆಯಾಗಿ ರಲಿಲ್ಲ....ಸ್ಥಳಾಂತರವಾಗಿತ್ತು........ಒಂದು ಸೆರೆಮನೆಯಿಂದ ಇನ್ನೊಂ ದಕ್ಕೆ....

ಶ್ರೀಕಂಠ, ಮಾವನಿಗೆ ತಿಳಿಯದಂತೆಯೇ ನನ್ನ ರಕ್ಷಣೆಗಾಗಿ ಪ್ರಖ್ಯಾತನಾದೊಬ್ಬ ಯುವಕ ವಕೀಲರನ್ನು ಗೊತ್ತುಮಾಡಿದ್ದಾನೆ.... ಆ ವಕೀಲರ ಮಿತ್ರರು, ಜೈಲಿನ ಅಧಿಕಾರಿ, ಆ ಡಾಕ್ಟರು.....

ಪತ್ರಿಕೆಗಳಲ್ಲಿ ಮೊದಲ ಪುಟದಲ್ಲಿ ದಪ್ಪಕ್ಷರಗಳಲ್ಲಿ ಆ ವಾರ್ತೆ

ಬಂದಿದೆ—ಸಾರ್ವಜನಿಕ ಕ್ಷೇತ್ರಗಳಲ್ಲಿ ಜನಪ್ರಿಯರಾಗಿದ್ದ ಶ್ರೀಮತಿ ಶಾರದಾ ಶ್ರೀಕಂಠಯ್ಯನವರ ವಿಚಿತ್ರ ಮರಣದ ವಾರ್ತೆ. ಆ ಬಳಿಕ, ಹಲವು ವರ್ಷಗಳಿಂದ ಮಿತ್ರನಂತೆ ನಟಿಸಿದ ದರೋಡೆ ಚೋರ ಚಂದ್ರಶೇಖರನ ಬಂಧನ—ಆ ಸಂಬಂಧವಾಗಿ, ಗುಮಾನಿಯ ಮೇಲೆ.

ಈಗಾಗಲೇ ಎಲ್ಲರೂ ಓದಿರುವ ವಾರ್ತೆ ಅದು: ನನ್ನ ಅಜ್ಜಿ ಇದ್ದ ಮನೆಯ ನೆರೆಮನೆಯವರು, ವನಜಾ, ಶ್ರೀನಿವಾಸಯ್ಯ, ಮಾಧವರಾವ್, ನಾರಾಯಣ, ಕೃಷ್ಣರಾಜರು—ಎಲ್ಲರೂ—ಎಲ್ಲರೂ !

ಕೊಲೆಪಾತಕಿಯಾಗಿರುವ ನಾನು....

ಅವರು ವಿಚಾರಣೆಮಾಡಿ ಇನ್ನು ತೀರ್ಪು ಕೊಡುವರು—ತೀರ್ಪು........

ಏಕಪ್ರಕಾರವಾಗಿ ಯೋಚಿಸುವ ಸಾಮರ್ಥ್ಯ ನನಗೆ ಉಳಿದಿಲ್ಲ.... ಯೋಚನೆಗಳು ಕಡಿದು ಕಡಿದು ಬರುತ್ತಿವೆ....ಉದರ ಶೂಲೆ....ವಾಂತಿ ಮಾಡಬೇಕೆನ್ನುವ ಹಾಗೆ ಆಗುತ್ತಿದೆ. .. ಉಸಿರು ಕಟ್ಟುತ್ತಿದೆ ...

....ಅಂತ್ಯವೆಲ್ಲಿದೆ ? ಕೊನೆ ಎಲ್ಲಿದೆ ? ಮುಕ್ತಾಯ—ಮುಕ್ತಾಯ ಎಲ್ಲಿದೆ ?

## . . . ಮಂಗಳವಾರ

ಬಲು ತಡವಾಗಿ ಎದ್ದು, ಈ ದಿನ ಎಲ್ಲರ ಕೌತುಕಕ್ಕೆ ಕಾರಣ ನಾಗಿದ್ದೇನೆ....

ಕರಿಯ ಕೇಳಿದ "ಹೆಂಗಿದೀರಿ ರಾಯರೆ?"

ರಾಯರು 'ಹೆಂಗಿದ್ದರು'!

ಬಲ ಮಗ್ಗುಲಿನ ಯುವಕ ಕೇಳುತಿದ್ದಾನೆ:

"ನಿಮ್ಮ ವಿಚಾರಣೆ ಯಾವತ್ತು ಸಾರ್?"

ಹೌದು, ಯಾವತ್ತು ನನ್ನ ವಿಚಾರಣೆ? ಯಾವತ್ತು?

ಕಳೆದ ಮಂಗಳವಾರದಿಂದ ಈ ಮಂಗಳವಾರಕ್ಕೆ. ಇದೊಂದು ವಾರದೊಳಗೆ ಇಷ್ಟೊಂದು ಪುಟಗಳನ್ನು ನಾನು ಬರೆದೆನೆ? ನನಗೆ ಆಶ್ಚರ್ಯವಾಗುತ್ತಿದೆ. ನಿಜವಾಗಿಯೂ ನಾನೇ ಇಷ್ಟನ್ನೂ ಬರೆದೆನೆ?

ಇನ್ನು ನಾನು ಬರೆಯಬೇಕಾಗಿರುವುದು ಬಲು ಸ್ವಲ್ಪ....ಇನ್ನು ಉಳಿದಿರುವುದು ಕೊನೆಯದಾಗಿ ವಿದಾಯ ಹೇಳುವ ಕೆಲಸ.

....ಈ ದಿನ ಬೆಳಕಾಗಿ, ಹಗಲು ಕಳೆದು, ಸಂಜೆ ಬಂದಿದೆ—ಎಷ್ಟೊಂದು ಬೇಗನೆ! ನನ್ನ ಬಾಳ ಸಂಜೆ ಬಂದೊದಗಿರುವುದು ಎಷ್ಟೊಂದು ಬೇಗನೆ!

ಈ ದಿನ ನಾನು ಉಪವಾಸವಿದ್ದೇನೆ........ವ್ರತನಿಷ್ಠೆಯಿಂದಲ್ಲ! ನನ್ನ ಅಂಗಾಂಗಗಳಿಗೆಲ್ಲ ವಿರಾಮಕೊಡುವ ಬಯಕೆಯಿಂದ ಹಾಗೆ ಮಾಡುತಿದ್ದೇನೆ.

ಇನ್ನು ಸಂಜೆಯ ಸೂರ್ಯ ಮುಳುಗುತ್ತಾನೆ—ಈ ಮಂಗಳ ವಾರವೂ. ಚಂದ್ರೋದಯವಾಗಬೇಕಾದರೆ ನಡು ರಾತ್ರೆ ಕಳೆಯ ಬೇಕು. ಈ ಕೊಠಡಿಯ ಹಿಂಭಾಗದಲ್ಲಿ ಎತ್ತರದಲ್ಲಿರುವ ಕಿಟಕಿಯಿಂದ

ಚಂದ್ರ ಇಣಿಕಿ ನೋಡುವನು. ಆಗ ಆತನಿಗೆ ಬಟ್ಟೆಯ ಬಲ ದಾರ ಕಾಣುವುದು. ಆ ದಾರಕ್ಕೆ ಜೋತುಬಿದ್ದು ಆತ ಇಳಿಯ ಬಹುದೇನೋ. ಅದಾಗದ ಕೆಲಸ. ನಾನು ಜೋತು ಬಿದ್ದಿರು ಚಂದ್ರನ ಭಾರವನ್ನೂ ಆ ದಾರ ಹೊರುವುದುಂಟೆ?

....ಯಾಕೆ, ಅರ್ಥವಿಲ್ಲದ ಮಾತುಗಳು ಈ ಲೇಖಣಿಯ ಹೊರಬೀಳುತ್ತಿವೆಯಲ್ಲ !.... ...

ಅರ್ಥವಿಲ್ಲದ ಮಾತುಗಳು·

ನಾನು ಬಲ್ಲೆ, ಈಗಿನ ಕಾಲದಲ್ಲಿ ಪದಗಳ ಅರ್ಥ ಲಾಗುತ್ತಿದೆ. ಹಳೆಯ ಪದಗಳಿಗೆ ಹೊಸ ಅರ್ಥ ಬರುತ್ತಿದೆ.....

ಆದರೆ ಪದಗಳು ಸಾಯುವುದಿಲ್ಲ.

ನಾನು ?

ಅಮ್ಮಾ—ಅಮ್ಮಾ—ಅಪ್ಪಾ—ಅಪ್ಪಾ—ಅಜ್ಜಿ—ಅ

"ರುಕ್ಕೂ ಏನ್ಮಾಡೋಣಾಂತೀಯಾ ?"

"ನೀನು ನಿಜವಾಗ್ಲೂ ಕದ್ದಿಲ್ಲ ಅಲ್ವಾ ಚಂದ್ರೂ ?"

"ನಾನು ಯಾವತ್ತಾದರೂ ಹಾಗ್ಮಾಡೇನಾ ಅಪ್ಪಾ ?"

"ಒಬ್ಬರೊಬ್ಬರು ಸುಲಿದು ತಿನ್ನೋದೇ ಈ ಪ್ರಪಂಚದ ಶೇಖರ್."

ದೊಡ್ಡ ಮನುಷ್ಯ—ದೊಡ್ಮನುಷ್ಯ....

"ಭಿಕ್ಷಾ ಸಿಗ್ತೇನೋ...."

ಎರಡು ರೂಪಾಯಿ....ಎರಡು....

ವನಜಾ—ವನೂ....

"ನಾನು ಭಿಕಾರಿಯಾದರೆ ?"

"ಥೂ ಹೋಗಪ್ಪ, ಎಂಥ ಮಾತಾಡ್ತೀಯಾ ?

"ನಾನು ಆ ಹುಡುಗೀನ ನೋಡ್ಬೇಕು ಶೇಖರ್...

"ಸೈತಾನ ಕಣೋ ನೀನು...."

"ಮೂರು ತಿಂಗಳ ಬೋನಸ್...."

"ಸ್ವಾತಂತ್ರ್ಯ ಬಂದ ಘಳಿಗೇಲೇ ನಿದ್ದೆ ಹೋದ್ಯ

ಘೂಪ!"

"ಯಾಕಾಸ್ಲೆ ಬ್ಯಾಸ್ಗೇನೆ ಇದ್ದಾತಾ? ಮಳೆ ಬತ್ತದೆ ಕಣ್ರಪ್ಪೋ "

"ಶಾರದಾ ಸತ್ತ್ಹೋದ್ಲು...."

"ಕರುಳಿನ ಬಾಧೆ—ಒಂದ್ಸಾರಿ ಸರಿಯಾಗಿ ಪರೀಕ್ಷಿಸ್ಬೇಕು."

"ಮನುಷ್ಯಾದ್ಮೇಲೆ ಜೀವನದಲ್ಲಿ ಒಂದು ಶ್ರದ್ಧೆ—ನಂಬುಗೆ ಇರಬೇಕು ಚಂದ್ರಶೇಖರ್."

....ಗತ ಕಾಲದ ಸ್ಮರಣೆಗಳ ಈ ಸುರುಳಿ....

"ಅಷ್ಟು ಶಕ್ತಿ ಬಂತೇನೋ ಭಡವಾ?"

ಜುಟ್ಟು–ಕ್ರಾಪು-

"ಇಸ್ಕೂಲ್ಗೆ ಓಯ್ತಿವ್ನಾ?"

"ಕೈಲಿ ಕೆಂಪು ಬಾ-ವು-ಟಾ... ಓಹ್ಹೋ..!"

ನನ್ನಿಂದಾಗದು. ನಾನಿನ್ನು ಏನನ್ನೂ ಬರೆಯಲಾರೆ.

ಸಮಾಜದ ಏಣಿಯ ಕೆಳ ಹಂತದಲ್ಲಿ ನಾನು ಹುಟ್ಟಿದ್ದೆ. ಅಲ್ಲಿಂದ ನಡು ಹಂತಕ್ಕೆ ಬಂದೆ. ಆ ಮೇಲೆ ಮೇಲಣ ಹಂತ...ಏಣಿ ಇದೆ ಎಂದು ಧೈರ್ಯವಾಗಿ ಮೇಲೇರುವ ಯತ್ನ........ಆದರೆ ಬಾರಿ ಬಾರಿಗೂ ಏಣಿ ಜಾರಿ ಹೋಗುವುದು.

ಆ ಮೇಲೆ ಮುಗಿಲಿಗೆ ನೇತಾಡುವುದು - ಗಾಳಿ ಸೇವಿಸುತ್ತಾ.

ಈ ಪ್ರಪಂಚದಲ್ಲಿ ಇಷ್ಟು ದಿನ ಇದ್ದು ನಾನೇನು ಮಾಡಿದ ಹಾಗಾಯಿತು? ಎಷ್ಟೊಂದು ತಪ್ಪುಗಳಾಗಲಿಲ್ಲ ನನ್ನಿಂದ! ತಿಳಿವಳಿಕೆ ಇಲ್ಲದೆ ನಾನು ಎಷ್ಟೊಂದು ತಪ್ಪುಗಳನ್ನು ಮಾಡಿದ್ದೆ!

ನನ್ನ ಕೆಲಸದಲ್ಲಿ ನಾಳೆಯ ದಿನ ಜನ ಮೆಚ್ಚುವಂಥಾದ್ದು ಏನಾದರೂ ಇತ್ತೆ? ತೆಗಳುವಂಥಾದ್ದು?

ನಾನೀಗ ಒಬ್ಬಂಟಿಗನಾಗಿ ಗೋರಿಗೆ ಹೋಗುತಿದ್ದೇನೆ—ನನ ನೆನಪುಗಳೊಡನೆ.

ವನಜ—ವನಜ.......

ಯೌವನ, ಗ[illegible]ನದ ಚು[illegible]
ಎಂದರೇನೆಂಬುದನ್ನು ತಿಳಿಯದೆಯೇ ನಾನು [illegible]ದಿಗೆ ಹೋ
ತಿದ್ದೇನೆ.

ಕಾಮ ಸಂಬಂಧದ ವಿಚಾರ ಬೇರೆ. ಆದರೆ ಪ್ರೇಮ?

ಇಂಥ ಸಮಾಜದಲ್ಲೂ ನಾನಿಷ್ಟು ಒಳ್ಳೆಯ ಕೆಲಸ ಮಾಡುವುದ ಸಾಧ್ಯವಿತ್ತು—ನಾರಾಯಣನ ಹಾಗೆ. ಆ ಕೃಷ್ಣರಾಜರು ಒಳ್ಳೆಯ ಮನುಷ್ಯರಲ್ಲವೆ? ಅವರ ಮಾತುಗಳು ನ್ಯಾಯದ—ಸತ್ಯದ ಮಾತ ಗಳಾಗಿರಲಿಲ್ಲವೆ?

ಆದರೆ ನಾನು ಅಡ್ಡದಾರಿ ಹಿಡಿದು ಬಂದು ತಲಪಿರುವುದಿ

ನನ್ನ ಬಾಳಿನ ಈ ದುರವಸ್ಥೆಗೆ ಯಾರು ಕಾರಣ? ಆಕ್ರೋಶ ಮಾಡಬೇಕಾಗಿರುವುದು ಯಾರ ಮೇಲೆ? ನನ್ನ ದುಸ್ಥಿ ಯಾವುದೇ ವ್ಯಕ್ತಿಯನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ( ವಿಷಚಕ್ರ ಸುತ್ತುವರಿಯುವ ರೀತಿಯೇ ಅಂಥಾದ್ದು. ಒಂದೊ ಬಾರಿ ಅದರ ಒಂದೊಂದು ಹಲ್ಲು ನನ್ನನ್ನು ಘಾಸಿಗೊಳಿಸಿದೆ.

ನನ್ನ ತಪ್ಪೇನೂ ಇಲ್ಲ—ಇತರರೇ ಅಪರಾಧಿಗಳು, ಎ ಮೂರ್ಖತನ. ಇನ್ನೇನು ಬೇಕಾದರೂ ನಾನಾಗಿರಬಹುದ ಮೂರ್ಖ ಮಾತ್ರ ಅಲ್ಲ........

ನಾನು ಸಮಾಜದ ಹೊರಗೇ ಇದ್ದೆನೆಂಬುದು ನಿಜ. ತಾತ್ವಿಕ ದೃಷ್ಟಿಯಲ್ಲಿ. ನದಿಯ ನೀರಿನಲ್ಲಿ ನಾನು ತುಂತುರು ಹ ರಲಿಲ್ಲ. ಆದರೆ ಆ ಕೆಸರು ನೀರಿನಲ್ಲಿ ನಾನು ಮೀನಾಗಿದ್ದೆ.

ಇನ್ನೂ ಹೆಚ್ಚು ಮಾತುಗಳ ಅವಶ್ಯತೆಯುಂಟೆ?

ಕರುಳಿನ ನೋವಿಗೆ ಹೃದಯದ ಯಾತನೆಗೆ ಮಿದುಳಿನ ವೆ ನೆಗೆ ಔಷಧಿ ದೊರೆಯಲಾರದ ಈ ಸಮಾಜದಲ್ಲಿ ನಾನೊಬ್ಬನಿ ದ್ದರೂ ತಪ್ಪಾಗದು.

ನ್ಯಾಯಾಸ್ಥಾನದಲ್ಲಿ ನನ್ನ ಪರ ವಕೀಲಿ....ಇನ್ನು ಯ ವಕೀಲಿ?

ನೀವು ಯಾರಾದರೂ ನನಗೊಂದು ಪ್ರಶ್ನೆ ಕೇಳಬಹು

ೃ ಹುಡುಗನಾದೆಯೆಂದರೆ, ಮತ್ತೆ ಬಾಳುವ ಅವಕಾಶ
ೂರೆಯಿತೆಂದರೆ, ನೀನೇನು ಮಾಡುವೆ ? '

ಅದಕ್ಕಿದು ನನ್ನ ಉತ್ತರ: ' ಈಗ ನಾನು ಪಡೆದಿರುವ ಈ
ತಜ್ಞಾನದ ನೆರವಿನಿಂದ, ಈ ವರೆಗೆ ಮಾಡಿರುವ ತಪ್ಪುಗಳನ್ನು
ಮ್ಮೆ ಮಾಡದೆಯೇ, ನಾಲ್ಕು ಜನರಿಗೆ ನೆರವಾಗುವಂತಹ
ನಡೆಸುವೆ.'

ನನ್ನನ್ನು ಹೇಡಿಯೆಂದು ದುರ್ಬಲನೆಂದು ಮಾತ್ರ ಕರೆಯ
ನನ್ನಬಗ್ಗೆ ಕನಿಕರದ ಅನುಭಾವ ನಿಮಗೆ ಉಂಟಾದರೆ ಅದೇ
ದು.

....ಚೆನ್ನಾಗಿ ಕತ್ತಲಾಗಿದೆ....ನಾನು ಸಿದ್ಧನಾಗಲೆ? ಬೀಳ್ಕೊಡಲೆ?
ದಯವಿಟ್ಟು ನನ್ನನ್ನು ಬಡವರ ಬಳಿ ಮಣ್ಣಿನಲ್ಲಿರಿಸಬೇಡಿ. ನನ್ನ
ಅವರ ಗೋಳಾಟದಿಂದ ಭಂಗ ಬಂದೀತು. ಹಾಗೆಯೇ
ತರಿರುವಲ್ಲಿ ಮಣ್ಣುಮಾಡಬೇಡಿ....ಅವರ ಜೀವನಕ್ರಮದಿಂದ
ುಸಿರುಕಟ್ಟೀತು....

?ಖನಿಯನ್ನು ಕೆಳಗಿಡಲೆ ? ಕೊನೆಯ ಬಾರಿಗೆ ಬೆರಳುಗಳ
ುರಿಯಲೆ ?

ಇನ್ನು ದೀರ್ಘ ವಿಶ್ರಾಂತಿ ; ಇನ್ನು ನಿಜವಾದ ವಿಮೋಚನೆ.

---

# ವಾಹಿನಿ ಕೈಹೊತ್ತಿಗೆಗಳು

**೧. ಗೃಹಲಕ್ಷ್ಮಿ** ಅ. ನ. ಕೃ. ರವರ ಅಮೋಘ ಕಲಾಕೃತಿ. ಕಳೆದ ತಲೆಮಾರಿನ ಜನತೆ, ಅವರ ಸಂಪ್ರದಾಯಪ್ರಿಯತೆ, ವೈಜ್ಞಾನಿಕ ಮನೋಭಾವ-ಸಂಪ್ರದಾಯ ಪರಂಪರೆಗಳ ನಡುವಿನ ಘರ್ಷಣೆಯ ಯಶಸ್ವೀ ಚಿತ್ರಣ.

**೨. ಮಲ್ಲಿ** ದೇವುಡು ವಿರಚಿತ ಕಾದಂಬರಿ. ಸುಮಾರು ೧೯೦೦ರಿಂದ ೧೯೩೦ರ ವರೆಗಿನ ಅರ್ಧ ಶತಮಾನದ ಜನಜೀವನದ ಹಿನ್ನೆಲೆಯಲ್ಲಿ ಶೃಂಗಾರ ರಸಪೂರ್ಣ ಚಿತ್ರಣ.

**೩. ವಿಮೋಚನೆ** ನಿರಂಜನರ ಕಾದಂಬರಿ. ಅಡ್ಡದಾರಿ ಹಿಡಿದ ಯುವಕನೋರ್ವನ ಆತ್ಮವೃತ್ತದ ಮೂಲಕ ಸುತ್ತುಮುತ್ತಲಿನ ವರ್ಣರಂಜಿತ ಬಾಳ್ವೆಯ ನೋವು-ನರಳಾಟ ಆಸೆ-ಹೋರಾಟಗಳನ್ನು ಚಿತ್ರಿಸುವ ಕಲಾತ್ಮಕ ಕೃತಿ.

**೪. ಪರದೇಶಿ** ಕುಲಕರ್ಣಿ ಬಿಂದು ಮಾಧವರು ಬರೆದುದು. ಹಿಂದೂಸ್ತಾನದ ಮೂಲನಿವಾಸಿ ಜನಾಂಗ ಒಂದರ ಜೀವನ ಕ್ರಮದ ಹಿನ್ನೆಲೆಯಲ್ಲಿ ಕರುಣಾ ಜನಕ ಕಥಾನಕ.

**೫. ಸ್ವರ್ಣರೇಖೆ** ವೀರಕೇಸರಿ ಸೀತಾರಾಮ ಶಾಸ್ತ್ರಿಗಳ ಐತಿಹಾಸಿಕ ಕಾದಂಬರಿ. "ಬಂಗಾರ ದೊಡ್ಡಿ" ಎಂದು ಮೈಸೂರಿನ ಮನೆ ಮಾತಾಗಿರುವ ಪ್ರೇಯಸಿಯ ಪ್ರಣಯ ಕಥೆ.

**೬. ರುಕ್ಮಿಣಿ** ಕನ್ನಡ ನಾಡಿನ ಮೊತ್ತಮೊದಲ ಸುಲಭ ಬೆಲೆಯ ಕೈಹೊತ್ತಿಗೆಯಾಗಿ ಹೊರಬಿದ್ದು ಕರ್ಣಾಟಕದ ಮನೆಮನೆಯಲ್ಲೂ ಬೆಳಗಿದ "ಗೃಹಲಕ್ಷ್ಮಿ" ಕಾದಂಬರಿಯ ಎರಡನೆ ಮತ್ತು ಮುಕ್ತಾಯ ಭಾಗ. . . ಅ. ನ. ಕೃ. ಅವರ ಸಿದ್ಧಹಸ್ತ ರುಕ್ಮಿಣಿಯ ತೇಜಃಪುಂಜ ವ್ಯಕ್ತಿತ್ವವನ್ನು ಅಪ್ರತಿಮವಾಗಿ ಚಿತ್ರಿಸಿದೆ.


**ವಾಹಿನಿ ಪ್ರಕಾಶನ**

**ಜಯಚಾಮರಾಜ ರಸ್ತೆ, ಬೆಂಗಳೂರು-೨**